ಮುರಳಿ ವಾಣಿ

ಶ್ರೀ ಬಿ.ವಿ.ಕೆ. ಶಾಸ್ತ್ರಿ ಅವರ ಸಮಗ್ರ ಸಂಪುಟ
ಹಾಗೂ
ಅಭಿನಂದನಾ ಗ್ರಂಥ



MURALI VANI

Sri B.V.K. Sastry Felicitation Volume
including his comprehensive writings

ಶ್ರೀ ಬಿ.ವಿ.ಕೆ. ಶಾಸ್ತ್ರಿ



Sri B.V.K. Sastry

ಮುರಳಿ ವಾಣಿ

ಗ್ರಂಥ ದಾನಿಗಳು

ಡಾ|| ಎ.ಎಚ್. ರಾಮರಾವ್

ಮತ್ತು

ಶ್ರೀಮತಿ ಸುಧಾ ಆರ್. ರಾವ್

ರಾಮಸುಧಾ ಟ್ರಸ್ಟ್

MURALI VANI

Publication Sponsored By

Dr. A.H. Rama Rao

and

Smt. Sudha R. Rao

Rama Sudha Trust

ಮುರಳಿ ವಾಣಿ

ಶ್ರೀ ಬಿ. ವಿ. ಕೆ. ಶಾಸ್ತ್ರಿ ಅವರ ಸಮಗ್ರ ಸಂಪುಟ

ಹಾಗೂ

ಅಭಿನಂದನಾ ಗ್ರಂಥ

MURALI VANI

Sri B.V.K. Sastry Felicitation Volume
including his comprehensive writings

Published by
Sri B.V.K. SASTRY FELICITATION COMMITTEE
The Bangalore Gayana Samaja
K.R. Road, BANGALORE – 560 004.

Date : 11-7-1999

Cover Page Artiste : **G.O. Shivakumar**

ಈ ಪುಸ್ತಕದ ಮಾರಾಟದಿಂದ ಬಂದ ಪೂರ್ಣ ಹಣವನ್ನು
ಶ್ರೀ ಬಿ.ವಿ.ಕೆ. ಶಾಸ್ತ್ರಿ ಅವರ ಹೆಸರಿನಲ್ಲಿ ದತ್ತಿ ಸ್ಥಾಪಿಸಲಾಗುವುದು.

The entire sale proceeds of this publication will be utilised for creating an endowment in the name of Sri B.V.K. Sastry.

ಬೆಲೆ : ರೂ. 150

Price : Rs. 150

Printed at : SUDHINDRA, Malleswaram, Bangalore – 560 003.

ಮೊದಲ ಮಾತು

ಶ್ರೀ ಬಿ.ವಿ.ಕೆ. ಶಾಸ್ತ್ರಿಗಳು ನಾಡಿನ ಹಿರಿಯ ವಿದ್ವಾಂಸರು. ಸಂಗೀತ, ನೃತ್ಯ, ಶಿಲ್ಪ, ಚಿತ್ರಕಲೆಗಳಲ್ಲಿ ಉದ್ದಾಮ ಪಂಡಿತರು. ಈ ವಿಷಯಗಳ ಮೇಲೆ ಅಧಿಕೃತವಾಗಿ ಮಾತನಾಡಬಲ್ಲ ರಾಷ್ಟ್ರದ ಕೆಲವೇ ವಿದ್ವಾಂಸರಲ್ಲಿ ಅವರೂ ಒಬ್ಬರು. ಕಲಾವಿದರ ಹಿತೈಷಿ, ಕಿರಿಯರಿಗೆ ಮಾರ್ಗದರ್ಶಿ.

ಐದು ದಶಕಗಳಲ್ಲಿ ಮೂರು ತಲೆಮಾರಿನ ಕಲಾವಿದರನ್ನು ಶಾಸ್ತ್ರಿಗಳು ಹತ್ತಿರದಲ್ಲಿ ಕಂಡಿದ್ದಾರೆ. ಈ ಶತಮಾನದ ಕಲೆಯ ಏರಿಳಿತಗಳನ್ನು ಅವರು ಅವಲೋಕಿಸಿದ್ದಾರೆ - ಅನುಭವಿಸಿದ್ದಾರೆ. ಸಂಪ್ರದಾಯಗಳನ್ನು ಗೌರವಿಸಿದ್ದಾರೆ, ಪ್ರಯೋಗಗಳಿಗೆ ಬೆಂಬಲ ನೀಡಿದ್ದಾರೆ. ಚಿಕಿತ್ಸಕ ದೃಷ್ಟಿಯಿಂದ ಬರೆದಿದ್ದಾರೆ. 'ಚಲಿಸುವ ಕಲಾವಿಶ್ವಕೋಶ' ವಾಗಿ ಬೆಳಗುತ್ತಿದ್ದಾರೆ.

ಇಂಥ ಹಿರಿಯರನ್ನು ಗೌರವಿಸುವುದು ಸಮಾಜದ ಕರ್ತವ್ಯ. ಶಾಸ್ತ್ರಿಗಳಿಗೆ ಅಭಿನಂದನಾ ಗ್ರಂಥ ಸಮರ್ಪಿಸುತ್ತಿರುವುದು ಔಚಿತ್ಯಪೂರ್ಣ. '**ಮುರಳಿ ವಾಣಿ** – ಅಭಿನಂದನಾ ಗ್ರಂಥ ಅನೇಕ ದೃಷ್ಟಿಗಳಿಂದ ವಿಶಿಷ್ಟ. ಈ ಗ್ರಂಥ ನಾಲ್ಕು ಭಾಗಗಳಲ್ಲಿ ಹಮ್ಮಿದೆ: (1) ಬಿ.ವಿ.ಕೆ. ಲೇಖನಗಳ ಸಮಗ್ರ ಸಂಪುಟ (2) ಬಿ.ವಿ.ಕೆ. ಅವರನ್ನು ಕುರಿತ ಅಭಿನಂದನಾ ಲೇಖನಗಳು (3) ಲಲಿತ ಕಲೆಗಳನ್ನು ಕುರಿತು ನಾಡಿನ ಗಣ್ಯ ವಿದ್ವಾಂಸರು ಬರೆದ ಲೇಖನಗಳು (4) ಬಿ.ವಿ.ಕೆ. ಜೀವನದ "ಭಾವಚಿತ್ರ ಸಂಪುಟ".

(1) **ಸಮಗ್ರ ಸಂಪುಟ :** ಬಿ.ವಿ.ಕೆ. ಶಾಸ್ತ್ರಿಗಳು ಹಿಂದಿನ ಐದು ದಶಕಗಳಲ್ಲಿ ವಿವಿಧ ಪತ್ರಿಕೆ, ನಿಯತಕಾಲಿಕೆಗಳಿಗೆ ಬರೆದ ಲೇಖನಗಳನ್ನು ಈ ಸಂಪುಟ ಒಳಗೊಂಡಿದೆ. ಕನ್ನಡ– ಇಂಗ್ಲಿಷ್‌ನಲ್ಲಿ ಸಂಗೀತ (ಕರ್ನಾಟಕ, ಹಿಂದುಸ್ತಾನಿ, ಸುಗಮ, ಜಾನಪದ), ನೃತ್ಯ (ಭರತನಾಟ್ಯ, ಕೂಚುಪುಡಿ, ಕಥಕ್, ಪಾಶ್ಚಾತ್ಯ), ಚಿತ್ರ, ಶಿಲ್ಪಕಲೆ - ಕಲಾವಿದರುಗಳನ್ನು ಕುರಿತು ಶಾಸ್ತ್ರಿಗಳು ರಸಪೂರ್ಣವಾಗಿ ಚಿತ್ರಿಸಿದ್ದಾರೆ. ಖಚಿತ ಅಂಕಿ ಅಂಶ, ಅಧಿಕೃತ ಐತಿಹಾಸಿಕ ಹಿನ್ನೆಲೆ; ವಿಷಯಕ್ಕೆ ಪಾತಾಳಗರಡಿ ಹಾಕಿ ತೆಗೆವ ಅಂತರಂಗ ದರ್ಶನ; ಕಲಾವಿದರ ಒಂದು ಆತ್ಮೀಯ ಚಿತ್ರವನ್ನು ಶಾಸ್ತ್ರಿಗಳು ಈ ಲೇಖನಗಳಲ್ಲಿ ಬಿಡಿಸಿದ್ದಾರೆ. ಕೆಲವು ವಿಷಯಗಳು

ಬೇರೆಲ್ಲೂ ಸಿಗದಂಥವು – ಅಪರೂಪವಾದಂಥವು – ಇಲ್ಲಿರುವುದನ್ನು ಗಮನಿಸಬಹುದು.

ನಾಲ್ಕೈದು ದಶಕಗಳ ಅಂತರದಲ್ಲಿ ಹಾಗೂ ಬೇರೆ, ಬೇರೆ ದೃಷ್ಟಿಕೋನವುಳ್ಳ ಪತ್ರಿಕೆಗಳಿಗೆ ಬರೆದಂಥ ಲೇಖನಗಳಾದ್ದರಿಂದ, ಲೇಖನದಿಂದ ಲೇಖನಕ್ಕೆ ಒಂದು ಕೊಂಡಿ ಇಲ್ಲ; ಅಲ್ಲದೆ ಪ್ರತಿಯೊಂದೂ ಒಂದು ಪ್ರತ್ಯೇಕ ಬರಹ. ಮೂಲ ಲೇಖನದಲ್ಲಿನ ಮುದ್ರಿತ ಶೀರ್ಷಿಕೆಗಳನ್ನೇ ಉಳಿಸಿಕೊಂಡಿದ್ದೇವೆ. ಇದರಿಂದ ಲೇಖನದ ವಸ್ತುವು ಕೆಲವೊಮ್ಮೆ ಶೀರ್ಷಿಕೆಯಿಂದ ತಿಳಿಯದೇ ಹೋಗಬಹುದು! ಆದರೆ ಲೇಖನ ಓದಿದರೆ ವಸ್ತು ಸುಲಭವಾಗಿ ಸ್ಫುರಿಸುವುದು. ಲಲಿತಕಲೆಗಳನ್ನು ಕುರಿತ ಒಬ್ಬರೇ ವಿದ್ವಾಂಸರ, ಇಂಥ ಪ್ರಬಂಧ ಸಂಕಲನವೊಂದು ಗುಣ-ಗಾತ್ರದಲ್ಲಿ (660 ಪುಟಗಳು ಹಾಗೂ 127 ಲೇಖನಗಳು) ಇನ್ನೊಂದು ಇರುವುದು ನಮಗೆ ತಿಳಿಯದು !

ಹೀಗೆ 'ಬಿ.ವಿ.ಕೆ. ಸಮಗ್ರ ಸಂಪುಟ' ವು ಇಪ್ಪತ್ತನೇ ಶತಮಾನದ ಒಂದು ಬೃಹತ್ ಸಾಂಸ್ಕೃತಿಕ ದಾಖಲೆಯಾಗಿ ಬೆಳಗಲಿದೆ.

(2) **ಅಭಿನಂದನಾ ಲೇಖನಗಳು :** ಗ್ರಂಥದ ಎರಡನೇ ಭಾಗದಲ್ಲಿ ಬಿ.ವಿ.ಕೆ. ಅವರನ್ನು ಕುರಿತ ಅಭಿನಂದನಾ ಲೇಖನಗಳಿವೆ. ರಾಜ್ಯ-ರಾಷ್ಟ್ರದ ಹಿರಿಯ ವಿದ್ವಾಂಸರು, ಪತ್ರಕರ್ತರು, ಸಂಸ್ಥೆಗಳ ಪ್ರತಿನಿಧಿಗಳು ತಾವು ಕಂಡು - ಕೇಳಿ - ಓದಿದ ಬಿ.ವಿ.ಕೆ. ಕುರಿತ ಆತ್ಮೀಯ ಚಿತ್ರಣ ನೀಡಿದ್ದಾರೆ.

ಮುದ್ರಣಕ್ಕೆ ಹೋಗುವ ಸಂದರ್ಭದಲ್ಲೂ ಈ ಅಭಿನಂದನಾ ಲೇಖನಗಳು ಬರುತ್ತಲೇ ಇವೆ. ಇನ್ನು ಕೆಲವರ ಲೇಖನಗಳು ನಮ್ಮ ಗಡುವು ಮೀರಿದರೂ ಬಂದಿಲ್ಲ! ಆದರೂ ಇಲ್ಲಿ ಮುದ್ರಣವಾಗಿರುವ ಬರಹಗಳಿಂದ "ಕಲಾವಿದರು - ಕಲಾಭಿಮಾನಿಗಳು ಕಂಡ ಬಿ.ವಿ.ಕೆ." ಯ ಒಂದು ಗೌರವಾನ್ವಿತ ಚಿತ್ರ ಚಿತ್ರಿತವಾಗಿದೆ.

(3) **ರಸಾಯನ :** ಲಲಿತ ಕಲೆಗಳನ್ನು ಕುರಿತು ಹಿರಿ-ಕಿರಿಯ ವಿದ್ವಾಂಸರು-ವಿದುಷಿಯರು ಬರೆದ ಲೇಖನಗಳಿಂದ 'ರಸಾಯನ' – ವಿಭಾಗ ತುಂಬಿ ಬಂದಿದೆ.

ತಮ್ಮ ಲೇಖನಗಳನ್ನು ಹುಡುಕಿ, ಜರಡಿ ಆಡಿ, ಸಂಕಲನ ಮಾಡಲು ಬಿ.ವಿ.ಕೆ. ಶಾಸ್ತ್ರಿಗಳು ತುಂಬು ಸಹಕಾರ ನೀಡಿದ್ದಾರೆ. ವಯಸ್ಸಿನಿಂದ ಮೂಡಿದ

ಶ್ರಮವನ್ನೂ ಲೆಕ್ಕಿಸದೆ ಪೂರ್ಣ ಸಹಕಾರ ನೀಡಿದ ಶ್ರೀ ಬಿ.ವಿ.ಕೆ. ಶಾಸ್ತ್ರಿಗಳಿಗೆ ಕೃತಜ್ಞಪೂರ್ವಕ ವಂದನೆಗಳು. ಪತ್ರಿಕೆಗಳಿಗೆ – ಮುಖ್ಯವಾಗಿ ಡೆಕ್ಕನ್‌ಹೆರಾಲ್ಡ್ – ಪ್ರಜಾವಾಣಿ, ಸುಧಾ ಪತ್ರಿಕೆಯ ಬಳಗದ 'ದಿ ಪ್ರಿಂಟರ್ಸ್ (ಮೈಸೂರು) ಲಿ.' ಅವರಿಗೆ ನಮ್ಮ ವಿಶೇಷ ವಂದನೆಗಳು. ಅಭಿನಂದನಾ ಲೇಖನ ಹಾಗೂ ಲಲಿತ ಕಲೆಗಳನ್ನು ಕುರಿತ ಬರಹಗಳನ್ನು ನೀಡಿದ ಇತರ ವಿದ್ವಾಂಸರುಗಳಿಗೂ ನಮ್ಮ ಕೃತಜ್ಞತೆಗಳು.

'ಸುಮಾರು 250 ಪುಟಗಳಾಗಬಹುದು' – ಎಂದು ಪ್ರಾರಂಭಿಸಿದ ಪುಸ್ತಕ ಎಂಟು ನೂರು ಪುಟಗಳನ್ನು ದಾಟಿದೆ ! ಈ ಬೃಹತ್ ಗ್ರಂಥವನ್ನು ರಾಮಸುಧಾ ಚಾರಿಟಬಲ್ ಟ್ರಸ್ಟಿನವರು ಪೂರ್ಣವಾಗಿ ಪ್ರಾಯೋಜಿಸಿದ್ದಾರೆ. ಡಾ. ಎ.ಎಚ್. ರಾಮರಾವ್ ಅವರ ಔದಾರ್ಯ ಮಾತಿಗೆ ನಿಲುಕುವಂಥದಲ್ಲ ! ಐದುನೂರು ರೂಪಾಯಿಯಷ್ಟಾಗುವ ಈ ಗ್ರಂಥವನ್ನು ಒಂದು ನೂರು ಐವತ್ತು ರೂಪಾಯಿಗಳಿಗೆ ಮಾರಾಟ ಮಾಡಿ ಎನ್ನುವ ರಾಮರಾಯರ ಔದಾರ್ಯವು ಅನುಕರಣೀಯವಾದುದು. ಅವರ ನೆರವು, ಪ್ರೋತ್ಸಾಹ, ತಾಳ್ಮೆ ಹಾಗೂ ದಕ್ಷತೆಗಳು, ಆದರ್ಶ ಪ್ರಾಯವಾದುದು. ಅವರಿಗೆ ವಿಶೇಷ ವಂದನೆಗಳನ್ನು ಸಲ್ಲಿಸುವುದು ನಮ್ಮ ಹೆಮ್ಮೆಯ ಕರ್ತವ್ಯ.

ಸಾಂಸ್ಕೃತಿಕ ಮಹತ್ವವುಳ್ಳ 'ಮುರಳಿ ವಾಣಿ' – ಒಂದು ಉಪಯುಕ್ತ ಆಕರ ಗ್ರಂಥ. ಇದು ಎಲ್ಲರ ಮನೆ, ಗ್ರಂಥಾಲಯ, ಸಂಶೋಧಕರು, ಚಿಂತಕರ ಚಾವಡಿಗಳಲ್ಲಿ ಬೆಳಗುವಂತಾಗಲಿ ಎಂದು ಹಾರೈಸುತ್ತೇನೆ.

ಎಚ್. ನರಸಿಂಹಯ್ಯ
ಅಧ್ಯಕ್ಷರು
ಶ್ರೀ ಬಿ.ವಿ.ಕೆ. ಶಾಸ್ತ್ರಿ ಸನ್ಮಾನ ಸಮಿತಿ

FROM THE DESK OF CHAIRMAN RECEPTION COMMITTEE

Sri B.V.K. Sastry, eminent fine arts personality of national fame, is well known for the services he has rendered in several areas such as Hindustani and Karnatic music, Dance, Drama, Painting, Sculpture, Photography, Journalism and writing.

With his writings in Deccan Herald, Prajavani, Sudha, Janapragathi, Illustrated Weekly of India and several publications, he has won the admiration of the artists and connoisseurs alike. His books are regarded as classics in their field. The prestigeous book 'Traditional Paintings of Karnataka' in English and Kannada depicts his involvement and the extent of study that precede his writing.

Promotion of Arts and its preservation has been the cause for which BVK has been working. He spares no efforts to achieve this. His services are sought after by Government, statutory and voluntary cultural organisations. He has served as a member of AIR Delhi's Main Audition Board and various committees. Sangeet Natak Akadmi utilised his services in the General Council and sub-committees. Indian Council of Cultural Relations, South Zone Cultural Centre and Central Lalitkala Akademi, Kalidas Samman Committee of Bhopal had the benefit of his services.

He was a nominee to the committees for Festival of India in Germany, International Puppet Festival, International Dance Festival and International Festival of Music held in Delhi. His services as Co-ordinator of Music and Dance Programmes, All India Cultural Festival (Dakshini) during the S.A.A.R.C. meet in Bangalore was highly appreciated and showed BVK's ability as an organiser.

As a member of various committees of State and Central Governments, he has been responsible in bringing about several policy changes and in giving a new direction for the improvement of performing arts. With his wide ranging personal contacts with the artists, he has been able to get for them due recognition and honours in deserving cases in the committees he has served.

BVK's services as a member of several national and international delegations have been noteworthy. Particular mention may be made of his visit to China in 1990 organised by Indian Council for Cultural Relations comprising famous dancers and choreographers. The team visited important cultural institutions.

Prominent among the honours and distincitons conferred on BVK are : Akashvani Annual Award, the title 'Sangeetha Kalaratna' from The Bangalore Gayana Samaja, Karnataka Government's Rajyotsava Award, TTK Award from Madras Music Academy, Karnataka Lalithakala Academy Award, Karnataka Sangeetha Natak Academy Award, Regional Critics Award of Lalithkala Akademi of Delhi and Mysore T. Chowdiah Award from Academy of Music.

Sri B.V.K. Sastry Felicitation Committee deems it a privilege to honour the multifaceted eminent personality Sri B.V.K. Sastry on his Sixty Years of dedicated and unparalled service to fine arts. This Felicitation volume has been enriched by the inclusion of comprehensive writings of BVK over this long period and will serve as the source book for valuable information. We are thankful to him for the permission.

Raja Ramanna
Chairman, Reception Committee

ಮುರಳಿ ವಾಣಿ

ಲೇಖನ ಸಂಖ್ಯೆ	ಪರಿವಿಡಿ	ಪುಟ ಸಂಖ್ಯೆ
	ಬಿ.ವಿ.ಕೆ. ಶಾಸ್ತ್ರಿ ಸಮಗ್ರ ಸಂಪುಟ	

Publications of Sri B.V.K. Sastry

1. **Traditional Paintings of Karnataka** — English
jointly with Dr. S.R. Rao
with 41 Colour plates and
64 black & white plates
Published by the
Karnataka Chitrakala Parishat

2. **Traditional Paintings of Karnataka** — Kannada
mainly on murals with black and
white pictures
Published by the
Karnataka Lalithakala Academy

3. **Short Biography of Ustad Bade Gulam Ali Khan** — Kannada
in the Bharata – Bharati series
Published by the
Rastrothana Parishat, Bangalore

4. **Short Life histry of Mysore T. Chowdiah** — Kannada
Published by the
IBH Prakashana, Bangalore

5. **Bangalore Nagaratnamma Short biography** — Kannada
Published by the
IBH Prakashana, Bangalore

6. **Kaleya Gonchalu** — Kannada
Collection of articles
on Music, Dance, Paintings
Published by the Kannada
Pustaka Pradhikara
Karnataka Government, Bangalore

7. **Kannada Sahityadalli Talavadyagala Ullekha** — Kannada
Published by the
Percussive Art Centre, Bangalore

Index of the contributors for 'Abhinandana' and 'Rasayana' of 'Murali Vani'

Sri B.V.K. Sastry Felicitation Committee

Organising Committee

Chairman:
Dr. H. Narasimhaiah

Vice-Chairmen:
Dr. A.H. Rama Rao, Smt. Vimala Rangachar
Sri Bangalore K. Venkataram

Convenors:
Sri H. Kamalanath, Sri Mysore V. Subramanya,
Dr. R.V. Raghavendra

Joint Convenors:
Smt. H.S. Anasuya Kulkarni, Sri H.N. Suresh
Smt. Prathibha Prahlad

Treasurer:
Dr. Suma Sudhindra

Reception Committee

Chairman:
Dr. Raja Ramanna

Vice-Chairmen:
Smt. Maya Rao, Sri A.R. Chandrahasa Gupta,
Sri M.S. Najunda Rao, Sri S.R. Venkatachalam,
Smt. Lalitha Srinivasan, Smt. Ushachar,
Smt. T.S. Satyavathi, Sri H.V. Krishna Murthy

ಶ್ರೀ ಬಿ.ವಿ.ಕೆ. ಶಾಸ್ತ್ರಿ ಅಭಿನಂದನಾ ಸಮಿತಿ

ಮುರಳಿ ವಾಣಿ

ಕೃತಜ್ಞತೆಗಳು

1. ಶ್ರೀ ಬಿ.ವಿ.ಕೆ. ಶಾಸ್ತ್ರಿ
2. ರಾಮಸುಧಾ ಚಾರಿಟಬಲ್ ಟ್ರಸ್ಟ್
3. ಲೇಖಕರು
4. ಈ ಸಮಾರಂಭಕ್ಕೆ ಆರ್ಥಿಕ ನೆರವು ನೀಡಿದ ಎಲ್ಲಾ ದಾನಿಗಳಿಗೆ
5. ಶ್ರೀ ಭದ್ರಗಿರಿ ಸರ್ವೋತ್ತಮ ಪ್ರೈ, ಶ್ರೀ ಸುಧೀಂದ್ರ ಆಫ್‌ಸೆಟ್ ಪ್ರಿಂಟರ್ಸ್
6. ಚಿತ್ರಕಲಾ ಪರಿಷತ್
7. ಶ್ರೀ ಜಿ.ಓ. ಶಿವಕುಮಾರ್ (ಮುಖಪುಟದ ಚಿತ್ರಕಾರ)
8. ಶ್ರೀ ರಾಜಶೇಖರ ರೆಡ್ಡಿ (ಭಾವಚಿತ್ರ)
9. ಬೆಂಗಳೂರು ಗಾಯನ ಸಮಾಜ
10. ದಿ ಪ್ರಿಂಟರ್ಸ್ (ಮೈಸೂರು) ಪ್ರೈ. ಲಿ.
11. ಇಲ್‌ಸ್ಟ್ರೇಟೆಡ್ ವೀಕ್ಲಿ
12. ಲೇಖನ ಸಂಪಾದಿಸಲು/ಕರಡು ತಿದ್ದಲು ನೆರವಾದ ಶ್ರೀ/ಶ್ರೀಮತಿ ಟಿ.ಎಸ್. ಸತ್ಯವತಿ, ಜ್ಯೋತಿ ಪಟ್ಟಾಭಿರಾಮನ್, ಪದ್ಮಾ ಗುರುದತ್, ಎಂ.ಎ. ಜಯರಾಮ ರಾವ್, ಟಿ.ಎಸ್. ರಂಗಸ್ವಾಮಿ

ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನೆರವಾದ
ಎಲ್ಲ ವ್ಯಕ್ತಿಗಳಿಗೂ ಮತ್ತು ಎಲ್ಲ ಸಂಸ್ಥೆಗಳಿಗೂ –

"ಎಂದರೋ ಮಹಾನುಭಾವುಲು, ಅಂದರಿಕಿ ವಂದನಮು"

ಮುರಳಿ ವಾಣಿ

ಶ್ರೀ ಬಿ.ವಿ.ಕೆ. ಶಾಸ್ತ್ರಿ ಅವರ

ಜೀವನ – ಸಾಧನೆಗಳ

ಭಾವಚಿತ್ರ ಸಂಪುಟ
ಮತ್ತು
ಲೇಖನಗಳ ಸಮಗ್ರ ಸಂಪುಟ



BVK (sitting third from left) with classmates in the Chamarajendra Technical Institute, Mysore, 1937



BVK and G.N. Balasubramanyam, 1955.



BVK with D.V. Gundappa and L.S. Narayanaswamy Bhagawatar.



Visit of Pandit Ravishankar and Ustad Alla Rakha to BVK's residence with family members.




Visit of M.S. Subbulakshmi and T. Sadasivam to BVK's residence and with the family members.



BVK presenting 'Geeta Gopala' at the Madras Music Academys conference 1970. Also in the picture President of the Conference D.K. Pattammal, Dr. V. Raghavan, V. Doreswamy Iyengar and Aripirala Satyanarayanamurthy.



BVK with Vedantam Satyanarayana Sarma as Satyabhama.



BVK receiving the Sangitakalaratna title from the eminent artist Dr. K.K. Hebbar, after presiding over the 14th Annual Music Conference of the Bangalore Gayana Samaja in 1982. Also in the picture Dr. M. Balamuralikrishna.



BVK receiving the Karnataka Lalithakala Academy award at Bijapur. Also in the picture Sri Sankho Choudhury, Chairman, Central Lalitkala Akademi, New Delhi and S.M. Sali, Chairman, Karnataka State Lalithkala Academy.



BVK receiving the Regional Critics Award, Central Lalitkala Akademi, New Delhi at Madras from Dr. Haraswaroop Singh, Governor of Tamilnadu and Pondicherry. Also in the picture Dr. Avvai Natarajan, Secretary Culture, Tamilnadu.



BVK presenting a copy of the Traditional Paintings of Karnataka to President R. Venkataraman.



China tour 1990 - with Narendra Sharma, Uma Sharma, BVK and Kanak Rele on the Greatwall.



BVK with Padma Subramanyam.



BVK with G.V. Iyer and Arudra.




Meeting of the South Zone Culture Centre at Tiruvayyar - Members before the Tyagaraja Samadhi. L to R : V. Sethuramiah (3rd), Neyyattinkara Vasudevan, Voleti Venkateswarulu, BVK, B. Rajam Iyer, Namgiripettai Krishnan, Collector, Thanjavur District, Sheilapriya, Director Zonal Centre and Mrs. Voleti.



Presentation of Cassette by BVK to Sri Kumar, Station Director, AIR, Chennai.
Also in the picture - Sudharani Raghupathy.



BVK with Mrinalini Sarabhai and old classmate Dr. M.G. Diggavi at Darpana, Ahmedabad.



BVK with Pandit Jasraj

1. ಕನ್ನಡ ಕಾವ್ಯಗಳಲ್ಲಿ ಸಂಗೀತ ಪ್ರಸಂಗಗಳು

ಭಾರತೀಯ ಸಂಗೀತವು ವೇದಮೂಲದಿಂದ ಹುಟ್ಟಿದುದು ಎಂಬ ನಂಬಿಕೆ ಪುರಾತನವಾದುದು. ಸಂಗೀತ ರತ್ನಾಕರದಲ್ಲಿ ಹೇಳಿದ -

'ಸಾಮವೇದಾದಿದಂ ಗೀತಂ ಸಂಜಗ್ರಾಹ ಪಿತಾಮಹಾಃ'

ಎಂಬ ಶ್ಲೋಕದಂತೆ ಬ್ರಹ್ಮನು ಏಳು ಸ್ವರಗಳುಳ್ಳ ಸಾಮವೇದದಿಂದ ಸಂಗೀತವನ್ನು ಸಂಪಾದಿಸಿದ, ಎಂಬ ನಂಬಿಕೆ ಸಾರ್ವತ್ರಿಕವಾಗಿದೆ. ಸಂಗೀತವು ಪ್ರಾರಂಭವಾದ ಬಗೆಗೆ ಪ್ರಾಯಶಃ ಎಲ್ಲಾ ಸಂಗೀತ ಶಾಸ್ತ್ರಗ್ರಂಥಗಳೂ ಈ ಶ್ಲೋಕವನ್ನೇ ಉದ್ಧರಿಸುತ್ತವೆ. ಆದರೆ ನಮ್ಮ ಸಂಗೀತವು ಕೇವಲ ಸಾಮವೇದದಿಂದಲೇ ಹುಟ್ಟಿ ಬಂದುದೇ? ಇನ್ನೂ ಬೇರೆ ಯಾವ ಪ್ರಭಾವವೂ ಇಲ್ಲವೇ? ಈ ಪ್ರಶ್ನೆಗಳು ಮೂಡುವುದು ಸಹಜ.

ನಿದರ್ಶನವಾಗಿ, ಭರತನ ನಾಟ್ಯಶಾಸ್ತ್ರದಲ್ಲಿ ಬರುವ ಒಂದು ಸಂದರ್ಭವನ್ನು ನೋಡೋಣ. ಇದು 34ನೇ ಅಧ್ಯಾಯದಲ್ಲಿ ಅವನದ್ಧವಾದ್ಯೋತ್ಪತ್ತಿಯ ಸಂದರ್ಭದಲ್ಲಿ ಬರುತ್ತದೆ. ಒಂದು ಅನಧ್ಯಯನ ದಿವಸ. ವಿದ್ಯಾರ್ಥಿಯಾಗಿದ್ದ ಸ್ವಾತಿ, ಈ ಬಿಡುಸಮಯವನ್ನು ಉಪಯೋಗಿಸಿಕೊಂಡು, ಆಶ್ರಮಕ್ಕೆ ನೀರು ತರಲು, ನದಿಯ ಬಳಿಗೆ ಹೋದ. ಅಲ್ಲಿ ತಲುಪುವ ವೇಳೆಗೆ, ಧಾರಾಕಾರವಾಗಿ ಮಳೆ ಸುರಿಯಲು ಪ್ರಾರಂಭವಾಯಿತು. ಅಲ್ಲಿಯೇ ಇದ್ದ ಒಂದು ಮರದ ಕೆಳಗೆ ಹೋಗಿ ನಿಂತ. ಈ ಮಳೆಯ ಹನಿಗಳು ಸುತ್ತಲಿನ ಪೊದೆಗಳ, ಮರಗಳ ಹಾಗೂ ನೀರಿನಲ್ಲಿದ್ದ ತಾವರೆ ಎಲೆಗಳ ಮೇಲೆ ಬೀಳುತ್ತಿದ್ದು ಬಗೆ ಬಗೆಯ ಧ್ವನಿ ಮೂಡಿ ಬರುತ್ತಿದೆ. ಜೊತೆಗೆ, ಪ್ರಾಣಿಗಳು ಮತ್ತು ಪಕ್ಷಿಗಳ ವಿಧವಿಧ ಧ್ವನಿ ಬೇರೆ. ಇದನ್ನೇ ಬೆರಗಾಗಿ ನೋಡುತ್ತಿದ್ದಾನೆ, ಕೇಳುತ್ತಿದ್ದಾನೆ. ಕೇಳುತ್ತಾ ಹಾಗೆಯೇ ಸ್ಫೂರ್ತಿ ಉಕ್ಕಿ ಬರುತ್ತದೆ. ಈ ಧ್ವನಿಗಳು, ಆ ನಾದಗಳು ಪ್ರತಿಧ್ವನಿಸುವಂತೆ ಏನಾದರೂ ಮಾಡಬೇಕೆಂಬ ಉತ್ಕಟ ಆಕಾಂಕ್ಷೆಯಿಂದ ಈ ಧ್ವನಿಗಳು ಮೂಡುವಂತಹ ವಸ್ತುಗಳ ರಚನೆಗೆ ತೊಡಗುತ್ತಾನೆ. ಹಾಗೆ ಹುಟ್ಟಿ ಬಂದುದು ಪುಷ್ಕರ, ಮೃದಂಗ ಮುಂತಾದ ವಾದ್ಯಗಳು. ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಇದು ಒಂದು ಕತೆಯಂತಿದ್ದರೂ ಪರೋಕ್ಷವಾಗಿಯಾದರೂ, ಸಂಗೀತದ ಉಗಮದ ಮೇಲೆ ಪ್ರಕೃತಿಯ ಪ್ರಭಾವವೂ ಇರುವುದನ್ನು ಎತ್ತಿತೋರುವಂತಿದೆ. ಇದನ್ನೇ ಸ್ವರಗಳ ಧ್ವನಿಸಾಮ್ಯದ ಬಗೆಗೆ ಪ್ರಚಲಿತವಾಗಿರುವ ಈ ಶ್ಲೋಕವು ಸಮರ್ಥಿಸುವಂತಿದೆ.

'ಮಯೂರಸ್ಯ ಸ್ವರಂ ಷಡ್ಜಂ। ಋಷಭೋ ವೃಷಭಧ್ವನಿಃ॥
ಅಜೋವದತಿ ಗಾಂಧಾರಂ। ಕ್ರೌಂಚಂ ಕ್ವಣತಿ ಮಧ್ಯಮಂ ॥
ಪಂಚಮಂ ಕೋಕಿಲೋ ವಕ್ತಿ ಧೈವತಂ ಜಾಯತೇ ಹಯಾತ್॥
ಗಜಾನ್ನಿಷಾದಸ್ಸಂಜಾತ। ಏತೇಷು ಸ್ವರಸಂಭವಃ॥'

ಇದನ್ನೇ ನಿಜಗುಣಶಿವಯೋಗಿ ಕನ್ನಡದಲ್ಲಿ ಹೀಗೆ ಹೇಳಿದ್ದಾರೆ. :

> 'ಬಳಿಕ ನವಿಲುಕೂಗು। ಗೂಳಿಗುಟ್ರಿ। ಅಜಧ್ವನಿ। ಕ್ರೌಂಚಸ್ವನ।
> ಕೋಗಿಲೆಯ ಹಾಡು। ಜಾತ್ಯಶ್ವದ ಹಲಹಲ ಧ್ವನಿ। ಮತ್ತಗಜ
> ಬೃಂಹಿತೆಗಳ ಪರಿಪಾಟಿಯಿಂದ, ಷಡ್ಜಾದಿ ಸಪ್ತಸ್ವರಗಳಿಗನುಕರಣ ಧ್ವನಿಗಳು
> ಶ್ರಾವ್ಯಗಳಾಗಿರ್ಪವು॥'

ಹೀಗೆ ಸಂಗೀತದ ಏಳು ಸ್ವರಗಳ ಧ್ವನಿ ಏಳು ಬಗೆಯ ಪಕ್ಷಿ ಮತ್ತು ಪ್ರಾಣಿಗಳ ಧ್ವನಿಯನ್ನು ಹೋಲುವಂತೆ ಇವೆ ಎಂಬ ಭಾವನೆಯೂ ಪುರಾತನವಾದುದು ಮತ್ತು ಸಂಗೀತಕ್ಕೂ ಪ್ರಕೃತಿಗೂ ಇರುವ ಸಂಬಂಧದ ನೆನಪುಂಟು ಮಾಡುವಂತಿವೆ. ಹೀಗೆ ಸಂಗೀತದ ಬೆಳವಣಿಗೆಯಲ್ಲಿ ಪ್ರಕೃತಿಯ ಪ್ರಭಾವವೇ ಅಲ್ಲದೆ ನಾನಾ ದೇಶಗಳ ನಾನಾ ಜನಾಂಗಗಳ ಪ್ರಭಾವವೂ ಉಂಟು.

ನಿದರ್ಶನವಾಗಿ ಸಂಗೀತದ ಕೆಲವು ರಾಗಗಳನ್ನು ಹೇಳಬಹುದು. ಮಾಳವ, ಘೂರ್ಜರಿ, ಕಾಂಭೋಜಿ, ಬಂಗಾಳಿ, ಸೌರಾಷ್ಟ್ರ, ಗಾಂಧಾರಿ, ಕಾನಡ ಮುಂತಾದವುಗಳು ಒಂದೊಂದು ದೇಶ ಸೂಚಕವಾಗಿವೆ. ಮಾಳವ ದೇಶದಲ್ಲಿ ಬಹುಪ್ರಿಯವಾಗಿದ್ದ ಒಂದು ರಾಗವು, ಸಂಗೀತ ರಾಗಪರಿವಾರಕ್ಕೆ ಸೇರಿದಾಗ ಅದೇ ಹೆಸರನ್ನೇ ತಳೆಯಿತು. ಹಾಗೆಯೇ ಘೂರ್ಜರಿ. ಘೂರ್ಜರ ಅಥವಾ ಗುಜರಾತ್ ದೇಶದಿಂದ ಸೇರಿಕೊಂಡ ರಾಗ. ಕಾಂಭೋಜಿ-ಕಾಂಭೋಜ ದೇಶದ್ದು, ಬಂಗಾಳಿ-ಬಂಗಾಳ ದೇಶದ್ದು, ಸೌರಾಷ್ಟ್ರ-ಸೌರಾಷ್ಟ್ರ ದೇಶದ್ದು, ಗಾಂಧಾರಿ-ಗಾಂಧಾರ ದೇಶದ್ದು, ಕಾನಡ ಮೂಲತಃ ಕರ್ಣಾಟವಿದ್ದು ಕಾನಡವಾದುದು, ಕರ್ನಾಟ ದೇಶದಿಂದ ಬಂದುದು - ಹೀಗೆ. ಹಾಗೆಯೇ ಸಾವೇರಿ, ಭೈರವ, ಆಭೀರಿ ಮುಂತಾದುವು ಆಯಾ ಜನಾಂಗಕ್ಕೆ ಪ್ರಿಯವಾಗಿದ್ದ ಮಟ್ಟುಗಳು. ಸಂಗೀತಕ್ಕೆ ಸೇರಿದ ನಂತರ ಆ ಹೆಸರಿನ ರಾಗಗಳಾದುವು. ಹೀಗೆ ಭಾರತೀಯ ಸಂಗೀತವೆಂಬ ನದಿ, ವೇದಮೂಲದಿಂದ ಬಂದುದು ಎಂದರೂ ಅದಕ್ಕೆ ಇಂತಹ ತೊರೆಗಳು ಅನೇಕವಾಗಿ ಸೇರಿ ಒಂದು ದೊಡ್ಡ ನದಿಯಂತೆ ಹರಿಯುತ್ತಿದೆ.

ಭಾರತೀಯ ಸಂಗೀತದ ಬಗೆಗೆ ಅನೇಕ ಶಾಸ್ತ್ರಗ್ರಂಥಗಳು ರಚಿತವಾಗಿವೆ. ಸುಮಾರು 8-9ನೇ ಶತಮಾನದ ಬೃಹದ್ದೇಶಿಯಿಂದ ಹಿಡಿದು 19ನೆಯ ಶತಮಾನದ ಸಂಗ್ರಹ ಚೂಡಾಮಣಿಯವರೆಗಿನ ಸಾವಿರ ವರುಷದ ಅಂತರದಲ್ಲಿ ಗಣನೀಯ ಪ್ರಮಾಣದ ಶಾಸ್ತ್ರಗ್ರಂಥ ರಚನೆಯಾಗಿದೆ. ಅವುಗಳಲ್ಲಿ ಕೆಲವು ಪ್ರಸಿದ್ಧವಾಗಿವೆ. ಬೃಹದ್ದೇಶಿಯೇ ಅಲ್ಲದೆ, ನಾನ್ಯ ಭೂಪಾಲನ ಭರತಭಾಷ್ಯ, ನಾರದನ ಸಂಗೀತ ಮಕರಂದ, ಶಾರ್ಙ್ಗದೇವನ ಸಂಗೀತ ರತ್ನಾಕರ, ಸುಧಾಕಲಶನ ಸಂಗೀತೋಪನಿಷದ್ ಸಾರೋದ್ಧಾರ, ಕುಂಭರಾಣನ ಸಂಗೀತರಾಜ, ರಾಮಾಮಾತ್ಯನ ಸ್ವರಮೇಳ ಕಲಾನಿಧಿ, ಪುಂಡರೀಕ ವಿಟ್ಠಲನ ಸದ್ರಾಗ ಚಂದ್ರೋದಯ, ರಾಗಮಾಲಾ, ರಾಗಮಂಜರಿ, ಸೋಮನಾಥನ ರಾಗವಿಬೋಧ, ವೇಂಕಟಮಖಿಯ ಚತುರ್ದಂಡಿ ಪ್ರಕಾಶಿಕೆ, ಅಹೋಬಲನ ಸಂಗೀತ ಪಾರಿಜಾತ, ಹೀಗೆ ಸಾಕಷ್ಟು ಸಂಖ್ಯೆಯ

ಶಾಸ್ತ್ರಗ್ರಂಥಗಳು ರಚಿತವಾಗಿವೆ. ಇವೆಲ್ಲಾ ಸಂಸ್ಕೃತದಲ್ಲಿವೆ. ಇವುಗಳೆಲ್ಲಾ ಪ್ರಾಯಶಃ ನಾದ, ಸ್ವರ, ಶ್ರುತಿ, ಗ್ರಾಮ, ರಾಗ, ತಾಳ, ವಾದ್ಯ ಮುಂತಾದ ಸಂಗೀತದ ವಿವಿಧ ಅಂಗಗಳ ವಿವರಣೆಯೇ ಅಲ್ಲದೆ ಅವುಗಳ ಲಕ್ಷಣಗಳನ್ನು ಹೇಳುವುದರಲ್ಲಿ ಸೀಮಿತವಾಗಿರುತ್ತವೆ. ಕೆಲವು ಗ್ರಂಥಗಳು, ಆ ಹಿಂದಿನ ಗ್ರಂಥಕರ್ತರು ಹೇಳಿದುದನ್ನೇ ಪುನರಾವೃತ್ತಿ ಮಾಡುತ್ತವೆ. ಅವುಗಳ ಕಾಲದಲ್ಲಿ ಪ್ರಚಲಿತವಿದ್ದ ಸಂಗೀತದ ವಿವರಗಳು ಇಲ್ಲಿ ದೊರಕುವುದು ಕಷ್ಟ. ಆದುದರಿಂದ ಸಂಗೀತದ ಬಗೆಗೆ ಸಂಶೋಧನೆ ಮಾಡುವವರಿಗೆ ಕೇವಲ ಈ ಸಂಸ್ಕೃತದಲ್ಲಿರುವ ಶಾಸ್ತ್ರಗ್ರಂಥಗಳನ್ನೇ ಅವಲಂಬಿಸಿದಲ್ಲಿ, ಅವರ ಕೆಲಸವು ಅಪೂರ್ಣವಾಗುವುದು. ಈ ಭಾಗದಲ್ಲಿ ಪ್ರಾದೇಶಿಕ ಭಾಷೆಗಳ ಸಾಹಿತ್ಯವನ್ನೂ ಅಧ್ಯಯನ ಮಾಡುವುದು ಅಗತ್ಯ. ಏಕೆಂದರೆ ಈ ಪ್ರಾದೇಶಿಕ ಸಾಹಿತ್ಯದಲ್ಲಿ ಅನೇಕ ಕಡೆ ಸಂಗೀತ ಪ್ರಸಂಗಗಳ ಪ್ರಸ್ತಾಪ ಬರುತ್ತದೆ. ಹಿಂದಿನ ಕವಿಗಳಿಗೆ ಭಾಷಾಪ್ರೌಢಿಮೆಯೇ ಅಲ್ಲದೆ, ವಿವಿಧ ಕಲೆಗಳಲ್ಲಿ ಅಭಿರುಚಿಯೂ ಇರುತ್ತಿತ್ತು. ಆದುದರಿಂದ ಅವರ ಕಾವ್ಯಗಳಲ್ಲಿ ಸಂದರ್ಭೋಚಿತವಾಗಿ ಸಂಗೀತ, ನೃತ್ಯ, ಚಿತ್ರ ಮುಂತಾದ ಕಲೆಗಳ ಬಗೆಗೆ ಸ್ವಾರಸ್ಯವಾದ ವರ್ಣನೆ ಇರುತ್ತಿತ್ತು. ಈ ವರ್ಣನೆಯು ಹಿಂದಿನ ಶಾಸ್ತ್ರಗ್ರಂಥಗಳಿಂದ ಉದ್ಧರಿಸಿದವುಗಳಲ್ಲ. ಅವು ಆಯಾ ಕವಿಯ ಕಾಲದ, ಆತನು ನೋಡಿರಬಹುದಾದ ಸಂದರ್ಭಗಳ ವರ್ಣನೆಯೇ. ಆದುದರಿಂದ ಆಯಾ ಶತಮಾನದ ಸಂಗೀತದ ಒಂದು ನಿಜ ಚಿತ್ರವನ್ನು ಆ ಕಾವ್ಯಗಳು ಪರಿಚಯಿಸುತ್ತವೆ. ಅನೇಕ ಸಲ ಸಂಸ್ಕೃತ ಶಾಸ್ತ್ರ ಗ್ರಂಥಗಳಲ್ಲಿ ಕಾಣಬರದ ಅಂಶಗಳೂ ಈ ಕಾವ್ಯಗಳ ಸಂಗೀತ ವರ್ಣನೆಗಳಲ್ಲಿ ಕಂಡುಬರುತ್ತವೆ. ಕನ್ನಡ ಸಾಹಿತ್ಯವು ಇದಕ್ಕೆ ಹೊರತೇನಲ್ಲ.

ಸುಮಾರು ಹತ್ತನೆಯ ಶತಮಾನದಲ್ಲಿ ರಚಿತವಾದ ಪಂಪನ ಆದಿಪುರಾಣದಿಂದ ಹಿಡಿದು ಮುಂದಿನ ಶತಮಾನಗಳಲ್ಲಿ ರಚಿತವಾದ ಅನೇಕ ಕಾವ್ಯಗಳಲ್ಲಿ ಸಂಗೀತದ ಪ್ರಸ್ತಾಪ ಬರುತ್ತದೆ. ಕೆಲವುದರಲ್ಲಿ ಸಂಗೀತವು ನಾಟ್ಯ ಪ್ರದರ್ಶನದ ಸಂದರ್ಭದಲ್ಲಿ ವಿವರಿತವಾಗಿದೆ. ಕೆಲವುದರಲ್ಲಿ ಸಂಗೀತವನ್ನೇ ಪ್ರತ್ಯೇಕವಾಗಿ ವರ್ಣಿಸಲಾಗಿದೆ. ಇನ್ನು ಕೆಲವುದರಲ್ಲಿ ಸಂಗೀತ ಪ್ರಸಂಗಗಳ ಸ್ವಾರಸ್ಯವಾದ ವಿವರಣೆಯಿದೆ. ಇದರಲ್ಲಿ ಕೆಲವು ಪ್ರಸಂಗಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ.

ಕನ್ನಡ ಕಾವ್ಯಗಳಲ್ಲಿ ಸಂಗೀತ ಸಂದರ್ಭದಲ್ಲಿ ಬರುವ ವಿವರಗಳು ಬಹುತೇಕ ಸಂಸ್ಕೃತದಲ್ಲಿರುವ ಶಾಸ್ತ್ರಗ್ರಂಥಗಳಲ್ಲಿರುವ ಸಿದ್ಧಾಂತಗಳನ್ನೇ ಪ್ರತಿಪಾದಿಸುತ್ತವೆ. ನಿದರ್ಶನವಾಗಿ ಸಂಗೀತ ಪದದ ವ್ಯಾಖ್ಯೆ ಸಂಗೀತ ರತ್ನಾಕರಾದಿ ಗ್ರಂಥಗಳಲ್ಲಿ - ಗೀತಂ ವಾದ್ಯಂಚ ನೃತ್ಯಂಚ ತ್ರಯಂ ಸಂಗೀತಮುಚ್ಯತೆ ಎಂದು ಹೇಳಲಾಗಿದೆ. ಅದನ್ನೇ ಕನ್ನಡ ಗ್ರಂಥಗಳಲ್ಲಿ ನೃತ್ಯ-ಗೀತ-ವಾದ್ಯ ಈ ಮೂರೂ ಸಂಗೀತಮೆಂಬುದು ಎನ್ನುತ್ತಾನೆ, ಅಭಿದಾನರತ್ನಮಾಲೆಯ ಕನ್ನಡವ್ಯಾಖ್ಯಾನಕಾರ. ಹಾಗೆಯೇ ನೃತ್ಯಮುಮಾವಾದ್ಯಮುಮಾ ಗೀತಮಿವು ಕೂಡಿದೊಡೆ ಸಂಗೀತಮೆಂದೆನಿಕ್ಕುಂ ಎನ್ನುತ್ತಾನೆ ಮಂಗರಾಜ ತನ್ನ ಮಂಗಾಭಿದಾನ ನಿಘಂಟುವಿನಲ್ಲಿ. ಹೀಗೆ ಮುಂದೆ ಸಂಗೀತದ ವಿವಿಧ ಅಂಗಗಳಾದ ನಾದ, ಸ್ವರ, ಶ್ರುತಿ, ಗಮಕ, ರಾಗ, ತಾಳ, ವಾದ್ಯ, ಪ್ರಬಂಧ ಮುಂತಾದವುಗಳ ವರ್ಣನೆ ಬಹುತೇಕ ಸಂಸ್ಕೃತ ಶಾಸ್ತ್ರ ಗ್ರಂಥಗಳನ್ನೇ ಅನುಸರಿಸಿದೆ.

ತಾಂತ್ರಿಕ ಪದಗಳೂ ಅಷ್ಟೇ. ಆದರೆ ಅನೇಕ ಸಂದರ್ಭದಲ್ಲಿ ಪ್ರಾಕೃತ ಪದಗಳೂ, ಹಾಗೆಯೇ ಕನ್ನಡ ಪದಗಳೂ, ಈ ವರ್ಣನೆಗಳ ಮಧ್ಯೆ ಮಧ್ಯೆ ಕಾಣಬರುತ್ತವೆ. ಈ ಸಂಗೀತ ಸಂದರ್ಭಗಳು, ಬಹುಪಾಲು ನಾಟ್ಯ ಸನ್ನಿವೇಶಗಳಲ್ಲಿ ಕಂಡುಬರುತ್ತವೆ. ಅಲ್ಲಿ ಸಂಗೀತವು ನೃತ್ಯಕ್ಕೆ ಒತ್ತು ಕೊಡುವ ಹಿಮ್ಮೇಳದಂತಿದ್ದರೂ, ವರ್ಣನೆಗಳಲ್ಲಿ ಸಂಗೀತದ್ದೇ ಅನೇಕ ಸ್ವಾರಸ್ಯ ಸಂಗತಿಗಳು ಸೇರಿರುತ್ತವೆ.

ಭಾರತೀಯ ಸಂಗೀತವು ರಾಗಪ್ರಧಾನವಾದುದು. ರಾಗವು ಅದರ ಜೀವಾಳವೂ ಹೌದು. ಹಿಂದೂಸ್ತಾನಿ ಸಂಗೀತವೇ ಆಗಲಿ, ಕರ್ನಾಟಕ ಸಂಗೀತವೇ ಆಗಲಿ, ಅವುಗಳ ಆಧಾರಸ್ತಂಭವು ರಾಗವೆನ್ನಬಹುದು. ರಾಗ ಶಬ್ದವು ಸುಮಾರು 8-9 ಶತಮಾನದಿಂದಲೂ ವ್ಯವಹಾರದಲ್ಲಿದೆ. ಈ ಪದವು ಮೊದಲು ಕಂಡುಬರುವುದು ಮತಂಗನ ಬೃಹದ್ದೇಶಿಯಲ್ಲಿ -

ಯೋ ಸೌ ಧ್ವನಿ ವಿಶೇಷಸ್ತು ಸ್ವರವರ್ಣ ವಿಭೂಷಿತಃ
ರಂಜಕೋ ಜನ ಚಿತ್ತಾನಾಂ ಸರಾಗಃ ಕಥಿತೇ ಬುಧೈಃ

ಎಂದಿದ್ದಾನೆ ಮತಂಗ- ಅಂದರೆ ಸ್ವರ ಮತ್ತು ವರ್ಣದಿಂದ ಬೆಳಗಿ ಕೇಳುವವರ ಮನಸ್ಸಿಗೆ ಸಂತೋಷ ಕೊಡುವ ಧ್ವನಿ ವಿಶೇಷ. ಅದನ್ನು ರಾಗವೆನ್ನುತ್ತಾರೆ ಅಥವಾ ಧ್ವನಿಯ ನಾನಾ ಛಾಯೆಗಳು ಮತ್ತು ಅವುಗಳ ಜೋಡಣೆಗಳಿಂದ ಬೆಳುಗುತ್ತಾ ಕೇಳುವವರ ಮನಸ್ಸಿಗೆ ಉಲ್ಲಾಸ ಉಂಟು ಮಾಡುವ ಧ್ವನಿವಿಶೇಷ ರಾಗ. ಇಲ್ಲಿ ವರ್ಣ ಎಂಬುದನ್ನು ಎರಡು ಅರ್ಥದಲ್ಲಿ ನೋಡಬಹುದು. ಸಂಗೀತ ಪರಿಭಾಷೆಯಲ್ಲಿ ವರ್ಣ ಎಂದರೆ ಗಾನಕ್ರಿಯೆ. ಸ್ವರಗಳು ಏರುವುದು, ಇಳಿವುದು ಅಥವಾ ಎರಡೂ ಬೆರೆವಂತಹುದು ಇತ್ಯಾದಿ. ಇದಕ್ಕೆ ಇನ್ನೂ ಸರಳವಾದ ಉದಾಹರಣೆಯನ್ನು ಕೊಡಬಹುದು. ಏಳು ಸ್ವರಗಳನ್ನೂ ಏಳು ಬಣ್ಣಗಳೆಂದು ಪರಿಗಣಿಸೋಣ. ಬಣ್ಣಗಳ ನಿರ್ದಿಷ್ಟವಾದ ಮತ್ತು ಹದವಾದ ಮಿಲನದಿಂದ ಚಿತ್ರ ನಿರ್ಮಿತವಾಗುವುದು ಸಹಜ. ಹಾಗೆಯೇ ಏಳೂ ಸ್ವರಗಳ ಬಗೆಬಗೆಯ ಧ್ವನಿ ಪ್ರಕಾರಗಳು ಹದವಾಗಿ ಹಾಗೂ ಹಿತವಾಗಿ ಬೆರೆತು ನಿರ್ಮಿತವಾದ ನಾದಚಿತ್ರವೇ ರಾಗ. ಏಳೂ ಸ್ವರಗಳಲ್ಲಿಯೂ ವಿಧವಿಧ ಛಾಯೆ ಇರುವುದು ಸಹಜ. ಈ ನಾದಚಿತ್ರಕ್ಕೆ ನಿರ್ದಿಷ್ಟ ಆಕಾರ ಕೊಡುವಲ್ಲಿ ಅವುಗಳ ಬಳಕೆಯಾಗುತ್ತದೆ. ಇದರಲ್ಲಿ ಏಳೂ ಬಣ್ಣಗಳನ್ನು ಬಳಸಿ ರಚಿಸಿದಂತಹ ಚಿತ್ರಗಳಿರುತ್ತವೆ. ಐದು ಬಣ್ಣ, ಆರು ಬಣ್ಣಗಳನ್ನು ಉಪಯೋಗಿಸಿ ಮಾಡಿದಂತಹ ಚಿತ್ರಗಳು ಇರುತ್ತವೆ. ಈ ನಾದಚಿತ್ರಗಳು ವೈವಿಧ್ಯವು ಅದನ್ನು ರಚಿಸಿದವರ ಕಲ್ಪನಾಸಾಮರ್ಥ್ಯವನ್ನು ಅವಲಂಬಿಸಿ, ಒಂದೊಂದಕ್ಕೂ ಒಂದೊಂದು ಪ್ರತ್ಯೇಕ ವ್ಯಕ್ತಿತ್ವ ಇರುತ್ತದೆ ಮತ್ತು ಪ್ರತ್ಯೇಕವಾದ ಹೆಸರಿರುತ್ತದೆ. ಇದು ಸ್ಥೂಲವಾಗಿ ಮತಂಗನ ರಾಗವಿವರಣೆಯ ಶ್ಲೋಕದ ಅರ್ಥ.

ಆದರೆ ಮತಂಗನು ರಾಗ ಶಬ್ದವನ್ನು ವಿವರಿಸುವ ಕಾಲಕ್ಕೆ ಇನ್ನೂ ಹಿಂದೆಯೇ, ಈ ರಾಗದ ಕಲ್ಪನೆ ಮೂಡಿರಬಹುದು. ಅದು ಬೇರೆ ಬೇರೆ ರೀತಿಯಲ್ಲಿ ರೂಪುಗೊಂಡಿರಬಹುದು.

ರಾಗವಿಕಾಸದಲ್ಲಿ ಮೂಲವಸ್ತು ಸ್ವರ. ಅವುಗಳ ಕ್ರಮಬದ್ಧ ವಿನ್ಯಾಸದಿಂದ ರಾಗ ರೂಪುಗೊಳ್ಳುವುದು. ಒಂದು ಕ್ರಮಬದ್ಧ ಮತ್ತು ವೈಜ್ಞಾನಿಕ ರೀತಿಯಿಂದ ರಚನೆಯಾಗುವುದು. ಇನ್ನೊಂದು ಸಮಯಸ್ಫೂರ್ತಿಯಿಂದ. ಎರಡನೆಯದನ್ನು ಒಂದು ರೀತಿ ಮಟ್ಟುಗಳೆನ್ನಬಹುದು. ಅವು ಸ್ವಾಭಾವಿಕವಾಗಿ ಹುಟ್ಟಿ ಬಂದಂತಹವು. ಮೊದಲನೆಯದರಲ್ಲಿ ಸ್ವರಗಳು-ಗ್ರಾಮ, ಮೂರ್ಛನ, ಜಾತಿ ಮುಂತಾದ ಹಂತಗಳನ್ನು ದಾಟಿ ರಾಗದ ರೂಪ ಮತ್ತು ಹೆಸರನ್ನು ಪಡೆದಿವೆ. ಮಟ್ಟುಗಳಲ್ಲಿಯೂ, ಅನೇಕವು ಪ್ರತಿಭಾವಂತರು ಪರಿಷ್ಕರಿಸಿ ಅದಕ್ಕೆ ನಿರ್ದಿಷ್ಟವಾದ ರೂಪ ಕೊಟ್ಟು, ರಾಗಗಳ ಜೊತೆಯಲ್ಲಿ ಸೇರಿಹೋದವು. ಸಾವೇರಿ, ಆಭೇರಿ, ಮುಂತಾದುವು ಮೂಲತಃ ಒಂದೊಂದು ಬುಡಕಟ್ಟಿನವರು ಮಟ್ಟುಗಳಾಗಿ ಉಪಯೋಗಿಸುತ್ತಿದ್ದಂತಹವು. ಮುಂದೆ ಜ್ಞಾನಸ್ಥರು ಅವುಗಳನ್ನು ಪರಿಷ್ಕರಿಸಿ ಅವಕ್ಕೆ ರಾಗದ ರೂಪ ಬಂದ ಮೇಲೆ ಪ್ರಚಲಿತವಿದ್ದ ರಾಗಗಳ ಗುಂಪಿಗೆ ಸೇರಿಕೊಂಡವು. ಅವುಗಳು ಯಾವ ಬುಡಕಟ್ಟಿನಿಂದ ಬಂದವೋ ಅದೇ ಹೆಸರಿನಿಂದ ಪ್ರಚಾರಕ್ಕೆ ಬಂದವು.

ಹೀಗೆ ರಾಗಗಳ ಸಂಖ್ಯೆ ಹೆಚ್ಚುತ್ತಾ, ಅವುಗಳ ನಾದ-ರೂಪವನ್ನು ಗ್ರಹಿಸಲು ಕಷ್ಟವಾಗುತ್ತಾ ಬಂದಿತು. ಆಗ ಅವುಗಳ ವರ್ಗೀಕರಣವು ಅವಶ್ಯಕವಾಯಿತು. ಈ ವಿಧಾನ ಬೃಹದ್ದೇಶಿಯಲ್ಲಿಯೇ ಪ್ರಾರಂಭವಾಗಿದೆ. ಅಲ್ಲಿ ರಾಗಗಳನ್ನು ಗೀತಿ ಎಂದು ಕರೆಯಲಾಗಿದೆ ಮತ್ತು ಅವುಗಳನ್ನು ಶುದ್ಧ, ಭಿನ್ನಕ, ಗೌಡಿಕ, ರಾಗಗೀತಿ, ಸಾಧಾರಣ, ಭಾಷಾ, ವಿಭಾಷಾ ಎಂದು ವರ್ಗೀಕರಿಸಲಾಗಿದೆ. ಮುಂದೆ ಇದು ಬದಲಾಗುತ್ತಾ, ರಾಗಾಂಗ, ಭಾಷಾಂಗ, ಕ್ರಿಯಾಂಗ, ಉಪಾಂಗ ಎಂಬ ವರ್ಗೀಕರಣ ಪ್ರಚಾರಕ್ಕೆ ಬಂದಿತು. ಮುಂದೆ ಮೇಳಪದ್ಧತಿ ಪ್ರಚಾರಕ್ಕೆ ಬಂದ ಮೇಲೆ-ಜನಕ ಮತ್ತು ಜನ್ಯ ಎಂಬ ವರ್ಗೀಕರಣ ಪ್ರಾರಂಭವಾಯಿತು. ಮೇಳ ಪದ್ಧತಿಯಲ್ಲಿ ಒಂದು ಪ್ರಧಾನ ರಾಗ, ಅದರಿಂದ ಹುಟ್ಟಿ ಬರುವ ರಾಗಗಳು ಜನ್ಯರಾಗಗಳು. ಈ ಪದ್ಧತಿಯಲ್ಲಿ ಜನಕ ಮತ್ತು ಜನ್ಯರಾಗಗಳಿಗೆ ರೂಪಸಾದೃಶ್ಯವಿರುತ್ತದೆ.

ಈ ಬಗೆಯ ವರ್ಗೀಕರಣವಲ್ಲದೆ, ಇನ್ನೊಂದು ಬಗೆಯ ವರ್ಗೀಕರಣವೂ ಪ್ರಚಾರದಲ್ಲಿದೆ. ಅದು ರಾಗಪರಿವಾರ ಪದ್ಧತಿ. ಇಲ್ಲಿ ಒಂದು ಪ್ರಧಾನ ರಾಗ. ಅದಕ್ಕೆ ಪತ್ನಿಯರಂತೆ ತಲಾ ಮೂರರಿಂದ ಆರರವರೆಗೆ ರಾಗಿಣಿಗಳು. ಮುಂದೆ ಇದು ವಿಸ್ತಾರವಾಗುತ್ತಾ ಈ ರಾಗ-ರಾಗಿಣಿಯರಿಗೆ ಪುತ್ರರು, ಸೊಸೆಯರು ಹೀಗೆ ಬೆಳೆಯುತ್ತಾ ಬಂದಿತು. ಆದರೆ ಇದರಲ್ಲಿ ಒಂದು ನಿಶ್ಚಿತತೆ ಇಲ್ಲ. ಒಂದೊಂದು ಮತ ಅಥವಾ ಸಂಪ್ರದಾಯದಲ್ಲಿ ಒಂದೊಂದು ರೀತಿ. ಒಂದರಲ್ಲಿ ರಾಗವಾದುದು ಇನ್ನೊಂದು ಮತದಲ್ಲಿ ರಾಗಿಣಿ. ಜೊತೆಗೆ ಈ ರಾಗ-ರಾಗಿಣಿ-ಪುತ್ರ ರಾಗಗಳಿಗೆ ರೂಪ ಸಾದೃಶ್ಯವಿಲ್ಲ. ಒಂದು ಗೊಂದಲಮಯ ಸ್ಥಿತಿ. ಮೇಳ ಪದ್ಧತಿಯು ದಾಕ್ಷಿಣಾತ್ಯ ಅಥವಾ ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಬಳಕೆಯಲ್ಲಿದೆ. ರಾಗ ಪರಿವಾರ ಪದ್ಧತಿ ಉತ್ತರ ಭಾರತದ ಅಥವಾ ಹಿಂದೂಸ್ತಾನಿ ಪದ್ಧತಿಯಲ್ಲಿ ಬಳಕೆಯಲ್ಲಿದೆ. ಈ ಪದ್ಧತಿಯ ಗೊಂದಲಮಯ ಸ್ಥಿತಿಯನ್ನು ಕಂಡು, ಈಗ ದಕ್ಷಿಣ ಭಾರತದ ಮೇಳ ಪದ್ಧತಿಯನ್ನು ಹೋಲುವ ಥಾಟ್ ಪದ್ಧತಿಯನ್ನು ಹಿಂದೂಸ್ತಾನಿ ಸಂಗೀತದಲ್ಲಿಯೂ ಬಳಕೆಗೆ ತರಲಾಗಿದೆ.

ಆದರೆ ಇವೆರಡರಿಂದಲೂ ಬೇರೆಯಾದ ಇನ್ನೊಂದು ಪದ್ಧತಿಯೂ ಬಳಕೆಯಲ್ಲಿತ್ತು. ಅದು ಬತ್ತೀಸರಾಗ ಪದ್ಧತಿ. ಇದು ಪ್ರಾಯಶಃ ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಬಳಕೆಯಲ್ಲಿದ್ದಂತೆ ಕಂಡು ಬರುತ್ತದೆ. ಇದನ್ನು ಮುಂದೆ ಪ್ರತ್ಯೇಕವಾಗಿ ವಿವರಿಸಲಾಗುವುದು. ಅದಕ್ಕೆ ಮೊದಲು ಕನ್ನಡ ಸಾಹಿತ್ಯದಲ್ಲಿ ಈ ರಾಗಗಳಿಗೆ ಸಂಬಂಧಪಟ್ಟಂತೆ ನಾನು ಕಂಡ ಒಂದೆರಡು ಸ್ವಾರಸ್ಯಾಂಶಗಳನ್ನು ತಿಳಿಸಬೇಕಾಗಿದೆ.

ಒಂದೊಂದು ರಾಗಕ್ಕೂ ನಾದರೂಪವಿದೆ. ಹಾಗೆಯೇ ಒಂದೊಂದೂ ರಾಗಕ್ಕೂ ವಿಶೇಷ ಗುಣವುಂಟು ಎಂಬ ಭಾವನೆಯು ಹಿಂದಿನಿಂದಲೂ ಬಂದಿದೆ. ನಿದರ್ಶನವಾಗಿ- ಮಧ್ಯಮಾದಿ. ಇಂದಿನ ಮಧ್ಯಮಾವತಿಯನ್ನು ಹೋಲುವ ರಾಗ. ಹಿಂದೆ ಸಂಗೀತಗೋಷ್ಠಿಗಳು ಈ ರಾಗದಿಂದ ಪ್ರಾರಂಭವಾಗುತ್ತಿದ್ದ ಹಾಗಿದೆ. ಸುಮಾರು 1235ರಲ್ಲಿ ರಚಿತವಾದ ಕಮಲಭವನ ಶಾಂತೀಶ್ವರ ಪುರಾಣದಲ್ಲಿ ಇದನ್ನು ಆದಿರಾಗವೆಂದು ಕರೆಯಲಾಗಿದೆ. 'ಕಿನ್ನರಂ ತನ್ನ ಸೊಳಹೆ ಎಂಬ ವಾಸಮಂ' ಕೊಂಡು 'ಹೆಲ್ಲಣೆಯಂ ಸುದ್ದಮಾಗಿ ಪುಂಕಿಸಿ, ಬಿಂಕಂಬಡೆಯೆ ಮುಹಜಾಳೆಯುವಂ ಮಾಡಿ ರೂಢಿವಡೆದ ಮಧ್ಯಮಾದಿ ಎಂಬ ಆದಿರಾಗಮಂ ರೂಪುಗೊಳಿಪುದುಂ' ಇತ್ಯಾದಿಯಾಗಿ ಹೇಳಿದ್ದಾನೆ. ಕಾವ್ಯಗಳಲ್ಲಿ ಬೇರೆ ಕಡೆ ಮಧ್ಯಮಾದಿ ರಾಗ ಸಂದರ್ಭದಲ್ಲಿ ಅದು ಕೊಳಲಿನಲ್ಲಿ ನುಡಿಸಿದಂತೆ ಪ್ರಸ್ತಾಪಿಸಲಾಗಿದೆ. ಆದುದರಿಂದ ಈ ರಾಗವು ಕೊಳಲಿನಲ್ಲಿ ನುಡಿಸಲು ಬಹು ಪ್ರಶಸ್ತವಾದುದು ಎಂಬ ನಂಬಿಕೆ ಇದ್ದಂತೆ ಕಂಡುಬರುತ್ತದೆ. 18ನೆಯ ಶತಮಾನದಲ್ಲಿ ರಚಿತವಾದ ತಂಜಾವೂರು ರಾಜ ತುಳಜಾಜಿಯ ಸಂಗೀತ ಸಾರಾಮೃತದಲ್ಲಿಯೂ ಈ ರಾಗವನ್ನು ವಿವರಿಸುವಾಗ 'ಮುರಲ್ಯಾಂ ದೃಶ್ಯತೋಧಿಕಾ' ಎಂದು ಹೇಳಿರುವುದನ್ನು ನೋಡಿದರೆ ಈ ನಂಬಿಕೆ ಬಹು ಪ್ರಾಚೀನವಾದುದು ಎನಿಸುತ್ತದೆ. ಹಾಗೆಯೇ ಕೆಲವು ರಾಗಗಳು ನಿಸರ್ಗದ ಮೇಲೆಯೂ ತಮ್ಮ ಪ್ರಭಾವವನ್ನು ಬೀರಬಲ್ಲವು ಎಂಬ ನಂಬಿಕೆಯೂ ಬಹು ಹಿಂದಿನಿಂದ ಬಂದುದು. ಕೆಲವು ರಾಗಗಳು ಅಂದರೆ ಅಮೃತವರ್ಷಿಣಿ ಅಥವಾ ಮೇಘಮಲ್ಹಾರ್ ಮುಂತಾದ ರಾಗಗಳು ಮಳೆ ಬರಿಸುತ್ತವೆ, ದೀಪಕರಾಗ ಹಾಡಿದರೆ ಬೆಂಕಿ ಹೊತ್ತಿಕೊಳ್ಳುತ್ತದೆ ಎಂಬ ನಂಬಿಕೆಯೂ ಹಿಂದಿನಿಂದಲೂ ಬಂದಿದೆ. ಇದನ್ನೇ ಭರತೇಶ ವೈಭವದ ಒಂದು ಸಾಲು ಸಮರ್ಥಿಸುವಂತಿದೆ.

'ಗುಂಡಾಕ್ರಿಗೆ ಶಿಲೆ ಪೊಸರುವುದು ಘನವೇ?' ಇದು ಗುಂಡಕ್ರಿಯಾರಾಗಕ್ಕೆ ಸಂಬಂಧಪಟ್ಟುದು. ಗುಂಡಕ್ರಿಯೆ ಅಥವಾ ಕುಂಡಕ್ರಿಯೆ ಎಂದು ಕರೆಯಲಾದ ಈ ರಾಗಕ್ಕೆ ಕಲ್ಲನ್ನು ಕರಗಿಸುವ ಗುಣ ಇದೆ ಎಂಬ ಭಾವನೆ ಬಹು ಹಳೆಯದು. ಇದರಂತೆ ಇನ್ನೊಂದು ರಾಗ- ಹಿಂದೋಳ. ಇದು ಕರಗಿಸುವುದು ಕಲ್ಲನ್ನಲ್ಲ. ಮನುಷ್ಯರ ಹೃದಯವನ್ನು. ಇದೂ ಬಹು ಪ್ರಾಚೀನರಾಗ. ಪಂಪನ ಆದಿಪುರಾಣದಲ್ಲಿಯೇ ಇದರ ಪ್ರಸ್ತಾಪವಿದೆ. ಇದರ ಗುಣವಿಶೇಷವನ್ನು ನೇಮಿಚಂದ್ರನ ಲೀಲಾವತಿಯಲ್ಲಿ ಹೀಗೆ ಹೇಳಿದೆ–

'ಈ ರಾಗಮಾರ್ಗಂ ಹಿಂದೋಳರಾಗಾಂಗಸಂಭವಮಪ್ಪ ದೇಶೀ ಹಿಂದೋಳಮಿದು ಶೃಂಗಾರಯುಕ್ತಮಪ್ಪುದರಿಂ ಶೃಂಗಾರಕಾರಾಗ್ರಹನಪ್ಪ ನಿನಗೆ ಕೇಳಲ್ತಕ್ಕುದು.'

ಸಂದರ್ಭವಿಷ್ಟೇ- ರೂಪಕಂದರ್ಪನೂ ಅವನ ಗೆಳೆಯನಾದ ಮಕರಂದನೂ ವೇಶ್ಯೆಯರ ಬೀದಿಯಲ್ಲಿ ಬರುತ್ತಿದ್ದಾರೆ. ಅಲ್ಲಿನ ನವಿರಾದ ಸಂಗೀತಧ್ವನಿಯನ್ನು ಆಲಿಸುತ್ತಿದ್ದಾರೆ. ಅದು

ಮೋಹಕರವಾಗಿದೆ. ಇಲ್ಲಿ ವಿಶೇಷವೆಂದರೆ ಈ ರಾಗಕ್ಕೆ ಹೇಳಿರುವ ಗುಣ. ಪ್ರಾಯಶಃ ಹಿಂದೋಳ ರಾಗವು ವೀರರಸ ಪ್ರಧಾನವಾದುದು ಎಂದು ಸಂಗೀತ ಕ್ಷೇತ್ರದಲ್ಲಿ ನಂಬಿಕೆ. ಆದರೆ ಇಲ್ಲಿ ಅದಕ್ಕೆ ಶೃಂಗಾರರಸವನ್ನು ಹೇಳಲಾಗಿದೆ. ಹಿಂದೋಳವಿದು ಶೃಂಗಾರಯುಕ್ತ ಎಂದು ಹೇಳಿರುವುದು ಸ್ವಾರಸ್ಯಕರವಾದುದು. ಬೇರೆ ಎಲ್ಲಿಯೂ ಹಿಂದೋಳ ರಾಗಕ್ಕೂ ಶೃಂಗಾರರಸಕ್ಕೂ ಗಂಟು ಹಾಕಿದ ಸಂದರ್ಭ ನನಗೆ ನೆನಪಿಲ್ಲ. ಹೀಗೆ ರಾಗವು ಮನಸ್ಸನ್ನು ಸೆರೆ ಹಿಡಿದು ಮೋಹಗೊಳಿಸುವ ಇನ್ನೊಂದು ಸಂದರ್ಭ. ಈ ಸಂದರ್ಭದ ರಾಗ-ಮಾಳವಶ್ರೀ. ಇಂದು ಪ್ರಾಯಶಃ ಬಳಕೆಯಲ್ಲಿಲ್ಲ. ಈ ರಾಗವು ಹೇಗೆ ಮನಸ್ಸನ್ನು ಮರುಳುಗೊಳಿಸಿತೆಂಬ ಪ್ರಸಂಗವು ಜನ್ನನ ಯಶೋಧರ ಚರಿತೆಯಲ್ಲಿ ಬರುತ್ತದೆ.

ಯಶೋಧರನ ರಾಣಿ ಅಮೃತಮತಿ. ಅವಳು ಒಳ್ಳೆಯ ರೂಪಸಂಪನ್ನೆ, ಗುಣಶೀಲೆ. ಒಮ್ಮೆ ದಂಪತಿಗಳು ಸಜ್ಜೆ ಮನೆಯಲ್ಲಿ ಮಂಚದ ಮೇಲೆ ಮಲಗಿದ್ದಾರೆ. ಬೆಳಗಿನ ಜಾವ. ಎಲ್ಲೆಡೆ ನಿಶ್ಶಬ್ದ. ಅರಮನೆಯ ಪಕ್ಕದಲ್ಲಿ ಆನೆಯ ಲಾಯ. ಅಲ್ಲಿ ಯಾರೋ ಹಾಡುತ್ತಿದ್ದಾರೆ. ದನಿ ಧೂಪದಂತೆ ಬರುತ್ತಿದೆ. ಅದರ ಇಂಪು ರಾಣಿ ಅಮೃತಮತಿಯನ್ನು ಎಚ್ಚರಗೊಳಿಸಿತು. ಹೊತ್ತು ಕಳೆಯಲು ಹಾಡುತ್ತಿದ್ದರೂ ಆ ಹಾಡುಗಾರಿಕೆ - *ಗಹಗಹಿಕೆ ವಡೆದ ಪಹಣೆಯ ಸುಹಾಹೆ ಝಂಪೆಯದೊಳವರೆ ರಾಯದೊಳಂ ನಿರ್ವಹಿಸಿ ನೆಲೆಗೊಳಿಸಿ ಬಯ್ಲಿಕೆ ಮುಹಜಾಳೆಯದಲ್ಲಿ ಮೂರ್ತಿವಡೆದುದು ರಾಗಂ* - ಅಂದರೆ ಅತ್ಯಾನಂದದಿಂದ ಹೊಮ್ಮಿದ ಬೆಡಗಿನ ಮೃದುದನಿ ಝಂಪೆಯಲ್ಲಿ (ದೇಶೀತಾಳ) ಸೇರಿಕೊಂಡಿತು. ಅಲ್ಲಿಂದ ಅದು ಪ್ರಬಂಧ ವಿಶೇಷದಲ್ಲಿ ಮುಂದುವರೆಯಿತು. ಆಮೇಲೆ ವೈಶಿಷ್ಟ್ಯದ ನರ್ತನ ಗತಿಯಲ್ಲಿ ಹರಿದು ಒಂದು ರೀತಿಯ ಕೃತಕ ನೆಗೆತದಲ್ಲಿ ಆ ರಾಗವು ರೂಪು ಪಡೆಯಿತು. ಅದೇ ಮಾಳವಶ್ರೀಯೆಂಬ ದೇಶೀರಾಗ. ಮಾಳಿಗೆಯೊಳಗಿನ ದೀಪಜ್ವಾಲೆ ಹೆಚ್ಚು ಪ್ರಕಾಶ ಪಡೆದಂತೆ ಈ ರಾಗವು ರಂಗಶೃಂಗಾರವನ್ನು ಪಡೆಯಿತು. ಇಷ್ಟು ಮಧುರವಾಗಿ ಹಾಡುತ್ತಿದ್ದವನು ಆ ಆನೆಯ ಮಾವುತ. ಕಾಷ್ಠಾಂಗಾರ. ಅಮೃತಮತಿಯ ಮನಸ್ಸು ಕದಡಿಹೋಯಿತು. ಎಷ್ಟು ಬೇಗ ಬೆಳಗಾಗುವುದು ಎಂಬುದೇ ಚಿಂತೆ.

ಬೆಳಗಾಗುತ್ತಲೇ ತನ್ನ ಗೆಳತಿಯನ್ನು "ಅದಾರು ಅಷ್ಟು ಮಧುರವಾಗಿ ಹಾಡುತ್ತಿರುವವರು, ನೋಡಿಬಾ" ಎಂದು ಕಳುಹಿಸಿದಳು. ಗೆಳತಿ ಆನೆಯ ಲಾಯದ ಬಳಿ ಬರುತ್ತಾಳೆ. ಹಾಡುವವನನ್ನು ದೂರದಿಂದ ನೋಡುತ್ತಾಳೆ. ಒಡನೆ ವಾಕರಿಕೆ ಬರುವ ಹಾಗಾಯಿತು. "ಅಯ್ಯೋ ಅನುಪಮ ಸುಂದರಿ ಅಮೃತಮತಿ ಎಲ್ಲಿ? ಈ ಅಸಹ್ಯ ಹುಟ್ಟಿಸುವ ಅಷ್ಟಾವಕ್ರ ಎಲ್ಲಿ?" ಎಂದುಕೊಂಡು ಹಿಂತಿರುಗುತ್ತಾಳೆ. ಬಂದು ನೋಡಿದರೆ ಅಮೃತಮತಿಗೆ ಆ ಹಾಡಿದವನದೇ ಚಿಂತೆ. ಇದನ್ನು ನೋಡಿದ ಗೆಳತಿ "ಇದೇನು ಹುಚ್ಚು ನಿನಗೆ. ಅವನು ಹೇಗಿದಾನೆ ಬಲ್ಲೆಯಾ, ಕೇಳು" ಎಂದು ವಿವರಿಸುತ್ತಾಳೆ. "ಅವನ ತಲೆ ಕೂದಲು ಅಲ್ಲಲ್ಲಿ ಕಿತ್ತುಹೋಗಿದೆ. ಹಣೆ ಹೊಂಡ ಬಿದ್ದಿದೆ. ಕಣ್ಣು ಕೊಳೆತುಹೋಗಿದೆ. ಬಾಯಿ ಜೊಲ್ಲು ಸುರಿತಿದೆ. ಮೂಗು ಚಪ್ಪಟೆಯಾಗಿದೆ. ಮುರುಟಿದ ಕಿವಿ, ಬಿರಿದ ಹಲ್ಲು. ಕೊರಳು ಕುಗ್ಗಿದೆ. ಎದೆ ಒಳಗೆ ಹೋಗಿ ಬೆನ್ನು ಬಾಗಿದೆ. ಹೊಟ್ಟೆ ಬಾತುಕೊಂಡಿದೆ. ಚರ್ಮ

ಕರೆತುಂಬಿದಂತಿಹುದು. ದೇಹದಿಂದ ಹಳೆ ಹೊಂಡದಿಂದ ಬರೋ ಅಂತಹ ವಾಸನೆ. ಮುದಿಕರಡಿಯ ಚರ್ಮದಂತೆ ಕಪ್ಪು, ಒಣಗಿಹೋಗಿದೆ. ಶರೀರ ವಕ್ರವಾದ ಮರದ ಕೊರಡಿನಂತಿದೆ. ಇದನ್ನು ಹೇಗೆ ಸೈರಿಸುತ್ತೀಯೋ" ಎಂದಳು. ಆದರೆ ಮಾಳವಶ್ರೀರಾಗದ ಮಧುರವಾದ ಗುಂಗಿನಲ್ಲಿದ್ದ ಅಮೃತಮತಿಯ ಮನಸ್ಸಿಗೆ ಇದಾವುದೂ ಹಿಡಿಸುವುದೇ ಇಲ್ಲ. "ಬಣ್ಣ ಕಪ್ಪು ಅಂತ ಹೇಳುತಿದೀಯ, ಆದರೆ ಕಸ್ತೂರಿ ಬಣ್ಣ ಏನು? ಕಪ್ಪಲ್ಲವೇ? ವಕ್ರವಾದ ಮರದ ಕೊರಡಿನಂತೆ ಅಂತ ಹೇಳುತ್ತೀಯೆ. ಆದರೆ ಗಂಟು ಗಂಟು ಎಂದು ಗಂಧದ ಮರವನ್ನು ಬಿಸಾಕ್ತಾರೆಯೇ? ಬಾಗಿದ ಬೆನ್ನು ಡೊಂಕು ಎನ್ನುತ್ತಿದೀಯೆ. ಕಾಮನ ಬಿಲ್ಲೇನು? ಡೊಂಕಲ್ಲವೇ? ಮೆಚ್ಚಿನವರ ಮೈಯಲ್ಲಿ ದೋಷವಿದ್ದರೆ ಅದೇ ಅವರ ಮೇಲ್ಮೆ. ಮನಸ್ಸು ಮೆಚ್ಚಿದ್ದರೆ ರೂಪದ ಪ್ರಶ್ನೆ ಎಲ್ಲಿ? ಅವನೇ ಕುಲದೈವ. ಕಾಮದೇವ, ಇಂದ್ರ, ಚಂದ್ರ" ಎಂದಳು. ಗೆಳತಿ ಎಷ್ಟೋ ಬುದ್ಧಿ ಮಾತುಗಳನ್ನು ಹೇಳಿ ನೋಡಿದಳು. ಆದರೆ ಪ್ರಯೋಜನ ಆಗಲಿಲ್ಲ. ಕೊನೆಗೆ "ಬೇವನ್ನು ಮೆಚ್ಚಿದ ಕಾಗೆಗೆ ಮಾವು ಮೆಚ್ಚಿಗೆಯಾದೀತೇ" ಎಂದುಕೊಂಡು ಸುಮ್ಮನಾದಳು.

ಅನಂತರ ಪ್ರತಿನಿತ್ಯವೂ ಅಮೃತಮತಿ ಆನೆಯ ಲಾಯದ ಬಳಿಗೆ ಹೋಗಿ ಕಾಷ್ಟಾಂಗಾರನಿಗೆ ಉಪಚರಿಸಿ ಅವನ ಗಾಯನವನ್ನು ಕೇಳಿ ಪುಳಕಿತಳಾಗಿ ಬರುತ್ತಿದ್ದಳು. ಕೊನೆಗೆ ಇದು ಒಂದು ರೀತಿಯ ಪ್ರೇಮಕ್ಕೆ ತಿರುಗಿತು. ಈ ರೀತಿ ಬಹು ದಿನಗಳು ನಡೆದುವು. ಒಂದು ದಿನ ರಾಜ ಯಶೋಧರನಿಗೆ ಬಹಳ ನಿದ್ದೆ. ಎಂದಿನಂತೆ ಬೇಗ ಏಳಲು ಆಗಲಿಲ್ಲ. ಅರೆನಿದ್ದೆ. ಹಾಗೆಯೇ ಮಲಗಿದ್ದಾಗ ಅಮೃತಮತಿಯು ಮೆಲ್ಲನೆ ಎದ್ದು ಯಶೋಧರನ ಕಡೆಗೇ ತಿರುಗಿ ತಿರುಗಿ ನೋಡುತ್ತಾ ಹೊರಟಳು. ಕೆಲವು ಕ್ಷಣಗಳ ನಂತರ ಯಶೋಧರನಿಗೆ ಪೂರ್ಣ ಎಚ್ಚರವಾಗಿ ಅಮೃತಮತಿ ಎಲ್ಲಿ ಹೋಗುವಳೋ ನೋಡಬೇಕೆಂದು, ಕುತೂಹಲದಿಂದ ಕೈಯಲ್ಲಿ ಕತ್ತಿಯನ್ನು ಹಿಡಿದು ಅವಳಿಗೆ ಕಾಣದ ಹಾಗೆ ಹಿಂಬಾಲಿಸಿದನು. ಅಮೃತಮತಿಯು ಬೇಗಬೇಗ ನಡೆದು ಆನೆಯ ಲಾಯದ ಬಳಿಗೆ ಬಂದಳು. ಅಲ್ಲಿ ಕಾಷ್ಟಾಂಗಾರ ಬಹು ಕೋಪದಿಂದ ಇದ್ದ. ಯಾಕೆ ಇಷ್ಟು ಹೊತ್ತು ಎನ್ನುತ್ತಾ ಅಮೃತಮತಿಯ ಮೇಲೆ ಕೂಗಾಡಲು ಪ್ರಾರಂಭಿಸಿದ. ಅವಳು ತಂದ ಗಂಧ, ಹೂಗಳನ್ನು ಇಟ್ಟ ತಟ್ಟೆಯನ್ನು ಕೋಪದಿಂದ ಬಿಸುಡಿದ. ಅಷ್ಟೇ ಅಲ್ಲ, ಅವಳ ಮುಂದಲೆ ಹಿಡಿದು ಎಳೆದಾಡಿ ಆನೆಗೆ ಉಪಯೋಗಿಸುವ ಚರ್ಮದ ಪಟ್ಟಿಯಿಂದ ಹೊಡೆಯಲಾರಂಭಿಸಿದ. ಚೆನ್ನಾಗಿ ಒದ್ದ. ಅವಳು ನೆಲದ ಮೇಲೆ ಬಿದ್ದು ಹೊರಳಾಡಿದಳು. "ದಯವಿಟ್ಟು ಕ್ಷಮಿಸು ತಪ್ಪಾಯಿತು, ಮುಂಚೆಯೇ ಬರಲು ಸಾಧ್ಯವಾಗಲಿಲ್ಲ. ನನ್ನ ಗಂಡ ಪಾಪಿ ಅಲ್ಲಿಯೇ ಇದ್ದ. ದಯವಿಟ್ಟು ಕೋಪಿಸಬೇಡ. ನೀನು ತ್ಯಜಿಸಿದರೆ ನಾನು ಸಾಯುವೆ" ಎಂದು ಆರ್ತನಾದ ಮಾಡತೊಡಗಿದಳು. ಮರೆಯಲ್ಲಿ ನಿಂತು ನೋಡುತ್ತಿದ್ದ ಯಶೋಧರನಿಗೆ ಕೋಪ ಉಕ್ಕಿ ಬರುತ್ತಿತ್ತು. ಖಡ್ಗವನ್ನು ಎಳೆದು ಕಾಷ್ಟಾಂಗಾರನನ್ನು ತುಂಡರಿಸಲು ಮುಂದೆ ಹೆಜ್ಜೆ ಇಡಲು ಅಣಿಯಾದ. ಆದರೆ ಈ ಪವಿತ್ರ ಕತ್ತಿಯನ್ನು ಈ ಕುನ್ನಿಯಂತಹವನನ್ನು ಸಂಹರಿಸಲು ಉಪಯೋಗಿಸುವುದು ಸರಿಯೇ ಎಂದು ಚಿಂತಿಸಿ, ಹಿಂದಕ್ಕೆ ಸರಿದು ಹೊರಟು ಹೋಗುತ್ತಾನೆ. ಮುಂದೆ ಅಮೃತಮತಿಗೆ ಇದು ತಿಳಿದು ಬರುತ್ತದೆ. ದುರಂತದಲ್ಲಿ ಕೊನೆಗೊಳ್ಳುತ್ತದೆ. ಅಂತೂ ಮಾಳವಶ್ರೀ ಎಂತಹ ಮೋಹಕ ಗುಣ ಉಳ್ಳದು ಎಂಬ ಅಂಶ ಈ ಕತೆಯಿಂದ ತಿಳಿದು ಬರುತ್ತದೆ.

ಮುಂದೆ ಹೇಳುವುದು ಇನ್ನೊಂದು ರೀತಿಯ ಪ್ರಸಂಗ. ನಮ್ಮಲ್ಲಿ ಯಾರಾದರೂ ಸಂಗೀತಗಾರರು ಒಂದು ರಾಗವನ್ನು ಬಹು ಕೃಷಿ ಮಾಡಿ ಅದರ ನಿರೂಪಣೆಯಲ್ಲಿ ಸಿದ್ಧಹಸ್ತರೆಂದು ಖ್ಯಾತಿ ಪಡೆದಿರುತ್ತಾರೆ. ಆ ರಾಗ ಅವರ ಆಸ್ತಿ ಇದ್ದ ಹಾಗೆಯೇ. ಆಪತ್ಕಾಲದಲ್ಲಿ ಅದನ್ನೇ ಅಡವಿಟ್ಟು ಸಾಲ ತೆಗೆದುಕೊಂಡ ಕತೆಗಳು ಪ್ರಚಾರದಲ್ಲಿವೆ. ಅಂತಹುದೇ ಈ ಪ್ರಸಂಗ. ಇಲ್ಲಿ ಬರುವ ರಾಗ-ರಾಮಕ್ರಿಯೆ. ನಮ್ಮ ಇಂದಿನ ಪಂತುವರಾಳಿ ಅಥವಾ ಕಾಮವರ್ಧನಿ ರಾಗವನ್ನು ಹೋಲುವಂತಹುದು.

ಬಸವಣ್ಣನವರ ಕಾಲದಲ್ಲಿ ಜೀವಿಸಿದ್ದ ಒಬ್ಬ ಶಿವಶರಣ-ಬಹುರೂಪಿ ಚೌಡಯ್ಯ. ಬಹುರೂಪಿ ಎಂದರೆ ನಾನಾ ಪಾತ್ರಗಳನ್ನು ಬಹು ಸಾಮರ್ಥ್ಯದಿಂದ ನಿರ್ವಹಿಸಬಲ್ಲ ಒಬ್ಬ ನರ್ತಕ ಅಥವಾ ನಟ. ಅಂತಹ ಪ್ರಸಿದ್ಧನಾದ ನಟ-ಬಹುರೂಪಿ ಚೌಡಯ್ಯ. ಜೊತೆಗೆ ಅಷ್ಟೇ ಪ್ರತಿಭಾವಂತ ಗಾಯಕನೂ ಹೌದು. ಚೌಡಯ್ಯ ರೇಕಳಿಗೆ ಎಂಬ ಗ್ರಾಮದಲ್ಲಿ ಜನಿಸಿದವ. ಮುಂದೆ ರೇಕನಾಥಾಚಾರ್ಯರಿಂದ ದೀಕ್ಷೆ ಪಡೆದು ನಾಟ್ಯವನ್ನೇ ಕಾಯಕವಾಗಿ ಮಾಡಿಕೊಂಡಿದ್ದ. ಗಳಿಸಿದ ಹಣವನ್ನೆಲ್ಲಾ ಶಿವಭಕ್ತರ ದಾಸೋಹಕ್ಕೆ ವಿನಿಯೋಗಿಸುತ್ತಿದ್ದ.

ಒಮ್ಮೆ ಈ ದಾಸೋಹವನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕೆಂದು ಆಸೆಪಟ್ಟ. ಆದರೆ ಅದಕ್ಕೆ ಸಾಕಾದಷ್ಟು ಹಣವಿರಲಿಲ್ಲ. ಎಲ್ಲಿಂದಲಾದರೂ ತಂದು ಮಾಡಬೇಕೆಂಬ ಹಂಬಲ. ಆದರೆ ಕೊಡುವವರಾರು? ಏನಾದರೂ ಒತ್ತೆಯಿಟ್ಟಾದರೂ ಹಣ ತರಬೇಕೆಂದು ಚಿಂತಿಸಿದ. ಆದರೆ ಬರಿಗೈಯ ಈ ಬಹುರೂಪಿಯ ಬಳಿ ಅಂತಹ ಅಮೂಲ್ಯ ವಸ್ತು ಏನಿದ್ದೀತು? ಇದೇ ಚಿಂತೆಯಲ್ಲಿದ್ದ ಚೌಡಯ್ಯನಿಗೆ ಮಿಂಚಿನಂತೆ ಒಂದು ಯೋಚನೆ ಹೊಳೆಯಿತು. ಅದು-ಅವನ ಬಳಿಯೇ ಇದ್ದ ಒಂದು ಅಮೂಲ್ಯ ವಸ್ತುವಿನ ಬಗೆಗೆ. ಅದು-ರಾಮಕ್ರಿಯಾ ರಾಗ. ಚೌಡಯ್ಯನಿಗೆ ಬಹು ಪ್ರಿಯವಾದುದು. ಅದನ್ನು ಹಾಡುವುದರಲ್ಲಿ ಅವನನ್ನು ಸರಿಗಟ್ಟುವವರು ಯಾರೂ ಇರಲಿಲ್ಲ.

ಏನೂ ತೋರದೆ ತನ್ನ ಪೋಷಕನಾಗಿದ್ದ ಕೋಟಗಿರಿಯ ಅರಸನ ಬಳಿ ಹೋಗಿ ಬೇಡಿದ. ದಾಸೋಹದ ವಿಷಯವನ್ನು ತಿಳಿಸಿ ಅದಕ್ಕೆ ಬೇಕಾಗುವ ಹತ್ತು ಸಾವಿರ ಹೊನ್ನನ್ನು ಸಾಲವಾಗಿ ಕೊಡಿ ಎಂದು ಪ್ರಾರ್ಥಿಸಿದ. ಹಾಗೆಯೆ ಈ ಸಾಲವನ್ನು ಮೂರು ವರುಷದಲ್ಲಿ ತೀರಿಸುತ್ತೇನೆ. ಇಲ್ಲದಿದ್ದರೆ ಅದಕ್ಕೆ ಎರಡರಷ್ಟು ಕಟ್ಟಿ ಕೊಡುತ್ತೇನೆ ಎಂದೂ ಮಾತು ಕೊಟ್ಟ. ಆದರೆ ಅರಸನು-"ಹಣ ಕೊಡುವುದೇನೋ ಸರಿ. ಆದರೆ ಅಷ್ಟು ಹಣಕ್ಕೆ ಸರಿಯಾದ ಒತ್ತೆ ಇಡಬೇಕಲ್ಲ. ನಿನ್ನಲ್ಲಿ ಅಂತಹ ಅಮೂಲ್ಯ ವಸ್ತುಗಳೇನಿವೆ"? ಎಂದು ಕೇಳಿದ. ಅದಕ್ಕೆ ಉತ್ತರವಾಗಿ ಚೌಡಯ್ಯನು-"ಸ್ವಾಮಿ, ಶರಣರ ಬಳಿ ಬೆಲೆ ಬಾಳುವ ವಸ್ತುಗಳೇನಿದ್ದಾವು? ನನ್ನಲ್ಲಿರುವ ಸೊತ್ತು ಒಂದೇ. ಅದು ರಾಮಕ್ರಿಯಾ ರಾಗ. ಅದನ್ನೇ ಬೇಕಾದರೆ ಒತ್ತೆ ಇಡುತ್ತೇನೆ" ಎಂದನು.

ಅರಸನು ಸ್ವಲ್ಪ ಚಿಂತಿಸಿ-"ಹಾಗಾದರೆ ಈ ರಾಗವನ್ನು ಹಾಡು. ಆಮೇಲೆ ಹಣ ಕೊಡುವುದೇ ಬಿಡುವುದೇ ನಿರ್ಧರಿಸುತ್ತೇನೆ" ಎಂದನು. ಚೌಡಯ್ಯ ರಾಮಕ್ರಿಯಾರಾಗವನ್ನು ಹಾಡತೊಡಗಿದ. ನಿಧಾನವಾಗಿ ಪ್ರಾರಂಭಿಸಿ ಮುಂದೆ ಬಹು ಸ್ಫೂರ್ತಿಯಿಂದ ಆವೇಶ ಬಂದಂತೆ ಹಾಡಿದ. ಅರಸನು ಮುಗ್ಧನಾದ. ಬಹು ಸಂತೋಷದಿಂದ ಹತ್ತು ಸಾವಿರ ಹೊನ್ನನ್ನು ಚೌಡಯ್ಯನಿಗೆ ಕೊಟ್ಟನು. ಅಂದಿನಿಂದ ಚೌಡಯ್ಯನು ರಾಮಕ್ರಿಯಾ ರಾಗವನ್ನು ಹಾಡುವುದನ್ನೇ ನಿಲ್ಲಿಸಿದ.

ವಾದ್ಯಭಾಗದಲ್ಲಿಯೂ ಕನ್ನಡ ಕಾವ್ಯಗಳಲ್ಲಿ ಬಹು ವಿವರಗಳು ದೊರೆಯುತ್ತವೆ. ಇಲ್ಲಿಯೂ ಪ್ರಾಯಶಃ ಸಂಸ್ಕೃತ ಶಾಸ್ತ್ರಗ್ರಂಥಗಳಲ್ಲಿರುವ ವಾದ್ಯಗಳ ಪ್ರಸ್ತಾಪವೇ ಇದ್ದರೂ ಕರ್ನಾಟಕಕ್ಕೇ ವಿಶಿಷ್ಟವಾಗಿದ್ದ ಅನೇಕ ವಾದ್ಯಗಳ ವರ್ಣನೆಯೂ ಕಂಡು ಬರುತ್ತದೆ. ವಾದ್ಯಗಳ ನಾಲ್ಕು ವಿಭಾಗಗಳಾದ ತತ, ಆನದ್ಧ, ಘನ, ಮತ್ತು ಸುಷಿರ ಇವುಗಳ ಪ್ರಸ್ತಾಪವು ಅನೇಕ ಕಡೆ ಬರುತ್ತದೆ. ಈ ನಾಲ್ಕು ಜಾತಿಯ ಅನೇಕ ವಾದ್ಯಗಳ ಉಲ್ಲೇಖವಿರುವುದರ ಜೊತೆಗೆ, ಅವುಗಳ ವಾದನತಂತ್ರ, ಮತ್ತು ಅದರ ವೈಖರಿ ಮುಂತಾದುವುಗಳ ಸ್ವಾರಸ್ಯವಾದ ವಿವರಣೆಗಳು ದೊರೆಯುತ್ತವೆ. ಇಲ್ಲಿ ಪ್ರಸ್ತಾಪಿಸಿದ ಕೆಲವು ವಾದ್ಯಗಳು ಇಂದು ಕಾಣಬರುವುದಿಲ್ಲ.

ಈ ನಾಲ್ಕು ಜಾತಿಯ ವಾದ್ಯಗಳ ಲಕ್ಷಣವೆಂತಹುದು? ಇದನ್ನು ನಿಜಗುಣಶಿವಯೋಗಿ ತಮ್ಮ ವಿವೇಕ ಚಿಂತಾಮಣಿಯಲ್ಲಿ ಹೀಗೆ ಹೇಳಿದ್ದಾರೆ.

ತಂತ್ರಿಯಂ ಕಟ್ಟಿ ಬಾಜಿಸುವ ವೀಣಾಧಿಕವೇ ತತವೆನಿಸುವುದು
ಚರ್ಮವಂ ಕಟ್ಟಿ ಬಾಜಿಸುವ ಆವುಜವೇ ಮೊದಲಾದವೇ
ಆನದ್ಧವೆನಿಸುವುದು
ಊದಿ ಬಾಜಿಸುವ ವಾಸ ಮೊದಲಾದವೇ ಸುಷಿರವೆನಿಸುವುದು
ಕಂಚಿನ ತಾಳಾಧಿಕವೇ ಘನವೆನಿಸುವುದು॥

ಇದರಂತೆ ತಂತಿ ಕಟ್ಟಿ ಬಾರಿಸುವ ವಾದ್ಯಗಳೆಲ್ಲಾ ತತ ವಿಭಾಗಕ್ಕೆ ಸೇರಿದುವು. ಅವುಗಳಿಗೆ ಒಟ್ಟು ವೀಣೆ ಎಂದು ಕರೆಯುತ್ತಿದ್ದರು. ಅದರಲ್ಲಿ ನಾನಾ ಪ್ರಭೇದ ಒಂದರಿಂದ ನೂರು ತಂತಿಯವರೆಗೂ ಇದ್ದ ವೀಣೆಗಳಿದ್ದುವು. ಕೆಲವದರಲ್ಲಿ ಬೆರಳ ಮೀಟಿನಿಂದ ನಾದೋತ್ಪತ್ತಿ. ಕೆಲವದರಲ್ಲಿ ಕೊಂಬು ಅಥವಾ ಮರ, ಲೋಹದ ಚೂರಿನಿಂದ ಮೀಟಿ ನಾದೋತ್ಪತ್ತಿ. ಇನ್ನು ಕೆಲವದರಲ್ಲಿ ಕಮಾನಿನಿಂದ ಮೀಟಿ ನಾದೋತ್ಪತ್ತಿ ಮಾಡುವಂತಹವು. ಈ ಎಲ್ಲ ಪ್ರಕಾರದ ವೀಣೆಗಳು ಕರ್ನಾಟಕದಲ್ಲಿ ಬಳಕೆಯಲ್ಲಿದ್ದುವು.

ಅಂತರ್ವೀಣೆ	ಅನಾವಿದ್ಧೆ	ಅಂಬರವೀಣೆ
ಅರ್ಧನಾರೀ	ಆಕಾಶ	ಆಲಾಪಿನಿ
ಕಚ್ಛಪಿ	ಕಾಶ್ಯಪ	ಕಿನ್ನರಿ
ಕುಬ್ಜಿಕೆ	ಕೂರ್ಮಿ	ಕೈಲಾಸ

ಗಜ	ಗೌರೀ	ಘೋಷವತಿ
ಚಿತ್ರಘೋಷಾವಳಿ	ಚಿತ್ರ	ಜ್ಯೇಷ್ಠೆ
ತುಂಬುರು	ಧಾರವಿ	ದ್ರುಹಿಣ
ನಕುಲೋಷ್ಠಿ	ಪರಿವಾದಿನಿ	ಪಿನಾಕ
ಪೆಬ್ಬೀಣೆ	ಬ್ರಹ್ಮ	ಮಹತಿ
ಮೊಲ್ಲೆಯ	ರಾವಣಹಸ್ತ	ರುದ್ರ
ವಲ್ಲಕಿ	ವಿಜಯೆ	ವಿಪಂಚಿ
ಶತತಂತ್ರೀ	ಶಾರೀರೀ	ಸರವೀಣೆ
ಸಾರಂಗ	ಸ್ವಯಂಭು	ಹಸ್ತಿಕಾಚ್ಛೆ
ಹಾಗೂ ದಂಡಿಗೆ.		

ಹೀಗೆ ಹತ್ತಿರ ಹತ್ತಿರ 40 ವೀಣೆಗಳ ಹೆಸರುಗಳು ಕನ್ನಡ ಕಾವ್ಯಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಎಷ್ಟೋ ಇಂದು ಬಳಕೆಯಲ್ಲಿಲ್ಲದೆ ಮಾಯವಾಗಿವೆ. ಆದರೆ, ಕಾವ್ಯದಲ್ಲಿ ಬರುವ ವರ್ಣನೆಗಳಿಂದ ವೀಣೆ ಒಂದು ಅತಿ ಮುಖ್ಯವಾದ ರಾಜವಾದ್ಯದಂತೆ ಗೌರವಿಸಲಾಗುತ್ತಿತ್ತು ಎನಿಸುತ್ತದೆ. ಅದರ ವಾದನದ ವೈಖರಿ, ಅದರಿಂದ ಮೂಡಿಬರುವ ಮೋಹಕವಾದ ರಾಗಧಾರೆ ಮುಂತಾದುವುಗಳನ್ನು ಅನೇಕ ಕಾವ್ಯಗಳಲ್ಲಿ ಮನೋಜ್ಞವಾಗಿ ವರ್ಣಿಸಲಾಗಿದೆ. ಇದರ ಜೊತೆಗೆ ವೀಣೆಗೆ ಇನ್ನೂ ಒಂದು ಉಪಯೋಗವಿದ್ದಂತೆ ಕಾಣಬರುತ್ತದೆ. ಅದು ಸ್ವಯಂವರ ಸ್ಪರ್ಧೆಗೂ ಬಳಸಲಾಗುತ್ತಿತ್ತು. ಸೀತೆಯ ಸ್ವಯಂವರದಲ್ಲಿ ಶಿವಧನುಸ್ಸು ಇದ್ದ ಹಾಗೆ-ವೀಣೆಯೂ ಒಂದು ಸ್ವಯಂವರದಲ್ಲಿ ಪ್ರಧಾನ ಪಾತ್ರ ವಹಿಸಿತ್ತು.

ಕತೆಯ ಸಂದರ್ಭವು ಹೀಗಿದೆ :

ರಾಜಪುರಿ ಎಂಬ ಪಟ್ಟಣ-ಗಾಂಧಾರದೇಶದ ರಾಜಧಾನಿ. ರಾಜ - ಗರುಡದೇವ. ಅವನ ರಾಣಿ - ಧಾರಿಣಿ. ಅವರಿಗೆ ಒಬ್ಬ ಮಗಳು ಹೆಸರು-ಗಂಧರ್ವದತ್ತೆ. ರಾಜಕುಮಾರಿಗೆ ಅಂದಿನ ಪದ್ಧತಿಯಂತೆ ಸಂಗೀತ ನಾಟ್ಯಕಲೆಗಳಲ್ಲಿ ಶ್ರೇಷ್ಠ ಶಿಕ್ಷಣವಾಗಿತ್ತು. ಅದರಲ್ಲಿಯೂ ವೀಣಾವಾದನದಲ್ಲಿ ಅದ್ವಿತೀಯ ಪ್ರತಿಭೆ. ಪ್ರಾಪ್ತವಯಸ್ಸಿಗೆ ಬರುತ್ತಲೇ ಅವಳ ಮದುವೆಯ ಬಗೆಗೆ ಗರುಡದೇವನು ಚಿಂತಿಸಿದ. ಅಂದಿನ ಸಂಪ್ರದಾಯದಂತೆ ಮದುವೆ ಸ್ವಯಂವರ ರೀತಿಯಲ್ಲಿ ಆಗಬೇಕು. ಅದನ್ನು ಯಾವರೀತಿ ಏರ್ಪಡಿಸಬೇಕು ಎಂದು ಚಿಂತಿಸುತ್ತಿದ್ದಾಗ ರಾಜ ಜ್ಯೋತಿಷಿ - ವೀಣಾವಾದನ ಸ್ಪರ್ಧೆಯ ರೀತಿಯಲ್ಲಿ ಆಗಬೇಕು. ಗೆದ್ದವನನ್ನು ರಾಜಕುಮಾರಿ ವರಿಸಬೇಕು. ಇಲ್ಲದಿದ್ದರೆ ಅವಳ ಜೀವಕ್ಕೆ ಅಪಾಯ ಎಂದನು.

ಅದರಂತೆ ಗರುಡದೇವನು ಸ್ವಯಂವರ ಮಂಟಪವನ್ನು ಸಿದ್ಧಪಡಿಸಲಾರಂಭಿಸಿದ. ಎಲ್ಲಾ ರಾಜ್ಯಗಳಲ್ಲಿಯೂ ಈ ಸ್ವಯಂವರದ ಸುದ್ದಿಯನ್ನೂ ಅದರ ನಿಯಮವನ್ನೂ ಸಾರಿಸಿದ. ಸ್ವಯಂವರ ದಿನವೂ ಬಂದಿತು. ವೈಭವದಿಂದ ಅಲಂಕಾರಮಾಡಿದ್ದ ಸ್ವಯಂವರ ಮಂಟಪವೂ

ಸಿದ್ಧವಾಯಿತು. ಒಂದು ಕಡೆ ಹತ್ತಾರು ಬಗೆಯ ವೀಣೆಗಳನ್ನು ತಂದಿಡಲಾಯಿತು. ಒಬ್ಬೊಬ್ಬರಾಗಿ ಅಭ್ಯರ್ಥಿಗಳು ಬರಲಾರಂಭಿಸಿದರು. ಜೀವಂಧರನೂ 500 ಗೆಳೆಯರೊಂದಿಗೆ ಮಂಟಪಕ್ಕೆ ಬಂದನು. ಮಂಗಳವಾದ್ಯಗಳು ಮೊಳಗಿದುವು. ಸರ್ವಾಲಂಕಾರ ಭೂಷಿತೆ ಗಂಧರ್ವದತ್ತೆ, ಮಂಟಪದೊಳಗೆ ಅಡಿಯಿಟ್ಟಳು. ಕೈಯಲ್ಲಿ ಮಾಲೆ ಹಿಡಿದಿದಾಳೆ. ಎಲ್ಲರೂ ಅವಳ ಸೌಂದರ್ಯದಿಂದ ಸ್ತಂಭೀಭೂತರಾಗಿ ನೋಡುತ್ತಿರಲು ಅವಳು ನಿಧಾನವಾಗಿ ಮಂಟಪದಲ್ಲಿ ಒಂದು ಸುತ್ತು ಬರಲು ಪ್ರಾರಂಭಿಸಿದಾಳೆ. ಮೆಲ್ಲನೆ ಅಡಿಯಿಡುತ್ತಾ ಜೀವಂಧರನ ಮುಂದೆ ಬಂದಾಗ ಒಂದು ಕ್ಷಣ ಅವನನ್ನೇ ನೋಡಿ ಮುಂದೆ ಸಾಗುತ್ತಾಳೆ. ಈ ಪ್ರದಕ್ಷಿಣೆ ಆದ ಮೇಲೆ, ಸ್ವಯಂವರದ ನಿಯಮಗಳ ಘೋಷಣೆ ಆಗುತ್ತದೆ. ರಾಜನು ಅಲ್ಲಿ ನೆರೆದ ರಾಜಕುಮಾರರನ್ನು ಉದ್ದೇಶಿಸಿ ವೀಣಾವಾದನದಲ್ಲಿ ತಮ್ಮತಮ್ಮ ಪ್ರೌಢಿಮೆಯನ್ನು ಪ್ರದರ್ಶಿಸಬೇಕೆಂದು ಪ್ರಾರ್ಥಿಸುತ್ತಾನೆ. ಅನಂತರ ಘೋಷವತಿ ವೀಣೆಯನ್ನು ತಂದು ಮಂಟಪದ ಮಧ್ಯೆ ಇಟ್ಟು ಪೂಜಿಸಲಾಗುತ್ತದೆ:

ಒಂದು ಸುತ್ತು ಬಳಸಿ ಪುನಃ ಬಾಗಿಲು ಬಳಿ ಬಂದು ನಿಂತ ರಾಜಕುಮಾರಿಗೆ, ಸಖಿಯರು ಸಭೆಯಲ್ಲಿ ನೆರೆದ ರಾಜಕುಮಾರರನ್ನು ಒಬ್ಬೊಬ್ಬರನ್ನಾಗಿ ತೋರುತ್ತಾರೆ: "ನೂತನೋತ್ಪಲ ನೇತ್ರೆ" ನೋಡು ಈತ ಕೇರಳದ ರಾಜಕುಮಾರ, ಅವನು ಪಾಂಡ್ಯದವ, ಮುಂದಿನವ ಸಿಂಹಳದಿಂದ ಬಂದವ, ಆಕಡೆ ಮಗಧದೇಶದವ ಎಂದು ಹೀಗೆಯೇ ಕೋಸಲ, ನೈಷಧ, ಕರ್ಣಾಟ, ಸೌರಾಷ್ಟ್ರ, ಕರಹಾಟ, ಗುರ್ಜರ, ಕಳಿಂಗ, ಲಾಟ, ಆಂಧ್ರ, ಮರಾಟ, ನೇಪಾಳ, ಗಾಂಧಾರ, ಚೋಳ, ಹೀಗೆ ಒಂದೊಂದು ದೇಶದ ರಾಜಕುಮಾರರನ್ನು ತೋರುತ್ತಾರೆ. ಸ್ಪರ್ಧೆ ಪ್ರಾರಂಭವಾಯಿತು. ರಾಜಕುಮಾರರು, ಮಂಟಪದೊಳಗಿದ್ದ ವೀಣೆಗಳೆಡೆಗೆ ನುಗ್ಗಲು ಪ್ರಾರಂಭಿಸಿದರು. ವಿಪಂಚಿ ವೀಣೆಗಳನ್ನು ಎತ್ತಿಕೊಂಡು ಅವಸರವಸರವಾಗಿ ನುಡಿಸುತ್ತಿರಲು, ಸಖೀವೃಂದ ನಗುವುದಕ್ಕೆ ಪ್ರಾರಂಭಿಸಿತು. ಇದನ್ನು ನೋಡಿದ ಸ್ಪರ್ಧಿಗಳು ನಾಚಿಕೊಂಡು ಹೊರಹೊರಟರು.

ಇವರು ಹೊರಡಲು ಇನ್ನೊಬ್ಬ ರಾಜಕುಮಾರ ಬಂದ. ಬಹುಶಃ ಅವನು ವೀಣೆಯನ್ನೇ ನೋಡಿರಲಿಲ್ಲವೇನೋ. ವಾದ್ಯವನ್ನು ಎತ್ತಿ ತಲೆಕೆಳಗಾಗಿ ಹಿಡಿದು ನುಡಿಸಲು ಪ್ರಾರಂಭಿಸುತ್ತಾನೆ. "ಕಳೆಯ ಕಡ್ಡಿಗಳು" ಅಂದರೆ ಬಹುಶಃ ಅದರಲ್ಲಿ ಅಡಕಮಾಡಿದ್ದ ಲೋಹದ ಸಾರಿಕಾ ಅಥವಾ ಮೇಳಗಳು ಮುರಿದು ಬೀಳುತ್ತವೆ. ಅವನು ಕೋಪಗೊಂಡು ವಾದ್ಯವನ್ನು ಬಿಸಾಕಿದ. ಇದನ್ನು ನೋಡಿದ ಹೆಂಗಸರು ಹೋ ಎಂದು ಚಪ್ಪಾಳೆ ತಟ್ಟಿ ನಗುತ್ತಾರೆ. ಮುಖಭಂಗವಾಗಿ ಹಿಂತಿರುಗುತ್ತಾನೆ. ಮುಂದೆ ಹೀಗೆಯೇ ಈ ರಾಜಕುಮಾರರು ಕೋತಿಗಳು ತೆಂಗಿನಮರಕ್ಕೆ ಮುತ್ತಿಕೊಂಡ ಹಾಗೆ, ಈ ವೀಣೆಗಳಿಗೆ ಮುತ್ತಿಕೊಂಡು ನುಡಿಸಲಾಗದೆ ಮುಖಭಂಗವಾಗಿ ಹಿಂದಿರುಗುತ್ತಾರೆ. ಇದನ್ನೆಲ್ಲಾ ವಿಸ್ಮಯದಿಂದ ನೋಡುತ್ತಿದ್ದ ಜೀವಂಧರ ನಿಧಾನವಾಗಿ ಮೇಲಕ್ಕೆ ಎದ್ದ. ಇದನ್ನು ನೋಡಿದ ಅವನ ಜೊತೆಗಾರರು "ಅಯ್ಯಾ ನಮಗೆ ಇದರ ಗೊಡವೆ ಏಕೆ? ನಾವು ಚಿನ್ನ ಬೆಳ್ಳಿ ಮುತ್ತು, ವಜ್ರ ಮುಂತಾದುವುಗಳ ಗುಣವನ್ನು ತಿಳಿದವರು, ಅನ್ನ,

ಕುದುರೆ, ಮುಂತಾದುವಕ್ಕೆ ಬೆಲೆ ಕಟ್ಟುವುದರಲ್ಲಿ ಸಮರ್ಥರು. ಅವುಗಳ ವ್ಯಾಪಾರದಲ್ಲಿ ಕುಶಲತೆ ಉಳ್ಳವರು. ಅದು ಬಿಟ್ಟು ಈ ವೀಣೆ ವ್ಯವಹಾರ ನಮಗ್ಯಾಕೆ. ನಮಗೆ ಅದು ಸಲ್ಲದು" ಎಂದು ತಡೆಯುತ್ತಿದ್ದರು. ಜೀವಂಧರ ವರ್ಣಿಕಶ್ರೇಷ್ಠ ಶ್ರೀದತ್ತನ ಸಾಕುಮಗ. ಇನ್ನು ಕೆಲವರು ಇವನನ್ನು ನೋಡಿ, ನಗುತ್ತಾ ಹಾಸ್ಯ ಮಾಡುತ್ತಿದ್ದರು.

ಇದನ್ನೆಲ್ಲಾ ಸಹಿಸಿಕೊಂಡು "ನಿಮ್ಮಗಳ ಅಭಿಮಾನಬಲದಿಂದ ಈ ಸ್ಪರ್ಧೆಯಲ್ಲಿ ಜಯಗಳಿಸಿ ರಾಜಕುಮಾರಿಯನ್ನು ಕರೆತರುವೆ" ಎಂದು ಹೇಳುತ್ತಾ ಹಸನ್ಮುಖದಿಂದ ವೀಣಾಮಂಟಪಕ್ಕೆ ಅಡಿಯಿಟ್ಟ ಜೀವಂಧರ. ಬಂದು ಮೊದಲು ಅರ್ಹಂತನಿಗೆ ನಮಿಸಿ, ವೀಣೆಗಳನ್ನು ಒಂದೊಂದಾಗಿ ಪರೀಕ್ಷಿಸಲಾರಂಭಿಸಿದ. ಅನಂತರ ಇದರಲ್ಲಿ ತಂತ್ರಿಯ ದೋಷವಿದೆ. ಇದರಲ್ಲಿ ಕಡ್ಡಿಗಳ ಹೊಂದಾಣಿಕೆಯಿಲ್ಲ. ಇನ್ನೊಂದರಲ್ಲಿ ತಾನ ನುಡಿಸಿದರೆ ಬಲವಿಲ್ಲ - ಹೀಗೆ ಒಂದೊಂದನ್ನು ತ್ಯಜಿಸಿ, ವಿಪಂಚಿ ವೀಣೆಯನ್ನೂ ಮೂಲೆಗೆ ತಳ್ಳಿ ಘೋಷವತಿ ವೀಣೆಯನ್ನು ಕಂಡು ಅದರೆಡೆಗೆ ಬಂದ. ಅದನ್ನು ಎತ್ತಿಕೊಂಡು ತಂತಿಯನ್ನು ಮೀಟಿ ಅದರ ನಾದವನ್ನು ಅದರ ಸಾಂದ್ರತೆ ಹಾಗೂ ಸೌಖ್ಯವನ್ನು ಪರೀಕ್ಷಿಸಿ, ತಾನಗಳನ್ನು ನುಡಿಸಲಾರಂಭಿಸಿ ಈ ತಾನಮಾನಗಳಿಂದ ರಾಗಗಳ ಸ್ವರೂಪವನ್ನು ನಿರ್ಮಿಸಿ, ಸಭೆ ಬೆರಗಾಗುವಂತೆ ಮಾಡಿದನು. ಜಯಮಾಲೆ ಕೊರಳಿಗೆ ಬಿತ್ತು.

ಈ ವೀಣಾ ಸಮೂಹದಲ್ಲಿ ಗಮನಾರ್ಹವಾದುದು- ರಾವಣ ಹಸ್ತ. ಇದು ಇಂದು ಬಳಕೆಯಲ್ಲಿರುವ ಪಿಟೀಲು ವಾದ್ಯದ ಮೂಲ ಎಂಬ ಭಾವನೆಯಿದೆ. ಪಿಟೀಲು ವಾದ್ಯದ ಇತಿಹಾಸದ ಪುಸ್ತಕಗಳಲ್ಲೆಲ್ಲಾ ಈ ರಾವಣ ಹಸ್ತದ ಪ್ರಸ್ತಾಪವಿದ್ದೇ ಇದೆ. ಇದನ್ನು ರಾವಣಾಸ್ತ್ರ ರಾವಣವೀಣೆ ಎಂಬ ಹೆಸರುಗಳಿಂದಲೂ ಕರೆಯಲಾಗಿದೆ. ಯಾವ ಹೆಸರಿನಿಂದ ಕರೆಯಲಿ ಇದು ಕಮಾನಿನಿಂದ ತಂತಿಗಳನ್ನು ತೀಡಿ ನಾದೋತ್ಪತ್ತಿ ಮಾಡಲಾಗುವ ವಾದ್ಯವೆಂದು ವಿವರಿಸಲ್ಪಟ್ಟಿದೆ. ಇದರಲ್ಲಿ ರಾವಣನ ಹೆಸರು ಬಂದಿರುವುದರಿಂದ, ಇದರ ಮೂಲ- ಶ್ರೀಲಂಕಾದೇಶ ಎಂದೂ ಹೇಳಲಾಗುತ್ತಿದೆ. ಕನ್ನಡ ಸಾಹಿತ್ಯದಲ್ಲಿ ಸಂಗೀತ ಪ್ರಸಂಗಗಳಲ್ಲಿ ರಾವಣ ಹಸ್ತದ ಪ್ರಸ್ತಾಪವು ಪದೇ ಪದೇ ಬರುತ್ತದೆ. ರಾವಣಹಸ್ತದ ಬಹು ಹಳೆಯ ಪ್ರಸ್ತಾಪ ನಾಗಚಂದ್ರನ ರಾಮಚರಿತ ಪುರಾಣ ಅಥವಾ ಪಂಪ ರಾಮಾಯಣದಲ್ಲಿ ಕಂಡುಬರುತ್ತದೆ. "ರಸಂ ಬಡೆಯೆ ರಾವಣಹಸ್ತದಿನಂದು ರಾವಣಂ ಅಂತು ನಿರ್ಭರ ಭಕ್ತಿಯಿಂ ಬಾಜಿಪಾಗಳ್..." ಎಂದು ಹೇಳಲಾಗಿದೆ. ನಾಗಚಂದ್ರ 12ನೆಯ ಶತಮಾನದಲ್ಲಿ ಜೀವಿಸಿದ್ದವನು. ಸರಿಸುಮಾರು ಇದೇ ಕಾಲದಲ್ಲಿ ರಚಿತವಾದ ನಾನ್ಯದೇವನ 'ಭರತಭಾಷ್ಯ' ದಲ್ಲಿಯೂ ರಾವಣ ಹಸ್ತದ ವಿವರಣೆಯಿದೆ. ಮುಂದೆ ಸುಮಾರು 16ನೇ ಶತಮಾನದವರೆಗೂ ರಚಿತವಾದ ಪದ್ಮರಾಜಪುರಾಣ, ಬಸವಪುರಾಣ, ಕನಕದಾಸರ ಮೋಹನ ತರಂಗಿಣಿ ಮುಂತಾದ ಅನೇಕ ಕಾವ್ಯಗಳಲ್ಲಿ ರಾವಣಹಸ್ತದ ಉಲ್ಲೇಖವಿದೆ. ಅಂದರೆ ಈ ವಾದ್ಯವು ಕರ್ನಾಟಕದಲ್ಲಿ ಪ್ರಾಯಶಃ 10-11ನೇ ಶತಮಾನದಿಂದಲೂ ಪ್ರಚಾರದಲ್ಲಿದ್ದಿರಬೇಕು. ಈ ವಾದ್ಯವು ಹುಟ್ಟಿದ ಬಗೆಯ ಬಗೆಗೆ ಪ್ರೌಢದೇವರಾಯ ಕಾವ್ಯದಲ್ಲಿ ಈ ಸ್ವಾರಸ್ಯವಾದ ಕತೆ ಇದೆ:

ಅತ್ತೊಂದು ಕುಜದಲ್ಲಿ ಕೋತಿಯು ಪ್ರಸೂತದಿಂ..... ಎಂದು ಪ್ರಾರಂಭವಾಗುವ ಪದ್ಯಗಳ ಪ್ರಕಾರ - ಕೋತಿಯೊಂದಕ್ಕೆ ಹೆರಿಗೆ ಸಮಯ. ಆಗ ಅದು ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಹಾರುತ್ತದೆ. ಹಾರಿದಾಗ ಪ್ರಸವವಾಗಿ ಮಾಂಸಾದಿಗಳು ಗಿಡದಲ್ಲಿ ಸಿಕ್ಕಿ ಬೀಳುತ್ತವೆ. ಕ್ರಮೇಣ ಬಿಸಿಲಿಗೆ ಒಣಗಿಹೋಗಿರುತ್ತವೆ. ಆಗ ರಭಸವಾಗಿ ಗಾಳಿ ಬೀಸುತ್ತ ಅದರಿಂದ ಒಂದು ಝೇಂಕಾರ ನಾದವು ಮೂಡಿ ಬರುತ್ತದೆ. ಈ ನಾದವು ಶಿವನ ಕಿವಿಗೆ ಬೀಳುತ್ತದೆ. ಅದರಿಂದ ಸಂತೋಷಗೊಂಡು ನಾಟ್ಯವಾಡಲು ಪ್ರಾರಂಭಿಸುತ್ತಾನೆ. ಆ ಸಮಯದಲ್ಲಿ ಅದನ್ನು ನೋಡಿದ ಮಹಾಶಿವಭಕ್ತ ರಾವಣ ಸ್ಫುರಿತನಾಗಿ, ತನ್ನ ಕೈಯ್ಯನ್ನೇ ದಂಡಿಗೆ ಮಾಡಿ ಒಂದು ತಲೆಯನ್ನೇ ಕಡಿದು ಬುರುಡೆಮಾಡಿ ತನ್ನ ನರಗಳನ್ನೇ ತಂತಿ ಮಾಡಿಕೊಂಡು, ಸಪ್ತಸ್ವರಗಳನ್ನು ಹೊರಡಿಸುತ್ತಿದ್ದ. ಇದನ್ನು ನೋಡಿದ ಶಿವನು ಮೆಚ್ಚಿ ನಿನ್ನ ಇಷ್ಟಗಳೇನು? ಎಂದು ಕೇಳಿದ. ಅದಕ್ಕೆ ರಾವಣನು - ಅಷ್ಟವಿಧ ಐಶ್ವರ್ಯ ಮೂರೂವರೆ ಕೋಟಿ ವರುಷ ಆಯುಷ್ಯ, ಲಂಕಾಧಿಪತಿಯಾಗಿ ಪದವಿ, ಸುರಸುಂದರಿಯರಾದ ಎಂಟು ಕೋಟಿ ಸ್ತ್ರೀಯರ ಭೋಗ, ಕಾಮಧೇನು, ಚಿಂತಾಮಣಿ, ಕಲ್ಪವೃಕ್ಷ, ಅನಂತರ ತನ್ನ ಹರಿದತಲೆ, ಕೈಬೆರಳುಗಳು ಪುನಃ ಮೊದಲಿನಂತೆ ಆಗುವುದು ಎಂದು ಬೇಡಿದ. ಶಿವನು ಹಾಗೆಯೇ ಆಗಲಿ ಎಂದು ವರವನ್ನಿತ್ತ.

ಇತರ ವಿಭಾಗದ ವಾದ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ಬಳಕೆಯಲ್ಲಿದ್ದುವು. ಸುಷಿರ ವಾದ್ಯಗಳಲ್ಲಿ ವಾಸ ಅಂದರೆ ಕೊಳಲಿನ ವಿವಿಧ ಪ್ರಕಾರಗಳಿದ್ದವು. ಅವುಗಳಿಗೆ ಉದ್ದವನ್ನವಲಂಬಿಸಿ ವಿಧ ವಿಧವಾದ ಹೆಸರುಗಳಿದ್ದುವು. ಇನ್ನು ಆನದ್ಧ ಎಂದರೆ ಚರ್ಮವನ್ನು ಕಟ್ಟಿ ಬಾಜಿಸುವ ವಾದ್ಯ ಪ್ರಕಾರಗಳು. ಇವುಗಳಲ್ಲಿ ನಾನಾ ಸಂದರ್ಭಗಳಿಗೆ ಬಳಸಲಾಗುವ ಅನೇಕ ವಾದ್ಯಗಳಿದ್ದುವು. ಕೆಲವು ಮರ್ಯಾದಾಸೂಚಕವಾದವು. ಕೆಲವು ಯುದ್ಧದಲ್ಲಿ ಉಪಯೋಗಿಸುವಂತಹವು. ಕೆಲವು ಉತ್ಸವಾದಿಗಳಲ್ಲಿ ಬಳಸುವಂತಹವು. ಕೆಲವು ಸಂಗೀತ ಮತ್ತು ನಾಟ್ಯಗಳಲ್ಲಿ ಒತ್ತು ಕೊಡಲು ಉಪಯೋಗಿಸುವಂತಹವು. ಹೀಗೆ ಹತ್ತಿರ ಹತ್ತಿರ 50 ಬಗೆಯ ಆನದ್ಧ ವಾದ್ಯಗಳ ಹೆಸರುಗಳನ್ನು ಕನ್ನಡ ಕಾವ್ಯಗಳಲ್ಲಿ ಕಾಣುತ್ತೇವೆ. ಅದರಲ್ಲಿ ಕೆಲವು ಪೂರಾ ಕರ್ನಾಟಕದ ಪ್ರಾದೇಶಿಕ ವಾದ್ಯಗಳು ಎನಿಸುತ್ತವೆ. ನಿದರ್ಶನ- ಚಿನುಚಂಪೆ, ಚಂದ್ರವುಡುಕು, ಡಿಂಡಿಮ, ಡೋಳು, ತುಡುಮು, ಬದ್ದವಣ, ಆನೆವರೆ, ಒನಗೆವರೆ, ಎಕ್ಕಮದ್ದಳೆ, ಕಂಬಳವರೆ, ಕಂಚುವರೆ, ಕೋಂಟೆವರೆ, ಚೌಡಿಕೆ, ಹಲಗೆ- ಹೀಗೆ.

ಆದರೆ ಬೇರೆ ಯಾವುದೂ ಗ್ರಂಥಗಳಲ್ಲಿ ಕಾಣಬರದ ಒಂದು ಸ್ವಾರಸ್ಯಾಂಶವನ್ನು ಕನ್ನಡ ಕಾವ್ಯಗಳಲ್ಲಿ ಕಾಣುತ್ತೇವೆ. ಅದು ಆವುಜಕ್ಕೆ ಸಂಬಂಧಪಟ್ಟುದು. ಆವುಜದಲ್ಲಿ ಅನೇಕ ಪ್ರಕಾರಗಳಿವೆ. ಅವುಗಳ ವಾದನವು ಯಾವ ಯಾವ ತಾಳದಲ್ಲಿ ನಡೆದರೆ ಶೋಭಿಸುವುದು ಎಂಬ ವಿವರಣೆ ಒಂದು ಸ್ವಾರಸ್ಯವಾದ ಸಂಗತಿ. ಇದು ಪದ್ಮಣಾಂಕನ ಪದ್ಮರಾಜ ಪುರಾಣದಲ್ಲಿ ಬರುತ್ತದೆ. ಬಲ್ಲಾಳನ ಆಸ್ಥಾನದಲ್ಲಿ ಮೊಳಗುತ್ತಿದ್ದ ವಾದ್ಯ ವೈಖರಿಯನ್ನು ವರ್ಣಿಸುತ್ತಾ ಯಾವ

ಯಾವ ವಾದ್ಯವನ್ನು ಯಾವ ಯಾವ ತಾಳದಲ್ಲಿ ನುಡಿಸಲಾಗುತ್ತಿತ್ತು ಎಂಬ ವರ್ಣನೆ ಇದೆ. ಇಲ್ಲಿ ಆವುಜವೇ ಅಲ್ಲದೆ ಇತರ ವಾದ್ಯಗಳ ಪ್ರಸ್ತಾಪವೂ ಇದೆ. ಕಂದಾವುಜಕೆ ವಿಜಯಮಠ್ಥಂ ಎಂದು ಪ್ರಾರಂಭವಾಗುವ ಈ ಪದ್ಯದಲ್ಲಿ ಹೀಗಿದೆ –

ಕಂದಾವುಜಕೆ	ವಿಜಯ ಮಠ್ಥಂ	1111511
ಡಮರುಗಕ್ಕೆ ಸಂದ	ಸಾಳಗ ಮಠ್ಥಂ	010001
ಅಂತೆ ಹಸ್ತಾವುಜಕೆ	ಪ್ರಥಮಮಠ್ಥಂ	505
ರುಂಜೆಗೊಪ್ಪುವ	ಕೀಲಮಠ್ಥಂ	010011
ಚೌಡಿಕೆಗೆ	ಸರಸಮಠ್ಥಂ	00551111
ಕುಡುಕ್ಕೆಗೆ	ಸಮಪಟುಮಠ್ಥಂ	-
ಅಡ್ಡಾವುಜಕೆ	ರವಿಮಠ್ಥಂ	5155+
ಆಭಾರಿಗೆ	ಚಕ್ರಮಠ್ಥಂ	1115
ಕುಂಭವಾದ್ಯಕೆ	ವಿರಾಮ ಮಠ್ಥಂ	100100
ಠವಣೆಗೆ	ಧನಂಜಯ ಮಠ್ಥಂ	0155
ಪಂಚಮುಖಕೆ	ಶ್ರೀಮಠ್ಥಂ	000055
ತರ್ಪಟೆಗೆ	ರಂಗಮಠ್ಥಂ	5005001
ಮಲಹರಿಗೆ	ಜಯಪ್ರಿಯಮಠ್ಥಂ	151
ಕುಡುಪಾವುಜಕೆ	ನಿರ್ವಾಣಮಠ್ಥಂ	-
ಡಕ್ಕುಲಿಗೆ	ವಿಚಾರಮಠ್ಥಂ	11100
ಕ್ರಮಕ್ಕೆ	ಕಲ್ಯಾಣಮಠ್ಥಂ	511+
ಮಂಡಿ ಡಕ್ಕೆಗೆ	ಕರಾಳಮಠ್ಥಂ	551115
ಕರಟಕ್ಕೆ	ವಿಲಾಸಮಠ್ಥಂ	001011
ಕೂರ್ಪರಡಕ್ಕೆಗೆ	ವಲ್ಲಭಮಠ್ಥಂ	515
ಪಟ್ಟವಾದ್ಯಕೆ	ಘನಮಠ್ಥಂ	-
ಶಂಖಕ್ಕೆ	ಕಲಾಪಮಠ್ಥಂ	11+
ಕಾಹಳೆಗೆ	ವೀರಮಠ್ಥಂ	-
ವೀರಣಕ್ಕೆ	ಆಲಾಪಮಠ್ಥಂ	-
ಶೃಂಗಕ್ಕೆ	ತಾರಾಪ್ರತಿಮಠ್ಥಂ	0011

ತ್ರಿವಳಿಗೆ	ವರ್ಣಮಠ್ಠಂ	1100100
ನಿಸ್ಸಾಣಕ್ಕೆ	ಗಭೀರಮಠ್ಠಂ	55
ಕೌಂಸಾಳಕೆ	ವಾಮಮಠ್ಠಂ	-
ಗಿಡಿಬಿಡಿಗೆ	ಭಿನ್ನಮಠ್ಠಂ	000101011
ಭೇರಿಗೆ	ಕಳಿಂಗಮಠ್ಠಂ	011
ರಣಭೇರಿಗೆ	ಸಂಕೀರ್ಣಮಠ್ಠಂ	-
	00100101010010010000+	

ಹೀಗೆ ಯಾವ ಯಾವ ವಾದ್ಯದ ಬಾಜನೆ ಅಥವಾ ನುಡಿಸುವುದಕ್ಕೆ ಯಾವ ಯಾವ ತಾಳ ಉಚಿತವಾದುದು, ಮತ್ತು ವಾದ್ಯವೈಖರಿಯನ್ನು ತೋರಬಲ್ಲುದು ಎಂಬ ವಿವರ ಸ್ವಾರಸ್ಯವಾದುದು, ಗಮನಾರ್ಹವಾದುದು. ಈ ತಾಳಗಳೆಲ್ಲಾ ಮಠ್ಯತಾಳದ ಪ್ರಕಾರಗಳು. ದ್ವಾತ್ರಿಂಶತ್ ಅಂದರೆ 32 ಮಂಠ ಅಥವಾ ಮಠ್ಯ ತಾಳಗಳ ಒಂದು ವರ್ಗಕ್ಕೆ ಸೇರಿದವು.

ಈಗ ಹೇಳಿದ ವಾದ್ಯಗಳಲ್ಲಿ ಬಹುತೇಕ ಆನದ್ಧ ಅಥವಾ ಚರ್ಮಕಟ್ಟು ವಾದ್ಯಗಳೇ. ಆದರೆ ಶಂಖ, ಕಾಹಳೆ,ಶೃಂಗ ಮುಂತಾದ ಸುಷಿರ ಅಂದರೆ ಊದಿ ನಾದೋತ್ಪತ್ತಿ ಮಾಡುವಂತಹ ವಾದ್ಯಗಳು ಅಲ್ಲದೆ ಕಂಸಾಳ ಅಥವಾ ಕಂಚಿನ ತಾಳಕ್ಕೂ ಉಚಿತವಾದ ಮಠ್ಯ ತಾಳ ಪ್ರಕಾರಗಳನ್ನು ಹೇಳಿದೆ. ನನಗೆ ತಿಳಿದ ಮಟ್ಟಿಗೆ ಈ ರೀತಿಯ ವಿವರಗಳು ಸಂಸ್ಕೃತದಲ್ಲಿ ರಚಿತವಾದ ಯಾವ ಸಂಗೀತ ಶಾಸ್ತ್ರ ಗ್ರಂಥಗಳಲ್ಲಿಯೂ ಕಂಡುಬಂದಿಲ್ಲ. ತಾಳಗಳನ್ನೇ ಪ್ರತ್ಯೇಕವಾಗಿ ಪರಿಶೀಲಿಸುವ ಕೆಲವು ಗ್ರಂಥಗಳಲ್ಲಿ ಇರಬಹುದೇನೋ. ಅದೂ ಕೈಬರಹದ ಪ್ರತಿಗಳಲ್ಲಿ. ಆದರೆ ಅಚ್ಚಾದ ಗ್ರಂಥಗಳಲ್ಲಿ ದಾಮೋದರ ಪಂಡಿತನ ಸಂಗೀತ ದರ್ಪಣ ಗ್ರಂಥ ವಿನಾ ಬೇರೆ ಯಾವುದರಲ್ಲಿಯೂ ಕಂಡುಬರುವುದಿಲ್ಲ. ಹಾಗೆಯೇ ಕನ್ನಡದ ಬೇರೆಯ ಕಾವ್ಯಗಳಲ್ಲಿಯೂ ಕಂಡುಬರುವುದಿಲ್ಲ. ಸಂಗೀತ ದರ್ಪಣದಲ್ಲಿ ಅನೇಕ ಪ್ರಾದೇಶಿಕ ಸಂಪ್ರದಾಯಗಳು ಪ್ರಸ್ತಾಪಿಸಲ್ಪಟ್ಟಿವೆ. ಆದುದರಿಂದ ಈ ಮಂಠ ತಾಳ ಪ್ರಕಾರಗಳು ಪ್ರಾದೇಶಿಕ ಸಂಪ್ರದಾಯಕ್ಕೆ ಸೇರಿದವು ಎಂದು ಭಾವಿಸಬಹುದಾಗಿದೆ. ಅಲ್ಲದೆ ಈ ವಿವರಗಳು ಒಂದು ಕನ್ನಡ ಕಾವ್ಯದಲ್ಲಿ ಕಂಡುಬರುವುದರಿಂದ ಈ ಸಂಪ್ರದಾಯ ಬಹುಶಃ ಕರ್ಣಾಟಕದಲ್ಲಿ ಹೆಚ್ಚು ಬಳಕೆಯಲ್ಲಿ ಇದ್ದಿರಬಹುದೇನೋ ಎನಿಸುವುದೂ ಸಹಜ. ಈ ವಿವರ ಪದ್ಮಣಾಂಕನ ಗಾಢವಾದ ಸಂಗೀತ ಜ್ಞಾನವನ್ನು ಎತ್ತಿಕೊಡುವಂತಿದೆ ಮತ್ತು ಸಂಶೋಧನೆಗೆ ಯುಕ್ತವಾದ ಸಾಮಗ್ರಿ.

ಈಗ ಬತ್ತೀಸ ರಾಗಗಳ ವಿಷಯ. ಬತ್ತೀಸ ಎನ್ನುವುದು ಪ್ರಾಕೃತ ಭಾಷೆಯ ಪದ. 32 ಎಂದರ್ಥ. ಆಗಲೇ ಹೇಳಿದ ಹಾಗೆ ಕರ್ಣಾಟಕದಲ್ಲಿ ಸಂಸ್ಕೃತದ ಶಾಸ್ತ್ರ ಗ್ರಂಥಗಳಲ್ಲಿ ಹೇಳಿದ ರೀತಿಯ ವಿವಿಧ ರಾಗ ಪದ್ಧತಿಗಳು ಬಳಕೆಯಲ್ಲಿದ್ದುವು. ಕನ್ನಡ ಕಾವ್ಯಗಳಲ್ಲಿಯೂ ಈ ರೀತಿಯ ಪದ್ಧತಿಗಳ ಪ್ರಸ್ತಾಪವಿದೆ. ಆದರೆ ಇವುಗಳ ಜೊತೆಗೆ ಇನ್ನೊಂದು, ಅಂದರೆ ಬತ್ತೀಸರಾಗ ಪದ್ಧತಿಯನ್ನು ಪದೇಪದೇ ಪ್ರಸ್ತಾಪಿಸಲಾಗಿದೆ. ಈ ಹೆಸರು ಮೊದಲು ಕಂಡುಬರುವುದು ಚಾಲುಕ್ಯ ವಿಕ್ರಮಾದಿತ್ಯನ ಕಾಲದ ಒಂದು ಶಾಸನದಲ್ಲಿ. ಇದರ ಕಾಲ ಕ್ರಿ.ಶ. 1074-

ಸಮಸ್ತ ಗೀತವಾದ್ಯ ನೃತ್ಯಾನೇಕ ಶಾಸ್ತ್ರ ಸಾಧಕಂ
ಬತ್ತೀಸರಾಗ ಕಳಾಬ್ರಹ್ಮಂ ಮೊಕರಿ ಬರ್ಮಯ್ಯ

ಎಂಬ ಬರವಣಿಗೆ ಇದೆ. ಇಲ್ಲಿ ಮೊಕರಿ ಎಂಬ ಪದವು ಸಂಸ್ಕೃತದ ಮುಖರಿಎಂಬ ಪದದ ರೂಪಾಂತರ. ಮುಖರಿ ಎಂದರೆ ಮುಖ್ಯ ಗಾಯಕ ಎಂದರ್ಥ. ಈ ಬರ್ಮಯ್ಯ ಅಥವಾ ಬ್ರಹ್ಮಯ್ಯನು ವಿಕ್ರಮಾದಿತ್ಯನ ತಮ್ಮ ಜಯಸಿಂಹನ ಆಶ್ರಿತ. ಬಹು ಪ್ರಸಿದ್ಧನಾಗಿರಬಹುದು. ಅವನು ಈ ಬತ್ತೀಸರಾಗಕಳಾಬ್ರಹ್ಮ ಎಂದು ಹೊಗಳಿಸಿಕೊಳ್ಳಬೇಕಾದರೆ, ಈ ಪದ್ಧತಿಯಲ್ಲಿ ಬಹು ಪ್ರವೀಣನಾಗಿರಬಹುದು. ಶಾಸನದಲ್ಲಿ ಇದರ ಪ್ರಸ್ತಾಪ ಬರಬೇಕಾದರೆ ಈ ಪದ್ಧತಿಯು ಬರ್ಮಯ್ಯನ ಕಾಲಕ್ಕೂ ಬಹು ಹಿಂದಿನಿಂದಲೂ ಬಳಕೆಯಲ್ಲಿದ್ದಿರಬೇಕು.

ಈ ಬರ್ಮಯ್ಯನ ಅನಂತರ ಈ ಬತ್ತೀಸರಾಗದ ಪ್ರಸ್ತಾಪವು ಅನೇಕ ಕನ್ನಡ ಕಾವ್ಯಗಳಲ್ಲಿ ಬಂದಿದೆ. ವಚನಗಳಲ್ಲಿ ಬಂದಿದೆ. ಹರಿದಾಸ ಪದಗಳಲ್ಲಿ ಬಂದಿದೆ. ತೆಲುಗು ಕಾವ್ಯಗಳಲ್ಲಿಯೂ ಬಂದಿದೆ. ಹರಿಹರನ ರಗಳೆಗಳಿಂದ ಹಿಡಿದು, ಗೋವಿಂದವೈದ್ಯನ ಕಂಠೀರವ ನರಸರಾಜೇಂದ್ರ ವಿಜಯದ ಕಾಲದವರೆಗಿನ ಅನೇಕ ಕಾವ್ಯಗಳಲ್ಲಿ ಈ ಬತ್ತೀಸರಾಗದ ಪ್ರಸ್ತಾಪವು ಬಂದಿದೆ. ಕೆಲವು ಕಾವ್ಯಗಳಲ್ಲಿ ಬತ್ತೀಸದ ಬದಲು ಪ್ರಾಚೀನ 32 ರಾಗಗಳು ಎಂದು ಹೇಳಲಾಗಿದೆ.

ಈ ಬತ್ತೀಸ ರಾಗಗಳಾವುವು? ಗ್ರಂಥಕಾರರಲ್ಲೇ ಭಿನ್ನಾಭಿಪ್ರಾಯವಿದೆ. ಕೆಲವುದರಲ್ಲಿ ಬತ್ತೀಸ ವರ್ಗದಲ್ಲಿ ಹೇಳಲಾದ ಕೆಲವು ರಾಗಗಳು ಇನ್ನು ಕೆಲವು ಕಾವ್ಯಗಳಲ್ಲಿ ಕಾಣಬರುವುದಿಲ್ಲ. ಅಲ್ಲಿ ಬೇರೆ ರಾಗಗಳು ಸೇರಿವೆ. ಈ ವಿವಿಧ ಗ್ರಂಥಗಳನ್ನೆಲ್ಲಾ ಶೋಧಿಸಿ ಭಟ್ಟಿ ಇಳಿಸಿದಾಗ ದೊರೆವ ಈ 32ನ್ನು ಬತ್ತೀಸ ರಾಗಗಳೆಂದು ಭಾವಿಸಬಹುದು. ಅವುಗಳು:

(1) ಆರಭಿ (2) ಆಹರಿ (3) ಕಾಂಭೋಜಿ (4) ಗುಂಡಕ್ರಿ (5) ಗುಜ್ಜರಿ (6) ಗೌಳ (7) ತೊಂಡಿ ಅಥವಾ ತುರುಷ್ಕ (8) ದೇವಗಾಂಧಾರಿ (9) ದೇಶಾಕ್ಷಿ (10) ದೇಶಿ (11) ಧನ್ಯಾಸಿ-ಧನಾಶ್ರೀ (12) ನಾಟಿ (13) ನಾರಣಿ (14) ಫಳಮಂಜರಿ (15) ಬಂಗಾಳ (16) ಬೌಳಿ (17) ಭೂಪಾಳಿ (18) ಭೈರವಿ (19) ಮಂಗಳಕೈಶಿಕಿ (20) ಮಲಹರಿ (21) ಮಧುಮಾಧವಿ (22) ಮೇಘರಂಜಿ (23) ಮಾಳವಶ್ರೀ (24) ರಾಮಕ್ರಿಯ (25) ಲಲಿತೆ (26) ವರಾಟಿ (27) ವಸಂತ (28) ವೇಳಾವುಳಿ (29) ಶ್ರೀ (30) ಸಾಳಂಗ (31) ಸೌರಾಷ್ಟ್ರ (32) ಹಿಂದೋಳ

ಈ ಮಾಹಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಒಂದು ಅಂಶವು ಮನಸ್ಸಿನಲ್ಲಿ ಮೂಡುವುದು ಸಹಜ. ಹಿಂದೆಯೇ ಹೇಳಿದಂತೆ ಭಾರತೀಯ ಸಂಗೀತದಲ್ಲಿ ಹಿಂದೂಸ್ತಾನಿ ಮತ್ತು ಕರ್ನಾಟಕ ಎಂಬ ಎರಡು ಪದ್ಧತಿಗಳು ಸ್ಪಷ್ಟವಾಗಿ ಕಾಣಬರುತ್ತಿವೆ. "ಈ ಎರಡು ಕವಲುಗಳು ಒಡೆಯುವ ಮುಂಚೆ ಇಡೀ ಭಾರತದಲ್ಲಿ ಒಂದೇ ಸಂಗೀತ ಪದ್ಧತಿ ಇದ್ದಿತು. ಮುಸಲ್ಮಾನರು ಭಾರತಕ್ಕೆ ಪ್ರವೇಶಿಸಿದ ಮೇಲೆ ಅವರ ಸಂಗೀತದ ಪ್ರಭಾವವು ಉತ್ತರ

ಭಾರತದಲ್ಲಿ ಹರಡಿ ಅದರ ಪ್ರಭಾವಕ್ಕೆ ಒಳಗಾಗದಿದ್ದ ದಕ್ಷಿಣ ಭಾರತದ ಸಂಗೀತವು ಪೂರ್ವದಂತೆಯೇ ಉಳಿಯಿತು. ಸಂಗೀತದಲ್ಲಿ ಹೀಗೆ ಎರಡು ಕವಲುಗಳಾದವು.'' ಇದು ಸಾರ್ವತ್ರಿಕವಾದ ನಂಬಿಕೆ. ಭಾರತೀಯ ಸಂಗೀತದ ಬಗೆಗೆ ಪ್ರಕಟವಾದ ಪುಸ್ತಕಗಳೆಲ್ಲಾ ಇದೇ ಅಭಿಪ್ರಾಯವನ್ನೇ ಸಾರುತ್ತಿವೆ. ಅದು ಜನರ ಮನಸ್ಸಿನಲ್ಲಿಯೂ ಭದ್ರವಾಗಿ ನಿಂತಿದೆ. ಆದರೆ ಈ ಅಭಿಪ್ರಾಯವು ಪೂರಾ ಸರಿಯೇ ಎಂಬ ಸಂಶಯವೂ ಬರುತ್ತದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ.

ಈಗ ತಮಿಳು ನಾಡಿನಲ್ಲಿ ಪ್ರಾಚೀನ ಪರಂಪರೆಯನ್ನು ಪ್ರಸ್ತಾಪಿಸುತ್ತಾ, ಅಂದು ಪ್ರಚಲಿತವಿದ್ದ ಸಂಗೀತದ ಬಗೆಗೆ ಸಿಲಪ್ಪದಿಕಾರದಲ್ಲಿ ಬರುವ ವರ್ಣನೆಯನ್ನು ಉದಾಹರಿಸುತ್ತಾರೆ. ಸಂಗೀತ ಸಂಬಂಧದಲ್ಲಿ ಅಲ್ಲಿ ಬರುವ ಪಾರಿಭಾಷಿಕ ಶಬ್ದಗಳೆಲ್ಲಾ ತಮಿಳು ದೇಶೀಯವೇ. ಸಂಗೀತವನ್ನು ಇಸೈ ಎಂದು ಕರೆಯಲಾಗಿದೆ. ಸ್ವರಗಳಿಗೂ ಹಾಗೆಯೇ. ಷಡ್ಜವನ್ನು - ಕುರಲ್, ರಿಷಭಕ್ಕೆ-ತುಟ್ಟಮ್, ಗಾಂಧಾರಕ್ಕೆ-ಕೈಕಿಲೈ- ಹೀಗೆ ತಮಿಳು ಶಬ್ದ ಗಳೇ ಇವೆ. ರಾಗಗಳನ್ನು ಪಣ್ ಎಂದು ಕರೆಯುತ್ತಿದ್ದರು. ಈ ಹಿನ್ನೆಲೆಯಿಂದ ನೋಡಿದರೆ ಮೊದಲಿನಿಂದಲೂ ದಕ್ಷಿಣ ಭಾರತದಲ್ಲಿನ ಸಂಗೀತದ ಆಕಾರವು ಉತ್ತರದಿಂದ ಪ್ರತ್ಯೇಕವಾಗಿಯೇ ಇತ್ತೆನ್ನಿಸುತ್ತದೆ. ಅದರ ಆಕಾರವೂ ಸ್ಥೂಲವಾಗಿ ಇಂದು ನಾವು ಕರ್ನಾಟಕ ಪದ್ಧತಿ ಎಂದು ಕರೆಯುವ ಸಂಗೀತಾಕಾರವೇ ಇದ್ದಿತು ಎಂದು ಭಾವಿಸಬಹುದಾಗಿದೆ. ಈ ಕನ್ನಡ ಕಾವ್ಯಗಳಲ್ಲಿ ಬರುವ ಅನೇಕ ಪಾರಿಭಾಷಿಕ ಪದಗಳು ಇದನ್ನು ಸಮರ್ಥಿಸುವಂತಿವೆ. ನಿದರ್ಶನವಾಗಿ ಶಾಂತೀಶ್ವರ ಪುರಾಣದಲ್ಲಿ ಗಾಂಧರ್ವ ಸರ್ವಜ್ಞನೆಂಬ ಗಾಯಕ ಹಾಡುವಾಗಿನ ವೈಖರಿಯನ್ನು ವರ್ಣಿಸುತ್ತಾ-ಗಹಗಹಿಕೆ, ಗೊಂಡಾಗೊಂಡಿ, ಬಾಹಟ, ಲಾಲಂಗಿ, ತನ್ನೆವಣೆ, ನಿಸ್ಸರಡೆ, ರಂಗರಕ್ತಿ, ಬೇಗವಣೆ, ತರಹರ, ಸುರಿವೊಟ್ಟಜಿ, ದಾಳವಾಳ, ಪದಿರ್ಪೊಜೆ, ಕೊಂಕು, ಕಮ್ಮಿವಣೆ- ಹೀಗೆ ಪಾರಿಭಾಷಿಕ ಶಬ್ದಸರಣಿಯು ಕಾಣಬರುತ್ತದೆ. ಬೇರೆ ಬೇರೆ ಕಾವ್ಯಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾಣಬರುತ್ತವೆ. ಇದರಲ್ಲಿ ಕೆಲವು ಪ್ರಾಕೃತ ಮೂಲದವು. ಆದರೆ ಬಹುಪಾಲು ಕನ್ನಡ ಭಾಷೆಯವು. ಆದುದರಿಂದ ಸಂಗೀತದಲ್ಲಿ, ಸಂಸ್ಕೃತ ಪಾರಿಭಾಷಿಕ ಶಬ್ದಗಳು ಪ್ರವೇಶಿಸಿ, ಆ ಶಾಸ್ತ್ರ ಗ್ರಂಥಗಳು ಸ್ವೀಕೃತವಾಗಿ, ಸರ್ವಮಾನ್ಯವಾಗುವ ಮುಂಚೆ ದಕ್ಷಿಣ ಭಾರತದಲ್ಲಿಯೇ ಒಂದು ಪ್ರತ್ಯೇಕ ದೇಶೀಯ ಪದ್ಧತಿ ಇದ್ದು, ಈ ಬತ್ತೀಸ ರಾಗಗಳು ಆ ಪದ್ಧತಿಯ ಭಾಗವಾಗಿರಬಹುದೇನೋ ಎಂಬ ಸಂಶಯವೂ ಬರುತ್ತದೆ. ಉತ್ತರದಿಂದ ಸಂಸ್ಕೃತದ ಪ್ರವಾಹ ದಕ್ಷಿಣದ ಕಡೆ ಬಂದು ಅದರ ವ್ಯಾಪಕ ಪ್ರಮಾಣವು ಕ್ರಮೇಣ ಕಡಿಮೆಯಾಗುತ್ತಾ ತಮಿಳು ನಾಡಿನ ಸಂಗೀತದಲ್ಲಿ ಸಂಸ್ಕೃತ ಪದಗಳ ಬಳಕೆ ಅತೀ ಸ್ವಲ್ಪ ಇರಲು ಅವಕಾಶವಾಯಿತು ಎಂದು ಭಾವಿಸಬಹುದು. ವಿಂಧ್ಯಪರ್ವತದ ನೇರ ದಕ್ಷಿಣಕ್ಕಿರುವ ಆಂಧ್ರ ಮತ್ತು ಕರ್ನಾಟಕ ಪ್ರದೇಶಗಳು, ಸಂಸ್ಕೃತ ಪ್ರಭಾವಕ್ಕೆ ಹೆಚ್ಚು ಒಳಗಾಗಿ ಮೂಲ ಪಾರಿಭಾಷಿಕ ಶಬ್ದಗಳು ಸಂಸ್ಕೃತ ರೂಪ ತಳೆದವು. ಆದರೆ ಸಂಗೀತದ ಆಕಾರ ಮಾತ್ರ ಹಾಗೆಯೇ ಉಳಿಯಿತು ಎನ್ನಬಹುದು. ಒಟ್ಟಿನಲ್ಲಿ ಈ ಭಾಗದಲ್ಲಿ ಸಂಶೋಧನೆಯ ಅವಶ್ಯಕತೆ ಇದೆ. ★ ★ ★ ★ ★

2. ಸಂಗೀತದ ರಸ ಪ್ರಪಂಚ

ಅನುಭವ ವೇದ್ಯವಾದ ಕಲೆ-ಸಂಗೀತ. ಇದು ಹಾಡುವವರಿಗೂ ಕೇಳುವವರಿಗೂ ಇಬ್ಬರಿಗೂ ಅನ್ವಯಿಸುತ್ತದೆ. ಈ ಅನುಭವಗಳಿಗೆ ಪ್ರೇರಕವೂ ಪೋಷಕವೂ ಆದ ಶಕ್ತಿಗಳು – ಭಾವ ಮತ್ತು ರಸ.

ಸಂಗೀತದ ಮುಖ್ಯ ಅಂಗಗಳಾದ ರಾಗ-ಲಯಗಳು ಭಾವರಸಗಳನ್ನು ಅಭಿವ್ಯಕ್ತಪಡಿಸಿದರೂ ಅದಕ್ಕೆ ಬಹುತೇಕ ವ್ಯಂಜಕವಾದ ಸಾಮಗ್ರಿ-ಮಾತು ಅಥವಾ ಸಾಹಿತ್ಯ. ಈ ರಸಾನುಭವವು ಕೆಲವು ವೇಳೆ ಕೇವಲ ರಾಗಲಯಗಳಿಂದಲ್ಲ. ವ್ಯಂಗ್ಯದಲ್ಲಿ ಅನುಭವವಾಗಬಹುದು ನಿಜ. ಆದರೆ ಬಹುಪಾಲು ಸಾಹಿತ್ಯವು ಅದಕ್ಕೆ ಖಚಿತ ರೂಪವೀಯುತ್ತದೆ. ರಾಗಲಯಗಳು ಅದಕ್ಕೆ ವರ್ಧಕವಾಗುತ್ತವೆ.

ಸಂಗೀತದಲ್ಲಿ ಪ್ರಾಯಶಃ ಎಲ್ಲ ರಸಗಳ ಅನುಭವವಾದರೂ ಪ್ರಧಾನವಾಗಿ ಕಾಣಬರುವುದು ಭಕ್ತಿ. ಆದರೆ ಇದು ಎಲ್ಲದಕ್ಕಿಂತ ಹಿರಿದೆಂದು ಹೇಳಲಾದ ಶೃಂಗಾರ ರಸದ ಪ್ರಭೇದವೇ ಅಲ್ಲವೇ.

"....... ಎಲ್ಲಾ ರಸದೊಳಂ ಶೃಂಗಾರ ರಸಮೆ ಲೋಕಕ್ಕೆ
ಸೊಗಯಿಪುದಾದ ಕಾರಣದೆ ಮೊದಲೊಳೀ ಶೃಂಗಾರ ರಸಂ ಪೇಳೆಪಟ್ಟುದು ......"

ಎಂದು ಪ್ರಾರಂಭಿಸಿ ಅದರ ಪ್ರಭೇದಗಳನ್ನು ವಿವರಿಸಿ ..... ಈ ಮರ್ಯಾದೆಯಲ್ಲಿ ಭಕ್ತಿ ಮೊದಲಾದುವಂ ಯೋಜಿಸಿಕೊಳ್ವುದು ...... ಎನ್ನುತ್ತಾನೆ ಕವಿಸಾಳ್ವ– ತನ್ನ ರಸ ರತ್ನಾಕರದಲ್ಲಿ. ಇದನ್ನೇ ...... ರತಿಯೊಂದೇ ಕಾಂತಾದಿ ವಿಷಯಕಮಾಗಿ ರಾಗಮಯ ವಹತನದಿಂ ಶೃಂಗಾರ ಸಂಜ್ಞೆಯಂ ಪಡೆವುದು, ಪುತ್ರಾದಿ ವಿಷಯಕಮಾಗಿ ಸ್ನೇಹಮ ವಹತನದಿಂ ಬಂಧು ವಿಷಯಕಮಾಗಿ ಪ್ರೇಮಾತ್ಮಕ ವಹತನದಿಂ, ನೃಪ ಗುರು ದೇವತಾ ವಿಷಯಕಮಾಗಿ ಭಕ್ತಿ ರೂಪವಹತನದಿಂ ಸ್ವಾತ್ಮ ವಿಷಯಕಮಾಗಿ ಪರತರ ಪ್ರೀತಿ ವಿಷಯವನಪ್ಪುದರಿಂ ......

ಎಂದು ನಿಜಗುಣ ಶಿವಯೋಗಿ ಇನ್ನೂ ತಿಳಿಯಾಗಿ ವಿವರಿಸಿ ಶೃಂಗಾರರಸದ ಆಧ್ಯಾತ್ಮಿಕ ಹಿನ್ನೆಲೆಯನ್ನು ಮತ್ತು ಅದರಲ್ಲಿಯೇ ಇತರ ಎಂಟೂ ರಸಗಳು ಅಡಗಿರುವುದನ್ನು ಹೇಳಿದ್ದಾನೆ – ವಿವೇಕ ಚಿಂತಾಮಣಿಯಲ್ಲಿ.

ಪರಿಮಳ ವಾತಾವರಣ

ಸಂಗೀತದಲ್ಲಿ ಶೃಂಗಾರರಸದ ಅನುಭವವಾಗುವುದು ಪ್ರಧಾನವಾಗಿ ಆದರಣೀಯ ಪ್ರಬಂಧಗಳಲ್ಲಿ. ಇಲ್ಲಿ ನಾಯಕ-ನಾಯಕಿ ಭಾವದಲ್ಲಿ ಶೃಂಗಾರ ರಸವು ಒಂದು ಪರಿಮಳ ವಾತಾವರಣವನ್ನೇ ಸೃಜಿಸುತ್ತದೆ. ಇದು ಸ್ಥೂಲವಾಗಿ ಪುರುಷ-ಸ್ತ್ರೀ ಸಂಪರ್ಕದ ವಿವಿಧ ಚಿತ್ರ, ಪ್ರಕೃತಿ ಮತ್ತು ಅದರ ವಿಕಾರಗಳನ್ನು ಚಿತ್ರಿಸುವಂತೆ ಕಂಡುಬಂದರೂ, ಸೂಕ್ಷ್ಮವಾಗಿ

ಪರಿಶೀಲಿಸಿದಲ್ಲಿ ಅದರ ಅಂತಿಮಧ್ಯೇಯವೆಲ್ಲಾ ಭಕ್ತನು ತನ್ನ ಆರಾಧ್ಯ ದೈವದ ಪ್ರೀತಿ ವಿಶ್ವಾಸಗಳನ್ನು ಗಳಿಸಿ ಕಡೆಯಲ್ಲಿ ಅದರಲ್ಲಿ ಲೀನನಾಗುವುದೇ ಆಗಿದೆ. ಈ ಗೇಯ ಪ್ರಬಂಧಗಳೆಲ್ಲಾ ಈ ಮಧುರ ಭಕ್ತಿಯ ಪ್ರಕಾರಗಳಾದ ಅಲೌಕಿಕ ಪ್ರಣಯ, ಅದರ ವಿವಿಧ ಮನೋಭಾವಗಳನ್ನು ಜನಗಳಿಗೆ ಆಪ್ಯಾಯಮಾನವಾಗುವಂತೆಯೂ ಅರ್ಥವಾಗುವಂತೆಯೂ ಚಿತ್ರಿಸಿದರೂ - ಅದರ ಆಧ್ಯಾತ್ಮಿಕ ಸತ್ವವಾದ ಅಂತಿಮ ಜೀವಾತ್ಮ - ಪರಮಾತ್ಮ ಮಿಲನವನ್ನು ಸಾರುತ್ತಿವೆ.

ಈ ಗೇಯ ಪ್ರಬಂಧಗಳಲ್ಲಿ ಬಹುಪ್ರಸಿದ್ಧವಾದುದು - ಜಯದೇವನ ಗೀತಗೋವಿಂದ. ರಸ ಪ್ರಪಂಚದ ನಾಯಕ-ನಾಯಕಿಯರ ವಿವಿಧ ಪ್ರಕಾರಗಳೆಲ್ಲಾ ಅಲ್ಲಿ ಬಹು ಮನೋಜ್ಞವಾಗಿ ಚಿತ್ರಿಸಲ್ಪಟ್ಟಿವೆ. ಹಾಗೆಯೇ ಅದು ಹಿಂದೂಸ್ತಾನಿಯೇ ಆಗಲೀ ಕರ್ನಾಟಕ ಪದ್ಧತಿಯದ್ದೇ ಆಗಲೀ ಬಹುಪಾಲು ಕೃತಿಗಳೆಲ್ಲಾ ಈ ನಾಯಕ-ನಾಯಕಿ ಭಾವದಿಂದ ಪೋಷಿತವಾಗಿವೆ. ಇದನ್ನೇ ಭಕ್ತಿ ಪಂಥದವರ ಅಸಂಖ್ಯಾತ ಹಾಡುಗಳಿಗೂ ಹೇಳಬಹುದು. ಶೃಂಗಾರದ ಸೋನೆಯಂತಿರುವ ಕ್ಷೇತ್ರಯ್ಯನ ಪದಗಳ ಅಂತರ್ಭಾವವೆಲ್ಲಾ ಇದೇ ಅಲ್ಲವೇ? ಹಿಂದೂಸ್ತಾನಿ ಸಂಗೀತದ ಕೆಲವು ತುಮರಿ ಘಜಲ್‌ಗಳಂತೆ ಕರ್ನಾಟಕ ಪದ್ಧತಿಯ ಕೆಲವು ವರ್ಣ, ಪದ, ಜಾವಳಿಗಳಲ್ಲಿ ಈ ರಸಾಭಿವ್ಯಕ್ತಿಯು ಲೌಕಿಕ ರೀತಿಯಲ್ಲಿ ಚಿತ್ರಿಸಲ್ಪಟ್ಟಿದೆ ನಿಜ. ಆದರೆ ಪ್ರಾಯಶಃ ಭಾರತೀಯ ಸಂಗೀತದ ಗೇಯ ಪ್ರಬಂಧಗಳಲ್ಲಿ ಮುಕ್ಕಾಲು ಮೂರು ವೀಸಪಾಲೆಲ್ಲಾ ಈ ಅಲೌಕಿಕ ಶೃಂಗಾರವನ್ನೇ ಪ್ರಧಾನವಾಗಿ ಚಿತ್ರಿಸುತ್ತವೆ. ಆದರೆ ಈ ಶೃಂಗಾರ ಮತ್ತು ಅದರ ವಿವಿಧ ಪ್ರಕಾರಗಳೆಲ್ಲಾ ಅನುಭವವಾಗುವುದು ಶ್ರವ್ಯರೂಪದಲ್ಲಿ. ಅದರಂತೆ ದೃಶ್ಯರೂಪದಲ್ಲಿಯೂ ಈ ಅನುಭವವುಂಟುಮಾಡಲು ಭಾರತೀಯ ಸಂಗೀತದಲ್ಲಿ ಅವಕಾಶವಿರುವುದೂ ಗಮನಾರ್ಹವಾದುದು. ಅದು ರಾಗ-ರಾಗಿಣಿಗಳ ಚಿತ್ರಗಳ ಮೂಲಕ.

ರಾಗಗಳ ಸೌಂದರ್ಯವಾಗಲೀ, ಅವುಗಳ ರಸಭಾವವಾಗಲೀ ನಮಗೆ ಅನುಭವ ವಾಗುವುದು ಅವುಗಳ ನಾದಲಯಗಳಿಂದ, ಕಿವಿಯ ಮೂಲಕ. ಅದು ಕಣ್ಣಿಗೆ ಕಾಣುವ ಹಾಗೆ ಈ ರಾಗಮಾಲಾ ಚಿತ್ರಗಳು ಮಾಡುತ್ತಿವೆ, ಅವುಗಳಲ್ಲಿ ಚಿತ್ರಿತವಾದ ಸನ್ನಿವೇಶಗಳಿಂದ. ಕಿವಿಗೆ ಕೇಳಿಬರುವ ಕೇವಲ ನಾದಲಯಗಳಿಗೆ ಕಣ್ಣಿಗೆ ಕಾಣುವಂತಹ ಮತ್ತು ಆ ಭಾವವನ್ನೇ ಮನಸ್ಸಿಗೆ ಕೊಡುವ ಆಕಾರವನ್ನು ಸೃಜಿಸಲು ಹೇಗೆ ಸಾಧ್ಯ; ಆದರೆ ಇದು ಭಾರತೀಯ ಸಂಗೀತದಲ್ಲಿ ಪಡೆದುಬಂದಿದೆ. ಎಲ್ಲಾ ವಸ್ತುಗಳಲ್ಲಿಯೂ ದೇವರ ಅಂಶವನ್ನು ಕಾಣುವುದು. ನಮ್ಮ ಸಂಪ್ರದಾಯದಲ್ಲಿಯೇ ಬಂದಿಲ್ಲವೇ? ನಾದವನ್ನು ಬ್ರಹ್ಮ ಸ್ವರೂಪವೆಂದು ನಂಬಿದ ನಮ್ಮಲ್ಲಿ ಅದರ ಮುಖ್ಯ ದ್ರವ್ಯಗಳಾದ ಸ್ವರಗಳಿಗೂ ಆಕಾರ, ವರ್ಣ, ಕುಲಗೋತ್ರ, ಇತ್ಯಾದಿಗಳನ್ನು ಪುರಾತನ ಲಕ್ಷಣ ಗ್ರಂಥಕಾರರು ಹೇಳಿದ್ದಾರೆ. ಸ್ವರದ ನಂತರ-ರಾಗ, ಪ್ರಾರಂಭದಲ್ಲಿ ಒಂದೊಂದೂ ರಾಗಕ್ಕೂ ದೇವತಾ ವಿಗ್ರಹಗಳಂತೆ ಮೂರ್ತಿ ಲಕ್ಷಣಗಳು ನಿಗದಿ ಮಾಡಲ್ಪಟ್ಟಿದ್ದವು. ಅದು ಕ್ರಮೇಣ ಆಯಾ ರಾಗದ ರಸ-ಭಾವಕ್ಕನುಗುಣವಾಗಿ ಒಂದೊಂದು

ಸನ್ನಿವೇಶವು ಚಿತ್ರಿತವಾಗಲು ಪ್ರಾರಂಭವಾಯಿತು. ಅದರಲ್ಲಿ ಶೃಂಗಾರ ರಸಕ್ಕೆ ಅಗ್ರಸ್ಥಾನ ದೊರೆತುದೂ, ಅವರ ಅಂಗಗಳಾದ ನಾಯಕ-ನಾಯಕಿ ಲಕ್ಷಣಗಳೂ ಚಿತ್ರವಸ್ತುವಾದುದೂ ಸಹಜವೇ. ಇದರಂತೆ, ರಾಗಗಳಿಗೆ ನಾಯಕ ಲಕ್ಷಣಗಳಿಂದಲೂ, ರಾಗಿಣಿಗಳು ನಾಯಕಿ ಲಕ್ಷಣಗಳಿಂದಲೂ ಚಿತ್ರಿತವಾಗಿವೆ. ಈ ಪದ್ಧತಿ ಪ್ರಾಯಶಃ ಹಿಂದೂಸ್ತಾನಿ ಸಂಗೀತಕ್ಕೆ ಅನ್ವಯಿಸುವುದು. ಕರ್ನಾಟಕ ಪದ್ಧತಿಯಲ್ಲಿ ಈ ರಾಗ-ರಾಗಿಣಿ-ಪರಿವಾರ ಪದ್ಧತಿಯು ಪ್ರಚಲಿತವಾಗಿಲ್ಲ. ರಾಗವಿಬೋಧದ ಕರ್ತೃ ಸೋಮನಾಥನೊಬ್ಬನು ಮಾತ್ರ ಇದನ್ನು ಪ್ರತಿಪಾದಿಸಿದ್ದಾನೆ. ಇತರ ಒಂದೆರಡು ಗ್ರಂಥಗಳಲ್ಲಿ ಇದರ ವಿವರವಿದ್ದರೂ ಅದು ಮೂರ್ತಿ ಲಕ್ಷಣ ರೀತಿಯನ್ನನುಸರಿಸಿವೆ.

ನಾಯಕ ಲಕ್ಷಣ

ನಾಯಕರನ್ನು ವಿವರಿಸುತ್ತಾ ''ಧೀರೋದಾತ್ತಲಲಿತರೀ ಧಾರಿಣಿಯೋಳ್ ನೆಗಳ್ದ ಧೀರಶಾಂತೋದ್ಧತರೆಂ । ದಾದಯ ಪೇಳ್ದೀ ಗುಣಯುತರೋರಂತಿರೆ ನಾಲ್ವರಾದರೆಂತೆನಿ ಪೇಳ್ವಂ'' ಎಂದು ಹೇಳಿದ್ದಾನೆ ಸಾಳ್ವ. ಈ ಧೀರೋದ್ದಾತ, ಧೀರಲಲಿತ, ಧೀರಶಾಂತ ಮತ್ತು ಧೀರೋದ್ದಾತ ರೆಂಬ ನಾಲ್ಕೂ ನಾಯಕ ಲಕ್ಷಣಗಳನ್ನು ವರ್ಣಿಸುವ ಚಿತ್ರಗಳು ರಾಗಮಾಲೆಗಳಲ್ಲಿವೆ. ಈ ರಾಗ ಪರಿವಾರ ಪದ್ಧತಿಯಲ್ಲಿ ಪ್ರಾಯಶಃ ಒಂದೊಂದು ರಾಗಕ್ಕೆ ಆರಾರಂತೆ ರಾಗಿಣಿ (ಪತ್ನಿ)ಯರು ನಿಗದಿ ಮಾಡಲ್ಪಟ್ಟಿವೆ. ಈ ರಾಗ-ರಾಗಿಣಿ ಸಂಸಾರಗಳ ಹೆಸರು ಮತ್ತು ಸಂಖ್ಯೆಯಲ್ಲಿ ಕೆಲವು ಗ್ರಂಥಗಳಲ್ಲಿ ವ್ಯತ್ಯಾಸ ಕಂಡು ಬಂದರೂ ಅವುಗಳಲ್ಲಿ ಕೆಲವು ರಾಗ-ರಾಗಿಣಿಗಳ ಸ್ಥಾನ ಮತ್ತು ರೂಪಗಳ ಬಗೆಗೆ ಅಭಿಪ್ರಾಯ ಭೇದವಿಲ್ಲದಿರುವುದನ್ನೂ ನೋಡಬಹುದು.

ನಿದರ್ಶನವಾಗಿ ಭೈರವರಾಗ. ಇದನ್ನು ಪ್ರಾಯಶಃ ಎಲ್ಲ ಗ್ರಂಥಗಳೂ ಆದಿರಾಗವೆಂದು ಸಾರುತ್ತವೆ. ರೂಪವರ್ಣನೆಯೆಲ್ಲಾ ಶಿವನದೇ.

''ಗಂಗಾಧರಃ ಶಶಿಕಲಾ ತಿಲಕಸ್ತ್ರಿನೇತ್ರಃ। ಸರ್ಪೈರ್ವಿಭೂಷಿತತನುರ್ಗಜಕೃತ್ತಿವಾಸಃ॥ ಭಾಸ್ವತ್ರಿಶೂಲಕರ ಏಷ ನೃಮುಂಡಧಾರೀ। ಶುಭ್ರಾಂಬರೋ ಜಯತಿ ಭೈರವ ಆದಿರಾಗಃ॥'' ಎಂದು ಹೇಳಿದ್ದಾನೆ, ಚತುರ ದಾಮೋದರ ಪಂಡಿತ. ಇಂತಹ ಅಗ್ರಪೀಠದಲ್ಲಿ ಕುಳಿತ ದೇವತಾ ಮೂರ್ತಿ ಭೈರವನನ್ನು ''ಪ್ರಥಮ ರಾಗಭೈರವ। ಕ್ರೀಡತ ಕ್ರೀಡಾ ಮಹಲ ಚಹಲಮಯ ಬ್ರೀಡಾ ತಜಿಮಜಿಭಾವ್, ಭೂಲಿಭ್ರಾಮು ಭೈರವಚರತ ಭ್ರಮರ ಅತಿ ರತಿ ರಾವ್॥''

ಎಂದು ರಾತ್ರಿ ಪ್ರೇಯಸಿಯೊಂದಿಗೆ ಕುಳಿತು ಸುಖವಾಗಿ ಸಖಿಯರ ವೀಣಾಗಾನವನ್ನು ಆಸ್ವಾದಿಸುತ್ತಾ

"..... ಸುಖಿ ಮೃದುಭೋಗ ಪ್ರಸರಂ ಕಲಾಪ್ರಿಯಂ ಪೆಂಪೆಸೆದಿರ್ಪಾ ಧೀರಲಲಿತ ನಾಯಕನಕ್ಕುಂ॥"

ಎಂದು ಸಾಳ್ವನು ವಿವರಿಸಿದ ಧೀರಲಲಿತ ನಾಯಕನ ಆಕಾರಕ್ಕೆ ರಾಗಮಾಲಾ ಚಿತ್ರಗಳು ಪರಿವರ್ತಿಸಿ ಚಿತ್ರಿಸಿವೆ. ಇನ್ನು ಧೀರೋದಾತ್ತ ನಾಯಕನು ಯಾರಾಗಬಹುದು.

"ಕ್ಷಮೆಯುಳ್ಳಂ ಗಂಭೀರನ। ಸಮಸತ್ವಂ ಸತ್ಯಪಾಬ್ಧಿಯ ವಿಕತ್ಥನನ॥ ಛ್ಛಮಸಂ ನಿರಹಂಕೃತನುತ್ತಮ ಧೀರೋದಾತ್ತ ನಾಯಕಾಖ್ಯಮನಾಳ್ಗುಂ॥"

ಎಂದು ಸೂಚಿಸಿ ಸಾಳ್ವ, ಇದಕ್ಕೆ ನಿದರ್ಶನವಾಗಿ ಶ್ರೀರಾಮನನ್ನೇ ವರ್ಣಿಸುತ್ತಾನೆ. ಸಂಗೀತದಲ್ಲಿ ಶ್ರೀರಾಮಸ್ತುತಿ ರೂಪಕವಾದ ಕೀರ್ತನೆಗಳೆಲ್ಲಾ ಅದರಲ್ಲಿಯೂ ತ್ಯಾಗರಾಜರ ಕೀರ್ತನೆಗಳೆಲ್ಲಾ ಶ್ರೀರಾಮನ ಧೀರೋದಾತ್ತ ನಾಯಕಗುಣ ವಿಶೇಷಗಳನ್ನೇ ರಮ್ಯವಾಗಿ ವರ್ಣಿಸಿವೆ.

ಇನ್ನು ನಾಯಿಕೆಯರ ವಿಷಯ,

"ಸುಕವಿಗಳಿಂ ಸ್ವಾಧೀನಪತಿಕೆ ಗತಭರ್ತಾರಿಕೆ ಯಭಿಸಾಂದಿತೆ ಯಭಿಸಾರಿಕೆ ವಿರಹೋತ್ಕಂದಿತೆ ವಾರ್ಸಸಜ್ಜಿಕೆ ವಿಪ್ರಲಬ್ಧೆ ಖಂಡಿತೆಯನಿಕುಂ॥"

ಎಂದು ಸಾಳ್ವನು ಹೇಳಿದ ಎಂಟೂ ಶೃಂಗಾರ ನಾಯಿಕೆಯರೂ ರಾಗಿಣಿ ಚಿತ್ರಗಳಲ್ಲಿ ಕಂಡುಬರುತ್ತಾರೆ. ನಿದರ್ಶನವಾಗಿ ಈಗ ಮೊದಲನೆಯವಳಾದ ಸ್ವಾಧೀನ ಪತಿಕಾನಾಯಿಕೆಯನ್ನು ಪರೀಕ್ಷಿಸುವ.

"ಸತತಂ ಸ್ವಾಧೀನ ಪತಿಕೆ ಪತಿಯಂ ಸ್ವಾಧೀನಮಾಗಿ ತಡೆದಂಗನೆ ..."

ಎಂದು ಹೇಳಿ ಸಾಳ್ವನು ಕೊಡುವ ವಿವರಗಳಿಗನುಗುಣವಾಗಿರುವ ಕೆಲವು ರಾಗಿಣಿಗಳ ವಿವರಗಳೂ ಚಿತ್ರಗಳೂ ಇವೆ. ಇದರಲ್ಲಿ ಕೆಲವು ಪ್ರಿಯನನ್ನು ತಡೆದು ನಿಲ್ಲಿಸಿದಂತೆಯೂ ಇನ್ನು ಕೆಲವುದರಲ್ಲಿ ಪತಂಗವನ್ನು ಆಕರ್ಷಿಸಿ ತಡೆಯಲನುವಾದ ಪ್ರಭೆಯ ನೆನಪು ಕೊಡುವ ರೀತಿಯಲ್ಲಿ ಸಿಂಗರಿಸಿಕೊಂಡು ಕುಳಿತಂತೆಯೂ ಚಿತ್ರಿಸಲ್ಪಟ್ಟಿವೆ.

ಮೊದಲನೆಯದಕ್ಕೆ ನಿದರ್ಶನವಾಗಿ ರಾಗಕಲ್ಪದ್ರುಮದಲ್ಲಿ ವರ್ಣಿಸಲ್ಪಟ್ಟ

"ರಕ್ತಾಂಬರಾ ರಕ್ತಸುಲೋಚನಾ ಚ ಸೂರ್ಯಪ್ರಭಾ ಸೂರ್ಯಮುಖಿ ಮನೋಜ್ಞಾ।
ಕಾಂತೇ ಸಮಿಪೇ ಕಮನೀಯ ಕಂಠಾ ಪ್ರದೀಪಿಕಾ ದೀಪಕ ರಾಗಿಣೀಯಮ್॥"

ಪ್ರದೀಪಿಕಾ ಅಥವಾ ಪಟ್ ದೀಪ್ ರಾಗದ ವರ್ಣನೆಯನ್ನು ನೆನೆಯಬಹುದು. ಒಳ್ಳೆಯ ರೂಪ ಕಾಂತಿಯಿಂದ ಕೂಡಿದ ಪ್ರದೀಪ ತನ್ನ ನಲ್ಲನಾದ ದೀಪಕರಾಗದೊಂದಿಗೆ ಲಲ್ಲೆಯಾಡುತ್ತಿದ್ದಾಳೆ.

ಎರಡನೆಯದಾಗಿ ಒಬ್ಬಳೇ ಸಿಂಗರಿಸಿಕೊಂಡು ಸಿದ್ಧವಾಗಿರುವ ರೀತಿಯಲ್ಲಿರುವ ಪುಂಡರೀಕ ವಿಟ್ಠಲನ ತೋಡಿರಾಗ ವರ್ಣನೆಯು ಬಹು ಮನೋಜ್ಞವಾಗಿದೆ.

"... ಗೌರಾಂಗೀಮೂರ್ಧ್ನಿಂ ವೇಣೀಂ ಕನಕಮಣಿಮಯಂ ಕರ್ಣಪುಷ್ಪಂ ದಧಾನಾ। ಪ್ರೌಢೇಷದ್ರಕ್ತನೇತ್ರಾ ಯುವನಸುವನಿತಾ ವಸ್ತ್ರವೇಷಾಧಿಕಾಢ್ಯಾ॥ ದ್ರಾಕ್ಷಾಂಸೀತ್ವಾ ಪ್ರಭಾತೆ ವಿಲತಿಚತುರಾಯಾವನೀ ಶೋಡಿಕಾಸಾ॥"

ತೋಡಿ-ರಾಗಿಣಿ

ಇದರಂತೆ ತನ್ನ ನಲ್ಲನಾದ ಹಿಂದೋಳ ರಾಗವನ್ನು ನಿರೀಕ್ಷಿಸುತ್ತಾ ಕುಳಿತ ಸರ್ವಾಭರಣ ಭೂಷಿತೆ, ದ್ರಾಕ್ಷಾಪಾತ್ರವನ್ನು ಹಿಡಿದ ಯವನ ಸುಂದರಿ ತೋಡಿ. ಇದು ಇತರ ಗ್ರಂಥಗಳಲ್ಲಿ ಕಾಣಬರುವ ತೋಡಿ ರಾಗಿಣಿಯ ವರ್ಣನೆಗಿಂತ ವ್ಯತ್ಯಾಸವಾಗಿದೆ. ಅವುಗಳಲ್ಲಿ ವಿರಹವೇದನೆಯಿಂದ ದುಃಖಿತಳಾದ ಜಿಂಕೆಗಳ ಮಧ್ಯೆ ನಿಂತ ವೀಣಾಪಾಣಿ ಸುಂದರಿಯಂತೆ ತೋಡಿ ರಾಗಿಣಿಯು ಚಿತ್ರಿಸಲ್ಪಟ್ಟದ್ದಲ್ಲಿ ಪುಂಡರೀಕವಿಠ್ಠಲನು ಕಾಮಾತುರಳಾದ ಯವನ ಸ್ತ್ರೀಯಂತೆ ಚಿತ್ರಿಸಿರುವುದು ಗಮನಾರ್ಹವಾಗಿದೆ. ಇದರ ತತ್ವವನ್ನರಿಯಬೇಕಾದರೆ ತೋಡಿರಾಗದ ಹಿನ್ನೆಲೆಯನ್ನು ಪರೀಕ್ಷಿಸಬೇಕು. ಈ ರಾಗಕ್ಕೆ ಪೂರ್ವದ ಹೆಸರು - ತುರುಷ್ಕ. ಅನಂತರ ತುರುಷ್ಕ ತೋಡಿಯಾಗಿ, ತೋಡಿಯಾಗಿದೆ. ಈ ಹಿನ್ನೆಲೆಯಲ್ಲಿ ಸ್ವಾಧೀನಪತಿಕೆಯ ರೀತಿಯಲ್ಲಿ ಚಿತ್ರಿಸಲ್ಪಟ್ಟ ಪುಂಡರೀಕವಿಠ್ಠಲನ ತೋಡಿಯು ಬಹು ಮಾರ್ಮಿಕವಾಗಿದೆ, ಹಾಗೆ ಅರ್ಥಬದ್ಧವಾಗಿದೆ.

ಇದರಂತೆ ರಾಗಮಾಲೆಗಳಲ್ಲಿ ಆಕರ್ಷಣೀಯವಾಗಿ ಚಿತ್ರಿತವಾದ ಇನ್ನೊಬ್ಬ ನಾಯಿಕೆ-ಅಭಿಸಾರಿಕೆ.

"ಪೇರಡವಿಯಿರುಳ್ ಪಗಲೆನ್ನದೆ ಬಿಡದೆ ಯಲ್ಕನಂ-ಮೊಪನಲ್ಲಿಗಭಿಸಾರಿಕೆ ತಾಂ॥"

ಎನ್ನುತ್ತಾನೆ - ಸಾಳ್ವ. ನಲ್ಲನನ್ನು ಕೂಡಲು ಆತುರಳಾಗಿ ಹೋದ ಈ ಅಭಿಸಾರಿಕೆಗೆ ಕತ್ತಲೆ, ಕಾರ್ಮುಗಿಲು, ಮಿಂಚು, ಹಾವು ಯಾವುದರ ಅರಿವೂ ಇಲ್ಲ. ಲಕ್ಷ್ಯವೂ ಇಲ್ಲ. ಸೌರಾಷ್ಟ್ರ, ಜೌಳಿ, ವೇಳಾವಳಿ ಮುಂತಾದ ರಾಗಿಣಿಗಳೆಲ್ಲಾ ಹೀಗೆಯೇ ವರ್ಣಿಸಲ್ಪಟ್ಟಿವೆ. ಇದರಲ್ಲಿ ಪುಂಡರೀಕವಿಠ್ಠಲನ ಗುಣಕರಿ ರಾಗಿಣಿಯ ವರ್ಣನೆಯು ಅರ್ಥಪೂರ್ಣವಾಗಿದೆ.

"... ವಕ್ಷೋರ್ಜಹಾರಾಯತಾಕ್ಷೀ। ಸಿತಕರವಸನಾ ರಕ್ತಕೂರ್ಪಾಸಿ ಕಾಯಾ। ನಾನಾಶೃಂಗಾರಭೂಷಾ ಮೃದುಮಧುವಚನಾಶ್ಯಾಮಲಾಂಗಿ ಸುತನ್ವೀ। ಭರ್ತ್ವಸಂಕೇತಿಕಂ ಸದಿಮಲ ಗುಣಕರಿ ಕಾಮಿನಿ ಯಾ ತಿಸಾಯಮ್॥"

ನಾನಾ ರೀತಿಯಾಗಿ ಸಿಂಗರಿಸಿಕೊಂಡು ಪೂರ್ವಸಂಕೇತ ಸ್ಥಳದಲ್ಲಿ ತನ್ನ ನಲ್ಲನಾದ ಗುರ್ಜರ ರಾಗವನ್ನು ನಿರೀಕ್ಷಿಸುತ್ತಿರುವ ನಾಯಕಿ - ಗುಣಕರಿ ರಾಗಿಣಿ.

ಇದರಂತೆ ಇನ್ನೊಂದು ನಾಯಿಕಾ-ಭಾವವನ್ನು ನೋಡುವ,

"ವಿರಹೋತ್ಕಂಠಿತೆ ಪತಿ ತಡೆದಿರ ಪಿಂಗತಿದುಃಖಮುಳ್ಳವಳ್..."

ಎಂದು ವರ್ಣಿಸುತ್ತಾನೆ - ಸಾಳ್ವ. ವಿರಹೋತ್ಕಂಠಿತಾ ನಾಯಿಕೆಯನ್ನು ಈ ನಾಯಿಕಾಭಾವವು ಕಕುಭ, ಕಾಮೋದ, ಮಲ್ಲಾರ ಮುಂತಾದ ರಾಗಿಣಿಗಳ ವರ್ಣನೆಗಳಲ್ಲಿ ಅನುಭವವಾಗುತ್ತದೆ. ಇವುಗಳಲ್ಲಿ ಪಟಮಂಜರಿ ರಾಗಿಣಿಯ ವರ್ಣನೆಯು ಬಹು ಅರ್ಥಪೂರ್ಣವಾಗಿದೆ.

"ವಿಯೋಗಿನಿ ಕಾಂತವಿಶೀರ್ಣಗಾತ್ರಾ, ಸ್ರಜಂ ವಹಂತೀ ವಪುಷಾಚ್‌ಶುಷ್ಕಾ ಆಶ್ವಾಸ್ಯ ಮಾನಾ ಪ್ರಿಯಯಾಚಸಖ್ಯಾ ವಿದೂಸರಾಂಗೀ ಪಟಮಂಜರಿಯಮ್॥"

ಎನ್ನುತ್ತಾನೆ, ದಾಮೋದರ ಪಂಡಿತ ತನ್ನ ಸಂಗೀತದರ್ಪಣದಲ್ಲಿ. ನಲ್ಲನ ವಿಯೋಗ ದುಃಖದಿಂದ ಬಳಲಿಬೆಂಡಾಗಿ ಸಖಿಯೊಂದಿಗೆ ದುಃಖ ತೋಡಿಕೊಳ್ಳುವಂತೆ ವರ್ಣಿಸಲ್ಪಟ್ಟಿದ್ದಾಳೆ ಪಟಮಂಜರಿ. ಲಘುಮನದಾಸನ ಹಿಂದಿಯ ದೋಹಾ ಇದೇ ರಿತಿಯಲ್ಲಿದೆ.

"ಪಟಮಂಜರಿ ವಿಯೋಗಿನಿ ನಾರೀ। ಮದನರಹಿ ತನಮನಪರಜಾರೀ। ಪಿಯಬಿನ ಸಕಲಗಯೀ ಜಾಮಿನಿ॥ ನೀಚೋವದನ ಕಿಯೇ ಭಾಮಿನಿ॥"

ರಾಗಮಾಲಾ ಚಿತ್ರಗಳಲ್ಲಿ ಪಟಮಂಜರಿಯು ಇದೇ ರೀತಿ ಚಿತ್ರಿಸಲ್ಪಟ್ಟಿದೆ.

ಇದೇ ರೀತಿ ಇತರ ನಾಯಕ-ನಾಯಿಕೆಯರೂ ಅವರ ನಾನಾ ಪ್ರಭೇದಗಳೂ ಈ ರಾಗ-ರಾಗಿಣಿಗಳ ವರ್ಣನೆಗಳಲ್ಲಿ ಅನುಭವವಾಗುತ್ತವೆ. ರಾಗಮಾಲಾ ಚಿತ್ರಗಳಲ್ಲಿ ಅವುಗಳ ರೂಪಸೌಂದರ್ಯ ಮತ್ತು ವರ್ಣವೈವಿಧ್ಯಗಳ ಅಪೂರ್ವ ಅನುಭವವೂ ಆಗುತ್ತದೆ. ಸಂಗೀತವು ರಸಾನುಭವಿಗಳಿಗೆ ಬಹು ಹುಲುಸಾದ ಕ್ಷೇತ್ರ. ★ ★ ★ ★ ★ ★ ★ ★ ★ ★ ★ ★

ಪ್ರಜಾವಾಣಿ 1970

3. ಸಂಸ್ಕೃತಿಯ 'ಗಾಳಿ ಗೋಪುರಗಳು'

ಫೆಬ್ರುವರಿ ತಿಂಗಳ ಮಧ್ಯಭಾಗದಲ್ಲಿ ಮೈಸೂರಿನಲ್ಲಿ ಸಾಹಿತಿ, ಕಲಾವಿದ ಹಾಗೂ ತಜ್ಞರ ಒಂದು ವಿಶೇಷ ಸಭೆ. ರಾಜ್ಯದ ಮುಖ್ಯಮಂತ್ರಿ ಮತ್ತು ಸಾಂಸ್ಕೃತಿಕ ವಿಭಾಗದ ಮಂತ್ರಿಗಳಿಬ್ಬರ ಆಹ್ವಾನದ ಮೇರೆಗೆ ಈ ಕೂಟ ಕೂಡಿತು. ಅದರ ಉದ್ದಿಷ್ಟ ಆಯಾ ಕ್ಷೇತ್ರಗಳ ಪರಿಣತರು ಸಂಬಂಧಪಟ್ಟ ಸಮಸ್ಯೆಗಳ ಬಗೆಗೆ ಚರ್ಚಿಗೆ ಕ್ಷೇತ್ರದ ಮುನ್ನಡೆಗೆ ಸಾಧಕವಾದ ಸಲಹೆಗಳನ್ನು ಸರಕಾರಕ್ಕೆ ತಿಳಿಸುವುದು. ಈ ಸಲಹೆಗಳು ಸರಕಾರವು ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಪಟ್ಟ

ನಿರ್ಧಾರಗಳನ್ನು ಕೈಕೊಳ್ಳಲು ಸಹಾಯಕ ಎಂಬುದು ಈ ಇಬ್ಬರೂ ಮಂತ್ರಿಗಳು ಕಳುಹಿಸಿದ ಆಹ್ವಾನದ ಸಾರಾಂಶ.

ಅನೇಕ ವಿಷಯಗಳಲ್ಲಿ ಸರಕಾರವು ಏಕಪಕ್ಷೀಯವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಪದ್ಧತಿ. ಅದರಲ್ಲಿಯೂ ಸಾಂಸ್ಕೃತಿಕ ವ್ಯವಹಾರಗಳ ಬಗೆಗೆ ಯಾರನ್ನೂ ಕೇಳುವ ವಾಡಿಕೆ ಇರಲಿಲ್ಲ. ಇದಕ್ಕೆ ಒಂದು ಕಾರಣ, ಎಂದರೆ ಸರಕಾರಿ ವಲಯಗಳಲ್ಲಿ ಸಂಸ್ಕೃತಿ, ಸಾಂಸ್ಕೃತಿಕ ವ್ಯವಹಾರಗಳೆಂದರೆ– ಮನರಂಜನೆ, ಅದಕ್ಕಿಂತ ಮೀರಿದ ತತ್ವ ಅರ್ಥ ವ್ಯಾಪ್ತಿಗಳಿವೆ ಎಂಬುದು ಗಣನೆಗೆ ಬಂದಂತಿಲ್ಲ. ಈ ಹಿನ್ನೆಲೆಯಿಂದ, ಈ ಸಭೆಗೆ ಒಂದು ಮಹತ್ವವಿದೆ. ಸಂಸ್ಕೃತಿಗೆ ಪರೋಕ್ಷವಾಗಿಯಾದರೂ ಸಂಬಂಧಪಟ್ಟಂತೆ ಇಂತಹದೊಂದು ಸಭೆ ಹಿಂದೆಯೂ ಆಗಿದೆ. ವಿಶ್ವಕನ್ನಡ ಸಮ್ಮೇಳನ ನಡೆಸುವ ಬಗೆಗೆ ರಾಮಕೃಷ್ಣ ಹೆಗಡೆಯವರು ಇಂತಹದೊಂದು ಸಭೆ ಕರೆದಿದ್ದರು. ಸಮ್ಮೇಳನ ನಡೆಸಬೇಕೆ ಬೇಡವೇ ಎಂಬ ವಿಷಯಕ್ಕೆ ಮಾತ್ರ ಆ ಸಭೆಯ ಉದ್ದೇಶ ಮಿತಿಗೊಂಡಿತ್ತು. ಆದರೆ ಬಂಗಾರಪ್ಪ ಮತ್ತು ರಮೇಶ್ ಇಬ್ಬರೂ ಏರ್ಪಡಿಸಿದ ಈ ಸಭೆ ರಾಜ್ಯದ ಸಂಸ್ಕೃತಿಯ ವಿವಿಧ ಮುಖಗಳು. ಅವುಗಳ ವಿಧವಿಧ ಸಮಸ್ಯೆಗಳೇ ಮುಂತಾದುವುಗಳನ್ನು ಒಂದೊಂದೂ ಕ್ಷೇತ್ರವಾಗಿ ಚರ್ಚೆಗೆ ಸರಕಾರಕ್ಕೆ ಸಲಹೆ ನೀಡುವ ಉದ್ದಿಷ್ಟದಿಂದ ಕೂಡಿತ್ತು. ಹಾಗೆಯೇ ಸಂಜೆಯವರೆಗೂ ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜಾನಪದ, ಲಲಿತಕಲೆ, ಚಲನಚಿತ್ರ ಮುಂತಾದ ಕ್ಷೇತ್ರಗಳಲ್ಲಿ ನಿಕಟ ಸಂಪರ್ಕಪಡೆದ ತಜ್ಞರು ಚರ್ಚಿಸಿ ಸಲಹೆಗಳನ್ನಿತ್ತರು. ಸಲಹೆಗಳೂ, ಮೌಲ್ಯಗಳೂ ಈ ನಾನಾಕ್ಷೇತ್ರಗಳ ಪಕ್ವತೆಯನ್ನು ಪ್ರತಿಧ್ವನಿಸುವಂತಿದ್ದುವು. ಆದರೆ ಅವುಗಳಲ್ಲಿ ಎಲ್ಲದರಲ್ಲಿಯೂ ಕಂಡುಬಂದ ಒಂದು ಅಂಶ – ಅಕಾಡೆಮಿಗಳು. ಅವುಗಳ ರಚನೆ, ಆದರೆ ಹಿಂದಿನ ತತ್ವ ಕಾರ್ಯವಿಧಾನ ಸೌಲಭ್ಯ ಮುಂತಾದವು.

ಪ್ರಜಾಸತ್ತಾತ್ಮಕ ಸರಕಾರ ಬಂದಾಗಿನಿಂದ ಕೇಳಿಬರುತ್ತಿರುವ ಒಂದು ಪಲ್ಲವಿ– ''ಹಿಂದೆ ರಾಜಮಹಾರಾಜರು ಸಂಸ್ಕೃತಿ ಮತ್ತು ಕಲೆಗಳಿಗೆ ಉದಾರ ಪ್ರೋತ್ಸಾಹ ಕೊಡುತ್ತಿದ್ದರು. ಈಗ ಪ್ರಜಾ ರಾಜ್ಯದಲ್ಲಿ ಸರಕಾರವು ಆ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದೆ''. ಇದನ್ನು ಸೂಕ್ಷ್ಮವಾಗಿ ನೋಡಿದರೆ ಸ್ವಲ್ಪ ಭಾಗ ಭ್ರಮೆ ಎನಿಸದಿರದು. ಹಿಂದೆ ರಾಜಮಹಾರಾಜರು ಪ್ರೋತ್ಸಾಹವಿತ್ತರು. ನಿಜ, ಆದರೆ ಆ ಪ್ರೋತ್ಸಾಹ ಬಹುತೇಕ ಅವರ ಆ ಸ್ಥಾನದಲ್ಲಿ ಸಾಕಿಕೊಂಡಿದ್ದ ದಿಗ್ಗಜಗಳಿಗೆ, ಅಥವಾ ಪ್ರೋತ್ಸಾಹವನ್ನು ಅಪೇಕ್ಷಿಸಿ ಬಂದ ಕೆಲವರಿಗೆ ಮಾತ್ರ. ಸಂಸ್ಕೃತಿ ಮತ್ತು ಕಲೆ ಬೆಳೆದು ಬಂದುದು ಈ ಕೆಲವೇ ಮಹನೀಯರಿಂದಲ್ಲ. ಅದು ಬೆಳೆದುದು ಜನಗಳ ಮನದಲ್ಲಿ. ಜೀವನದ ಒಂದು ಅಂಗವಾಗಿ ಸಣ್ಣ ಊರುಗಳ ವಿದ್ವಾಂಸರು, ರಾಮಮಂದಿರಗಳು, ಭಜನ ಕೂಟಗಳು, ಗಮಕಿಗಳು, ದೇವಾಲಯಗಳು, ಉತ್ಸವಗಳು ಮನೆಯ ಹೆಂಗಸರು, ಅಲ್ಲದೆ ಗ್ರಾಮಾಂತರಗಳಲ್ಲಿ ವಿಧವಿಧವಾದ ಕೆಲಸಗಳಲ್ಲಿ ತೊಡಗಿದ್ದ ಜನತೆಗಳ ಮಧ್ಯೆ. ಇವರುಗಳು ಕ್ಷೇತ್ರವನ್ನು ಹಸನು ಮಾಡಿದವರು. ಅವರ ಮಧ್ಯೆ ಹುಟ್ಟಿದ ಪ್ರತಿಭಾವಂತರಲ್ಲಿ,

ಇನ್ನೂ ಯಶಸ್ಸು ಸಂಪಾದಿಸಬೇಕೆಂಬ ಹಂಬಲ ಹೆಚ್ಚಿ ಖ್ಯಾತಿಯು ಇದ್ದ ಕೆಲವರು ರಾಜಾಶ್ರಯ ಅಪೇಕ್ಷಿಸಿ ಬಂದು ಆ ಬಂಗಾರದ ಪಂಜರದೊಳಗೆ ಸೇರಿದರು. ಅಷ್ಟೇ. ಇವರಿಗಿಂತ ಸಾವಿರಪಾಲು ಹೆಚ್ಚಾಗಿದ್ದು ಸಂಸ್ಕೃತಿಯನ್ನು ಜೀವನದ ಒಂದು ಅಂಗವಾಗಿ ಭಾವಿಸಿ, ಪ್ರತಿಫಲಕ್ಕಿಂತ, ಕಲೆಗಳು ಬದುಕಿನ ಭಾಗವಾಗಿ ರೂಢಿಸಿಕೊಂಡಿದ್ದ ಜನತೆ ಈ ಸಂಸ್ಕೃತಿ ಕಲೆಗಳ ನಂದಾದೀಪವನ್ನು ಬೆಳಗಿಕೊಂಡು ಬಂದಿತು. ಈ ದೃಷ್ಟಿಯಿಂದ ರಾಜಮಹಾರಾಜರುಗಳಿಗಿಂತ ಇಂದಿನ ಸರಕಾರದ ಜವಾಬುದಾರಿ ಹೆಚ್ಚಿನದು. ಒಟ್ಟು ಸಮಾಜದ ದೃಷ್ಟಿಯಿಂದ ಕೆಲಸ ಮಾಡಬೇಕಾಗುತ್ತದೆ. ಹಾಗೆ ನೋಡಿದರೆ ಅರಸೊತ್ತಿಗೆಯ ಕಾಲಕ್ಕಿಂತ ಈಗ ಎಷ್ಟೋ ಹೆಚ್ಚು ಕೆಲಸವಾಗಿದೆ. ಆದರೆ ನಿರ್ದಿಷ್ಟ ಗುರಿಯಿಲ್ಲ, ವಿತರಣೆಯಿಲ್ಲ. ಆದುದರಿಂದ ನಿರೀಕ್ಷಿಸಿದ ಪ್ರಮಾಣದ ಪ್ರಗತಿ ಆಗಿಲ್ಲ.

35 ವರ್ಷಗಳ ಹಿಂದೆ ಹಂಚಿಹೋಗಿದ್ದ ಕರ್ನಾಟಕದ ಹೋಳುಗಳೆಲ್ಲಾ ಸೇರಿ ಹೊಸ ರಾಜ್ಯ ಸ್ಥಾಪನೆಯಾಯಿತು. ಅಂದು ಎರಡು ಅಕಾಡೆಮಿಗಳಿದ್ದವು – ಮೈಸೂರು ರಾಜ್ಯ ಮತ್ತು ಕೊಡಗುಗಳಲ್ಲಿ, ಅಂದು ಸಾಂಸ್ಕೃತಿಕ ವ್ಯವಹಾರವೆಲ್ಲಾ ವಿದ್ಯಾ ಇಲಾಖೆಯ ಅಧೀನದಲ್ಲಿತ್ತು. ಮುಂದೆ ಸಂಸ್ಕೃತಿ ಇಲಾಖೆ ರಚಿತವಾದ ಮೇಲೂ ಈ ವ್ಯವಹಾರಗಳು ಎರಡು ಮೂರು ಇಲಾಖೆಗಳಲ್ಲಿ ಹಂಚಿಹೋಗಿ ಈಚೆಗೆ ಇದು ಬದಲಾಗುತ್ತಿದೆ. 35 ವರ್ಷಗಳ ಹಿಂದೆ ಒಂದೇ ಮೈಸೂರು ರಾಜ್ಯವಾಗಿ, 20 ವರುಷಗಳ ನಂತರ ಕರ್ನಾಟಕವಾದ ಮೇಲೆ ಸಾಂಸ್ಕೃತಿಕ ವಿಚಾರದಲ್ಲಿ ನಿರ್ದಿಷ್ಟವಾದ ರೀತಿಯಲ್ಲಿ ಚಿಂತನ ಮಾಡಬೇಕಿತ್ತು. ಸಂಸ್ಕೃತಿ ಎಂದರೆ ಕೇವಲ ಸಂಗೀತ, ನೃತ್ಯ ಕಾರ್ಯಕ್ರಮಗಳು ಅಥವಾ ಉತ್ಸವಗಳಲ್ಲ. ಸಾರ್ವಜನಿಕ ಹಣ ಖರ್ಚು ಮಾಡಿದಾಗ ಸಮಾಜಕ್ಕೂ ಅದರಿಂದ ಸ್ವಲ್ಪವಾದರೂ ಪ್ರಯೋಜನವಾಗಬೇಕು ಎಂಬ ಅಂಶ ನೆನಪಿನಲ್ಲಿಡಬೇಕು. ಆದುದರಿಂದ ಈ ಸಾಂಸ್ಕೃತಿಕ ವ್ಯವಹಾರಗಳಲ್ಲಿಯೂ ಕೆಲವು ವಿಷಯಗಳಿಗೆ ಆದ್ಯತೆ ಕೊಡಬೇಕು. ಹೊಸ ರಾಜ್ಯವಾದ ಮೇಲೆ ಕರ್ನಾಟಕದ್ದೇ ವಿಶೇಷ ವ್ಯಕ್ತಿತ್ವ ರೂಪಿತವಾಗಬೇಕು. ಅದಾಗಬೇಕಾದರೆ ಜನತೆಯಲ್ಲಿ ಭಾವೈಕ್ಯತೆ ಉಂಟಾಗಬೇಕು, ಬೆಳೆಯಬೇಕು. ಕಾಲು ಶತಮಾನದ ನಂತರವೂ ಇದಾಗಿಲ್ಲವೆನ್ನಬೇಕು. ಅನಂತರ ಒಳನಾಡಿನಲ್ಲಿ ಭಾವೈಕ್ಯಕ್ಕೆ ಶ್ರಮಿಸುವಂತೆಯೇ ಹೊರನಾಡಿನಲ್ಲಿರುವ ಕನ್ನಡಿಗರನ್ನು ಈ ಪ್ರಕಾರದೊಳಕ್ಕೆ ತರಬೇಕು. ಚಾರಿತ್ರಿಕ ಕಾರಣಗಳಿಂದ ಅವರು ಹೊರ ರಾಜ್ಯದಲ್ಲಿ ನೆಲೆಸಬೇಕಾಯಿತು. ಅವರಲ್ಲಿ ಅನೇಕ ಪ್ರತಿಭಾವಂತರಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಕಾರ್ಯಕ್ರಮಗಳನ್ನು ರೂಪಿಸುವಾಗ ಹಾಗೂ ಹೊರಗೆ ಬಿತ್ತರಿಸುವಾಗ ಅವರುಗಳ ಸಹಕಾರ ಪಡೆಯಬೇಕು. ಹೊರನಾಡಿನಲ್ಲಿ ಕನ್ನಡಿಗರು ಕಟ್ಟಿದ ಸಾಂಸ್ಕೃತಿಕ ಸಂಸ್ಥೆಗಳನ್ನು ಬಲಪಡಿಸಬೇಕು.

ಮಾಹಿತಿ ಅಗತ್ಯ

ಯಾವ ಕಾರ್ಯಕ್ರಮಗಳನ್ನು ರೂಪಿಸಬೇಕಾದರೂ ಕ್ಷೇತ್ರಕ್ಕೆ ಸಂಬಂಧಪಟ್ಟ ಮೂಲ ಮಾಹಿತಿಗಳು ಅವಶ್ಯಕ. ರಾಜ್ಯದಲ್ಲಿ ಬೆಳೆದುಬಂದ ಉಪಸಂಸ್ಕೃತಿಗಳು, ವಿವಿಧ

ಕಲಾಪ್ರಕಾರಗಳು, ಪ್ರಸಿದ್ಧ ಕೇಂದ್ರಗಳು, ಪ್ರಸಿದ್ಧ ವ್ಯಕ್ತಿಗಳು, ದೃಢವಾಗಿ ಕೆಲಸ ಮಾಡುತ್ತಿರುವ ಸಂಘ ಸಂಸ್ಥೆಗಳು, ವಿವಿಧ ಕಲಾಕ್ಷೇತ್ರಗಳ ಸದ್ಯದ ಸ್ಥಿತಿ ಮುಂತಾದವುಗಳ ಮಾಹಿತಿ ಯಾವ ಯೋಜನೆ ರೂಪಿಸಬೇಕಾದರೂ ಅತ್ಯಾವಶ್ಯಕ. ರಾಜ್ಯದಲ್ಲಿ ಒಂದೇ ಕಡೆಯಲ್ಲಿ ಈ ಮಾಹಿತಿ ದೊರೆಯುವುದಿಲ್ಲ. ಕೆಲವು ವಿಷಯಗಳ ಬಗೆಗೆ ಮಾಹಿತಿಗಳೇ ಸಂಗ್ರಹವಾಗಿಲ್ಲ. ಒಂದು ಸಾಂಸ್ಕೃತಿಕ ಕೈಪಿಡಿ ಬಹು ಅಗತ್ಯ. ಇದಕ್ಕೆ ಆದ್ಯತೆ ಕೊಡಬೇಕು. ಈ ಯೋಜನೆಗಳೂ, ರಾಜ್ಯದ ವಿವಿಧ ಭಾಗದ ಜನತೆಯಲ್ಲಿ ಜಾಗೃತಿ ಉಂಟಾಗುವ ರೀತಿಯಲ್ಲಿರಬೇಕು. ಅಲ್ಲದೆ ಹೊರಗಡೆಯೂ ಕರ್ನಾಟಕದ ಪ್ರಾಶಸ್ತ್ಯ ಹೆಚ್ಚುವ ರೀತಿಯಲ್ಲಿ ಇರಬೇಕು.

ಈ ಕಾಲು ಶತಮಾನದಲ್ಲಿ ಸರಕಾರದ ಕಡೆಯಿಂದ ಮಾಡಿದ ಅನೇಕ ಆಶ್ವಾಸನೆ, ವಾಗ್ದಾನಗಳ ಬಹುಭಾಗ ಕಾರ್ಯಗತವಾಗದೆ, ಕೇವಲ ತಮಟ ಧ್ವನಿಯಾಗಿದೆ. ಅವುಗಳ ಒಂದು ಪಟ್ಟಿಯನ್ನೇ ಮಾಡಬಹುದು. ಅದರಲ್ಲಿ ಒಂದೆರಡನ್ನು ನೆನಪಿಸಿಕೊಳ್ಳುವ ಮೊದಲನೆಯದು ಅಕಾಡೆಮಿಗಳ ಕಟ್ಟಡ. 23 ವರುಷಗಳ ಹಿಂದೆ ಇದಕ್ಕೆ ಅಸ್ತಿಭಾರ ಶಿಲಾ ಸಮಾರಂಭವಾಯಿತು. ಬೇಗ ನಿರ್ಮಾಣವಾಗುವ ವಾಗ್ದಾನವಾಯಿತು. ಈ ಅಂತರದಲ್ಲಿ ಅನೇಕ ರಾಜ್ಯಗಳಲ್ಲಿ ಅಕಾಡೆಮಿ ಕಟ್ಟಡಗಳ ನಿರ್ಮಾಣವಾಗಿದೆ. ಆದರೆ ಇಲ್ಲಿ ಇಂದೂ ಅದು ಗಾಳಿಗೋಪುರವೇ ಆಗಿದೆ. ಇಲ್ಲಿನ ಕೊರತೆ ಉದ್ದಿಶ್ಯವಿಲ್ಲ. ಕಾರ್ಯದಕ್ಷತೆ. ಈ ಅಂತರದಲ್ಲಿ ಅಕಾಡೆಮಿಗಳಲ್ಲಿ ತೆತ್ತ ಬಾಡಿಗೆಯಲ್ಲಿ ಈ ಕಟ್ಟಡವೇ ಮುಗಿಯಬಹುದಿತ್ತು. ನಾಲ್ಕು ವರುಷಗಳ ಹಿಂದೆ ರಾಮಕೃಷ್ಣ ಹೆಗ್ಗಡೆಯವರು ಕಟ್ಟಡಗಳಿಗೆ 18 ಲಕ್ಷ ರೂ. ಮುಡಿಪಿಟ್ಟರು. ತಳಹದಿ ಹಾಕಿ ಗೋಡೆ ಎಬ್ಬಿಸಲು ಪ್ರಾರಂಭವಾಗಿದ್ದರೆ ಹಂತಹಂತವಾಗಿ ಕಟ್ಟಿ ಮುಗಿಸುವ ದಾರಿ ಹಿಡಿಯಬಹುದಿತ್ತು. ಆದರೆ ಆ ನೆಲ ಹಾಗೇ ಖಾಲಿಯಾಗಿದೆ. ಈ ಮಧ್ಯೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಸ್ಥಳವನ್ನು ಯಾವುದೇ ಬ್ಯಾಂಕಿಗೆ ಗುತ್ತಿಗೆ ಕೊಟ್ಟು ಆ ಕಟ್ಟಡದಲ್ಲಿ ಒಂದಂತಸ್ತನ್ನು ಅಕಾಡೆಮಿಗಳಿಗೆ ಮೀಸಲಿಡುವ ಮಾತು ಕೇಳಿಬರುತ್ತಿತ್ತು. ಸದ್ಯ ಅದು ನಿಂತಿದೆ. ಈಗಲೂ ಪಾಯಹಾಕಿ ಕಟ್ಟಡವೇರಿಸಲು ತಡವಾಗಿಲ್ಲ. ಆದರೆ ಅದನ್ನು ಮಾಡುವ ದೃಢ ನಿರ್ಧಾರ ಹಾಗೂ ಕಾರ್ಯದಕ್ಷತೆ ಬೇಕು. ಹಾಗೆಯೇ ಮದರಾಸಿನ ಚೋಳಮಂಡಲ ರೀತಿಯ ಕಲಾಗ್ರಾಮ ನಿರ್ಮಾಣ. ಅದೂ ಗಾಳಿಯಲ್ಲಿ ತೇಲಾಡಿ ಹೋಯಿತು. ಆದರೆ ಕಲಾವಿದರು ವಾಸ ಮಾಡುವ ನೃತ್ಯಗ್ರಾಮ ಒಂದು ರಚನೆಯಾಗಿದೆ. ಹೀಗೆಯೇ ಆರ್ಟ್ ಡೈರೆಕ್ಟರೇಟ್, ಪುರಂದರ ಪ್ರಶಸ್ತಿ ಮುಂತಾದ ಒಂದು ಸರಪಳಿಯನ್ನೇ ಹೆಣೆಯಬಹುದು.

ವಿವಿಧ ಅಭಿಪ್ರಾಯ

ಇನ್ನು ಅಕಾಡೆಮಿಗಳು, ಇವುಗಳ ಬಗೆಗೆ ವಿಚಾರಗೋಷ್ಠಿಗಳಾಗಿವೆ. ವಿವಿಧ ಅಭಿಪ್ರಾಯಗಳು ಮೂಡಿಬಂದಿವೆ. ಒಂದು ವರ್ಗ ಈ ಅಕಾಡೆಮಿಗಳಿಂದ ಕಲೆಗೆ ಏನೂ ಪ್ರಯೋಜನವಿಲ್ಲ. ಕಲೆಯಲ್ಲಿ ರಾಜಕೀಯ ವ್ಯಾಧಿ ಹೆಚ್ಚಿಸುತ್ತಿವೆ. ಕಲಾ ಯಾಚಕವರ್ಗದ ಸೃಷ್ಟಿಗೆ

ಕಾರಣವಾಗಿವೆ. ಅದರಿಂದ ಮುಚ್ಚಿಬಿಡುವುದೊಳ್ಳೆಯದು ಎಂದು ಹೇಳಿದಲ್ಲಿ ಪ್ರತಿಯಾಗಿ ಇನ್ನೊಂದು ವರ್ಗ ಅಕಾಡೆಮಿಗಳ ಸಂಖ್ಯೆ ಹೆಚ್ಚಬೇಕು. ಒಂದೊಂದು ಪ್ರಕಾರ ಮತ್ತು ಉಪಪ್ರಕಾರಕ್ಕೂ ಪ್ರತ್ಯೇಕ ಅಕಾಡೆಮಿ ಬೇಕೆನ್ನುತ್ತದೆ. ಅಕಾಡೆಮಿಗಳ ಕೆಲಸದ ಬಗೆಗೆ ಸಮಾಧಾನ ಮತ್ತು ಅಸಮಾಧಾನ ಎರಡೂ ಇವೆ. ಸರಕಾರ ನಾನಾವರ್ಗಕ್ಕೆ ಸಮಾಧಾನವಾಗುವಂತೆ ಮಧ್ಯವರ್ತಿಯಾಗಿ ಕೆಲಸ ನಿರ್ವಹಿಸಬೇಕಾಗಿದೆ. ಈ ರೀತಿಯ ಪ್ರತಿಕ್ರಿಯೆ ಹತ್ತಾರು ವರುಷಗಳಿಂದ ಕೇಳಿಬರುತ್ತಿದ್ದರೂ ಸರಕಾರವು ಇದಕ್ಕೆ ತೀವ್ರಗಮನ ಕೊಟ್ಟಿಲ್ಲ ಎನ್ನುವಂತಿದೆ. ಅಕಾಡೆಮಿಗಳನ್ನು ಪುನರ್ರಚಿಸುವ ಮುನ್ನ ಈ 20 ವರುಷಗಳಲ್ಲಿ ಅಕಾಡೆಮಿಗಳು ಮಾಡಿರುವ ಕೆಲಸಗಳು ಸಾಧನೆ ಇತ್ಯಾದಿ ವಿಮರ್ಶಿಸಿ ಅದರಲ್ಲಿ ಕಂಡುಬಂದ ಲೋಪದೋಷಗಳನ್ನು ತೋರಿಸಿ, ಅವಕ್ಕೆ ಪರಿಹಾರವಾಗಿ ಸೌಲಭ್ಯ, ಅಂಗರಚನೆಯ ಬದಲಾವಣೆ ಮುಂತಾದವುಗಳನ್ನು ಸೂಚಿಸುವ ತಜ್ಞರ ಒಂದು ವಿಮರ್ಶಾ ಸಮಿತಿ ರಚಿಸಬೇಕು. ಅವರ ಸಲಹೆಗಳಿಗನುಸಾರ ಅಕಾಡೆಮಿಯ ಉಚಿತ, ಸಂಖ್ಯೆ, ಕೆಲಸದಲ್ಲಿ ಬದಲಾವಣೆ ಮುಂತಾದವು ನಿರ್ಧಾರಗೊಂಡು ಅವು ಸುಸೂತ್ರವಾಗಿ ಮುನ್ನಡೆಯುವಂತೆ ಆಗಬೇಕು. ಒಂದು ವೇಳೆ ಅಕಾಡೆಮಿಗಳು ಪುನರ್ರಚಿತವಾದರೂ ಒಂದು ತಜ್ಞರ ಸಮಿತಿಯನ್ನು ರಚಿಸಿ ಈ ಇಪ್ಪತ್ತು ವರುಷಗಳ ಅಕಾಡೆಮಿಗಳ ಕೆಲಸಗಳನ್ನು ವಿಮರ್ಶಿಸಿ ಉತ್ತಮಗೊಳಿಸಬಹುದು.

ಇನ್ನೂ ಸಾಂಸ್ಕೃತಿಕ ಇಲಾಖೆ, ಅಕಾಡೆಮಿಗಳ ಕಾರ್ಯಕ್ಷೇತ್ರಗಳು ನಿರ್ಧರಿತವಾಗಬೇಕು. ಒಂದು ಮಾಡಿದುದು ಇನ್ನೊಂದರಿಂದ ಪುನರಾವೃತ್ತಿ ಆಗಕೂಡದು. ಉತ್ಸವಾದಿ ಕಾರ್ಯಕ್ರಮಗಳಲ್ಲಿ ಇದು ಮುಖ್ಯ. ಇವುಗಳನ್ನು ನಡೆಸುವಾಗಲೂ ಸಾಧ್ಯವಾದಷ್ಟು ಸಾರ್ವಜನಿಕ ಕಲಾ ಸಂಸ್ಥೆಗಳನ್ನು ಜೊತೆಗೆ ಸೇರಿಸಿಕೊಳ್ಳಬೇಕು. ಇದರಲ್ಲಿ ಮಿಶ್ರ ಪ್ರಕಾರದವುಗಳ ನಿರ್ವಹಣೆಯನ್ನು ಸಾರ್ವಜನಿಕ ಸಂಸ್ಥೆಗಳ ಮೂಲಕವೇ ನಿರ್ವಹಿಸುವುದು ಉಚಿತ - ಜನ ಬೆಂಬಲ ದೃಷ್ಟಿಯಿಂದ. ಮುಖ್ಯ ಉತ್ಸವಗಳಲ್ಲಿ ರಾಜ್ಯದ ವಿವಿಧ ಭಾಗದ ಕಲೆ ಅಥವಾ ಕಲಾವಿದರೂ ಭಾಗವಹಿಸುವಂತೆ ರೂಪಿತವಾಗಬೇಕು.

ಈ ಯೋಜನೆ ಮತ್ತು ಕಾರ್ಯಕ್ರಮಗಳಲ್ಲಿ ಎರಡು ವಿಧ. ಒಂದು ಒಳಮುಖವಾಗಿರುವುದು. ರಾಜ್ಯದಲ್ಲಿ ಬೆಳವಣಿಗೆಗೆ ಹೆಚ್ಚು ಗಮನ ಕೊಡುವಂತಹುದು ಹೊರಮುಖವಾದುದು. ಇನ್ನೊಂದು ಇದರಲ್ಲಿ ರಾಜ್ಯದ ಸಂಸ್ಕೃತಿ ಮತ್ತು ಕಲೆ ಹೊರಗಡೆ ಅಂದರೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಚಿತವಾಗುವುದು. ರಾಜ್ಯಕ್ಕೆ ಯಶಸ್ಸು ತರುವಂತಹವು. ಹೇಳುತ್ತಾ ಹೋದರೆ ಇನ್ನೂ ಎಷ್ಟೋ ಇದೆ. ಆದರೆ ನೆನಪಿನಲ್ಲಿಡಬೇಕಾದ ಒಂದು ವಿಷಯ ಗಾಳಿಗೋಪುರಗಳಂತಹ ಹತ್ತಾರು ಆಶ್ವಾಸನೆಗಳನ್ನು ಕೊಡುವ ಬದಲು ಕಾರ್ಯಗತ ಮಾಡುವ ಒಂದನ್ನೇ ಕೊಟ್ಟರೂ ಉದ್ದಿಷ್ಟ ಫಲಪ್ರದ. ★ ★ ★ ★ ★ ★ ★

ಪ್ರಜಾವಾಣಿ, 1991

4. ಲಲಿತ ಸಂಗೀತಕ್ಕೆ ಪ್ರತ್ಯೇಕ ಮನೋಧರ್ಮದ ಪುಷ್ಟಿಬೇಕು

ಸ್ವಾತಂತ್ರ್ಯದ ರಜತೋತ್ಸವ ಸಂದರ್ಭದಲ್ಲಿ ಬೆಂಗಳೂರು ಆಕಾಶವಾಣಿ ಲಲಿತ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದಿತು. ನಾಡಿನ ಹಿರಿಯ ಮತ್ತು ಕಿರಿಯ ಕವಿಗಳ 27 ಗೀತೆಗಳನ್ನು 9 ಜನ ಗಾಯಕ ಗಾಯಕಿಯರು ಶ್ರದ್ಧೆಯಿಂದ ಹಾಡಿದರು. ಅಷ್ಟು ಜನ ಭಾಗವಹಿಸಿದಾಗ, ಅವರುಗಳೆಲ್ಲಾ ಅನುಭವಸ್ಥರಾದರೂ ಒಬ್ಬೊಬ್ಬರ ಶೈಲಿಯಲ್ಲಿರುವ ವ್ಯತ್ಯಾಸ, ಗುಣಪ್ರಮಾಣ ಮುಂತಾದವೂ ಕೇಳುತ್ತಿದ್ದವರಿಗೆ ಅನುಭವವಾಗದೇ ಇರಲಿಲ್ಲ. ಅದರಲ್ಲಿ ಸ್ಪಷ್ಟವಾಗಿ ಅನುಭವವಾಗುತ್ತಿದ್ದುದು ಲಲಿತ ಸಂಗೀತವನ್ನು ಯಶಸ್ವಿಯಾಗಿ ನಿರೂಪಿಸಲು ಬೇಕಾದ ಮನೋಧರ್ಮದ ಆವಶ್ಯಕತೆ.

ಮೂರು ವಿಧ

ಆಕಾಶವಾಣಿಯ ಸಂಗೀತ ಕಾರ್ಯಕ್ರಮುಗಳನ್ನು ಮೂರು ಭಾಗವಾಗಿ ವಿಂಗಡಿಸಲಾಗಿದೆ – ಕ್ಲಾಸಿಕಲ್, ಲೈಟ್ ಕ್ಲಾಸಿಕಲ್ ಮತ್ತು ಲೈಟ್. ಅಂದರೆ ಶಾಸ್ತ್ರೀಯ ಸಂಗೀತ, ಲಲಿತ ಶೈಲಿಯ ಶಾಸ್ತ್ರೀಯ ಸಂಗೀತ ಮತ್ತು ಲಲಿತ ಸಂಗೀತ. ಮೊದಲನೆಯದು ಪಕ್ಕಾ ಕಚೇರಿ ಸಂಗೀತ. ಅದಕ್ಕೆ ಉಚಿತ ನಿಯಮಾವಳಿಯನ್ನು ಅನುಸರಿಸಿ ನಿರೂಪಿತವಾಗತಕ್ಕುದು. ಎರಡನೆಯದು ಅದರ ತಿಳಿ. ಶಾಸ್ತ್ರೀಯ ಸಂಗೀತದ ರಾಗ ಮಟ್ಟುಗಳಿಂದ ನಿರ್ವಹಿಸಲ್ಪಡತಕ್ಕದು. ಮೂರನೆಯದು ಕೃತಿಯ ಸಾಹಿತ್ಯ ಭಾವಕ್ಕೆ ಉಚಿತವಾಗಿ ರಾಗಛಾಯೆಯನ್ನಳವಡಿಸಿ ಹಾಡತಕ್ಕುದು. ಇವುಗಳಲ್ಲಿ ಅಂತಹ ಪರಸ್ಪರ ವಿರೋಧವೇನಿಲ್ಲ.

ಮೊದಲನೆಯದರಲ್ಲಿ ಸಂಗೀತದ ಮುಖ್ಯ ಅಂಗಗಳಾದ ರಾಗ ತಾಳಗಳನ್ನು ಕ್ರಮಬದ್ಧ ಶಿಕ್ಷಣದ ಮೂಲಕವೂ ಧ್ವನಿಯ ಏರಿಳಿತ, ಸಂಚಾರ, ನುಡಿಕಾರಗಳನ್ನು ಅದಕ್ಕೆ ಉಚಿತವಾದ ಕ್ರಮ ಮತ್ತು ಸಾಧನೆಯಿಂದ ಸ್ವಾಧೀನಪಡಿಸಿಕೊಳ್ಳುವರು. ಯಾವ ರಾಗವನ್ನಾಗಲೀ, ರಚನೆಯನ್ನಾಗಲೀ, ಸ್ವಚ್ಛವಾಗಿ, ಸ್ಪಷ್ಟವಾಗಿ ನಿರೂಪಿಸಲು ಇದು ಉತ್ತಮ ತಳಹದಿ ಮತ್ತು ಪ್ರೌಢವಾದ ಗೇಯ ಪ್ರಬಂಧಗಳನ್ನು ಅವುಗಳಲ್ಲಿ ಅಡಕವಾಗಿರುವ ವಿವಿಧ ಗಮಕಾಲಂಕಾರಗಳನ್ನು ಸುಲಲಿತವಾಗಿ ಹಾಗೂ ಖಚಿತವಾಗಿ ಹಾಡಿ ರಾಗದ ರುಚಿಯನ್ನು ವರ್ಧಿಸಿ ಸಂಗೀತದ ಒಟ್ಟು ಅಂದವನ್ನು ಹೆಚ್ಚಿಸಲು ಅವಶ್ಯಕವಾದ ತಳಹದಿಯೂ ಹೌದು.

ಸಾಹಿತ್ಯ ಸಹಾಯಕ

ಭಾರತೀಯ ಸಂಗೀತವು ಬಹುತೇಕ ಗೇಯಪ್ರಧಾನವಾದುದು, ಅಂದರೆ ಬಾಯಿ ಹಾಡುಗಾರಿಕೆಯೇ ಪ್ರಧಾನವಾದುದು. ವಾದ್ಯರಚನೆಯೂ ಅದಕ್ಕೆ ಅನುಗುಣವಾಗಿದೆ.

ವಾದ್ಯಗಳಲ್ಲಿಯೂ ಬಹುಪಾಲು ಧ್ವನಿತವಾಗುವುದು ಹಾಡುಗಾರಿಕೆಯ ಪ್ರಕಾರಗಳು, ಗಮಕಪೂರಿತ ಸಂಚಾರಗಳೇ. ವಾದ್ಯದ ಗುಣ ಮತ್ತು ಸಾಧ್ಯಾಸಾಧ್ಯತೆಗಳೆಲ್ಲಾ ಹಾಡುಗಾರಿಕೆಯ ಆವಶ್ಯಕತೆ ಹಾಗೂ ಅದರ ಪ್ರಾಕಾರಕ್ಕೇ ಮಿತಿಗೊಳ್ಳುತ್ತವೆ. ಅದು ಆಯಾ ಪ್ರಬಂಧದ ಸಾಹಿತ್ಯಕ್ಕೂ ಅನ್ವಯವಾಗುತ್ತದೆ. ಈ ಸಾಹಿತ್ಯದಲ್ಲಿ ಅರ್ಥಭಾವ ಎಲ್ಲಾ ಇರುತ್ತದೆ. ಆದರೆ ಅದು ಅಭಿವ್ಯಕ್ತವಾಗಬೇಕಾದುದು ಮುಖ್ಯವಾಗಿ ಸಂಗೀತದ ಅಂದರೆ ರಾಗ, ಲಯಗಳ ವಿಧ ವಿಧ ಸಂಚಾರ ಮತ್ತು ಛಾಯೆಗಳ ಮೂಲಕ. ಇಲ್ಲಿ ಸಾಹಿತ್ಯವು ಈ ಕ್ರಿಯೆಗೆ ಸಹಾಯಕ. ರಾಗ-ಲಯಗಳಿಗೆ ಅಧೀನ. ಹಿಂದೂಸ್ತಾನಿಯ ಖ್ಯಾಲ್ ಗಾಯನವು ಇದಕ್ಕೆ ನಿದರ್ಶನ. ಕೃತಿಯು ರಾಗ-ಲಯ ಪ್ರಧಾನವಾದುದು. ಸಾಹಿತ್ಯವೂ ಇದಕ್ಕೆ ಸಹಾಯಕ ಅಷ್ಟೆ.

ಎರಡನೆಯ ವರ್ಗದ ಸಂಗೀತದಲ್ಲಿ ರಾಗ-ಸಾಹಿತ್ಯ ಎರಡರದೂ ಸಮ ಸಮ ಪಾತ್ರವೆನ್ನಬಹುದು. ಇದಕ್ಕೆ ನಿದರ್ಶನವಾಗಿ ಕರ್ನಾಟಕ ಸಂಗೀತದ ಪದ ಜಾವಳಿ ಅಥವಾ ಹಿಂದೂಸ್ತಾನೀ ಸಂಗೀತದ ಠುಮ್ರಿ, ಗಜಲ್, ಭಜನ್ ಕೃತಿಗಳನ್ನು ನೆನೆಯಬಹುದು. ಇಲ್ಲಿ ರಾಗಭಾವದಷ್ಟೇ ಪದಭಾವಕ್ಕೂ ಸ್ಥಾನವಿದೆ. ರಾಗದ ನಾನಾ ಸಂಚಾರದಿಂದ ಅದರ ಸೌಂದರ್ಯವನ್ನು ವರ್ಧಿಸಿದಂತೆಯೇ ಪದಲಾಲಿತ್ಯ ಮತ್ತು ಅದರ ಭಾವಕ್ಕೂ ಗಮನವೀಯಬೇಕು.

ಕಾವ್ಯ ಪ್ರಧಾನ

ಮೂರನೆಯದು ಕಾವ್ಯಪ್ರಧಾನವಾದುದು. ರಾಗಲಯಗಳು ಗೀತದ ಪದಸೌಂದರ್ಯ, ಲಾಲಿತ್ಯ ಮತ್ತು ಭಾವಗಳು ಸ್ಪಷ್ಟವಾಗಿ ಅನುಭವವಾಗುವಂತೆ ಉಪಯೋಗಿಸಲ್ಪಡಬೇಕು. ಇಲ್ಲಿ ವಿಶೇಷವಾದ ಗಮಕ ಪ್ರಯೋಗ ಲಯ ವೈವಿಧ್ಯಕ್ಕನುಸಾರವಾಗಿ ಪದಗಳನ್ನು ಕುಣಿಸುವುದೇ ಮುಂತಾದುವಕ್ಕೆ ಅವಕಾಶವಿಲ್ಲ. ಸರಾಗವಾಗಿ ಒಂದೇ ಎಳೆಯಂತೆ ರಾಗವು ನಡೆಯುತ್ತದೆ. ಪದಗಳೂ ತುಂಡರಿಸಲ್ಪಡದೆ ಸ್ಪಷ್ಟವಾಗಿ ಅವುಗಳ ಅರ್ಥವರಿತು ಸ್ವಾನುಭವದಿಂದ ಹಾಡಲ್ಪಡಬೇಕು.

ಈ ರೀತಿಯ ಸರಳ ಮತ್ತು ಲಲಿತವಾದ ಗಾಯನವು ನಮಗೆ ಹೊಸದೇನಲ್ಲ. ಮನೆಗಳಲ್ಲಿ ಹಾಡುತ್ತಿದ್ದ ಸಂಪ್ರದಾಯದ ಹಾಡುಗಳೂ, ಅನಂತರ ನಾಟಕದಲ್ಲಿ ಬರುತ್ತಿದ್ದ ಹಾಡುಗಳೂ ಇದೇ ಪ್ರಕಾರಕ್ಕೆ ಸೇರಿದುವೇ. ರಂಗಸ್ಥಳದಲ್ಲಿಯಾದರೂ ಅಲ್ಪಸ್ವಲ್ಪ ಸಂಗತಿಗಳನ್ನು ಹಾಕಿ ಹಾಡುವ ಪದ್ಧತಿಯಿದ್ದಿತು. ಆದರೆ ಮನೆಗಳಲ್ಲಿ ತಿಳಿಯಾದ ರಾಗದಿಂದ, ಸರಳವಾದ ಲಯದಿಂದ, ಸುಂದರವಾಗಿ ಭಾವಗರ್ಭಿತವಾಗಿ ಹಾಡುತ್ತಿರಲಿಲ್ಲವೇ. ಅದನ್ನೇ ಮೊದಲನೆಯ ವರ್ಗದವರು ಹಾಡಿನಲ್ಲಿ ಗಮಕ ತುಂಬಿ ಕಚೇರಿಯಲ್ಲಿ ಹಾಡುವ ಕೃತಿಗಳಂತೆ ಮಾಡುವರು. ಇದು ಅವರ ಪ್ರೌಢಿಮೆಯ ಪ್ರದರ್ಶನವಾದರೂ, ಆ ಹಾಡಿನಲ್ಲಿರಬೇಕಾದ ಸ್ವಾಭಾವಿಕ ಸೌಂದರ್ಯ ಮತ್ತು ಅರ್ಥಭಾವವು ಸ್ಫುಟವಾಗಿ ಕಾಣಬರುವುದಿಲ್ಲ.

ಲಾಲಿತ್ಯಕ್ಕೆ ಆದ್ಯತೆ

ಆಕಾಶವಾಣಿಯ ಲಲಿತ ಸಂಗೀತ ಕಾರ್ಯಕ್ರಮವನ್ನು ಕೇಳುತ್ತಿದ್ದಾಗ ಈ ಅಂಶವು ನೆನಪಿಗೆ ಬರುತ್ತಿದ್ದಿತು. ಅಂದು ಹಾಡಿದವರು ಮುಕ್ಕಾಲುಮಂದಿ ಸುಪರಿಚಿತರು ಮತ್ತು ಸಮರ್ಥ ಗಾಯಕ ಗಾಯಕಿಯರು. ಅವರಲ್ಲಿ ಅನೇಕರು ಪ್ರೌಢವಾಗಿ ಸಂಗೀತ ಕಚೇರಿ ಮಾಡುವಂತಹವರು. ಆದುದರಿಂದ ಈ ಆಧುನಿಕ ಗೀತೆಗಳನ್ನು ಹಾಡುವಾಗಲೂ, ಸ್ವಲ್ಪ ಕಚೇರಿ ವಿಧಾನವನ್ನೇ ಅನುಸರಿಸಿದ್ದರು. ಈ ಗೀತಗಳನ್ನು ಹಾಡುವ ವಿಧಾನ ಅವುಗಳ ಅವಶ್ಯಕತೆಗಳು ಅವರಿಗೆ ಗೊತ್ತಿಲ್ಲವೆಂದಲ್ಲ. ಅದು ಅಭ್ಯಾಸಬಲ. ನೇರವಾಗಿ ಹಾಡಬೇಕೆಂದರೂ ಗಮಕದ ಹಾದಿಗೇ ಹೊರಳುವುದು.

ಇದರಿಂದ ಪದಗಳಲ್ಲಿ ಅಕ್ಷರಗಳ ಸ್ಥಾನಪಲ್ಲಟ, ಅನವಶ್ಯಕವಾದ ಎಳೆತ ಮತ್ತು ತುಂಡಾಗುವುದು ಮುಂತಾದುದು ಅನಿವಾರ್ಯ. ಗೀತಗಳ ಅಕ್ಷರ ರಮ್ಯತೆ ಮತ್ತು ಅವುಗಳ ಒಟ್ಟು ಸೌಕುಮಾರ್ಯಕ್ಕೆ ಭಂಗಬರುವುದು. ಅವರಿಗೆ ಈ ಲಲಿತ ಸಂಗೀತಕ್ಕೆ ಅವಶ್ಯಕವಾದ ವಿಧಾನದಿಂದ ಹಾಡಲು ಮನೋಧರ್ಮದಲ್ಲಿ ಸ್ವಲ್ಪ ಬದಲಾವಣೆ ಅಗತ್ಯ. ದೊಡ್ಡ ಕಾವ್ಯ, ಕಾದಂಬರಿಗಳನ್ನು ಬರೆದು ಅಭ್ಯಾಸವಾಗಿರುವವರಿಗೆ ಚಿಕ್ಕಮಕ್ಕಳಿಗೆ ಯುಕ್ತವಾದ ಸಾಹಿತ್ಯವನ್ನು ರಚಿಸಬೇಕಾದರೆ ಎಷ್ಟು ಕಷ್ಟವೋ ಈ ಪ್ರೌಢಗಾಯಕರಿಗೆ ಲಲಿತ ಸಂಗೀತವನ್ನು ಹಾಡುವಾಗಲೂ ಹಾಗೇ ಆಗುತ್ತದೆ.

ಭಿನ್ನ ಮನೋಧರ್ಮ

ಲಲಿತ ಸಂಗೀತವನ್ನು ಪರಿಣಾಮಕಾರಿಯಾಗಿ ಹಾಡಲು ಎಷ್ಟೇ ಸಾಧನ ಬಲವಿದ್ದರೂ ಮನೋಧರ್ಮದಲ್ಲಿ ಬದಲಾವಣೆ ಅವಶ್ಯಕ. ರಾಗವನ್ನು ನೇರವಾಗಿ ಹಾಡಬೇಕಲ್ಲದೆ ಧ್ವನಿಯಲ್ಲಿ ಶಕ್ತಿಗಿಂತ ಸೂಕ್ಷ್ಮದೃಷ್ಟಿ ಅವಶ್ಯಕ. ಆಧುನಿಕ ಭಾವಗೀತೆಗಳನ್ನು ಹಾಡುವಾಗ ಅದರಲ್ಲಿ ರೂಢವಾದ ರಾಗಕಲ್ಪನೆಯನ್ನು ಅಂದರೆ ಒಂದು ಗೀತವನ್ನು ಒಂದೇ ರಾಗದಲ್ಲಿ ಹಾಡುವಂತೆ ಮರೆತು ಗೀತದ ವಿವಿಧ ಸಂದರ್ಭ ಮತ್ತು ಭಾವಕ್ಕೆ ಅನುಗುಣವಾಗಿ ವಿಧವಿಧ ರಾಗದ ತುಣುಕುಗಳಿಂದ ಹೆಣೆದ ಮಟ್ಟುಗಳನ್ನು ಅಳವಡಿಸಿ ಹಾಡಿದರೆ ಪರಿಣಾಮ ಕಾರಿಯಾಗಿರುತ್ತದೆ. ಹಾಡುವಾಗಲೂ ಧ್ವನಿಯ ಕಾಕು ಅಂದರೆ ಏರಿಳಿತ, ಭಾವಕ್ಕೆ ಅನುಗುಣವಾದ ಸೂಕ್ಷ್ಮನುಡಿಕಾರ ಮುಂತಾದುವುಗಳಿಂದ ಕೇಳುವವರಲ್ಲಿಯೂ ಭಾವಪ್ರಚೋದನೆಯುಂಟುಮಾಡಬಹುದು. ಇದಕ್ಕೆ ಬಾಲಮುರಳಿಕೃಷ್ಣ ಅವರನ್ನು ನಿದರ್ಶನವಾಗಿ ಹೇಳಬಹುದು.

ಲಲಿತ ಸಂಗೀತವೆಂದು ಕರೆಯಿಸಿಕೊಳ್ಳುವ ಶೈಲಿ ನಮ್ಮಲ್ಲಿ ಹಿಂದಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಪ್ರಚಾರದಲ್ಲಿ ಇದ್ದರೂ ಈಗ ಅದರ ರೂಪವು ಬದಲಾಯಿಸಿತೆ? ಚಿತ್ರ ಸಂಗೀತವು ಜನಪ್ರಿಯವಾದ ನಂತರ ಅದರ ಪ್ರಭಾವವು ಈ ಗಾಯನದ ಮೇಲೆ ಬಹು

ಪರಿಣಾಮ ಉಂಟುಮಾಡಿದೆ. ಆದರೆ ಈ ಗಾಯನಕ್ಕೆ ಅವಶ್ಯಕವಾದ ವಿಧಾನ ಮತ್ತು ಅಂಶಗಳು ಏನೆಂಬುದಕ್ಕೆ ಅನೇಕರು ಗಮನವೀಯುತ್ತಿಲ್ಲ. ಕೆಲವು ಸಲ ಭಾವಗೀತೆಗೆ ಯಾವುದೋ ಜನಪ್ರಿಯ ಚಿತ್ರಗೀತೆಯ ಮಟ್ಟನ್ನು ಅಳವಡಿಸಿ ಆಭಾಸವಾಗಿ ಹಾಡುವುದನ್ನೂ ಕೇಳಿದ್ದೇವೆ. ಇಲ್ಲಿ ಮೂಲದಲ್ಲಿ ಮೊದಲು ಮಟ್ಟನ್ನು ನಿರ್ಧಾರ ಮಾಡಿ ಅನಂತರ ಅದಕ್ಕೆ ಸಾಹಿತ್ಯವನ್ನು ರಚಿಸಿರುತ್ತಾರೆಂಬ ಅಂಶವನ್ನು ಅರಿಯದೆ ಹೀಗೆ ಆಭಾಸವಾಗುತ್ತದೆ. ಯಾರ ಅಳತೆಗೋ ಹೊಲಿಸಿದ ಕವಚದಲ್ಲಿ ಇನ್ನೊಬ್ಬರನ್ನು ತೂರಿಸಿದರೆ ಆಗುವ ವಿಚಿತ್ರಪರಿಸ್ಥಿತಿ ಇದು.

ಭಾವ, ಅರ್ಥಪ್ರಧಾನ

ಇಂದಿನ ಲಲಿತ ಸಂಗೀತದ ಮೂಲವು ಪ್ರಾಯಶಃ ರವೀಂದ್ರ ಸಂಗೀತದಿಂದ. ಅವರ ಕಾವ್ಯಪ್ರಧಾನ ಗೀತಗಳು ಭಾರತದ ಇತರ ಭಾಗಗಳಲ್ಲಿ ಲಲಿತ ಗೇಯಗಳಿಗೆ ಪ್ರಚೋದಕವಾದುವು. ಕ್ರಮೇಣ ಇತರ ಭಾಷಾ ಪ್ರದೇಶಗಳಲ್ಲಿ ಅಲ್ಲಿಗೆ ಸ್ವಾಭಾವಿಕವಾಗಿದ್ದ ಗೇಯ ಶೈಲಿಗಳೂ ಸೇರಿಕೊಂಡು ಇದರಲ್ಲಿಯೇ ವಿಧವಿಧ ಬಗೆಯ ಕೃತಿಗಳುಂಟಾದುವು. ಮಹಾರಾಷ್ಟ್ರ, ಆಂಧ್ರ ಪ್ರದೇಶಗಳ ಭಾವಗೀತೆಗಳ ಗಾಯನದ ಮೂಲತತ್ವವು ಒಂದೇ ಆದರೂ ರುಚಿಯಲ್ಲಿ ವ್ಯತ್ಯಾಸ. ಲಲಿತ ಸಂಗೀತವನ್ನು ಜನರಂಜನೀಯವಾಗಿ ಹಾಗೂ ಪರಿಣಾಮಕಾರಿಯಾಗಿ ಹಾಡಲು ಈ ವಿವಿಧ ಭಾಷಾ ಪ್ರದೇಶಗಳಲ್ಲಿ ಬೆಳೆದುಬಂದಿರುವ ಅದರಲ್ಲಿಯೂ, ಬಂಗಾಳದ ರವೀಂದ್ರ ಸಂಗೀತವನ್ನು ಚೆನ್ನಾಗಿ ತಿಳಿದುಕೊಳ್ಳುವುದು ಉತ್ತಮ. ಎಲ್ಲಕ್ಕೂ ಮುಂಚೆ ಶ್ರುತಿಬದ್ಧವಾದ ಸುಶ್ರಾವ್ಯವಾದ ದನಿಯನ್ನು ರೂಢಿಸಿಕೊಳ್ಳುವುದು ಬಹುಮುಖ್ಯ. ★

ಸುಧಾ, 1972

5. ಸಂಗೀತ ಕಲಾಭಿವೃದ್ಧಿಯಲ್ಲಿ ಸಭೆಗಳ ಪಾತ್ರವೇನು?

ಒಂದು ಹತ್ತು ಜನ ತಮಿಳುನಾಡಿನವರನ್ನು ಮರಳುಕಾಡಿನ ಮಧ್ಯೆ ಬಿಟ್ಟರೂ ಅಲ್ಲಿ ಒಂದು ಸಂಗೀತ ಸಭೆಯನ್ನು ಪ್ರಾರಂಭಿಸುತ್ತಾರೆ. ಭಾರತದ ಮುಖ್ಯ ನಗರಗಳಲ್ಲಿರುವ ಪ್ರಸಿದ್ಧ ಕರ್ನಾಟಕ ಪದ್ಧತಿ ಸಂಗೀತ ಸಭೆಗಳೆಲ್ಲವೂ ಕಟ್ಟಲ್ಪಟ್ಟದ್ದು ಹೆಚ್ಚು ತಮಿಳುನಾಡಿನವರಿಂದಲೇ. ಅದಕ್ಕೇ ಇರಬಹುದು ಮದರಾಸಿನಲ್ಲಿ ಸಿನಿಮಾ ಮಂದಿರಗಳಿಗಿಂತ ಸಂಗೀತ ಸಭೆಗಳ ಸಂಖ್ಯೆಯೇ ಹೆಚ್ಚಾಗಿದೆ.

ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಸ್ವಲ್ಪ ವ್ಯತ್ಯಾಸ. ಸಂಗೀತ ಸಭೆಗಳ ಸಂಖ್ಯೆ ಚಿತ್ರ ಮಂದಿರಗಳಷ್ಟಿಲ್ಲ. ಬಹು ಕಡಿಮೆ. ಕಾಲುಭಾಗದಷ್ಟಿರಬಹುದು. ರಾಜ್ಯದ ಇತರ

ನಗರಗಳಲ್ಲಿಯೂ ಸಂಗೀತಕ್ಕೆ ಸಂಬಂಧಿಸಿದ ಸಭಾ, ಸಮಾಜಗಳಿವೆ ನಿಜ. ಆದರೆ ಅವುಗಳ ಸಂಖ್ಯೆ ಬೆಂಗಳೂರಿನಷ್ಟಿಲ್ಲ. ಇಲ್ಲಿಯೂ ಈ ಸಭೆ ಸಮಾಜಗಳಲ್ಲಿ ಕೆಲವಾದರೂ ತಮಿಳುನಾಡಿನವರ ಉತ್ಸಾಹದಿಂದ ಹುಟ್ಟಿಕೊಂಡವು. ಸ್ಥಳೀಯರಿಂದ ಪ್ರಾರಂಭವಾದ ಸಂಗೀತ ಸಭೆಗಳಿಗೂ ಬೆಂಬಲವಾಗಿರುವವರಲ್ಲಿ ಬಹು ಮಂದಿ ತಮಿಳು ನಾಡಿನವರೇ ಎಂದು ಹೇಳಬಹುದು.

ಸಂಗೀತಕ್ಕೇ ಮೀಸಲು

ಇಷ್ಟು ತಮಿಳುನಾಡಿನ ಪ್ರಭಾವವಿದ್ದ ಮೇಲೆ ಸಭೆ ನಡೆಯುವ ರೀತಿ, ನೀತಿಗಳೆಲ್ಲಾ ಬಹುಶಃ ಮದರಾಸಿನ 'ಕಾಪಿ' ಎಂದು ಹೇಳಲೇಬೇಕಾಗಿಲ್ಲ. ಅಲ್ಲಿ 'ಮೈಕ್ ರಹಿತ ಕಚೇರಿ'ಗಳಿಗೇ ಕೆಲವು ಸಭೆಗಳು ಹುಟ್ಟಿಕೊಂಡುವು. ಬೆಂಗಳೂರಿನಲ್ಲಿಯೂ ಇವೆ. ಆದರೆ ಮದರಾಸಿನ ಸಂಗೀತ ಸಭೆಗಳಿಗೂ ಬೆಂಗಳೂರಿನ ಸಭೆಗಳಿಗೂ ಗಮನಾರ್ಹವಾದ ವ್ಯತ್ಯಾಸವೊಂದಿದೆ. ಮದರಾಸಿನ ಸಭೆಗಳಲ್ಲಿ 'ಸಂಗೀತ' ಪದವಿದ್ದರೂ ಈಗ ಬಹುತೇಕ ನಡೆಯುತ್ತಿರುವುದು ನಾಟಕಗಳು. ಅನಂತರ ನೃತ್ಯ, ಸಂಗೀತಕ್ಕೆ ಕಡೆಯ ಪಂಕ್ತಿ. ಬೆಂಗಳೂರಿನಲ್ಲಿ ಹಾಗಿಲ್ಲ. ಈ ಸಭೆಗಳ ಕಾರ್ಯಕ್ರಮಗಳೆಲ್ಲಾ ಸಂಗೀತಕ್ಕೇ ಮೀಸಲಾಗಿವೆ. ಅವುಗಳಲ್ಲಿ ಒಂದೊಂದರದೂ ಒಂದೊಂದು ಬಗೆ. ಕೆಲವು ಸಭೆಗಳು ಹೆಚ್ಚು ಜನರನ್ನು ಆಕರ್ಷಿಸುವ ಹೆಸರಾಂತ ಕಲಾವಿದರ ಸಂಗೀತ ಕಚೇರಿಗಳನ್ನು ಏರ್ಪಡಿಸುತ್ತವೆ. ಕೆಲವು ಸಭೆಗಳು ಸ್ಥಳೀಯ ಕಲಾವಿದರಿಗೇ ಪ್ರೋತ್ಸಾಹ ಕೊಡುವ ಉತ್ಸಾಹದಿಂದ ಸ್ಥಾಪಿತವಾಗಿವೆ. ಕೆಲವು ಸಭೆಗಳಲ್ಲಿ ಬರೇ ಹಿಂದೂಸ್ಥಾನೀ ಸಂಗೀತ. ಕೆಲವು ಸಭೆಗಳಲ್ಲಿ ಮೈಕ್ ರಹಿತ ಕಚೇರಿಗಳು - ಹೀಗೆ.

ಆರ್ಥಿಕ ದೃಷ್ಟಿಯಿಂದ ಭದ್ರವಾಗಿರುವ ಸಭೆಗಳ ಸಂಖ್ಯೆ ಸ್ವಲ್ಪ. ಕೆಲವು ಸಭೆಗಳಲ್ಲಿ ವ್ಯವಸ್ಥಾಪಕರು ಮತ್ತು ಅವರ ಮಿತ್ರರು ತಮ್ಮ ಕೈಯಿಂದ ವೆಚ್ಚವನ್ನು ಭರಿಸಿಕೊಂಡು ಹೋಗುತ್ತಿದ್ದಾರೆ. ಕೆಲವು ಸಭೆಗಳು ಕಲಾವಿದರ ಔದಾರ್ಯದಿಂದ ನಡೆದುಕೊಂಡು ಬರುತ್ತಿವೆ. ಅಲ್ಲಿ ದೊರಕುವ ಸಂಭಾವನೆ ನಾಮಮಾತ್ರ. ಹೀಗೆ ಬೆಂಗಳೂರಿನಲ್ಲಿ ಹದಿನೈದು ಹದಿನಾರು ಸಭೆಗಳಾದರೂ ಕೆಲಸ ಮಾಡುತ್ತಿವೆ. ಇವುಗಳ ಆಶ್ರಯದಲ್ಲಿ ಪ್ರತಿ ತಿಂಗಳೂ ಐವತ್ತು ಅರವತ್ತು ಸಂಗೀತಗಾರರ ಕಲಾ ಪ್ರದರ್ಶನವಾದರೂ ನಡೆಯುತ್ತಿದೆಯೆನ್ನಬಹುದು. ಪ್ರೋತ್ಸಾಹದ ದೃಷ್ಟಿಯಿಂದ ಇದು ಗಣನೀಯವಾದ ಪ್ರಮಾಣವೇ ಸರಿ.

ಕಲೆಗೆ ಸಹಾಯಕವೇ?

ಮದರಾಸಿನ ಸುಮಾರು ಅರುವತ್ತು-ಎಪ್ಪತ್ತು ಸಭೆಗಳು ಬೆಂಗಳೂರಿನ ಹದಿನೈದು-ಹದಿನಾರು, ಇತರ ನಗರಗಳಲ್ಲಿರುವ ಸಭೆಗಳ ಕಾರ್ಯಕಲಾಪಗಳನ್ನು ಒಟ್ಟು ಪರಿಶೀಲಿಸಿದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಸಂಗೀತ ಕಲೆಗೆ ಅವು ಸಹಾಯವಾಗುತ್ತಿವೆಯೇ? ಹೇಳುವುದು ಕಷ್ಟ.

ಕಲೆಯ ಅಭಿವೃದ್ಧಿಯ ದೃಷ್ಟಿಯಿಂದ ಈ ಸಭೆಗಳು ಮಾಡಬಹುದಾದ ಮುಖ್ಯ ಕಾರ್ಯವನ್ನು ಸ್ಥೂಲವಾಗಿ ಹೀಗೆ ಹೇಳಬಹುದು : ಪ್ರಚಾರ ಮತ್ತು ಪ್ರೋತ್ಸಾಹ. ಪ್ರಚಾರ ಭಾಗದಲ್ಲಿ ಜನಗಳಲ್ಲಿ ಉತ್ತಮ ಅಭಿರುಚಿ ಬೆಳೆಯಬೇಕು. ಕಲೆಯ ಬಗೆಗೆ ಅವರ ತಿಳಿವಳಿಕೆ ಉತ್ತಮಗೊಳ್ಳಬೇಕು, ಹೆಚ್ಚಬೇಕು. ಇವುಗಳಿಗೆ ಸಾಧಕವಾಗುವಂತಹ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಸಂಗೀತ ಶಿಕ್ಷಣವು ಈ ಸಭೆಗಳ ವ್ಯಾಪ್ತಿಗೆ ಮೀರಿದುದರಿಂದ ಇಷ್ಟು ಮಾತ್ರ ಮಾಡಬಹುದು.

ಪ್ರೋತ್ಸಾಹ ಭಾಗದಲ್ಲಿ ಪ್ರತಿಭಾವಂತರಾದ ಹಿರಿಯ ಕಲಾವಿದರೇ ಅಲ್ಲದೆ ಪ್ರವರ್ಧಮಾನಕ್ಕೆ ಬರುತ್ತಿರುವ ಕಿರಿಯರಿಗೂ ಸಾಕಷ್ಟು ಅವಕಾಶ ದೊರೆಯಬೇಕು. ಇದರ ಜೊತೆಗೆ ಸಂಗೀತದಲ್ಲಿ ಹೊಸ ಕಲ್ಪನೆ ಮತ್ತು ಹೊಸ ಸಾಮಗ್ರಿಗೂ ಯುಕ್ತವಾದ ಪ್ರೋತ್ಸಾಹ ಕೊಟ್ಟು ಜನಗಳಲ್ಲಿ ಇವುಗಳ ಬಗೆಗೆ ವಿಶ್ವಾಸ, ಆಸಕ್ತಿ ಹುಟ್ಟುವಂತೆ ಮಾಡಬೇಕು. ಇಂದು ಸಂಪ್ರದಾಯವೆಂದು ಯಾವ ಅಂಶಗಳನ್ನು ನಾವು ಗೌರವಿಸುತ್ತಿದ್ದೇವೋ ಅವು ಒಂದು ಕಾಲದಲ್ಲಿ ಹೊಸ ಕಲ್ಪನೆಯಾಗಿದ್ದುವೆಂಬುದನ್ನು ಮರೆಯಬಾರದು. ಈ ಹಿನ್ನೆಲೆಯಿಂದ ಈ ಸಂಸ್ಥೆಗಳಿಂದ ಕಲೆಗೆ ಎಷ್ಟು ಸಹಾಯವಾಗಿದೆ ಎಂಬುದನ್ನು ಪರಿಶೀಲಿಸಬಹುದು.

ಏಕಪ್ರಕಾರವಾಗಿ ಸಂಗೀತ ಕಚೇರಿಗಳನ್ನು ಏರ್ಪಡಿಸುತ್ತಿರುವುದರಿಂದ ಈ ಸಂಸ್ಥೆಗಳು ಕಲೆಯ ಪ್ರಚಾರಕ್ಕೆ ಸಹಾಯಕವಾಗಿವೆಯೆನ್ನಬಹುದು. ಅಭಿವೃದ್ಧಿಗೆ ಸಹಾಯಕವಾಗಿವೆಯೇ ಎಂದು ಹೇಳುವುದು ಕಷ್ಟ. ಜನಗಳಲ್ಲಿ ಉತ್ತಮ ಕಲಾಭಿರುಚಿಯ ಬೆಳವಣಿಗೆ, ಪ್ರತಿಭೆಯಿರುವ ಸಂಗೀತಗಾರರನ್ನು ಬೆಳಕಿಗೆ ತರಲು ಪ್ರಯತ್ನ ಈ ಎರಡೂ ದೃಷ್ಟಿಗಳಿಂದ ಸಂಗೀತ ಸಭೆಗಳು ವಿಫಲವಾಗಿವೆಯೆನ್ನಬಹುದು. ಇವೆರಡೂ ತಮ್ಮ ಕರ್ತವ್ಯಗಳು ಎಂಬ ಅಂಶವೂ ಅವುಗಳಿಗೆ ಮರೆತುಹೋಗಿರಬಹುದು.

ಇದಕ್ಕೆ ಒಂದು ಮುಖ್ಯ ಕಾರಣವೆಂದರೆ ತಮ್ಮ ನಿಯಮಾವಳಿಯಲ್ಲಿ ಏನೇ ಗುರಿಗಳನ್ನು ನಿರ್ಧರಿಸಿಕೊಂಡಿದ್ದರೂ ಬಹು ಪಾಲು ಸಂಗೀತ ಸಭೆಗಳು ಸದಸ್ಯರಿಗೆ ಕೇವಲ ಮನರಂಜನೆ ಒದಗಿಸುವುದು ಮಾತ್ರ ತಮ್ಮ ಮುಖ್ಯ ಕರ್ತವ್ಯವೆಂದು ಭಾವಿಸಿದಂತಿದೆ. ಹಣ ಕೊಡುವವರು, ಸದಸ್ಯರು. ಅವರ ಅಭಿಲಾಷೆಯಂತೆ ನಡೆಯಬೇಕಾದುದು ಅನಿವಾರ್ಯ. ಸಂಸ್ಥೆಯು ಎಷ್ಟೋ ಆದರ್ಶಗಳನ್ನಿಟ್ಟುಕೊಂಡು ಉತ್ಸಾಹದಿಂದ ಪ್ರಾರಂಭವಾದರೂ, ಒಂದು ಘಟ್ಟದಲ್ಲಿ ಈ ಪರಿಸ್ಥಿತಿ ಸಹಜವಾಗಿ ಬರುತ್ತದೆ. ಅಲ್ಲಿಂದ ಮುಂದೆ ಒಂದು ವಿಷಚಕ್ರದಲ್ಲಿ ಸಿಕ್ಕಿಕೊಂಡಂತೆ. ಸಿನಿಮಾ ಮಂದಿರ ಮತ್ತು ಸಂಗೀತ ಸಭೆ ಎರಡರದೂ ಒಂದೇ ಪರಿಸ್ಥಿತಿ. ಆದರ್ಶಗಳೇನೇ ಇದ್ದರೂ ಸಂಗೀತ ಸಭೆಯು ಸುಸೂತ್ರವಾಗಿ ನಡೆಯಲು ಅವಶ್ಯಕವಾದ ಸಾಮಗ್ರಿ- ಹಣ. ಅದು ಒದಗದಿದ್ದರೆ ಪಥ ನಡೆಯುವಂತೆಯೇ ಇಲ್ಲ. ಅದು ಒದಗಲು ಅವಶ್ಯಕವಾದ ರೀತಿಯಲ್ಲಿ ಕಾರ್ಯಕ್ರಮಗಳ ವ್ಯವಸ್ಥೆ ಆಗಬೇಕಾಗುತ್ತದೆ– ಧ್ಯೇಯ, ಗುಣಕ್ಕಿಂತ "ಜನ ಮರುಳೋ..." ರೀತಿಯಲ್ಲಿ. ಕಲಾವಿದನ ಕೀರ್ತಿಗೆ ಅನುಗುಣವಾದ ಪ್ರಮಾಣದಲ್ಲಿ ಜನ

ಜಮಾವಣೆಯಾಗುತ್ತದೆ. ಎಷ್ಟೇ ಗುಣವಿದ್ದೂ ಕಲಾವಿದನು ಅಪ್ರಸಿದ್ಧನಾದರೆ ಜನಸಂದಣಿ ಅಷ್ಟಕ್ಕಷ್ಟೇ, ಸಿನಿಮಾದಲ್ಲಿ ಆದಹಾಗೆ. ಈ ಪರಿಸ್ಥಿತಿಯಲ್ಲಿ ಸಂಗೀತ ಕಚೇರಿ ಎಂದರೆ ಹಾಯಾಗಿ ಹೊತ್ತು ಕಳೆವ ಒಂದು ಸಾಧನವೇ ವಿನಾ ಅದಕ್ಕಿಂತ ಹೆಚ್ಚಿನ ಧ್ಯೇಯವಿದ್ದಂತೆ ಕಾಣ ಬರುವುದಿಲ್ಲ.

ತ್ರಿಕೋಣದಂತೆ

ಈ ಪರಿಸ್ಥಿತಿಗೆ ಸಂಸ್ಥೆ-ಸಂಗೀತಗಾರ ಮತ್ತು ಸಭಾಸದರು ಮೂವರೂ ಹೊಣೆ ಎನ್ನಬಹುದು. ಇದೊಂದು ತ್ರಿಕೋಣದಂತಿದೆ. ಜನಗಳಲ್ಲಿ ಅಭಿರುಚಿ ಉತ್ತಮಗೊಳ್ಳುವಂತೆ, ಅವರ ತಿಳಿವಳಿಕೆ ಹೆಚ್ಚಿ, ಆಸಕ್ತಿ ಕುದುರುವಂತಹ ಅಂಶಗಳನ್ನೂ ಕಚೇರಿಗಳಲ್ಲಿ ನಿರೂಪಿಸಬೇಕೆಂದು ಕಲಾವಿದರಿಗೆ ಸಂಸ್ಥೆಯು ಸಲಹೆ ಮಾಡಬಹುದು. ಆದರೆ ಅದಕ್ಕೆ ವ್ಯವಧಾನವಿಲ್ಲ. ಕಲಾವಿದರಿಗೆ ಸಂಗೀತವು ಜೀವನಕ್ಕೆ ಸಂಪಾದನೆಯ ಒಂದು ಸಾಧನ ಎಂಬುದಕ್ಕಿಂತ ಅದರ ಬಗೆಗೆ ಹೆಚ್ಚಿನ ಜವಾಬುದಾರಿಯಿದ್ದಹಾಗಿಲ್ಲ. ಇನ್ನು ಸಭಾಸದರು. ಅವರಿಗೂ ಪ್ರಾಯಶಃ ಸಂಗೀತವು ಹಾಯಾಗಿ ಹೊತ್ತು ಕಳೆವ ಒಂದು ಸಾಧನಕ್ಕಿಂತ ಅದರಲ್ಲಿ ಇನ್ನೂ ಹೆಚ್ಚಿನ ಮಹತ್ವವಿದೆ ಎಂಬುದೇ ಅರಿವಿದ್ದಂತಿಲ್ಲ. ಇದ್ದರೂ ಬೇಕಿಲ್ಲವೇನೋ! ಅಪರೂಪವಾದ ಅಂಶಗಳಾವುದನ್ನಾದರೂ ಕಲಾವಿದನು ನಿರೂಪಿಸತೊಡಗಿದಲ್ಲಿ ಅನೇಕರಿಗೆ ಅದನ್ನು ಕೇಳುವ ಆಸಕ್ತಿಯಾಗಲಿ, ಸಹನೆಯಾಗಲಿ ಇದ್ದಂತಿಲ್ಲ. ಆದುದರಿಂದ ಸಂಗೀತ ಕಚೇರಿ ಉತ್ತಮ ಕಲಾಪ್ರದರ್ಶನಕ್ಕಿಂತ ಒಂದು ರೀತಿಯ ಸರ್ಕಸ್ಸಿನಂತೆ ಪರಿಣಮಿಸುತ್ತಿದೆ.

ಕಚೇರಿ ಪ್ರಾರಂಭವಾಗುತ್ತಿದ್ದಂತೆ ಸಂಸ್ಥೆಯವರಿಗೆ ಗಲ್ಲಾಪೆಟ್ಟಿಗೆಯ ಕಡೆಯೇ ದೃಷ್ಟಿ - ಆ ದಿನದ ಖರ್ಚಾದರೂ ಏಳುವುದೋ ಇಲ್ಲವೋ ಎಂಬ ಆತಂಕ. ಸಂಗೀತ ವಿದ್ವಾಂಸರು ವೇದಿಕೆಯ ಮೇಲೆ ಬರುತ್ತಲೇ ತಾವು ಏನು ಮಾಡಬೇಕೆಂಬುದೇ ಗೊತ್ತಾಗದೇ ಸಭೆಯಿಂದ ಆಗಲೇ ಕೋರಿಕೆಯ ಚೀಟಿಗಳು ಬಂದಿರುತ್ತವಲ್ಲ! ಜನಗಳ ಕೋರಿಕೆಯ "ರಘುವಂಶ ಸುಧಾ", "ನಿನುವಿನಾ ನಾಮದೆಂದು" ಮುಂತಾದ ಕೆಲವು ಕೀರ್ತನೆಗಳನ್ನು ಹಿಂಜಿ, ಹರಿದು ನಾಲ್ಕು ದಿಕ್ಕುಗಳಿಗೂ ತೂರಿದೊಡನೆಯೇ ಚಪ್ಪಾಳೆಗಳ ಸುರಿಮಳೆ. ಅಂದಿನ ಕತೆ, ತೀರಿತು.

ಪರಿಹಾರವೆಂತು?

ಇಂದಿನ ಸಂಗೀತ ಕಚೇರಿಗಳು ನಿಜವಾಗಿಯೂ ನಿಸ್ತೇಜವಾಗುತ್ತಿವೆ. ಇಪ್ಪತ್ತೈದು ಮೂವತ್ತು ರಾಗ, ನಲವತ್ತು ಐವತ್ತು ಕೃತಿ ಈ ಪ್ರಾಕಾರದೊಳಗೇ ಅಡಕವಾಗುತ್ತಿದೆ. ಅದರಲ್ಲಿ ವಿಸ್ತರಿಸುವ ರಾಗಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ. ನಮ್ಮ ಸಂಗೀತ ಪರಂಪರೆಯಲ್ಲಿ ಬಂದಿರುವ ಸಾಮಗ್ರಿ ಇಷ್ಟೆಯೇ? ಹಳೆಯದರಲ್ಲಿ ಅಪರೂಪವಾದುದು ಹೊಸ ಕಲ್ಪನೆಯ ಸಾಮಗ್ರಿ ಮೊದಲಾದುವು ಅವರ ಕಿವಿಗೆ ಬೀಳುವಂತಿಲ್ಲ. ಈ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಸಂಗೀತಕ್ಕೆ ತಂಗಳು ವಾಸನೆ ಹತ್ತುವುದಿಲ್ಲವೇ? ಇದನ್ನು ಸಂಬಂಧಪಟ್ಟವರೆಲ್ಲಾ ಚಿಂತಿಸಿ ಈ ವಿಷ ಚಕ್ರದಿಂದ ಸಂಗೀತವು ಹೊರಕ್ಕೆ ಬಂದು ಕಲೆಯಾಗಿ ಬದುಕಲು ಪ್ರಯತ್ನಿಸಬೇಕು. "ಈಗಿನ ಜನಾಂಗ ಸಿನಿಮಾ ಹಾಡುಗಳನ್ನೇ ಅಪೇಕ್ಷಿಸಿ

ಹಾಳಾಗುತ್ತಿದ್ದಾರೆ” ಎಂದು ಹಿರಿಯರು ಹೇಳುವ ಒಂದು ಪಲ್ಲವಿ. ಈಗಿನ ಸ್ಥಿತಿಯಲ್ಲಿ ಸಂಗೀತ ಕಚೇರಿಗಳೂ ಹಾಗೆಯೇ ಆಗುತ್ತಿವೆ. ಇಲ್ಲಿ ಸಿನಿಮಾ ಹಾಡಿನ ಬದಲು ಜನಪ್ರಿಯವಾದ ಕೃತಿಗಳು ಅಷ್ಟೇ. ಎರಡರದೂ ಒಂದೇ ಮನೋಧರ್ಮ. ಆದರೆ ಸಿನಿಮಾ ಹಾಡಿನ ಅಭಿಮಾನಿಗಳು, ಸಂಗೀತದ ಸಂಪ್ರದಾಯ ಮತ್ತು ಪರಂಪರೆಯನ್ನು ಕಾಪಾಡಿಕೊಂಡು ಬರುವುದು ತಮ್ಮ ಉದ್ದಿಶ್ಯವೆಂದು ತಿಳಿದುಕೊಂಡಿಲ್ಲ, ಹಾಗೆ ಹೇಳಿಕೊಳ್ಳುತ್ತಲೂ ಇಲ್ಲ. ★ ★ ★ ★ ★ ★ ★

1973

6. ಸಂಗೀತ ಸಂಜೀವಿನಿ

ಸಂಗೀತವು ಸಜೀವ ಮತ್ತು ನಿರ್ಜೀವ ವಸ್ತುಗಳ ಮೇಲೆ, ಪರಿಣಾಮಕಾರಿಯಾಗಬಲ್ಲದು ಎಂಬ ನಂಬಿಕೆ ಬಹು ಹಳೆಯದು. ಸಂಗೀತವು ರೋಗಹರವೆಂಬ ನಂಬಿಕೆಯೂ ಅಷ್ಟೇ. ಇಲ್ಲಿ ಸಂಗೀತದ ಪ್ರಭಾವವು ಬಹುತೇಕ ಮನಸ್ಸಿನ ಮೇಲೆ ಅದನ್ನು ಶುದ್ಧಿಗೊಳಿಸಿ, ಪುಷ್ಟಿಗೊಳಿಸಿ ತನ್ಮೂಲಕ ದೇಹದಲ್ಲಿ ಉಂಟಾದ ರೋಗವನ್ನು ಪರಿಹರಿಸುತ್ತದೆ ಎಂದು ಭಾವಿಸಲಾಗಿದೆ. ಇದಕ್ಕೆ ಸಂಬಂಧಿದಂತೆ ಅನೇಕ ಕತೆಗಳಿದ್ದರೂ ನಿದರ್ಶನಗಳು ಕಡಿಮೆ. ಮುಂದೆ ನಿರೂಪಿಸಿರುವ ಮೂರು ಘಟನೆಗಳು ನಿದರ್ಶನವೆನ್ನಬಹುದು.

ಮೊದಲನೆಯದು ದಿ॥ ಬಡೇಗುಲಾಂ ಆಲೀಖಾನರಿಗೆ ಸಂಬಂಧಿಸಿದುದು. ‘‘ರೋಗವನ್ನು ವಾಸಿಮಾಡಬಲ್ಲ ಗುಣವು ಸಂಗೀತಕ್ಕಿದೆಯೇ?’’ ಎಂದು ಯಾರೋ ಕೇಳಿದುದಕ್ಕೆ ಹೇಳಿದರು – ಗುಲಾಂ ಆಲೀಖಾನ್, ‘‘ಇದೆ ಅಥವಾ ಇಲ್ಲ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ನನ್ನದೇ ಒಂದು ಅನುಭವವನ್ನು ಮಾತ್ರ ಹೇಳುತ್ತೇನೆ. ನಾನು ಲಾಹೋರಿನಲ್ಲಿದ್ದಾಗ ಮನೆಯಲ್ಲಿ ದಿನವೂ ನಾಲ್ಕಾರು ಗಂಟೆಗಳು ಹಾಡುವುದು ಪದ್ಧತಿ. ಒಂದು ದಿನ ಅದೇ ಬೀದಿಯ ಮನೆಯವರೊಬ್ಬರು ಬಂದು ತಮ್ಮ ಮನೆಗೆ ಬರಬೇಕೆಂದೂ, ಅಲ್ಲಿ ಪಾರ್ಶ್ವವಾಯುವಿನಿಂದ ಮಲಗಿದ ರೋಗಿಯೊಬ್ಬನಿರುವನೆಂದೂ ಅವನು ನನ್ನ ಸಂಗೀತ ಕೇಳಲು ಆಸೆಪಡುತ್ತಿರುವನೆಂದೂ, ಆದುದರಿಂದ ಮನೆಗೆ ಬಂದು ಸ್ವಲ್ಪ ಹಾಡಬೇಕೆಂದೂ ಕೇಳಿಕೊಂಡರು. ಅದರಂತೆ ಅವರ ಮನೆಗೆ ದಿನವೂ ಹೋಗಿ ಆ ರೋಗಿಯ ಮುಂದೆ ಸ್ವಲ್ಪ ಹೊತ್ತು ಹಾಡುತ್ತಿದ್ದೆ. ಮೂರನೆಯ ದಿನ ಮಲಗಿದ್ದ ರೋಗಿ ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದ. ಒಂದು ವಾರವಾಗುವವೇಳೆಗೆ ಗೋಡೆಯನ್ನೋ ಅಥವಾ ಕಂಬವನ್ನೋ ಹಿಡಿದುಕೊಂಡು ನಿಲ್ಲಲಾರಂಭಿಸಿದ. ಇದರಿಂದ ನನ್ನ ಸಂಗೀತದಲ್ಲಿ ವಿಶೇಷ ಗುಣವಿದೆಯೆಂದು ತಿಳಿಯಬೇಕಾಗಿಲ್ಲ. ಆತನು ಸಂಗೀತಪ್ರಿಯ. ಅವನ ಮನಸ್ಸು ಹಾತೊರೆಯುತ್ತಿತ್ತು. ನನ್ನ ಸಂಗೀತದಿಂದ ಅವನಿಗೆ ಸಂತೋಷವಾಗಿ ಚೈತನ್ಯವು ಹೆಚ್ಚಿತು. ಅದು ಶರೀರದ ಮೇಲೆಯೂ ಪರಿಣಾಮಕಾರಿಯಾಗಿರಬಹುದು ಅಷ್ಟೇ’’ ಎಂದರು.

ಆಸ್ಪತ್ರೆಯಲ್ಲಿ ಕಚೇರಿ

ಮೇಲಿನದು ಅನುಭವಕ್ಕೆ ಸಂಬಂಧಿಸಿದಲ್ಲಿ, ಈಗ ಹೇಳುವ ಘಟನೆ ಪ್ರಯೋಗಕ್ಕೆ ಸಂಬಂಧಿಸಿದುದು. ಸ್ಥಳ : ಅಮೇರಿಕಾದ ಮಿಚಿಗನ್ ರಾಜ್ಯದ ಒಂದು ಆಸ್ಪತ್ರೆ. ಅಲ್ಲಿನ ಸಭಾಂಗಣ, ವೇದಿಕೆಯ ಮೇಲೆ ಒಂದು ಪಿಯಾನೋ, ಸಭೆಯಲ್ಲಿ ನೆರೆದವರು ಸಂಗೀತ ವಿದ್ವಾಂಸರು ಮತ್ತು ಉಪಾಧ್ಯಾಯರು. ಮಂಕುಮಂಕಾಗಿ ಕಾಣುತ್ತಿದ್ದ ಯುವಕನೊಬ್ಬ ವೇದಿಕೆಯ ಮೇಲೆ ಹತ್ತಿ ಪಿಯಾನೋ ನುಡಿಸಲಾರಂಭಿಸಿದ. ಬೆಥೋವನ್, ಷೋಪಾನ್, ಮೊಜಾರಟ್ ಮುಂತಾದವರ ಕೃತಿಗಳು, ಮುಕ್ಕಾಲು ಗಂಟೆ ಕಾರ್ಯಕ್ರಮ. ಮುಗಿಯಿತು. ಎದ್ದ ಸಭೆಯಲ್ಲಿ ಸಂತೋಷ ಉಕ್ಕಿದ ಚಪ್ಪಾಳೆ. ಆತನೂ ಸಭೆಗೆ ವಂದಿಸಿದ. ''ಎಂತಹ ಕೈ'' ''ಒಳ್ಳೆಯ ಪಕ್ವವಾದ ಸಂಗೀತ'' ಎಂದು ಹೊಗಳುತ್ತಾ ಶ್ರೋತೃಗಳು ಚದುರಿದರು.

ಇಲ್ಲಿ ಸ್ವಾರಸ್ಯ ಎಂದರೆ, ಅದು ಹುಚ್ಚರ ಆಸ್ಪತ್ರೆ. ಪಿಯಾನೋ ವಾದಕನು ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿ. ಅವನ ಕತೆಯಿಷ್ಟೆ. ಹೆಸರು ಹೊರೇಸ್ : ತಕ್ಕಮಟ್ಟಿಗೆ ಅನುಕೂಲವಂತ ಸಂಸಾರವೊಂದಕ್ಕೆ ಸೇರಿದವ. ಬಾಲ್ಯದಲ್ಲಿ ಬಹು ಸಂಕೋಚ ಪ್ರಕೃತಿ. ಮುಖೇಡಿ ಅನ್ನೋಣ. ಯಾರೊಂದಿಗೂ ಸೇರಲೊಲ್ಲ. ತಾಯಿಗೆ ಅಚ್ಚುಮೆಚ್ಚು. ಅವನಿಗೆ ಕೊಟ್ಟಿದ್ದ ಆಟದ ಸಾಮಾನುಗಳಲ್ಲಿದ್ದ ತಂತಿ ವಾದ್ಯವೊಂದನ್ನು ಸದಾ ನುಡಿಸುತ್ತಿದ್ದ. ಇದನ್ನು ಗಮನಿಸಿದ ಅವನ ತಾಯಿ, ಸಂಗೀತಾಭಿರುಚಿ ಇರಬಹುದೆಂದೆಣಿಸಿ, ಉಪಾಧ್ಯಾಯರ ಬಳಿ ಪಿಯಾನೋ ವಾದನವನ್ನು ಕಲಿಸಲು ಏರ್ಪಡಿಸಿದಳು. ಇದೂ ನಾಲ್ಕಾರು ವರುಷಗಳ ಕಾಲ ನಡೆಯಿತು.

ಯಾವುದೋ ಸಂದರ್ಭದಲ್ಲಿ ಈ ಹೊರೇಸನ ಪಿಯಾನೋ ವಾದನವನ್ನು ಹಿರಿಯ ಸಂಗೀತ ವಿದ್ವಾಂಸನೊಬ್ಬನು ಕೇಳುವಂತಾಯಿತು. ವಿದ್ವಾಂಸನ ಹೆಸರು ಓಸಿಪ್ ಗೆಬ್ರಿಲೋವಿಚ್. ಪ್ರಸಿದ್ಧ ವಾದ್ಯಗೋಷ್ಠಿಯೊಂದರ ನಾಯಕ. ಹೊರೇಸನ ಪ್ರತಿಭೆಯನ್ನು ಮೆಚ್ಚಿ ಅವನಿಗೆ ಸಂಗೀತದಲ್ಲಿ ಇನ್ನೂ ಪ್ರೌಢಶಿಕ್ಷಣವನ್ನು ಕೊಡಲು ಒಪ್ಪಿದ. ಅವನ ಬಳಿ ಪಿಯಾನೋ ವಾದನ ಕೃತಿರಚನೆ ಮುಂತಾದುವುಗಳಲ್ಲಿ ಪ್ರೌಢಶಿಕ್ಷಣವೂ ದೊರೆಯಿತು. ಹೊರೇಸ್ ಉತ್ತಮ ಪಿಯಾನೋವಾದಕನೆಂದು ಅನೇಕ ಸಂಗೀತಾಭಿಮಾನಿಗಳಿಗೆ ತಿಳಿದುಬಂದಿತು. ಆದರೆ ಸಂಗೀತ ಕಚೇರಿ ಮಾಡಲು ಇಷ್ಟಪಡಲಿಲ್ಲ. ಕೇಳಲಪೇಕ್ಷಿಸುವವರು ಅವನ ಮನೆಗೇ ಬಂದು ಕೇಳಬೇಕು. ಆದರೆ ಪಾಠ ಹೇಳಲು ತಯಾರಾಗಿದ್ದ. ಸಾಕಷ್ಟು ಮಂದಿ ಹೊರೇಸನ ಬಳಿ ಸಂಗೀತವನ್ನು ಕಲಿಯುತ್ತಲೂ ಇದ್ದರು. ಹೀಗೆ ಎಂಟು ಹತ್ತು ವರುಷ ಕಳೆಯಿತು.

ಗುರು ವಿಯೋಗ

ಒಂದು ದಿನ ಇದಕ್ಕಿದ್ದ ಹಾಗೆ ಅವನಿಗೆ ಮಮತೆಯಿಂದ ವಿದ್ಯೆ ಕಲಿಸಿದ ಗೆಬ್ರಿಲೋವಿಚ್ ಸತ್ತು ಹೋದ. ಒಂದು ವರುಷದೊಳಗೆ ಹೊರೇಸನಿಗೆ ಬುದ್ಧಿಭ್ರಮಣೆಯಾಗಲಾರಂಭ

ವಾಯಿತು. ಇದ್ದಕ್ಕಿದ್ದ ಹಾಗೆ ಗಂಟೆಗಳ ಕಾಲ ಕಣ್ಣು ಕತ್ತಲೆ ಕಟ್ಟಿಕೊಳ್ಳುತ್ತಿತ್ತು. ಏನೇನೋ ಧ್ವನಿಗಳು ಕಿವಿಗೆ ಕೇಳಿಸುವಂತೆ ಅನುಭವವಾಗುತ್ತಿತ್ತು. ತನ್ನನ್ನು ಯಾರೋ ಅಪಹರಿಸಲು ಬರುವರೆಂಬ ಭ್ರಮೆ ಬಲವಾಗತೊಡಗಿತು. ಕೊನೆಕೊನೆಗೆ ತಾನು ಯಾರೆಂಬುದೇ ಮರೆತುಹೋಯಿತು. ಎಳೆಯ ಮಗುವಿನಂತೆ ಆಡತೊಡಗಿದ. ಬಟ್ಟೆ ಉಡುವುದು, ಆಹಾರ ತಿನ್ನುವುದು, ನೀರು ಕುಡಿಯುವುದು ಇವೆಲ್ಲಾ ಇನ್ನೊಬ್ಬರ ಸಹಾಯವಿಲ್ಲದೇ ನಡೆಯುವಂತೆಯೇ ಇರಲಿಲ್ಲ. ಈ ಮನಸ್ಥಿತಿಯಲ್ಲಿ ಹೊರೇಸನ ತಾಯಿ ನಿರ್ವಾಹವಿಲ್ಲದೆ ಅವನನ್ನು ಹುಚ್ಚಾಸ್ಪತ್ರೆಗೆ ಸೇರಿಸಿದರು.

ಅಲ್ಲಿನ ಪ್ರಸಿದ್ಧ ವೈದ್ಯ ಡಾ. ಐರಾ ಆಲ್‌ಟುಷರ್, ಹೊರೇಸನ ಪೂರ್ವೋತ್ತರವನ್ನೆಲ್ಲಾ ಸಾವಧಾನವಾಗಿ ಕೇಳಿದ. ಅನಂತರ ಹೊಸ ಪ್ರಯೋಗವೊಂದನ್ನು ಮಾಡಲು ನಿರ್ಧರಿಸಿದ. ಹೊರೇಸನಿಗೆ ಷೋಪಾನನ ಕೃತಿಗಳೆಂದರೆ ಬಹು ಇಷ್ಟವಾಗಿತ್ತು. ಡಾ. ಆಲ್‌ಟುಷರ್ ಪ್ರತಿ ದಿನ ಎರಡೆರಡು ಗಂಟೆಗಳ ಕಾಲ ಷೋಪಾನನ ಕೃತಿಗಳ ಧ್ವನಿಮುದ್ರಿಕೆಗಳನ್ನು ಹಾಕಿಸಿ ಅದರ ಮುಂದೆ ಹೊರೇಸನನ್ನು ಕೂರಿಸುವುದು. ಹೀಗೆ ಒಂದು ವರುಷ ಕಾಲ ಮಾಡುವ ವೇಳೆಗೆ ಹೊರೇಸನು ಜನಗಳನ್ನು ದಿಟ್ಟಿಸಿ ನೋಡುವುದು, ತಾನೇ ಮಾತನಾಡಿಕೊಳ್ಳುವುದೂ ಪ್ರಾರಂಭವಾಯಿತು. ಹೀಗೆ ಆರೇಳು ವರುಷಗಳು ನಡೆಯಿತು. ಅದರ ಫಲವಾಗಿ ಆದ ಬದಲಾವಣೆಯ ಪ್ರತೀಕ- ಆಸ್ಪತ್ರೆಯಲ್ಲಿ ನಡೆದ ಹೊರೇಸನ ಪಿಯಾನೋ ಕಚೇರಿ.

ಇಲ್ಲಿ ಇಂತಹುದೇ ಇನ್ನೊಂದು ಸಂದರ್ಭವೂ ನೆನಪಿಗೆ ಬರುತ್ತದೆ. ಅದು ಬಿಡಾರದ ಕೃಷ್ಣಪ್ಪನವರಿಗೆ ಸಂಬಂಧಿಸಿದುದು. ಕೃಷ್ಣಪ್ಪನವರ ಸಂಗೀತಕ್ಕೆ ಮನಸೋತ ಮದರಾಸಿನ ರಸಿಕರಲ್ಲೊಬ್ಬರು, ಆಳ್ವಾರ್ ಚೆಟ್ಟಿಯವರು, ಮದರಾಸ್ ಸಾಹುಕಾರ್ ಪೇಟೆಯಲ್ಲಿ ವಾಸವಾಗಿದ್ದ ಆಳ್ವಾರ್ ಚೆಟ್ಟಿಯವರು ಹಡಗು ವ್ಯಾಪಾರಿ. ಶ್ರೀಮಂತರು, ಕಲಾಭಿಮಾನಿಗಳು. ಉದಾರ ಹೃದಯ ಅವರದು. ಕೃಷ್ಣಪ್ಪನವರ ಸಂಗೀತವೆಂದರೆ ಇದ್ದಬದ್ದ ಕೆಲಸವನ್ನೆಲ್ಲಾ ನಿಲ್ಲಿಸಿಯಾದರೂ ಹೋಗಿ ಕೇಳಿಕೊಂಡು ಬರುತ್ತಿದ್ದರವರು.

ಒಮ್ಮೆ ಅವರಿಗೆ ವ್ಯಾಪಾರದಲ್ಲಿ ಬಹುಭಾರಿ ಆಘಾತವಾಯಿತು. ಅನಿರೀಕ್ಷಿತವಾಗಿ, ಇದ್ದಕ್ಕಿದ್ದಂತೆ ಸಂಭವಿಸಿದ ಈ ನಷ್ಟದಿಂದ ಚೆಟ್ಟಿಯವರಿಗೆ ಸ್ಮೃತಿ ತಪ್ಪಿತು. ಎಚ್ಚರವಾಗುವ ವೇಳೆಗೆ ಬುದ್ಧಿಭ್ರಮಣೆಯಾಗಿತ್ತು. ಯಾರಿಗೂ ತೊಂದರೆ ಮಾಡುವ ಹುಚ್ಚಲ್ಲ - ಅದು. ಸುಮ್ಮನೆ ಬಿರುಗಣ್ಣು ಬಿಟ್ಟುಕೊಂಡು ಅಂಗಾತನಾಗಿ ಬಿದ್ದಿರುವುದು. ತನ್ನ ಪಾಡಿಗೆ ತಾನೇ ಮಾತನಾಡಿಕೊಳ್ಳುತ್ತಿರುವುದು.

ರಸಿಕನಿಗೆ ಮತಿಭ್ರಮೆ

ಮನೆಯವರ ವ್ಯಥೆ ಹೇಳತೀರದು. ಪ್ರಸಿದ್ಧ ವೈದ್ಯರನ್ನು ಕರೆಸಿ ಚಿಕಿತ್ಸೆ ಮಾಡಿಸಿದರು. ಪ್ರಯೋಜನವಾಗಲಿಲ್ಲ. ಕೊನೆಗೆ ಆ ವೈದ್ಯರಲ್ಲೊಬ್ಬರು ಸಲಹೆ ಮಾಡಿದರು – ಆಳ್ವಾರ್

ಚೆಟ್ಟಿಯವರು ಸಂಗೀತ ಪ್ರಿಯರಾದುದರಿಂದ ಸಂಗೀತದಿಂದ ಅವರ ರೋಗವು ಗುಣವಾಗಬಹುದೋ ಏನೋ ಎಂದು. ಆ ಊರಿನಲ್ಲಿ ಅವರಿಂದ ಉಪಕೃತರಾಗಿದ್ದ ಕೆಲವು ವಿದ್ವಾಂಸರನ್ನು ಕರೆಸಿದರು. ಅವರುಗಳ ಸಂಗೀತವೂ ಆಯಿತು. ಆದರೂ ಪ್ರಯೋಜನ ವಾಗಲಿಲ್ಲ. ಕೊನೆಗೆ "ಬಿಡಾರದ ಕೃಷ್ಣಪ್ಪನವರನ್ನು ಕರೆಸಿರಿ. ಅವರನ್ನು ಕಂಡರೆ ಚೆಟ್ಟಿಯಾರಿಗೆ ಬಹು ವಿಶ್ವಾಸ" ಎಂದು ಯಾರೋ ಹೇಳಿದರು. ಕೃಷ್ಣಪ್ಪನವರಿಗೆ ಕರೆ ಹೋಯಿತು.

ಮದರಾಸಿಗೆ ಬಂದ ಕೃಷ್ಣಪ್ಪನವರು ನೇರವಾಗಿ ಆಳ್ವಾರ್ ಚೆಟ್ಟಿಯವರ ಮನೆಗೆ ಹೋದರು. ತಮ್ಮ ಸ್ನೇಹಿತನ ಸ್ಥಿತಿಯನ್ನು ನೋಡಿ ಬಹು ವ್ಯಥೆಪಟ್ಟರು. ಆಳ್ವಾರ್ ಚೆಟ್ಟಿಯವರನ್ನು ಉಯ್ಯಾಲೆಯ ಮೇಲೆ ಉದ್ದಕ್ಕೂ ಮಲಗಿಸಿದ್ದರು. ಚೆಟ್ಟಿಯವರು ತೊಲೆಗಳನ್ನೇ ದುರುಗುಟ್ಟಿಕೊಂಡು ತಮ್ಮ ಪಾಡಿಗೆ ತಾವೇ ನಗುತ್ತಾ ಮಾತಾಡಿಕೊಳ್ಳುತ್ತಿದ್ದರು. ಮಾರನೆಯ ಬೆಳಿಗ್ಗೆ ಕೃಷ್ಣಪ್ಪನವರು ಸ್ನಾನಮಾಡಿ ತಮ್ಮ ಆರಾಧ್ಯ ದೈವವಾದ ಮಾರುತಿಯನ್ನು ಧ್ಯಾನಮಾಡಿ ಮುಡುಪುಕಟ್ಟಿ ಚೆಟ್ಟಿಯವರು ಮಲಗಿದ್ದ ಹಜಾರಕ್ಕೆ ಬಂದರು. ಕೇವಲ ತಂಬೂರಿ ನಾದದೊಂದಿಗೆ ಹಾಡಲಾರಂಭಿಸಿದರು. ಹೀಗೆಯೇ ಕೆಲವು ದಿನಗಳು ಕಳೆದಿದ್ದವು - ಬೆಳಿಗ್ಗೆ ಮೂರು ಗಂಟೆ, ಸಾಯಂಕಾಲ ಮೂರು ಗಂಟೆ, ಅವರ ಹಾಡುಗಾರಿಕೆ; ಆಳ್ವಾರ್ ಚೆಟ್ಟಿಯವರನ್ನು ಮಲಗಿಸಿದ್ದ ಉಯ್ಯಾಲೆ ಬಳಿಯಲ್ಲಿ.

ಮೂರನೆಯ ದಿನ ಚೆಟ್ಟಿಯವರು ಮಾತನಾಡಿಕೊಳ್ಳುವುದೂ ನಗುವುದೂ ನಿಂತು ಹೋಯಿತು. ಏಳನೆಯ ದಿನ ಮಲಗಿದ್ದ ಹಾಗೆಯೇ ಕೃಷ್ಣಪ್ಪನವರ ಕಡೆ ತಿರುಗಿಕೊಂಡು ದುರುಗುಟ್ಟಿ ನೋಡಲಾರಂಭಿಸಿದರು. ಹತ್ತನೆಯ ದಿನ ಎಳೆದಾಡುವ ದನಿಯಿಂದ "ಕೃಷ್ಣಪ್ಪ ನವರಲ್ಲವೇ? ಇದೇನು ಮಾಡುತ್ತಿದ್ದೀರಿ? ಯಾವಾಗ ಬಂದಿರಿ?" ಎಂದು ಕೇಳಿದರು. ಎರಡು ಮೂರು ವಾರಗಳ ನಂತರ ಮೊದಲಿನ ಸ್ಥಿತಿಗೇ ಬಂದರು - ಆಳ್ವಾರ್ ಚೆಟ್ಟಿ.

ಆಳ್ವಾರ್ ಚೆಟ್ಟಿಯವರ ಕುಟುಂಬದ ಸಂತೋಷ ಹೇಳತೀರದು. ಕೃಷ್ಣಪ್ಪನವರಿಗೂ ಅಷ್ಟೇ. ಚೆಟ್ಟಿಯಾರ್ ಬಹು ಸಂತೋಷದಿಂದ ಕೃಷ್ಣಪ್ಪನವರ ಸಂಗೀತದ ಗುಣವನ್ನು ಹೊಗಳಿದರು. ಕೃಷ್ಣಪ್ಪನವರು ಒಪ್ಪಲಿಲ್ಲ. "ನಿಮ್ಮ ಜೀವನದಲ್ಲಿ ಈ ಕಷ್ಟಪಡಬೇಕೆಂದು ಭಗವದಿಚ್ಛೆಯಿತ್ತು. ಅವನ ಅನುಗ್ರಹದಿಂದಲೇ ಆ ಪೀಡೆ ಪರಿಹಾರವಾಯಿತು. ಇದರಲ್ಲಿ ನನ್ನದೇನಿಲ್ಲ" ಅಂದರು. ಕೃಷ್ಣಪ್ಪನವರಿಗೆ ಕೃತಜ್ಞತಾಪೂರ್ವಕವಾಗಿ ಸೂಕ್ತ ಬಹುಮಾನವನ್ನು ಅರ್ಪಿಸಬೇಕೆಂದು ಚೆಟ್ಟಿಯಾರರ ಆಸೆ. ಆದರೆ ಕೃಷ್ಣಪ್ಪನವರು ಒಪ್ಪಲಿಲ್ಲ. ಕೊನೆಗೆ ಬಲವಂತಕ್ಕೆ "ಈಗ ರಾಮಮಂದಿರವನ್ನು ಕಟ್ಟಿಸಲು ಸಂಕಲ್ಪ ಮಾಡಿದ್ದೇನೆ. ಅದಕ್ಕೆ ನಾಲ್ಕಾರು ಕಬ್ಬಿಣದ ತೊಲೆಗಳನ್ನು ಕೊಡಿ, ಸಾಕು" ಎಂದರು. ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★

ಸುಧಾ, 1973

7. ಕಾವ್ಯ-ಸಂಗೀತಗಳ ಸುಂದರ ಸಮನ್ವಯಕಾರ

ಈಗ ಕೆಲವು ವರುಷಗಳ ಹಿಂದೆ – ಒಂದು ಸಂಗೀತ ಕಾರ್ಯಾಗಾರ ವ್ಯವಸ್ಥೆ ಮಾಡಿದ್ದೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪರವಾಗಿ ಏರ್ಪಡಿಸಿದ್ದ ಈ ಕಾರ್ಯಾಗಾರ ಕೇವಲ ಒಂದು ರಾಗಕ್ಕೆ, ಅಂದರೆ ತೋಡಿ ರಾಗಕ್ಕೆ ಸೀಮಿತವಾಗಿತ್ತು. ಅದರಲ್ಲಿದ್ದ ವಿವಿಧ ಗೇಯ ಪ್ರಕಾರಗಳನ್ನು ಹಾಡಿ ರಾಗದ ಬಹುಮುಖಗಳನ್ನು ಅರಿಯುವುದು ಮತ್ತು ಆಸ್ವಾದಿಸುವುದೇ ಈ ಕಾರ್ಯಾಗಾರದ ಉದ್ದಿಶ್ಯ. ಪ್ರಸಿದ್ಧ ವಿದುಷಿ ಡಾ. ಎಂ. ಎಲ್. ವಸಂತಕುಮಾರಿಯವರು ಈ ಕಾರ್ಯಾಗಾರದ ನಿರ್ದೇಶಕರಾಗಿದ್ದರು. ಈ ಕಾರ್ಯಾಗಾರದಲ್ಲಿ ಅಧ್ಯಯನಕ್ಕೆ ಆರಿಸಿಕೊಂಡ ಕೃತಿಗಳಲ್ಲಿ ಪು. ತಿ. ನರಸಿಂಹಾಚಾರ್ಯರದೂ ಒಂದು. "ಶಾರದೀಶೋಭಾ" ಎಂದು ಪ್ರಾರಂಭವಾಗುವ ಈ ಗೀತೆ ಅವರ ಶರದ್ವಿಲಾಸ ರೂಪಕದಿಂದ ಆರಿಸಿಕೊಂಡುದು. ಇದು ತೋಡಿರಾಗದಲ್ಲಿಯೇ ರಚಿತವಾಗಿದ್ದರೂ ಈ ಗೀತೆಯಲ್ಲಿ ರಾಗವು ಅರಳಿರುವ ಆಕಾರದಲ್ಲಿ ಒಂದು ನವೀನತೆ ಅನುಭವವಾಗುತ್ತದೆ. ಅಲ್ಲದೆ ಗೀತೆಯ ಚೌಕಟ್ಟು ವಿಶೇಷವಾದುದು. ಇದನ್ನು ಕೇಳಿ ವಿಸ್ಮಿತರಾದ ವಸಂತಕುಮಾರಿ "ಇದು ಯಾರ ರಚನೆ. ಇದರ ಪದಬಂಧ, ನಡೆ, ರಾಗರೂಪ ಎಲ್ಲದರಲ್ಲಿಯೂ ಒಂದು ನಾವೀನ್ಯ ಇದೆಯಲ್ಲ! ಎಷ್ಟು ಕಾಲದಿಂದ ಕೃತಿರಚನೆ ಮಾಡುತ್ತಿದ್ದಾರೆ? ಕಚೇರಿ ಮಾಡುತ್ತಿದ್ದಾರೆಯೇ?" ಇತ್ಯಾದಿ ಕುತೂಹಲದಿಂದ ವಿಚಾರಿಸಿದರು. ಅದಕ್ಕೆ "ಇಲ್ಲ. ಅವರು ನಮ್ಮ ಹಿರಿಯ ಕವಿ, ಸಂಗೀತಗಾರರಲ್ಲ. ಬಹುತೇಕ ಸಂಗೀತಾಭ್ಯಾಸವೂ ಮಾಡಿಲ್ಲ" ಎಂದೆ. "ಹಾಗಾದರೆ ಈ ಮನೋಧರ್ಮ ಎಲ್ಲಿಂದ ಬಂತು?" ಎಂದು ಆಶ್ಚರ್ಯದಿಂದ ಕೇಳಿದರು ಎಂ. ಎಲ್. ವಿ.

ಅದಕ್ಕೆ ಉತ್ತರ ಹುಡುಕಲು ಅಂತಹ ಕಷ್ಟವೇನೂ ಪಡಬೇಕಾಗಿಲ್ಲ. ಪು.ತಿ.ನ. ಅವರ ಬಾಲ್ಯ ಕಾಲದಲ್ಲಿ ಸಂಗೀತವು ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು. ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಮೈಸೂರು ನಗರದಲ್ಲಿ ದಟ್ಟವಾದ ಸಂಗೀತ ವಾತಾವರಣ, ಸಂಗೀತದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುವ ಮಟ್ಟಿಗೆ. ಸ್ವಾಭಾವಿಕವಾಗಿ ಸಂಗೀತದ ಬಗೆಗೆ ಒಲವು. ಆದುದರಿಂದ ಕಲೆ ರಕ್ತಗತವಾದುದರಲ್ಲಿ ಆಶ್ಚರ್ಯವಿಲ್ಲ. ಇದಕ್ಕೆ ಸಂಬಂಧಿಸಿದಂತೆ ಒಂದು ಸನ್ನಿವೇಶ ನೆನಪಿಗೆ ಬರುತ್ತದೆ.

ಒಂದು ದಿನ ದೊರೆಸ್ವಾಮಿ ಅಯ್ಯಂಗಾರರ ಕೊಠಡಿಗೆ ಬಂದಿದ್ದ ಪು.ತಿ.ನ. "ಬಹಳ ದಿವಸ ಆಯಿತು ಕೇಳಿ. ಸ್ವಲ್ಪ ಮೈಸೂರು ತೋಡಿ ನುಡಿಸಿ" ಎಂದರು. ನನಗೆ ಸ್ವಲ್ಪ ಆಶ್ಚರ್ಯವೇ ಆಯಿತು. ಮೈಸೂರು ಮಲ್ಲಿಗೆ ಕೇಳಿದೀವಿ, ಮೈಸೂರು ಪಾಕ್ ಕೇಳಿದೀವಿ, ಮೈಸೂರು ಬೋಂಡ ಹೆಸರು ಕೇಳಿದೀವಿ. ಆದರೆ "ಮೈಸೂರು ತೋಡಿ?" ಇದು ವಿಚಿತ್ರ ಬೇಡಿಕೆ ಎನಿಸಿತು. ಆಮೇಲೆ

ದೊರೆಸ್ವಾಮಿ ಅಯ್ಯಂಗಾರ್ಯರನ್ನ ಇದರ ಬಗೆಗೆ ಕೇಳಿದೆ. "ಮೈಸೂರು ತೋಡಿಗೂ ಕಣಿವೆ ಕೆಳಗಿನ ತೋಡಿಗೂ ಸ್ವಲ್ಪ ವ್ಯತ್ಯಾಸ ಇರೋದು ನಿಜ. ಅದು ಹಿಂದಿನ ತಲೆಮಾರಿನ ಸಂಗೀತಗಾರರ ಕಚೇರಿ ಕೇಳಿದ್ದವರಿಗೆ ಅರ್ಥವಾಗುತ್ತೆ. ಎರಡರಲ್ಲಿಯೂ ರುಚಿಯಲ್ಲಿ ಸ್ವಲ್ಪ ವ್ಯತ್ಯಾಸ ಬರುತ್ತೆ. ಮುಖ್ಯವಾಗಿ ಮೈಸೂರು ತೋಡೀಲಿ ಗಾಂಧಾರಕ್ಕೆ ಗಮಕ ಹಚ್ಚೋಲ್ಲ. ಕಣಿವೆ ಕೆಳಗಿನವರು ಗಮಕ ಹಚ್ಚುತಾರೆ" ಎಂದರು. ಅನೇಕ ವರುಷಗಳ ನಂತರ ಹಿಂದಿನ ಪೀಳಿಗೆಯ ಮೈಸೂರು ಸಂಗೀತ ವಿದ್ವಾಂಸರ ಕೆಲವರ ರೆಕಾರ್ಡ್‌ಗಳನ್ನು ಕೇಳಿದಾಗ ಈ ಅಂಶ ಸ್ಪಷ್ಟವಾಗಿ ಅನುಭವ ಆಯಿತು. ಪು.ತಿ.ನ. ಅವರದು ಅಂತಹ ಸೂಕ್ಷ್ಮಗ್ರಹಣ ಶಕ್ತಿ. ಅಭಿರುಚಿಯಲ್ಲಿ ಅಷ್ಟೇ ಸೂಕ್ಷ್ಮ.

ಪು.ತಿ. ನರಸಿಂಹಾಚಾರ್ಯರು ಕರ್ನಾಟಕದ ಹಿರಿಯ ಹಾಗೂ ಹೆಸರಾಂತ ಕವಿ. ಅವರ ಕವನ ಸಂಗ್ರಹಗಳಾದ – ಹಣತೆ, ಮಾಂದಳಿರು, ಮುಂತಾದುವೂ, ಈಚಲು ಮರದ ಕೆಳಗೆ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಪ್ರಬಂಧಗಳು, ಮತ್ತು ರಾಮಾಚಾರಿಯ ನೆನಪು ಮುಂತಾದ ಗದ್ಯ ಚಿತ್ರಗಳೂ ಸಾಹಿತ್ಯಾಸಕ್ತರಿಗೆಲ್ಲಾ ಬಹುಕಾಲದಿಂದ ಪರಿಚಿತವಾಗಿವೆ. ಅವುಗಳ ಶಬ್ದ ಹಾಗೂ ಅರ್ಥ ಸಂಪತ್ತು ಎರಡನ್ನೂ ಹಿತವಾಗಿ ಕಟ್ಟಿರುವ ಛಂದಸ್ಸು, ಲಯ ಇವುಗಳಿಂದ ಪು.ತಿ.ನ. ಅವರ ಕಾವ್ಯಧಾರೆ ಸ್ಫುರಿಸಿದೆ. ಆದರೆ ಈ ನಾಲ್ಕು ದಶಕಗಳಿಂದ ಅವರು ಹೆಚ್ಚು ಪ್ರಸಿದ್ಧರಾಗಿರುವುದು ಅವರ ಗೀತ ನಾಟಕಗಳಿಂದ. ಪ್ರಾಯಶಃ ಅಹಲ್ಯೆಯಲ್ಲಿ ಚಿಗುರಿ ವಸಂತ ಚಂದನವೇ ಮುಂತಾದ ನಿಸರ್ಗದ ಚೆಲುವನ್ನು ಚಿತ್ರಿಸುವ ಗೀತ ನಾಟಕಗಳಲ್ಲಿಯೂ ಗೋಕುಲ ನಿರ್ಗಮನ, ಹಂಸದಮಯಂತಿ, ಹರಿಣಾಭಿಸರಣ, ರಾಮೋದಯ ಮುಂತಾದ ಪುರಾಣ ಕಥಾವಸ್ತುಗಳನ್ನೊಳಗೊಂಡ ಗೀತ ನಾಟಕಗಳಲ್ಲಿಯೂ ಫಲಭರಿತವಾಯಿತು. ಕಾವ್ಯ ಮತ್ತು ಸಂಗೀತಗಳು ಸುಂದರ ಸಮನ್ವಯದಿಂದ ಶೋಭಿತವಾದ ಈ ಗೀತ ನಾಟಕಗಳು ಕರ್ನಾಟಕದ ಇಂದಿನ ಸಂಗೀತ ಪ್ರಪಂಚಕ್ಕೆ ಆಚಾರ್ಯರ ವಿಶಿಷ್ಟವಾದ ಕೊಡುಗೆ ಎನ್ನಬೇಕು. "ಸಂಗೀತಮಪಿ ಸಾಹಿತ್ಯಂ ಸರಸ್ವತ್ಯಾಂ ಸ್ತನದ್ವಯಂ" ಎಂಬ ಪುರಾತನೋಕ್ತಿ ಎಲ್ಲರಿಗೂ ಗೊತ್ತಿರುವುದೇ. ಹಿಂದೆ ಇದು ಬಹುಮಟ್ಟಿಗೆ ನಿಜವೆನಿಸುವಂತಿತ್ತು. ನಮ್ಮ ಹಳೆಯ ಕಾವ್ಯಗಳನ್ನು ಪರಿಶೀಲಿಸಿದಾಗ ಸಂಗೀತ ಮತ್ತು ನೃತ್ಯಕ್ಕೆ ಸಂಬಂಧಿಸಿದ ಅನೇಕ ಪ್ರಸಂಗಗಳ ವರ್ಣನೆಗಳನ್ನು ಕಾಣುತ್ತೇವೆ. ಇದರಿಂದ ಆ ಕಾಲದ ಕವಿಗಳಿಗೆ, ಸಂಗೀತ ಮತ್ತು ನೃತ್ಯ ಕಲೆಗಳಲ್ಲಿ ವಿಶೇಷ ಪರಿಣತಿ ಇಲ್ಲದಿದ್ದರೂ ಸಾಕಷ್ಟು ಅಭಿರುಚಿ ಹಾಗೂ ತಿಳುವಳಿಕೆ ಇಲ್ಲವೆಂದೂ ಹೇಳಬಹುದು. ಆದರೆ ಇಂದಿನ ಸ್ಥಿತಿ ಅದಕ್ಕೆ ಬೇರೆಯಾಗಿದೆ. ಒಂದಕ್ಕೊಂದು ಸಂಬಂಧ ತಪ್ಪಿದೆ. ಅನೇಕ ಕವಿಗಳಿಗೆ ಸಂಗೀತಾಭಿರುಚಿ ಇಲ್ಲ. ಸಂಗೀತಗಾರರು ಸಾಹಿತ್ಯದ ಪಾತ್ರ ಮತ್ತು ಸೊಗಸನ್ನು ಅರಿಯರು. ಈ ಹಿನ್ನೆಲೆಯಲ್ಲಿ ಈ ಎರಡೂ ಪ್ರಕಾರಗಳಲ್ಲಿಯೂ ಅಭಿರುಚಿ ಹಾಗೂ ಅಭಿಮಾನ ಉಳ್ಳವರೂ, ರಸಗ್ರಹಣ ಮಾಡಿ ಅವೆರಡನ್ನೂ ಒಂದೇ ಧಾರೆಯಲ್ಲಿ ಅಭಿವ್ಯಕ್ತಪಡಿಸಿದಂತಹ ಅಪೂರ್ವ ವ್ಯಕ್ತಿ ಪು.ತಿ. ನರಸಿಂಹಾಚಾರ್ಯರು. ಅವರ ಸಂಗೀತಾಭಿರುಚಿಯ, ಸಂಗೀತ ಕೈಂಕರ್ಯದ ಪ್ರತೀಕಗಳಂತಿವೆ - ಅವರ ಗೀತ ನಾಟಕಗಳು.

ಗೀತ ನಾಟಕಗಳು ಸಂಗೀತ ಕ್ಷೇತ್ರಕ್ಕೆ ಹೊಸದೇನೂ ಅಲ್ಲ. ಒಂದು ಕಥೆಯನ್ನು ಹಾಡಿನರೂಪದಲ್ಲಿ ನಿರೂಪಿಸುವ ಪದ್ಧತಿ ಪ್ರಾಯಶಃ ಪ್ರಪಂಚದ ಎಲ್ಲ ಸಂಗೀತ ಪದ್ಧತಿಗಳಲ್ಲಿಯೂ ಇದೆ. ಪಾಶ್ಚಾತ್ಯ ರಾಷ್ಟ್ರಗಳ ಅಪೆರಾ ಅಥವಾ ನಮ್ಮ ಹಾಡುವ ಯಕ್ಷಗಾನಗಳು ಮುಂತಾದುವನ್ನು ಹೇಳಬಹುದು. ಅಪೆರಾದಲ್ಲಿ ಎಲ್ಲ ಪಾತ್ರಗಳ ಅಭಿನಯವೂ ಹಾಡುವುದರಿಂದಲೇ. ಅದರಲ್ಲಿ ಒಬ್ಬರು ಇಬ್ಬರು ಕೂಡಿ ಒಟ್ಟುಗೂಡಿದ ವೃಂದಗಾಯನವೇ ಮುಂತಾದ ವಿವಿಧ ರೀತಿಗಳಿರುತ್ತವೆ. ನಿಬದ್ಧವಾದ ಹಾಡುಗಳೂ ಅನಿಬದ್ಧವಾದ ಪದ್ಯ, ವೃತ್ತ ಮುಂತಾದುವು ಇರುತ್ತವೆ. ನಮ್ಮ ಯಕ್ಷಗಾನಗಳಲ್ಲಿಯೂ ಅಷ್ಟೇ. ಇಲ್ಲಿ ಯಕ್ಷಗಾನ ಅಂದರೆ ರಂಗಸ್ಥಳದಲ್ಲಿ ಪ್ರದರ್ಶಿತವಾಗುವ ದೃಶ್ಯರೂಪದಲ್ಲಿ ಅಲ್ಲ. ಮನೆಗಳಲ್ಲಿ ಅಥವಾ ಚಿಕ್ಕ ಗೋಷ್ಠಿಗಳಲ್ಲಿ ಹಾಡಿನ ರೂಪದಲ್ಲಿ ನಿರೂಪಿತವಾಗುತ್ತಿದ್ದ ರುಕ್ಮಿಣಿ ಕಲ್ಯಾಣ, ಚಂದ್ರಹಾಸನ ಕಥೆ ಅಥವಾ ಏರಿ ಶೇಷಾಚಾರ್ಯ ವಿರಚಿತ ಶ್ರೀನಿವಾಸ ಕಲ್ಯಾಣ ಮುಂತಾದುವನ್ನು ನೆನೆಯಬಹುದು. ತಮ್ಮ ಗೀತ ನಾಟಕಗಳಲ್ಲಿ ಪು.ತಿ.ನ. ಅವರು ಪ್ರಾಯಶಃ ಇದೇ ಸಂಪ್ರದಾಯವನ್ನು ಅನುಸರಿಸಿದ್ದಾರೆ – ಆದರೆ ತಮ್ಮದೇ ಆದ ರೀತಿಯಲ್ಲಿ. ಪಾತ್ರರಚನಾ ವಿಧಾನ ಹಿಂದಿನದು. ಮಾತು ಅಥವಾ ಕಾವ್ಯದ ಶೈಲಿ, ಸರಣಿ, ಇಂದಿನದು. ಧಾತು ಅಥವಾ ಸಂಗೀತಭಾಗ ಹಿಂದಿನದು. ಆದರೆ ಅದರಲ್ಲಿ ಅಲ್ಲಲ್ಲಿ ತಿದ್ದುವುದು, ಮೇಕ್‌ಅಪ್ ಮಾಡಿದ ಹಾಗೆ, ಇದರ ಫಲ ಹೊಸ ರುಚಿ, ಹೊಸ ಅನುಭವ.

ನನಗೆ ಮೊಟ್ಟಮೊದಲು ಈ ಹೊಸ ಅನುಭವ ಆದುದು – ನಾಲ್ಕು ದಶಕಗಳ ಹಿಂದೆ. ಆಕಾಶವಾಣಿಯ ಮೂಲಕ. ಆಗ ಆಕಾಶವಾಣಿ ಕೇಂದ್ರವು ಮೈಸೂರಿನಲ್ಲಿತ್ತು. ಸಾಂಪ್ರದಾಯಿಕ ಸಂಗೀತವನ್ನು ಹೆಚ್ಚು ಪ್ರಮಾಣದಲ್ಲಿ ಪ್ರಸರಿಸುತ್ತಿದ್ದರೂ ಆಧುನಿಕ ಕನ್ನಡ ಕವಿಗಳ ಕವನಗಳನ್ನು ರಾಗದ ಮೆರಗು ಹಚ್ಚಿ ಆಕರ್ಷಣೀಯವಾಗಿ ಮಾಡುವ ಪ್ರಯೋಗವನ್ನೂ ಆಕಾಶವಾಣಿ ಮಾಡುತ್ತಿತ್ತು. ಸಾಕಷ್ಟು ಪ್ರಮಾಣದಲ್ಲಿ ಮಾಡಿಯೂ ಮಾಡಿತೆನ್ನಬಹುದು. ಈ ಹಿನ್ನೆಲೆಯಲ್ಲಿ ನಾನು ಮೊದಲ ಬಾರಿಗೆ ಆ ಕೇಂದ್ರದಿಂದ ಪ್ರಸರಿತವಾದ ಪು.ತಿ. ನರಸಿಂಹಾಚಾರ್ಯರ 'ವಸಂತ ಚಂದನ' ಗೀತ ನಾಟಕವನ್ನು ಕೇಳಿದಾಗ ಅದರ ನಾವೀನ್ಯ ಆಕರ್ಷಿಸುವಂತಿತ್ತು. ಆದರೆ ರೂಪಕವು ಅಂತಹ ಅತಿಶಯವಾದುದು ಎನಿಸಲಿಲ್ಲ. ಇದಕ್ಕೆ ಕಾರಣವಿಲ್ಲದಿಲ್ಲ.

ವಸಂತಚಂದನ, ಗೀತನಾಟಕ ನಿಜ. ಸಂಗೀತ ಪರಿಭಾಷೆಯಲ್ಲಿ 'ಗೇಯನಾಟಕ' ವೆನ್ನಬಹುದು. ಆದರೆ ಪರಂಪರೆಯಿಂದ ಬಂದ ಗೇಯನಾಟಕ, ಅಥವಾ ಯಕ್ಷಗಾನಗಳಿಗೆ ಹಾಡಿನಂತೆಯೇ ರಾಗಸಹಿತ ಅಥವಾ ಇಲ್ಲದೆ ಮಾತನಾಡಬೇಕಾದ ಗದ್ಯಾಂಶಗಳೂ ಗಣನೀಯ ಪ್ರಮಾಣದಲ್ಲಿರುತ್ತವೆ. ದೀರ್ಘವಾದ ಸಂಭಾಷಣೆ, ಪದ್ಯ – ಹಾಡುಗಳೆಲ್ಲಾ ಸಮ-ಸಮ ಪ್ರಮಾಣದಲ್ಲಿರುತ್ತವೆ. ನಾಟಕದಲ್ಲಿ ಆಯಾ ಸನ್ನಿವೇಶದ ರಸೋತ್ಪತ್ತಿಗೆ ಹಾಡಿನಂತೆಯೇ ಇಲ್ಲಿ ಮಾತೂ ಪೋಷಕವಾಗುತ್ತದೆ. ಆದರೆ ವಸಂತಚಂದನವು ಬೇರೆ ರೀತಿ ಇದ್ದಂತೆ ಅನುಭವವಾಗುತ್ತಿತ್ತು. ಅದರಲ್ಲಿ ಮಾತಿನ ಭಾಗಗಳೇನೂ ಇಲ್ಲದಿಲ್ಲ. ಆದರೆ ಮಾತುಗಳು

ಒಂದು ಸನ್ನಿವೇಶಕ್ಕೂ ಮುಂದಿನದಕ್ಕೂ ಸಂಬಂಧಿಸುವ ಕೊಂಡಿಯಂತೆ ಭಾಸವಾಗುತ್ತಿತ್ತು. ಹಾಡೂ ಮಾತೂ ಒಂದೇ ಕಾವ್ಯಧಾರೆಯಲ್ಲಿ ಕೂಡಿಕೊಂಡಂತಿದ್ದು ಈ ಗೀತನಾಟಕವು ಪಾಶ್ಚಾತ್ಯ ಅಪೆರಾಗಳನ್ನು ನೆನಪಿಗೆ ತರುತ್ತಿತ್ತು.

ವಸಂತ ಚಂದನದಲ್ಲಿಯೂ ಸಂಗೀತದ ಪ್ರಭಾವವು ಅಧಿಕವಾಗಿದ್ದರೂ ಕಾವ್ಯಭಾಗವೂ ಅಷ್ಟೇ ಆಕರ್ಷಣೀಯ. ಎರಡೂ ಸಮತೂಕದಲ್ಲಿದ್ದವು ಎನ್ನಬಹುದು. ಆದರೆ ಧಾತು ಅಥವಾ ಸಂಗೀತ ಭಾಗದಲ್ಲಿ ಒಂದು ನಾವೀನ್ಯದ ಅನುಭವ. ನಾವೀನ್ಯ ಅಂದರೆ ನವ್ಯಸಂಗೀತ ಎಂಬ ಅರ್ಥವಲ್ಲ. ಹಳೆಯ ಪ್ರಕಾರದೊಳಗೇ, ಆದರೆ ಒಂದು ಹೊಸ ರುಚಿ. ಆಧುನಿಕ ಸೌಂದರ್ಯವರ್ಧಕ ಸಾಮಗ್ರಿಯನ್ನು ಅದೇ ಎದ್ದು ಕಾಣದಂತೆ ಉಪಯೋಗಿಸಿದ ತರುಣಿಯಂತೆ ಎನ್ನಬಹುದು. ಮುಂದೆ ಪ್ರಸರಿತವಾದ ರೂಪಕಗಳೂ ಇದೇ ಮಾದರಿಯಲ್ಲಿದ್ದುವು. ಈ ಹೊಸ ರುಚಿಯ ಸಂಗೀತವು ಆಕಾಶವಾಣಿಯಲ್ಲಿದ್ದ ಸಂಪ್ರದಾಯದ ಪ್ರಾಕಾರದಿಂದ ಧೈರ್ಯವಾಗಿ ಹೊರ ನೋಡಬಲ್ಲ ಎಸ್.ಎನ್. ಶಿವಸ್ವಾಮಿ, ಪದ್ಮಚರಣ್‌ರವರ ಪ್ರಭಾವವೆಂದೂ ಭಾವಿಸಿದ್ದೆ. ಆದರೆ ಒಂದೆರಡು ವರುಷಗಳ ಅನಂತರ ಗೀತೆಯಂತೆಯೇ ಅದರ ಸಂಗೀತವೂ ಪು.ತಿ.ನ. ಅವರದೇ, ಮತ್ತು ಈ ಎರಡೂ ಒಟ್ಟಿಗೇ ಹುಟ್ಟಿದುವು ಎಂಬ ಸಂಗತಿಯನ್ನು ತಿಳಿದ ಮೇಲೆ ಆಶ್ಚರ್ಯವುಂಟಾಯಿತು.

ಪು.ತಿ. ನರಸಿಂಹಾಚಾರ್ಯರು ಶ್ರೇಷ್ಠ ಕವಿ ಹಾಗೆಯೇ ರಸಿಕ, ರಸಾನುಭವಿಯೂ ಸಹ. ನಿಜ. ಆದರೆ ಅವರ ಈ ಗೀತರೂಪಕಗಳ ರಾಗಹಂದರ ಹಲವಾರು ಕಾಲ, ಸಾಧನೆ ಮಾಡಿ, ಪಕ್ವವಾದ ಮನೋಧರ್ಮದಿಂದ ಹುಟ್ಟಿದಂತೆ ಅನುಭವವಾಗುತ್ತದೆ. ಕೆಲವು ವೇಳೆ ಅದಕ್ಕೂ ನಿಲುಕದ ಎಷ್ಟೋ ಅಂಶಗಳಿಂದಲೂ ಕೂಡಿದಂತಿದೆ. ಆದರೆ ಇಲ್ಲಿ ವಿಶೇಷವೆಂದರೆ ಪು.ತಿ.ನ. ಸಂಗೀತಗಾರರಲ್ಲ. ಆ ಕಲೆಯ ಶ್ರೀ ಓನಾಮಗಳ ಪಾಠವೂ ಆಗಿದೆಯೋ ಇಲ್ಲವೋ ತಿಳಿಯದು. ಕೆಲವು ರಾಗಗಳನ್ನು ಗುರ್ತು ಹಿಡಿಯುವುದನ್ನು ಬಿಟ್ಟು, ಅದಕ್ಕೂ ಮೀರಿದ ಶಾಸ್ತ್ರಜ್ಞಾನವೂ ಇದೆಯೋ ಇಲ್ಲವೋ ತಿಳಿಯದು. ಆದರೆ ಈ ರೂಪಕಗಳಲ್ಲಿ ಬರುವ ಕೆಲವು ಗೀತಗಳ ರಾಗಸಂಯೋಜನೆಯನ್ನು ಪರಿಶೀಲಿಸಿದಲ್ಲಿ ಆಶ್ಚರ್ಯವುಂಟಾಗುವುದು ಸಹಜವೇ. ಅವರು ಸಾಮಾನ್ಯವಾಗಿ ಬಳಸಿರುವುದು ಕರ್ನಾಟಕ ಸಂಪ್ರದಾಯದ ರಾಗಗಳನ್ನೇ. ಇದು ಸಹಜವೇ. ನರಸಿಂಹಾಚಾರ್ಯರು ಹುಟ್ಟಿ ಬೆಳೆದುದು ಸಂಸ್ಕೃತ, ಸಾಹಿತ್ಯ, ವೇದ, ಸಂಗೀತಗಳು ಮೊಳಗುತ್ತಿದ್ದ ವಾತಾವರಣದಲ್ಲಿ. ವಿದ್ಯಾರ್ಥಿದೆಸೆಯಲ್ಲಿ ಮೈಸೂರಿನಲ್ಲಿ ಅಂದಿನ ಸಂಗೀತ ದಿಗ್ಗಜಗಳ ಕಲಾ ಸೌರಭವನ್ನು ಸವಿಯುತ್ತಾ ಬೆಳೆದರು. ಆ ಸಂಗೀತದ ರುಚಿ ಮತ್ತು ಪರಿಮಳಗಳು ಮನಸ್ಸಿನಲ್ಲಿ ದೃಢವಾಗಿ ನೆಲೆಸಿವೆ. ಕಲೆಯ ಸತ್ವವನ್ನು ಹಿಡಿಯಬಲ್ಲ, ಸೂಕ್ಷ್ಮ ಗ್ರಹಣಶಕ್ತಿ ಬೆಳೆಸಿಕೊಂಡರು. ಮೈಸೂರು ಬಾನಿ ಅವರ ಮನಸ್ಸಿನಲ್ಲಿ, ಅಭಿರುಚಿಯಲ್ಲಿ ಬೇರೂರಿತು. ಅನೇಕ ಸಲ ಕೆಲವು ಮುಖ್ಯರಾಗಗಳ ಆಲಾಪನೆಯನ್ನು ಕೇಳಿದಾಗ "ಮೈಸೂರು ರುಚಿ ಬಂದಿಲ್ಲ" ಎನ್ನುತ್ತಿದ್ದರು.

ಆಚಾರ್ಯರು ಸವಿದ, ಹಾಗೂ ಮನಸ್ಸಿನಲ್ಲಿ ಪಕ್ವಗೊಂಡ ಈ ಹಲವಾರು ಕಾವ್ಯ ಸಂಗೀತಾನುಭವಗಳು ಅವರ ಗೀತನಾಟಕ ಅಥವಾ ರೂಪಕಗಳಲ್ಲಿ ರೂಪುಗೊಂಡಿವೆ. ಇದನ್ನೇ ಪ್ರಸ್ತಾಪಿಸುತ್ತಾ – "ನಾನು ಕೇಳಿದ ಹಲವಾರು ಸಂಗೀತಗಳ ಸುಖ, ನೋಡಿದ ನೃತ್ಯಾಭಿನಯಗಳ ಸೊಗಸು, ಮನನ ಮಾಡಿದ ಕಾವ್ಯಗಳ ರಸರುಚಿ, ಮತ್ತು ಇವುಗಳೆಲ್ಲದರಲ್ಲೂ ಪಟ್ಟ ಒಂದು ತೆರದ ಅತೃಪ್ತಿ ಹಲವಾರು ಛಂದಸ್ಸುಗಳು, ನನ್ನ ಮನಸ್ಸನ್ನು ತೂಗುಯ್ಯಾಲೆಯಾಡಿಸಿದ ಬಗೆ, ನನ್ನ ಹೃದಯಕ್ಕೆ ಅತಿ ಸಮೀಪವಾಗಿ ಸ್ನೇಹದಂತಿರುವ ಒಂದು ತೆರದ ಅಲೌಕಿಕ ವಿಷಾದ ಅದರ ಸುತ್ತಿನ ಹಂಬಲಗಳು, ಹೀಗೆ ನಾನು ಜಾಗ್ರತೆ ಸ್ವಪ್ನಾವಸ್ಥೆಗಳಲ್ಲಿ ಪಟ್ಟ ಸೂರಾರು ತೀವ್ರಾನುಭೂತಿಗಳು, ನನ್ನಲ್ಲಿಯೇ ಮುಗಿಯುವುದೆಂತು?" ಎಂದು ತಮ್ಮನ್ನೇ ಪ್ರಶ್ನಿಸಿಕೊಂಡಿದ್ದಾರೆ. ಆಚಾರ್ಯರ ಈ ಪ್ರಶ್ನೆಗಳಿಗೆ ಉತ್ತರಗಳಂತಿವೆ - ಈ ಗೀತರೂಪಕಗಳು. ಇವುಗಳ ಕಾವ್ಯ ಭಾಗದ ವೈಶಿಷ್ಟ್ಯವನ್ನು ಅನೇಕ ಪುಸ್ತಕ, ಲೇಖನಗಳ ಮೂಲಕ ಬೇರೆ ಬೇರೆ ಲೇಖಕರು ಎತ್ತಿ ತೋರಿದ್ದಾರೆ. ಸಾರಿದ್ದಾರೆ. ಪ್ರಕೃತ ಈ ರೂಪಕಗಳಲ್ಲಿ ಆಚಾರ್ಯರು ಆ ಕಾವ್ಯ ಸೌಂದರ್ಯ ವರ್ಧಕವಾಗಿ ಸಂಯೋಜಿಸಿದ ಸಂಗೀತ ಹಾಗೂ ಅದರ ವಿವಿಧ ರಚನೆಗಳನ್ನು ಅವಲೋಕನ ಮಾಡುವುದೇ ಈ ಲೇಖನದ ಉದ್ದಿಶ್ಯ.

ಪು.ತಿ.ನ. ಅವರ ಸಂಗೀತ ರಚನೆಗಳನ್ನು ಒಟ್ಟು ಪರಿಶೀಲಿಸಿದರೆ ಒಂದು ವೈಶಿಷ್ಟ್ಯ ಹಾಗೂ ವೈವಿಧ್ಯದ ಅನುಭವವಾಗದಿರದು. ಅವುಗಳಲ್ಲಿ ಕೀರ್ತನ ರೀತಿಯ ಪ್ರತ್ಯೇಕ ಸ್ತುತಿ ಪದಗಳಿವೆ. ಭಾವಾಭಿವ್ಯಕ್ತಿ ರೀತಿಯ ಗೀತೆಗಳಿವೆ. ಗೀತರೂಪಕಗಳಲ್ಲಿಯೂ ಅಷ್ಟೇ. ನಿಸರ್ಗ ಚೆಲುವನ್ನು ಬಣ್ಣಿಸುವ ಗೀತೆಗಳಿವೆ. ಕಥಾಸಂದರ್ಭವನ್ನು ಚಿತ್ರಿಸುವ ಗೀತೆಗಳಿವೆ. ವ್ಯಕ್ತಿಗಳೇ ಮುಂತಾದುವುಗಳಿಗೆ ಅನಿಬದ್ಧರೂಪದಲ್ಲಿ ಅಂದರೆ ಆ ಸನ್ನಿವೇಶಗಳಿಗನುಗುಣವಾಗಿ ಅವರಿಗೆ ಸ್ಫುರಿಸಿದ ರಾಗಗಳನ್ನು ಸೂಚಿಸಿಬಿಟ್ಟಿದ್ದಾರೆ. ಇದು ಆಯಾ ಪಾತ್ರಧಾರಿಗಳ ಜಾಣ್ಮೆ ಮತ್ತು ಸಮಯ ಸ್ಫೂರ್ತಿಯನ್ನನುಸರಿಸಿ ನಿರೂಪಿತವಾಗುತ್ತದೆ. ನಿಬದ್ಧ ರೂಪದಲ್ಲಿ ಅಂದರೆ ಕ್ರಮಬದ್ಧವಾದ ರಾಗಸಂಯೋಜನೆ ಮಾಡಿದ ಅನೇಕ ಹಾಡುಗಳು ಈ ರೂಪಕಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಅನೇಕವು ಪು.ತಿ.ನ. ಅವರ ಕಲ್ಪನೆಗಳ ನಾವೀನ್ಯದ ಪ್ರತೀಕದಂತಿವೆ. ಅವು ಬಹುತೇಕ ಸಂಪ್ರದಾಯದ ಪ್ರಕಾರದೊಳಗೇ ನಿರ್ಮಿತವಾದಂತಿವೆ. ಅಲ್ಲದೆ ದೇಶೀಯ ರಾಗಗಳಲ್ಲಿಯೂ ಇವೆ. ಇನ್ನೂ ಕೆಲವು ಭಾವತರಂಗಗಳನ್ನು ಅನುಸರಿಸಿ ನವೀನ ರಾಗಛಾಯೆಗಳಿಂದ ಮೂಡಿ ಬಂದಿವೆ. ಇವುಗಳಿಗೆ ಹೊಸ ನಾಮಕರಣವನ್ನು ಮಾಡಿದ್ದಾರೆ. ಕೆಲವು ಪರಂಪರೆಯ ರಾಗಕೋಶಗಳಲ್ಲಿ ಕಾಣಬರುತ್ತವೆ, ನಿಜ. ಆದರೆ ಅಲ್ಲಿ ಕೊಟ್ಟಿರುವ ರೂಪಕ್ಕೂ ಪು.ತಿ.ನ. ಇತ್ತಿರುವ ರೂಪಕ್ಕೂ ಬಹು ವ್ಯತ್ಯಾಸವಿದೆ. ಪು.ತಿ.ನ. ಅವರ ಈ ರಾಗಲಹರಿಯ ವಿಶೇಷವೆಂದರೆ ಅವರು ಮೊದಮೊದಲು ರಚಿಸಿದ ಗೀತರೂಪಕಗಳಲ್ಲಿ ಕರ್ನಾಟಕ ಮತ್ತು ಹಿಂದೂಸ್ತಾನಿ ರಾಗಗಳು ಸಮ ಸಮ ಪ್ರಮಾಣದಲ್ಲಿ ಕಂಡುಬರುತ್ತವೆ. ಗೋಕುಲ ನಿರ್ಗಮನದ ಹಿಂದಿನ ಗೀತ ನಾಟಕಗಳ ರಾಗ ಸಂಯೋಜನೆಗೆ ಆಕಾಶವಾಣಿಯ ಆರ್.ಕೆ. ಶ್ರೀಕಂಠನ್, ಪದ್ಮಚರಣ್ ಮುಂತಾದವರು ನೆರವಾದರು. ಅನಂತರದ ರೂಪಕಗಳಲ್ಲಿ

ಬಂದಿರುವ ಹೊಸ ಹೊಸ ರಾಗಛಾಯೆಗಳೂ ರಾಗ ರಂಜನೆಗಳೂ ಆಚಾರ್ಯ ನಿರ್ಮಿತವಾದವು. ಅವಕ್ಕೂ ಈಚಿನ ರಾಮಾಯಣ ಕಥಾವಸ್ತು ಅವಲಂಬಿಸಿ ರಚಿತವಾದ ರೂಪಕಗಳಲ್ಲಿ ಕರ್ನಾಟಕ ಸಂಪ್ರದಾಯದ ಪ್ರಭಾವವೇ ಅಧಿಕವಾಗಿರುವುದನ್ನು ಕಾಣಬಹುದಾಗಿದೆ.

ನಿದರ್ಶನವಾಗಿ 'ಹಂಸ ದಮಯಂತಿ' ಯಲ್ಲಿ ಹಂಸೆಯು ನಳನಿಗೆ ದಮಯಂತಿಯನ್ನು ಬಣ್ಣಿಸುವ ಹಾಡನ್ನು ನೆನೆಯಬಹುದು. ''ನಿಂದೆಡೆಯನು ತುಂಬುವ ಸುಂದರನೆ'' ಎಂಬ ಗೀತೆಯ ರಾಗಛಾಯೆ ಪ್ರಾಯಶಃ ಶುದ್ಧ ಸಾವೇರಿ. ಆದರೆ ಅಲ್ಲಲ್ಲಿ ಶುದ್ಧ ರಿಷಭ ಪ್ರಯೋಗವಿದೆ. ಈ ಸ್ವರಗಳ ಸಂಯೋಜನೆಯು ಒಂದು ವಿಶೇಷ ರುಚಿ ಕೊಟ್ಟಿದೆ. ಸನ್ನಿವೇಶಕ್ಕೆ ಸೂಕ್ತವಾದ ಭಾವ ಪ್ರಚೋದನೆಗೂ ಅನುಗುಣವಾಗಿದೆ. ಪರಂಪರೆಯಿಂದ ಬಂದ ಯಾವ ರಾಗದಲ್ಲಿಯೂ ಈ ರೀತಿಯ ಸಂಯೋಜನೆ, ಅಥವಾ ರುಚಿ ಕಾಣಬಂದಿಲ್ಲವಾಗಿ ಇದೊಂದು ನೂತನ ಸೃಷ್ಟಿಯಂತೆ ಇದ್ದಿತು. ಹೊಸ ಹೆಸರಿತ್ತರು. ಋಷಭ ವಿಲಾಸ. ರಾಗಗಳ ಪಂಕ್ತಿಗೆ ಸೇರಿತು. ಹೀಗೆಯೇ ಇದೇ ಗೀತರೂಪಕದ ಇನ್ನೊಂದು ಹಾಡು ''ಏನೊರೆದೆ ಬಾನಂಚಿನಂಚೇ'' ಹಂಸವನ್ನು ಉದ್ದೇಶಿಸಿ ನಳನು ಹಾಡಿರುವುದು. ಪೂರ್ವಾಂಗದಲ್ಲಿ ಜಯ ಜಯವಂತಿಯನ್ನೂ ಉತ್ತರಾಂಗದಲ್ಲಿ ಸೈಂಧವಿಯನ್ನು ಹೋಲುವಂತಿದೆ – ಆದರೆ ಛಾಯೆಯಲ್ಲಿ ಮಾತ್ರ ಒಟ್ಟು ಅದರದೇ ಒಂದು ಆಕಾರ ಬಂದಿದೆ. ಇದಕ್ಕೆ ಗಾಂಧಾರದೋಲ ಎಂದು ಹೆಸರು ಕೊಟ್ಟಿದ್ದಾರೆ. ಹರಿಣಾಭಿ ಸರಣದ 'ಹರಿಣಿ' ರಾಗ ಮತ್ತು ಸೀತೆಯು ಮಾಯಾಮೃಗದ ಚೆಲುವನ್ನು ನೋಡಿ ಬಣ್ಣಿಸುವ ''ಅಗೋ ನೋಡು ಎಂಥ ಹರಿಣಿ'' ಎಂಬ ಗೀತ ಅಲ್ಲಲ್ಲಿ ಹಿಂದೂಸ್ತಾನಿಯ ಜಿಲಾಕಾಫಿ ರಾಗದ ಛಾಯೆ ಅನುಭವವಾಗುವುದು. ಗೀತದ ಒಟ್ಟು ಭಾವದಲ್ಲಿ ಒಂದು ಆಸೆ ಮತ್ತು ಮುಗ್ಧತೆಯು ಕಾಣಬರುವುದು. ಹೀಗೆ ಆಯಾ ಸಮಯ ಅದರ ಭಾವಕ್ಕೆ ಅನುಗುಣವಾಗಿ ಬಂದ ನಾದದ ಕಲ್ಪನೆಗಳಲ್ಲಿ ಕೆಲವಕ್ಕೆ ನಿರ್ದಿಷ್ಟ ರಾಗ ಆಕಾರವನ್ನಿತ್ತು ಉಪಯೋಗಿಸಿದ್ದಾರೆ. ಹೀಗೆ ಆಚಾರ್ಯರಿಂದಲೇ ನಿರ್ಮಿತವಾದ ಎಂಟೊಂಬತ್ತು ರಾಗಗಳನ್ನು ಅವರ ಗೀತ ನಾಟಕಗಳಲ್ಲಿ ಕಾಣಬಹುದು. ಇವುಗಳಲ್ಲಿ ಋತುವಿಲಾಸ, ಋಷಭವಿಲಾಸ, ಗಾಂಧಾರದೋಲ, ಸುಧಾ, ಹರಿಣಿ ಮುಂತಾದ ರಾಗಗಳು ಪು.ತಿ.ನ. ಅವರ ಸ್ವಂತ ನಿರ್ಮಿತವಾದವು. ಛಾಯ, ವಾಸಂತೀ, ಶ್ಯಾಮಲ, ಸಂಜೀವಿನೀ ಮುಂತಾದ ಹೆಸರುಗಳು ರಾಗಕೋಶಗಳಲ್ಲಿ ಕಾಣಬರುತ್ತವೆ. ಆದರೆ ಹೆಸರಿನಲ್ಲಿ ಮಾತ್ರ ಸಾಮ್ಯ ಅಷ್ಟೇ. ಪು.ತಿ.ನ. ನಿರ್ಮಿತ ಅದೇ ರಾಗಕ್ಕೂ ಹಳೆಯ ರಾಗಗಳಲ್ಲಿ ಕಂಡು ಬರುವ ಅದೇ ರಾಗಕ್ಕೂ ಅಜಗಜಾಂತರ ವ್ಯತ್ಯಾಸ. ನಿದರ್ಶನವಾಗಿ ಅವರ ವಾಸಂತೀ ರಾಗವನ್ನು ನೋಡುವ. ರಾಗಕೋಶದಲ್ಲಿ ವಾಸಂತಿಯು 27ನೇ ಮೇಳ ಸರಸಾಂಗಿಯ ಜನ್ಯವೆಂದು ಸೂಚಿಸಿದೆ. ಆರೋಹಣ ಸರಿಗಪಧಸ. ಅವರೋಹಣ ಸಧಪಗರಿಸ. ಆದರೆ ಪು.ತಿ.ನ. ಅವರ ವಾಸಂತಿ ರಾಗವನ್ನು ಯಾವ ಮೇಳಜನ್ಯವೆಂದು ನಿರ್ಧರಿಸುವುದು ಕಷ್ಟ. ನಾಟಕಪ್ರಿಯವಾಗಬಹುದು ಅಥವಾ ಚಕ್ರವಾಕವಾಗಬಹುದು. ಇದೇ ಸಮಸ್ಯೆ ಅವರ ಛಾಯ, ಸಂಜೀವಿನೀ ಮುಂತಾದ ರಾಗಗಳಲ್ಲಿಯೂ ಕಂಡುಬರುವುದು.

ಅವರ ಸಮಯಸ್ಫೂರ್ತಿಯ ಫಲವಾಗಿ ರಾಗಸ್ವರೂಪ ಮನಸ್ಸಿನಲ್ಲಿ ಮೂಡಿದೆ. ಅದರ ಆರೋಹಣ ಅವರೋಹಣಗಳನ್ನು ಸ್ಥೂಲವಾಗಿ ನಿರ್ಧರಿಸಿ ಅದರೊಂದಿಗೆ ಮೂಡಿದ ಹೆಸರನ್ನು ಕೊಟ್ಟಿದ್ದಾರೆ ಎನ್ನಬಹುದು. ಏಕೆಂದರೆ ಇವುಗಳಲ್ಲಿ ಅನೇಕವು ರಾಗವ್ಯಾಕರಣ ಬದ್ಧವಾಗಿಲ್ಲ. ನಿದರ್ಶನವಾಗಿ ಋಷಭವಿಲಾಸದ ಆರೋಹಣದಲ್ಲಿ ಚತುಶ್ರುತಿ ರಿಷಭವಿದ್ದಲ್ಲಿ ಅವರೋಹಣದಲ್ಲಿ ಶುದ್ಧ ಋಷಭವಿದೆ. ಹೀಗೆಯೇ ಕೆಲವು ಗೀತೆಗಳಿಗೆ ಮಿಶ್ರದುರ್ಗ, ಯಮನ್, ಬೇಹಾಗ್ ಮುಂತಾಗಿ ಮಿಶ್ರ ತಳಿಗಳನ್ನು ಉಪಯೋಗಿಸಿದ್ದಾರೆ. ಇನ್ನು ಕೆಲವದರಲ್ಲಿ ಮೋಹನ ಸ್ವರಗಳು ಪೀಲು ಮತ್ತು ಷಣ್ಮುಖಪ್ರಿಯ ಸ್ವರಗಳು ಹೀಗೆ ಕೇವಲ ಸ್ವರದ್ರವ್ಯವನ್ನು ಸೂಚಿಸಿ ರಾಗರೂಪಿಸುವುದನ್ನು ಗಾಯಕನ ಸೌಕರ್ಯಕ್ಕೇ ಬಿಟ್ಟಿದ್ದಾರೆ. ಇವುಗಳನ್ನೆಲ್ಲಾ ಒಟ್ಟು ಪರಿಶೀಲಿಸಿದರೆ, ಪು.ತಿ.ನ. ರವರ ಸಂಗೀತಕಲ್ಪನೆ, ಸಾಂಪ್ರದಾಯಿಕ ಸಂಗೀತದ ತಳಹದಿಯ ಮೇಲಿದ್ದರೂ ಅದರಲ್ಲಿ ಬಹುಪಾಲು applied music ಅಥವಾ ಪ್ರಾಯೋಗಿಕ ಸಂಗೀತದಂತಿದೆ. ನಮ್ಮ ಹಿಂದಿನ ನಾಟಕ ಸಂಗೀತವಿದ್ದ ಹಾಗೆ. ಹಾಡುವುದು ಬಹುತೇಕ ಸಾಂಪ್ರದಾಯಿಕ ರಾಗಗಳಾದರೂ ಕೆಲವೆಡೆ ಭಾವೋತ್ಕರ್ಷತೆಯ ದೃಷ್ಟಿಯಿಂದ ಅನ್ಯಪ್ರಯೋಗವೂ ಆಗುತ್ತಿತ್ತು. ಅದು ಆಯಾ ಸನ್ನಿವೇಶಕ್ಕೆ ಒಂದು ಒತ್ತು ಕೊಡುತ್ತಿತ್ತು. ಪರಿಣಾಮಕಾರಿಯಾಗಿ ಇರುತ್ತಿತ್ತು.

ಅವುಗಳು ಹೇಗೇ ಮೂಡಿಬರಲೀ, ಸಂಪ್ರದಾಯ ಸಂಗೀತದ ರೂಪುರೇಷೆಗಳನ್ನೇ ಅನುಸರಿಸಲಿ, ದೇಶೀಯ ರಾಗಛಾಯೆಯಾಗಲೀ, ಅಪರಿಚಿತವಾದ ಆಕಾರಗಳಲ್ಲಿಯೇ ಆಗಲೀ, ಅವುಗಳಿಂದ ಭೂಷಿತವಾದ ಗೀತೆಗಳಲ್ಲಿ ಕಂಡುಬರುವ ಹೊಸ ರುಚಿ. ಇಂದಿನ ಸಂಗೀತ ಕ್ಷೇತ್ರದಲ್ಲಿ ರಾಗಗಳ ಹೊಸ ಹೊಸ ಪಾಕಗಳನ್ನು ಧೈರ್ಯವಾಗಿಯೂ, ಮಾನ್ಯವಾದ ರೀತಿಯಲ್ಲಿಯೂ ನಿರ್ಮಿಸುವುದರಲ್ಲಿ ಸಿದ್ಧಹಸ್ತರೆನಿಸಿದವರು – ಬಾಲಮುರಳಿಕೃಷ್ಣ, ಪು.ತಿ.ನ. ಅವರ ರೂಪಕ ಒಂದರಲ್ಲಿ ಭಾಗವಹಿಸುತ್ತಾ ಅವರ ವಿಧವಿಧವಾದ ರಾಗಪಾಕಗಳನ್ನು ನೋಡಿ ಶ್ಲಾಘಿಸುತ್ತಿದ್ದರು. ಅಲ್ಲದೆ ಅವುಗಳ ನಿರ್ಮಾತೃವು ಸಂಗೀತಶಾಸ್ತ್ರ ಪರಿಣತರಲ್ಲವೆಂಬ ಅಂಶ ತಿಳಿದ ಮೇಲೆ ಇನ್ನೂ ಆಶ್ಚರ್ಯಪಟ್ಟರು. ಅದೊಂದು ಇಂಟ್ಯೂಟಿವ್ ಅಥವಾ ಅಂತರ್ಜ್ಞಾನ ಫಲವಾದ ಸಂಗೀತ ಎಂದರು.

ಈ ರೀತಿಯ ಹೊಸ ತಿರುವು ಮತ್ತು ಹೊಸ ರುಚಿಯಿಂದ ಕೂಡಿದ ಗೀತೆಗಳಲ್ಲಿ ಅನೇಕವು ಸ್ಮೃತಿಗೆ ಬರುತ್ತವೆ. ಗೋಕುಲ ನಿರ್ಗಮನದ ಸಿಂಧುಭೈರವಿ ರಾಗದ ಕೃಷ್ಣನ ಕೊಳಲಿನ ಕರೆ ಅಥವಾ ಅದೇ ರೂಪಕದ ಬಾಗೇಶ್ರೀ ರಾಗದ ಬಾ ಸಖಿ ಬೃಂದಾವನಕೆ. ರಾಗಮಾಲಿಕೆಯಲ್ಲಿ ನಿರೂಪಿತವಾಗುವ ನಂದನಂದನ ಮುಂತಾದ ಗೀತೆಗಳ ರಾಗ ಸಾಂಪ್ರದಾಯಿಕ ಜಾಡಿನಲ್ಲಿ ನಡೆದಿದ್ದರೂ ಒಂದು ಹೊಸ ವರ್ಚಸ್ಸಿನಿಂದ ಕೂಡಿದಂತೆ ಅನುಭವವಾಗುವುದು. ಅದೇ ಹಂಸದಮಯಂತಿಯ ಗೀತೆ ಕರೆವುದು ಹೈಮಾಚಲ ಹಂಸಧ್ವನಿಯಲ್ಲಿರುವ ಈ ಗೀತೆಯ ಬಹುತೇಕ ತಾರದಲ್ಲಿಯ ನಡೆಯು ಹಿಮಾಚಲದ ಔನ್ನತ್ಯದ ಸಂಕೇತದಂತಿದೆ. ಅದನ್ನು ಎತ್ತಿ ಸಾರುವಂತೆ ಅನುಭವವಾಗುತ್ತದೆ. ಅರುಣೋದಯವನ್ನು ಸ್ಪಷ್ಟವಾಗಿ ಸ್ವಂತಿಕೆ ತರುವ

ಶರದ್ವಿಲಾಸದ ತರುಣಾರುಣಪ್ರಾಚೀ ವಸಂತ ಚಂದನದ ಬಾನ ಬಣ್ಣವ ಮಾಗಿಸಿ ಶಶಿ ಮತ್ತು ಮೇಲಿನ ಮೇಲೆ ತೇಲುವಂತ ಕಾಲಬಾರದೇ ಗೀತೆಗಳು ದೇಶೀಯ ರಾಗ ಛಾಯೆಗಳಿಂದ ಕೂಡಿದ್ದರೂ ಅವುಗಳಲ್ಲಿ ಒಂದು ಪು.ತಿ.ನ. ಮುದ್ರೆಯ ಅನುಭವವೂ ಆಗುವುದು. ಹಾಗೆಯೇ ಹರಿಣಾಭಿ ಸರಣದ ಮಣಿವುದು ಮನನೀ, ಅಗೋ ನೋಡು ಎಂಥ ಹರಿಣ, ಘನ ವಿಪಿನ ಮುಂತಾದ ಗೀತೆಗಳನ್ನು ನೆನೆಯಬಹುದು. ಇದೇ ಸಾಲಿಗೆ ಶರದ್ವಿಲಾಸದ ಶರರುಹರಾಗಂ ದೀಪಲಕ್ಷ್ಮಿಯು ಬೆಳಗೆ ನಮ್ಮೀ ದೀವಿಗೆ, ಪದುಮನಾಭನ ಹೃದಯವಿಹಾರಿಣಿ ಮುಂತಾದುವನ್ನು ಸೇರಿಸಬಹುದು. ಇವುಗಳಲ್ಲಿ ಕೆಲವು ಗೀತೆಗಳಿಗೆ ಕರ್ನಾಟಕ ಅಥವಾ ದೇಶೀಯ ರಾಗಗಳ ಮುದ್ರೆಯಿದೆ. ಆದರೆ ಅವುಗಳು ಆ ರಾಗಗಳ ಕಟ್ಟುಪಾಡುಗಳನ್ನೂ ಮೀರಿ ಮಿಶ್ರ ರಾಗಗಳ ಮಾದರಿಯಲ್ಲಿವೆ. ಆಚಾರ್ಯರ ಮನಸ್ಸಿನಲ್ಲಿ ಮಿಂಚಿನಂತೆ ಹೊಳೆದ ವಿವಿಧ ರಾಗ ರಚನೆಗಳು ಈ ಸೂತ್ರಗಳ ಮಿತಿಯಲ್ಲಿಯೇ ನಿಲ್ಲದೆ ಹೊರಕ್ಕೆ ಹರಿದಿವೆ ಎನ್ನಬಹುದು.

ಆದರೆ ಇದಕ್ಕೆ ಹೊರತಾಗಿ ಶುದ್ಧ ಕರ್ನಾಟಕ ಸಂಪ್ರದಾಯದ ರಾಗಗಳನ್ನು ಅನುಸರಿಸಿಯೇ ರಚಿತವಾದ ಗೀತೆಗಳೂ ಇವೆ. ನಿದರ್ಶನವಾಗಿ ಹಂಸದಮಯಂತಿಯ ಕೇದಾರ ರಾಗದ ವ್ಯಥೆಗಳ ಕಳೆಯುವ ಕತೆಗಾರ ಗೀತವು ಸರಳವಾದ ವರ್ಣಮಟ್ಟಿನಿಂದ ಕೂಡಿ ಮಧ್ಯಗತಿಯ ಕೀರ್ತನೆಗಳ ಮಾದರಿಯಲ್ಲಿಯೇ ಇದೆ. ಅದೇ ಹರಿಣಾಭಿಸರಣದ ರಾವಣ – ಸೀತೆಯರ ಸಂವಾದರೂಪವಾದ ಕಾಂಭೋಜಿ ರಾಗದ ಮಾಮಾಯೆ ಗೀತದ ರಾಗ ಹಂದರ ಬಹುಪ್ರೌಢವಾಗಿದೆ. ಅದರಲ್ಲಿರುವ ಶಬ್ದಾಲಂಕಾರವೂ ಗೀತದ ಸೊಬಗನ್ನು ಇನ್ನೂ ಹೆಚ್ಚಿಸಿದೆ. ಇದೇ ಪ್ರೌಢವಾದ ಗೇಯ ಪ್ರಬಂಧಗಳನ್ನು ನೆನಪಿಗೆ ತರುವ ಇನ್ನೊಂದು ಗೀತ ಶಾರದೀ ಶೋಭಾ ಶರದ್ವಿಲಾಸದ ತೋಡಿರಾಗದ ಈ ಗೀತೆಯ ಸುಂದರ ರಾಗಭಾವ ಪದ-ರಾಗಗಳ ಅಂದವಾದ ಸಮನ್ವಯ ಮಿಗಿಲಾಗಿ ಅದರ ಗಂಭೀರವಾದ ನಡೆ. ಗೀತವು ಆದಿತಾಳದಲ್ಲಿದೆ. ಪಲ್ಲವಿಯ ಮೊದಲಭಾಗ ಸಮದಿಂದ ಪ್ರಾರಂಭ. ಉತ್ತರಾರ್ಧ ನಾಲ್ಕು ಕಳೆ ಬಿಟ್ಟು ಪ್ರಾರಂಭ. ಅನುಪಲ್ಲವಿ ಮೊದಲ ಭಾಗ ಒಂದು ಕಳೆ ತಳ್ಳಿ ಪ್ರಾರಂಭ. ಉತ್ತರಾರ್ಧ ಸಮದಿಂದ ಎರಡು ಚರಣಗಳೂ ಬೇರೆ ಬೇರೆ ರೀತಿ ಇವೆ. ಮೊದಲನೆಯದು ಸಮದಿಂದ ಪ್ರಾರಂಭ. ಬಹುತೇಕ ಯಥಾಕ್ಷರ ರೀತಿ ಅಂದರೆ ಒಂದೊಂದು ಸ್ವರಕ್ಕೂ ಒಂದೊಂದು ಸಾಹಿತ್ಯಾಕ್ಷರ. ಆರು ಆವರ್ತದ ಈ ಚರಣದ ಕೊನೆಯ ಆವರ್ತ ನಾಲ್ಕು ಕಳೆ ಬಿಟ್ಟು ಪ್ರಾರಂಭ. ಮಿಕ್ಕ 12 ಕಳೆ ತ್ರಿಶ್ರಗತಿ. ಎರಡನೆಯ ಚರಣ ನಿಧಾನಗತಿಯಲ್ಲಿ ಸಮದಿಂದ ಪ್ರಾರಂಭವಾಗಿ ನಡೆಯುತ್ತದೆ. ಈ ನಡೆ ಐದೂ ಮುಕ್ಕಾಲು ಆವರ್ತದವರೆಗೂ ನಿಧಾನವಾಗಿದ್ದು ಅಲ್ಲಿಂದ ವೇಗವಾಗಿ ದ್ರುತಗತಿಯಲ್ಲಿ ಓಡುತ್ತದೆ. ಈ ದ್ರುತದಲ್ಲಿಯ ಮುಕ್ಕಾಲು ಚತುರಶ್ರಗತಿ ಉಳಿದದ್ದು ತ್ರಿಶ್ರಗತಿಯಲ್ಲಿದೆ. ಹೀಗೆ ಶಾರದೀ ಶೋಭಾ ಗೀತೆಯದು ಒಂದು ವಿಚಿತ್ರಬಂಧ, ವಿಶೇಷ ರಾಗ ವಿನ್ಯಾಸ ಒಂದೊಂದು ಚರಣದ ಧಾತುವೂ ಬೇರೆ ಬೇರೆ. ಇಂದು ಸಂಗೀತ ಕಚೇರಿಗಳಲ್ಲಿ ಕೇಳಲಾಗುತ್ತಿರುವ ಪ್ರಾಚೀನ ವಾಗ್ಗೇಯಕಾರರ ಪ್ರೌಢಕೃತಿಗಳ ಸಾಲಿಗೆ ಧಾರಾಳವಾಗಿ ಏರಬಲ್ಲದು. ಸೆರವಲ್

ಸ್ವರಪ್ರಸ್ತಾರ ಮಾಡಿ ರಾಗಸೌಂದರ್ಯವನ್ನು ವಿಸ್ತಾರವಾಗಿ ಹಾಡಲು ಬಹುಯುಕ್ತವಾದ ಗೀತೆ – ಶಾರದೀ ಶೋಭಾ.

ಇದನ್ನೇ ದೀಪಲಕ್ಷ್ಮಿಯ ಭವತಾರಿಣಿ ಜನನಿ, ಕಮಾಚ್‌ರಾಗದ ಆರೇ ಮೋಹನ ಗೀತೆಗಳಿಗೂ ಹೇಳಬಹುದು. ಅದರಲ್ಲಿಯೂ "ಅರೇ ಮೋಹನ" ಗೀತೆಯ ರಾಗದ ಅಚ್ಚುಕಟ್ಟು ಗಮನಾರ್ಹವಾದುದು. ಪು.ತಿ.ನ. ಇಲ್ಲಿ ಬಳಸಿದ ರಾಗ ವಿಧಾನ, ಹಿಂದಿನಿಂದ ಪ್ರಚಾರದಲ್ಲಿರುವ ಕಮಾಚ್‌ರಾಗದ ಕೃತಿಗಳಿಗಿಂತ ಬೇರೆ ರೀತಿ. ತಾರದಲ್ಲಿ ಪ್ರಾರಂಭವಾಗುವ ಕಮಾಚ್ ಕೃತಿಗಳೆಲ್ಲಾ ಪ್ರಾಯಶಃ ತಾರಷಡ್ಜದಿಂದ ಪ್ರಾರಂಭವಾದಲ್ಲಿ ಅರೆ ಮೋಹನ ತಾರ ರಿಷಭದಿಂದ ಪ್ರಾರಂಭವಾಗುತ್ತದೆ. ಮುಂದೆ ಸಂಚಾರದಲ್ಲಿ ಕೆಲವೆಡೆ ಮಾಮೂಲು ರೀತಿ ಇಲ್ಲದೆ ಛಾಯೆಯಲ್ಲಿ ಬೇರೆ ತಿರುವು ಅನುಭವವಾಗುತ್ತೆ. ಆದರೆ ಸ್ವರದ್ರವ್ಯದ ಬಳಕೆಯು ಸಂಪ್ರದಾಯಕ್ಕೆ ವಿರುದ್ಧವೇನಿಲ್ಲ. ಈ ತಿರುವು ಒಂದು ಆಕರ್ಷಣೀಯಾಂಶ ಒದಗಿಸಿದೆ. ಈ ಗೀತೆಯನ್ನು ಕೇಳಿದಾಗಲೆಲ್ಲಾ ಒಂದು ಸಂಗತಿ ನೆನಪಿಗೆ ಬರುತ್ತದೆ.

ಹಿರಿಯ ಸಂಗೀತ ವಿದ್ವಾಂಸರಾದ ಶೆಮ್ಮಂಗುಡಿ ಶ್ರೀನಿವಾಸಯ್ಯರ್ ಹಿಂದೆ ಆಕಾಶವಾಣಿಯ ಸಂಗೀತ ವಿಭಾಗದ ಮುಖ್ಯಾಧಿಕಾರಿಯಾಗಿದ್ದಾಗ ದೇಶದ ವಿವಿಧ ರೇಡಿಯೋ ಕೇಂದ್ರಗಳಿಗೆ ಪರೀಕ್ಷಾರ್ಥವಾಗಿ ಬರುತ್ತಿದ್ದರು. ಹಾಗೆಯೇ ಬೆಂಗಳೂರು ಕೇಂದ್ರಕ್ಕೂ ಕಾರ್ಯಕ್ರಮಗಳ ಪರಿಶೀಲನೆಗಾಗಿ ಬಂದಿದ್ದರು. ಆಗ ಈ 'ಆರೇ ಮೋಹನ' ಗೀತೆ ಅಕಸ್ಮಾತ್ತಾಗಿ ಪ್ರಸಾರವಾಗುತ್ತಿತ್ತು. ಸ್ವಲ್ಪ ಹಾಗೆಯೇ ಕೇಳಿ "ಇದು ಯಾರ ರಚನೆ?" ಎಂದು ಪ್ರಶ್ನಿಸಿದರು. ಇದು ಇಂತಹವರದೆಂದು ತಿಳಿಸಲಾಯಿತು. ಅದರ ನಂತರ "ಇಂತಹ ಉತ್ತಮ ಕಲ್ಪನೆ ಇರಬೇಕಾದಲ್ಲಿ ಅವರು ಬಹುದೊಡ್ಡ ಸಂಗೀತಗಾರರಾಗಿರಬೇಕು" ಎಂದರು. ಅನಂತರ ನಿಜಸ್ಥಿತಿಯನ್ನು ತಿಳಿಸಿದ ಮೇಲೆ ಆಶ್ಚರ್ಯಪಟ್ಟರಂತೆ. ಗೀತರೂಪಗಳ ಭಾಗವೇ ಆಗಿ ಒಂದು ಸಂದರ್ಭದ ವರ್ಣನೆ ಮಾಡುವಂತಿದ್ದರೂ ಬಿಡಿ ಬಿಡಿಯಾಗಿ ಉತ್ತಮ ರಾಗ ಪೋಷಣೆಯಿಂದ ಕೂಡಿ ಸಂಗೀತ ಕಚೇರಿಗಳಲ್ಲಿ ನಿರೂಪಿಸಲು ಯೋಗ್ಯವಾದ ಅನೇಕ ಗೀತಗಳು ಪು.ತಿ. ನರಸಿಂಹಾಚಾರ್ಯರ ಗೀತ ನಾಟಕಗಳಲ್ಲಿ ದೊರೆಯುತ್ತವೆ. ಅವುಗಳಲ್ಲಿ ಕೆಲವು –

ಕತೆಗಳ ಕಳೆಯುವ (ರಾಗ ಕೇದಾರ – ಹಂಸದಮಯಂತಿ), *ಕೊಳಲನೂದು ಗೋವಿಂದ* (ರಂಜನಿ – ಗೋಕುಲ ನಿರ್ಗಮನ), *ಗಿರಿಧರ ಕಾಳಮೇಘ* (ಬೇಗಡೆ - ಶರದ್ವಿಲಾಸ), *ಶಾರದೀ ಶೋಭಾ* (ತೋಡಿ – ಶರದ್ವಿಲಾಸ), *ಎಚ್ಚರಚ್ಯುತ* (ಸಾವೇರಿ – ರಾಮೋದಯ), *ಏನು ಭಾಗ್ಯ* (ಭೈರವಿ – ರಾಮೋದಯ), *ಮಿಥಿಲೆ ಪುಣ್ಯನಗರಿ* (ಯದುಕುಲ ಕಾಂಭೋಜಿ ಸೀತಾಪರಿಣಯ), *ಹರಧನುವಿನ ಬಲ* (ಕಲ್ಯಾಣಿ - ಸೀತಾಪರಿಣಯ), *ಆ ಕಮಲಾಂಬಿಕಾ* (ಶ್ರೀರಂಜನಿ – ಸೀತಾ ಪರಿಣಯ), *ಎಡರುಗಳೊಡೆಯ* (ಗೌಳ – ಸೀತಾಪರಿಣಯ), *ತರುಣಾರುಣ* (ಭೂಪಾಲ - ಶರದ್ವಿಲಾಸ), *ಚಂದ್ರಕಿರಣ* (ಹಮೀರ್ ಕಲ್ಯಾಣಿ ವರ್ಷ ಹರ್ಷ),

ಭವತಾರಿಣಿ (ಕಾಮವರ್ಧಿನಿ – ದೀಪಲಕ್ಷ್ಮಿ), ಭಾಮಾ ರಮಣನ (ಸಿಂಧು ಭೈರವಿ – ದೀಪಲಕ್ಷ್ಮಿ).

ಇಂತಹ ಪ್ರೌಢ ಸಂಗೀತ ಧಾತುವುಳ್ಳ ಇನ್ನೂ ಅನೇಕ ಗೀತೆಗಳು ಅದರ ವಿವಿಧ ಗೀತ ನಾಟಕಗಳಲ್ಲಿ ದೊರೆಯುತ್ತವೆ. ಇವುಗಳ ಜೊತೆಗೆ ಸ್ವಲ್ಪ ಲಲಿತವೆನಿಸಿದ ಆರೇ ಮೋಹನ (ಕಮಾಚ್ – ದೀಪಲಕ್ಷ್ಮಿ), ಬೆಳಗೆ ನಮ್ಮೀದೀವಿಗೇ (ಯಮನ್ ಬೆಹಾಗ್ – ದೀಪಲಕ್ಷ್ಮಿ), ಕೃಷ್ಣನ ಕೊಳಲಿನ (ಸಿಂಧು ಭೈರವಿ – ಗೋಕುಲ ನಿರ್ಗಮನ), ಬಾನ ಬಣ್ಣವ (ಖಮಾಸ್ - ಜಂಜುಟಿ – ವಸಂತ ಬಂದನ), ತೂಗಿರಿ ರಘುರಾಮನ (ಕಾಪಿ – ಸೀತಾ ಪರಿಣಯ) ಅವರ ಸ್ವಂತ ರಾಗಗಳಲ್ಲಿ ರಚಿತವಾದ ಋತು ವಿಲಾಸಕೆ (ಋತುವಿಲಾಸ - ಶರದ್ವಿಲಾಸ), ವಾಸಂತಿ ಮಾಧವಿ (ವಾಸಂತಿ – ರಾಮೋದಯ) ಮುಂತಾದ ಅನೇಕ ಗೀತಗಳು ದೊರೆಯುತ್ತವೆ.

ಇದಲ್ಲದೆ, ದೇವತಾ ಸ್ತುತಿ ರೂಪವಾದ ಸುಂದರ ಮುಖ ದರುಶನ (ವಾಚಸ್ಪತಿ) ಬರುವನು ಬರುವನು (ಆರಭಿ) ಸದಾ ಮಂಗಳಾಯತನ (ಅಭೋಗಿ) ಕಮಲ ಸಂಭವೇ (ದೇವ ಮನೋಹರಿ) ಮುಂತಾದ ಪ್ರತ್ಯೇಕ ಕೀರ್ತನೆಗಳಿವೆ. ಇವುಗಳಲ್ಲಿ ಬಹುಪಾಲು ಅವರ ಆರಾಧ್ಯ ದೈವ - ಮೇಲುಕೋಟೆ ಚಲುವ ನಾರಾಯಣ ಸ್ವಾಮಿ ಸ್ತುತಿಯವು. ಇವುಗಳಲ್ಲದೆ ಜಾನಪದ ಶೈಲಿಯ ಗೀತಗಳೂ ಅನೇಕವಿವೆ. ಹೀಗೆ ರಖಂವಾರಿ ರಚನೆಗಳು ದೊರೆಯುತ್ತವೆ.

ಸಂಗೀತವನ್ನು ಸಾಂಪ್ರದಾಯಿಕವಾಗಿ ಕಲಿಯದ ಆಚಾರ್ಯರಿಗೆ ಈ ಉತ್ತಮ ರಾಗಸೌರಭದಿಂದ ಕೂಡಿದ ಗೀತೆಗಳನ್ನು ರಚಿಸಲು ಹೇಗೆ ಸಾಧ್ಯವಾಯಿತು? ಅದನ್ನು ಅವರೇ ಹೀಗೆ ಹೇಳಿದ್ದಾರೆ :

ಮನಸ್ಸು ಒಂದು ಲಹರಿಯಲ್ಲಿದ್ದಾಗ ಸಂಗೀತ ಸ್ವರಗಳು ಅದಕ್ಕೆ ಬಂದು ಮುತ್ತಿಕೊಳ್ಳುತ್ತವೆ. ಅವು ನಾನು ಹಿಂದೆ ಅನೇಕವಾಗಿ ಕೇಳಿದ ದಿವ್ಯಗಾನಗಳ ಪುನಃಸ್ಮರಣೆಯಲ್ಲ. ಎಂದೂ ಕೇಳಿಲ್ಲದಂತೆ ತೋರುವ ಸ್ವರಸಾಂಗತ್ಯಗಳು. ನಡುರಾತ್ರಿಯ ಮೌನದಲ್ಲಿ ಇವು ನನ್ನ ಕರ್ಣಾಕಾಶದಲ್ಲಿ ಸ್ಪಷ್ಟವಾಗಿ ಕೆಲವು ವೇಳೆ ಥಳಥಳನೆ ಹೊಳೆದಿವೆ. ಎದ್ದು ಅವನ್ನು ಹಿಡಿದಿಡಲು ನಾನು ಮಾತುಗಳನ್ನು ಬೀಸಿರುವುದುಂಟು. ಧಾತು ಮತ್ತು ಮಾತುಗಳ ಜೋಡಣೆಯಿಂದಲ್ಲವೆ ಗೀತೆಗಳು ಜನಿಸುವುದು? ಮಾತು – ಮೋಡ ಸ್ವರಗಳು ಅದರಲ್ಲಿ ಸುಳಿದಾಡುವ ಮಿಂಚುಗಳು. ಮಾತು – ಬಲೆ. ಸ್ವರಗಳು ಅದರಲ್ಲಿ ಸಿಕ್ಕಿಕೊಳ್ಳುವ ಹಕ್ಕಿಗಳು.

ಹೀಗೆ ನರಸಿಂಹಾಚಾರ್ಯರು ಬೀಸಿದ ಮಾತಿನ ಬಲೆಯಲ್ಲಿ ಹಕ್ಕಿಗಳು ಸಿಕ್ಕಿಕೊಂಡರೂ ಅವುಗಳನ್ನು ಹಿಡಿದು ಕಾಪಾಡುವ ಕ್ರಮ ಮತ್ತು ಭಾರಗಳೂ ಮುಖ್ಯವಾದವು. ಅದನ್ನು ಮಾಡಲಾಗದ ಅವರ ಕೆಲವು ಕೃತಿಗಳ ಬಲೆ ಮಾತ್ರ ಉಳಿದುಕೊಂಡಿದೆ. ಹಕ್ಕಿಗಳು ಹಾರಿಹೋಗಿವೆ. ಆಚಾರ್ಯರಿಗೆ ಈ ಬಗೆಯ ನೂತನ ಸ್ವರಲಹರಿಗಳು ಹೊಳೆದಾಗ ಅದನ್ನು ಕಾಪಾಡಿ ಅವಕ್ಕೆ ಒಂದು ಖಚಿತ ರೂಪ ಕೊಡಲು ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಮಧ್ಯರಾತ್ರಿ,

ಯಲ್ಲಿ ಯಾವಾಗಲೋ ಹೊಳೆದ ಈ ರಾಗಮಿಂಚುಗಳ ಸ್ಮೃತಿ ಪುನಃ ನಿದ್ರಿಸಿದರೆ ಎಲ್ಲಿ ಮರೆತು ಹೋಗುವುದೋ ಎಂಬ ಆತಂಕದಿಂದ ಬೆಳಗಾಗುವವರೆಗೂ ಎಚ್ಚರವಾಗಿದ್ದು ಹಾಸಿಗೆಯ ಮೇಲೆ ಕುಳಿತಿರುತ್ತಿದ್ದರು. ಬೆಳಕು ಕಾಣುತ್ತಲೇ ದೊರೆಸ್ವಾಮಿ ಅಯ್ಯಂಗಾರ್ಯರ ಬಳಿ ಬರುತ್ತಿದ್ದರು. ಬೆಂಗಳೂರಿಗೆ ಬಂದ ಹೊಸದರಲ್ಲಿ ನಾನೇ ಸ್ವತಃ ನೋಡಿದ ಈ ಸಂದರ್ಭದ ದೃಶ್ಯ ಇದು. ದೊರೆಸ್ವಾಮಿ ಅಯ್ಯಂಗಾರ್ಯರು ಆಗ ಆರಾಮ್ ಹೋಟೆಲಿನಲ್ಲಿದ್ದರು. ಬೆಳಿಗ್ಗೆ 6 ಗಂಟೆ ಮಲ್ಲೇಶ್ವರದ 14ನೇ ಕ್ರಾಸ್‌ನಲ್ಲಿದ್ದ ತಮ್ಮ ಮನೆಯಿಂದ ಪು.ತಿ.ನ. ನಡೆದು ಬಂದಿದ್ದಾರೆ – ಬಾಗಿಲು ತಟ್ಟಿದರು. ದೊರೆಸ್ವಾಮಿ ಅಯ್ಯಂಗಾರ್ಯರು ಎದ್ದು ಬಾಗಿಲು ತೆಗೆಯುತ್ತಲೇ ಒಳಗೆ ಬಂದು "ವೀಣೆ ತೆಗೆದುಕೊಳ್ಳಿ" ಎಂದರು. ಅಯ್ಯಂಗಾರ್ಯರು ವೀಣೆಯನ್ನು ಶ್ರುತಿಮಾಡಿ ಸಿದ್ಧವಾಗುತ್ತಲೇ ಪು.ತಿ.ನ. ಹಾಡಲು ಪ್ರಾರಂಭ. ಅಯ್ಯಂಗಾರ್ಯರು ಅದನ್ನು ವೀಣೆಯಲ್ಲಿ ಪ್ರತಿಧ್ವನಿಸುತ್ತಿದ್ದರು. ಮೂಲ ಕಲ್ಪನೆ ಮತ್ತ ವೀಣಾ ಪ್ರತಿಧ್ವನಿ ಎರಡೂ ಹೊಂದುವವರೆಗೂ ಬಿಡುತ್ತಿರಲಿಲ್ಲ. "ಆ ಭಾಗದ ಸ್ವರ ಹೆಚ್ಚು. ಇನ್ನೂ ತಗ್ಗಬೇಕು. ಈ ಭಾಗ ಸ್ವಲ್ಪ ತಗ್ಗಿನಲ್ಲಿದೆ. ಎತ್ತಬೇಕು. ಈ ಸ್ವರಕ್ಕೆ ಗಮಕ ಹೆಚ್ಚು ಕೂಡದು. ಈ ಸ್ಥಳದಲ್ಲಿ ಸ್ವಲ್ಪ ತೋಡಿಯ ಛಾಯೆ ಬರಬೇಕು. ಆ ಗಾಂಧಾರ ಸ್ವಲ್ಪ ಏರಬೇಕು...." ಹೀಗೆ. ದೊರೆಸ್ವಾಮಿ ಅಯ್ಯಂಗಾರ್ಯರಿಗೆ ತುಂಬಾ ತಾಳ್ಮೆ. ಅದರಂತೆ ಅನುಸರಿಸಿಕೊಂಡು ಧಾತು ಭಾಗ ಪು.ತಿ.ನ. ಗೆ ಸಮರ್ಪಕ ಎನ್ನಿಸುತ್ತಲೇ ಸ್ವರ ಸಹಿತ ಬರೆಯುತ್ತಿದ್ದರು. ಎರಕ ಹುಯಿದ ಪ್ರತಿಮೆಗೆ ಉಳಿಪೆಟ್ಟುಗಳಿಂದ ಒಂದು ಪರಿಷ್ಕಾರವಾದ ರೂಪ ಬಂದಂತೆ, ಅಯ್ಯಂಗಾರ್ಯರ ವೀಣೆಯಿಂದ ಸ್ಪಷ್ಟವಾದ ರಾಗರೂಪ ಸಹಿತ ಈ ಗೀತೆಗಳು ರಕ್ಷಿಸಲ್ಪಟ್ಟವು.

ಹೀಗೆ ಪು.ತಿ.ನ. ಅವರ ಗೀತೆಗಳಲ್ಲಿ ಕಾವ್ಯದ ಮನೋಹರ ಶಬ್ದ ಸೌಂದರ್ಯವಿದೆ. ರಾಗರಸ ಪೋಷಣೆಯಿದೆ. ಧಾತು ಮಾತೂ ಎರಡೂ ಹಾಲು ಜೇನಿನಂತೆ ಬೆರೆತು ಅವರ ಕಲ್ಪನೆಯ ಚಿತ್ರಗಳನ್ನು ಅರ್ಥವತ್ತಾಗಿಸಿದೆ. ರಸಮಯವಾಗಿ ಮಾಡಿವೆ. ಈ ಗೀತ ರೂಪಕಗಳು ರಸಿಕರ ದೃಷ್ಟಿಯಲ್ಲಿ ಅವುಗಳ ಕಲ್ಪನಾ ನಾವೀನ್ಯದಿಂದ ಇಂದಿನ ಸಂಗೀತ ಕ್ಷೇತ್ರಕ್ಕೆ ಒಂದು ವಿಶೇಷ ಕೊಡುಗೆ ಎನ್ನಬಹುದು. ಇವುಗಳಲ್ಲಿ ಉತ್ತಮ ರಾಗಭಾವದಿಂದ ಕೂಡಿದ, ಕಚೇರಿ ವೇದಿಕೆಗೆ ತೂಗಬಲ್ಲ ಪ್ರೌಢವಾದ ಕೃತಿಶೈಲಿಯ ರಚನೆಗಳಿವೆ. ಆಕರ್ಷಣೀಯ ಛಂದಸ್ಸು, ಲಯ ಹಾಗೂ ಪದರಾಗಗಳ ಲಾಲಿತ್ಯದಿಂದ ಕೂಡಿ ಎಲ್ಲ ವರ್ಗದ ಶ್ರೋತೃಗಳಿಗೂ ಸಂತೋಷ ಕೊಡುವಂತಹವು ಗಣನೀಯ ಪ್ರಮಾಣದಲ್ಲಿವೆ. ಈ ಗೀತೆಗಳ ಅಂದ ಮತ್ತು ಆಪ್ಯಾಯಮಾನ ಗುಣವನ್ನು ಆಕಾಶವಾಣಿ ಈಗಾಗಲೇ ಪ್ರಸಾರದ ಮೂಲಕ ಪರಿಚಯಿಸಿದೆ. ಎತ್ತಿ ತೋರಿದೆ. ಅದಕ್ಕೆ ಇನ್ನೂ ಜೀವಕಳೆ ತುಂಬಿ ಬೆಳಕಿಗೆ ತಲುಪುವುದೂ ಜನಪ್ರಿಯ ಮಾಡುವುದೂ ಅಗತ್ಯ. ಈ ಕೆಲಸವೂ ಸಂಪ್ರದಾಯದ ಹೆಸರಿನಲ್ಲಿರುವ ಜಡತ್ವವನ್ನು ತೊರೆದ ಸಂಗೀತಗಾರರ ಹೊಸತನ್ನು ಸಾಧಿಸಬೇಕೆಂಬ ಹಂಬಲ, ಛಲ ಮತ್ತು ಅಭಿಮಾನಗಳನ್ನು ಅವಲಂಬಿಸಿದೆ. ★

ಪ್ರಜಾವಾಣಿ, ದೀಪಾವಳಿ ವಿಶೇಷಾಂಕ, 1997

8. ಕೊಳಲು : ಅಂದು ; ಇಂದು ; ಮುಂದು

ಕೊಳಲು – ಹಾಗೆಂದರೇನು? ಅದು ಒಂದು ಒಂದೂವರೆ ಅಡಿ ಉದ್ದದ ಬಿದಿರು ತುಂಡು ಅಥವಾ ತೂತು ಕೊರೆದ ಬಿದಿರುಕೊಳವೆ ಎನ್ನಬಹುದು. ಈ ತುಂಡೇನೋ ಸಾಧಾರಣ, ಆದರೆ ಅದರಲ್ಲಿ ಅದೆಂತಹ ಅಸಾಧಾರಣವಾದ ಗುಣ? ಆ ತೂತುಗಳಿಂದ ಹೊರಡುವ ನಾದ ಎಷ್ಟು ಮೋಹಕವಾದುದು? ಆ ನಾದ ರಚನೆಗಳಲ್ಲಿ ಎಷ್ಟು ವಿಧ? ಸರಳವಾದ ನಾದ ತುಣುಕುಗಳಿಂದ, ಅದ್ಭುತವಾದ ಸ್ವರ ಶಿಲ್ಪದವರೆಗೂ ನಿರ್ಮಿಸಲು ಸಾಧ್ಯವಿದೆ. ಈ ಬಿದಿರುತುಂಡಿಗೆ ಅದೆಂತಹ ಅದ್ಭುತಶಕ್ತಿ? ಬಿದಿರು ಒಂದೇ ಅಲ್ಲ, ಚಂದನ, ಗಂಧ, ಮುಂತಾದ ಮರಗಳೇ ಅಲ್ಲದೆ ಹಿತ್ತಾಳೆ, ಬೆಳ್ಳಿ, ಚಿನ್ನ, ಪ್ಲಾಟಿನಂ, ಮುಂತಾದ ಲೋಹಗಳಲ್ಲಿಯೂ ಕೊಳಲುಗಳನ್ನು ಮಾಡುತ್ತಾರೆ. ಅವೆಲ್ಲದರಲ್ಲಿಯೂ ಈ ಅದ್ಭುತಶಕ್ತಿ ಇದೆ. ಅಕಸ್ಮಾತ್ತಾಗಿ ಈ ಅನುಭವ ಪಡೆದ ಪ್ರಾಚ್ಯ ಮಾನವನ ಮನಸ್ಸಿನಲ್ಲಿ ಈ ಪ್ರಶ್ನೆ ಎಂದರೆ ಎಂತಹ ಅದ್ಭುತಶಕ್ತಿ ಎಂಬ ಪ್ರಶ್ನೆ ಮೂಡಿರಬಹುದು.

ಕೊಳಲಿಗೆ ನಾನಾ ಹೆಸರುಗಳಿವೆ. ಕನ್ನಡದಲ್ಲಿ ಕೊಳಲು, ತಮಿಳು-ಮಲೆಯಾಳಿ ಭಾಷೆಗಳಲ್ಲಿ ಕುಳಲ್, ತೆಲುಗಿನಲ್ಲಿ ಪಿಳಕ್ರೋವಿ. ಈ ಪದದ ಕನ್ನಡ ರೂಪ ಪಿಳ್ಳಂಗೋವಿ. ಇದಲ್ಲದೆ ವೇಣು, ವಂಶಿ, ಮುರಳಿ, ವಾಸ, ಬಾನ್ಸುರಿ, ನಾಳ್ ಮುಂತಾದ ಹೆಸರುಗಳಿಂದ ಭಾರತದ ವಿವಿಧ ಭಾಗಗಳಲ್ಲಿ ಪರಿಚಿತವಾಗಿದೆ. ಕೊಳಲಿನಲ್ಲಿ ನಾದೋತ್ಪತ್ತಿ ಮಾಡುವುದರಲ್ಲಿ ಎರಡು ವಿಧಾನ : (1) ಅಡ್ಡಡ್ಡಲಾಗಿ ಹಿಡಿದು, ಮುಖರಂಧ್ರದಲ್ಲಿ ಗಾಳಿ ಊದಿ ನಾದೋತ್ಪತ್ತಿ ಮಾಡುವುದು. (2) ಊರ್ಧ್ವವಾಗಿ ಹಿಡಿದು ಕೆಳಮುಖವಾಗಿ ಊದಿ ನಾದೋತ್ಪತ್ತಿಮಾಡುವುದು. ಅಪರೂಪವಾಗಿ ಮೂಗಿನಿಂದ ಗಾಳಿ ಊದುವುದು ಅಥವಾ ತುಂಡಿನ ತುದಿಯಲ್ಲಿ ಊದಿ ನಾದೋತ್ಪತ್ತಿ ಮಾಡುವುದೂ ಉಂಟು.

ಮಾನವನ ಮತ್ತು ಕೊಳಲಿನ ಸಂಬಂಧ ಎಷ್ಟು ಹಳೆಯದು? ಸಾವಿರಾರು ವರುಷಗಳಿಂದ. ಅವನಿಗೆ ತಿಳುವಳಿಕೆ ಹುಟ್ಟಿದಾಗಿನಿಂದಲೂ ಇರಬಹುದು. ಇಂದು ನಾವು ಒಂದು ಕೊಳಲಿನ ಇಂಪಾದ ಸಂಗೀತವನ್ನು ಸವಿಯುತ್ತಿರುವಾಗ ಈ ಮಟ್ಟದ ನಾದ ಮಾಧುರ್ಯ ಉಂಟಾಗುವುದಕ್ಕೆ ಸಾವಿರಾರು ವರುಷಗಳಲ್ಲಿ ಲಕ್ಷಾಂತರ ಮಂದಿ ಮಾಡಿದ ಚಿಂತನ, ಸಾಧನ ಮತ್ತು ಪ್ರಯೋಗಗಳ ಬಲವಿದೆ ಎಂಬುದನ್ನು ಮರೆಯುವಂತಿಲ್ಲ. ಮಾನವನು ಮೃಗಾವಸ್ಥೆಯಿಂದ ಮಾನವಾವಸ್ಥೆಗೆ ಬಂದುದು ಸುಮಾರು ಇಪ್ಪತ್ತು ಲಕ್ಷ ವರುಷಗಳ ಹಿಂದೆ ಎಂದು ಅಭಿಪ್ರಾಯ. ಮುಂದೆ ಅವನು ನಾನಾ ಯುಗಗಳನ್ನು ದಾಟಿ ಬರುತ್ತಿರುವಾಗ ಯಾವಾಗಲೋ ಕೊಳಲನ್ನು ನಿರ್ಮಿಸಿರಬಹುದು. ಡಾ॥ ಕುರ್ಟ್‌ಸ್ಯಾಕ್ಸ್‌ರವರ ಊಹಾಚಿತ್ರ ಸ್ವಾರಸ್ಯವಾಗಿದೆ. ಆದಿಮಾನವ, ಕಾಡಿನಲ್ಲಿ ಎಚ್ಚರದಿಂದ ಭಯದಿಂದ

ಹೋಗುತ್ತಿದ್ದಾನೆ. ಇದ್ದಕ್ಕಿದ್ದಹಾಗೆ ಸಿಳ್ಳುಹಾಕಿದ ಹಾಗೆ ಸದ್ದು. ಗಾಬರಿಯಿಂದ ಭೂಮಿಯ ಮೇಲೆ ಆತುಕೊಳ್ಳುತ್ತಾನೆ. ಸದ್ದು ನಿಲ್ಲುವುದಿಲ್ಲ. ಆಗಾಗ್ಗೆ ಕೇಳುತ್ತಲೇ ಇರುತ್ತದೆ. ಅದೂ ಒಂದೇ ದಿಕ್ಕಿನಿಂದ. ಕುತೂಹಲ ಹೆಚ್ಚಾಗಿ ಹಾಗೆಯೇ ತೆವಳಿಕೊಂಡು ಆ ಸದ್ದಿನ ಕಡೆಗೇ ಹೋಗುತ್ತಾನೆ. ಅಲ್ಲಿ ಅದರ ಮೂಲ ಕಂಡುಬರುತ್ತದೆ. ಟೊಳ್ಳಾದ ಹುಳು ಕೊರೆದ ಸಣ್ಣ ಕೊಂಬೆಯೊಂದು ನೇತಾಡುತ್ತಿದೆ. ಅದರೊಳಗೆ ಗಾಳಿಯು ಹೊಕ್ಕಾಗ, ಈ ವಿಶೇಷವಾದ ಸದ್ದು ಕೇಳಿಬರುತ್ತದೆ. ಆದಕ್ಕೆ ಅವನದು ವಿಧವಿಧ ಪ್ರತಿಕ್ರಿಯೆ. ಭಯದಿಂದ ಕುತೂಹಲದವರೆಗೆ. ಕೊನೆಗೆ ಕುತೂಹಲವೇ ಗೆದ್ದಿತು. ಧೈರ್ಯದಿಂದ ಅದರ ಬಳಿಗೆ ಹೋಗುತ್ತಾನೆ, ನೋಡುತ್ತಾನೆ. ಅನಂತರ ಅದನ್ನು ಕಿತ್ತು ಕೈಯ್ಯಲ್ಲಿ ಹಿಡಿದು ಪರೀಕ್ಷಿಸುತ್ತಾನೆ. ಕುತೂಹಲದಿಂದ ಕೊಳವೆಯೊಳಕ್ಕೆ ಗಾಳಿ ಊದುತ್ತಾನೆ. ತಕ್ಷಣ ನಾದ ಹೊರಡುತ್ತದೆ. ಗಾಬರಿಯಾದರೂ ಬಿಸುಡುವುದಿಲ್ಲ, ಪರೀಕ್ಷಿಸುತ್ತಾನೆ. ಹಿಡಿದು ಊದುವಾಗ ಅಕಸ್ಮಾತ್ ಆ ರಂಧ್ರಗಳನ್ನು ಬೆರಳುಗಳು ಮುಚ್ಚಿದರೆ ಬೇರೆ ಬೇರೆ ನಾದ ಹೊರಡುವುದರ ಅನುಭವ ಆಗುತ್ತದೆ. ಹೀಗೆ ಈ ತೂತು ಕೊಳವೆ ಅವನ ಸ್ವಾಧೀನವಾಗಿ, ವಾದ್ಯವಾಗಿ ರೂಪಿತವಾಗಬೇಕಾದರೆ ನೂರಾರು ಶತಮಾನಗಳ ಕಾಲ ಹಿಡಿದಿರಬೇಕು.

ಮಾಹಿತಿಗಳು

ಕೊಳಲಿನ ಬಗೆಗೆ ನಮಗೆ ದೊರೆತಿರುವ ಅತಿ ಹಳೆಯ ಮಾಹಿತಿ ಎಂದರೆ ಒಂದು ರೇಖಾಚಿತ್ರ. ಫ್ರಾನ್ಸಿನ ದಕ್ಷಿಣ ಭಾಗದಲ್ಲಿ ಶಿಲಾಯುಗದ ಚಿತ್ರಗಳಿರುವ ಒಂದು ಗುಹೆಯಲ್ಲಿದೆ. ಇದರಲ್ಲಿ ಒಬ್ಬ ಮಾನವ ಚರ್ಮವನ್ನು ಹೊದ್ದಿದ್ದಾನೆ. ಕೋಲಿನಂತಹ ಒಂದು ವಾದ್ಯವನ್ನು ಊದುತ್ತಿದ್ದಾನೆ. ಕೆಳಮುಖನಾಗಿ ಊದುತ್ತಿದ್ದಾನೆ. ಮುಂದೆ ಕೆಲವು ಮೃಗಗಳು ಓಡುತ್ತಿವೆ. ಇಲ್ಲಿ ವಿಶೇಷವೆಂದರೆ ಈ ವಾದ್ಯವನ್ನು ಮೂಗಿನ ಹೊಳ್ಳೆಗಳಿಂದ ಊದುತ್ತಿದ್ದಾನೆ. ಈ ಚಿತ್ರ ಸುಮಾರು ಇಪ್ಪತ್ತು ಸಾವಿರ ವರುಷಗಳಷ್ಟು ಹಿಂದಿನದು. ಪ್ರಾಚ್ಯ ಶಿಲಾಯುಗದ ಕಾಲದಲ್ಲಿ ಕೊರೆಯಲಾದುದು ಎಂದು ನಿರ್ಧರಿಸಲಾಗಿದೆ. ಅಂದರೆ ಅದನ್ನು ಉದ್ದುದ್ದವಾಗಿ ಹಿಡಿಯಲಿ ಅಥವಾ ಅಡ್ಡಡ್ಡಲಾಗಿ ಹಿಡಿಯಲಿ ಕೊಳಲು ಇನ್ನೂರು ಶತಮಾನಗಳಷ್ಟು ಹಿಂದೆ ಬಳಕೆಯಲ್ಲಿತ್ತು ಎನ್ನಬಹುದು. ಮುಂದೆ ಅದು ನಾನಾ ರೂಪಾಂತರಗಳನ್ನು ತಳೆದಿರಬಹುದು, ನಾನಾ ಬಗೆಯಲ್ಲಿ ಪರಿಷ್ಕೃತ ಆಗಿರಬಹುದು. ಆದರೆ ದಾಖಲೆಗಳು ದೊರೆಯುವುದು ಕಷ್ಟ. ಏಕೆಂದರೆ ಮರ ಅಥವಾ ಬಿದಿರಿನಿಂದ ಮಾಡಿದ, ಈ ವಾದ್ಯಗಳು ಕಾಲಕ್ರಮೇಣ ನಾಶವಾಗಿ, ಮಣ್ಣಿನೊಡನೆ ಬೆರೆತುಹೋಗಿರಬಹುದು. ಆದರೆ ಕೆಲವುಕಡೆ ಪ್ರಾಚ್ಯ ಸಂಶೋಧಕರು ಅಗೆದಾಗ ಭೂಗರ್ಭದಲ್ಲಿ ಅಡಗಿದ್ದ ಪ್ರಾಚೀನ ಕೊಳಲುಗಳು ಕಂಡುಬಂದಿವೆ. ಅವು ಮೂಳೆ ಹಾಗೂ ಸುಟ್ಟ ಮಣ್ಣಿನಿಂದ ರಚಿತವಾದವು. ಆದುದರಿಂದ ಉಳಿದುಕೊಂಡವು. ಇವು ಬಹುತೇಕ ದಕ್ಷಿಣ ಅಮೇರಿಕದಲ್ಲಿ ದೊರೆತಿವೆ. ಇದರಲ್ಲಿ ಉದ್ದುದ್ದವಾಗಿ ಹಿಡಿದು ಊದುವಂತಹವು, ಅಡ್ಡಡ್ಡಲಾಗಿ ಹಿಡಿದು ಊದುವಂತಹವು ಎರಡೂ ಇವೆ. ಅಲ್ಲದೆ ವಿಧವಿಧವಾದ ಪಕ್ಷಿ, ಪ್ರಾಣಿಗಳ ಆಕಾರದಲ್ಲಿಯೂ ಇವೆ. ಇವುಗಳನ್ನು ಓಕಾರಿನಾ ಎಂದು ಕರೆಯುತ್ತಾರೆ. ಇದರಲ್ಲಿ

ಮೇಲ್ಮೈ ಮೇಲೆ ರಂಧ್ರಗಳಿರುತ್ತವೆ. ಹಿಂಭಾಗದಲ್ಲಿ ಗಾಳಿ ಊದಲು ತೂತುಮಾಡಿರುತ್ತಾರೆ. ಇವುಗಳು ಮಣ್ಣಿನಿಂದ ಮಾಡಲಾದುದು. ಇವುಗಳನ್ನು ಯಾವುದಾದರೂ ಮಾಯಾಮಾಟಕ್ಕೋ, ಧಾರ್ಮಿಕವಿಧಿಗೋ ಅಥವಾ ಸಂಗೀತಕ್ಕೋಸ್ಕರವೋ ಯಾವುದಕ್ಕೆ ಉಪಯೋಗಿಸಿದ್ದರು ಎಂಬುದು ಖಚಿತವಾಗಿಲ್ಲ.

ವಿದೇಶಿ ಕೊಳಲುಗಳು

ಏಕೆಂದರೆ ಈ ಕೆಲವು ಕೊಳಲುಗಳು ಸಮಾಧಿಗಳಲ್ಲಿ ದೊರಕಿವೆ. ಚಿಲಿದೇಶದ ಮೂಲನಿವಾಸಿಗಳು ಕೊಳಲುವಾದಕ ಸತ್ತಾಗ ಆತನ ಜೊತೆಗೆ ಊದುತ್ತಿದ್ದ ಕೊಳಲನ್ನೂ ಹೂಳುತ್ತಿದ್ದರು. ಆತನ ಉಸಿರು ತುಂಬಿರುತ್ತಿದ್ದ ಕೊಳಲಿನಲ್ಲಿ ಆತನ ಆತ್ಮವೂ ಇರುತ್ತದೆಂದು ಅವರ ನಂಬಿಕೆ. ಬ್ರೆಜಿಲ್ ದೇಶದ ಮೂಲನಿವಾಸಿಗಳು ತಾವು ಕೊಂದ ಶತ್ರುಗಳ ಮೂಳೆಗಳಿಂದ ಕೊಳಲನ್ನು ಮಾಡಿ ಧಾರ್ಮಿಕ ವಿಧಿಗಳಲ್ಲಿ ಉಪಯೋಗಿಸುತ್ತಿದ್ದರು. ಪೆರು, ಮೆಕ್ಸಿಕೋ, ಮುಂತಾದ ದೇಶಗಳ ಮೂಲನಿವಾಸಿಗಳು ಬಲಿಕೊಡುವಾಗ ಕೊಳಲಿನ ನಾದವನ್ನು ಹರಿಸುತ್ತಿದ್ದರು. ಕೆಲವು ಜನಾಂಗಗಳಲ್ಲಿ ಮಳೆ ಬರಿಸುವ ವಿಧಿಯಲ್ಲಿ ಕೊಳಲಿನದು ಮುಖ್ಯ ಪಾತ್ರ. ಹೀಗೆ ಧಾರ್ಮಿಕವಿಧಿಗಳ ಅಂಗವಾಗಿ ಒಂದು ಕಡೆ ಕೊಳಲನ್ನು ಉಪಯೋಗಿಸಿದರೂ, ಇನ್ನೊಂದು ಕಡೆ ಅದರ ಉಲ್ಲಾಸ ಹಾಗೂ ಮನಸ್ಸಿಗೆ ನೆಮ್ಮದಿ ಕೊಡುವ ಮೃದುನಾದದಿಂದ ಅಂತಹ ರಚನೆಗಳನ್ನು ರೂಪಿಸುವ ಪ್ರಯತ್ನಗಳು ಆಗುತ್ತಿದ್ದುವೆನ್ನಬಹುದು.

ಆ ಕಲ್ಪನೆಗಳು ಖಚಿತವಾಗಿ ಮೂಡಿಬರುವಂತೆ ನಾನಾ ಪ್ರಯೋಗಗಳೂ ಆಗುತ್ತಿದ್ದವು. ವಾದ್ಯದ ಉದ್ದಳತೆ, ರಂಧ್ರಗಳ ಸ್ಥಾನ, ಪ್ರಮಾಣ, ಮುಂತಾದ ವಿಷಯದಲ್ಲಿಯೂ ಪ್ರಯೋಗಗಳಾಗುತ್ತಿದ್ದುವು. ಇಂತಹ ಪ್ರಯೋಗಗಳಿಂದ ಪರಿಷ್ಕೃತವಾದ ಕೊಳಲು ಎಲ್ಲೆಡೆಯಲ್ಲಿಯೂ ಪ್ರಚಾರಕ್ಕೆ ಬಂದಿತು. ಅದರ ವ್ಯಾಪ್ತಿಯೂ ವಿಶಾಲವಾಯಿತು. ಪ್ರಪಂಚದ ವಿವಿಧ ದೇಶಗಳಲ್ಲಿ ನಾನಾ ಹೆಸರಿನಿಂದ ಜನಪ್ರಿಯವಾಯಿತು. ಸುಮೇರಿಯದಲ್ಲಿ ಟಿಗ್, ಈಜಿಪ್ಟಿನಲ್ಲಿ ಸೇಬಾ, ಟಿಬೆಟ್ಟಿನಲ್ಲಿ ನೇಖಾಂಗ್‌ಲಿಂಗ್, ಜಾವಾದಲ್ಲಿ ಸುಲಿಂಗ್, ಅರೇಬಿಯದಲ್ಲಿ ಹೀಗೆ ಪ್ರಪಂಚದ ನಾನಾ ಭಾಗಗಳಲ್ಲಿ ನಾನಾ ಹೆಸರುಗಳಿಂದ ಪ್ರಚಾರದಲ್ಲಿದೆ.

ಕೊಳಲಿನಲ್ಲಿ ಒಂದು ಕೊನೆಯಲ್ಲಿ ಒಂದು ತೂತು. ಅನಂತರ ಸ್ವಲ್ಪ ಅಂತರದಲ್ಲಿ ಆರರಿಂದ ಎಂಟರವರೆಗೆ ಸಾಲಾಗಿ ತೂತುಗಳಿವೆ. ಇದರಲ್ಲಿ ಮೊದಲನೆಯದು ವಾದ್ಯದದೊಳಕ್ಕೆ ಗಾಳಿ ಊದುವುದಕ್ಕೆ ಉಪಯೋಗಿಸುವುದು. ಅದನ್ನು ಮುಖರಂಧ್ರವೆನ್ನುತ್ತಾರೆ. ಮಿಕ್ಕ ರಂಧ್ರಗಳಲ್ಲಿ ಸ್ವರೋತ್ಪತ್ತಿ ಮಾಡುವುದು. ಏಳು ಸ್ವರಗಳಿಗೆ ಖಚಿತವಾಗಿ ಮೂಡಿಬರುವಂತೆ ಈ ರಂಧ್ರಗಳನ್ನು ಸ್ಥಾಪಿಸಲಾಗಿದೆ. ಮುಖರಂಧ್ರಕ್ಕೂ ಈ ಸ್ವರರಂಧ್ರಗಳಿಗೂ ಇರುವ ಅಂತರ ಅವುಗಳ ಪರಸ್ಪರ ಅಂತರ, ಅಗಲ ಮುಂತಾದವುಗಳನ್ನು ನಿರ್ಧರಿಸುವಲ್ಲಿ ಹಲವಾರು ತಲೆಮಾರುಗಳ ಚಿಂತನ ಮತ್ತು ಪ್ರಯೋಗಗಳು ನಡೆದಿವೆ ಎಂದು ಹೇಳಬೇಕಾಗಿಲ್ಲ. ಏಕೆಂದರೆ ಸಂಗೀತದ ದೃಷ್ಟಿಯಿಂದ ಈ ಮಾರ್ಪಾಡುಗಳಾಗುವ ಮುನ್ನ ಕೊಳಲಿನಲ್ಲಿ ಒಂದೇ ರಂಧ್ರವಿದ್ದು ಒಂದೊಂದು ಸ್ವರಕ್ಕೂ ಬೇರೆಬೇರೆ ಉದ್ದದ

ಕೊಳಲುಗಳಿದ್ದುವು. ಸ್ವರಶ್ರೇಣಿಗೆ ಅನುಸಾರವಾಗಿ ಅವುಗಳನ್ನು ಸಾಲಾಗಿ ಜೋಡಿಸಿ ಒಂದು ಕೊಳಲು ಕಟ್ಟನ್ನು ರಚಿಸುತ್ತಿದ್ದರು ಎಂಬ ಒಂದು ಅಭಿಪ್ರಾಯವಿದೆ. ಈ ಬಗೆಯ ಕೊಳಲು ಕಟ್ಟುಗಳು ಇಂದೂ ಪ್ರಪಂಚದ ಕೆಲವು ಭಾಗಗಳಲ್ಲಿ ಪ್ರಚಲಿತವಾಗಿವೆ. ಇವುಗಳಿಗೆ ಪ್ಯಾನ್ ಪೈಪ್ಸ್ ಎಂದು ಹೆಸರು. ಈ ಕಟ್ಟುಗಳಲ್ಲಿ ಸಾಲಾಗಿ ಜೋಡಿಸಿಡುವಂತಹವು. ಇವು ಪ್ಯಾನ್ ಪೈಪ್ಸ್. ಇನ್ನೊಂದು ಒಟ್ಟುಗೂಡಿಸಿ ಒಂದು ಬಟ್ಟಲಿನೊಳಗೆ ಬಂಧಿಸಿ ಗಾಳಿ ಊದಲು ಒಂದು ಮೂತಿ ಇಟ್ಟಿರುವುದು. ಇದು ಚೀಣ, ತಾಯ್‌ಲ್ಯಾಂಡ್ ಮುಂತಾದ ದೇಶಗಳಲ್ಲಿದೆ.

ಖಚಿತವಾಗಿ ಸ್ವರೋತ್ಪತ್ತಿ ಮಾಡುವ ರೀತಿಯ ಪರಿಷ್ಕೃತವಾದ ಕೊಳಲುಗಳು ಭಾರತದಲ್ಲಿ ಸಾವಿರಾರು ವರುಷಗಳಿಂದಲೂ ಪ್ರಚಾರದಲ್ಲಿವೆ. ಇದಕ್ಕೆ ಮುಖ್ಯ ಆಧಾರವೆಂದರೆ 'ಭರತನ ನಾಟ್ಯಶಾಸ್ತ್ರ'. ನಾಟ್ಯಶಾಸ್ತ್ರದ 30ನೇ ಅಧ್ಯಾಯ ಕೊಳಲಿಗೇ ಮೀಸಲಾಗಿದೆ.

ಆತೋದ್ಯಂ ಸುಷಿರಂ ನಾಮ

ಜ್ಞೇಯಂ ವಂಶಗತಂ ಬುಧೈಃ।

ವಂಶಿ-ಬಿದಿರಿನಿಂದ ತಯಾರಿಸಿದ ವಾದ್ಯವನ್ನು ಸುಷಿರ (ಅಂದರೆ ತೂತುಗಳಿಂದ ತುಂಬಿರುವುದು) ಎಂದು ಕರೆಯುತ್ತಾರೆ. ಈ ಸಾಲುಗಳಿಂದ ಪ್ರಾರಂಭವಾಗುವ ಅಧ್ಯಾಯದಲ್ಲಿ ಈ ವೇಣುವಿನಲ್ಲಿ ಸ್ವರ-ಗ್ರಾಮಾದಿಗಳು ವೀಣಾವಾದ್ಯದಂತೆಯೇ ಮೂಡಿಬರುತ್ತವೆ ಎಂದು ಪ್ರಾರಂಭಿಸಿ, ಈ ವಾದ್ಯದಲ್ಲಿ ಸ್ವರಗಳು, ಶ್ರುತಿ ಸಂಖ್ಯಾಭೇದಕ್ಕೆ ಅನುಗುಣವಾಗಿ, ಅಂಗುಲಿ ಅಂದರೆ ಬೆರಳುಗಳ ವಿನ್ಯಾಸದಿಂದ ಮೂಡಿಬರುತ್ತವೆ. ಅದು ಅರ್ಧಾಂಗುಲಿ ಕಂಪಮಾನಾಂಗುಲಿ, ವ್ಯಕ್ತಮುಕ್ತಾಂಗುಲಿ ಎಂದು ಮೂರು ವಿಧಾನದಿಂದ ದ್ವಿಕ, ತ್ರಿಕ, ಚತುಷ್ಕ ಎಂದು ಮೂರು ರೀತಿಯ ಸ್ವರೋತ್ಪತ್ತಿಯಾಗುತ್ತದೆ ಎಂದು ಇನ್ನೂ ಕೆಲವು ವಿವರಗಳನ್ನು ಕೊಡಲಾಗಿದೆ. ಇದರಿಂದ ನಾಟ್ಯಶಾಸ್ತ್ರದ ಕಾಲಕ್ಕೆ ಕೊಳಲಿನಲ್ಲಿ ಪ್ರೌಢವಾದ ಸಂಗೀತ ರಚನೆಗಳನ್ನು ನುಡಿಸುವ ತಾಂತ್ರಿಕ ವಿಧಾನ ಖಚಿತ ರೀತಿಯಲ್ಲಿ ವ್ಯವಹಾರದಲ್ಲಿ ಇತ್ತೆನ್ನಬಹುದು.

ಸಂಗೀತಶಾಸ್ತ್ರ ಗ್ರಂಥಗಳಲ್ಲಿ ಬಹುತೇಕ ಕೊಳಲಿನ ಪ್ರಸ್ತಾಪವಿದ್ದೇ ಇದೆ. ಕೆಲವದರಲ್ಲಿ ಕ್ಲುಪ್ತವಾಗಿದ್ದರೆ, ಇನ್ನು ಕೆಲವದರಲ್ಲಿ ದೀರ್ಘವಾಗಿರುತ್ತದೆ.

ಸಂಗೀತ ರತ್ನಾಕರವು 15 ಬಗೆಯ ಕೊಳಲುಗಳನ್ನು ಉಲ್ಲೇಖಿಸಿದೆ. ಇವುಗಳ ಪರಸ್ಪರ ವ್ಯತ್ಯಾಸ ಉದ್ದದಲ್ಲಿ. ಅವುಗಳ ಹೆಸರುಗಳು – (1) ಏಕವೀರ, (2) ಉಮಾಪತಿ, (3) ತ್ರಿಪುರುಷ, (4) ಚತುರ್ಮುಖ, (5) ಪಂಚವಕ್ತ್ರ, (6) ಷಣ್ಮುಖ, (7) ಮುನಿ, (8) ವಸು, (9) ನಾಥೇಂದ್ರ, (10) ಮಹಾನಂದ, (11) ರುದ್ರ, (12) ಆದಿತ್ಯ, (13) ಮನು, (14) ಕಳಾನಿಧಿ, (15) ಅಷ್ಟದಶಾಂಗುಲ.

ಅದೇ ನಿಜಗುಣಶಿವಯೋಗಿಯ 'ವಿವೇಕ ಚಿಂತಾಮಣಿ' ಅಲ್ಲದೆ ಇತರ ಕೆಲವು ಶೈವ ಕಾವ್ಯಗಳಲ್ಲಿ 18 ಬಗೆಯ ವಾಸ ಅಥವಾ ಕೊಳಲುಗಳ ಪ್ರಸ್ತಾಪವಿದೆ. ವಿವೇಕ

ಚಿಂತಾಮಣಿಯಲ್ಲಿ (1) ಜಾತಿ, (2) ಸುಜಾತಿ, (3) ಸುಕುಮಾರಿಕಾ, (4) ಪಕ್ಷ, (5) ಭುವನ, (6) ಶ್ವೇತ, (7) ಆದಿತ್ಯ, (8) ರುದ್ರ, (9) ಹರಿ, (10) ನಿಧಿ, (11) ದಿಗು, (12) ಋಷಿ, (13) ಕುಮಾರ, (14) ಅಘೋರ, (15) ಬ್ರಹ್ಮ, (16) ತ್ರಿಪುರ, (17) ಶಿವಶಕ್ತಿ, (18) ಭುವನಾಧಿಪ – ಈ 18 ವಿಧದ ಕೊಳಲುಗಳ ಪ್ರಸ್ತಾಪವಿದೆ.

ಇದಕ್ಕೂ ರತ್ನಾಕರಕ್ಕೂ ಮೂರುನಾಲ್ಕು ಹೆಸರುಬಿಟ್ಟು ಪರಸ್ಪರ ವ್ಯತ್ಯಾಸವಿದೆ.

ವಾಸ ಅಥವಾ ಕೊಳಲನ್ನು ಪ್ರತ್ಯೇಕವಾಗಿಯೂ ಅಲ್ಲದೆ ನೃತ್ಯದ ಹಿಮ್ಮೇಳದ ಒಂದು ವಾದ್ಯವಾಗಿಯೂ ಉಪಯೋಗಿಸಲಾಗುತ್ತಿತ್ತು. ರತ್ನಾಕರವೇ ಮುಂತಾದ ಕೆಲವು ಗ್ರಂಥಗಳಲ್ಲಿ ವಾದ್ಯದಲ್ಲಿ ನಿಗದಿತ ಶ್ರುತ್ಯಾತ್ಮಕ ಸ್ವರೋತ್ಪತ್ತಿ ಮಾಡುವುದು ಹೇಗೆ. ಅದಕ್ಕೆ ಯುಕ್ತವಾದ ಅಂಗುಲೀ ವಿನ್ಯಾಸ, ಫೂತ್ಕಾರದ ಗುಣ ಮತ್ತು ದೋಷ ಮುಂತಾದುವುಗಳನ್ನು ವಿವರಿಸಲಾಗಿದೆ. ಹಿಂದೆ ತಂಬೂರಿಯು ಇನ್ನೂ ಪ್ರಚಾರಕ್ಕೆ ಬರದಿದ್ದ ಕಾಲದಲ್ಲಿ ಕೊಳಲೇ ಆಧಾರ ಷಡ್ಜವನ್ನು ಸೂಚಿಸುತ್ತಿತ್ತು. ಸಹಾಯಕ ವಾದ್ಯವಾಗಿಯೂ ಉಪಯೋಗಿಸಲಾಗುತ್ತಿತ್ತು. ಇಷ್ಟು ಸರಳವಾದ ಎಲ್ಲರಿಗೂ ಸುಲಭವಾಗಿ ದೊರಕಬಹುದಾದ ಈ ಕೊಳಲಿನ ವಾದಕರ ಸಂಖ್ಯೆ ಮಿತವಾಗಿರುವುದು ಆಶ್ಚರ್ಯ. ಕಚೇರಿ ವೇದಿಕೆಯಮೇಲೆ ಕಾಣಬರುವ ಕಲಾವಿದರನ್ನು ಸಂಖ್ಯಾ ಪ್ರಮಾಣದ ಮೇಲೆ ವಿಂಗಡಿಸಿದರೆ ಮೊದಲ ಸ್ಥಾನ ಗಾಯಕರಿಗೆ, ಎರಡನೇ ಸ್ಥಾನ ವೈಣಿಕರಿಗೆ, ಮೂರನೆಯ ಸ್ಥಾನದಲ್ಲಿ ಕೊಳಲುವಾದಕರಿದ್ದಾರೆ. ಇದು ಕರ್ನಾಟಕ ಸಂಗೀತ ಕ್ಷೇತ್ರವೊಂದೇ ಅಲ್ಲ ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿಯೂ ಹೀಗೆಯೇ. ಅಷ್ಟೇಕೆ ಪಾಶ್ಚಾತ್ಯ ಸಂಗೀತದಲ್ಲಿಯೂ ಹಾಗೆಯೇ. ತನಿಯಾಗಿ ಕಚೇರಿ ಮಾಡುವವರ ಸಂಖ್ಯೆ ಬಹುಸ್ವಲ್ಪ. ಆರ್ಕೆಸ್ಟ್ರಾ ಅಥವಾ ವಾದ್ಯವೃಂದದಲ್ಲಿ ಬಗೆಬಗೆಯ ಕೊಳಲುಗಳನ್ನು ಉಪಯೋಗಿಸುತ್ತಾರೆ. ಆದರೆ ಅಲ್ಪ ಸಂಖ್ಯೆಯಲ್ಲಿ. 80-90 ವಾದ್ಯಗಳ ಆರ್ಕೆಸ್ಟ್ರಾದಲ್ಲಿ ಮೂರುನಾಲ್ಕು ಕೊಳಲುಗಳಿರಬಹುದು ಅಷ್ಟೇ.

ಕರ್ನಾಟಕ ಸಂಗೀತ ಕಚೇರಿಗಳಲ್ಲಿ ಬಹುಕಾಲ ಒಂದು, ಒಂದೂಕಾಲು ಅಡಿ ಉದ್ದದ ಕೊಳಲುಗಳನ್ನು ಉಪಯೋಗಿಸಲಾಗುತ್ತಿತ್ತು. ಅದನ್ನು ಪಾಶ್ಚಾತ್ಯರು ಪಿಕ್ಕೋಲೋ ಎನ್ನುತ್ತಾರೆ. ಹಿಂದೂಸ್ತಾನಿ ಪದ್ಧತಿಯಲ್ಲಿಯೂ ಹೀಗೆಯೇ ಇತ್ತೆನ್ನಿಸುತ್ತದೆ. ಏಕೆಂದರೆ ಬೊಂಬಾಯಿ ರೇಡಿಯೋ ಕೇಂದ್ರದಲ್ಲಿದ್ದ ಡಿ. ಅಮೆಲ್ ಅಥವಾ ಅಮ್ಮೆಂಬಳ ದಿನಕರರಾಯರು ಇದೇ ಬಗೆಯ ಕೊಳಲನ್ನು ಉಪಯೋಗಿಸುತ್ತಿದ್ದರು. ಆದರೆ ಪನ್ನಾಲಾಲ್‌ಘೋಷರಿಂದ ಬದಲಾವಣೆಯಾಗಿ, ಬಾನ್ಸುರಿ ಪ್ರಚಾರಕ್ಕೆ ಬಂದಿತು. ಚಿಕ್ಕ ಕೊಳಲಿನ ನಾದದಲ್ಲಿ ತೀವ್ರತೆ, ಬಾನ್ಸುರಿಯುದರಲ್ಲಿ ಮಾರ್ದವತೆ. ಜನತೆಯು ಕಿವಿ ಮಾರ್ದವತೆಗೆ ಒಲಿಯಿತು. ಪನ್ನಾಲಾಲ್‌ಘೋಷರೂ ತ್ರಿಪುರಾ, ಮಣಿಪುರ, ಅಸ್ಸಾಂ ಮುಂತಾದ ಕಡೆ ಉಪಯೋಗದಲ್ಲಿದ್ದ ಉದ್ದ ಕೊಳಲನ್ನು ಪರಿಷ್ಕರಿಸಿ ಪ್ರಚಾರಕ್ಕೆ ತಂದರು. ಕರ್ನಾಟಕ ಸಂಗೀತದಲ್ಲಿ ಆ ಕೆಲಸ ಮಾಡಿದವರು ಟಿ. ಆರ್. ಮಹಾಲಿಂಗಂ.

ಕೊಳಲಿನ ನಾದ ಮೋಹಕವಾದುದು ಎಂದು ಆಗಲೇ ಹೇಳಿದ್ದೇನೆ. ಅದು ಯಾರ್‍ಯಾರ ಮನಸ್ಸಿನ ಮೇಲೆ ಏನೇನು ಪರಿಣಾಮ ಉಂಟುಮಾಡಬಲ್ಲದು? ಹೇಳುವುದು ಕಷ್ಟ. ಆದರೆ ಒಂದು ವರ್ಗದ ಬಗೆಗೆ ಕೆಲವು ಗ್ರಂಥಕರ್ತರು ಎಚ್ಚರಿಸಿದ್ದಾರೆ. ನಿದರ್ಶನವಾಗಿ ವಾತ್ಸ್ಯಾಯನನು - ವಂಶವಾದನತೋಃ ಯಾಶಬ್ದಂ ಶೃಣೋತಿ ಸಾವಶ್ಯಾಭವತಿ ಎನ್ನುತ್ತಾನೆ. ಇಲ್ಲಿ ಕೊಳಲಿನ ಮಧುರನಾದಕ್ಕೆ ವಶವಾಗುವಂತವರು ಯಾರು? ಸ್ತ್ರೀಯರು. ಅಂದರೆ ಸ್ತ್ರೀ ಸಮೂಹದಲ್ಲಿ ಕೊಳಲುವಾದಕ ಸ್ವಲ್ಪ ಎಚ್ಚರಿಕೆಯಿಂದ ನುಡಿಸಬೇಕು ಎಂದರ್ಥ. ಇದನ್ನೇ ಇನ್ನೂ ಸ್ಪಷ್ಟವಾಗಿ ಇನ್ನೊಂದು ಗ್ರಂಥದಲ್ಲಿ ಹೇಳಿದೆ.

ಕೊಳಲು ಬೆದಂಡೆ ಪಗರಣ - ಮುಂತಾದ ಕೆಲವು ಪ್ರಕಾರಗಳನ್ನು ಹೇಳಿ ಬೋಗಲೀಗಲಾಗದುವಧುವಂ ಎಂದಿದ್ದಾನೆ - ಚಂದ್ರರಾಜ 'ಮದನ ತಿಲಕ'ದಲ್ಲಿ. ಅಂದರೆ ಕೊಳಲು ನುಡಿಸುವ ಬೆದಂಡೆ ಎಂಬ ಹಾಡುಗಬ್ಬವನ್ನು ನಿರೂಪಿಸುವ ಪಗರಣ ಅಂದರೆ ಒಂದು ರೀತಿಯ ಬಯಲಾಟ ಆಡುವ ಸ್ಥಳಗಳಿಗೆ ಕುಲವಧು ಅಂದರೆ ಮರ್ಯಾದಸ್ಥ ಮಹಿಳೆಯರನ್ನು ಹೋಗಲು ಬಿಡಬಾರದು. ಇಲ್ಲಿ ಸ್ವಾರಸ್ಯವೆಂದರೆ 12ನೇ ಶತಮಾನದ ಈ ಮದನತಿಲಕ ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ ವಾತ್ಸ್ಯಾಯನನದು ಅಷ್ಟೇ. ಈ ಇಬ್ಬರೂ ಎಚ್ಚರಿಸಿರುವುದನ್ನು ನೋಡಿದರೆ ಕೊಳಲಿನ ಮೋಹಕಶಕ್ತಿ ಎಂತಹುದು ಎಂದು ಅರ್ಥವಾಗುವುದು.

ಪ್ರತಿಭಾವಂತರು

ಭಾರತೀಯ ಜನಜೀವನದಲ್ಲಿ ಹಾಸುಹೊಕ್ಕಾಗಿದ್ದರೂ ಕೊಳಲಿನ ಇತಿಹಾಸವನ್ನು ಪರಿಶೀಲಿಸಿದಾಗ, ಅದರ ಪ್ರತಿಭಾವಂತ ವಾದಕರು ಯಾರಿದ್ದರು ಎಂಬ ಮಾಹಿತಿ ದೊರೆಯುವುದು ಕಷ್ಟ. ನನಗೆ ತಿಳಿದಮಟ್ಟಿಗೆ ಕಂಡುಬರುವ ಹೆಸರು 63. ಪುರಾತನರು ಎನಿಸಿಕೊಂಡ ಶೈವಸಂತರಲ್ಲಿ ಒಬ್ಬನಾದ ಆನಾಯನಾರ್. ಸಾವಿರ-ಸಾವಿರದೈನೂರು ವರುಷಗಳ ಹಿಂದೆ ಜೀವಿಸಿದ್ದಿರಬಹುದು. ಅದಕ್ಕಿಂತ ಖಚಿತವಾಗಿ ಹೇಳಬಹುದಾದರೆ ಉಸ್ತಾದೋಸ್ತ್. ಅಕ್ಬರನ ಆಸ್ಥಾನದಲ್ಲಿದ್ದವನು ಅಥವಾ ಕೊಳಲುವಾದಕನೇ. ಐನಿ ಅಕ್ಬರಿ ಗ್ರಂಥದಲ್ಲಿ ಈ ಹೆಸರು ಬರಬೇಕಾದರೆ ಅವನು ಬಹು ಪ್ರತಿಭಾವಂತ ಎಂದುಕೊಳ್ಳಬಹುದು. ಅನಂತರ ಕಂಡುಬರುವ ಇನ್ನೊಬ್ಬ ಪ್ರತಿಭಾವಂತ ಲಾಲ್‌ಖಾನ್. ಅಕ್ಬರನ ಮೊಮ್ಮಗ ಷಹಜಹಾನನ ಆಸ್ಥಾನದಲ್ಲಿದ್ದವ. ಚಕ್ರವರ್ತಿಯಿಂದ ಸನ್ಮಾನಿತನಾದವ. ತುಂಬು ಸಭೆಯಲ್ಲಿ ತುಲಾಭಾರ ಮರ್ಯಾದೆ ಮಾಡಿಸಿ, ತೂಕಕ್ಕೆ ಹಾಕಿದ್ದ 4500 ರೂಪಾಯಿಗಳನ್ನು ಕೊಟ್ಟುದೇ ಅಲ್ಲದೆ ಗುಣಸಮುದ್ರ ಎಂಬ ಬಿರುದನ್ನು ಕೊಟ್ಟನು - ಷಹಜಹಾನ್.

ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧ ಕೊಳಲು ವಾದಕರಲ್ಲಿ ನಮ್ಮ ಮನಸ್ಸಿಗೆ ಬರುವ ಮೊದಲ ಹೆಸರೆಂದರೆ ಶರಭಶಾಸ್ತ್ರಿ. ತ್ಯಾಗರಾಜರ ಶಿಷ್ಯ ಪರಂಪರೆಗೆ ಸೇರಿದವರು. ಮಾನಂಬೊಚ್ಚಾವಡಿ ವೆಂಕಟಸುಬ್ಬಯ್ಯನವರ ಶಿಷ್ಯರು. ಕುರುಡ. 1872-1904 ಮಧ್ಯೆ

ಜೀವಿಸಿದ್ದವರು. ಅವರ ಶಿಷ್ಯರು ಪಲ್ಲಡಂ ಸಂಜೀವರಾವ್, ಕುಂಭಕೋಣಂ ನಾಗರಾಜರಾವ್, ಅವರ ನಂತರ ಬಂದವರು ತಿರುಪ್ಪಾಂಬರಂ ಸ್ವಾಮಿನಾಥಪಿಳ್ಳೆ, ಅನಂತರ ಮಾಲಿ ಎಂದು ಖ್ಯಾತರಾದ ಟಿ. ಆರ್. ಮಹಾಲಿಂಗಂ. ಈ ವಾದ್ಯಕಲೆಗೆ ಒಂದು ಹೊಸ ತಿರುವನ್ನೇ ಕೊಟ್ಟವರು. ಹೀಗೆಯೇ ದಕ್ಷಿಣ ಭಾರತದ ಇತರ ಭಾಗಗಳಲ್ಲಿಯೇ ಅನೇಕ ಉತ್ತಮ ಕೊಳಲು ವಾದಕರಿದ್ದರು. ಮೈಸೂರಿನಲ್ಲಿಯೇ ತಿರುವಾಂಕೂರು ಸೋದರರಲ್ಲಿ ಒಬ್ಬರಾದ ಪದ್ಮನಾಭ ಭಾಗವತರು, ವೆಂಕಟೇಶಯ್ಯಂಗಾರ್ಯರು, ಎ.ಕೆ. ಸುಬ್ಬರಾಯರು, ಚಿಲಕುಂದದ ಶ್ರೀನಿವಾಸಮೂರ್ತಿ, ರಂಗಪ್ಪ ಮುಂತಾದವರು ನೆನಪಿಗೆ ಬರುತ್ತಾರೆ. ಹಿಂದಿನ ಕಾಲಕ್ಕೆ ಹೋಲಿಸಿದರೆ, ಇಂದು ಕಚೇರಿ ವೇದಿಕೆಯ ಮೇಲೆ ಕಾಣುವ ಕೊಳಲು ವಾದಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ.

ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿಯೂ ಹಾಗೆಯೇ. ಆದರೆ ಈ ಪ್ರಮಾಣದಲ್ಲಿ ಕಾಣಬರುತ್ತಿಲ್ಲ. ಇಷ್ಟಾದರೂ ಒಂದು ವಿಷಯವನ್ನು ಮರೆಯುವಂತಿಲ್ಲ. ಕಚೇರಿ ವೇದಿಕೆಯ ಮೇಲೆ ಕೊಳಲುವಾದಕರು ಹೆಚ್ಚಾಗಿ ಕಾಣದಿರಬಹುದು. ಆದರೆ ಸ್ವಂತ ಖುಷಿಗಾಗಿ ಕೊಳಲನ್ನು ನುಡಿಸುವ ಮಂದಿ ಬಹುಸಂಖ್ಯೆಯಲ್ಲಿದ್ದಾರೆ. ಇದರಲ್ಲಿ ದನಕಾಯುವ ಗೊಲ್ಲನಿಂದ ಹಿಡಿದು ಪ್ರೌಢವಾಗಿ ರಾಗ ನಿರೂಪಣೆ ಮಾಡಬಲ್ಲವರವರೆಗೂ ಇದ್ದಾರೆ. ಇವರೆಲ್ಲಾ ಬಹುತೇಕ ಅಜ್ಞಾತ ಎಲೆಮರೆ ಕಾಯಿನಂತೆ.

ಈಗ ಕೊಳಲಿನ ಇತಿಹಾಸದಲ್ಲಿ ನಿನ್ನೆ ಮತ್ತು ಇಂದು ಎರಡು ಹಂತಗಳನ್ನು ಪರಿಶೀಲಿಸಲಾಯಿತು. ಮೊದಲನೆಯದರಲ್ಲಿ ಕೊಳಲು ಧಾರ್ಮಿಕ ಜೀವನದ ಅಂಗವಾಗಿದ್ದು ಲೌಕಿಕ ಜೀವನಕ್ಕೂ ಪ್ರವೇಶಮಾಡಿತು. ಅಲ್ಲಲ್ಲಿ ಸ್ವತಂತ್ರವಾಗಿ, ತನಿಯಾಗಿ ಕಾಣಿಸಿಕೊಂಡರೂ, ಅದರ ಸ್ಥಾನ ಬಹುತೇಕ ನಾಟ್ಯದ ಹಿನ್ನೆಲೆಯ ಸಂಗೀತದ ಒಂದು ಅಂಗವಾಗಿ. ಎರಡನೆಯ ಹಂತದಲ್ಲಿ ಅದರ ಉಪಯೋಗದಲ್ಲಿ ಅಂತಹ ಬದಲಾವಣೆಯೇನೂ ಇಲ್ಲ. ಆದರೆ ಅದರಿಂದ ನಿರ್ಮಿತವಾಗುವ ಸಂಗೀತದ ಗುಣ, ಮತ್ತು ವಿಸ್ತಾರದಲ್ಲಿ ಬದಲಾವಣೆ ಕಾಣುತ್ತದೆ. ರಾಗಗಳ ಪ್ರಮಾಣ ಹೆಚ್ಚಿದೆ. ವೈವಿಧ್ಯತೆ ಹೆಚ್ಚಿದೆ. ಗೇಯ ಪ್ರಕಾರಗಳ ವೈವಿಧ್ಯತೆಯೂ ಹೆಚ್ಚಿದೆ. ಜೊತೆಗೆ ಕಲ್ಪನಾ ಬಾಹುಳ್ಯ, ಇವುಗಳೆಲ್ಲಾ ವಾದ್ಯದಲ್ಲಿ ಖಚಿತವಾಗಿ ಅಭಿವ್ಯಕ್ತವಾಗಬೇಕಾದರೆ, ಅದರ ತಾಂತ್ರಿಕ ಸಾಮರ್ಥ್ಯವೂ ಈ ಬದಲಾವಣೆಗಳಿಗೆ ಅನುಸಾರವಾಗಿ ವೃದ್ಧಿಯಾಗಬೇಕು. ಈ ಎರಡನೆಯ ಹಂತದಲ್ಲಿ ಈ ಕೆಲಸ ಸಾಕಷ್ಟು ಆಗಿದೆ. ವಾದ್ಯ ಹೆಚ್ಚು ಪರಿಷ್ಕಾರಗೊಂಡಿದೆ. ಭರತನ ಕಾಲದ ಒಬ್ಬ ಕೊಳಲುವಾದಕ, ಇಂದಿನ ಪ್ರಪಂಚಕ್ಕೆ ಬರಲು ಸಾಧ್ಯವಾದಲ್ಲಿ ಅವನಿಗೆ ದಿಗ್ಭ್ರಮೆಯಾಗುವುದು ಸಹಜ. ಇಂದಿನ ಸಂಗೀತದ ರೂಪುರೇಷೆ ಅವನ ಊಹೆಗೆ ಮೀರಿದುದು. ಅವನ ಕೊಳಲಿನಲ್ಲಿ ನಿರೂಪಿಸಲು ಸಾಧ್ಯವಾಗದು. ಆದರೆ ಈ ಬದಲಾವಣೆಗಳೆಲ್ಲಾ ಒಂದು ಅನುಭವದ ಆಧಾರದ ಮೇಲೆ ಆದುದು. ಪಾಶ್ಚಾತ್ಯ ಸಂಗೀತದಲ್ಲಿಯೂ ಹೀಗೆಯೇ. ಅಲ್ಲಿ ಸ್ವಲ್ಪ ಖಚಿತ ಮಾಹಿತಿ ದೊರೆಯುತ್ತದೆ.

ಬೋಮ್ ವಿಧಾನ

ಪಾಶ್ಚಾತ್ಯ ಸಂಗೀತದಲ್ಲಿಯೂ ವಾದ್ಯವನ್ನು ಉತ್ತಮಗೊಳಿಸುವ ದಿಸೆಯಲ್ಲಿ ನಾನಾ ಪ್ರಯೋಗಗಳು ಆಗಿದ್ದರೂ 19ನೇ ಶತಮಾನದಲ್ಲಿ ಆದ ಬದಲಾವಣೆ ಕ್ರಾಂತಿಕಾರಕವಾದುದು. ಇದರ ಕರ್ತೃ- ಥಿಯೊಬೊಲ್ಡ್ ಬೋಮ್. 1794- 1881ರ ಮಧ್ಯೆ ಜೀವಿಸಿದ್ದನು. ವಾದ್ಯದ ರಂಧ್ರಗಳಲ್ಲಿ ಬೆರಳುಗಳ ವಿನ್ಯಾಸದಿಂದ ವಿವಿಧ ಸ್ವರಗಳನ್ನು ಉತ್ಪತ್ತಿ ಮಾಡುತ್ತಿದ್ದ ವಿಧಾನವನ್ನು ಬದಲಿಸಿ ಅದಕ್ಕಾಗಿ ಕೀಲಿಗಳನ್ನು ರಚಿಸಿದನು. ಅಲ್ಲದೆ ಖಚಿತವಾದ ಸ್ವರಗಳು, ಕೆಲ ಗಮಕಗಳು ಮೂಡುವಂತೆ ಬೆರಳುಗಳಿಗೂ ಆಯಾಸವಾಗದಂತೆ, ಸರಿಯಾದ ಜಾಗದಲ್ಲಿ ತೂತುಗಳನ್ನು ಕೊರೆದು, ಅದನ್ನು ಮುಚ್ಚಿ ತೆಗೆಯಲು ಅನುಕೂಲಿಸುವಂತೆ, ಲೋಹದ ಕೀಲಿಗಳನ್ನು ಮಧ್ಯದಲ್ಲಿ ಅಳವಡಿಸಿದನು. ಇದನ್ನು ಬೋಮ್ ವಿಧಾನ ಎಂದು ಕರೆಯುತ್ತಾರೆ. ಕೊಳಲೇ ಅಲ್ಲದೆ ಇತರ ಅನೇಕ ಸುಷಿರ ವಾದ್ಯಗಳಲ್ಲಿ ಈ ಕೀಲಿಗಳನ್ನು ಅಳವಡಿಸಲಾಗಿದೆ. ಪಾಶ್ಚಾತ್ಯ ಕೊಳಲು ವಾದಕರು, ಇಂದು ಅನುಸರಿಸುತ್ತಿರುವುದು, ಈ ಬೋಮ್ ವಿಧಾನವನ್ನೇ.

ಇನ್ನು ಪೂರ್ವದಿಕ್ಕಿನ ಕಡೆಗೆ ದೃಷ್ಟಿ ಹಾಯಿಸುವ. ಅಲ್ಲಿ ಮೊದಲು ಕಾಣುವುದು ಚೀಣಾದೇಶದ ಕೊಳಲುಗಳು. ಅವರ ಸಂಗೀತದ ಪವಿತ್ರವಾದ ಮೂಲಸ್ವರ ಅಥವಾ ಆಧಾರಷಡ್ಜ ಉದ್ಭವಿಸಿದುದು ಬಿದಿರು ಕೊಳಲಿನಿಂದಲೇ. ಹಾಗೆಯೇ ಜಪಾನಿನ ವಿಧವಿಧ ಕೊಳಲುಗಳು. ಅದರಲ್ಲಿಯೇ ಅವರ ಷಿಂಟೋ ಆರಾಧನಾ ಸಂದರ್ಭದಲ್ಲಿ ನುಡಿಸಲಾಗುವ ವಿಚಿತ್ರನಾದದ ಷಕುಹಾಚಿ ಕೊಳಲುಗಳು, ಟಿಬೆಟ್ಟಿನ ತಂತ್ರವಿಧಿಗಳಲ್ಲಿ ಉಪಯೋಗಿಸುವ ಹೆಂಗಸಿನ ಮೂಳೆಯಿಂದ ಮಾಡಿದ ಕೊಳಲುಗಳು, ಅಂತೆಯೇ ಅಮೆಜಾನ್ ನದೀತೀರದಲ್ಲಿ ವಾಸಮಾಡುವ ಆರಣ್ಯವಾಸಿಗಳು ಉಪಯೋಗಿಸುವ ಒಂದೇ ಸ್ವರ ಹೊರಡುವ ನಾಲ್ಕೈದು ಅಡಿ ಉದ್ದದ ಒನಕೆಯಂತಹ ಕೊಳಲುಗಳು .... ಹೀಗೆ ಪ್ರಪಂಚದ ವಿವಿಧ ಭಾಗಗಳಲ್ಲಿ ಚಿತ್ರವಿಚಿತ್ರವಾದ ಕೊಳಲುಗಳು ಉಪಯೋಗದಲ್ಲಿವೆ. ಅವುಗಳನ್ನೆಲ್ಲಾ ವಿವರಿಸಲು ಈಗ ಸಾಧ್ಯವಿಲ್ಲ.

ಕೊಳಲು ಮತ್ತು ಮಾನವ ಸಂಬಂಧ, ನಿನ್ನೆ ಮತ್ತು ಇಂದು ಹೇಗಿತ್ತು ಎಂಬುದನ್ನು ಪ್ರಸ್ತಾಪಿಸಲಾಯಿತು. ಇನ್ನು ನಾಳೆ. ಇದು ಒಂದು ಪ್ರಶ್ನೆಯ ರೂಪದಲ್ಲಿಯೇ ಉಳಿಯಬೇಕಾಗುತ್ತದೆ.

ಇಂದು ನಾವು ಎಲೆಕ್ಟ್ರಾನಿಕ್ ಯುಗದಲ್ಲಿದ್ದೇವೆ. ನಾವು ಮಾಡುತ್ತಿದ್ದ ಅನೇಕ, ಕೊನೆಗೆ ಕಠಿಣವಾದ ಕೆಲಸಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮಗಳು ಮಾಡುತ್ತಿವೆ. ಸಂಗೀತ ಭಾಗದಲ್ಲಿ ಹೇಳಬೇಕಾದರೆ, ನಮ್ಮ ಯಾವ ವಾದ್ಯವಾಗಲೀ, ಅದರ ನಾದವನ್ನು, ಖಚಿತವಾಗಿ ಧ್ವನಿಸಬಲ್ಲ, ಯಂತ್ರ ಮಾಧ್ಯಮಗಳು ನಿರ್ಮಿತವಾಗಿವೆ. ನಮ್ಮ ಕಲ್ಪನೆಗಳನ್ನೂ ಮೊದಲೇ ಅಡಕಮಾಡಿದ ರೋಬಟ್ ಯಂತ್ರ, ಇಂತಹ ಮಾಧ್ಯಮಗಳ ಮೂಲಕ ಒಂದು ಕೊಳಲು ಕಚೇರಿಯನ್ನೇ ಮಾಡಲೂ ಸಾಧ್ಯವಿದೆ. ಆದರೆ ಅಸಲೀ ಮಾಲಿಗೂ, ನಕಲೀ ಮಾಲಿಗೂ ವ್ಯತ್ಯಾಸವಿರುತ್ತದಲ್ಲ.

ನಕಲಿಮಾಲಿನಲ್ಲಿ ಪೂರ್ವಸಿದ್ಧಿತವಾಗಿ ಅಡಕಮಾಡಿದ ಕಲ್ಪನೆಗಳು ಪುನರಾವೃತ್ತಿ ಆಗುತ್ತಲೇ ಇರುತ್ತವೆ. ಅಸಲಿಯಲ್ಲಿ ಒಂದು ಸಲಕ್ಕೂ ಮತ್ತೊಂದು ಸಲಕ್ಕೂ ಅಂದಂದಿನ ಮನೋಧರ್ಮವನ್ನವಲಂಬಿಸಿ, ವ್ಯತ್ಯಾಸಗಳು ಕಾಣಬರುತ್ತವೆ. ಇದರಿಂದ ಹಳಸಲು ಬದಲು ಹೊಸತನ ಅನುಭವವಾಗುತ್ತದೆ. ಎಂದಿನವರೆಗೂ ಮನುಷ್ಯನಿಗೆ ಕೊಳಲು ಭಾವಾಭಿವ್ಯಕ್ತಿಯ ಸಾಧನವಾಗಿರುತ್ತದೋ ಅಲ್ಲಿಯವರೆಗೂ ಅದು ನಮ್ಮ ಮಧ್ಯೆ ಜೀವಿಸಿರುತ್ತದೆ.

ಅಲ್ಲದೆ ಎಲೆಕ್ಟ್ರಾನಿಕ್ ಮಾಧ್ಯಮ ದುಬಾರಿ. ಎಲ್ಲರಿಗೂ ಎಟುಕವಂಥದಲ್ಲ. ಕೊಳಲು ಬಹು ಸುಲಭ ಬೆಲೆ. ಆದುದರಿಂದ ಸ್ಥಿತಿ ಬದಲಾಗಲು ಬಹುಕಾಲ ಬೇಕು. ಅಲ್ಲಿಯವರೆಗೆ ಕೊಳಲು ಮತ್ತು ಮಾನವನ ಸಂಬಂಧಕ್ಕೆ ಚ್ಯುತಿ ಏನಿಲ್ಲ. ★ ★ ★ ★ ★ ★ ★ ★ ★ ★

ವೇಣು ಉತ್ಸವ

9. ಪಿಟೀಲು : ಬಹು ಪ್ರಾಚೀನವಾದ ಕಮಾನುವಾದ್ಯ

ಸಂಗೀತವಾದ್ಯಗಳಲ್ಲೆಲ್ಲಾ ವಿಶ್ವವ್ಯಾಪಿ ವಾದ್ಯವೆಂದರೆ, ವಯೋಲಿನ್ ಅಥವಾ ಪಿಟೀಲು ಎಂದು ಧಾರಾಳವಾಗಿ ಹೇಳಬಹುದು. ಕೊರಿಯಾದಿಂದ ಹಿಡಿದು ಆಸ್ಟ್ರೇಲಿಯವರೆಗೆ, ಅಮೆರಿಕದಿಂದ ಹಿಡಿದು ಜಪಾನ್‌ವರೆಗಿನ ರಾಷ್ಟ್ರಗಳಲ್ಲಿ ಪಿಟೀಲನ್ನು ಕಾಣಬಹುದು, ಇಂದು ಬಳಕೆಯಲ್ಲಿರುವ ಪಿಟೀಲು ಪಾಶ್ಚಾತ್ಯರಿಂದ ಬಂದುದು - ನಿಜ. ಆದರೆ ಈ ವಾದ್ಯ ಬಹು ಬೇಗ ನಾನಾ ದೇಶಗಳ, ವಿಧವಿಧವಾದ ಸಂಗೀತ ಪ್ರಕಾರಗಳಿಗೆ ಸುಲಭವಾಗಿ ಹೊಂದಿಕೊಂಡುದರಿಂದ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಹರಡಿಕೊಂಡಿದೆ. ಈಗ ಅದೇ ರೀತಿ ಹರಡಿಕೊಳ್ಳುತ್ತಿರುವ ಇನ್ನೊಂದು ವಾದ್ಯ - ಗಿಟಾರ್. ಪಿಟೀಲಿನ ಈ ಜನಪ್ರಿಯತೆಗೆ ಕಾರಣ, ಬಹುಶಃ ವಾದ್ಯವನ್ನು ಕೈಗೂಡಿಸಿಕೊಂಡವನಿಗೆ ಯಾವ ಸಂಗೀತ ಪ್ರಕಾರವನ್ನೂ ಧ್ವನಿಸಲು ಸಾಧ್ಯವಿದೆ. ಮಾನವ ಕಂಠಧ್ವನಿಗೆ ಸಮೀಪವಾಗಿದೆ. ಸರಳವಾದ ಜಾನಪದದಿಂದ ಕ್ಲಿಷ್ಟವಾದ ಶಾಸ್ತ್ರೀಯ ಸಂಗೀತ ಸ್ವರಶಿಲ್ಪಗಳವರೆಗೂ ಯಾವುದನ್ನಾದರೂ ಲೀಲಾಜಾಲವಾಗಿ ನಿರೂಪಿಸಲು ಸಾಧ್ಯವಿದೆ. ಯೂರೋಪಿನಲ್ಲಿ ಕೆಲವೆಡೆ ಬಳಕೆಯಲ್ಲಿದ್ದ ಕಮಾನಿನಿಂದ ನುಡಿಸುವ ಫಿಡಲ್ ವಾದ್ಯವು ಕ್ರಮೇಣ ಪರಿಷ್ಕೃತವಾಗಿ ವಯೋಲಿನ್ ಆಕಾರಕ್ಕೆ ಬಂದಿತೆಂದು ಹೇಳಲಾಗಿದೆ. ಆದರೆ ಈ ಧನುರ್ವಾದ್ಯ ಅಥವಾ ಕಮಾನು ವಾದ್ಯಗಳ ಮೂಲ ಪೌರ್ವಾತ್ಯ ರಾಷ್ಟ್ರಗಳಲ್ಲಿ - ಅದರಲ್ಲಿಯೂ ಬಹುಶಃ ಭಾರತದಲ್ಲಿ. ಅಲ್ಲಿಂದ ಪರ್ಷಿಯ, ಅರೇಬಿಯಾ ಮುಂತಾದ ರಾಷ್ಟ್ರಗಳ ಮೂಲಕ ಪಶ್ಚಿಮಕ್ಕೆ ಹರಡಿ ಮುಂದೆ ಇಂದಿನ ಪರಿಷ್ಕೃತ ವಯೋಲಿನ್ ರೂಪಕ್ಕೆ ಬಂದಿತು ಎಂದು ಅನೇಕ ಪಂಡಿತರ ಅಭಿಪ್ರಾಯ. ಈ ಹಿನ್ನೆಲೆಯಿಂದ ಪಿಟೀಲು ವಾದ್ಯದ ವಿಕಾಸ ಮತ್ತು ಬೆಳವಣಿಗೆಯನ್ನು ವಿಚಾರ ಮಾಡಬೇಕಾಗಿದೆ.

ಬೇಟೆಗಾರನಿಗೆ ಬಿಲ್ಲು ಮುಖ್ಯವಾದ ಆಯುಧ. ಹಾಗೆಯೇ ಸಂಗೀತಗಾರನಿಗೆ ತಂಬೂರಿ ಬಹು ಅವಶ್ಯವಾದ ವಸ್ತು. ಇವೆರಡಕ್ಕೂ ಏನು ಸಂಬಂಧ? ಇದೆ. ತಂಬೂರಿಯೇ ಅಲ್ಲದ ನಮ್ಮ ಎಲ್ಲ ತಂತಿ ವಾದ್ಯಗಳ ಮೂಲವೇ ಬಿಲ್ಲು ಎಂದು ಮಾನವ ವಿಜ್ಞಾನ ಶಾಸ್ತ್ರಜ್ಞರು ಹೇಳುತ್ತಾರೆ. ಅದು ಬೇಟೆಯ ಬಿಲ್ಲಲ್ಲ. ಬೇರೆಯ ಬಿಲ್ಲು ಎಂದು ಇನ್ನು ಕೆಲವರ ಅಭಿಪ್ರಾಯ. ಆದರೆ ಮೂಲ - ಬಿಲ್ಲು ಎಂಬುದರಲ್ಲಿ ಅಭಿಪ್ರಾಯ ಭೇದವಿಲ್ಲ. ಬಿಲ್ಲನೇರಿಸಿ ಟಂಕಾರ ಏಗುರ್ವಡೆಯ ಎಂದು ಹಳೆಯ ಕನ್ನಡ ಕಾವ್ಯದಲ್ಲಿ ಬಿಲ್ಲಿನ ಹೆದೆಯನ್ನು ಮೀಟಿದಾಗ ಆಗುವ ಟಂಕಾರನಾದವನ್ನು ಪ್ರಸ್ತಾಪಿಸಿದೆ. ಈ ಮೂಲ ಟಂಕಾರವೇ ಆದಿಮಾನವನಿಗೆ ಬಿಲ್ಲಿನಲ್ಲಿ ನಾದೋತ್ಪತ್ತಿ ಮಾಡುವ ಸಾಧ್ಯಾಸಾಧ್ಯತೆಗಳ ತಿಳುವಳಿಕೆ ತಂದುದು. ಈ ಸಾಧ್ಯಾಸಾಧ್ಯತೆಗಳ ಬಗೆಗೆ ಚಿಂತಿಸಿ, ವಿಧವಿಧ ಪ್ರಯೋಗಗಳಿಂದ, ಅದಕ್ಕೆ ಅನುಗುಣವಾದ ಬದಲಾವಣೆಗಳನ್ನು ಮಾಡಿ ಮೂಲ ಬಿಲ್ಲಿನ ಹೊಸ ಅವತಾರ - ಅಂದರೆ ಸಂಗೀತ ವಾದ್ಯವಾಗಿ ಉಪಯೋಗಕ್ಕೆ ಬರಲು ಅನೇಕ ಶತಮಾನಗಳಾದುವು. ಇಂದು ನಾವು ಒಂದು ತಂಬೂರಿಯನ್ನೋ ಅಥವಾ ವೀಣೆಯನ್ನೋ ಉಪಯೋಗಿಸುವಾಗ, ಅವು ಇಂದಿನ ಆಕಾರ ತಾಳಿ ಕ್ರಿಯಾತ್ಮಕವಾಗಲು ಸಾವಿರಾರು ತಲೆಮಾರುಗಳ ಚಿಂತನೆ, ಶೋಧನೆ, ಪ್ರಯೋಗ, ಮುಂತಾದುವುಗಳ ಫಲ ಎಂಬುದನ್ನು ನೆನೆಯಬೇಕಾಗುತ್ತದೆ. ಮೂಲ ಬಿಲ್ಲು ಸಂಗೀತವಾದ್ಯವಾಗಿ, ಅದರ ನಾನಾ ಮಾದರಿಗಳು ಪ್ರಪಂಚದ ವಿವಿಧ ದೇಶಗಳಲ್ಲಿ ಪ್ರಚಾರದಲ್ಲಿವೆ. ಭಾರತ ಇದಕ್ಕೆ ಹೊರತೇನಲ್ಲ.

ತಂತಿವಾದ್ಯಗಳಲ್ಲಿ ನಾದೋತ್ಪತ್ತಿ ಮಾಡಲು ಮೂರು ವಿಧಾನಗಳನ್ನು ಅನುಸರಿಸಲಾಗುತ್ತಿದೆ.

(1) ಮೂಲ ಬಿಲ್ಲಿನಲ್ಲಿ ಹೆದೆಯನ್ನು ಬೆರಳಿನಲ್ಲಿ ಮೀಟಿ ಟಂಕಾರವನ್ನು ಹೊರಡಿಸಿದಂತೆ, ಇಲ್ಲಿಯೂ ತಂತಿಯನ್ನು ಮೀಟಿ ನಾದೋತ್ಪತ್ತಿ ಮಾಡುವುದು.

(2) ಕೋಣದ ಚರ್ಮ ಅಥವಾ ಮರದ್ದೋ ದಂತದ್ದೋ ಚಕ್ಕೆಯಿಂದ ತಂತಿಯನ್ನು ಮೀಟಿ ನಾದೋತ್ಪತ್ತಿ ಮಾಡುವುದು.

(3) ಕುದುರೆ ಜವೆಯನ್ನು ಕಟ್ಟಿದ ಧನುಸ್ಸು ಅಥವಾ ಕಮಾನಿನಿಂದ ತಂತಿಗಳನ್ನು ಸವರಿ ಅಥವಾ ಉಜ್ಜಿ ನಾದೋತ್ಪತ್ತಿ ಮಾಡುವುದು.

ಮೊದಲನೆಯ ವರ್ಗಕ್ಕೆ ಉದಾಹರಣೆ - ವೀಣೆ. ಎರಡನೆಯದಕ್ಕೆ ಸರೋದ್. ಮೂರನೆಯ ವರ್ಗದಲ್ಲಿಯೂ ನಾದೋತ್ಪತ್ತಿ ಮಾಡುವ ಎರಡು ವಿಧಾನಗಳಿವೆ. ಒಂದು : ಫಿಂಗರ್ ಬೋರ್ಡ್ ಅಥವಾ ದಂಡಿಯ ಮೇಲೆ ಬೆರಳುಗಳು ಮೇಲುಮುಖವಾಗಿ ಸಂಚರಿಸಿ ನಾದೋತ್ಪತ್ತಿ. ಇನ್ನೊಂದು ಕೆಳಮುಖನಾಗಿ ಸಂಚರಿಸಿ ನಾದವನ್ನು ಮೂಡಿಸುವುದು. ಮೊದಲನೆಯದಕ್ಕೆ ಉದಾಹರಣೆ - ಪಿಟೀಲು. ಎರಡನೆಯದಕ್ಕೆ - ಸಾರಂಗಿ.

ಈ ಬಗೆಯ ಕಮಾನು ವಾದ್ಯಗಳು ಪ್ರಪಂಚದ ನಾನಾ ದೇಶಗಳಲ್ಲಿ ಬಹುಕಾಲದಿಂದ ಪ್ರಚಾರದಲ್ಲಿವೆ. ನಿದರ್ಶನವಾಗಿ ಚೀನಾದ ನಾದೋತ್ಪತ್ತಿಯ ವಿಧಾನಗಳು ಎರಡೇ ಆದರೂ, ಆಕಾರಗಳಲ್ಲಿ ಭೇದವಿದೆ. ಹೆಸರುಗಳಲ್ಲಿಯೂ ಅಷ್ಟೇ. ಆಯಾ ದೇಶಗಳ, ಸಂಸ್ಕೃತಿಗೆ ಅನುಗುಣವಾಗಿ ಮೂಡಿದ ಸಂಗೀತದ ಕಲ್ಪನೆಗಳನ್ನು ನಿಖರವಾಗಿ ಧ್ವನಿಸುವ ದೃಷ್ಟಿಯಿಂದ ರಚಿತವಾದ ಈ ಕಮಾನು ವಾದ್ಯಗಳ ಆಕಾರದಲ್ಲಿಯೂ ಅಲ್ಲಲ್ಲಿನ ಅಭಿರುಚಿ ಮತ್ತು ಅವಶ್ಯಕತೆಗಳಿಗನುಸಾರವಾಗಿ ಭೇದವಿರುವುದು ಸಹಜವೇ. ಇವುಗಳಲ್ಲಿ ಒಂದೇ ತಂತಿಯಿಂದ ಹಿಡಿದು ಹತ್ತಿಪ್ಪತ್ತು ತಂತಿಗಳಿರುವ ವಾದ್ಯಗಳೂ ಇವೆ.

ಈ ಕಮಾನು ವಾದ್ಯಗಳು ಎಷ್ಟು ಕಾಲದಿಂದ ಬಳಕೆಯಲ್ಲಿವೆ? ಅವುಗಳಲ್ಲಿ ಬಹು ಪ್ರಾಚೀನವಾದುದು ಯಾವುದು? ಇದನ್ನು ಹೇಳುವುದು ಕಷ್ಟ. ಖಚಿತವಾದ ಆಧಾರಗಳಿಲ್ಲದೆ, ಊಹಾಪೋಹ ಮಾಡಬೇಕಾಗಿದೆ. ಹಳೆಯ ಕತೆಗಳನ್ನು ಅವಲಂಬಿಸಬೇಕಾಗಿದೆ. ಒಂದು ಊಹೆಯ ಪ್ರಕಾರ ಸ್ಪೇನ್ ದೇಶವನ್ನು ಜಯಿಸಿದ ಮಹಮ್ಮದೀಯ ಮೂರ್ ಜನಾಂಗದವರು ತಮ್ಮೊಡನೆ ಅರಬ್ಬಿ ದೇಶದ ರೆಬೆಕ್ - ಕಮಾನಿನಿಂದ ನುಡಿಸುವ ವಾದ್ಯವನ್ನು ತೆಗೆದುಕೊಂಡು ಬಂದರೆಂದೂ ತಮ್ಮ ಆಳ್ವಿಕೆಯ ಕಾಲದಲ್ಲಿ ಅದನ್ನು ಪರಿಷ್ಕರಿಸಿ ಆ ಹೊಸ ರೂಪದ ವಾದ್ಯಕ್ಕೆ ವಿಯೆಲ್ ಎಂದು ಕರೆದರೆಂದೂ, ಮುಂದೆ ಅದು ರೂಪಾಂತರಗೊಂಡು ವಯೊಲಿನ್ ವಾದ್ಯವಾಯಿತೆಂದೂ ಹೇಳಲಾಗಿದೆ. ಇದು ನಡೆದುದು ಸುಮಾರು ಒಂಬತ್ತನೆಯ ಶತಮಾನದಲ್ಲಿ. ಇನ್ನೊಂದು ಅಭಿಪ್ರಾಯದಂತೆ ಯೂರೋಪಿನ ಜಾನಪದದಲ್ಲಿ ಪ್ರಚಾರದಲ್ಲಿದ್ದ- ಕ್ರೌತ್- ಎಂಬ ಏಕತಾರಿ ವಾದ್ಯ ಫಿಡಲ್ ವಾದ್ಯದ ಮೂಲ. ಫಿಡಲ್ ಮುಂದೆ ಪರಿಷ್ಕೃತವಾಗಿ ವಯೋಲಿನ್ ವಾದ್ಯವಾಗಿ ರೂಪುಗೊಂಡಿತು ಎಂದು. ಆದರೆ ಇವೆಲ್ಲಕ್ಕಿಂತ ಮಿಗಿಲಾಗಿ ಪ್ರಚಾರದಲ್ಲಿರುವ ನಂಬಿಕೆಯ ಪ್ರಕಾರ- ಪಿಟೀಲು ರೀತಿಯ ಕಮಾನು ವಾದ್ಯಗಳ ಮೂಲ- ರಾವಣಾಸ್ತ್ರ. ಲಂಕಾರಾಜ್ಯದ ಅರಸನಾದ ರಾವಣನ ಹೆಸರನ್ನು ತಾಳಿರುವುದು. 'ಇದು ಮುಂದೆ ಅರಬ್ಬಿ ದೇಶದ ರೆಬೆಕ್ ವಾದ್ಯಕ್ಕೆ ಪ್ರಚೋದನೆಯಾಯಿತು. ರೆಬೆಕ್ ಮುಂದೆ ಯೂರೋಪಿನಲ್ಲಿ ಇದೇ ರೀತಿಯ ವಾದ್ಯಗಳ ರಚನೆಗೆ ಸ್ಫೂರ್ತಿದಾಯಕವಾಯಿತು.' ಈ ನಂಬಿಕೆ ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಸಂಗೀತವಲಯಗಳಲ್ಲಿ ಸಾರ್ವತ್ರಿಕವಾಗಿ ಹರಡಿದೆ.

ಭಾರತದಲ್ಲಿಯೇ ವಯೋಲಿನ್ ರೀತಿಯ ವಾದ್ಯಗಳು ಎಷ್ಟು ಕಾಲದಿಂದ ಬಳಕೆಯಲ್ಲಿವೆ? ಖಚಿತವಾಗಿ ಹೇಳುವುದು ಕಷ್ಟ. ಹಳೆಯ ಕಾವ್ಯ ಮತ್ತು ಲಕ್ಷಣ ಗ್ರಂಥಗಳಲ್ಲಿ ಇಂತಹ ವಾದ್ಯ ವರ್ಣನೆಗಳು ಕಂಡುಬರುವುದು ಸುಮಾರು 10-11ನೇ ಶತಮಾನದಲ್ಲಿ. ಹಾಗೆಯೇ ಕೆಲವು ದೇವಾಲಯ ಶಿಲ್ಪಗಳಲ್ಲಿಯೂ ಸಂಗೀತಗೋಷ್ಠಿಯ ದೃಶ್ಯಗಳಲ್ಲಿ ಈ ಬಗೆಯ ವಾದ್ಯಗಳು ಕಂಡುಬರುತ್ತವೆ. ಆದರೆ ಅದೆಲ್ಲವೂ ಧನುರ್ವಾದ್ಯಗಳಲ್ಲ. ಅವುಗಳಲ್ಲಿ ಕೆಲವು ಶುಕ್ತಿ ಅಂದರೆ ತಾಳವಾದ್ಯ ಪ್ರಾಕಾರಕ್ಕೆ ಸೇರಿದವು. ಧನುರ್ವಾದ್ಯವೇ ಎಂದು ಖಚಿತವಾಗಿ ಹೇಳಬಹುದಾದವುಗಳಲ್ಲಿ ಮೈಸೂರು ಜಿಲ್ಲೆಯ ತಿರುಮಕೂಡಲಿನಲ್ಲಿ ಇರುವ ಅಗಸ್ತೇಶ್ವರ

ದೇವಾಲಯದಲ್ಲಿರುವ ಶಿಲ್ಪವನ್ನು ಹೇಳಬಹುದು. ಇದು 10-11ನೇ ಶತಮಾನದ್ದೆಂದು ಅಭಿಪ್ರಾಯಪಡಲಾಗಿದೆ. ಅದರಂತೆ ಆಂಧ್ರದ ವಿಜಯವಾಡದ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಲ್ಲಿದ್ದ ಇಂತಹುದೇ ಒಂದು ಶಿಲ್ಪವನ್ನು ನೆನೆಯಬಹುದು. ಇದೂ 11-12ನೇ ಶತಮಾನದ್ದೆಂದು ಭಾವಿಸಲಾಗಿದೆ. ಮೂರನೆಯದು ಚಿದಂಬರದ ನಟರಾಜ ದೇವಾಲಯದಲ್ಲಿರುವ ಒಂದು ಫಲಕ ಅದರಲ್ಲಿ ಒಂದು ಮೂರ್ತಿ ಈ ಬಗೆಯ ವಾದ್ಯವನ್ನು ನುಡಿಸುತ್ತಿದೆ. ವಿಶೇಷವೆಂದರೆ ವಾದ್ಯವು ನಮ್ಮ ಇಂದಿನ ಫಿಡಲ್‌ಗಳನ್ನು ಹೋಲುವಂತಿದೆ.

ವಿದ್ವಾಂಸರು ಹೇಳುವಂತೆ ರಾವಣಾಸ್ತ್ರ ಅಥವಾ ರಾವಣ ಹಸ್ತಕ್ಕೆ ಸಾವಿರಾರು ವರ್ಷಗಳ ಹಿನ್ನೆಲೆ ಇರಬಹುದು. ಇದರ ಬಗೆಗೆ ಭಾರತ ಮತ್ತು ಶ್ರೀಲಂಕಾದಲ್ಲಿ ಪರಂಪರಾನುಗತ ಕತೆಗಳೇ ಇವೆ. ಅದರಂತೆ ರಾವಣನು ತನ್ನ ಸಾಮಗಾನಕ್ಕೆ ಹಿನ್ನೆಲೆಯಾಗಿ ನಿರ್ಮಿಸಿಕೊಂಡ ವಾದ್ಯ-ರಾವಣಹಸ್ತ. ತನ್ನ ತಲೆಯೊಂದನ್ನು ಕಿತ್ತು ಆ ಬುರುಡೆಗೆ ಒಂದು ಬೊಂಬಿನ ತುಂಡನ್ನು ಸಿಕ್ಕಿಸಿ ತನ್ನ ತೋಳಿನಿಂದ ನರವೊಂದನ್ನು ಕಿತ್ತು ತಂತಿ ಮಾಡಿ ಬಿಗಿದು ಧನುಸ್ಸಿನಿಂದ ಮೀಟಿ ನಾದೋತ್ಪತ್ತಿ ಮಾಡಿ ಸಾಮಗಾನ ಮಾಡುತ್ತಿದ್ದನೆಂದು ಕತೆ. ಮೂಲತಃ ಶ್ರೀಲಂಕಾದಲ್ಲಿ ಹುಟ್ಟಿಬಂದುದೆಂಬ ಅಭಿಪ್ರಾಯವಿದ್ದರೂ, ರಾವಣ ಹಸ್ತವು ಭಾರತದಲ್ಲಿ, ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ಸಾವಿರಾರು ವರ್ಷಗಳಿಂದ ಪ್ರಚಾರದಲ್ಲಿದ್ದಂತೆ ಕಾಣಬಹುದು.

ಕರ್ನಾಟಕದಲ್ಲಿಯೂ ರಾವಣ ಹಸ್ತವು ಜನಪ್ರಿಯ ವಾದ್ಯವಾಗಿದ್ದಂತೆ ಕಾಣಬಹುದು. ಈ ವಾದ್ಯದ ಅತಿ ಪ್ರಾಚೀನ ಉಲ್ಲೇಖ - ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ಅಥವಾ ಪಂಪ ರಾಮಾಯಣದಲ್ಲಿ ಕಂಡುಬರುವುದು. ಅನಂತರದ ಅನೇಕ ಕಾವ್ಯಗಳಲ್ಲಿ ರಾವಣ ವೀಣೆ ಮತ್ತು ರಾವಣಹಸ್ತದ ಪ್ರಸ್ತಾಪ ಬರುತ್ತದೆ. ಪಂಪ ರಾಮಾಯಣ ಸುಮಾರು ಕ್ರಿ.ಶ. 1100ರಲ್ಲಿ ರಚಿತವಾದುದು. ಹಾಗೆಯೇ, ಪದ್ಮರಾಜ ಪುರಾಣ, ಬಸವ ಪುರಾಣ, ಮೋಹನ ತರಂಗಿಣಿ ಮುಂತಾದ ಕಾವ್ಯಗಳಲ್ಲಿಯೂ ರಾವಣಹಸ್ತದ ಉಲ್ಲೇಖಗಳಿವೆ. ಆದೃಶ್ಯ ಕವಿಯ ಪ್ರೌಢರಾಯ ಕಾವ್ಯದಲ್ಲಿ ರಾವಣಹಸ್ತ ಹುಟ್ಟಬಂದ ಸಂದರ್ಭದ ಕತೆಯೂ ಇದೆ. ನಾಲ್ಕನೆಯ ಆಶ್ವಾಸದಲ್ಲಿ ಅತ್ತೊಂದು ಕುಜದಲ್ಲಿ ಕೋತಿಯು ಪ್ರಸೂದದಿಂ ... ಎಂದು ಪ್ರಾರಂಭವಾಗುವ ಪದ್ಯದಲ್ಲಿ ಕತೆ ಈ ರೀತಿ ಇದೆ.

ಕೋತಿಯೊಂದಕ್ಕೆ ಹೆರಿಗೆಯ ಸಮಯ. ಒಂದು ಗಿಡದಿಂದ ಮತ್ತೊಂದಕ್ಕೆ ಹಾರುತ್ತದೆ. ಮಧ್ಯೆ ಪ್ರಸವವಾಗಿ ಆ ಮಾಂಸವು ಗಿಡದಲ್ಲಿ ಸಿಕ್ಕಿಕೊಳ್ಳುತ್ತದೆ. ಒಣಗಿಹೋಗುತ್ತದೆ. ಒಣಗಿ ಗಟ್ಟಿಯಾದನಂತರ ಗಾಳಿ ಬೀಸಿದಾಗ ಈ ಒಣಗಿದ ಎಳೆಯಿಂದ ಝೇಂಕಾರ ಮೂಡಿಬರುತ್ತದೆ. ಆ ತುಂಬುನಾದಕ್ಕೆ ಮನಸೋತು, ಶಿವ ನಾಟ್ಯವಾಡಲಾರಂಭಿಸುತ್ತಾನೆ. ಅದೇ ಸಮಯಕ್ಕೆ ಬಂದ ರಾವಣ, ತನ್ನ ಕೈಯನ್ನು ನೀಡಿ, ಒಂದು ತಲೆಯನ್ನು ಕಡಿದು ಬುರುಡೆ ಮಾಡಿ ನರಗಳನ್ನೇ ತಂತಿ ಮಾಡಿ ನುಡಿಸಿ ಸಪ್ತಸ್ವರಗಳನ್ನು ಹಿಡಿದು ಸಂಗೀತವನ್ನು ಮೂಡಿಸುತ್ತಿದ್ದ. ಮುಂದೆ ಪ್ರಪಂಚದಲ್ಲಿ ಅದು ರಾವಣಹಸ್ತವೆಂದು ಹೆಸರುಗೊಂಡಿತು.

ಸಂಗೀತ ಶಾಸ್ತ್ರ ಗ್ರಂಥಗಳಲ್ಲಿಯೂ ರಾವಣಹಸ್ತದ ಪ್ರಸ್ತಾಪವಿದೆ. ತಂತಿವಾದ್ಯಗಳನ್ನೆಲ್ಲಾ ಒಟ್ಟು ವೀಣೆ ಎಂದು ಕರೆಯುವುದರಿಂದ ಕೆಲವು ಗ್ರಂಥಗಳಲ್ಲಿ ರಾವಣ ವೀಣೆ ಎಂದೂ ಕೆಲವದರಲ್ಲಿ ರಾವಣಹಸ್ತವೆಂದೂ ಪ್ರಸ್ತಾಪಿಸಲಾಗಿದೆ. ಇನ್ನು ಕೆಲವದರಲ್ಲಿ ಧನುಸ್ಸು ಅಥವಾ ಕಮಾನಿನ (ಬಿಲ್ಲು) ಮೂಲಕ ನಾದೋತ್ಪತ್ತಿಯಾಗುವುದರಿಂದ ಧನುರ್ವೀಣೆ ಎಂದು ಕರೆಯಲಾಗುತ್ತಿತ್ತು. 16-17ನೇ ಶತಮಾನಗಳ ವೇಳೆಗೆ ಸಂಗೀತ ಕ್ಷೇತ್ರದಿಂದ ರಾವಣಹಸ್ತವು ಮರೆಯಾದಂತೆ ಕಾಣಬರುತ್ತದೆ. ಇದಕ್ಕೆ ನಾನಾ ಕಾರಣಗಳಿರಬಹುದು. ಆದರಲ್ಲಿ ಮುಖ್ಯವಾದುದು - ಸಂಗೀತದಲ್ಲಿ ಆದ ತೀವ್ರ ಬೆಳವಣಿಗೆ. ಅನೇಕ ನೂತನ ರಾಗಗಳೂ, ಕ್ಲಿಷ್ಟವಾದ ರಚನೆಗಳೂ, ತಾಳವಿಧಾನಗಳೂ ನಿರ್ಮಿತವಾಗಿ ಬಳಕೆಗೆ ಬಂದುವು. ಆದರೆ ಅವುಗಳು ರಾವಣಹಸ್ತದ ಸಾಮರ್ಥ್ಯಕ್ಕೆ ಮೀರಿದಂತಹವು. ಆದಕಾರಣ ಅದು ಕ್ರಮೇಣ ಮರೆಯಾದುದು ಸಹಜವೇ. ಶಾಸ್ತ್ರೀಯ ಸಂಗೀತದಿಂದ ಮರೆಯಾದರೂ, ಜಾನಪದದಲ್ಲಿ ಸೇರಿ ಉಳಿದುಕೊಂಡು ಬಂದಿತು. ಅಲ್ಲಿನ ಸೌಕರ್ಯಕ್ಕನುಗುಣವಾಗಿ ಅದರಲ್ಲಿ ಕೆಲವು ಮಾರ್ಪಾಡುಗಳೂ ಆದವು. ಈಗ ಅದು ಬಹುತೇಕ ರಾಜಾಸ್ತಾನದಲ್ಲಿ ಬಳಕೆಯಲ್ಲಿದೆ ಮತ್ತು ಒಂದು ಧಾರ್ಮಿಕ ವಿಧಿಗೆ ಸಂಬಂಧಿಸಿದೆ; ಪಾಬೂಜಿ ರಾಜಾಸ್ತಾನದ ಇತಿಹಾಸದಲ್ಲಿ, ನಮ್ಮ ಕುಮಾರರಾಮನಿದ್ದ ಹಾಗೆ, ಒಬ್ಬ ಕಥಾಪುರುಷ. ಆತನ ಜೀವಿತವನ್ನು ಚಿತ್ರಿಸಿರುವ ಒಂದು ದೊಡ್ಡ ಪಟವನ್ನು ಇಟ್ಟುಕೊಂಡು ಆರಾಧನೆ ನಡೆಸುತ್ತಾರೆ. ಆ ಸಂದರ್ಭದಲ್ಲಿ ರಾವಣಹಸ್ತವನ್ನು ಬೋಪಾ ಬುಡಕಟ್ಟಿನವರು ನುಡಿಸುತ್ತ ಆತನ ವೀರಗಾಥೆಯನ್ನು ಹೇಳುವರು.

ಇಂದಿನ ರಾವಣಹಸ್ತ ವಾದ್ಯಕ್ಕೂ ಹಿಂದಿನ ರಾವಣಹಸ್ತಕ್ಕೂ ವ್ಯತ್ಯಾಸವಿದೆ. ಹಿಂದಿನ ರಾವಣ ಹಸ್ತವು ನಮ್ಮಲ್ಲಿ ಮಾರಾಟಕ್ಕೆ ಬರುವ ಸರಳ ಜಾನಪದ ಫಿಡಲ್‌ಗಳಂತೆ ಇದ್ದಿತು. ಅಂದರೆ, ತೆಂಗಿನ ಅರ್ಧ ಗೋಳಾಕಾರದ ಚಿಪ್ಪು, ಅದರ ಬಾಯನ್ನು ಚರ್ಮದಿಂದ ಮುಚ್ಚಿ, ಅದರ ಪಕ್ಕದಿಂದ ಒಳಕ್ಕೆ ಒಂದು ತೆಳು ಬಿದಿರು ತುಂಡನ್ನು ಸಿಕ್ಕಿಸಿ, ಮೇಲೆ ನರಗಳ ಒಂದು ಅಥವಾ ಎರಡು ತಂತಿಗಳನ್ನು ಈ ದಂಡಿಯಮೇಲೆ ಹಾಯಿಸಿ ಬಿರಡೆಗಳಿಗೆ ಬಿಗಿದು, ಚಿಕ್ಕ ಬಿಲ್ಲಿನಂತಿರುವ ಕಮಾನಿನಿಂದ ಸವರಿ ನಾದೋತ್ಪತ್ತಿ ಮಾಡುವುದು. ಆದರೆ ಈಗ ರಾಜಾಸ್ತಾನದಲ್ಲಿ ಬಳಕೆಯಲ್ಲಿರುವ ರಾವಣಹಸ್ತದಲ್ಲಿ, ಚರ್ಮದಿಂದ ಮುಚ್ಚಿದ ತೆಂಗಿನ ಚಿಪ್ಪಿನ ಬುರುಡೆ, ಅದರೊಳಕ್ಕೆ ತೂರಿಸಿದ ಸ್ವಲ್ಪ ದಪ್ಪನಾದ ಬಿದಿರು ದಂಡಿ ಇರುತ್ತದೆ. ರಾಗವನ್ನು ನುಡಿಸಲು ಎರಡು ತಂತಿಗಳು- ಒಂದು ಕೂದಲಿನದು. ಎರಡನೆಯದು ಉಕ್ಕಿನದು. ಪ್ರತಿಧ್ವನಿಗೆ 8-10 ಪ್ರತ್ಯೇಕ ತಂತಿಗಳನ್ನು ಬಿಗಿದಿರುತ್ತಾರೆ. ನುಡಿಸುವ ವಿಧಾನ ವಿಚಿತ್ರ. ಇತರ ಕಮಾನು ವಾದ್ಯಗಳನ್ನು ಮುಮ್ಮುಖವಾಗಿ ಅಂದರೆ ಕೇಳುವವರ ಕಡೆಗೆ ತಿರುಗಿಸಿಕೊಂಡು ನುಡಿಸುವರು. ಆದರೆ ರಾವಣಹಸ್ತ ನುಡಿಸುವ ಕ್ರಮ ಇದಕ್ಕೆ ವಿರುದ್ಧ. ವಾದ್ಯದ ಬುರುಡೆಯನ್ನು ಹೊಟ್ಟೆಗೆ ಅಪ್ಪಿಕೊಂಡು, ದಂಡಿಯನ್ನು ಮೇಲಕ್ಕೆತ್ತಿ, ವಾದಕನ ಕಡೆಗೆ ತಂದ ಕಮಾನಿನಿಂದ ನುಡಿಸುತ್ತಾರೆ.

ಜಾನಪದ ಪ್ರಕಾರ

ಈ ಧನುರ್ವೀಣಾ ಕುಟುಂಬದಲ್ಲಿ ರಾವಣಹಸ್ತವೇ ಅಲ್ಲದೆ ಬೇರೆ ಪ್ರಕಾರಗಳೂ ಶಾಸ್ತ್ರಗ್ರಂಥಗಳಲ್ಲಿ ವಿವರಿಸಲ್ಪಟ್ಟಿವೆ - ಪಿನಾಕ ವೀಣೆ, ಸಾರಂಗವೀಣೆ ಇತ್ಯಾದಿ. ಇವು ಬಹುತೇಕ ಕೆಳಮುಖನಾಗಿ ಬೆರಳಾಡಿಸಿ ನಾದೋತ್ಪತ್ತಿ ಮಾಡುವಂತಹವೂ - ಸಾರಂಗಿಯ ಹಾಗೆ. ಇದಲ್ಲದೆ ಯಾವ ಕಾವ್ಯ, ಶಾಸ್ತ್ರ ಗ್ರಂಥಗಳಲ್ಲಿಯು ವರ್ಣನೆಗಳಿಗೆ ಬಂದ ಅನೇಕ ರೀತಿಯ ಧನುರ್ವಾದ್ಯಗಳು ಅನೇಕವು ಜಾನಪದ ಪ್ರಕಾರದಲ್ಲಿವೆ. ಬಳಕೆಯಲ್ಲಿಯೂ ಇವೆ. ಭಾರತದಲ್ಲಿ ರಾವಣಹಸ್ತವೇ ಅಲ್ಲದೆ - ಮಣ್ಣಿನ ಬುರುಡೆಯುಳ್ಳ ಚಿಕಾರ, ತೆಂಗಿನಕಾಯಿ ಕರಟದ ಬುರುಡೆಯ ಕೋಕಾ ಚಿಕಾರ ಆಮೆ ಚಿಪ್ಪಿನ ಬುರುಡೆಯ ಕೆಂಡ್ರಾ, ಮರದ ಬುರುಡೆಯ ತುಯಿಲಾ, ಬಾಣಂ, ಪುಲ್ಲವನ್ ವೀಣೆ ಮುಂತಾದುವುಗಳು ಹಳ್ಳಿಗಳಲ್ಲಿ ಗುಡ್ಡಗಾಡುಗಳಲ್ಲಿ ಇಂದೂ ಬಳಕೆಯಲ್ಲಿವೆ. ಇವುಗಳಲ್ಲಿ ಪೇನಾವಾದ್ಯ ಮಣಿಪುರದಲ್ಲಿ ಬಳಕೆಯಲ್ಲಿದೆ. ಇದರದೂ ತೆಂಗಿನ ಚಿಪ್ಪಿನ ಬುರುಡೆ. ಅದರಲ್ಲಿ ಬೊಂಬಿನ ತುಂಡು ಹುದುಗಿಸಿರುವರು. ಎಲ್ಲಕ್ಕೂ ಮೆರುಗೆಣ್ಣೆ (Lacquer) ಹಚ್ಚಿ ಕಪ್ಪಾಗಿರುತ್ತದೆ; ಒಂದೇ ತಂತಿ ಕೂದಲಿನದು ನುಡಿಸುವ ಕಮಾನು ವಿಶೇಷ ರೀತಿಯದು. ಬಾಗಿದ ಉದ್ದ ಕಬ್ಬಿಣದ ಸಲಾಕಿಗೆ ಮರದ ಹಿಡಿ. ಎರಡೂ ಕೊನೆಗಳಿಗೂ ಸೇರಿದಂತೆ ಕೂದಲುಗಳನ್ನು ಬಿಗಿದಿರುತ್ತಾರೆ. ಬಾಗಿದ ಸಾಲಕಿಗೆ ಸಣ್ಣ ಗೆಜ್ಜೆಗಳನ್ನು ಕಟ್ಟಿರುತ್ತಾರೆ. ಇದು ಬಹುಶಃ ಮಣಿಪುರಕ್ಕೆ ಹಿಂದೂ ಧರ್ಮದ ಪ್ರವೇಶಕ್ಕೆ ಮುಂಚಿನಿಂದಲೂ ಬಳಕೆಯಲ್ಲಿದೆ ಎನ್ನಬಹುದು. ಇದನ್ನು ಅವರ ಮೈತಿ ಬುಡಕಟ್ಟಿನ ಪೂರ್ವಜರ ವೀರಗಾಥೆಗಳನ್ನು ಹಾಡುವಾಗ ನುಡಿಸುವರು. ಅದೂ ಒಂದು ಧಾರ್ಮಿಕ ವಿಧಿ. ಕಚ್ಚೆಪಂಚೆ, ತಲೆಗೆ ರುಮಾಲು ಧರಿಸಿ ನಾಲ್ಕಾರು ವಾದಕರು ಒಟ್ಟಾಗಿ ಹಾಡುತ್ತಾ ಕುಣಿಯುತ್ತಾ ಮೈತಿ ಜನಾಂಗದ ವೀರಖಂಬ ಮತ್ತು ನಾಯಕಿ ತೊಯ್ಬಿ ಅದರ ಕತೆಯನ್ನು ನಿರೂಪಿಸುವರು.

16- 17 ಶತಮಾನದ ವೇಳೆಗೆ ರಾವಣಹಸ್ತದ ಪ್ರಸ್ತಾಪ ನಿಂತುಹೋಯಿತು ಎಂದು ಹೇಳಲಾಗಿದೆ. ಆದರೆ ಈ ಧನುರ್ವಾದ್ಯಗಳೇನೂ ಮಾಯವಾಗಿರಲಿಲ್ಲ ಸಾರಂಗಿ, ರೆಬೆಕ್ ವಾದ್ಯಗಳು ಬಳಕೆಯಲ್ಲಿದ್ದುವು. ಆದರೆ ಪಿಟೀಲಿನಂತೆ ಮೇಲುಗಡೆ ಕಮಾನಿನಿಂದ ನುಡಿಸುವ ರೀತಿಯ ವಾದ್ಯಗಳಿರಲಿಲ್ಲ. ಇದ್ದರೆ ಜಾನಪದದಲ್ಲಿ ಇದ್ದುವು. ಈ ಸಂದರ್ಭದಲ್ಲಿಯೇ ಪಶ್ಚಿಮದಿಂದ ಭಾರತಕ್ಕೆ ಪಿಟೀಲಿನ ಪ್ರವೇಶವಾದುದು.

ಹಿಂದೆಯೇ ಹೇಳಿದಂತೆ ಯೂರೋಪಿನಲ್ಲಿ ಕ್ರೌತ್ ಎಂಬ ಕಮಾನಿನಿಂದ ನುಡಿಸುವ ವಾದ್ಯವೇ ಪಿಟೀಲಿನ ಪೂರ್ವಜ ಎಂಬ ಭಾವನೆಯಿದೆ. ಅದು ಒಂದು ಜಾನಪದ ರೀತಿಯ ವಾದ್ಯ ಇನ್ನೊಂದು ಅಭಿಪ್ರಾಯದಂತೆ ಪಿಟೀಲಿನ ವಿಕಾಸದಲ್ಲಿ ಪ್ರಥಮ ಹಂತ ಟ್ರೋಬಾಮ್ಯಾರಿನ. ಒಂದೇ ತಂತಿ, ಕಮಾನಿನಿಂದ ನುಡಿಸುವುದು, ಉದ್ದವಾದ ಆಕಾರ. ಮುಂದಿನ ಘಟ್ಟ ವೆಯಿಲ್ ಹಾಗೂ ಫಿಡ್ಲ್. ಜನಸಾಮಾನ್ಯರು ಬಳಸುತ್ತಿದ್ದ ಕಮಾನಿನ ವಾದ್ಯಗಳು. ಇವುಗಳ ಜೊತೆಗೆ ರೆಬೆಕ್ ವಾದ್ಯವೂ ಉಪಯೋಗದಲ್ಲಿತ್ತು. ದುಂಡು ಅಂಚುಗಳಿಂದ ಕೂಡಿ ಸೌತೆ ಅಥವಾ ಸೋರೆಕಾಯಿ ರೀತಿಯ ಆಧಾರ ಉಳ್ಳ ಈ ವಾದ್ಯಗಳು ಕ್ರಮೇಣ ಪರಿಷ್ಕೃತಗೊಂಡ ಸುಮಾರು

1500ರ ವೇಳೆಗೆ ಮಧ್ಯೆ ನಡುವಿನಂತಹ ತಿರುವು ಬಂದ 'ಲೈರಾಡಿ ಬ್ರಾಸಿಯೋ' ರೂಪಕ್ಕೆ ತಿರುಗಿತು. ಅದರ ಆಕಾರ ಇಂದಿನ ವಯೋಲಿನ್‌ನಂತೆಯೇ. ಅದಕ್ಕಿಂತ ದೊಡ್ಡ ಸೈಜು. ತಂತಿಗಳು - ಇದರಲ್ಲಿ ಐದು ಕುದುರೆಯ ಮೇಲೆ ಹಾಯ್ದು ನುಡಿಸುವುದಕ್ಕೆ. ಎರಡು ಕುದುರೆಯಿಂದ ಕೆಳಗೆ ಪಕ್ಕದಲ್ಲಿ - ಶ್ರುತಿಗೆ. ಕೆಲವದರಲ್ಲಿ ಮೆಟ್ಟಿಲುಗಳಿದ್ದವು. ಇದು ಕೈಮೇಲಿಟ್ಟು ಕತ್ತಿಗೆ ಒತ್ತಿಕೊಂಡು ಕಮಾನಿನಿಂದ ನುಡಿಸುವಂತಹುದು. ಇದರಲ್ಲಿ ಇನ್ನೂ ದೊಡ್ಡ ಪ್ರಮಾಣದ್ದು, ತಲೆಕೆಳಗಾಗಿ ನಿಲ್ಲಿಸಿಕೊಂಡು ನುಡಿಸುವಂತಹ ಲೈರಾಡಿ ಗ್ಯಾಂಬಾ ಕೂಡ ರಚಿತವಾಗಿ ಬಳಕೆಗೆ ಬಂದಿತು. ಇದರಲ್ಲಿ 9 ರಿಂದ 15ರವರೆಗೆ ನುಡಿಸುವ ತಂತಿಗೂ ಎರಡೂ ಶ್ರುತಿ ತಂತಿಗಳೂ ಇರುತ್ತಿದ್ದುವು. ಇದರ ಮುಂದಿನ ಘಟ್ಟ ವಯೊಲಿನ್. ಸುಮಾರು 1550ರ ವೇಳೆಗೆ ರಚಿತವಾಗಿ ಕ್ಷೇತ್ರಕ್ಕೆ ಪ್ರವೇಶ ಮಾಡಿತು. ಈ ಆಕಾರದಲ್ಲಿ ಎಲ್ಲಿ ಮೊದಲು ರಚಿತವಾಯಿತು? ಹೇಳುವುದು ಕಷ್ಟ. ಯೂರೋಪಿನ ನಾನಾ ರಾಜ್ಯಗಳಲ್ಲಿ ವಾದ್ಯ ನಿರ್ಮಾಪಕರು ಪ್ರಯತ್ನ ಮಾಡುತ್ತಿದ್ದರು. ಪ್ರಯೋಗಗಳನ್ನು ನಡೆಸುತ್ತಿದ್ದರು. ಇದರ ಫಲವಾಗಿ ಬಂದುದು- ಇಂದು ನಾವು ನೋಡುತ್ತಿರುವ ಹಾಗೂ ಉಪಯೋಗಿಸುತ್ತಿರುವ ವಯೊಲಿನ್. ಮುಂದೆ ಧ್ವನಿಪ್ರಮಾಣವನ್ನು ಆಧರಿಸಿ ಅದರ ಪ್ರಭೇದಗಳಾದ ವಯೋಲ, ವಯೋಲಿನ್ ಚೆಲ್ಲೊ, ಡಬಲ್ ಬೇಸ್ ರಚಿತವಾದವು.

ಕ್ರಾಂತಿ ಪುರುಷರು

ಈ ವಾದ್ಯದ ಪರ್ವಕಾಲ ಬಂದುದು 16- 17ನೇ ಶತಮಾನಗಳಲ್ಲಿ. ಇಟಲಿಯ ಕ್ರೆಮೋನ ಪಟ್ಟಣದಲ್ಲಿದ್ದ ವಾದ್ಯ ನಿರ್ಮಾಪಕರ ಸತತ ಪ್ರಯೋಗ ಹಾಗೂ ಜಾಣ್ಮೆಯ ಫಲವಾಗಿ ತಯಾರಾದ ಈ ವಯೋಲಿನ್ ಕುಟುಂಬದ ವಾದ್ಯಗಳು ಜಗತ್ ಪ್ರಸಿದ್ಧವಾದವು. ಅಮೇತಿ ಕುಟುಂಬದ ಅಂದ್ರೆ ಅಮೇತಿ, ಅವನ ಮಗ ನಿಕೋಲೋ ಅಮೇತಿ, ಅವನ ಶಿಷ್ಯರಾದ ಆಂಟೋನಿಯೋ ಸ್ಟ್ರಾಡಿವೇರಿ, ಅಂದ್ರೆ ಗ್ವಾರ್‌ನೇರಿ ಅವರು ಈ ಕ್ಷೇತ್ರದಲ್ಲಿ ಕ್ರಾಂತಿಪುರುಷರೆಂದು ಮಾನಿತರಾಗಿದ್ದಾರೆ. ಅದರಲ್ಲಿಯೂ ಸ್ಟ್ರಾಡಿವೇರಿ ಹೆಸರು ಇತಿಹಾಸದ ಹಾಳೆಗಳಲ್ಲಿ ಸುವರ್ಣಾಕ್ಷರಗಳಲ್ಲಿ ಲಿಖಿತವಾಗಿದೆ. ಆತನು ತಯಾರಿಸಿದ ವಾದ್ಯಗಳು ಆಕಾರದಲ್ಲಿ, ಗುಣದಲ್ಲಿ ನಾದಮಾಧುರ್ಯದಲ್ಲಿ ಅತ್ಯಂತ ಶ್ರೇಷ್ಠವೆನಿಸಿ ಜಗತ್ತಿನ ಇನ್ನಾವ ನಿರ್ಮಾಪಕ ವಾದ್ಯಗಳೂ ಅವಕ್ಕೆ ಸರಿಗಟ್ಟಲಾರವೆಂಬ ಭಾವನೆಯಿದೆ. ತನ್ನ 92 ವರುಷ ಜೀವನದಲ್ಲಿ ಒಂದು ಸಾವಿರಕ್ಕೂ ಹೆಚ್ಚಾಗಿ ವಯೊಲಿನ್, ವಯೋಲ, ಚೆಲ್ಲೊ, ಗಿಟಾರ್, ಮ್ಯಾಂಡೊಲಿನ್ ಮುಂತಾದ ವಾದ್ಯಗಳನ್ನು ತಯಾರಿಸಿದ. ಎಲ್ಲವನ್ನೂ ತಾನೇ ಸ್ವಂತ ಕೈಯಿಂದ ತಯಾರಿಸಿದುದು. ಸ್ಟ್ರಾಡಿವೇರಿ ತಯಾರಿಸಿದ ಆ ಹಳೆಯ ವಾದ್ಯಗಳಿಗೆ ಇಂದು ಆಕಾಶದೆತ್ತರದ ಬೆಲೆ. ಹಳೆಯ ಸ್ಟ್ರಾಡಿವೇರಿ ವಯೊಲಿನ್ ಒಂದು ಹರಾಜಿನಲ್ಲಿ ಮಾರಾಟವಾದ ಬೆಲೆ 12 ಲಕ್ಷ ಡಾಲರ್. ಅಂದಿನ ರೂಪಾಯಿ ರೀತ್ಯಾ ಒಂದು ಕೋಟಿ ತೊಂಭತ್ತೆರಡು ಲಕ್ಷ. ಗ್ವಾರ್‌ನೇರಿ ವಯೊಲಿನ್‌ಗಳ ಬೆಲೆ ಅದಕ್ಕಿಂತ ಸ್ವಲ್ಪ ಕಡಿಮೆ. ಹಳೆಯ ಗ್ವಾರ್‌ನೇರಿ ವಯೋಲಿನ್ ಹರಾಜಿನಲ್ಲಿ ತಂದ ಬೆಲೆ - 9 ಲಕ್ಷ ಎಪ್ಪತ್ತುಮೂರು ಸಾವಿರ ಡಾಲರ್, ರೂಪಾಯಿ ವಿನಿಮಯದಂತೆ ಒಂದು

ಕೋಟಿ ನಲವತ್ತೈದು ಲಕ್ಷ ತೊಂಭತ್ತೈದು ಸಾವಿರ ರೂಪಾಯಿ. ಈ ಕ್ರೆವೋನ ವಾದ್ಯ ನಿರ್ಮಾಪಕರು ತಯಾರಿಸಿದ ವಾದ್ಯಗಳು ಅಷ್ಟು ಅಮೂಲ್ಯ. ಹಿಂದೆ ರಚಿಸಲಾಗಿದ್ದ ವಾದ್ಯಗಳನ್ನೆಲ್ಲಾ ಪರಿಶೀಲಿಸಿ, ಸ್ಟ್ರಾಡಿವೇರಿ, ವಯೊಲಿನ್ ವಾದ್ಯದ ಗುಣ ಮತ್ತು ಧರ್ಮ ಸ್ಪಷ್ಟಗೊಳ್ಳುವ ಒಂದು ಪ್ರಮಾಣದ ಆಕಾರಕ್ಕೆ ಇಳಿಸಿದ. ಇಂದು ಅದೇ ಆಕಾರ ಪ್ರಮಾಣಗಳನ್ನು ಎಲ್ಲರೂ ಅನುಸರಿಸುತ್ತಿರುವುದು. ಅಂತಹ ಉತ್ಕೃಷ್ಟ ವಾದ್ಯಗಳನ್ನು ಸ್ಟ್ರಾಡಿವೇರಿ ಹೇಗೆ ತಯಾರಿಸಿದ ಎಂಬ ರಹಸ್ಯ ಅವನೊಂದಿಗೇ ಹೋಯಿತು. ಅದನ್ನು ಭೇದಿಸಿ ತಿಳಿವ ಪ್ರಯತ್ನಗಳಾವುದೂ ಸಫಲವಾಗಲಿಲ್ಲ.

ಯೂರೋಪಿನಲ್ಲಿ ಜನಪ್ರಿಯವಾಗಿ ಬಹು ಬಳಕೆಗೆ ಬಂದ ವಯೊಲಿನ್ ಮುಂದೆ ಪ್ರಪಂಚದ ಇತರ ಭಾಗಗಳಿಗೂ ಹರಡಲಾರಂಭವಾಯಿತು. ಭಾರತಕ್ಕೂ ಬಂದಿತು. ಬಹುಶಃ ಫ್ರೆಂಚರೂ, ಇಂಗ್ಲೀಷರೂ, ತಮ್ಮ ನೃತ್ಯ ಮನರಂಜನೆಗೆ ತಂದ ವಾದ್ಯಮೇಳಗಳ ಜೊತೆಯಲ್ಲಿ ವಯೊಲಿನ್ ಬಂದಿರಲು ಸಾಧ್ಯ. ಅದನ್ನು ನೋಡಿದ ಇಲ್ಲಿನ ಸಂಗೀತಗಾರರಲ್ಲಿ ಯಾರೋ ಛಾತಿವಂತರು ಅದರ ಮೇಲೆ ಕೈ ಆಡಿಸಿ, ನಮ್ಮ ಸಂಗೀತವನ್ನೂ ಅದರಲ್ಲಿ ಮೂಡಿಸಲು ಇರುವ ಸಾಧ್ಯತೆಯನ್ನು ಕಂಡುಕೊಂಡಿರಬಹುದು. ವಾದ್ಯವೂ ಬಹುಬೇಗ ಜನಪ್ರಿಯವಾಯಿತು.

1786- 1858ರ ಮಧ್ಯೆ ಜೀವಿಸಿದ್ದ ಬಾಲುಸ್ವಾಮಿ ದೀಕ್ಷಿತರು ವಯೊಲಿನ್, ವಾದ್ಯವನ್ನು ಮೊಟ್ಟಮೊದಲು ಕಚೇರಿ ವೇದಿಕೆಗೆ ತಂದವರು ಎಂದು ಭಾವಿಸಲಾಗಿದೆ. ಇವರು ಪ್ರಸಿದ್ಧ ವಾಗ್ಗೇಯಕಾರ, ಮುತ್ತುಸ್ವಾಮಿ ದೀಕ್ಷಿತರ ತಮ್ಮ. ಎಟ್ಟಿಯಾಪುರದ ಆಸ್ಥಾನ ವಿದ್ವಾಂಸರು. ವೀಣೆ, ಸ್ವರಬತ್. ಸಿತಾರ್, ಮೃದಂಗ ಮುಂತಾದ ವಾದ್ಯಗಳನ್ನು ನುಡಿಸುತ್ತಲಿದ್ದರು.

ಈ ಪ್ರತಿಭೆಯನ್ನು ಗಮನಿಸಿದ ಪೋಷಕ ಮಣಾಲಿ ಚಿನ್ನಯ್ಯ ಮುದಲಿಯಾರ್, ಬಾಲುಸ್ವಾಮಿಗೆ ವಯೊಲಿನ್ ನುಡಿಸಲು ಕಲಿಸುವುದಕ್ಕೆ ಒಬ್ಬ ಇಂಗ್ಲೀಷ್ ವಾದ್ಯಕಾರನನ್ನು ನೇಮಿಸಿದನು. ಅತಿ ಶೀಘ್ರದಲ್ಲಿಯೇ ವಾದ್ಯದಲ್ಲಿ ಪಾಶ್ಚಾತ್ಯ ಸಂಗೀತ ನುಡಿಸುವುದನ್ನು ಕರಗತ ಮಾಡಿಕೊಂಡ ಬಾಲುಸ್ವಾಮಿ ವಯೊಲಿನ್‌ನಲ್ಲಿ ಕರ್ನಾಟಕ ಸಂಗೀತವನ್ನೂ ನುಡಿಸಲು ಪ್ರಾರಂಭಿಸಿ, ವೇದಿಕೆಯ ಮೇಲೆ ಈ ವಿದೇಶಿ ವಾದ್ಯಕ್ಕೆ ಸ್ಥಾನ ಕಲ್ಪಿಸಿದರು. ಇದನ್ನು ನೋಡಿ ಅನೇಕರು ಈ ವಾದ್ಯ ವಾದನವನ್ನು ಕಲಿಯಲು ಪ್ರಾರಂಭಿಸಿದರು. ಅಂತಹವರಲ್ಲಿ ಒಬ್ಬರು-ವಡಿವೇಲು. ಅಣ್ಣಾಮುದ್ದುಸ್ವಾಮಿ ದೀಕ್ಷಿತರ ಶಿಷ್ಯ. ವಯೊಲಿನ್ ವಾದನದಲ್ಲಿ ಬಹು ಪ್ರವೀಣನೆನಿಸಿದ ಮತ್ತು ಸ್ವಾತಿ ತಿರುನಾಳ್‌ರವರ ಆಸ್ಥಾನ ವಿದ್ವಾಂಸನಾದ ಈತನ ಪ್ರತಿಭೆಯನ್ನು ಮೆಚ್ಚಿ ಸ್ವಾತಿ ತಿರುನಾಳ್ ಅವರು ವಡಿವೇಲುವಿಗೆ ದಂತದಲ್ಲಿ ಮಾಡಿದ ಒಂದು ವಯೊಲಿನ್ ವಾದ್ಯವನ್ನು ಬಹುಮಾನವಿತ್ತರು. ವಯೊಲಿನ್ ಬಹುಶೀಘ್ರವಾಗಿ ಜನಪ್ರಿಯವಾಯಿತು. ಉತ್ತರದ ವಿಜಯನಗರದಿಂದ ದಕ್ಷಿಣದ ತಿರುವಾಂಕೂರಿನವರೆಗೂ ಸಾವಿರಾರು ಮಂದಿ ವಾದ್ಯವನ್ನು ಕಲಿಯತೊಡಗಿದರು. ಪ್ರಾರಂಭದಲ್ಲಿ ಇದನ್ನು ಫಿಡಲ್ ಎಂದು ಕರೆಯಲಾಗುತ್ತಿದ್ದು ಅದರ ಪ್ರತಿಭಾವಂತ ವಾದಕರ ಹೆಸರಿನ ಹಿಂದೆ ಈ ಫಿಡಲ್ ಪದವನ್ನು

ತಗಲಿಸಲಾಗುತ್ತಿತ್ತು- ಫಿಡಲ್ ರಂಗಾಚಾರ್ಯಲು, ಫಿಡಲ್ ಪೊನ್ನುಸ್ವಾಮಿ, ಫಿಡಲ್ ಮುನುಸಾಮಪ್ಪ, ಫಿಡಲ್ ವೆಂಕೋಬರಾವ್- ಇತ್ಯಾದಿ.

ದರಿಯಾ ದೌಲತ್‌ನಲ್ಲಿ

ಕಚೇರಿ ವೇದಿಕೆಯ ಮೇಲೆ ಕಾಣಿಸುವ ಮೊದಲೇ ವಯೋಲಿನ್ ಬೇರೆ ಬೇರೆ ಸಂದರ್ಭದಲ್ಲಿ ಉಪಯೋಗಿಸುತ್ತಿದ್ದುದಕ್ಕೆ ದಾಖಲೆಗಳಿವೆ. 18ನೆಯ ಶತಮಾನದ ಉತ್ತರಾರ್ಧದಲ್ಲಿ ರಚಿತವಾದ ಕೆಲವು ದೇವತಾ ಉತ್ಸವದ ಚಿತ್ರಪಟಗಳಲ್ಲಿ, ಉತ್ಸವದ ಮುಂದೆ ನಾಟ್ಯಸನ್ನಿವೇಶಗಳಿವೆ. ಅಲ್ಲಿ ನರ್ತಕಿಯರ ಮುಮ್ಮೇಳದಲ್ಲಿ ಫಿಡಲ್ ನುಡಿಸುವವರಿದ್ದಾರೆ. ಹಾಗೆಯೇ ಶ್ರೀರಂಗಪಟ್ಟಣದ ದರಿಯಾ ದೌಲತ್‌ನ ಭಿತ್ತಿಚಿತ್ರಗಳಲ್ಲಿ ನವಾಬರ ಜನಾನಾದಲ್ಲಿ ನಡೆಯುತ್ತಿರುವ ನೃತ್ಯದ ಒಂದು ದೃಶ್ಯವಿದೆ. ಅಲ್ಲಿ ಹಿಮ್ಮೇಳದಲ್ಲಿ ಈ ಫಿಡ್ಲ್ ನುಡಿಸುವ ಹೆಂಗಸೊಬ್ಬಳಿದ್ದಾಳೆ. ಸ್ವಲ್ಪ ಹುಡುಕಿದರೆ 18ನೆಯ ಶತಮಾನದ ಇನ್ನೂ ಕೆಲವು ಚಿತ್ರಪಟಗಳಲ್ಲಿ ಈ ವಾದ್ಯವನ್ನು ಕಾಣುವುದು. ಆದುದರಿಂದ 18ನೇ ಶತಮಾನದ ಉತ್ತರಾರ್ಧದ ವೇಳೆಗೆ ಈ ವಾದ್ಯವು ಉಪಯೋಗದಲ್ಲಿತ್ತು. ಮುಂದೆ ಅದರ ಜನಪ್ರಿಯತೆ ಹೆಚ್ಚಿ ಕಲಿವವರ ಸಂಖ್ಯೆ ಅಗಾಧ ಪ್ರಮಾಣಕ್ಕೆ ಮುಟ್ಟಿತೆನ್ನಬಹುದು. ಕಚೇರಿ ವೇದಿಕೆಯ ಮೇಲೆ ಕಾಣಿಸಿಕೊಳ್ಳುವವರಿಗಿಂತ ನೂರುಪಾಲು ಕಾಣಿಸಿಕೊಳ್ಳದ ವಯೋಲಿನ್ ಪಟುಗಳಿದಾರೆ. ಇವರಲ್ಲಿ ನೃತ್ಯ, ಹರಿಕಥೆಗಳಿಗೆ ಪಕ್ಕವಾದ್ಯವಾಗಿ ನುಡಿಸುವವರು, ನಾಟಕದಲ್ಲಿ ನುಡಿಸುವವರು, ಈಗ ಚಲನಚಿತ್ರ ಹಿನ್ನೆಲೆ ಸಂಗೀತದಲ್ಲಿ ನುಡಿಸುವವರು, ಮಿಗಿಲಾಗಿ ಆತ್ಮಸಂತೋಷಕ್ಕಾಗಿ ನುಡಿಸಿಕೊಳ್ಳುವವರೂ ಇದ್ದಾರೆ.

ಭಾರತದಲ್ಲಿ ಬೇರು ಬಿಟ್ಟ ಮೇಲೆ ವಯೋಲಿನ್ ವಾದ್ಯವನ್ನು ನಾನಾ ಹೆಸರಿನಿಂದ ಕರೆಯಲಾಗುತ್ತಿದೆ. ಫಿಡಲ್, ಪಿಟೀಲು, ತೆಲುಗು ಸೀಮೆಯಲ್ಲಿ ವಾಯುಲೀನಮು, ಉತ್ತರ ಭಾರತದಲ್ಲಿ ಬೇಲಾ... ಹೀಗೆ. ಇಲ್ಲಿನ ಮನೋಧರ್ಮ ಸಂಗೀತ ಶೈಲಿ, ಸಂಪ್ರದಾಯ ಮುಂತಾದುವಕ್ಕೆ ಹೊಂದಿಕೊಂಡಿದೆ. ಮೂಲ ಪಾಶ್ಚಿಮಾತ್ಯವಾದರೂ, ನಡೆವಳಿಕೆಯಲ್ಲಿ ಭಾರತೀಯತ್ವವಿದೆ, ಭಾರತೀಯ ವಾದ್ಯಕುಟುಂಬಕ್ಕೆ ಒಬ್ಬ ವಿದೇಶಿ ಸೊಸೆ ಬಂದು, ಇಲ್ಲಿನ ಜೀವನ ಸಂಪ್ರದಾಯಗಳಿಗೆ ಪೂರ್ಣವಾಗಿ ಹೊಂದಿಕೊಂಡು ಭಾರತೀಯ ಸ್ತ್ರೀಯಂತೆ ಆದ ಹಾಗೆ- ಇಲ್ಲಿನ ಪ್ರತಿಭಾವಂತ ವಯೊಲಿನ್ ವಾದಕರೂ, ಇಲ್ಲಿಗೇ ಅವಶ್ಯಕ ಆದ ವಿಶೇಷತಾಂತ್ರಿಕ ಶೈಲಿಗಳನ್ನು ರೂಪಿಸಿ ವಾದ್ಯದ ವರ್ಚಸ್ಸು ಹೆಚ್ಚಿಸಿದ್ದಾರೆ. ನಿದರ್ಶನವಾಗಿ ಚೌಡಯ್ಯನವರು ನಾಲ್ಕು ತಂತಿ ವಾದ್ಯಕ್ಕೆ ಏಳು ತಂತಿಗಳನ್ನು ಅಳವಡಿಸಿ ಮುಂದೆ 19 ತಂತಿಗಳ ವಾದ್ಯವನ್ನು ಮಾಡಿದ ಹಾಗೆ ಕೆಲವರು ವಿಚಿತ್ರ ಹಾರ್ಸ್ ಪಿಡಲ್‌ಗಳನ್ನು ಉಪಯೋಗಿಸಿದ್ದಾರೆ. ಪಾಶ್ಚಾತ್ಯರಲ್ಲಿಯೇ ರಖಂವಾರಿ ವಯೊಲಿನ್‌ಗಳನ್ನು ತಯಾರಿಸಲಾಗಿತ್ತು.

ಒಟ್ಟಿನಲ್ಲಿ ಅದರ ಮೂಲವು ಎಲ್ಲಿರಲೀ, ಎಂತಿರಲೀ, ಪಿಟೀಲು ಅಥವಾ ವಯೊಲಿನ್ ಭಾರತೀಯ ಸಂಗೀತದ ಒಂದು ಅವಿಭಾಜ್ಯ ಅಂಗವಾಗಿದೆ. ಅನೇಕ ಪ್ರತಿಭಾವಂತ ವಾದಕರನ್ನು

ನಿರ್ಮಿಸಿದೆ. ಅವರಲ್ಲಿ ತಿರುಕ್ಕೋಡಿ ಕಾವಲ್ ಕೃಷ್ಣಯ್ಯರ್, ತಿರುಚ್ಚಿಗೋವಿಂದಸಾಮಿ ಪಿಳ್ಳೆ, ದ್ವಾರಂ ವೆಂಕಟಸ್ವಾಮಿ ನಾಯಿಡು, ಮೈಸೂರು ಟಿ. ಚೌಡಯ್ಯ, ಪಾಪಾ ವೆಂಕಟರಾಮಯ್ಯ ಮುಂತಾದವರು ಈ ಪಿಟೀಲು ವಾದನ ಕಲೆಯಲ್ಲಿ ಇತಿಹಾಸ ಪುರುಷರೆನಿಸಿಕೊಂಡಿದ್ದಾರೆ. ಈಗ ಈ ವಾದ್ಯದ ವ್ಯಾಪ್ತಿ ದಕ್ಷಿಣದಿಂದ ಉತ್ತರದ ಕಡೆಗೂ ಹರಡಿದೆ. ಇದು ವಾದ್ಯದ ಜನಪ್ರಿಯತೆಗೆ ಸಾಕ್ಷಿ. ಆದರೂ ಸಂಗೀತಾಭಿಮಾನಿಗಳಲ್ಲಿ ಒಂದು ವರ್ಗದವರಿಗೆ ಈ ಬೆಳವಣಿಗೆ ಸಮಾಧಾನ ಉಂಟುಮಾಡಿಲ್ಲ. ಅದು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಲ್ಲಿರುವವರು ಹಾಗೂ ಪಾಶ್ಚಾತ್ಯ ಸಂಗೀತವನ್ನು ಕಲಿತವರು. ಅವರು ನಮ್ಮ ಎಂತಹ ಪ್ರತಿಭಾವಂತ ವಾದಕರಾದರೂ ಆತನ ವಾದನವನ್ನು ಒಪ್ಪರು. ಅವರಲ್ಲಿ ಕೆಲವರಂತೂ ''ನಮ್ಮ ಪಿಟೀಲು ವಾದಕರಿಂದ ಬರುತ್ತಿರುವುದು ಕಲೆಯಲ್ಲ ಕರಟ'' ಎಂದು ನನಗೇ ಹೇಳಿದ್ದಾರೆ. ಈ ಹಿನ್ನೆಲೆಯಿಂದ ಭಾರತಕ್ಕೆ ಬಂದಿದ್ದ ಒಬ್ಬ ಪ್ರಸಿದ್ಧ ಸಂಗೀತಶಾಸ್ತ್ರಜ್ಞ - ಡಾ. ಕೊಯಿಲ್‌ರಾಯಿಟರ್ ಅವರ ಬಳಿ ಈ ವಿಷಯದ ಬಗೆಗೆ ಚರ್ಚಿಸಿದೆ. ಅದಕ್ಕೆ ಉತ್ತರವಾಗಿ - ಈ ಬಗೆಯ ಅಭಿಪ್ರಾಯ ಸರಿಯಲ್ಲ. ನಿಮ್ಮವರು ಈ ವಾದ್ಯವನ್ನು ಉಪಯೋಗಿಸುತ್ತಿರುವುದು ನಿಮ್ಮ ಸಂಗೀತ ಮೂಡಿಸುವುದಕ್ಕಾಗಿ. ನೀವು ಪಾಶ್ಚಾತ್ಯ ಸಂಗೀತವನ್ನು ನುಡಿಸುತ್ತಿಲ್ಲ. ಒಂದು ವಾದ್ಯದ ಮೂಲಕರ್ತವ್ಯ ನಮ್ಮ ಸಂಗೀತ ಕಲ್ಪನೆಗಳನ್ನು ಅಚ್ಚುಕಟ್ಟಾಗಿ ಖಚಿತವಾಗಿ ಪ್ರತಿಧ್ವನಿಸುವುದು. ಈ ಕೆಲಸವನ್ನೇ ನಿಮ್ಮವರು ಮಾಡುತ್ತಿರುವುದು. ಈ ದಿಸೆಯಲ್ಲಿ ಬಹು ಶ್ಲಾಘನೀಯವಾದ ಕೆಲಸ ಮಾಡಿದಾರೆ. ಅಲ್ಲದೆ ನಿಮ್ಮ ಸಂಗೀತಕ್ಕೆ ಅವಶ್ಯಕವಾದ ಅನೇಕ ತಾಂತ್ರಿಕತೆಗಳನ್ನು ನಿರ್ಮಿಸಿದಾರೆ. ಪಿಟೀಲು ಕಲೆಗೆ ಒಂದು ಹೊಸ ಆಯಾಮವನ್ನೇ ನಿರ್ಮಿಸಿದ್ದಾರೆ- ಎಂದರು ಕೊಯಿಲ್‌ರಾಯಿಟರ್. ★ ★

ಸುಧಾ, ಯುಗಾದಿ ವಿಶೇಷಾಂಕ, 1998

10. ಜನಪ್ರಿಯ ವಾದ್ಯ - ಇಡಕ್ಕ

ಚರ್ಮವಾದ್ಯ - ಇಡಕ್ಕ ಕೇರಳದಲ್ಲಿ ಪ್ರಚಾರದಲ್ಲಿದೆ. ಬಹು ಜನಪ್ರಿಯವಾದುದು. ಅವರ ಪಂಚವಾದ್ಯ ಮೇಳದಲ್ಲಿ ಒಂದು. ಇದೇ ವಾದ್ಯ ಕರಾವಳಿಯ ಕರ್ನಾಟಕ ಪ್ರದೇಶದಲ್ಲಿಯೂ ಪ್ರಚಾರದಲ್ಲಿದೆ. ಅಲ್ಲಿ ಉಡುಕು ಎಂದು ಕರೆಯುತ್ತಾರೆ. ಆಕಾರದಲ್ಲಿ ದೊಡ್ಡ ಡಮರು ಇದ್ದ ಹಾಗೆ. ನುಡಿಸುವ ತಾಂತ್ರಿಕ ವಿಧಾನ ಸ್ವಲ್ಪ ಡವಣೆಯ ಹಾಗೆ. ಡಮರು, ಡಕ್ಕ, ಡವಣೆ, ಉಡುಕು, ಇಡಕ್ಕ ಇವೆಲ್ಲಾ ಒಂದೇ ಕುಟುಂಬಕ್ಕೆ ಸೇರಿದ ವಾದ್ಯಗಳೆನ್ನಬಹುದು. ಆದರೆ ಇವುಗಳಲ್ಲಿ ಕೇರಳದ ಇಡಕ್ಕ ವಿಶೇಷವಾದುದು. ಅದು ಒಂದು ರೀತಿಯ ಹಾಡುವ ವಾದ್ಯ ಎನ್ನಬಹುದು.

"ಮೂಗಯ್ಯ ಮೃದಂಗಾನ ಮಾತಾಡಿಸಬಲ್ಲ" ಎಂದು ಹಿಂದೆ ಅನೇಕರು ಉದ್ಗರಿಸುತ್ತಿದ್ದುದನ್ನು ಕೇಳಿದ್ದೇವೆ. ಇದು ಒಂದು ರೀತಿಯ ಉತ್ಪ್ರೇಕ್ಷೆ ಇರಬಹುದು. ಟಿ.ಎಂ. ಪುಟ್ಟಸ್ವಾಮಯ್ಯನವರು ಮೃದಂಗ ನುಡಿಸುತ್ತಿದ್ದ ವೈಖರಿಗೆ ಮೆಚ್ಚಿದ ಪ್ರತಿಕ್ರಿಯೆ. ಕೆಲವು ವೇಳೆ ಜತಿಗಳ ಪಾಟಾಕ್ಷರಗಳು ಬಾಯಲ್ಲಿ ನುಡಿದಂತಹ ಭ್ರಮೆ ಉಂಟುಮಾಡುತ್ತಿದ್ದುವು. ಆದರೆ ಟಾಕಿಂಗ್ ಡ್ರಮ್ಸ್ ಅಥವಾ ಮಾತನಾಡುವ ತಮಟೆಗಳ ಹೆಸರನ್ನು ಅನೇಕರು ಕೇಳಿದ್ದಾರೆ. ಆಫ್ರಿಕಾದಲ್ಲಿ ಇದು ಬಹು ಉಪಯೋಗದಲ್ಲಿದ್ದುದು. ಇಲ್ಲಿ ಮಾತನಾಡುವುದೆಂದರೆ, ಈ ತಮಟೆಗಳು ಮಾತುಗಳನ್ನು ಪುನರುಚ್ಚರಿಸುವುದಿಲ್ಲ. ಯಾವುದೋ ಕ್ರಮದಲ್ಲಿ ಜೋಡಿಸಿದ ನಾದದ ತುಣುಕುಗಳನ್ನು ಇದರಿಂದ ಮೂಡಿಸುತ್ತದೆ. ಅದು ಯಾವುದೋ ಸುದ್ದಿಯನ್ನು ಒಳಗೊಂಡಿರುತ್ತದೆ. ಒಂದು ಗ್ರಾಮದಲ್ಲಿ ಮಾಡಿದ ಈ ಸುದ್ದಿ ರಚನೆ ದೂರದ ಇನ್ನೊಂದು ಗ್ರಾಮಕ್ಕೆ ಕೇಳುತ್ತದೆ. ಅಲ್ಲಿನ ತಮಟೆಗಳು ಪ್ರತಿಧ್ವನಿಸುತ್ತವೆ. ಹೀಗೆ ಗ್ರಾಮದಿಂದ ಗ್ರಾಮಕ್ಕೆ ಗಾಳಿಯಲ್ಲಿ ಹರಡಿ ತಲುಪಬೇಕಾದ ಸ್ಥಳವನ್ನು ಮುಟ್ಟುತ್ತದೆ ಈ ಸಮಾಚಾರ - ಟೆಲಿಗ್ರಾಂ ರೀತಿಯಲ್ಲಿ.

ಇಡಕ್ಕ ಹಾಡುವ ತಮಟೆ ಎಂದರೂ ಅದು ನೇರವಾಗಿ ಹಾಡುವುದಿಲ್ಲ. ರಾಗವನ್ನು ನುಡಿಸಬಹುದು. ಇದರ ಮುಖಕ್ಕೆ ಕಟ್ಟಿ ಬಿಗಿದಿರುವುದು ತೆಳುವಾದ ಚರ್ಮ. ಬಿಗಿದ ಬಾರಿನಂತಹ ಹಗ್ಗಗಳನ್ನು ಅದರ ಬಡನಡುವಿನ ಬಳಿ ಎಡಗೈನಿಂದ ಅಮುಕಿದರೆ, ಚರ್ಮದ ಬಿಗಿತ ಹೆಚ್ಚುತ್ತದೆ. ಚರ್ಮದ ಈ ಬಿಗಿತವು ಹೆಚ್ಚುತ್ತಾ ಹೆಚ್ಚುತ್ತಾ ಕುಡುಪಿನಿಂದ ಹೊಡೆದಾಗ ವಿಧವಿಧ ನಾದಗಳು ಉತ್ಪತ್ತಿಯಾಗುತ್ತವೆ. ಎಚ್ಚರಿಕೆಯಿಂದ ಹೊಡೆದಾಗ ಏಳೂ ಸ್ವರಗಳೂ ಮತ್ತು ಅವುಗಳ ಪ್ರಭೇದಗಳನ್ನೂ ಖಚಿತವಾಗಿ ಧ್ವನಿಸಬಹುದು. ಆದುದರಿಂದ ವಾದ್ಯದ ಮೇಲೆ ಸಂಪೂರ್ಣ ಆದಿಪತ್ಯ ರೂಢಿಸಿಕೊಂಡವರು. ರಾಗವಾಗಲೀ, ಕೀರ್ತನೆಯಾಗಲೀ (ಅಂದರೆ ಅದರ ರಾಗಹಂದರ) ನುಡಿಸಬಲ್ಲರು. ರಾಗತಾಳಬದ್ಧ ರಚನೆಗಳನ್ನು ಸರಾಗವಾಗಿ ನುಡಿಸುತ್ತಾರೆ. ಇದಕ್ಕೆ ಬಹುತೇಕ ದೇವಾಲಯ ಸಂಗೀತ ವಿಧಿಗಳ ವಾದ್ಯ ವೃಂದಕ್ಕೆ ಸೇರಿದುದರಿಂದ ಅದು ಸಾರ್ವಜನಿಕವಾಗಿ ಎಲ್ಲೆಡೆಗಳಲ್ಲಿಯೂ ಕಾಣಬರಲು ಸಾಧ್ಯವಾಗಿಲ್ಲ. ಈಗ ನಮ್ಮ ಭೂ ಸುಧಾರಣೆಗಳ ಫಲವಾಗಿ ಕೇರಳದ ದೇವಾಲಯಗಳ ಇಂತಹ ವಾದ್ಯ ವೃಂದಗಳು ಬಹುಪಾಲು ಹೋಗಿಬಿಟ್ಟಿವೆ. ಅದರ ಜೊತೆಯಲ್ಲಿ ಇಡಕ್ಕ ರಾಗಸಂಗೀತವನ್ನು ನುಡಿಸುತ್ತಿದ್ದ ವಾದ್ಯಕಾರರೂ ಮರೆಯಾಗಿ ಕೇವಲ ಒಬ್ಬರಿಬ್ಬರು ಉಳಿದಿರಬಹುದು. ಅವರ ಅನಂತರ ಈ ವಾದ್ಯವು ಪೂರಾ ಮರೆಯಾಗದಿದ್ದರೂ, ಅದರಿಂದ ಮೂಡಿಬರುತ್ತಿದ್ದ ರಾಗ ಸಂಗೀತವು ಕೇವಲ ಕತೆಯಾಗಿ ಉಳಿಯುವಂತಿದೆ. ★ ★ ★ ★ ★ ★ ★ ★ ★ ★ ★ ★

ಪ್ರಜಾವಾಣಿ

11. ಮಹಾವೈದ್ಯನಾಥ ಅಯ್ಯರ್ ಮತ್ತು ಅವರ ಮೇಳರಾಗಮಾಲಿಕೆ

ಸಂಗೀತವೆಂದರೆ ಯಾರಿಗೇ ಆಗಲೀ ಕಿವಿ ಅರಳುವುದು ಸಹಜವಾದುದು. ಅದು ಎಂಥವರ ಹೃದಯವನ್ನೂ ಮೀಟಬಲ್ಲುದು, ಮನಸ್ಸನ್ನು ಮೃದುಮಾಡುವುದು. ಅದಕ್ಕೇ ಸಂಗೀತವನ್ನು ಅಭ್ಯಾಸಮಾಡಿ, ರೂಢಿಯಲ್ಲಿಟ್ಟುಕೊಂಡಿರುವವರಿಗೆ ಸಮಾಜದಲ್ಲಿ ಗಣ್ಯಸ್ಥಾನ ಮತ್ತು ಸನ್ಮಾನ. ನಾಲ್ಕಾರು ವರ್ಷಕಾಲ ಹಠಸಾಧನೆಯ ಫಲವಾಗಿ ಸಂಗೀತಗಾರರಾಗಿರುವವರಿಗೇ ಇಷ್ಟು ಮರ್ಯಾದೆ ಮತ್ತು ಅದಕ್ಕೆ ಕಾರಣವು ಅವರಲ್ಲಿರುವ ಕಿಂಚಿತ್ ಗಂಧರ್ವಾಂಶವೆಂಬ ನಂಬಿಕೆ. ಅಂತಹುದರಲ್ಲಿ ಕೇವಲ ಬಾಲ್ಯದಲ್ಲಿಯೇ ಈ ಪ್ರತಿಭೆಯನ್ನು ವ್ಯಕ್ತಪಡಿಸುವವರ ಬಗ್ಗೆ ಹೇಳುವ ಹಾಗೆಯೇ ಇಲ್ಲ. ಸಮಾಜದಲ್ಲಿ ಕೋಲಾಹಲ. ಅದು ದೈವದತ್ತವಾದ ವರವೆಂಬ ಭಾವನೆ ಬೇರೆ! ಸಂಗೀತದ ಇತಿಹಾಸವನ್ನು ನೋಡಿದಲ್ಲಿ ಆಗಾಗ್ಗೆ ಇಂತಹ ಮೂರ್ತಿಗಳು ಹುಟ್ಟಿ ಪ್ರಪಂಚವನ್ನು ಸ್ತಂಭೀಭೂತವಾಗುವಂತೆ ಮಾಡಿದ್ದಾರೆ. ಆದರೆ ಇವರುಗಳಲ್ಲಿ ಬಹುಜನ ಎಳೆಯ ವಯಸ್ಸಿನಿಂದಲೇ ಪ್ರಾರಂಭವಾಗುವ ಕಾಯಕ ಮತ್ತು ಮಾನಸಿಕ ಅಸಾಧಾರಣ ಶ್ರಮದ ಫಲವಾಗಿಯೋ ಏನೋ, ಅಲ್ಪಾಯುಗಳಾಗಿದ್ದಾರೆ. ದೀರ್ಘಕಾಲ ಬದುಕಿರುವವರು ಅತಿವಿರಳ. ಮಹಾವೈದ್ಯ, ಮಹಾವೈದ್ಯನಾಥಶಿವನ್, ಮಹಾವೈತಿ, ಮಹಾವೈದ್ಯನಾಥಯ್ಯರ್ ಈ ಬಗೆಯ ನಾನಾ ಹೆಸರು ಗಳಿಂದ ಕರೆಯಲ್ಪಡುವ ವೈದ್ಯನಾಥಯ್ಯರ್‌ರವರೂ ಇಂತಹವರಲ್ಲಿ ಒಬ್ಬರು. ಇವರು ತಮ್ಮ ಜೀವಿತದ 49 ವರ್ಷಗಳಲ್ಲಿ ಏಳನೇ ವಯಸ್ಸಿನಿಂದಲೇ ಪ್ರಾರಂಭಿಸಿದ ತಮ್ಮ ಸರಳ ಜೀವನ ಮತ್ತು ಸಂಗೀತದಲ್ಲಿ ತಮಗಿದ್ದ ಅಸಾಧಾರಣ ಪ್ರತಿಭೆಯಿಂದ, ದಕ್ಷಿಣದ ಸಂಗೀತ ಪ್ರಪಂಚದಲ್ಲಿ ತಮ್ಮ ಹೆಸರು ಚಿರಸ್ಥಾಯಿಯಾಗುವಂತೆ ಮಾಡಿಹೋಗಿದ್ದಾರೆ. ಸಂಗೀತದ ಇತಿಹಾಸವನ್ನು ನೋಡಿದಲ್ಲಿ ಈ ಬಗೆಯ ವ್ಯಕ್ತಿಗಳು ಬಹುವಿರಳ. ವರ್ತಮಾನದಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ದೊರಕುತ್ತಾರೆ. ಪಾಶ್ಚಾತ್ಯ ಸಂಗೀತದಲ್ಲಿ ಮೊಜಾರಟ್ (Mozart) ತನ್ನ ನಾಲ್ಕನೆಯ ವಯಸ್ಸಿನಿಂದಲೇ ಕೃತಿರಚನೆಗೆ ಪ್ರಾರಂಭ, ಬಿಟೋವನ್ (Beethoven) ಷೂಬರ್ಟ್ (Schubert), ಷೋಪಾನ್ (Chopin), ಮೆಂಡಲ್‌ಸನ್ (Mendelssohn) ಇವರೆಲ್ಲರೂ ಎಳೆಯ ವಯಸ್ಸಿನಿಂದಲೇ ತಮ್ಮ ಪ್ರತಿಭೆಯನ್ನು ಬೀರಲಾರಂಭಿಸಿದರು. ಈಚೆಗೆ ಇಟಲಿಯ ಪಿರೀನೋಗಾಂಬ (Pierino Gamba) ಎಂಬ 12 ವರ್ಷದ ಹುಡುಗನು ಪ್ರಸಿದ್ಧಿಯಾಗಿದ್ದಾನೆ. ನಮ್ಮಲ್ಲಿಯೂ ಈಗ ಜೀವಂತವಾಗಿರುವವರಲ್ಲಿ ಉಸ್ತಾದ್ ಅಲ್ಲಾವುದ್ದೀನ್ ಖಾನ್‌ರವರು ತಮ್ಮ 4ನೆಯ ವಯಸ್ಸಿನಲ್ಲೇ ಸಿತಾರ್‌ವಾದ್ಯವನ್ನು ನುಡಿಸುತ್ತಿದ್ದರಂತೆ! ಕೊಳಲು ವಿದ್ವಾಂಸ ಮಹಾಲಿಂಗಂರವರೂ ಚಿಕ್ಕವಯಸ್ಸಿನಲ್ಲೇ ಪ್ರಖ್ಯಾತರಾಗಿದ್ದರು. ಮೈಸೂರಿನಲ್ಲಿಯೂ ಸ್ವತಃ ಶೇಷಣ್ಣನವರ ಮೊಮ್ಮಕ್ಕಳಾದ

ವಿ.ಎಸ್. ರಾಯರು ಚಿಕ್ಕವಯಸ್ಸಿನಲ್ಲಿಯೇ ತಮ್ಮ ಪ್ರತಿಭೆಯನ್ನು ತೋರಿಸಿ 'ಸ್ವರಮೂರ್ತಿ' ಎನ್ನಿಸಿ ಕೊಂಡರು.

ಕಳೆದ ಶತಮಾನವು ಸಂಗೀತದ ಇತಿಹಾಸದಲ್ಲಿಯೇ ಚಿರಸ್ಮರಣೀಯವಾದುದು. ಆಗ ಭಾರತೀಯ ಸಂಗೀತದಲ್ಲಿ ರಚಿಸಲ್ಪಟ್ಟ ಕೃತಿಗಳೂ ಮತ್ತು ವಾಗ್ಗೇಯಕಾರರ ಸಂಖ್ಯೆಯೂ ಅದ್ಭುತವಾದುದು. ದಕ್ಷಿಣಭಾರತದಲ್ಲಿ ನಾಲ್ಕನೆಯ ಮೈಸೂರು ಯುದ್ಧವು ಕೊನೆಗೊಂಡು ದೇಶವು ನಿಧಾನವಾಗಿ ವ್ಯವಸ್ಥೆಗೆ ಬರುತ್ತಿದ್ದ ಕಾಲ. ಸಂಗೀತದ ಕೇಂದ್ರಗಳಾಗಿದ್ದ ಮೈಸೂರಿನಲ್ಲಿ ಆಗತಾನೆ ಮುಮ್ಮಡಿ ಕೃಷ್ಣ ಭೂಪತಿಯೂ, ತಂಜಾವೂರಿನಲ್ಲಿ ತುಳಜಾಜಿ, ಶರಭೋಜಿ, ಅನಂತಶಯನದಲ್ಲಿ ಸ್ವಾತಿತಿರುನಾಳ್‌ರವರೂ ರಾಜ್ಯವಾಳುತ್ತಾ ತಮ್ಮ ತಮ್ಮ ಆಸ್ಥಾನಗಳಲ್ಲಿ ಸಂಗೀತ ವಿದ್ವನ್ಮಣಿಗಳಿಗೆ ಆಶ್ರಯದಾತರಾಗಿದ್ದರು. ಇದಲ್ಲದೆ ಅಲ್ಲಲ್ಲಿ ಸಣ್ಣಪುಟ್ಟ ಪಾಳೆಯಗಾರರೂ ಜಮೀನ್‌ದಾರರುಗಳೂ ಅನೇಕ ಸಂಗೀತ ವಿದ್ವಾಂಸರಿಗೆ ಆಶ್ರಯವನ್ನಿತ್ತು ಕಲಾಭಿವೃದ್ಧಿಗೆ ಕಾರಣರಾಗಿದ್ದರು. ಶತಮಾನದ ಆದಿಭಾಗದಲ್ಲಿ ರಾಮಸ್ವಾಮಿ ದೀಕ್ಷಿತರು, ಸಂಗೀತ ತ್ರಿಮೂರ್ತಿಗಳಾಗಿದ್ದ ತ್ಯಾಗರಾಜ, ಮುದ್ದುಸ್ವಾಮಿ ದೀಕ್ಷಿತರು, ಶ್ಯಾಮಾಶಾಸ್ತ್ರಿಗಳು, ಗುರುಮೂರ್ತಿಶಾಸ್ತ್ರಿಗಳು, ಪರಮೇಶ್ವರ ಭಾಗವತರು, ಗೋಪಾಲಕೃಷ್ಣ ಭಾರತಿ, ಉತ್ತರಾರ್ಧದಲ್ಲಿ ಸುಬ್ಬರಾಯಶಾಸ್ತ್ರಿಗಳು, ತಂಜಾವೂರು ಸೋದರರಾದ ಪೊನ್ನಯ್ಯ, ಚಿನ್ನಯ್ಯ, ವಡಿವೇಲು, ವೀಣೆಕುಪ್ಪಯ್ಯ, ದೊರೆಸ್ವಾಮಿ ಅಯ್ಯರ್, ಮಾನಂಬೂಚ್ಚಾವಡಿ ವೆಂಕಟಸುಬ್ಬಯ್ಯ, ಪಟ್ಟಣಂ ಸುಬ್ರಹ್ಮಣ್ಯಯ್ಯರ್, ಸದಾಶಿವರಾಯರು, ಮಹಾವೈದ್ಯನಾಥಯ್ಯರ್ ಮುಂತಾದ ನಾನಾ ಸಂಗೀತ ವಿದ್ವನ್ಮಣಿಗಳು ಬೆಳಗುತ್ತಿದ್ದರು. ಮೈಸೂರು ಆಸ್ಥಾನದಲ್ಲಿ ಅಲಸೂರ್ ಕೃಷ್ಣಯ್ಯ, ವೀಣೆ ವೆಂಕಟಸುಬ್ಬಯ್ಯ, ಸಾಂಬಯ್ಯ, ಸದಾಶಿವರಾವ್ ಮುಂತಾದ ವಿದ್ವನ್ಮಣಿಗಳು ಅಲಂಕರಿಸಿದ್ದರು. ಉತ್ತರಭಾರತದಲ್ಲಿಯೂ ಶತಮಾನದ ಆದಿಭಾಗದಲ್ಲಿ ಮೊಗಲ್ ಚಕ್ರವರ್ತಿ ರಸಿಕಶಿಖಾಮಣಿ ಮಹಮ್ಮದ್ ಷಾ ಇವನ ಆಸ್ಥಾನದಲ್ಲಿ ಸುಪ್ರಸಿದ್ಧ ವಾಗ್ಗೇಯಕಾರರಾದ ಸದಾರಂಗ್, ಅದಾರಂಗ್, ಮಹಾರಂಗ್, ನಿನ್ಮಲ್ ಷಾ ಮುಂತಾದ ವಿದ್ವಾಂಸರು ಉತ್ತರಾರ್ಧದಲ್ಲಿ, ಅಯೋಧ್ಯೆಯಲ್ಲಿ ಗುಲಾಮ್‌ನಬಿ ಅಥವಾ ಷೋರಿಮಿಯಾ, ರಾಮಪುರದಲ್ಲಿ ಬಹದೂರ್‌ಸೇನ್ ಮತ್ತು ಈತನ ಶಿಷ್ಯರಾದ ವಜೀರ್‌ಖಾನ್ ಮತ್ತು ಇನಾಯತ್‌ಹುಸೇನ್ ಖಾನ್, ಕಲ್ಕತ್ತೆಯಲ್ಲಿ ರಾಮಪ್ರಸಾದ್, ಗ್ವಾಲಿಯರಿನಲ್ಲಿ ಹದ್ದೂಖಾನ್ ಮತ್ತು ಹಸ್ಸೂಖಾನ್ ಸೋದರರು, ಬರೋಡೆಯಲ್ಲಿ ಮೌಲಾಭಕ್ಷ್. ಹೀಗೆ ಆ ಶತಮಾನದಲ್ಲಿ ರಾಜಕೀಯವು ಬಹಳ ಅವ್ಯವಸ್ಥೆಯಲ್ಲಿದ್ದರೂ, ವಾಗ್ಗೇಯಕಾರರೂ ಮತ್ತು ಸಂಗೀತವೂ ಹಿಂದೆಂದೂ ಇಲ್ಲದಷ್ಟು ಅಭಿವೃದ್ಧಿಗೆ ಬಂದಿದ್ದಿತು. ಪಾಶ್ಚಾತ್ಯ ಸಂಗೀತ ಪ್ರಪಂಚದಲ್ಲಿಯೂ ಹೀಗೆಯೇ ಬೆಟೋವೆರ್ (Beethoven), ರೋಸ್ಸಿನಿ (Rossini) ಷೂಬರ್ಟ್ (Schubert), ಪ್ಯಾಗಾನಿನಿ (Paganini), ಬಾರ್ಲಿಯೋಜ್ (Berlioz), ಷೋಪಾನ್ (Chopin), ಷೂಮನ್ (Schuman), ಮೆಂಡೆಲ್‌ಸರ್ (Mendelsohn), ಲಿಸ್ಟ್ (List), ಬ್ರಾಮ್ಸ್ (Brahms), ಮುಸೋರ್ಗ್‌ಸ್ಕಿ

(Mussorgsky), ಸ್ಟ್ರಾಸ್ ಸಹೋದರರು (Strauss), ವ್ಯಾಗ್ನರ್ (Wagner), ವರ್ಡಿ (Verdi) ಡಿ. ಬುಸ್ಸಿ (De Bussy), ಚೈಕೊಫ್‌ಸ್ಕಿ (Tchaikousky) ಮುಂತಾದ ನಾನಾ ಪಾಶ್ಚಾತ್ಯ ಸಂಗೀತ ವಿದ್ವಾಂಸರುಗಳು ಆ ಶತಮಾನವನ್ನು ಬೆಳಗಿ ತಮ್ಮ ನೂರಾರು ಮಹಾಕೃತಿಗಳನ್ನು ರಚಿಸಿಹೋಗಿದ್ದಾರೆ. ಆ ಶತಮಾನದಲ್ಲಿ ರಚನೆಯಾದ ಕೃತಿಗಳೇ ಇಂದಿಗೂ ಬಹುಭಾಗ ರೂಢಿಯಲ್ಲಿರುವುವು. ನಮ್ಮ ಕರ್ಣಾಟಕ ಸಂಗೀತದಲ್ಲಿಯೂ, ಮುಕ್ಕಾಲುಪಾಲು ಕೃತಿಗಳೆಲ್ಲಾ ಆ ಶತಮಾನದಲ್ಲಿಯೇ ರಚಿತವಾದವು. ಆ ಮಹಾಕೃತಿಗಳ ನಡುವೆ ಮಹಾವೈದ್ಯನಾಥರು ರಚಿಸಿದ 'ಮೇಳ ರಾಗಮಾಲಿಕೆ' ತನ್ನ ಅಪೂರ್ವ ವೈವಿಧ್ಯತೆಯಿಂದ ಪ್ರಕಾಶಿಸುತ್ತಿದೆ.

ವ್ಯಕ್ತಿಪರಿಚಯ

ತಂಜಾವೂರ್ ಜಿಲ್ಲೆಯು ಬಹಳ ಹಿಂದಿನಿಂದಲೂ ಸಂಗೀತಕ್ಕೆ ಪ್ರಸಿದ್ಧಿಯಾದುದು. ಭೂಗುಣವೇ ಅಂತಹುದೋ ಏನೋ! ಸ್ಥಳಪುರಾಣದ ಪ್ರಕಾರ, ರಾವಣಾಸುರನ ಸಭೆಯಲ್ಲಿದ್ದ ಪ್ರಸಿದ್ಧ ಸಂಗೀತಗಾರನಾದ ತಂಜನ್ ಎಂಬುವನು ತಂಜಾವೂರಿನ ಸ್ಥಾಪನೆಗೆ ಕಾರಣನೆಂದು ಹೇಳಲಾಗಿದೆ. ತಂಜಾವೂರ್, ತಿರುವಾರೂರ್, ಮಾಯಾವರಂ ಈ ಸುತ್ತಿನಿಂದ ಹಿಂದಿನ ಪ್ರಸಿದ್ಧ ವಾಗ್ಗೇಯಕಾರರೂ, ಸಂಗೀತ ಮತ್ತು ನಾಟ್ಯಕಾರರೂ ಬಂದಿದ್ದಾರೆ. ಕರ್ಣಾಟಕ ಸಂಗೀತ ತ್ರಿಮೂರ್ತಿಗಳಾದ ತ್ಯಾಗರಾಜ, ದೀಕ್ಷಿತರು, ಶ್ಯಾಮಾಶಾಸ್ತ್ರಿಗಳು ಮತ್ತು ಇವರ ಶಿಷ್ಯವರ್ಗದವರೇ ಅಲ್ಲದೆ, ಗೋವಿಂದ ದೀಕ್ಷಿತರು, ಇಂದಿನ ಕರ್ಣಾಟಕ ಸಂಗೀತ ಸಂಪ್ರದಾಯಕ್ಕೆ ಮೂಲಭೂತವಾದ 'ಚತುರ್ದಂಡಿ ಪ್ರಕಾಶಿಕೆ'ಯ ಕರ್ತೃ ವೆಂಕಟಮಖಿ, ನಾರಾಯಣತೀರ್ಥ ಯತೀಂದ್ರರು, ತ್ಯಾಗರಾಜರ ಪೂರ್ವಿಕರಾದ ಗಿರಿರಾಜಕವಿ, ಮಾರ್ಗದರ್ಶಿ ಶೇಷಯ್ಯಂಗಾರ್ಯರು, ಆದಿಯಪ್ಪಯ್ಯ, ಪಲ್ಲವಿ ಗೋಪಾಲಯ್ಯ, ಗೋಪಾಲಕೃಷ್ಣ ಭಾರತಿ, ಅರುಣಾಚಲ ಕವಿರಾಯರು, ಹೀಗೆ ನಮ್ಮ ಹಿಂದಿನ ಅನೇಕ ಸಂಗೀತಗಾರರೆಲ್ಲಾ ಈ ಪ್ರದೇಶದ ಸುತ್ತಮುತ್ತಣದವರೇ! ಆದ್ದರಿಂದ ವೈದ್ಯನಾಥಯ್ಯರ್‌ರವರ ಸಂಗೀತಕ್ಕೆ ಸ್ಥಳ ಸಂಸ್ಕಾರವೂ ಇದ್ದಿತೆಂದು ಹೇಳಬೇಕಾಗಿಲ್ಲ.

ಮಹಾವೈದ್ಯರ್, ಮಹಾವೈತಿ ಇತ್ಯಾದಿ ನಾಮಾಂಕಿತರಾದ ವೈದ್ಯನಾಥಯ್ಯರ್‌ರವರು ಹುಟ್ಟಿದುದು ತಂಜಾವೂರ್ ಜಿಲ್ಲೆಯ ವೈಯ್ಯಾಚ್ಚೇರಿ ಎಂಬ ಗ್ರಾಮದಲ್ಲಿ - 1844ರಲ್ಲಿ. ಇವರು ದ್ರಾವಿಡ ಬ್ರಾಹ್ಮಣರಲ್ಲಿ ಬೃಹಚ್ಚರಣವೆಂಬ ಪಂಗಡದವರು. ಇವರ ತಂದೆಯವರಾದ ದೊರೆಸ್ವಾಮಿ ಅಯ್ಯರ್‌ರವರು ಒಳ್ಳೆಯ ಸಂಗೀತ ವಿದ್ವಾಂಸರು. ಅವರನ್ನು ಪಂಚನದಯ್ಯರ್ ಎಂದೂ ಕರೆಯುತ್ತಿದ್ದರು. ಇದಲ್ಲದೆ ಇವರ ತಾಯಿಯವರು ಪ್ರಸಿದ್ಧ ವಾಗ್ಗೇಯಕಾರರಾದ ಅನೈಯ್ಯನವರ ವಂಶಜರು. (ಅನೈಯ್ಯನವರು 'ಉಮಾದಾಸ' ಅಂಕಿತದಿಂದ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಮುಖ್ಯವಾದುವು ಕೇದಾರರಾಗ, ರೂಪಕತಾಳದಲ್ಲಿರುವ "ಭಜನ ಸೇಯವೇ ಓ ಮನಸಾ" ನಾದ ನಾಮಕ್ರಿಯಾರಾಗ, ರೂಪಕತಾಳದ "ಇಂತಪರಾಕಾ", ರೀತಿ

ಗೌಳರಾಗ, ರೂಪಕತಾಳದ "ಪರಾಕೇಲ ಬಾಲೆ"). ಇದರಿಂದ ಸಂಗೀತವು ಮಹಾವೈದ್ಯನಾಥರ ರಕ್ತಗತವಾಗಿತ್ತೆಂದು ಹೇಳಬೇಕಾಗಿಲ್ಲ. ವೈದೀಶ್ವರನ್ ಕೋವಿಲ್ ವೈದ್ಯನಾಥೇಶ್ವರನ ಹೆಸರಿನಲ್ಲಿ ವೈದ್ಯನಾಥಶಿವನ್ ಎಂದು ನಾಮಕರಣವಾಯಿತು. ಮಹಾವೈದ್ಯರು ಮೂರನೆಯ ಮಗ. ದೊಡ್ಡವರು ಸಾಂಬಮೂರ್ತಿ, ಎರಡನೆಯವರು ರಾಮಸ್ವಾಮಿ ಶಿವನ್, ನಾಲ್ಕನೆಯವರು ಅಪ್ಪಸ್ವಾಮಿ. ಮಹಾವೈದ್ಯನಾಥರ ಅದ್ವಿತೀಯ ಶಿವಭಕ್ತಿಯು ಅವರ ತಂದೆಯವರಿಂದ ಬಂದುದು. ದೊರೈಸ್ವಾಮಿ ಅಯ್ಯರ್‌ರವರು ಶಿವೋಪಾಸಕರು. ಪ್ರಣತಾರ್ಥಿಹರ ಸ್ವಾಮಿ ದೇವಸ್ಥಾನದಲ್ಲಿ ಪದೇ ಪದೇ ಶಿವಕಥೆ ಮತ್ತು ಭಜನೆಗಳನ್ನು ಮಾಡುತ್ತಿದ್ದರು. ಇಷ್ಟು ಆಸ್ತಿಕರಾಗಿದ್ದ ದೊರೈಸ್ವಾಮಿ ಅಯ್ಯರವರು ತಮ್ಮ ಮಕ್ಕಳಿಗೆಲ್ಲಾ ಮತ, ಆಚಾರಗಳಲ್ಲಿ ಹೆಚ್ಚು ಶ್ರದ್ಧಾಯುಕ್ತವಾದ ವಿದ್ಯಾಭ್ಯಾಸವನ್ನು ಮಾಡಿಸಿದರು.

ಹಿರಿಯಮಗ ರಾಮಸ್ವಾಮಿ ಶಿವನ್‌ರವರು ತಮಿಳಿನಲ್ಲಿಯೂ, ಮಹಾವೈದ್ಯರು ಸಂಸ್ಕೃತದಲ್ಲಿಯೂ ಹೆಚ್ಚಿನ ಪಾಂಡಿತ್ಯವನ್ನು ಸಂಪಾದಿಸಿದರು. ಮಕ್ಕಳಿಗೆಲ್ಲಾ ಆರಂಭದೆಸೆಯ ಸಂಗೀತ ಪಾಠವೆಲ್ಲಾ ತಂದೆಯವರ ಹತ್ತಿರವೇ. ಸಂಸ್ಕೃತಿಯ ಬಲದಿಂದ ಇಬ್ಬರಿಗೂ ಕೇವಲ ಬಾಲ್ಯದಲ್ಲಿಯೇ ಸಂಗೀತದಲ್ಲಿ ಹೆಚ್ಚಿನ ಪರಿಶ್ರಮ ಉಂಟಾಯಿತು. ಆದರೆ ಮಹಾವೈದ್ಯರಿಗೆ ಅಧಿಕ ಶಾರೀರ ಸಂಪತ್ತು. ಅದ್ಭುತವಾದುದು. ಕೇವಲ ಬಾಲ್ಯದಲ್ಲಿಯೇ ಪಲ್ಲವಿ ಮತ್ತು ಸ್ವರವಿನ್ಯಾಸವನ್ನು ಮಾಡುವ ಶಕ್ತಿ ಇದ್ದಿತಂತೆ! ಸಹೋದರರಿಬ್ಬರಲ್ಲಿಯೂ, ಪರಸ್ಪರ ಗಾಢವಾದ ಪ್ರೇಮ. ಅದರಲ್ಲಿಯೂ ಹಿರಿಯವನಿಗೆ, ಕಿರಿಯ ಮಹಾವೈದ್ಯನಾಥನನ್ನು ಕಂಡರೆ ಅತಿರೇಕವಾದ ಪ್ರೇಮ. ಇದು ಮುಂದೆ ಅನೇಕ ಮನಃಕಷಾಯಗಳಿಗೂ ಕಾರಣವಾಯಿತು. ತಾನು ಹಿರಿಯನಾದರೂ ಗರ್ವವಿಲ್ಲದೆ ಕಿರಿಯ ವೈದ್ಯನಾಥನಿಗೆ ತಂಬೂರಿ ಶ್ರುತಿಯನ್ನು ಮೀಟುತ್ತಾ ಹಿಮ್ಮೇಳವಾಗಿ ಹಾಡುತ್ತಿದ್ದುದು ರಾಮಸ್ವಾಮಿ ಶಿವನಿಗೆ ಪದ್ಧತಿಯಾಗಿದ್ದಿತು. ತಮ್ಮನ ಒಂದೊಂದು ಸಂಗೀತ ಕಾರ್ಯಕ್ರಮವೂ ಅಣ್ಣನ ದೃಷ್ಟಿಯಲ್ಲಿ ಒಂದೊಂದು ದಿಗ್ವಿಜಯ! ತಮ್ಮನ ಜೀವಿತವನ್ನು 'ಮಹಾವೈದ್ಯನಾಥವಿಜಯ ಸಂಗ್ರಹ' ವೆಂದು ತಮಿಳಿನಲ್ಲಿ ಪ್ರಕಟಿಸಿದ್ದಾರೆ. ಇದರ ಅನೇಕ ವಿಷಯಗಳು ಏಕಪಕ್ಷೀಯವೆಂದು ಭಾವಿಸಲ್ಪಟ್ಟಿದ್ದರೂ ಮಹಾವೈದ್ಯನಾಥರ ಜೀವಿತದ ಮುಖ್ಯ ಘಟನೆಗಳು ಮತ್ತು ಅವರ ಸಹೋದರರ ಅಪಾರವಾದ ಪ್ರೇಮ ಇವುಗಳನ್ನು ತೋರಿಸುತ್ತದೆ.

ಮನೆಯಲ್ಲಿಯೇ ಬಾಲಪಾಠವಾದ ನಂತರ ಅಣ್ಣತಮ್ಮಂದಿರಿಬ್ಬರಿಗೂ ಮುಂದಿನ ಅಭ್ಯಾಸವು ಮಾನಂಬೂಚ್ಚಾವಡಿ ವೆಂಕಟಸುಬ್ಬಯ್ಯನವರ ಬಳಿ ಪ್ರಾರಂಭವಾಯಿತು. ವೆಂಕಟಸುಬ್ಬಯ್ಯನವರು ತ್ಯಾಗರಾಜರ ಬಂಧುಗಳೇ ಅಲ್ಲದೆ, ಅವರ ಪರಮಶಿಷ್ಯರೂ ಆಗಿದ್ದರು. ಇದರಿಂದ ಮಹಾವೈದ್ಯರು ತ್ಯಾಗರಾಜರ ಶಿಷ್ಯಪರಂಪರೆಗೆ ಸೇರಿದವರೆಂದು ಹೇಳಬೇಕಾಗಿಲ್ಲ. ಇಲ್ಲಿ ಇವರಿಗೆ ಸುಪ್ರಸಿದ್ಧ ವಾಗ್ಗೇಯಕಾರರಾದ, ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್ ಮತ್ತು ಪ್ರಸಿದ್ಧ ಪಿಟೀಲು ವಾದಕರಾಗಿದ್ದ ವೆಂಕೋಬರಾಯರು, ಶರಭಶಾಸ್ತ್ರಿಗಳು ಮುಂತಾದವರು ಸಹಪಾಠಿಗಳಾಗಿದ್ದರು. ಇಲ್ಲಿ ಸಂಗೀತದ ನಾನಾ ಅಂಗಗಳ ಸಾಧಕ ಮತ್ತು

ಕೃತಿರಚನೆಯ ಪದ್ಧತಿ ಇವುಗಳ ಪರಿಚಯವಾಯಿತು. ಇಲ್ಲಿಯೇ ಇವರಿಗೆ, ಕರ್ಣಾಟಕ ಸಂಗೀತದಲ್ಲಿ ಬಹುವಿವಾದಕ್ಕೆ ಕಾರಣಭೂತವಾದ 'ಸಂಗ್ರಹ ಚೂಡಾಮಣಿ' ಯ ಪರಿಚಯವೂ ಆಯಿತು. ಈ ಸಂಗ್ರಹ ಚೂಡಾಮಣಿಯ ವಿಷಯದಲ್ಲಿ ಇಲ್ಲಿ ಪ್ರಾಸಂಗಿಕವಾಗಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಮಹಾವೈದ್ಯನಾಥರ ಸಂಗೀತ ಸಂಪ್ರದಾಯ

ಸಂಗ್ರಹ ಚೂಡಾಮಣಿಯು ಸಂಸ್ಕೃತಭಾಷೆಯಲ್ಲಿರುವ ಗ್ರಂಥ. ಇದು ಹೆಚ್ಚು ಕಡಿಮೆ ಕರ್ಣಾಟಕ ಸಂಗೀತ ಪದ್ಧತಿಯಲ್ಲಿ ಇಂದು ಆಚರಣೆಯಲ್ಲಿರುವ ಮೇಳ ಮತ್ತು ಜನ್ಯರಾಗಪದ್ಧತಿ ಮತ್ತು ಅವುಗಳ ಸುಮಾರು 360 ಲಕ್ಷಣಗೀತಗಳನ್ನೊಳಗೊಂಡ ಗ್ರಂಥ. ಇದರಲ್ಲಿಯೂ ಮತ್ತು ಇದಕ್ಕೆ ಸ್ವಲ್ಪ ಹಿಂದಿನದಾದ ವೆಂಕಟಮಖಿಯವರದೇ ಇರಬಹುದೆಂದು ಹೇಳಲಾದ ಹೆಸರಿಲ್ಲದ 'ರಾಗಲಕ್ಷಣ' ಎಂಬ ಗ್ರಂಥದಲ್ಲಿ ಹೇಳಿರುವ ಮೇಳಪದ್ಧತಿಗೂ 'ಚತುರ್ದಂಡೀ ಪ್ರಕಾಶಿಕೆ' ಯಲ್ಲಿ ಹೇಳಲ್ಪಟ್ಟಿರುವ ಮೇಳ ಪದ್ಧತಿಗೂ ಸ್ವಲ್ಪ ವ್ಯತ್ಯಾಸಗಳಿವೆ. ಇದರ ವಿವರವನ್ನು ಮುಂದೆ 'ಮೇಳರಾಗಮಾಲಿಕೆ' ಯನ್ನು ಪ್ರಸ್ತಾಪಿಸುತ್ತಾ ಬರೆಯುತ್ತೇನೆ. ತ್ಯಾಗರಾಜರ ಕೃತಿಗಳು ಬಹುತೇಕ ಈ ಸಂಗ್ರಹ ಚೂಡಾಮಣಿಯ ಪದ್ಧತಿಯನ್ನೂ, ದೀಕ್ಷಿತರ ಕೃತಿಗಳು ಚತುರ್ದಂಡೀ ಪ್ರಕಾಶಿಕೆಯ ಪದ್ಧತಿಯನ್ನೂ ಅನುಸರಿಸಿದೆ. ವೆಂಕಟಮಖಿಯ ಸಂಪ್ರದಾಯಕ್ಕೆ ವಿರುದ್ಧವಾಗಿದ್ದ ಪ್ರಯುಕ್ತ ಈ ಸಂಗ್ರಹ ಚೂಡಾಮಣಿಯು ಪ್ರಕಾಶಕ್ಕೆ ಬರುತ್ತಲೆ ಬಹುವಿಧವಾದ ಖಂಡನ, ಮಂಡನ ಮುಂತಾದ ವಿವಾದಗಳಿಗೆ ಕಾರಣವಾಯಿತು. ಇದಲ್ಲದೆ ಇದೇ ಪದ್ಧತಿಯನ್ನನುಸರಿಸಿ, 'ಸಂಗೀತ ಸಾರಸಂಗ್ರಹಮು' ಎಂಬ ತೆಲುಗು ಭಾಷಾ ಪುಸ್ತಕವೂ ಪ್ರಕಟವಾಗಿದೆ. ಆದರೆ ಮಹಾವೈದ್ಯನಾಥರ ವಿದ್ಯಾರ್ಥಿ ದೆಸೆಯಲ್ಲಿ ಸಂಗ್ರಹಚೂಡಾಮಣಿಯು ಇನ್ನೂ ಗೂಢವಾಗಿಯೇ ಇದ್ದಿತು. ಮಾನಂಬೂಚ್ಚಾವಡಿ ವೆಂಕಟಸುಬ್ಬಯ್ಯನವರ ಹತ್ತಿರ ಅದರ ಒಂದು ಹಸ್ತಪ್ರತಿ ಇದ್ದು ಅದರಿಂದ ಆಗಾಗ್ಗೆ, ಪಟ್ಟಣಂ ಸುಬ್ರಹ್ಮಣ್ಯಯ್ಯರ್ ಮತ್ತು ಮಹಾವೈದ್ಯರೂ, ಸ್ವಂತಕ್ಕೆ ಬರೆದಿಟ್ಟುಕೊಳ್ಳುತ್ತಿದ್ದರೆಂದು ಹೇಳಲಾಗಿದೆ.

ಸಭೆಯಲ್ಲಿ ಮಹಾವೈದ್ಯನಾಥರ ಪ್ರಥಮ ಸಂಗೀತ ಪ್ರದರ್ಶನವು ಅವರ ಹತ್ತನೆಯ ವಯಸ್ಸಿನಲ್ಲಿ! ಕೇವಲ ಬಾಲ್ಯದಿಂದಲೇ ಸಂಗೀತದಲ್ಲಿ ಅದ್ಭುತ ಪ್ರೌಢಿಮೆಯನ್ನು ಪಡೆದಿದ್ದ ಮಹಾವೈದ್ಯನಾಥರನ್ನು ಪುದುಕೋಟೆಯ ಅಧಿಪತಿ ರಾಮಚಂದ್ರ ತೊಂಡೈಮಾನ್ ರಾಜನು ಆಹ್ವಾನಿಸಿ ತನ್ನ ಸಭೆಯಲ್ಲಿ ಹಾಡಿಸಿದನು. ಅಲ್ಲಿ ನೆರೆದಿದ್ದ ಪ್ರಸಿದ್ಧ ವೀಣೆಸುಬ್ಬು-ಕುಟ್ಟಿ ಐಯ್ಯರ್ ಮತ್ತು ಸುಬ್ಬರಾಯ ಅಯ್ಯರ್ ಮುಂತಾದ ಸಂಗೀತ ವಿದ್ವಾಂಸರೇ ಅಲ್ಲದೆ ಅನೇಕ ರಸಿಕ ಸಭಾಸದರೂ ಬಾಲಕನ ದಿವ್ಯ ಸಂಗೀತಕ್ಕೆ ಬೆರಗಾಗಿ, ಮಹಾವೈದ್ಯರು ರಾಜನಿಂದ ಅನೇಕವಾದ ಸನ್ಮಾನ ಬಹುಮಾನಗಳನ್ನು ಪಡೆದರು. ಮುಂದೆ ಹೀಗೆಯೇ ಮಧುರೆ, ರಾಮನಾಥಪುರ ಮುಂತಾದೆಡೆಗಳಿಗೆಲ್ಲಾ ಹೋಗಿ ಇವರ ಪ್ರತಿಭೆಗೆ ಮೆಚ್ಚಿ ಬಂದ ನಾನಾ ಬಹುಮಾನಗಳನ್ನು ಸಂಗ್ರಹಿಸಿಬಂದರು. ರಾಮನಾಥಪುರದಲ್ಲಿ (ರಾಮನಾಡ್) ಅಲ್ಲಿಯ ದೊರೆ,

ಮುತ್ತುರಾಮಲಿಂಗ ಸೇತುಪತಿಯು ಇವರ ಸಂಗೀತ ಪ್ರತಿಭೆಗೂ, ಮತ್ತು ತಮಿಳು ಭಾಷಾಜ್ಞಾನಕ್ಕೂ ಮನಸೋತು ನಾನಾ ಬಹುಮಾನಗಳ ಜತೆಗೆ ಕವಿಕುಂಜರ ಭಾರತಿಯವರ ಕಂದಪುರಾಣದ ಪ್ರತಿಯನ್ನು ಕೊಟ್ಟರು. ಅಂದಿನಿಂದಾಚೆಗೆ ಮಹಾವೈದ್ಯರು ತಮಿಳು ವ್ಯಾಸಂಗಕ್ಕೆ ಹೆಚ್ಚು ಮಮತೆಕೊಟ್ಟು ತಮ್ಮ ಅಣ್ಣನವರ ಹತ್ತಿರ ವ್ಯಾಸಂಗ ಮಾಡಿದರೆಂದು ತಿಳಿದುಬರುತ್ತದೆ. ಮುಂದೆ ಹೀಗೆಯೇ, ಎಟ್ಟಿಯಾಪುರ, ತಿರುಚ್ಚೆಂದೂರ್, ತಿನ್ನವೆಲ್ಲಿ ಮುಂತಾದೆಡೆಗಳಲೆಲ್ಲಾ ಹೋಗಿ ನಾನಾ ಬಹುಮಾನಿತರಾಗಿ ಹಿಂದಿರುಗಿದರು. ಇನ್ನು ಮುಂದೆ ಇವರ ಜೀವನದಲ್ಲಿನ ಎರಡು ಮುಖ್ಯ ಘಟನೆಗಳು ಜರುಗಿದವು. ಮೊದಲನೆಯ ಪೆರಿಯ ವೈತಿ ಮತ್ತು ಚಿನ್ನವೈತಿ ಇವರುಗಳ ಜತೆಯ ಮತ್ತು ಎರಡನೆಯ ಕೊಯಮತ್ತೂರು ರಾಘವಯ್ಯರ್‌ರವರೊಡನೆ ನಡೆದ ಸ್ಪರ್ಧೆಗಳೇ ಅವು.

ವೈದ್ಯನಾಥರ ಸಂಗೀತ ಸ್ಪರ್ಧೆಗಳು

ನಮಗೆ ತಿಳಿದಂತೆ ಹಿಂದೆ ರಾಜಾಸ್ಥಾನಗಳಲ್ಲಿ ವಾಕ್ಯಾರ್ಥ ಚರ್ಚೆ ಸ್ಪರ್ಧೆ, ಶತಾವಧಾನ ಮುಂತಾದುವುಗಳಲ್ಲಿ ಜಯಶೀಲರಾದ ವಿದ್ವಾಂಸರುಗಳಿಗೆ ಬಹುಮಾನಗಳು, ಇವೆಲ್ಲಾ ನಡೆಯುತ್ತಿದ್ದುವು. ಇಂಥ ಸ್ಪರ್ಧೆಯು ಸಂಗೀತದಲ್ಲಿಯೂ ಇದ್ದಿತು. ಸಂಗೀತದ ಇತಿಹಾಸದಲ್ಲಿಯೇ ದೆಹಲಿಯಲ್ಲಿ ಸುಲ್ತಾನ್ ಅಲ್ಲಾವುದ್ದೀನ್ ಖಿಲ್ಜಿಯ ಆಸ್ಥಾನದಲ್ಲಿ ದಾಕ್ಷಿಣಾತ್ಯ ಗೋಪಾಲನಾಯಕನಿಗೂ ಆಸ್ಥಾನ ವಿದ್ವಾಂಸ, ಅಮೀರ್ ಖುಸ್ರುವಿಗೂ ನಡೆದ ಸ್ಪರ್ಧೆಯೂ, ಶತಮಾನಗಳ ಅನಂತರ ಬೊಬ್ಬಲಿ ಕೇಶವಯ್ಯ ಮತ್ತು ಶ್ಯಾಮಾಶಾಸ್ತ್ರಿಗಳಿಗೆ ನಡೆದ ಪಂದ್ಯವೂ ಬಹುಪ್ರಸಿದ್ಧವಾಗಿವೆ. ಈ ಸ್ಪರ್ಧೆಗಳು ನಾನಾ ರೂಪದಲ್ಲಿ ನಡೆಯುತ್ತಿದ್ದುವು. ಅದರಲ್ಲಿ ಒಬ್ಬ ವಿದ್ವಾಂಸರು ಹಾಡಿದುದನ್ನು ಇನ್ನೊಬ್ಬರು ಅವರಿಗಿಂತ ಉತ್ತಮವಾಗಿ ಹಾಡುವುದು. ಮೇಲಿನೆರಡು ಸ್ಪರ್ಧೆಗಳೂ ಈ ರೀತಿಯವು. ನಿಯಮಿತಕಾಲದಲ್ಲಿ ಕೃತಿರಚನೆ. ಅನೇಕ ರಾಜಾಸ್ಥಾನಗಳಲ್ಲಿದ್ದ ವಾಗ್ಗೇಯಕಾರರು ಈ ರೀತಿಯಲ್ಲಿ ಕೃತಿರಚನೆ ಮಾಡಿದ್ದಾರೆ. ಸ್ವ. ಸುಬ್ಬರಾಮ ದೀಕ್ಷಿತರು ತಮ್ಮ ಜೀವಿತದಲ್ಲಾದ ಒಂದು ಅನುಭವವನ್ನು ಈ ರೀತಿ ಹೇಳಿದ್ದಾರೆ. 'ನನ್ನ 17ನೆಯ ವಯಸ್ಸಿನಲ್ಲಿ ಶ್ರೀ ಕಾರ್ತಿಕೇಯ ಸ್ವಾಮಿಯ ಮೇಲೆ ದರಬಾರ್ ರಾಗ ಮತ್ತು ಅಟತಾಳದ ಒಂದು ತಾನವರ್ಣವನ್ನು ರಚಿಸಿ ಜಗದ್ವೀರ ರಾಮವೆಂಕಟೇಶ್ವರ ಎಟ್ಟಪ್ಪ ಮಹಾರಾಜರ ಸಮ್ಮುಖದಲ್ಲಿ ಹಾಡಿದೆ. ಸಭೆಯಲ್ಲಿ ಕೆಲವರು ಮಗನು ಮುಂದಕ್ಕೆ ಬರಲೆಂದು ಇವನ ತಂದೆಯವರೇ ಏಕೆ ಈ ವರ್ಣವನ್ನು ರಚಿಸಿರಬಾರದೆಂದು ಹೇಳಿದರು. ಅದಕ್ಕೆ ರಾಜರು ಒಂದು ದಿನ ನನ್ನನ್ನು ಕರೆದು "ಇಗೋ ನಾನು ಈಗ ಹೊರಟು ಇನ್ನು ಒಂದು ಘಂಟೆಯೊಳಗೆ ಬರುತ್ತೇನೆ. ಅಷ್ಟರೊಳಗೆ ಇಲ್ಲಿಯೇ ಇದ್ದು ಯಮುನಾರಾಗದಲ್ಲಿ ಒಂದು ಜತಿ ಸ್ವರ ರಚನೆ ಮಾಡಬೇಕು. ಅದರಲ್ಲಿ ಪಲ್ಲವಿ, ಅನುಪಲ್ಲವಿಗಳು ಸ್ವರ ರೂಪದಲ್ಲಿದ್ದು, ಮುಂದೆ ಧೈವತವನ್ನು ಎಡುಪ್ಪಾಗುಳ್ಳ ಸ್ವರವಿದ್ದು ಅನಂತರದ ಸ್ವರದಲ್ಲಿ ಕ್ರಮವಾಗಿ ಮೊದಲನೇ ಎರಡನೇ, ಮೂರನೇ ಕಾಲ, ಅನಂತರ ಮೂರನೇ, ಎರಡನೇ ಮತ್ತು ಮೊದಲನೇ ಕಾಲಗಳಲ್ಲಿ ಕೊನೆಯ ಮುಕ್ತಾಯವನ್ನು ಸೇರಿಸಬೇಕು" ಎಂದು ಹೇಳಿದರು. ದೊಡ್ಡವರ ಆಶೀರ್ವಾದ ಬಲದಿಂದ

ರಾಜರು ಬರಲು ಒಂದು ಘಳಿಗೆಗೆ ಮೊದಲೇ ನಾನು ಮುಗಿಸಿದ್ದೆ. ಅದನ್ನು ಕೇಳಿ ಆನಂದಿಸಿ ರಾಜರು ಶಾಲುಜೋಡಿ ಮತ್ತು 10 ಸವರನ್‌ಗಳನ್ನೂ ಕೊಟ್ಟು ಬಹುಮಾನಿಸಿದರು ಎಂದು ಬರೆದಿದ್ದಾರೆ. ಇದು ನಮಗೆ ಈಗ ಆಶ್ಚರ್ಯವಾಗಿ ಕಂಡುಬಂದರೂ, ಇದು ನಡೆದು ಇನ್ನೂ 97ವರ್ಷಗಳು ಮಾತ್ರ ಕಳೆದಿವೆ. ಮಹಾವೈದ್ಯನಾಥರು ಭಾಗವಹಿಸಿದ ಸ್ಪರ್ಧೆಗಳು ಮೊದಲನೆಯ ಗುಂಪಿಗೆ ಸೇರಿದುವು.

ವೈತಿಗಳ ಜತೆಯ ಸ್ಪರ್ಧೆ

ಈ ಎರಡು ಸ್ಪರ್ಧೆಗಳಲ್ಲಿ ಮೊದಲನೆಯದು ಹಿಂದೆಯೇ ಹೇಳಿದಂತೆ ಪೆರಿಯ ವೈತಿ ಮತ್ತು ಚಿನ್ನವೈತಿ ಎಂಬ ಇಬ್ಬರು ಪ್ರಖ್ಯಾತ ವಿದ್ವಾಂಸರ ಮತ್ತು ಇತರ ವಿದ್ವಾಂಸರ ಜತೆಯಲ್ಲಿ ನಡೆದುದು. ನಡೆದ ಸ್ಥಳ ತಿನ್ನವೆಲ್ಲಿಗೆ 19ಮೈಲಿ ದೂರದಲ್ಲಿರುವ ಕಲ್ಲಿಡೈಕುರಿಚ್ಚಿ ಎಂಬ ಸ್ಥಳದಲ್ಲಿ. ಸ್ಪರ್ಧೆಯನ್ನೇರ್ಪಡಿಸಿದವರು ದಕ್ಷಿಣದಲ್ಲಿ ಪ್ರಸಿದ್ಧಿಯಾದ ಶೈವಮಠವಾದ ತಿರುವಾಡುತುರೈ ಮಠದ ಪಂಡಾರಸನ್ನಿಧಿ ಸುಬ್ರಹ್ಮಣ್ಯ ದೇಶಿಕರ್‌ರವರು (ಇದು ದಕ್ಷಿಣದ ಮಠಗಳಲ್ಲೆಲ್ಲಾ ಹೆಚ್ಚು ಪ್ರಭಾವಯುತವಾದುದು. 1947ನೇ ಆಗಸ್ಟ್ 15ರಲ್ಲಿ ನವಭಾರತ ಸ್ಥಾಪನೆಯ ಸಂದರ್ಭದಲ್ಲಿ ಪ್ರಧಾನಿ ನೆಹರೂರವರಿಗೆ ಒಂದು ರತ್ನಾಭರಣ ಖಚಿತವಾದ ರಾಜದಂಡ ಮತ್ತು ಇತರ ಉಡುಗೊರೆಗಳನ್ನು ಈ ಮಠದಿಂದ ಕಳುಹಿಸಿ ಕೊಡಲಾಯಿತು) ಈ ಸ್ಪರ್ಧೆ ನಡೆದಾಗ ಮಹಾವೈದ್ಯರಿಗೆ ಕೇವಲ 21 ವಯಸ್ಸು. ಪ್ರತಿಸ್ಪರ್ಧಿಗಳಿಬ್ಬರೂ ಶಿವಗಂಗಾ ಸಂಸ್ಥಾನದವರು ಬಹು ಪ್ರತಿಭಾನ್ವಿತರೂ, ಸಂಗೀತ ಕಲೆಯಲ್ಲಿ ಅರಿತು ನುರಿತ ವಿದ್ವಾಂಸರೂ ಆಗಿದ್ದರು. ಇವರಲ್ಲಿ ಪೆರಿಯ ವೈತಿ (ವೈತಿ ಎಂದರೆ ವೈದ್ಯನಾಥ ಎಂಬುದರ ಹ್ರಸ್ವರೂಪ ಇಬ್ಬರ ಹೆಸರೂ ವೈದ್ಯನಾಥ ಅಯ್ಯರ್ ಎಂದು. ಒಬ್ಬರಿಗೊಬ್ಬರಿಗೆ ವ್ಯತ್ಯಾಸಕ್ಕೋಸ್ಕರ ಪೆರಿಯವೈತಿ ಮತ್ತು ಚಿನ್ನವೈತಿ ಎಂದು ಕರೆಯುತ್ತಿದ್ದರು) ಎಂಬುವವರಿಗೆ ಧಾರಾಳವಾದ ಶಾರೀರ ಸಂಪತ್ತಿದ್ದಿತು. ಇವರ ಕಂಠನಾದಕ್ಕೆ ತಂಬೂರಿಯು ಶ್ರುತಿ ಸಾಲದೆ ಓಲಗದ 'ಮೋರಿ' ಶೃತಿಯನ್ನು ಉಪಯೋಗಿಸಬೇಕಾಗಿದ್ದಿತಂತೆ! ಏಳೆಂಟುಸಾವಿರ ಜನ ಯಾವ ಅಡಚಣೆಯೂ ಇಲ್ಲದೆ ಇವರ ಸಂಗೀತವನ್ನು ಕೇಳಬಹುದಾಗಿದ್ದಿತಂತೆ! ಇಂಥವರ ಜತೆಯಲ್ಲಿ ಸ್ಪರ್ಧಿಸುವುದು ಅದೂ ಈ ಚಿಕ್ಕವಯಸ್ಸಿನ ಸಂಗೀತಗಾರನ ತಲೆಹರಟೆ (Upstart) ಎಂದು ಕಾಣಬಹುದು. ಆದರೆ ಸ್ಪರ್ಧೆಯ ಫಲಿತಾಂಶವು ಆ ಭಾವನೆಗಳನ್ನು ದೂರಮಾಡುವುದು.

ಈ ಸ್ಪರ್ಧೆಯು ಸುಬ್ರಹ್ಮಣ್ಯ ದೇಶಿಕರ ನೇತೃತ್ವದಲ್ಲಿಯೇ ನಡೆಯಿತು. ತೀರ್ಪುಕೊಡಲು ವೀಣೆ ಚಿನ್ನಯ್ಯ ಭಾಗವತರೆಂಬುವವರು ನೇಮಿತರಾದರು. ಮಹಾವೈದ್ಯರಿಗೆ ಅಣ್ಣ ರಾಮಸ್ವಾಮಿ ಶಿವನ್ ತಂಬೂರಿಯನ್ನು ಮೀಟಲಾರಂಭಿಸಿದರು. ಸ್ಪರ್ಧೆಯ ಕಾರ್ಯಕ್ರಮದ ಪ್ರಕಾರ ಒಂದು ರಾಗವನ್ನು ಎಲ್ಲಾ ವಿದ್ವಾಂಸರೂ ಕ್ರಮವಾಗಿ ಹಾಡುವುದು. ಅದನ್ನು ಎಲ್ಲರಿಗಿಂತ ಚೆನ್ನಾಗಿ ಹಾಡಿದವರು ವಿಜಯಿಗಳು. ಮೊದಲು ಚಿನ್ನ ವೈತಿಯವರು ನಾಟರಾಗವನ್ನು ಹಾಡಿದರು. ನಾಟವು ಘನರಾಗ. ಅದರಲ್ಲಿಯೂ ತಾನಾಲಾಪಕ್ಕೇ ಸೃಷ್ಟಿಯಾದಂತಿರುವ ರಾಗ. ಅದರಲ್ಲಿಯೂ

ನುಡಿಕಾರವಿರುವ ಗಂಡು ಶಾರೀರದಲ್ಲಿ ತಾನಗಳೂ, ಸಂಗತಿಗಳೂ, ಜಲಪಾತದಂತೆ ಧುಮುಕುವುವು. ವೈತಿಯವರು ತಮ್ಮ ಅನುಭವದಲ್ಲಿದ್ದ ಬಗೆಯ ಸಂಗತಿಗಳನ್ನೆಲ್ಲಾ ಉಪಯೋಗಿಸಿ ತಾನ, ಆಲಾಪಗಳನ್ನು ಮಾಡಿದರು. ಮೊದಲೇ ಗೌಳ ಶಾರೀರ. ಅದರಲ್ಲಿಯೂ ನಾದವು ಅದ್ವಿತೀಯವಾದುದು. ಸಭಾಸದರು ಆಶ್ಚರ್ಯಚಕಿತರಾಗಿ ಸ್ತಬ್ಧರಾಗಿದ್ದರು. ಆಲಾಪನೆಯು ಮುಗಿದ ಕೂಡಲೇ, ''ಹುಡುಗನು ಅನ್ಯಾಯವಾಗಿ ಸೋತನೆಂದು'' ಪರಿತಪಿಸಿದರು. ಆದರೆ ವೈದ್ಯನಾಥರು ರಾಗವನ್ನು ನಿಲ್ಲಿಸಿದ ಜಾಗದಿಂದ ಪ್ರಾರಂಭಿಸಿ ತಾನ, ಆಲಾಪಗಳನ್ನು ಹಾಡಲಾರಂಭಿಸಿದರು. ಚಿನ್ನ ವೈತಿಯವರದು ಸಾಧಕದಿಂದ ಪಕ್ವವಾದ ನಾದಪೂರಿತವಾದ ಶಾರೀರ. ವೈದ್ಯನಾಥರದು ಆ ಮಹಾನಾದವಿಲ್ಲದಿದ್ದರೂ ಇಂಪಾದ ಸ್ವರ ಮತ್ತು ಪ್ರಕೃತಿಯ ವರವಾದ ಮೂರುಸ್ಥಾಯಿಯಲ್ಲಿಯೂ. ಷಟ್‌ಕಾಲದಲ್ಲಿಯೂ ಲೀಲಾಜಾಲವಾಗಿ ಓಡುವ ನುಡಿಕಾರ, ರಂಜನೀಯವಾದ ರಾಗಸಂಚಾರ, ಒಬ್ಬರದು, ಜಲಪಾತ, ಇನ್ನೊಬ್ಬರದು ಭೋರ್ಗರೆಯುವ ತುಂಬುಪ್ರವಾಹ. ಕೇಳುತ್ತಿದ್ದವರು ದಿಗ್ಭ್ರಮೆ ಹೊಂದಿದರು. ಇಂದಿನ ಸ್ಪರ್ಧೆಯಲ್ಲಿ ಸೋಲುಗೆಲವುಗಳಿಲ್ಲವೆಂದುಕೊಂಡರು. ಮುಂದಿನದು ವೈದ್ಯನಾಥರ ಸರದಿ. ಸೂಚನೆಯೇನನ್ನೂ ಕೊಡದೆ ಒಂದು ರಾಗವನ್ನು ಹಾಡಿದರು. ರಾಗವೂ ಹೊಸದು, ಅದರ ರಂಜನೀಯವಾದ ನಾನಾ ಸಂಚಾರಗಳು, ಸ್ವರಸಮೂಹಗಳು ಎಲ್ಲವೂ ಹೊಸದು. ಕೇಳುತ್ತಿದ್ದವರೆಲ್ಲಾ ದಿಗ್ಭ್ರಾಂತರಾದರು. ಒಂದು ಘಂಟೆಯನಂತರ ವೈದ್ಯನಾಥರು ನಿಲ್ಲಿಸಿ ಪೆರಿಯವೈತಿಯವರಿಗೆ ಬಿಟ್ಟರು. ಪೆರಿಯವೈತಿಯವರು ದಿಙ್ಮೂಢರಾದರು. ಆ ಬಗೆಯಲ್ಲಿ ರಾಗವನ್ನು ಹಾಡಲಾಗಲಿಲ್ಲ. ಸಭಾಸದರೆಲ್ಲಾ ಕುತೂಹಲದಿಂದ ರಾಗವಾವುದೆಂಬುದನ್ನು ಕೇಳಿದರು. ವೈದ್ಯನಾಥರು 'ಚಕ್ರವಾಕ' ವೆಂದು ಹೇಳಿದರು. ಪ್ರತಿಸ್ಪರ್ಧಿಗಳಿಗೆ ಸ್ವಲ್ಪ ಅನುಕೂಲಿಸುವಂತೆ ರಾಗವಿವರ ಮತ್ತು ಛಾಯೆಗಳನ್ನು ಹಾಡಬೇಕೆಂದು ಸಭಿಕರು ಸೂಚಿಸಿದಾಗ ವೈದ್ಯನಾಥರು ''ದೊಡ್ಡವಿದ್ವಾಂಸರಿಗೆ ಪಾಠ ಹೇಳಿಕೊಡಲು ಸಭೆಯು ಸರಿಯಾದ ಜಾಗವಲ್ಲ''ವೆಂದು ಹೇಳಿದರಂತೆ! ಸರಿ, ಮುಂದಿನದು ಕಂಡೇ ಇದೆ. ಸಭಿಕರ ಪ್ರಶಂಸೆ, ಅಪಾರ ಆನಂದಿತರಾದ ಶಿವಭಕ್ತ ಪಂಡಾರಂ ಸುಬ್ರಹ್ಮಣ್ಯ ದೇಶಿಕರು ಅಲ್ಲಿನ ನಾನಾ ವಿದ್ವಾಂಸರ ಅನುಮತಿಯ ಪ್ರಕಾರ ಪ್ರತಿಭಾನ್ವಿತ, ಶಿವೋಪಾಸಕ ವೈದ್ಯನಾಥರಿಗೆ ನಾನಾ ಬಹುಮಾನಗಳನ್ನಿತ್ತು ಜತೆಗೆ 'ಮಹಾ' ಎಂಬ ಬಿರುದನ್ನಿತ್ತರು. ಅಂದಿನಿಂದ ವೈದ್ಯನಾಥ ಶಿವನ್‌ರವರನ್ನು 'ಮಹಾವೈದ್ಯನಾಥ ಶಿವನ್' ಅಥವಾ ಮಹಾವೈದ್ಯನಾಥ ಅಯ್ಯರ್ ಎಂದು ಕರೆಯಲಾರಂಭವಾಯಿತು.

ಸ್ಪರ್ಧೆಯ ವಿಮರ್ಶೆ

ಈ ಸ್ಪರ್ಧೆಯ ಕಾವು ಆರಿ ತಣ್ಣಗಾದ ಇಷ್ಟು ವರ್ಷಗಳ ನಂತರ ಅದನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿದಲ್ಲಿ ಕೆಲವು ಸಂದೇಹಗಳುಂಟಾಗುವುದು ಸಹಜ. ಪೆರಿಯ ವೈತಿಯವರೂ ಚಿನ್ನ ವೈತಿಯವರೂ ಬಹುದೊಡ್ಡ ವಿದ್ವಾಂಸರುಗಳು. ಸಂಗೀತದಲ್ಲಿ ಅಪಾರವಾದ ಜ್ಞಾನ ಪಡೆದಿದ್ದವರು. ಇಂತಹವರು ಇಷ್ಟು ಸುಲಭವಾಗಿ ಪರಾಜಿತರಾಗಲು ಸಾಧ್ಯವೇ ಎಂಬ

ಸಂದೇಹ ಬರುವುದು ಸಹಜ. ಆದರೆ ಅಂದಿನ ಸ್ಥಿತಿಗತಿಗಳನ್ನು ಪರಿಶೀಲಿಸಿದಲ್ಲಿ ಇದು ಅಷ್ಟು ಆಶ್ಚರ್ಯವಾಗುವುದಿಲ್ಲ. ವೈತಿಗಳಿಬ್ಬರೂ 'ಚತುರ್ದಂಡೀ ಪ್ರಕಾಶಿಕೆ'ಯ ಸಂಪ್ರದಾಯದಲ್ಲಿ ಸಂಗೀತಾಭ್ಯಾಸ ಮಾಡಿದವರು. ಆ ಸಂಪ್ರದಾಯದ ಮೇಳ ಪದ್ಧತಿಯಲ್ಲಿ 'ಚಕ್ರವಾಕ' ವೆಂಬ ರಾಗವಿಲ್ಲ. ಅದಕ್ಕೆ ಸಮಾನವಾದ ರಾಗವು 'ತೋಯವೇಗವಾಹಿನಿ'. ಚಕ್ರವಾಕವು ನಾನು ಹಿಂದೆ ಹೇಳಿದ 'ರಾಗಲಕ್ಷಣ' ಮತ್ತು 'ಸಂಗ್ರಹ ಚೂಡಾಮಣಿ' ಈ ಗ್ರಂಥಗಳಲ್ಲಿ ಕಂಡುಬರುವ 16ನೇ ಮೇಳರಾಗ. ಈ ಸ್ಪರ್ಧೆಯು ನಡೆದ ಸಮಯದಲ್ಲಿ ಅವು ಇನ್ನೂ ಗುಪ್ತವಾಗಿಯೇ ಇದ್ದು ಅನೇಕರಿಗೆ ಅವುಗಳ ಅರಿವೇ ಇರಲಿಲ್ಲ. ಆದ್ದರಿಂದ ಮಹಾವೈದ್ಯರು ಗುಟ್ಟಾಗಿ ಅಭ್ಯಾಸ ಮಾಡಿದ್ದ ಈ ರಾಗವನ್ನು ಹಠಾತ್ತಾಗಿ ಹಾಡಿ ಈ ಹಿರಿಯ ವಿದ್ವಾಂಸರುಗಳನ್ನು ತಬ್ಬಿಬ್ಬಾಗುವಂತೆ ಮಾಡಿದರು. ಆದರೆ ಇಷ್ಟು ಪರಿಶ್ರಮವಿದ್ದ ವಿದ್ವಾಂಸರಿಗೆ ರಾಗಚ್ಛಾಯೆಯನ್ನನುಸರಿಸಿ ಹಾಡುವುದು ಕಷ್ಟವಾಯಿತೇ ಎಂದು ಸಂದೇಹಿಸಬಹುದು. ಆರೋಹಣ ಅವರೋಹಣಗಳಲ್ಲಿ ವೇಗವಾಹಿನಿ ಮತ್ತು ಚಕ್ರವಾಕಗಳಿಗೆ ಅಷ್ಟು ವ್ಯತ್ಯಾಸವೇನಿಲ್ಲ. ಆದರೆ ಅದು ಹಾಡುವ ಕ್ರಮದಲ್ಲಿದೆ. ವೇಗವಾಹಿನಿಯಲ್ಲಿ ಸಂಚಾರವು ಸಮಾ$_1$ಗ$_2$ಮ ಪದ$_2$ನಿ$_1$ಧಮಪ$_2$, ಸಮಗಮ ಪಧನಿಸ ಸನಿಧಪಮಗ$_2$ರಿ$_1$ಸ ಈ ರೀತಿಯಲ್ಲಿ ಬರುವುದು. ಆದರೆ ಚಕ್ರವಾಕದಲ್ಲಿ ಸರಾಗವಾಗಿ ಸರಿ$_1$ಗ$_2$ಮ$_1$ ಪದ$_2$ನಿ$_1$ಸ ಸನಿಧಪಮಗರಿಸ ಈ ರೀತಿಯಲ್ಲಿ ಬರುವುದು. ಈ ಸ್ವರ ಸಮೂಹದಲ್ಲಿ ಅಷ್ಟೇನೂ ವ್ಯತ್ಯಾಸವು ಕಾಣಬರದಿದ್ದರೂ ಹಾಡುವ ಶೈಲಿಯಲ್ಲಿ ಬಹುವ್ಯತ್ಯಾಸವು ಕಂಡುಬರುವುದು. ಉದಾಹರಣೆಗೆ ಹಂಸಾನಂದಿ ರಾಗವನ್ನು ಹಾಡಿದನಂತರ ಎದುರಾಳಿಗಳು ಹಿಂದೂಸ್ಥಾನಿ ಪೂರಿಯಾ ರಾಗವನ್ನು ಹಾಡಿದರೆ ಅದನ್ನು ಹಿಡಿದು ಹಾಡುವುದು ಕಷ್ಟ. ದಿಗ್ಭ್ರಮೆಯಾಗುವುದು. ಎರಡರದೂ ಆರೋಹಣ ಅವರೋಹಣಗಳು ಒಂದೇ. ಆದರೆ ಹಾಡುವ ಶೈಲಿ ಬೇರೆ ಅಥವಾ ಸಾವೇರಿ ಹಾಡುವವರ ಮುಂದೆ ತಕ್ಷಣ ಮಲಹರಿರಾಗವನ್ನು ಹಾಡಿದರೆ ಅವರಿಗೆ ಅನುಸರಿಸುವುದು ಬಹುಕಷ್ಟ ಅಷ್ಟೇಕೆ ! ಚಕ್ರವಾಕವನ್ನು ಹಾಡಿದನಂತರ ಇದೇ ವೇಗವಾಹಿನಿಯನ್ನು ಹಾಡಿದರೆ ಹಿಡಿದು ಹಾಡುವುದು ಕಷ್ಟವಾಗುವುದು. ಆದ್ದರಿಂದ ಸಂಗೀತಶಾಸ್ತ್ರಜ್ಞಾನದಲ್ಲಿ ಕಡಿಮೆ ಏನು ಇಲ್ಲದಿದ್ದ ಇಬ್ಬರು ವೈತಿಗಳಿಗೂ ಆ ಕಾಲದಲ್ಲಿ ಯಾರಿಗೂ ಅರಿವಿಲ್ಲದಿದ್ದ ಗ್ರಂಥ ಮತ್ತು ಅದರ ಸಂಪ್ರದಾಯದ ರಾಗ ಇವುಗಳನ್ನು ಹಾಡಿ 'ವಿಜಯಿ'ಗಳಾದುದು ಅಷ್ಟು ಸರಿಯೇ, ಸಭಿಕರು ಅದನ್ನು ಒಪ್ಪಿದರೇ ಎಂಬ ಸಂದೇಹವು ಬರಬಹುದು. ಆದರೆ ಆದಿನ ಸಭಿಕರು ಇದಾವುದನ್ನೂ ಗಣನೆಗೆ ತಂದುಕೊಂಡಿಲ್ಲವೆಂದು ಹೇಳಬಹುದು. ವೈದ್ಯನಾಥರ ಎಳೆಯವಯಸ್ಸು, ಕಳಾಪೂರ್ಣವ್ಯಕ್ತಿತ್ವ, ಅದ್ಭುತ ಸಂಗೀತ ಕಲಾಪ್ರದರ್ಶನ ಇವು ಸಭಾಸದರ ಮನಸ್ಸನ್ನೂ ಇದರ ಜತೆಗೆ ಇವರ ಅಪಾರವಾದ ಶಿವಭಕ್ತಿಯೂ ಪಂಡಾರ ಸನ್ನಿಧಿಯವರ ಮಮತೆಯನ್ನೂ ಆಕರ್ಷಿಸಿ ಈ ನಾನಾ ಬಹುಮಾನಗಳು ಮತ್ತು 'ಮಹಾ' ಬಿರುದನ್ನೂ ಸಂಪಾದಿಸಿಕೊಟ್ಟಿತು. ಅಂದಿನಿಂದಾಚೆಗೆ ತಿರುವಾಡುತುರೈ ಮಠದ ವಾರ್ಷಿಕ ಗುರುಪೂಜೆಯಲ್ಲೆಲ್ಲಾ ಮಹಾವೈದ್ಯನಾಥರ ಸಂಗೀತವು ಮಾಮೂಲಾಗಿ ನಡೆಯುವ ಪದ್ಧತಿ ಇದ್ದಿತು. ಇವರ ಎರಡನೆಯ ಸ್ಪರ್ಧೆಯಲ್ಲಿ ಇವರಿಗೆ

ಸಮನಾದ ಎದುರಾಳಿಯು ದೊರಕಿ, ಇಂತಹ 'ಸುಲಭ ವಿಜಯ, ಸಂಪಾದನೆಯಾಗಲಿಲ್ಲ. ಆ ಸ್ಪರ್ಧೆಯು ನಡೆದುದು ತಿರುವಾಂಕೂರಿನಲ್ಲಿ ಅಲ್ಲಿಯ ರಾಜರ ಸಮ್ಮುಖದಲ್ಲಿ. ಇವರ ಪ್ರತಿಸ್ಪರ್ಧಿ ಪ್ರಸಿದ್ಧ ಗಾಯಕ 'ಕೊಯಮತ್ತೂರ್ ರಾಘವಯ್ಯರ್'. ಈ ಸಂದರ್ಭದಲ್ಲಿ ತಿರುವಾಂಕೂರ್ ಆಸ್ಥಾನ ಮತ್ತು ರಾಘವಯ್ಯರ್ ಇವರುಗಳ ಸೂಕ್ಷ್ಮ ಪರಿಚಯದ ಅವಶ್ಯಕತೆ ಇದೆ.

ತಿರುವಾಂಕೂರಿನ ಸ್ಪರ್ಧೆ

ಈ ಸ್ಪರ್ಧೆಯು ನಡೆದ ಕಾಲದಲ್ಲಿ ತಿರುವಾಂಕೂರಿನಲ್ಲಿ ಶ್ರೀ ರಾಮವರ್ಮ ಅಯ್ಯಿಲ್ಯಂ ತಿರುನಾಳ್‌ರವರು ರಾಜ್ಯವಾಳುತ್ತಿದ್ದರು. ಅವರ ಹಿಂದಿನ ದೊರೆ ರಸಿಕಾಗ್ರೇಸರ ಮತ್ತು ಸುಪ್ರಸಿದ್ಧ ವಾಗ್ಗೇಯಕಾರ ಸ್ವಾತಿತಿರುನಾಳ್‌ರವರು. ಸ್ವಾತಿತಿರುನಾಳ್‌ರವರು ತಿರುವಾಂಕೂರಿಗೆ ಸಂಗೀತ ಕ್ಷೇತ್ರದಲ್ಲಿ ವಿಶೇಷ ಸ್ಥಾನ ಕಲ್ಪಿಸುವ ಸಲುವಾಗಿ, ನಾನಾ ವಿದ್ವಾಂಸರನ್ನು ಆಹ್ವಾನಿಸಿ ಅವರ ಸಂಗೀತವನ್ನು ಕೇಳಿ ಆನಂದಿಸಿ ಬಹುಮಾನಿಸಿದುದೇ ಅಲ್ಲದೆ ಅನೇಕ ವಿದ್ವಾಂಸರು ಅಲ್ಲಿಯೇ ನೆಲೆಸುವಂತೆ ನೇಮಿಸಿಕೊಂಡಿದ್ದರು. ಈ ಸಂಪ್ರದಾಯವು ಅಯ್ಯಿಲ್ಯಂ ತಿರುನಾಳ್‌ರವರ ಕಾಲದಲ್ಲಿಯೂ ಇದ್ದು ತಿರುವಾಂಕೂರು ಸಂಸ್ಥಾನವು ದಕ್ಷಿಣಭಾರತದಲ್ಲಿ ಒಂದು ದೊಡ್ಡ ಸಂಗೀತ ಕೇಂದ್ರವಾಗಿದ್ದಿತು. ದೊರೆಯೂ ಸ್ವತಃ ಸಂಗೀತಗಾರ ಮತ್ತು ಅದರಲ್ಲಿ ವಿಶೇಷ ಪಾಂಡಿತ್ಯವನ್ನೂ ಪಡೆದಿದ್ದರು. ಇವರ ಮುಂದೆ ಹಾಡಿ ಪ್ರಶಂಶೆಯನ್ನು ಪಡೆಯುವುದೇ ಒಂದು ವಿಶೇಷ ಬಹುಮಾನವೆಂದು ಅನೇಕರ ಅಭಿಪ್ರಾಯವಾಗಿದ್ದಿತು. ಇವರ ಆಸ್ಥಾನದಲ್ಲಿಯೂ ಪ್ರಸಿದ್ಧ ಸಂಗೀತಗಾರ ಪಾಲಘಾಟ್ ಪರಮೇಶ್ವರ ಭಾಗವತರು, ಗಣಪತಿ ಭಾಗವತರು, ಮಹದೇವ ಭಾಗವತರ್, ಕಲ್ಯಾಣ ಕೃಷ್ಣ ಭಾಗವತರು, ವೀಣೆ, ಪಿಟೀಲ್, ಸ್ವರಬತ್, ಜಲತರಂಗ್ ಮುಂತಾದ ವಾದ್ಯಗಳಲ್ಲಿ ಪರಿಶ್ರಮವಿದ್ದ ಸಾತ್ತು ಭಾಗವತರ್ ಮುಂತಾದವರನೇಕರಿದ್ದರು. ಇವರಲ್ಲಿ ಮುಖ್ಯರಾದ ಪರಮೇಶ್ವರ ಭಾಗವತರ ಶಿಷ್ಯರೇ ರಾಘವಯ್ಯರ್.

ರಾಘವಯ್ಯರವರ ಪರಿಚಯ

ತೋಡಿ ರಾಘವಯ್ಯರ್, ಪಲ್ಲವಿ ರಾಘವಯ್ಯರ್, ಕೊಯಮತ್ತೂರ್ ರಾಘವಯ್ಯರ್ ಮುಂತಾದ ಹೆಸರನ್ನು ಪಡೆದಿದ್ದ ರಾಘವಯ್ಯರ್‌ರವರು ತಿರುವಾಂಕೂರ್‌ಸಂಸ್ಥಾನದ ಒಂದು ಹಳ್ಳಿಯಲ್ಲಿ ಹುಟ್ಟಿದರು. ಇವರ ಜೀವನ ಚರಿತ್ರೆಯನ್ನು ನೋಡಿದಲ್ಲಿ ಬಹುಕನಿಕರ ಉಂಟಾಗುವುದು. ಇವರ ತಂದೆಯವರು ಒಬ್ಬ ಬಡ ಸಂಗೀತಗಾರರು. ಜೀವನ 'ನಿತ್ಯಯಾತ್ರೆ' ಅಂದರೆ ಭಿಕ್ಷಾಟನೆಯಿಂದ. ಜತೆಯಲ್ಲಿ ಬಾಲಕ ರಾಘವನೂ ಹಾಡಿಕೊಂಡು ಹೋಗಬೇಕು. ಪುರಸತ್ತಾದಾಗ ದಾಸಿಯರಿಗೆ ಭರತನಾಟ್ಯವನ್ನು ಹೇಳಿಕೊಡುವುದು ಇದೇ ಕಸಬಾಗಿದ್ದಿತು. ಬಾಲ್ಯಪಾಠವು ಮನೆಯಲ್ಲಿ ಆದಮೇಲೆ ರಾಘವನು ಆಗ ತಿರುವಾಂಕೂರಿನ ಆಸ್ಥಾನದಲ್ಲಿ ಬಹುಪ್ರಸಿದ್ಧ ವಿದ್ವಾಂಸರಾಗಿದ್ದ ಪಾಲಘಾಟ್ ಪರಮೇಶ್ವರ ಭಾಗವತರ ಹತ್ತಿರ

ಪ್ರೌಢವ್ಯಾಸಂಗಕ್ಕೆ ಸೇರಿದನು. ಭಾಗವತರೂ ಶಿಷ್ಯನ ಮೇಲಿನ ಮಮತೆಯಿಂದ ತಮಗೆ ತಿಳಿದಿದ್ದನ್ನೆಲ್ಲಾ ಬೋಧಿಸಿದರು.

ಅನಂತರ ರಾಘವಯ್ಯನವರಿಗೆ ಮದುವೆಯಾಗಿ ತಿರುವಾಂಕರಿನ ಹರಿಪಾದವೆಂಬ ಗ್ರಾಮದಲ್ಲಿ ವಾಸಿಸಲಾರಂಭಿಸಿದರು. ಆದರೆ ಅಲ್ಲಿ ಎಲ್ಲಿಯೂ ಪ್ರೋತ್ಸಾಹವಿಲ್ಲದೆ ಪೇಚಾಡುತ್ತಿದ್ದರು. ಅಲ್ಲಿಯ ದೇವಸ್ಥಾನದಲ್ಲಿ ಒಂದು ಸಂಗೀತ ಕಾರ್ಯಕ್ರಮ ನಡೆಸಿದ್ದಕ್ಕೆ ಇವರಿಗೆ ಕೊಟ್ಟ ಬಹುಮಾನ ರೂ. 1-8-0 ! ಮನಸ್ಸಿಗೆ ಬಹಳ ಜಿಗುಪ್ಸೆಯುಂಟಾಗಿ ಅಲ್ಲಿಂದ ಹೊರಟು ಕೊಯಮತ್ತೂರನ್ನು ಸೇರಿದರು. ಕೊಯಮತ್ತೂರಿನಲ್ಲಿ ನಾನಾ ರಸಿಕರ ಮತ್ತು ವಿದ್ವಾಂಸರ ಪರಿಚಯವಾಗಿ ಇವರ ಸಂಗೀತ ಜ್ಞಾನವು ಹೆಚ್ಚಲು ಸಾಧಕವಾಯಿತು. ಇಲ್ಲಿದ್ದಾಗ ಒಂದು ಸಲ ಇವರ ಗುರುಗಳಾದ ಪರಮೇಶ್ವರ ಭಾಗವತರು ಯಾರದೋ ಮನೆಯಲ್ಲಿ ಸಂಗೀತ ಕಛೇರಿಗೆ ಬಂದಿದ್ದರು. ಆಗ ಅವರನ್ನು ಕೊಯಮತ್ತೂರಿಗೆ ಬಂದಿದ್ದ "ಭಿಕ್ಷಾಂಡರ್‌ಕೋವಿಲ್ ಸುಬ್ಬರಾಯರು" ಒಂದು ಸ್ಪರ್ಧೆಗೆ ಸವಾಲ್ ಹಾಕಿದರು. ಭಾಗವತರೂ ಒಪ್ಪಿದರು. ಆದರೆ ರಸಿಕವೃಂದಕ್ಕೆ ವ್ಯಥೆ. ಸುಬ್ಬರಾಯರು ಆಗ ಬಹು ಪ್ರಖ್ಯಾತವೆತ್ತ ಗಾಯಕರು. ತಾನ, ಪಲ್ಲವಿ ಅವರ ಸಮಕ್ಕೆ ಹಾಡಲು ಯಾರಿಗೂ ಶಕ್ಯವಿಲ್ಲವೆಂದು ಪ್ರತೀತಿ ಇದ್ದಿತು. ಇದಕ್ಕೆ ಪ್ರತಿಯಾಗಿ ಭಾಗವತರು ಕೇವಲ ವೃದ್ಧರು. ಅವರಿಗೆ ಈ ಸ್ಪರ್ಧೆಯು ತಡೆದೀತೆ ಎಂಬ ಸಂದೇಹ. ಗತ್ಯಾಗತ್ಯಾ ಇದು ರಾಘವಯ್ಯರ್‌ರವರ ಕಿವಿಗೆ ಮುಟ್ಟಿ ಅವರು ಸುಬ್ಬರಾಯರಿಗೆ "ಮೊದಲು ಶಿಷ್ಯನನ್ನು ಜಯಿಸಿ ಅನಂತರ ಗುರುವನ್ನು ಕೆಣಕಬೇಕೆಂದು" ಮರುಸವಾಲನ್ನು ಹಾಕಿದರು. ಸ್ಪರ್ಧೆಯೂ ಏರ್ಪಾಡಾಯಿತು. ಸುಬ್ಬರಾಯರು ತಮ್ಮ ಚಾತುರ್ಯವನ್ನೆಲ್ಲಾ ಉಪಯೋಗಿಸಿದರೂ ರಾಘವಯ್ಯರ್‌ರವರನ್ನು ಜಯಿಸಲಾರದೆ ಬಿದ್ದುಹೋದರು. ಅಂದಿನಿಂದ ರಾಘವಯ್ಯರ್‌ರವರು ಇರುವ ತನಕ ಅವರು ಕೊಯಮತ್ತೂರಿಗೆ ಬರಲೇ ಇಲ್ಲವಂತೆ ! ಭಾಗವತರಿಗೂ ಶಿಷ್ಯನ ಪ್ರತಿಭೆಯನ್ನು ಕಂಡು ಬಹು ಸಂತೋಷವಾಯಿತು.

ಹೀಗೆಯೇ ಸ್ವಲ್ಪ ಕಾಲಾನಂತರ ತಿರುವಾಂಕೂರಿಗೆ ಹೋಗಿ ಅಲ್ಲಿ ರಾಜಸಭೆಯಲ್ಲಿ ಹಾಡಿ ದೊರೆಗೆ ಬಹುವಿಶ್ವಾಸಪಾತ್ರರಾದರು. ಇವರಿಗೆ ಅಲ್ಲಿಯ ಆಸ್ಥಾನದಲ್ಲಿಯೇ ಕೆಲಸವಾಯಿತು. ಆದರೆ ಮಾಮೂಲಿನಂತೆ ಇವರ ಅಭ್ಯುದಯವನ್ನು ಕಂಡು ಅಸೂಯೆಯಿಂದ ಇತರ ವಿದ್ವಾಂಸರು ದೊರೆಗೆ ಚಾಡಿ ಹೇಳಿ, ಇವರ ವಿಷಯದಲ್ಲಿ ದುರಭಿಪ್ರಾಯಪಡುವಂತೆ ಆಗಿ, ಇವರನ್ನು ಹರಿಪಾದ ಗ್ರಾಮಕ್ಕೆ ಕಳುಹಿಸಿ ಅಲ್ಲಿಂದ ಎಲ್ಲಿಯೂ ಹೋಗಕೂಡದೆಂದು ರಾಜಾಜ್ಞೆಯಾಯಿತು. ಸ್ವಾಭಿಮಾನಿಯಾದ ರಾಘವಯ್ಯರ್‌ರವರು ಎಷ್ಟು ನೊಂದುಕೊಂಡಿರ ಬಹುದು ! ಆದರೆ ಈ ಕೆಟ್ಟದೆಶೆಯು ಹೆಚ್ಚುಕಾಲವಿರಲಿಲ್ಲ; ವಿಮೋಚನೆಯಾಗಲು ಪ್ರಕೃತಿಯೇ ಏರ್ಪಡಿಸಿದ್ದಿತು.

ಮೊಟ್ಟಮೊದಲು ಮಹಾವೈದ್ಯನಾಥರ ಸಂಗೀತವನ್ನು ಕೇಳಿದಾಗ ರಾಜಾ ಅಯ್ಯಿಲುಮ್ ತಿರುನಾಳ್‌ರವರಿಗೆ, ಇವರು ಇಷ್ಟು ಅದ್ಭುತವ್ಯಕ್ತಿಯೆಂಬುದು ಗೊತ್ತಿರಲಿಲ್ಲ. ಮಹಾವೈದ್ಯರು ಭಾರಿ ಸಂಗೀತಗಾರರೆಂದು ಮಾತ್ರ ಕೇಳಿದ್ದರು. ಇವರ ಪಾಂಡಿತ್ಯಕ್ಕೆ ಬೆರಗಾಗಿ ಅವರನ್ನು ಅಲ್ಲಿಯೇ ಸ್ವಲ್ಪಕಾಲವಿರುವಂತೆ ಪ್ರಾರ್ಥಿಸಿದರು. ಸಭಾನಂತರ ಮುಖ್ಯವಿದ್ವಾಂಸರಾದ ಪರಮೇಶ್ವರ ಭಾಗವತರನ್ನು ಕರೆಸಿಕೊಂಡು "ನಮ್ಮ ತಿರುವಾಂಕೂರಿನಲ್ಲಿ ಇವರ ಸಮಕ್ಕೆ ಹಾಡುವವರು ಯಾರಾದರೂ ಇದ್ದಾರೆಯೇ" ಎಂದು ಕೇಳಿದರು. ಅದಕ್ಕೆ ಭಾಗವತರು "ಯಾರೂ ಇಲ್ಲ. ಇದ್ದರೆ ನಾನೊಬ್ಬನಿದ್ದೇನೆ. ಆದರೆ ನನಗೂ ವಯಸ್ಸಾಗಿದೆ" ಎಂದು ಹೇಳಿದರು. ರಾಜರು ಆಶ್ಚರ್ಯಚಕಿತರಾಗಿ, "ಯಾರೂ ನಮ್ಮ ಮಾನ ಉಳಿಸುವವರೇ ಇಲ್ಲವೇ ? ತಿರುವಾಂಕೂರಿಗೆ ಬಡತನ ಬಂದಿತೇ?" ಎಂದು ಕೇಳಿದರು. ಆಗ ಭಾಗವತರು ಅಂಜುತ್ತಾ "ಒಬ್ಬನಿದ್ದಾನೆ ಆದರೆ ಆತನು ರಾಜಾಗ್ರಹಕ್ಕೆ ಗುರಿಯಾಗಿದ್ದಾನೆ" ಎಂದರು. ರಾಜರು ಯಾರೆಂದು ಅರಿತು ರಾಘವಯ್ಯರ್‌ರವರನ್ನು ಹರಿಪಾದ ಗ್ರಾಮದಿಂದ ತಕ್ಷಣವೇ ಕರೆತರಲು ಹೇಳಿಕಳಿಹಿಸಿದರು. ಅದರಂತೆಯೇ ಜ್ವರದಿಂದ ಪೀಡಿತರಾಗಿದ್ದರೂ, ಅಯ್ಯರವರು ಕೇವಲ ಹತ್ತು ಘಂಟೆಗಳೊಳಗೆ ಪ್ರಯಾಣವನ್ನು ಮುಗಿಸಿ ತಿರುವಾಂಕೂರಿಗೆ ಬಂದರು.

ರಾಘವಯ್ಯರ್ ಸ್ಪರ್ಧೆ

ಮಾರನೆಯದಿನ ಸ್ಪರ್ಧೆ, ಅರಮನೆಯಲ್ಲಿ ಏರ್ಪಾಡಾಯಿತು. ಮಧ್ಯಾಹ್ನ, ಎಲ್ಲಾ ವಿದ್ವಾಂಸರೂ, ಅಧಿಕಾರವರ್ಗ, ರಾಣಿವಾಸದವರು, ಇತರ ಸಭಾಸದರೂ ಕಾಲಕ್ಕೆ ಸರಿಯಾಗಿ ಸೇರಿದರು. ಎಲ್ಲರಿಗೂ ಫಲಿತಾಂಶವೇನಾಗುವುದೋ ಎಂಬ ಕುತೂಹಲ. ಸಭೆಯ ಒಂದು ಭಾಗದಲ್ಲಿ ಮಹಾವೈದ್ಯನಾಥರು. ಅವರ ಜತೆಯಲ್ಲಿ ಅಣ್ಣ ರಾಮಸ್ವಾಮಿ ಶಿವನ್. ಎದುರಿಗೆ ರಾಘವಯ್ಯರ್‌ರವರು ಒಬ್ಬರೆ. ಭಸ್ಮರುದ್ರಾಕ್ಷಿ ಮಾಲಾಲಂಕೃತರಾದ ಕಳಾಪೂರಿತ ತರುಣ ವೈದ್ಯನಾಥರು. ಭಸ್ಮ, ರಕ್ಷಾಲಂಕೃತ, ಮಹಾರಾಷ್ಟ್ರ ಮೀಸೆಯಿಂದ ಕೂಡಿದ ಎಣ್ಣೆಗೆಂಪಿನ ಮಧ್ಯವಯಸ್ಸಿನ ರಾಘವಯ್ಯರ್ (ಮೈಸೂರು ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ಇವರ ವರ್ಣಚಿತ್ರವಿದೆ). ಮಹಾವೈದ್ಯನಾಥರಿಗೆ ಸಾಧನೆ ಮಾಡಿದ್ದ ವಿದ್ಯೆಯ ಜತೆಗೆ ಶಾಸ್ತ್ರ ಮತ್ತು ಅನೇಕ ಅಪರೂಪ ರಾಗಗಳ ಪರಿಚಯ. ಇದಕ್ಕೆ ರಾಘವಯ್ಯರ್‌ರವರಿಗೆ ಗುರು ಅನುಗ್ರಹದಿಂದ, ಲಬ್ಧವಾದ ಮತ್ತು ಸಾಧಕ ಬಲದಿಂದ ಒಳ್ಳೆಯ ಸ್ವರೂಪದಲ್ಲಿಟ್ಟಿದ್ದ ವಿದ್ಯೆ. ಇವರಿಬ್ಬರಿಂದ ಸ್ವಲ್ಪ ದೂರದಲ್ಲಿ ಆಸನದ ಮೇಲೆ ಮಹಾರಾಜ ರಾಮವರ್ಮರು. ಸಭಿಕರೆಲ್ಲರೂ ಸ್ತಬ್ಧರಾಗಿ, ಸಭೆಯು ನಿಶ್ಶಬ್ಧದಿಂದ ಕೂಡಿದ್ದಿತು. ಮಹಾರಾಜರು ಪ್ರಾರಂಭವಾಗಲೆಂದು ಸಂಜ್ಞೆಯನ್ನು ಕೊಟ್ಟಕೂಡಲೇ ತಂಬೂರಿಯ ನಾದವು ಪ್ರಾರಂಭವಾಯಿತು. ಮೊದಲನೆಯ ಸರದಿ ರಾಘವಯ್ಯರ್‌ರವರದು. ಶಂಕರಾಭರಣ ರಾಗದ ಆಲಾಪನೆ. ರಾಗದ ನಾನಾ ಅಂಗಗಳೆಲ್ಲಾ ಮೆಟ್ಟಲು ಮೆಟ್ಟಲಾಗಿ ರಚನೆಯಾಗಿ, ದಿವ್ಯ ಸ್ವರೂಪವು ನಿರ್ಮಾಣವಾಯಿತು (ಅಯ್ಯರವರ ಶಂಕರಾಭರಣದ ಆಲಾಪನೆಯನ್ನು ಸಾಹಿತ್ಯ ವಿದ್ವಾಂಸರೊಬ್ಬರು ಸಾಗರಕ್ಕೆ ಹೋಲಿಸಿ, ಶ್ಲೋಕವನ್ನು ಮಾಡಿದ್ದಾರಂತೆ !).

ಆಲಾಪನೆಯಾದ ಮೇಲೆ, ಅಟತಾಳದಲ್ಲಿ "ವಿನವಯ್ಯ ಪಂಚನದೀಶ" ಎಂಬ ಪಲ್ಲವಿ. ಪಲ್ಲವಿ ರಾಘವಯ್ಯರ್ ಎಂಬ ಅನ್ವರ್ಥನಾಮವಿದ್ದ ಅಯ್ಯರ್‌ರವರು ಇದನ್ನು ಹೇಗೆ ಹಾಡಿದರೆಂಬುದನ್ನು ಹೇಳಲೇಬೇಕಾಗಿಲ್ಲ. ಇವರು ನಿಲ್ಲಿಸಿದ ಕೂಡಲೇ ಮಹಾವೈದ್ಯನಾಥರು, ಸರದಿಯನ್ನು ತೆಗೆದುಕೊಂಡು ಹಾಡಲಾರಂಭಿಸಿದರು. ಹೇಗೆ ಹಾಡಿದರೆಂಬುದನ್ನು ವಿವರಿಸಲೇಬೇಕಾಗಿಲ್ಲ. ಇಬ್ಬರೂ ಮೂರು ಸ್ಥಾಯಿಯಲ್ಲಿಯೂ ಲೀಲಾಜಾಲವಾಗಿ ಹಾಡಬಲ್ಲರು. ಕಾಲಪ್ರಮಾಣ ಇಬ್ಬರದೂ ಷಟ್ಕಾಲದಲ್ಲಿ ಲೀಲಾಜಾಲವಾಗಿ ಓಡಾಡಬಲ್ಲುದು. ಆದರೆ ಶೈಲಿಬೇರೆ. ಒಬ್ಬರದು ಭೋರ್ಗರೆಯುತ್ತ ಮೆಟ್ಟಲು ಮೆಟ್ಟಲಾಗಿ ಧುಮುಕುವ ಜಲಪಾತ. ಇನ್ನೊಬ್ಬರದು ಹಿಂದೆಯೇ ಹೇಳಿದಂತೆ ಮೊರೆಯುತ್ತಾ ಹರಿಯುವ ತುಂಬು ಪ್ರವಾಹ. ಯಾರದು ಹೆಚ್ಚು ಯಾರದು ಕಡಿಮೆ ಹೇಳುವ ಹಾಗಿಲ್ಲ. ಸಾಯಂಕಾಲ ಐದು ಘಂಟೆಗೆ ಸರಿಯಾಗಿ ಮುಗಿಯಿತು. ಸಭಿಕರಾರಿಗೂ ಏನೂ ಹೇಳಲು ಬಾಯೇ ಬಾರದು. ಪುನಃ ಏಳು ಘಂಟೆಗೆ ಸಭೆಸೇರಬೇಕೆಂದು ರಾಜಾಜ್ಞೆಯಾಯಿತು.

ಸಾಯಂಕಾಲದ ವಿಧಿಗಳನ್ನೆಲ್ಲಾ ತೀರಿಸಿಕೊಂಡು ಎಲ್ಲರೂ ಲಗುಬಗೆಯಿಂದ ಸೇರಿದರು. ಏಳು ಘಂಟೆಗೆ ಸರಿಯಾಗಿ ರಾಜಾಜ್ಞೆಯಂತೆ ಶ್ರುತಿನಾದ ಪ್ರಾರಂಭವಾಯಿತು. ಈ ಸಲ ಪ್ರಾರಂಭಿಸುವ ಸರದಿ ಮಹಾವೈದ್ಯನಾಥರದು. ಕಲ್ಯಾಣಿ ರಾಗದ ಆಲಾಪನೆಯಿಂದ ಪ್ರಾರಂಭ. ಮಹಾವೈದ್ಯನಾಥರು ಆಲಾಪನೆಯಲ್ಲಿ ತಮಗಿದ್ದ ಶಾಸ್ತ್ರಜ್ಞಾನದ ಫಲವಾದ ಅಪೂರ್ವ ಸಂಚಾರಗಳನ್ನೆಲ್ಲಾ ಪ್ರದರ್ಶಿಸಿ ಅನಂತರ 'ತಾರಕಬ್ರಹ್ಮ' ಎಂಬ ಪಲ್ಲವಿಯನ್ನು ಹಾಡಿದರು. ರಾಘವಯ್ಯರ್‌ರವರ ಸರದಿ ಬಂದಾಗ, ಇದಕ್ಕೆ ವಿರುದ್ಧವಾಗಿ ಆಚರಣೆಯಲ್ಲಿದ್ದ ರಂಜನೀಯ ಸಂಚಾರಗಳು ನಾನಾ ತರಂಗಗಳಂತೆ ಬಂದವು. ರಾತ್ರಿ ಹತ್ತು ಘಂಟೆಯವರಿಗೂ ಸಭೆ ನಡೆದು ಇಬ್ಬರಲ್ಲಿ ಯಾರೂ ಜಗ್ಗಲಿಲ್ಲ. ರಾಜರು ಮಾರೆಯ ದಿನ ಪುನಃ ಸಭೆಸೇರತಕ್ಕದ್ದೆಂದು ಆಜ್ಞೆಮಾಡಿದರು.

ಮಾರನೆಯ ದಿನವೂ ಎಂದಿನಂತೆ ಸಭೆಸೇರಿತು. ಈ ಸಲ ರಾಘವಯ್ಯರ್‌ರವರ ಸರದಿ. ತೋಡಿರಾಗದ ಆಲಾಪನೆಯಿಂದ ಪ್ರಾರಂಭ. ರಾಘವಯ್ಯರಿಗೆ 'ತೋಡಿರಾಘವಯ್ಯರ್' ಎಂಬ ಅನ್ವರ್ಥನಾಮ. ಆ ರಾಗವು ಅವರಿಗೆ ಪ್ರಿಯವಾದುದು. ಅವರು ಅದನ್ನು ಒಂದು ಸಲ ಎಂಟು ಘಂಟೆಗಳ ಕಾಲ ಒಂದೇ ಸಮನೆ ಹಾಡಿದರಂತೆ! ಇನ್ನೊಂದು ಕಥೆಯ ಪ್ರಕಾರ ಮೂರು ದಿನ ಬರಿಯ ತೋಡಿರಾಗವನ್ನೇ ಹಾಡಿದರಂತೆ. ಒಂದು ದಿನದ ಸಂಗತಿಗಳು ಇನ್ನೊಂದು ದಿನ ಬರಲಿಲ್ಲವಂತೆ! ಮತ್ತೂ ಒಂದು ಕಥೆಯ ಪ್ರಕಾರ ಇವರಿಗೆ ಸ್ವಲ್ಪ ಅಗತ್ಯ ಬಿದ್ದಾಗ, ಸಾಲ ತೀರಿಸುವವರೆಗೂ ಹಾಡುವುದಿಲ್ಲವೆಂದು ತೋಡಿರಾಗವನ್ನೇ ಅಡವಿಟ್ಟಿದ್ದರಂತೆ! ಇಂಥವರಿಗೆ ತೋಡಿರಾಗದ ಆಲಾಪನೆಯು ಎಷ್ಟು ಹಿತಕರವಾಗಿರಬಹುದು ಮತ್ತು ಕೇಳುವವರಿಗೂ ಎಷ್ಟು ರುಚಿಕರವಾಗಿರಬಹುದು! ರಾಗಾಲಾಪನೆಯ ನಂತರ "ಏಮನಿ ಮಾಟ್ಲಾಡಿನಾವು ರಾಮ ರಾಮ" ಎಂಬ ಪಲ್ಲವಿ. ಇವರ ಸರದಿಯನಂತರ ಮಹಾವೈದ್ಯನಾಥರು ತೆಗೆದುಕೊಂಡು ತಮ್ಮ ಚಮತ್ಕಾರ ಸಂಚಾರಗಳಿಂದ ಹಾಡಿದರು.

ಸಭೆಯು ಪುನಃ ಸೇರಿತು. ಈ ಸಲ ಮಹಾವೈದ್ಯನಾಥರ ಸರದಿ. ಖರಹರಪ್ರಿಯ ರಾಗದ ಆಲಾಪನೆ. ಅನಂತರ ತ್ಯಾಗರಾಜರ ಪ್ರಸಿದ್ಧ ಕೃತಿ "ಚಕ್ಕನಿ ರಾಜಮಾರ್ಗಮುಯುಂಡುಗ" ಭಾಗವನ್ನೇ ಪಲ್ಲವಿಯಾಗಿ ಹಾಡಿದರು. ಇವರ ನಂತರ ರಾಘವಯ್ಯರ್‌ರವರು ಅಷ್ಟೇ ಚಮತ್ಕಾರದಿಂದ ಹಾಡಿದರು. ಸಭಿಕರು ದಿಗ್ಭ್ರಾಂತರು. ಏನು ಹೇಳಲೂ ತೋಚಲಿಲ್ಲ. ರಾಜರೂ ನೋಡಿದರು. ಇಬ್ಬರೂ ಎರಡು ಮದಗಜಗಳು, ಸಮತೂಕ, ಯಾರು ಹೆಚ್ಚು ಯಾರು ಕಡಿಮೆ ಹೇಳುವ ಹಾಗೆಯೇ ಇಲ್ಲ. ಇನ್ನು ಬೆಳೆಸಿದರೆ, ವಿಪರ್ಯಾಸವಾಗಬಹುದೆಂದು ಹೇಗೂ ತಿರುವಾಂಕೂರಿನ ಮಾನ ಉಳಿಯಿತೆಂದು ತಕ್ಷಣ ಇಬ್ಬರಿಗೂ ಶಾಲುಜೋಡಿ ಮುಂತಾದ ಮರ್ಯಾದೆಗಳನ್ನೂ, ತಲಾ 1,500 ರೂ.ಗಳನ್ನೂ (ಈಗ ಸುಮಾರು 15,000 ವಾಗಬಹುದು) ಬಹುಮಾನವಾಗಿಕೊಟ್ಟರು. ಅಂದಿನಿಂದ ರಾಘವಯ್ಯರ್ ಪುನಃ ರಾಜಾನುಗ್ರಹಕ್ಕೆ ಪಾತ್ರರಾಗಿ ಆಸ್ಥಾನದಲ್ಲಿ ನೆಲೆಸಿದರು. ಈ ಘಟನೆಯನ್ನು ರಾಮಸ್ವಾಮಿ ಶಿವನ್‌ರವರು ತಮ್ಮ 'ಮಹಾವೈದ್ಯನಾಥ ದಿಗ್ವಿಜಯ'ದಲ್ಲಿ ಭ್ರಾತೃಪ್ರೇಮಾಂಧಕಾರದಿಂದ ತನ್ನ ತಮ್ಮನ ದಿಗ್ವಿಜಯವೆಂತಲೂ, ಆಗ ಅವರ ವಯಸ್ಸನ್ನೂ ತಿರುಗುಮುರುಗು ಮಾಡಿ 12 ವರ್ಷವೆಂತಲೂ ಕರೆದಿರುವರಂತೆ !

ಜೀವಿತದ ಇತರ ವಿಷಯಗಳು

ಇದಾದನಂತರ ಮಹಾವೈದ್ಯನಾಥರು ತಿರುವಾಂಕೂರಿನ ಮುಂದಿನ ಮಹಾರಾಜರುಗಳ ಕಾಲದಲ್ಲಿ ಇನ್ನೆರಡು ಸಲ ಬಂದಿದ್ದರಂತೆ. ಇದಲ್ಲದೆ ಚಾಮರಾಜ ಒಡೆಯರವರ ಕಾಲದಲ್ಲಿ ಮೈಸೂರು ಆಸ್ಥಾನದಲ್ಲಿಯೂ ಮೂರುಸಲ ಹಾಡಿದರಂತೆ. ಅನಂತರ ಹೀಗೆಯೇ, ಶೃಂಗೇರಿ, ವೆಂಕಟಗಿರಿ, ರಾಮೇಶ್ವರ ಮುಂತಾದೆಡೆಗಳಲ್ಲೆಲ್ಲಾ ಹೋಗಿ ಹಾಡಿ ನಾನಾ ಬಹುಮಾನಗಳನ್ನು ಸಂಪಾದಿಸಿದರು. ಊರಿಗೆ ಹಿಂತಿರುಗಿದ ನಂತರ ವೈಯ್ಯಾಚ್ಚೇರಿಯಲ್ಲಿ ಒಂದು ನಟರಾಜ ದೇವಸ್ಥಾನವನ್ನು ಸ್ಥಾಪಿಸಿ, ಅಲ್ಲಿಯ ಪೂಜಾಕಾರ್ಯಗಳಿಗೆ ತಮಗೆ ಬಂದಿದ್ದ ಸಕಲ ಬಹುಮಾನಗಳನ್ನೂ ಅರ್ಪಿಸಿದರಂತೆ! ಇಂತಹ ಅದ್ವಿತೀಯ ಸಂಗೀತ ಶಿಖಾಮಣಿ ತಮ್ಮ 49ನೆಯ ವಯಸ್ಸಿನಲ್ಲಿ (27-1-1893) ಕೊನೆಯವರೆಗೂ ಶಿವಸ್ಮರಣೆ ಮಾಡುತ್ತಾ ಶಿವಸಾಯುಜ್ಯವನ್ನು ಪಡೆದರು.

ಮಹಾವೈದ್ಯನಾಥರದು ಪ್ರಚಂಡ ವ್ಯಕ್ತಿತ್ವ, ಒಳ್ಳೆಯ ರೂಪು. ಮೈಸೂರು ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ತೂಗು ಹಾಕಿರುವ ಅವರ ವರ್ಣಚಿತ್ರವನ್ನು ನೋಡಿದವರಿಗೆಲ್ಲಾ, ಆ ಭಸ್ಮ, ಕುಂಕುಮ ಮತ್ತು ರುದ್ರಾಕ್ಷಿಸರವನ್ನು ಧರಿಸಿರುವ ಕಳಾಪೂರ್ಣ ಮೂರ್ತಿ ನೆನಪು ಮರೆಯುವ ಹಾಗಿಲ್ಲ. ವೈದ್ಯನಾಥರು ಬಹು ಆಚಾರಶೀಲರು. ಏನೇ ಆಗಲೀ ತಮ್ಮ ಕಾಲಕಾಲದ ವಿಧಿ, ದೇವತಾರ್ಚನೆ ಮುಂತಾದವುಗಳನ್ನು ಬಿಡುತ್ತಿರಲಿಲ್ಲ. ಸರಳವಾದ ಸ್ವಭಾವ. ಮಾತಿನಲ್ಲಿ ಯಾವಾಗಲೂ ತಿಳಿಹಾಸ್ಯ. ಅದ್ವಿತೀಯ ಶಿವೋಪಾಸಕ. ಸದಾ ಶಿವನಾಮ

ಸ್ಮರಣೆ ಮಾಡುತ್ತಿದ್ದರು. ರಾಗಾಲಾಪನೆ ಮಾಡುವಾಗಲೂ ತಾಂನಾಂ ಅಕ್ಷರಗಳನ್ನು ಉಚ್ಚರಿಸದೆ, ಶಂಕರಾ ಎಂದು ಹಾಡುತ್ತಿದ್ದರಂತೆ ! ಪ್ರಾಚೀನ ಸಂಪ್ರದಾಯದಲ್ಲಿ ಬೆಳೆದು ಬಂದ ಪ್ರಯುಕ್ತ ಗುರುಹಿರಿಯರನ್ನು ಕಂಡರೆ ಭಕ್ತಿ, ವಿದ್ವಾಂಸರಲ್ಲಿ ಆದರ ಇವೆಲ್ಲವೂ ಇದ್ದವು. ಹಾಡುಗಾರಿಕೆಯಲ್ಲಿಯೂ ಗಂಭೀರವಾದ ನಾದ. ಷಟ್ಕಾಲದಲ್ಲಿ ಸುಲಭವಾಗಿ ಹಾಡುತ್ತಿದ್ದರಂತೆ! ಇಲ್ಲಿ ಕಾಲಪ್ರಮಾಣದ ವಿಷಯವನ್ನು ಸ್ವಲ್ಪ ಹೇಳಬೇಕಾಗಿದೆ. ಷಟ್ಕಾಲವೆಂದರೆ ಆರು ಕಾಲದಲ್ಲಿ ಹಾಡುವುದೆಂದರ್ಥ. ಕಾಲಪ್ರಮಾಣ (Rhythm) ಭಾರತೀಯ ಸಂಗೀತದಲ್ಲಿ ಮುಂದುವರೆದಿರುವಷ್ಟು ಬೇರೆ ಯಾವ ಸಂಗೀತ ಸಂಪ್ರದಾಯದಲ್ಲಿಯೂ ಇಲ್ಲವೆಂದು ಲಿಯೊಪಾಲ್ಡ್ ಸ್ಟೋಕ್‌ಫ್‌ಸ್ಕಿ (Leopald Stokowski)ಯವರು ಹೇಳಿರುವರು. ಭಾರತೀಯ ಸಂಗೀತದಲ್ಲಿಯೂ ಕರ್ಣಾಟಕ ಸಂಗೀತದಲ್ಲಿ ಕಾಲವು ಮುಂದುವರೆದಿರುವಷ್ಟು ಬೇರೆ ಯಾವ ಪದ್ಧತಿಯಲ್ಲಿಯೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ತಾಳದಶ ಪ್ರಾಣಗಳಲ್ಲಿ ಕಾಲಪ್ರಮಾಣವು ಮೊದಲನೆಯದು. ಷಟ್ಕಾಲಕ್ಕೆ ಉದಾಹರಣಸ್ವರೂಪವಾಗಿ ಇಷ್ಟನ್ನು ಹೇಳಬಹುದು. ಮೊದನೆಯ ಕಾಲದಲ್ಲಿ ಹಾಡುವುದರ ಎರಡರಷ್ಟು ವೇಗ ಎರಡನೆಯ ಕಾಲ. ಎರಡನೆಯ ಕಾಲದಲ್ಲಿ ಹಾಡುವುದರ ಎರಡರಷ್ಟು ಅಂದರೆ ಮೊದಲನೆಯ ಕಾಲದ ನಾಲ್ಕರಷ್ಟು ವೇಗ ಮೂರನೆಯ ಕಾಲ. ನಾಲ್ಕನೆಯ ಕಾಲದಲ್ಲಿ ಮೂರನೆಯದರ ಎರಡರಷ್ಟು ಅಂದರೆ ಮೊದಲರ ಎಂಟರಷ್ಟು ವೇಗ. ಹೀಗೆ 6ನೆಯ ಕಾಲದಲ್ಲಿ ಮೊದಲನೆಯ ಕಾಲದ 64ರಷ್ಟು ವೇಗವಾಗಿ ಹಾಡಬೇಕು ಅಥವಾ ಈ ಪುಟವನ್ನು ಓದಲು ಸುಮಾರು ಹತ್ತು ನಿಮಿಷಗಳು ಹಿಡಿಸುತ್ತವೆಂದು ಭಾವಿಸೋಣ. ಅದನ್ನು ಮೊದಲನೆಯ ಕಾಲವೆಂದು ಭಾವಿಸಿದಲ್ಲಿ ಅದನ್ನೇ 5 ನಿಮಿಷದಲ್ಲಿ ಓದಿದರೆ ಎರಡನೆಯಕಾಲ, $2^1/_2$ ನಿಮಿಷದಲ್ಲಿ ಓದಿದರೆ ಮೂರನೆಯಕಾಲ, $1^1/_4$ ನಿಮಿಷದಲ್ಲಿ ಓದಿದರೆ ನಾಲ್ಕನೆಯ ಕಾಲ, $37^1/_2$ ಸೆಕೆಂಡುಗಳಲ್ಲಿ ಓದಿದರೆ ಐದನೆಯಕಾಲ, $18^3/_4$ ಸೆಕೆಂಡುಗಳಲ್ಲಿ ಓದಿದರೆ ಆರನೆಯಕಾಲ. ಇದು ಒಂದು ಸಾರಿ ಓದುವುದಕ್ಕೆ ಮಾತ್ರ. ಇದಕ್ಕೆ ಹತ್ತು ನಿಮಿಷಗಳೇ ಕಾಲಪ್ರಮಾಣವೆಂದು ನಿಶ್ಚಯಿಸಿದಲ್ಲಿ, ಆ ಸಮಯದಲ್ಲಿ ಸರಿಯಾಗಿ ಗೆರೆಕುಯ್ದಂತೆ ಹೊಂದಲು 64 ಸಲ ಓದಬೇಕಾಗುವುದು. ಇದಕ್ಕೆ ಎಷ್ಟು ಬುದ್ಧಿಚಾತುರ್ಯ ಬೇಕಾಗುವುದೆಂಬುದನ್ನು ಊಹಿಸಬಹುದು. ಪಾಶ್ಚಿಮಾತ್ಯ ಸಂಗೀತದಲ್ಲಿಯೂ ಒಂದು ನಿಮಿಷಕ್ಕೆ 30 ಅಕ್ಷರಕಾಲಕ್ಕೆ ಕಡಿಮೆ ತೆಗೆದುಕೊಂಡರೆ ಸಂಗೀತಕ್ಕೆ ಕಾಲಪ್ರಮಾಣವು ಸಿಕ್ಕುವುದು ಕಷ್ಟವೆಂಬ ಭಾವನೆ ಇದೆ. ನಾವೂ ಅದೇ ಪ್ರಮಾಣವನ್ನು ಅನುಸರಿಸಿದರೆ ಷಟ್ಕಾಲವನ್ನೇನೋ ಕಷ್ಟಪಟ್ಟುಮಾಡಬಹುದು. ಆದರೆ ಇದು ಗಣಿತಶಾಸ್ತ್ರ ರೀತ್ಯಾ ಸುಲಭವಾಗಿ ಕಂಡರೂ, ಆರನೆಯ ಕಾಲದಲ್ಲಿ ಹಾಡುವುದು ಎಷ್ಟು ಕಷ್ಟವೋ ಅದರ ಮೊದಲನೆಯ ಕಾಲವನ್ನು ತಾಳವನ್ನು ಬಿಗಿಹಿಡಿದು ಹಾಡುವುದು ಅದರ ಎರಡರಷ್ಟು ಕಷ್ಟವೆಂಬುದನ್ನು ಚೆನ್ನಾಗಿ ಸಂಗೀತ ಬಲ್ಲವರೆಲ್ಲರೂ ಅರಿತಿರುವರು. ಆದ್ದರಿಂದ ಮಹಾವೈದ್ಯನಾಥರು ಷಟ್ಕಾಲದಲ್ಲಿ ಲೀಲಾಜಾಲವಾಗಿ ಹಾಡುತ್ತಿದ್ದರೆಂದು ಹೇಳಿದಷ್ಟೇ ಸಾಕು, ನಾವು ಅವರ ವ್ಯಕ್ತಿತ್ವಕ್ಕೆ ತಲೆಬಾಗಬೇಕಾಗುವುದು.

ಮಹಾವೈದ್ಯನಾಥರು ಸಂಗೀತಗಾರರೇ ಅಲ್ಲದೆ ಉತ್ತಮ ಶಿವಕಥೆಗಳನ್ನೂ ಮಾಡುತ್ತಿದ್ದರಂತೆ! ತಮಿಳು ಸಾಹಿತ್ಯದ ಪರಿಚಯವು ಹೆಚ್ಚಾದಂತೆಲ್ಲಾ, ಅದರ ಮಹಾಮಹಾ ಕಾವ್ಯಗಳಾದ, ಸ್ಕಾಂದಪುರಾಣ, ಕಂಬರಾಮಾಯಣ ಮುಂತಾದ ಗ್ರಂಥಗಳಿಂದ ಉಲ್ಲೇಖಿಸುತ್ತಾ ಶಿವಕಥೆಗಳನ್ನು ಮಾಡುತ್ತಿದ್ದರಂತೆ. ಮೊದಲೇ ಭವ್ಯವಾದ ರೂಪ, ಜತೆಗೇ ಘನವಾದ ಸಂಗೀತ ಮತ್ತು ಸಾಹಿತ್ಯವಾದ್ದರಿಂದ ಇವರ ಶಿವಕಥೆಗಳನ್ನು ಕೇಳಿ ಜನಗಳು ಮುಗ್ಧರಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಇವರು ರಾಮೇಶ್ವರಕ್ಕೆ ಹೋಗಿದ್ದಾಗ ಅಲ್ಲಿಯ ಜನಗಳು ಇವರನ್ನು 'ಹರಿಕಥೆ' ಮಾಡಬೇಕೆಂದು ಪ್ರಾರ್ಥಿಸಿದರಂತೆ. ಎಂದೂ ಹರಿಕಥೆಮಾಡದಿದ್ದವರು ಪ್ರಯತ್ನಿಸಿ ಬಹಳ ಶ್ರಾವ್ಯವಾದ ಹರಿಕಥೆಯನ್ನು ಮಾಡಿ ಜನಗಳನ್ನು ಆಶ್ಚರ್ಯಗೊಳಿಸಿದರಂತೆ!

ಹಿಂದೆಯೇ ಹೇಳಿದಂತೆ ಪ್ರಸಿದ್ಧ ವಾಗ್ಗೇಯಕಾರ ಪಟ್ಟಣಂ ಸುಬ್ರಹ್ಮಣ್ಯಯ್ಯರ್‌ರವರು ಇವರ ಸಹಪಾಠಿಗಳು. ಇವರು ಸಂಗೀತ ಜ್ಞಾನದಲ್ಲಿ ಮಹಾವೈದ್ಯನಾಥರಿಗೇನೂ ಕಡಿಮೆ ಇಲ್ಲ. ಒಮ್ಮೆ ಮಾರ್ಗತಾಳಗಳಲ್ಲಿ ಒಂದಾದ ಮತ್ತು 108 ಕಳಾ ಪ್ರಮಾಣದ ಸಿಂಹನಂದನ ತಾಳದಲ್ಲಿ ಪಲ್ಲವಿಯನ್ನು ಹಾಡಿದರಂತೆ! (ತಾಳದ ಚೌಕಕಾಲದ ಒಂದು ಕಳಾಕಾಲಕ್ಕೆ ನಾವು ನಿಧಾನವಾಗಿ ಓದುವ ನಾಲ್ಕು ಅಕ್ಷರಗಳ ಕಾಲವಾಗುವುದು).

ಇಷ್ಟಾದರೂ ಸುಬ್ರಹ್ಮಣ್ಯಯ್ಯರ್‌ರವರಿಗೆ ಶಾರೀರ ಸೌಖ್ಯವಿರಲಿಲ್ಲ. ತಮ್ಮನ ಅಭ್ಯುದಯದ ಅತ್ಯುತ್ಸಾಹಿ ರಾಮಸ್ವಾಮಿ ಶಿವನ್‌ರವರ ಹರಿತವಾದ ಲೇಖಣಿಗೆ ಇವರು ಗುರಿಯಾಗಿ ಮನಃಕಷಾಯವು ಹುಟ್ಟಿದ್ದಿತು. ಆದರೂ ಮಹಾವೈದ್ಯನಾಥರೇನೋ ಒಂದೇ ರೀತಿಯ ವಿಶ್ವಾಸವನ್ನು ಇಟ್ಟಿದ್ದರು. ಅವರಿಗಿದೆಲ್ಲಾ ಸಮ್ಮತವಿಲ್ಲದಿದ್ದರೂ, ಗಾಢವಾದ ಭ್ರಾತೃಪ್ರೇಮದಿಂದ ಏನನ್ನೂ ಹೇಳಲಸಮರ್ಥರಾಗಿದ್ದರು. ಪಟ್ಟಣಂ ಸುಬ್ರಹ್ಮಣ್ಯಯ್ಯರ್ ರವರು ಉತ್ತಮ ಕೃತಿಕಾರರು. ತ್ಯಾಗರಾಜರ ಕೃತಿಗಳನ್ನು ಬಿಟ್ಟರೆ ತೆಲುಗಿನ ಅವರ ವೆಂಕಟೇಶಾಂಕಿತದ ಕೃತಿಗಳೇ ಹೆಚ್ಚು ಪ್ರಚಾರದಲ್ಲಿರುವುವು. ಇಬ್ಬರೂ ಒಬ್ಬರೇ ಗುರುಗಳಲ್ಲಿ ವ್ಯಾಸಂಗಮಾಡಿದ್ದರಿಂದ ಕೃತಿರಚನೆಯ ಪಾಠವು ಇಬ್ಬರಿಗೂ ಒಂದೇ ಬಗೆಯದಾಗಿದ್ದಿತು. ಆದರೆ ಮಹಾವೈದ್ಯರು ಹೇರಳವಾಗಿ ಕೃತಿರಚನೆಮಾಡಲಿಲ್ಲ. ಇದಕ್ಕೆ ಇವರ ಅಕಾಲಮರಣವೂ ಒಂದು ಕಾರಣವಾಗಿರಬಹುದು. ಇವರು ಹೆಚ್ಚಾಗಿ ಕೃತಿರಚನೆ ಮಾಡದಿದ್ದರೂ, ಇವರು ಮಾಡಿರುವ ಕೆಲವೇ ಕೃತಿಗಳಲ್ಲಿ ಮುಖ್ಯವಾದ 'ಮೇಳರಾಗ ಮಾಲಿಕೆ'ಯು ಇವರ ಹೆಸರು ಚಿರಸ್ಥಾಯಿಯಾಗಿ ನೆಲೆಸುವಂತೆ ಮಾಡಿದೆ. ಇತರ ಅನೇಕ ವಾಗ್ಗೇಯಕಾರರು ಈ ಬಗೆಯ ರಾಗಮಾಲಿಕೆಗಳನ್ನು ಮಾಡಿದ್ದರೂ ಅವು ಇಷ್ಟು ರಂಜನೀಯವಾಗಿಯಾಗಲೀ ಅಥವಾ ಪ್ರಸಿದ್ಧವಾಗಿಯಾಗಲೀ ಇಲ್ಲ. ಕರ್ಣಾಟಕ ಸಂಗೀತದ ರಾಗರಚನೆಯ ತಳಹದಿಯಾಗಿರುವ 72 ಮೇಳಕರ್ತರಾಗಗಳನ್ನೆಲ್ಲಾ ಒಳಗೊಂಡಿರುವ ಈ ಬೃಹತ್‌ಕೃತಿಯನ್ನು ಹಾಡಬೇಕಾದರೆ ಮೂರು ನಾಲ್ಕು ಘಂಟೆಗಳ ಕಾಲವಾದರೂ ಬೇಕಾಗುತ್ತದೆ.

ರಾಗಮಾಲಿಕೆಗಳು

ರಾಗಮಾಲಿಕೆಗಳು ಹೆಸರೇ ಸೂಚಿಸುವಂತೆ, ಕೆಲವು ರಾಗಗಳಿಂದ ಕೂಡಿದ ಕೃತಿಗಳು. ಇವು ಭಾರತೀಯ ಸಂಗೀತದಲ್ಲೇನೂ ಹೊಸದಲ್ಲ. ಪಾಶ್ಚಾತ್ಯ ಸಂಗೀತದಲ್ಲಿಯೂ Poly Phony ಎಂಬ ಹೆಸರಿನಲ್ಲಿವೆ. ಆದರೆ ಅವರ ಪದ್ಧತಿಯಲ್ಲಿ ಒಟ್ಟಿಗೇ ಕೆಲವು ರಾಗಗಳನ್ನು (Melody) ಬಾರಿಸುವರು. ನಮ್ಮಲ್ಲಿ ಒಂದರನಂತರ ಒಂದು. ಭರತಾಚಾರ್ಯನ, ಗ್ರಾಮ, ಜಾತಿ ಗಾಯನದಿಂದ ರಾಗಗಳ ಹೊಸ ಸ್ವರೂಪದಲ್ಲಿ ಸಂಗೀತವು ಅಭಿವೃದ್ಧಿಯಾದಂತೆಲ್ಲಾ, ಕೃತಿಕಾರರೂ ನಾನಾ ಬಗೆಯಲ್ಲಿ ತಮ್ಮ ಚಮತ್ಕಾರಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಅದರಲ್ಲಿ ಈ ವಿವಿಧ ರಾಗ ಸಮೂಹಗಳಿಂದ ಕೂಡಿದ ರಾಗ ಕದಂಬ, ತಾಳ ಸಮೂಹದಿಂದ ಕೂಡಿದ ತಾಳಾರ್ಣವ ಅಥವಾ ತಾಳಮಾಲಿಕೆ, ವಿವಿಧ ಭಾಷಾ ಸಾಹಿತ್ಯದಿಂದ ಕೂಡಿದ ಮಣಿಪ್ರವಾಳ ಕೃತಿಗಳು ಇವೇ ಮುಖ್ಯವಾದುವು. ಇವುಗಳು ನಮ್ಮಲ್ಲಿ ಏಳೆಂಟು ಶತಮಾನಗಳಿಂದಲೂ ರೂಢಿಯಲ್ಲಿರುವುವೆಂಬುದಕ್ಕೆ ಆಧಾರಗಳಿವೆ. ಹನ್ನೆರಡನೆಯ ಶತಮಾನದಲ್ಲಿ ಕರ್ಣಾಟಕದ ದೇವಗಿರಿಯ ಆಸ್ಥಾನದಿಂದ ದೆಹಲಿಯ ಅಲ್ಲಾಉದ್ದೀನ್ ಖಿಲ್ಜಿಯ ಆಸ್ಥಾನಕ್ಕೆ ಹೋದ ಸುಪ್ರಸಿದ್ಧ ಗಾಯಕ ಗೋಪಾಲನಾಯಕನು ಈ ಬಗೆಯ ಕೃತಿಗಳನ್ನು ರಚಿಸಿದ್ದನೆಂದು ಸುಪ್ರಸಿದ್ಧ ವ್ಯಾಖ್ಯಾನಕಾರ ಕಲ್ಲಿನಾಥರ ಸಂಗೀತ ರತ್ನಾಕರ ವ್ಯಾಖ್ಯಾನದಿಂದ ಗೊತ್ತಾಗುವುದು.

> "ತಥಾಹಿ ಗೋಪಾಲನಾಯಕೇನ ಗೀತ ದ್ವಾತ್ರಿಂಶ ದ್ಭಾಗಯುಕ್ತೇ
> ಗುದ್ಯಾತ್ಮಕೇಭ ಮರಾಖ್ಯೇ ಸ್ವಸ್ತಿಕ ಭೇದೇ ರಾಗಕದಂಬೇ
> ಪ್ರಥಮ ಸಿಂಹನಂದನ ತಾಲಬದ್ಧೆ.................................. ||"

ಇದರ ಪ್ರಕಾರ, ಸಿಂಹನಂದನ ತಾಳದಲ್ಲಿ 32 ಭಾಗವುಳ್ಳ ರಾಗಕದಂಬವೆಂಬ ಕೃತಿಯನ್ನು ರಚಿಸಿದ್ದನೆಂದು ಹೇಳಲಾಗಿದೆ. ರಾಗಕದಂಬವೆಂದರೆ ರಾಗಮಾಲಿಕೆಯೇ. ಹೀಗೆಯೇ ಗೋಪಾಲನಾಯಕನು ತಾಳಾರ್ಣವ ಅಂದರೆ ತಾಳಮಾಲಿಕೆಯನ್ನೂ ರಚಿಸಿದ್ದನೆಂದು ತಿಳಿದುಬರುವುದು. ತಾಳಮಾಲಿಕೆಗಳಿಗೆ ಹೆಚ್ಚಿನ ದೂರ ಹೋಗಬೇಕಾಗಿಲ್ಲ. ದಾಸಕೂಟದವರ ಸೂಳಾದಿಗಳೆಲ್ಲಾ ತಾಳಮಾಲಿಕೆಗಳೆ! ಹಿಂದೂಸ್ಥಾನೀ ಸಂಗೀತದಲ್ಲಿಯೂ ರಾಗಮಾಲಿಕಾ, ರಾಗಸಾಗರ ಇತ್ಯಾದಿ ಕೃತಿಗಳು ಇವೆ. ಕಳೆದ ಶತಮಾನವು ಕರ್ಣಾಟಕ ಸಂಗೀತದಲ್ಲಿ ಕೃತಿ ರಚನೆಗೆ ಪರ್ವಕಾಲ. ಹೇರಳವಾಗಿ ರಚನೆಯಾಯಿತು. ಆದರೆ ಬಹುತೇಕ ರಾಗಮಾಲಿಕೆಗಳು ಯಾರಾದರೂ, ರಾಜ, ಜಮೀನ್‌ದಾರ್ ಮುಂತಾದವರು ಹೊಗಳಿಕೆಯ ರೂಪದಲ್ಲಿ ರಚನೆಯಾದವು. ದೀಕ್ಷಿತರು, ಶ್ಯಾಮಾಶಾಸ್ತ್ರಿಗಳು ಮುಂತಾದವರು ಮಾತ್ರ ದೇವತಾಸ್ತುತಿ ರೂಪದಲ್ಲಿಯೇ ರಚಿಸಿದ್ದಾರೆ. ಇವುಗಳಲ್ಲಿ ಬಹು ಪ್ರಸಿದ್ಧವಾದುದು ದೀಕ್ಷಿತರ ಪಿತೃವರ್ಯರಾದ ರಾಮಸ್ವಾಮಿ ದೀಕ್ಷಿತರು ರಚಿಸಿದ 108 ರಾಗತಾಳಮಾಲಿಕೆ (ಇದು ಈಗಲೂ ಯಾರಿಗೂ ಹಾಡಲು ಅಸಾಧ್ಯವಾಗಿ ಪರಿಣಮಿಸಿದೆ). ಮುದ್ದುಸ್ವಾಮಿ ದೀಕ್ಷಿತರ "ಶ್ರೀ ವಿಶ್ವನಾಥಂ ಭಜೇಹಂ" ಶ್ಯಾಮಾ ಶಾಸ್ತ್ರಿಗಳ "ಅಂಬಾನಿನ್ನುನೇರ ನಮ್ಮಿತಿ," ಸುಬ್ಬರಾಮ ದೀಕ್ಷಿತರ "ಈ

ಕನಕಾಂಬರಿ", ತೋಡಿ ಸೀತಾರಾಮಯ್ಯರ್‌ರವರ "ನಿತ್ಯ ಕಲ್ಯಾಣಿ", ಮಹಾವೈದ್ಯನಾಥ ಶಿವನ್‌ರವರ ಮೇಳರಾಗಮಾಲಿಕಾ ಇತ್ಯಾದಿ. ಈ ಸಂಪ್ರದಾಯವನ್ನನುಸರಿಸಿಯೇ ಶ್ರೀ ವಾಸುದೇವಾಚಾರ್ಯರು, 1911ರಲ್ಲಿ ದೆಹಲಿ ದರ್ಬಾರಿನಂತರ ಹಿಂದಿನ ಜಾರ್ಜ್ ದೊರೆಗಳ ಹೆಸರಿನಲ್ಲಿಯೂ, 1927ರ ನಾಲ್ವಡಿ ಕೃಷ್ಣರಾಜರ ರಜತ ಜಯಂತ್ಯುತ್ಸವ ಸಂದರ್ಭದಲ್ಲಿಯೂ ಒಂದೊಂದು ರಾಗಮಾಲಿಕೆಯನ್ನು ರಚಿಸಿ ಹಾಡಿದ್ದಾರೆ. ಆದರೆ ಇವುಗಳಲ್ಲೆಲ್ಲಾ ಮೇಳರಾಗಮಾಲಿಕೆಯೇ ಕಣ್ಣಿಗೆ ಕಟ್ಟಿದಂತೆ ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡುಬಂದಿದೆ.

ಮಹಾವೈದ್ಯನಾಥರ ಹಾಗೆಯೇ ವೆಂಕಟಮುಖಿಯ ಸಂಪ್ರದಾಯದ ಮೇಳರಾಗಗಳಿಂದ ಕೂಡಿದ "ಈ ಕನಕಾಂಬರಿ" ಎಂಬ ಮೇಳರಾಗ ಮಾಲಿಕೆಯನ್ನು ಸುಬ್ಬರಾಮ ದೀಕ್ಷಿತರು ರಚಿಸಿದ್ದಾರೆ. ಸ್ವಃಕೋಟೀಶ್ವರಯ್ಯರ್‌ರವರು ಇದೇ 72 ಮೇಳಗಳ ಕೃತಿಗಳನ್ನು ಕಂದಗಾನಾಮೃತವೆಂಬ ಹೆಸರಿನಲ್ಲಿ ರಚಿಸಿದ್ದಾರೆ. ಆದರೆ ಇವೆಲ್ಲಾ ಮೇಳರಾಗಮಾಲಿಕೆಯಷ್ಟು ಹಿತವಾಗಿಯೂ ಪ್ರಸಿದ್ಧವಾಗಿಯೂ ಇಲ್ಲ.

ಮೇಳರಾಗಮಾಲಿಕೆಯ ಸ್ಥೂಲ ಪರಿಚಯ

ಮೇಳರಾಗಮಾಲಿಕೆಯು ಮೊದಲು ಈ ರೂಪದಲ್ಲಿರಲಿಲ್ಲ. ನಾನಾರೂಪಾಂತರದಿಂದ ಈ ಆಕಾರವನ್ನು ತಾಳಿದೆ. ಈ ಕೃತಿಗೆ ಹಿನ್ನೆಲೆ ತಂಜಾವೂರ್ ಆಸ್ಥಾನದ 'ವೆಂಕಟಕವಿ' ಎಂಬ ಅಭಿದಾನದ ವೆಂಕಟರಾಯರು. ಅವರು ಆಗಿನ ದೊರೆಯ ಅಳಿಯನ ಗೌರವಾರ್ಥವಾಗಿ 72 ರಾಗಗಳ ಹೆಸರಿನ ಸಾಹಿತ್ಯದಿಂದ ಕೂಡಿದ 'ಬಾಹತ್ತರ ಮೇಳಕರ್ತ' ಎಂಬ ಕೃತಿಯನ್ನು ರಚಿಸಿದರು. ಸ್ವಲ್ಪ ಕಾಲಾನಂತರ ತಂಜಾವೂರು ಮಹಾರಾಜರು ಈ ಕೃತಿಗೆ ಸ್ವರಮಟ್ಟುಗಳನ್ನು ಹಾಕುವಂತೆ ಮಹಾವೈದ್ಯನಾಥರನ್ನು ಕೋರಿದರು. ಅದರಂತೆ ಏಳೇ ದಿನಗಳಲ್ಲಿ ಸ್ವರವನ್ನು ಹಾಕಿ ಹಾಡಿ ರಾಜಸಭೆಯಲ್ಲಿ ಸನ್ಮಾನವನ್ನು ಪಡೆದರು. ಈ ಸ್ವರಕ್ಕೇ ಮುಂದೆ ಸಂಸ್ಕೃತ ಸಾಹಿತ್ಯವನ್ನು ಹಾಕಿ ಉತ್ತಮ ಸ್ವರೂಪವನ್ನು ಕೊಟ್ಟರು. ಮುಂದಕ್ಕೆ ಇವರ ಅಣ್ಣ ರಾಮಸ್ವಾಮಿ ಶಿವನ್‌ರವರು ಎರಡೆರಡು ರಾಗದಿಂದ ಕೂಡಿದ ಚಿಟ್ಟೆಸ್ವರಗಳನ್ನು ಹಾಕಿ ಕೃತಿಯು ಈಗಿನ ಭವ್ಯರೂಪವನ್ನು ತಾಳಿದೆ.

ರಾಗಮಾಲಿಕೆಗಳಿಗೂ ಇತರ ಕೃತಿಗಳಿಗೂ ರಚನೆಯಲ್ಲಿ ವ್ಯತ್ಯಾಸವಿದೆ. ಇತರ ಕೃತಿಗಳು ಯುಕ್ತವಾದ ರಾಗತಾಳಗಳಲ್ಲಿ ಪಲ್ಲವಿ, ಅನುಪಲ್ಲವಿ, ಚರಣದ ಸಾಹಿತ್ಯಗಳು ರಚಿಸಲ್ಪಟ್ಟು ಅಷ್ಟಕ್ಕೇ ಬಿಡಲ್ಪಡುತ್ತವೆ. ದೀಕ್ಷಿತರನ್ನು ಬಿಟ್ಟು ಬೇರೆ ಯಾರೂ 'ರಾಗಮುದ್ರೆ'ಗಳನ್ನು ಉಪಯೋಗಿಸಿದಂತೆ ಕಂಡುಬರುವುದಿಲ್ಲ. ಆದಕಾರಣ ಅನೇಕ ಕೃತಿಗಳು ಕಾಲಾಂತರದಲ್ಲಿ ಕೃತಿಕಾರರು ರಚನೆ ಮಾಡಿದ ರಾಗಗಳನ್ನು ಬಿಟ್ಟು ಬೇರೆ ರಾಗಗಳಿಗೆ ಜಾರಬಹುದು. ರಾಗಮಾಲಿಕೆಗಳಲ್ಲಿಯಾದರೋ, ಕಾಲಾಂತರವೇಕೆ ಕೃತಿಕಾರರ ಕಾಲದಲ್ಲಿಯೇ ಸರಿಯಾಗಿ ಹಾಡಲು ನಾನಾ ಚರಣಗಳು ಯಾವ ಯಾವ ರಾಗಗಳಲ್ಲಿ ಹಾಡಲ್ಪಡಬೇಕೆಂಬುದಕ್ಕೆ 'ರಾಗಮುದ್ರೆ'ಯ ಅವಶ್ಯಕತೆ ಇದ್ದೇ ಇದೆ. ಇದನ್ನು ಸಾಹಿತ್ಯದಲ್ಲಿ ಅಳವಡಿಸಲು ಇದಲ್ಲದೆ

ನಾನಾ ಚರಣಗಳ ರಾಗಗಳನ್ನು ಅವುಗಳ ರಂಜಕತ್ವಕ್ಕೆ ಪರಸ್ಪರ ವಿರೋಧವಾಗದಂತೆ ಚುನಾಯಿಸಲೂ ಚಮತ್ಕಾರವು ಬೇಕು. ಆ ರಾಗಗಳಲ್ಲಿಯೂ ಸಾಧ್ಯವಾದ ಅವುಗಳ ಜೀವಸ್ವರ, ಮತ್ತು ರಂಜನೀಯ ಸಂಚಾರಗಳಿರಬೇಕು. ಅದರಲ್ಲಿಯೂ ಮೇಳಕರ್ತ ರಾಗಗಳಿಂದ ಕೂಡಿದ ರಾಗಮಾಲಿಕೆಯು ವಿಶೇಷ ಚಮತ್ಕಾರದಿಂದ ಕೂಡಿರಬೇಕು. ಕೃತಿಯಲ್ಲಿ ಆಯಾ ರಾಗಗಳ ಸಾರವು ತುಂಬಿರಬೇಕು. ರಾಗಗಳ ಲಕ್ಷಣವು ಗ್ರಂಥಮುಖಾಂತರ ಎಷ್ಟೇ ಪರಿಚಯವಿದ್ದರೂ, ಲಕ್ಷ್ಯವನ್ನು ಅರಿಯಲು ಈ ರಾಗಮಾಲಿಕೆಯೇ ಕೈಗನ್ನಡಿಯಾಗಿರುವುದು. ಈ ಭಾಗದಲ್ಲಿ ಮಹಾವೈದ್ಯನಾಥರು ತಮ್ಮ ಅಸಾಧಾರಣ ಸಾಮರ್ಥ್ಯವನ್ನು ವ್ಯಕ್ತಪಡಿಸಿರುವರು.

ಮಹಾವೈದ್ಯನಾಥರು ಕೃತಿಯಲ್ಲಿ ಹನ್ನೆರಡು ಹನ್ನೆರಡು ರಾಗಗಳಿಗೆ ಒಂದೊಂದು ಚಕ್ರವಾಗಿ ವಿಂಗಡಿಸಿ, ಕೃತಿಗೆ ಆರು ಚಕ್ರಗಳಿರುವ ಹಾಗೆ (ಅಥವಾ ಆರು ಚರಣಗಳೆಂದೇ ಭಾವಿಸೋಣ) ರಚಿಸಿದ್ದು ಕೃತಿಯು ಮೊದಲು ಶ್ರೀರಾಗದಲ್ಲಿ ಪ್ರಾರಂಭವಾಗುತ್ತದೆ. ಪ್ರಾರಂಭದ ಸಾಹಿತ್ಯವು ಅವರ ಕುಲದೈವವಾದ (ಅವರ ತಂದೆಯವರು ಪದೇ ಪದೇ ಭಜನೆ ಮತ್ತು ಹರಿಕಥೆಗಳನ್ನು ಮಾಡುತ್ತಿದ್ದ) ಪ್ರಣತಾರ್ಥಿಹರ ಸ್ವಾಮಿಯ ಮೇಲೆ ರಚಿಸಲ್ಪಟ್ಟಿದೆ. ಪಲ್ಲವಿ, ಅನುಪಲ್ಲವಿ, ಚಿಟ್ಟೆಸ್ವರ, ಜತಿಸ್ವರ ಇವೆಲ್ಲಾ ಎರಡೆರಡು ವೃತ್ತಗಳಿವೆ. ಇದಾದ ಮೇಲೆ ಮೇಳ ರಾಗಮಾಲಿಕೆಯು ಪ್ರಾರಂಭವಾಗುತ್ತದೆ.

ಮೇಳರಾಗಮಾಲಿಕೆಯು 'ಸಂಗ್ರಹ ಚೂಡಾಮಣಿ' ಯಲ್ಲಿರುವ ಸಂಪ್ರದಾಯವನ್ನನು ಸರಿಸಿ ರಚನೆಯಾಗಿದೆ. ಆದ್ದರಿಂದ 72 ಮೇಳ ರಾಗಗಳಲ್ಲಿ ಸುಮಾರು 40 ರಾಗಗಳ ಸಂಚಾರದಲ್ಲಿ ಕಾಣಬರುವ ವಿವಾದಿ ದೋಷಗಳನ್ನು ಪರಿಹರಿಸಿ ಕೃತಿ ರಚನೆಯಾಗಬೇಕು. ವೆಂಕಟಮಖಿಯವರ ಸಂಪ್ರದಾಯದಲ್ಲಿ ಇದಕ್ಕೆ ಸ್ವಲ್ಪ ಸೌಲಭ್ಯಗಳಿವೆ.

ರಾಗ ಸಂಪ್ರದಾಯಗಳು

ಪ್ರಪಂಚದ ಸಂಗೀತವೆಲ್ಲವೂ ನಡೆಯುತ್ತಿರುವುದು ಸಪ್ತಸ್ವರಗಳ ಆಧಾರದ ಮೇಲೆ. ಪಾಶ್ಚಾತ್ಯ ಸಂಗೀತದಲ್ಲಿ ನಾನಾ ಶ್ರೇಣಿಯಲ್ಲಿ ಸ್ವರ ಸಮೂಹಗಳು, ಒಟ್ಟೊಟ್ಟಾಗಿ ಒಂದು ಪಥದಲ್ಲಿ ಮುಂದುವರೆಯುವುವು (Harmony). ಪೌರ್ವಾತ್ಯ ಸಂಗೀತದಲ್ಲಿ ಒಂದರ ಹಿಂದೊಂದು ಒಂದೇ ಪಥದಲ್ಲಿ ನಡೆಯುವುವು (Melody). ಪೌರ್ವಾತ್ಯ ಸಂಗೀತಕ್ಕೆ ರಾಗವೇ ಜೀವಾಳ (Mode). ಇದು ಭಾರತೀಯ ಸಂಗೀತದಷ್ಟು ಎಲ್ಲಿಯೂ ಅಭಿವೃದ್ಧಿಯನ್ನು ಪಡೆದಿಲ್ಲ. ಭಾರತೀಯ ಸಂಗೀತದಲ್ಲಿ ಭರತಾಚಾರ್ಯನ ನಂತರ ರಾಗರಚನೆಯು ವೃದ್ಧಿಯಾಗುತ್ತಾ ಅವುಗಳ ವರ್ಗೀಕರಣದ ಸಮಸ್ಯೆಯು ಹುಟ್ಟಿತು. ಇದನ್ನು ಪರಿಹರಿಸಲು ನಾನಾ ರಾಗಗಳನ್ನು ಗುಂಪುಗುಂಪಾಗಿ ಮಾಡಿದರು. ಇದರಲ್ಲಿ ಮುಖ್ಯವಾದುವು ರಾಗ ರಾಗಿಣಿ ಪದ್ಧತಿ, ಮತ್ತು ಮೇಳಪದ್ಧತಿ. ರಾಗ ರಾಗಿಣಿ ಪದ್ಧತಿಯಲ್ಲಿ ಮೊದಮೊದಲು, ಪುರುಷರಾಗ, ಸ್ತ್ರೀರಾಗ ಮುಂತಾದ ಭೇದಗಳಲ್ಲಿ ಪ್ರಾರಂಭವಾಗಿ, ಇಂದು ಭೈರವ, ಮಾಲಕೋಸ್, ಹಿಂದೋಳ, ದೀಪಕ, ಮೇಘ ಮತ್ತು ಶ್ರೀ ಈ ಆರು ರಾಗಗಳೂ ಅವಕ್ಕೆ ತಲಾ ಐದೈದು

ರಾಗಿಣಿಗಳೂ ಇರುವಂತೆ ರಚಿತವಾಗಿವೆ. ಈ ಪದ್ಧತಿಯು, ಹನುಮಾನ್ ಮತವೆಂದು ಔತ್ತರೇಯ ಸಂಗೀತದಲ್ಲಿ ಪ್ರಚಾರದಲ್ಲಿದೆ. ಮೇಳ ಪದ್ಧತಿಯಲ್ಲಿ ಒಂದೇ ಬಗೆಯ ಸಪ್ತಸ್ವರಗಳು ಆರೋಹಣ ಅವರೋಹಣಗಳಲ್ಲಿ ಬರುವ ರಾಗಗಳ ಕೆಳಗೆ, ಅದೇ ಛಾಯೆಯನ್ನು ಹೋಲುವ ರಾಗಗಳನ್ನು ಜೋಡಿಸಿರುವರು. ಇದರಲ್ಲಿ ಮೊದಲನೆಯ ಸಪ್ತಸ್ವರ ಆರೋಹಣ ಅವರೋಹಣಗಳಿರುವ ರಾಗಕ್ಕೆ ಮೇಳ (ಜನಕ) ರಾಗವೆಂದೂ ಅದರ ಕೆಳಗೆ ಬಂದಿರುವ ರಾಗಗಳಿಗೆ ಜನ್ಯರಾಗಗಳೆಂದೂ ಹೆಸರು. ಈ ಪದ್ಧತಿಯು ದಾಕ್ಷಿಣಾತ್ಯ ಸಂಗೀತದ ತಳಹದಿಯಾಗಿದೆ.

ವೆಂಕಟಮುಖಿಯು, ಆರೋಹಣ, ಅವರೋಹಣಗಳಲ್ಲಿ ಸೂಕ್ತವಾದ ಮಾರ್ಪಾಟುಗಳನ್ನು ಮಾಡಿರುವರು - ಉದಾಹರಣೆಗೆ, ಮೊದಲನೆಯ ಕನಕಾಂಬರಿ : ಆರೋಹಣ - ಸಾರಿಮ ಪಧಸಾ, ಅವರೋಹಣ - ಸನಿಧಪ ಮಗರಿಸ.

25ನೆಯ ಶರಾವತಿ	– ಆ: ಸಮಗಮ ಪಧನಿಧಸ	– ಅ: ಸನಿಧಪಮಗರಿಸ
36ನೆಯ ಚಲನಾಟ	– ಆ: ಸರಿಗಮಪಧನಿಸ	– ಅ: ಸನಿಪಮರಿಸಾ

ಹೀಗೆಯೇ ಈ ವಿವಾದಿ ದೋಷ ರಾಗಗಳ ಕಾಠಿನ್ಯತೆಯನ್ನು ರಚನಾಕ್ರಮದಲ್ಲಿ ವೆಂಕಟಮುಖಿಯು ಆದಷ್ಟು ಕಡಿಮೆ ಮಾಡಿರುವರು. ಆದರೆ ಇವರ ಸಂಪ್ರದಾಯವು ಹಿಂದೆ ಬಿದ್ದು, ಗೋವಿಂದಾಚಾರ್ಯನ 'ಸಂಗ್ರಹ ಚೂಡಾಮಣಿ'ಯ ಸಂಪ್ರದಾಯವು ಈಗ ಬಳಕೆಯಲ್ಲಿದೆ. ಇದರ ಪ್ರಕಾರ ಈ ಮೇಳರಾಗಗಳ ಆರೋಹಣ ಅವರೋಹಣ ಪೂರ್ಣವಾಗಿ ಸಪ್ತಸ್ವರ ಶ್ರೇಣಿಯಿಂದ ಕೂಡಿವೆ. ಆದ್ದರಿಂದ ಈ 72 ಮೇಳಗಳಲ್ಲಿ 40 ರಾಗಗಳಲ್ಲಿ ಈ ವಿವಾದಿ ದೋಷವು ಪೂರ್ಣರೂಪದಲ್ಲಿ ಕಾಣಬರುತ್ತದೆ. ಇದಲ್ಲದೆ ಗೋವಿಂದಾಚಾರ್ಯನು, ವೆಂಕಟಮುಖಿಯ, ಕನಕಾಂಬರಿ, ಫೇನದ್ಯುತಿ, ಗಾನಸಾಮವರಾಳಿ ಮುಂತಾದ 72 ಮೇಳರಾಗಗಳ ಜಾಗದಲ್ಲಿ ಸಪ್ತಸ್ವರಾರೋಹ, ಅವರೋಹಗಳನ್ನುಳ್ಳ, ಕನಕಾಂಗಿ, ರತ್ನಾಂಗಿ, ಗಾನಮೂರ್ತಿ ಮುಂತಾದ 72 ಮೇಳರಾಗಗಳನ್ನು ರಚಿಸಿರುವರು. ಈಗ ಕರ್ಣಾಟಕ ಸಂಗೀತದಲ್ಲಿ ಈ ಕನಕಾಂಗಿ, ರತ್ನಾಂಗಿ, ಗಾನಮೂರ್ತಿ ಮುಂತಾದ ಮೇಳಗಳೇ ಪ್ರಚಾರದಲ್ಲಿರುವುವು. ಮಹಾವೈದ್ಯನಾಥರು ಸಂಗ್ರಹ ಚೂಡಾಮಣಿಯ ಅನುಯಾಯಿ ಗಳಾದ್ದರಿಂದ, ತಮ್ಮ ಮೇಳರಾಗಮಾಲಿಕೆಯಲ್ಲಿ , ಗೋವಿಂದಾಚಾರ್ಯನ, ಕನಕಾಂಗಿ, ರತ್ನಾಂಗಿ ಮುಂತಾದ ಮೇಳಗಳನ್ನು ಉಪಯೋಗಿಸಿರುವರು. ಆದ್ದರಿಂದ ವಿವಾದಿ ದೋಷವುಳ್ಳ ರಾಗಗಳನ್ನು ಸಾಧ್ಯವಾದಷ್ಟು ರಂಜನೀಯವಾಗಿ ಮಾಡಲು ಚಮತ್ಕಾರವನ್ನು ಉಪಯೋಗಿಸಿದ್ದಾರೆ.

ಮೇಳರಾಗಮಾಲಿಕೆ ಸೂಕ್ಷ್ಮ ಪರಿಚಯ

ಒಂದೆಯೇ ಹೇಳಿದಂತೆ ಮೇಳರಾಗಮಾಲಿಕೆಯು ಅವರ ಕುಲದೇವತೆಯಾದ ಪ್ರಣತಾರ್ಥಿಹರಸ್ವಾಮಿಯ ಸ್ತೋತ್ರರೂಪದಲ್ಲಿದ್ದು, ಶ್ರೀ ರಾಗದಿಂದ ಪ್ರಾರಂಭಿಸಲ್ಪಡುವುದು.

ಕೃತಿಯು ಆದಿತಾಳದಲ್ಲಿ ರಚನೆಯಾಗಿದೆ. ಮೊದಲು ಎರಡು ಆವರ್ತ ಪಲ್ಲವಿ, ಎರಡು ಆವರ್ತ ಅನುಪಲ್ಲವಿ, ಅನಂತರ ಎರಡು ಆವರ್ತ ಚಿಟ್ಟೆಸ್ವರ, ಆಮೇಲೆ ಎರಡು ಆವರ್ತ ಜತಿಸ್ವರ ಇವುಗಳು ಆದನಂತರ ಮೇಳರಾಗಮಾಲಿಕೆಯು ಪ್ರಾರಂಭವಾಗುವುದು. ರಾಗಮಾಲಿಕೆಯಲ್ಲಿಯೂ, ಒಂದೊಂದು ರಾಗಕ್ಕೂ ಎರಡು ಆವರ್ತ ಸಾಹಿತ್ಯ ಮತ್ತು ಒಂದು ಆವರ್ತ ಚಿಟ್ಟೆಸ್ವರ ಇದರನಂತರ ಮುಂದಿನ ಆವರ್ತದಲ್ಲಿಯೂ ಚಿಟ್ಟೆಸ್ವರ. ಆದರೆ ಪೂರ್ವಾರ್ಧವು ಈ ರಾಗದ್ದಾದರೆ ಉತ್ತರಾರ್ಧವು ಮುಂದಿನ ರಾಗದ್ದು. ಹೀಗೆ ಮೇಳರಾಗಗಳನ್ನು ವಿವಾದಿ ದೋಷವಿದ್ದರೂ ಸುಲಭವಾಗಿಯೂ, ಕ್ರಮವಾಗಿಯೂ ಹಾಡಲು ಅನುಕೂಲಿಸುವಂತೆ ರಚಿಸಿದ್ದಾರೆ. ಇದರಂತೆ ಕೃತಿಯು ಆದಿತಾಳದಲ್ಲಿ ಸುಮಾರು 300 ಆವರ್ತಗಳಷ್ಟಾಗುತ್ತದೆ. ಅಂದರೆ ದೃತ ಕಾಲದಲ್ಲಿ ಹಾಡಿದರೂ ಮತ್ತು ಒಂದೊಂದು ಆವರ್ತವನ್ನು ಕೊನೆಗೆ ಒಂದೊಂದೇ ಸಲ ಹಾಡಿದರೂ ಸುಮಾರು ಹತ್ತಿರ ಹತ್ತಿರ ಎರಡು ಘಂಟೆಗಳ ಕಾಲವಾದರೂ ಬೇಕು. ಆದರೆ ಕೃತಿಯ ಪೂರ್ವಾರ್ಧ ಶುದ್ಧಮಧ್ಯಮ ಮೇಳಗಳನ್ನು ದೃತಕಾಲದಲ್ಲಿ ಹಾಡಿದರೂ, ಪ್ರತಿಮಧ್ಯಮ ಮೇಳಗಳನ್ನು ಸ್ವಲ್ಪ ನಿಧಾನವಾಗಿ ಹಾಡಬೇಕಾಗುತ್ತದೆ. ಇಲ್ಲದಿದ್ದರೆ ಅವು ರಸಹೀನವಾಗಿ ಕಾಣುವುವು. ಆದ್ದರಿಂದ ಕ್ರಮವಾಗಿ ಹಾಡಿದರೆ, ಏನಿಲ್ಲವೆಂದರೂ ನಾಲ್ಕರಿಂದ ಐದುಘಂಟೆಗಳ ಕಾಲವಾದರೂ ಬೇಕು. ಆದ್ದರಿಂದ ಯಾರೂ ಪೂರ್ತಿ ಕೃತಿಯನ್ನು ಹಾಡುವುದಿಲ್ಲ. ಒಂದು ಅಥವಾ ಎರಡು ಚಕ್ರಗಳನ್ನು ಹಾಡುವುದೇ ಹೆಚ್ಚು. ಕೃತಿಯಲ್ಲಿ ಒಂದು ವಿಶೇಷವೇನೆಂದರೆ, ಶುದ್ಧಮಧ್ಯಮ ಮೇಳಗಳ ಮೊದಲು ಆರು ರಾಗಗಳನ್ನು (ಕನಕಾಂಗಿ, ರತ್ನಾಂಗಿ ಇತ್ಯಾದಿ) ಕಿವಿಗೆ ಅಷ್ಟು ಹಿತವಾಗಿಲ್ಲದಿದ್ದರೂ, ಕೊನೆಯ ಆರು ಮೇಳಗಳು (ಯಾಗಪ್ರಿಯ, ರಾಗವರ್ಧನಿ, ಗಾಂಗೇಯ ಭೂಷಣಿ) ಮುಂತಾದವು ಹಿತವಾಗಿರುವುವು. ಆದರೆ ಪ್ರತಿಮಧ್ಯಮ ಮೇಳಗಳಲ್ಲಿ ಇದಕ್ಕೆ ವಿರುದ್ಧವಾಗಿ ಕಡೆಯ ಆರು ಮೇಳಗಳಿಗಿಂತ ಮೊದಲ ಆರು ಮೇಳಗಳು (ಸಾಲಗ, ಜಲಾರ್ಣವ, ಝಾಲವರಾಳಿ) ಮುಂತಾದುವು ವಿವಾದಿ ದೋಷವಿದ್ದರೂ ಅದು ಗಮಕರೂಪದಲ್ಲಿ ಮುಚ್ಚಿಹೋಗುವುದರಿಂದ, ಕೇಳಲು ಇಂಪಾಗಿರುವುವು. ಘನರಾಗಗಳಲ್ಲಿ ಒಂದಾದ ವರಾಳಿಯು ಈ ಮೇಳದ ಝಾಲವರಾಳಿಯ ಜನ್ಯ.

ಈ ಮೇಳರಾಗಗಳಲ್ಲಿ 40 ರಾಗಗಳಲ್ಲಿ ಬರುವ ವಿವಾದಿ ದೋಷವನ್ನು ಪರಿಹರಿಸಲು ಮಹಾವೈದ್ಯನಾಥರು ಚಮತ್ಕಾರವನ್ನುಪಯೋಗಿಸಿದ್ದಾರೆ. ಎರಡು ಅರ್ಧಗಳಲ್ಲಿಯೂ ವಿವಾದಿ ದೋಷವಿರುವಂತಹ ರಾಗಗಳಲ್ಲಿ ಸಾಧ್ಯವಾದಷ್ಟು, ವಿವಾದಿಗಳಾಗಿರುವ ಸ್ವರಗಳು ಪರಸ್ಪರ ಅಂಟದ ರೀತಿಯಲ್ಲಿ ಮಿಕ್ಕ ಸ್ವರಸಮೂಹದಲ್ಲಿಯೇ ಸಂಚಾರಗಳನ್ನು ಕಲ್ಪಿಸಿದ್ದಾರೆ. ಉದಾಹರಣೆಗೆ, ಮೊದಲನೆಯ ಕನಕಾಂಗಿ ರಾಗದಲ್ಲಿ ರಿ - ಗ, ಧ - ನಿ, ಪರಸ್ಪರ ವಿವಾದಿಗಳು ಇದರಲ್ಲಿ ಕೃತಿ ಸಂಚಾರವನ್ನು ಸಾಧ್ಯವಾದಷ್ಟು ಗ, ಮ, ಪ, ಧ ಸ್ವರಗಳಲ್ಲಿ ಮಾಡಿದ್ದಾರೆ. ಸಂಚಾರವು ಮುಕ್ತಾಯವಾಗುವ ವೇಳೆಯಲ್ಲಿ ರಿ, ಸ, ನಿ, ಸ್ವರಗಳನ್ನುಪಯೋಗಿಸಿದ್ದಾರೆ. ಇನ್ನು ಕೆಲವುಕಡೆ, ಯಾವುದಾದರೂ ಒಂದು ಅರ್ಧದಲ್ಲಿ ವಿವಾದಿ ದೋಷವಿದ್ದಲ್ಲಿ ಅದನ್ನು ಬಿಟ್ಟು

ಮಿಕ್ಕ ಸ್ವರಗಳಲ್ಲಿಯೇ ಸಂಚಾರವನ್ನು ಮಾಡಿ ಮುಕ್ತಾಯದಲ್ಲಿ ಒಂದು ಕಡೆ ವಿವಾದಿಯನ್ನು ಉಪಯೋಗಿಸಿಬಿಟ್ಟಿದ್ದಾರೆ. ಉದಾಹರಣೆಗೆ, ಸೇನಾಪತಿ ರಾಗದಲ್ಲಿ ಧ-ನಿ ಪರಸ್ಪರ ವಿವಾದಿಗಳು ಕೃತಿಯು ಸ, ರಿ, ಗ, ಮ, ಪ, ಧ ಈ ಸ್ವರಗಳಲ್ಲಿಯೇ ಸಂಚರಿಸಿ ಮುಕ್ತಾಯದಲ್ಲಿ ಒಂದು ಕಡೆ ನಿಷಾದವು ಬರುವುದು. ಹೀಗೆಯೇ ವಿವಾದಿ ದೋಷವುಳ್ಳ ರಾಗಸಂಚಾರಗಳಲ್ಲೆಲ್ಲಾ ಮೇಲ್ಕಂಡಂತೆ ಸ್ವಲ್ಪೋಪಯೋಗಮಾಡಿ ಆದಷ್ಟು ಅವುಗಳ ಕಠಿನತೆಯನ್ನು ಕಡಿಮೆ ಮಾಡಿದ್ದಾರೆ ಅಂತಹುದರಲ್ಲೂ ಕೆಲವುಕಡೆ, ಅವುಗಳ ಅಪರೂಪ ಭಾವಗಳನ್ನು ಪ್ರದರ್ಶಿಸಲು, ಸರಾಗವಾಗಿ ಸಪ್ತಸ್ವರ ಸಂಚಾರಗಳನ್ನೂ ಉಪಯೋಗಿಸಿದ್ದಾರೆ.

ರಾಗ ಸಂಚಾರ

ರಾಗಮಾಲಿಕೆಗಳಲ್ಲಿ ಬರುವ ರಾಗಗಳಲ್ಲಿ ಆದಷ್ಟು ಆಯಾ ರಾಗದ ಸಾರವು ತುಂಬಿರುವ ಅವಶ್ಯಕತೆಯಿದೆ. ಏಕೆಂದರೆ ಅದರಲ್ಲಿ ಬರುವ ಕೇವಲ ಒಂದೆರಡು ಆವರ್ತಗಳಲ್ಲಿ ರಾಗದ ಪೂರ್ಣಸಂಚಾರವನ್ನು ಮಾಡಲು ಸಾಧ್ಯವಿಲ್ಲವಾದ್ದರಿಂದ, ಈ ಎರಡು ಆವರ್ತಗಳಲ್ಲಿ ರಾಗದ ಉತ್ತಮ ಸ್ವರೂಪವನ್ನು ತೋರಿಸಬೇಕಾಗುವುದು. ಈ ಭಾಗದಲ್ಲಿಯೂ ಮಹಾ ವೈದ್ಯನಾಥರು ತುಂಬಾ ಯಶಸ್ವಿಗಳಾಗಿದ್ದಾರೆ. ಈ ರಾಗಮಾಲಿಕೆಯ 72 ರಾಗಗಳಲ್ಲಿ, ನಮ್ಮಲ್ಲಿ ಕೇವಲ ಹದಿನೆಂಟು ಇಪ್ಪತ್ತು ರಾಗಗಳಿಗಿಂತ ಹೆಚ್ಚಾಗಿ ಬಳಕೆಯಲ್ಲಿಲ್ಲದ ಪ್ರಯುಕ್ತ ನಮಗೆ ಮೇಳರಾಗಗಳ ಬಹುಭಾಗದ ಪರಿಚಯವೇ ಇಲ್ಲದೆ ಇದೆ. ದೀಕ್ಷಿತರು ವೆಂಕಟಮುಖಿ ಸಂಪ್ರದಾಯದ ಮೇಳಗಳಲ್ಲೆಲ್ಲಾ ಕೃತಿ ರಚನೆಮಾಡಿದ್ದರೂ, ತ್ಯಾಗರಾಜರು ಗೋವಿಂದಾಚಾರ್ಯನ ಸಂಪ್ರದಾಯದಲ್ಲಿರುವ ಮೇಳಗಳಲ್ಲಿ ವಿವಾದಿ ದೋಷವೂ ಸೇರಿ ಸ್ವಲ್ಪ ಮೇಳಗಳಲ್ಲಿ ಕೃತಿರಚನೆ ಮಾಡಿದ್ದರೂ ಈಗ ವ್ಯವಹಾರದಲ್ಲಿ ಅವುಗಳಾವುದೂ ಇಲ್ಲದೆ ಕೇವಲ ಕೆಲವು ಮೇಳಗಳು ಮತ್ತು ಅದರಲ್ಲಿಯು ಬಹು ಸ್ವಲ್ಪ ಭಾಗದ ಜನ್ಯರಾಗಗಳೂ ಬಳಕೆಯಲ್ಲಿರುವುದರಿಂದ ನಮಗೆ ಈ ಮೇಳರಾಗಗಳ ಬಹುಭಾಗದ ಪರಿಚಯವಾಗು ವಂತೆಯೇ ಇಲ್ಲ. ಆದ್ದರಿಂದ ಈ ಬಿಡಲ್ಪಟ್ಟಿರುವ ಮೇಳರಾಗಗಳು ಅದರಲ್ಲಿಯೂ ಪ್ರತಿಮಧ್ಯಮ ಮೇಳಗಳಲ್ಲಿ ಮಹಾವೈದ್ಯರು ರಚಿಸಿರುವ ಭಾಗವು ಅವುಗಳ ಅಲ್ಪ ಪರಿಚಯವನ್ನಾದರೂ ಮಾಡಿಕೊಳ್ಳಲು ಸಹಕಾರಿಯಾಗಿದೆ. ನಮ್ಮಲ್ಲಿ ಹೆಚ್ಚು ರೂಢಿಯಲ್ಲಿರುವ ಹನುಮ ತೋಡಿ, ಮಾಯಾಮಾಲವಗೌಳ, ಚಕ್ರವಾಕ, ಕೀರವಾಣಿ, ಖರಹರಪ್ರಿಯ, ಗೌರೀಮನೋಹರಿ, ಚಾರುಕೇಶಿ, ಹರಿಕಾಂಭೋಜಿ, ಧೀರಶಂಕರಾಭರಣ, ಚಲನಾಟ, ಝಾಲವರಾಳಿ, ಶುಭಪಂತುವರಾಳಿ, ಕಾಮವರ್ಧನಿ, ಗಮನಶ್ರಮ, ಷಣ್ಮುಖಪ್ರಿಯ ಮೇಚಕಲ್ಯಾಣಿ ಮುಂತಾದ ರಾಗಗಳ ಸಂಚಾರಗಳೂ, ಚಿಟ್ಟೆ ಸ್ವರಗಳೂ ಬಹುರಂಜನೀಯವಾಗಿವೆ. ಇದಲ್ಲದೆ, ಖರಹರಪ್ರಿಯ, ಗೌರೀಮನೋಹರಿ, ಹರಿಕಾಂಭೋಜಿ, ಷಣ್ಮುಖಪ್ರಿಯ ಮುಂತಾದ ರಾಗಗಳಲ್ಲಿ, ತಾರ ಗಾಂಧಾರದವರೆಗೂ ಹೋಗಿ ಆಯಾ ರಾಗಗಳ ಮುಖ್ಯ ಸಂಚಾರಗಳನ್ನು ತೋರಿಸಿದ್ದಾರೆ.

ಚಿಟ್ಟೆಸ್ವರ

ರಾಗಮಾಲಿಕೆಗಳ ಎರಡನೆಯ ಮುಖ್ಯವಾದ ಅಂಶ ಚಿಟ್ಟೆಸ್ವರ. ನಮ್ಮ ದಾಕ್ಷಿಣಾತ್ಯ ಗಾಯನದಲ್ಲಿ ಪ್ರಾಯಶಃ ಮುದ್ದುಸ್ವಾಮಿ ದೀಕ್ಷಿತರ ಹೊರತು ಮಿಕ್ಕವರೆಲ್ಲರೂ ಅವರವರ ರಾಗಮಾಲಿಕೆಗಳಲ್ಲಿ ರಂಜನೀಯವಾದ ಚಿಟ್ಟೆಸ್ವರಗಳನ್ನು ಹಾಕಿದ್ದಾರೆ. ದೀಕ್ಷಿತರೂ ಕೂಡ ರಂಜನೀಯವಾಗಿರಲು, ಚಿಟ್ಟೆಸ್ವರದ ಬದಲು ದೃತಕಾಲದ ಸಾಹಿತ್ಯವನ್ನು ಹಾಕಿದ್ದಾರೆ. ಈ ಭಾಗವನ್ನೂ ಮಹಾವೈದ್ಯರು ಚಮತ್ಕಾರದಿಂದ ನಿರ್ವಹಿಸಿದ್ದಾರೆ. ಗಾನಮೂರ್ತಿ, ವನಸ್ಪತಿ, ಹನುಮತೋಡಿ, ಚಕ್ರವಾಕ, ಗೌರೀಮನೋಹರೀ, ವರುಣಪ್ರಿಯ, ಹರಿಕಾಂಭೋಜಿ, ನವನೀತ, ಪಾವನೀ, ಶುಭಪಂತುವರಾಳಿ, ನಾಮನಾರಾಯಣಿ, ಕಾಮವರ್ಧನಿ, ಗಮನಶ್ರಮ ಮುಂತಾದ ರಾಗಗಳ ಚಿಟ್ಟೆಸ್ವರಗಳು ಬಹುಹಿತಕರವಾಗಿವೆ. ಇದರಲ್ಲಿ ಗಾನಮೂರ್ತಿ ಮುಂತಾದ ರಾಗಗಳ ಚತುರಶ್ರ ನಡೆಗಳೂ, ನಾಟಕಪ್ರಿಯ ಮುಂತಾದುವುಗಳಲ್ಲಿ ತ್ರಿಶ್ರನಡೆಗಳೂ ಚಕ್ರವಾಕ ಮುಂತಾದುವುಗಳಲ್ಲಿ ಖಂಡನಡೆಯು ರಂಜನೀಯವಾಗಿದೆ. ಹಾಗೆ ಹನುಮತೋಡಿಯಲ್ಲಿ ಆರೋಹಣ, ಅವರೋಹಣಗಳಲ್ಲಿ ಒಂದೊಂದು ಸ್ವರವಾಗಿ ಹೆಚ್ಚಿಕೊಂಡುಹೋಗುವುದೂ ಚೆನ್ನಾಗಿದೆ. (ಧಪಧ, ಮಪಧ, ಗಮಪಧ, ಸರಿಗಮಪಧ, ನಿನಿಧ, ರಿಸನಿಧ, ಗ ರಿ ಸ ನಿ ಧ ಪ ಮ ಪ ಧ), ಮಾಯಾಮಾಲವಗೌಳದ ಚಿಟ್ಟೆಸ್ವರದ ಉತ್ತರಾರ್ಧದಲ್ಲಿ ಜಂಟಿ ವರಸೆಗಳ ಅವರೋಹಣವನ್ನೂ ಸೇರಿಸಿದ್ದಾರೆ. ಈ ವಿಶೇಷಗಳನ್ನೆಲ್ಲಾ ಕಿವಿಯಾರ ಕೇಳಿದಲ್ಲದೆ ಎಷ್ಟು ಬರೆದರೂ ಅವುಗಳ ಪೂರ್ಣಸ್ವರೂಪವು ಅರಿವಾಗುವುದು ಕಷ್ಟವೆಂದು ಹೇಳಬಹುದಾಗಿದೆ.

ರಾಗಮುದ್ರೆ

ಮೂರನೆಯದಾಗಿ ರಾಗಮುದ್ರೆಗಳು. ಹಿಂದೆಯೇ ಹೇಳಿದ್ದಂತೆ ರಾಗಮಾಲಿಕೆಗಳಲ್ಲಿ ಒಂದನ್ನೊಂದು ಪ್ರತ್ಯೇಕಿಸಲು ರಾಗಮುದ್ರೆಗಳ ಅವಶ್ಯಕತೆಯಿದ್ದೇ ಇದೆ. ಕೃತಿಗಳಲ್ಲಿ ಆಯಾ ರಾಗ ಸಂಕೇತವನ್ನು ಅಳವಡಿಸುವುದರಲ್ಲಿ, ಮುದ್ದುಸ್ವಾಮಿ ದೀಕ್ಷಿತರಷ್ಟು ಯಾರೂ ಯಶಸ್ವಿಗಳಾಗಿಲ್ಲ. ಮಹಾವೈದ್ಯರು ಈ ರಾಗಮಾಲಿಕೆಯಲ್ಲಿ ಸಾಧ್ಯವಾದಷ್ಟು ಆಯಾ ಮೇಳರಾಗಗಳ ಪೂರ್ತಿ ಹೆಸರುಗಳನ್ನೇ ಉಪಯೋಗಿಸಿದ್ದಾರೆ. ಕೆಲವೆಡೆಗಳಲ್ಲಿ ಮಾತ್ರ ಸ್ವಲ್ಪ ಸಾಹಿತ್ಯ ಚಮತ್ಕಾರದಿಂದ ರಾಗದ ಹೆಸರು ಕಾಣುವ ಹಾಗೆ ಮಾಡಿದ್ದಾರೆ. ಇದರಲ್ಲಿ ಮುಖ್ಯವಾದವು

ಆನಂದ **ನಾಟಕ ಪ್ರಿಯಾ** ಮರವರ
ದೇವ **ಕುಲಾ ಭರಣೋ**ದ್ಧಾರಕ
ಚಾರುಕೇ ಶಿವಲಿಂಗಮು ನಾರ್ಚ್ಯ
ಸರಸಾಂ ಗೀತಿಂ ಕೀರ್ತಿಂ
ಕೈಲಾಸಾ**ಚಲ ನಾಟ**ನ ಕೃದ್ಭುಜ
ಸುರದಾನವ **ನೀತಾ**ಮೃತ
ಚಿದಂಬರ **ಗಮನ ಶ್ರಮಾ** ಪಹರಣಂ ಇತ್ಯಾದಿ

ಇವಲ್ಲದೆ ಒಂದೊಂದು ಚಕ್ರದ ಕೊನೆಯಲ್ಲಿಯೂ ಶ್ರೀರಾಗಕ್ಕೆ ಜಾರುವಾಗ ಸ್ವರಸಮೂಹವನ್ನು ಕೃತಿಯು ಕಳೆಗುಂದದ ರೀತಿಯಲ್ಲಿ ರಚಿಸಿದ್ದಾರೆ.

ಮೇಳರಾಗಮಾಲಿಕೆಯ ರಚನೆಯಲ್ಲಿ ಮಹಾವೈದ್ಯನಾಥರು ತಮ್ಮ ಅಸಮಾನ ಪ್ರತಿಭೆಯನ್ನು ತೋರಿಸಿರುವರು. ಕೃತಿಯು ಮೇಳರಾಗಗಳ ಸ್ವರೂಪಗಳನ್ನರಿಯಲು ಸಾಧಕವಾದ ಕೈಗನ್ನಡಿ. ಅದರ ನಾನಾ ರಂಜನೀಯ ಅಂಶಗಳು, ಕನ್ನಡಿಯ ಸ್ವರೂಪವನ್ನು ಹೆಚ್ಚಿಸುವ ನಾನಾ ಅಲಂಕಾರಪೂರಿತ ಚೌಕಟ್ಟು. ಆದರೆ ಇಂತಹ ಕನ್ನಡಿಯನ್ನು ಉಪಯೋಗಿಸುವ ಸಾಮರ್ಥ್ಯವೆಷ್ಟು ಮಂದಿಗೆ ಇದೆ? ಕೃತಿಯನ್ನು ಹಾಡುವುದಿರಲಿ, ಮನನ ಮಾಡಿಕೊಳ್ಳಬೇಕಾದರೆ, ಒಳ್ಳೆಯ ಸ್ವರ ಮತ್ತು ಲಯ ಜ್ಞಾನದ ಅವಶ್ಯಕತೆ ಇದೆ. ಕ್ರಮೇಣ ಈ ಜ್ಞಾನವು ಕಡಿಮೆಯಾಗುತ್ತಿರುವಾಗ, ಈ ಬಗೆಯ ಕೃತಿಗಳನ್ನು ಮನನ ಮಾಡುವುದಾಗಲೀ ಕೇಳುವುದಾಗಲೀ ಎಂತು? ತಮ್ಮ ಜೀವಿತದ ಅಲ್ಪಕಾಲದಲ್ಲಿಯೇ ಮಹಾವೈದ್ಯನಾಥರು, ತಮ್ಮ ಅಸಾಧಾರಣ ಸಂಗೀತ ಪ್ರತಿಭೆಯ ಜತೆಗೆ ಕೃತಿ ರಚನಾ ಸಾಮರ್ಥ್ಯವನ್ನೂ ಪಡೆದು ನಾನಾ ತಮಿಳು ಮತ್ತು ಸಂಸ್ಕೃತ ಕೃತಿಗಳನ್ನು ರಚಿಸಿರುವರು. ಆದರೆ ಈ ಮೇಳರಾಗಮಾಲಿಕೆಯು ಅವುಗಳಲ್ಲೆಲ್ಲಾ ಅಷ್ಟೇಕೆ, ಕರ್ಣಾಟಕ ಸಂಗೀತ ಕೃತಿಗಳಲ್ಲಿ ಒಂದು ಮಣಿಯಂತೆ ಬೆಳಗುತ್ತಿದೆ ಮತ್ತು ಮಹಾವೈದ್ಯನಾಥರಿಗಿಂತ ಪ್ರತಿಭಾವಂತರು ಬಂದು, ಇದಕ್ಕಿಂತ ಹೆಚ್ಚಿನ ಕೃತಿ ರಚನೆಯಾಗುವವರೆಗೂ ಬೆಳಗುತ್ತಲೇ ಇರುತ್ತದೆ. ★ ★ ★ ★ ★ ★ ★ ★ ★ ★ ★

1942

12. ರಾಳ್ಳಪಲ್ಲಿಯ ವಜ್ರ – ಅನಂತಕೃಷ್ಣ ಶರ್ಮ

ಅನಂತಕೃಷ್ಣಶರ್ಮರು ರಾಳ್ಳಪಲ್ಲಿಯವರು. ಆಂಧ್ರದ ಅನಂತಪುರ ಜಿಲ್ಲೆಯಲ್ಲಿದೆ. ಕನ್ನಡದಲ್ಲಿ ಕಲ್ಲಳ್ಳಿ ಎನ್ನಬಹುದು. ಈ ಕಲ್ಲು ಪದಕ್ಕೇ ವಿಶೇಷ ವ್ಯಾಖ್ಯೆಮಾಡಿ, ಕಲ್ಲಿನಿಂದ ಹೇಗೆ ವಜ್ರ ಬರೆವುದು, ಆ ವಜ್ರಸಮಾನ ವ್ಯಕ್ತಿ ಅನಂತಕೃಷ್ಣಶರ್ಮರು ಎಂಬ ಅರ್ಥ ಬರುವ ಪದ್ಯಗಳನೇಕವನ್ನು ಅನಂತ ಕೃಷ್ಣಶರ್ಮರ ಅಭಿನಂದನಾ ಸಮಾರಂಭಗಳಲ್ಲಿ ಓದಲಾಗಿದೆ. ಕೆಲವು ಅಚ್ಚೂ ಆಗಿವೆ. ಇದನ್ನು ಕುರಿತು ಮಾತನಾಡುವಾಗ ಶರ್ಮರಿಗೆ ಮುಗುಳುನಗೆ. "ನಮ್ಮಲ್ಲಿ ಉತ್ಪ್ರೇಕ್ಷೆ ಮಾಡುವುದು ಸಂಪ್ರದಾಯ. ಆದರೆ ತೆಲುಗು ಸೀಮೆಯವರಿಗೆ ಇದರ ಜೊತೆಗೆ ಉದ್ವೇಗವೂ ಸೇರುತ್ತದೆ" ಎನ್ನುತ್ತಿದ್ದರು.

ಅಲ್ಲಿನ ಸಾರಸ್ವತ ಲೋಕದ ಘಟನೆಗಳು, ವ್ಯಕ್ತಿಗಳ ವಿಷಯಗಳನ್ನು ಮಾತನಾಡುವಾಗ ಶರ್ಮರೇನೂ ಉದ್ರೇಕಿತರಾಗುತ್ತಿರಲಿಲ್ಲ. ಅದರ ಗಟ್ಟಿ ಟೊಳ್ಳು ಎರಡನ್ನು ಸ್ಪಷ್ಟವಾಗಿ

ಖಚಿತವಾಗಿ ವಿವರಿಸುತ್ತಿದ್ದರು. ಆ ವಿವರಣೆಯೇ ಒಂದು ಸೊಗಸು. ದೃಷ್ಟಿಯಲ್ಲಿ ತೀಕ್ಷ್ಣತೆ ಅನುಭವವಾಗುತ್ತಿತ್ತು. ಆದರೆ ಮಾತಿನಲ್ಲಲ್ಲ. ಇದು ಸಾಹಿತ್ಯವೊಂದೇ ಅಲ್ಲ, ಸಂಗೀತ ಮತ್ತು ಇತರ ಕ್ಷೇತ್ರಗಳಿಗೂ ವ್ಯಾಪಿಸುತ್ತಿತ್ತು. ಕೇಳುವಾಗ ಆಯಾಕ್ಷೇತ್ರದಲ್ಲಿ ಶರ್ಮರು ಮಾಡಿದ ಚಿಂತನ, ವಿಮರ್ಶಾ ದೃಷ್ಟಿ ಮತ್ತು ಅಭಿಪ್ರಾಯದ ಪರಪಕ್ವತೆ ನಮ್ಮ ಮೇಲೆ ಪರಿಣಾಮ ಬೀರುತ್ತಿತ್ತು.

ಈ ಹಿನ್ನೆಲೆಯಲ್ಲಿ ಶರ್ಮರ ಬಗೆಗೆ ಏನು ಬರೆಯಬೇಕೆನ್ನುವುದೇ ಸಂದಿಗ್ಧ ಪ್ರಶ್ನೆಯಾಗುತ್ತದೆ. ವ್ಯಕ್ತಿತ್ವವೇ? ಅವರ ರೂಪ, ನಡೆ, ನುಡಿ ಮತ್ತು ಅವುಗಳ ಪರಿಶುದ್ಧತೆಯ ಬಗೆಗೆ ಅನೇಕರು ಈಗಾಗಲೇ ಸಾಕಷ್ಟು ಪ್ರಸ್ತಾಪಿಸಿದ್ದಾರೆ. ಅವರನ್ನು ನೋಡಿದವರಿಗೆ ಅದು ಮೊದಲನೆಯ ಸಲವೇ ಆಗಲಿ, ಬಹುಕಾಲದ ಸಂಪರ್ಕವಿರಲಿ - ತಕ್ಷಣ ಬರುತ್ತಿದ್ದ ಆಲೋಚನೆ ಪೂಜನೀಯ ವ್ಯಕ್ತಿ ಎಂದು. ಅಂತಹ ವ್ಯಕ್ತಿತ್ವ ಶರ್ಮರದು.

ತೇಜಸ್ವಿ

1971ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಫೆಲೋಷಿಪ್ ಪ್ರಶಸ್ತಿಯನ್ನು ಶರ್ಮರಿಗೆ ಒಪ್ಪಿಸಲಾಯಿತು. ರವೀಂದ್ರ ಕಲಾಕ್ಷೇತ್ರದಲ್ಲಿ ಸಮಾರಂಭ. ಅಕಾಡೆಮಿಯ ಉಪಾಧ್ಯಕ್ಷರಾದ ಪಿ.ಎಲ್. ದೇಶಪಾಂಡೆಯವರೇ ಪ್ರಶಸ್ತಿಯನ್ನು ಒಪ್ಪಿಸಿ ಶರ್ಮರ ಪಾದಗಳನ್ನು ಮುಟ್ಟಿ ಗೌರವ ಸಲ್ಲಿಸಿದರು. ಅವರು ಶರ್ಮರನ್ನು ನೋಡಿದುದು ಅದೇ ಮೊದಲು. ಅನಂತರ ನನಗೆ ಸಿಕ್ಕಿದಾಗಲೆಲ್ಲಾ ಕೊನೆಗೆ ಒಂದೆರಡು ಪತ್ರಗಳಲ್ಲಿಯೂ ಪೂಜ್ಯ ಪಂಡಿತಜೀಯವರು ಹೇಗಿದ್ದಾರೆ ಎಂದು ವಿಚಾರಿಸುತ್ತಿದ್ದರು. ಆ ಸ್ಮೃತಿ ಅವರ ಮನಸ್ಸಿನಲ್ಲಿ ಅಷ್ಟು ದೃಢವಾಗಿ ನಿಂತಿತ್ತು. ಪ್ರಾಯಶಃ ಅವರ ಸಂಪರ್ಕ ಪಡೆದಿದ್ದವರನೇಕರಿಗೆ ಹೀಗೆಯೇ ಆಗಿದೆ. ಶುಭ್ರವಾದ ಬಟ್ಟೆಯುಟ್ಟ ಶುಚಿಯಾದ ಈ ತೇಜಸ್ವಿಯ ಚಿತ್ರ ಮನಸ್ಸಿನಲ್ಲಿ ಸದಾ ನಿಲ್ಲುವಂತಹುದು.

ಶರ್ಮರದು ವಿಶೇಷ ವ್ಯಕ್ತಿತ್ವ. ಸಂಗೀತ ಮತ್ತು ಸಾಹಿತ್ಯ ಎರಡೂ ಕ್ಷೇತ್ರಗಳಲ್ಲಿಯೂ ಪ್ರಗಲ್ಭ ಪಾಂಡಿತ್ಯ ಅವರದು. ಹಾಗೆಯೇ ಇಂದಿನ ದಕ್ಷಿಣ ಭಾರತಕ್ಕೆ ವಿಜಯನಗರದ ಕೊಡುಗೆಯಾದ ಕರ್ನಾಟಕ ಮತ್ತು ಆಂಧ್ರ ಎರಡೂ ಸಂಸ್ಕೃತಿಗಳೂ ಅವರಲ್ಲಿ ಮಿಳಿತವಾಗಿದ್ದುವು. ಸಾಹಿತ್ಯದಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ, ತೆಲುಗು, ಸಂಗೀತದಲ್ಲಿ ಕರ್ನಾಟಕ ಸಂಗೀತ, ಕೇವಲ ಕಚೇರಿ ರೀತಿಯದಲ್ಲ, ತತ್ವ, ಅರ್ಥ ಮತ್ತು ಭಾವಗಳನ್ನು ಅರಿತು ಅನುಭವಿಸಿದ ಸಂಗೀತ. ಆ ಅನುಭವವನ್ನು ಮಾತಿನಲ್ಲಿ ಅಂದವಾಗಿ, ಪರಿಣಾಮಕಾರಿಯಾಗಿ ತಿಳಿಸಿದ್ದಾರೆ - ಅವರ ಪ್ರಬಂಧಗಳಲ್ಲಿ ಅಂತಹ ಪ್ರಬಂಧಗಳನ್ನೊಳಗೊಂಡ ಕೃತಿ – ಗಾನಕಲೆ. ಸಂಗೀತದ ನಾನಾ ಮುಖಗಳ ವಿಮರ್ಶೆ ಮತ್ತು ಸಮಸ್ಯೆಗಳ ಚರ್ಚೆಯಿಂದ ಕೂಡಿದ ಗ್ರಂಥವದು. ಅದನ್ನು ಓದಿದವರಿಗೆ ಯಾವುದಕ್ಕೆ ತಲೆಬಾಗಬೇಕೋ ಅರ್ಥವಾಗದಂತಾಗುತ್ತದೆ - ವಿಷಯಕ್ಕೆ, ಪ್ರತಿಪಾದನೆಗೆ, ಅದರ ನಿರ್ಣಯಕ್ಕೆ, ಖಚಿತ ನಿಲುವಿಗೆ ಅಥವಾ ರಸವತ್ತಾದ ಶೈಲಿಗೆ - ಯಾವುದಕ್ಕೆ ತಲೆಬಾಗಬೇಕೋ ಅರ್ಥವಾಗದಂತೆ ಆಗುತ್ತದೆ. ಆ ನಿಲುವು ಗಾಢವಾದ

ಚಿಂತನದಿಂದ ವಿಮರ್ಶೆಯ ಬಲವುಳ್ಳದು. ಅದಕ್ಕೆ ಅವರ ಪ್ರತಿಪಾದನೆಯಲ್ಲಿ ಶರ್ಮರಿಗೆ ಇದ್ದ ಧೈರ್ಯ, ದೃಢತೆ ಮುಖ್ಯ ಕಾರಣಗಳು.

ಪ್ರಾಮಾಣಿಕತೆ

ಸಂಗೀತ ವಿದ್ವತ್ ಗೋಷ್ಠಿಯಲ್ಲಿ ಯಾವುದೋ ವಿಷಯದ ಚರ್ಚೆ. ಪ್ರತಿಪಾದನೆ ಮಾಡಿದವರು, ಜನಪ್ರಿಯರಾದ ವಿದ್ವಾಂಸರು, ಪ್ರತಿಪಾದನೆ ಶಬ್ದಾಡಂಬರ ಆಧಾರವಿಲ್ಲದ್ದು. ಅನುಯಾಯಿಗಳ ಹರ್ಷೋದ್ಗಾರ. ಶರ್ಮರು ಎದ್ದು ಅದರ ಲೋಪವನ್ನು ತೋರಿಸಿದರು. ಸಭೆಯಲ್ಲಿ ಕೋಪ, ಕೋಲಾಹಲ, ವಾಪಸ್ ತೆಗೆದುಕೊಳ್ಳಬೇಕೆಂಬ ಕೂಗು. "ಇದು ನನ್ನ ಪ್ರಾಮಾಣಿಕವಾದ ಅಭಿಪ್ರಾಯ ತಲೆ ತೆಗೆದರೂ ಬದಲಾಯಿಸಲು ಸಾಧ್ಯವಿಲ್ಲ" ಎಂದರು ಶರ್ಮರು. ಅವರ ರಂಗನಾಥ ರಾಮಾಯಣದ ವಿಮರ್ಶೆಯೇ ಇದೆಯಲ್ಲ ಶರ್ಮರ ಪ್ರಾಮಾಣಿಕತೆ ಮತ್ತ ಧೈರ್ಯಕ್ಕೆ ಸಾಕ್ಷಿಯಾಗಿ, ಬೇರೆಯವರೆಲ್ಲಾ ಕೈಹಾಕಲು ಹಿಂಜರಿದ ಈ ಕೆಲಸವನ್ನು ತೆಗೆದುಕೊಂಡು ತಮ್ಮ ನಿಷ್ಪಕ್ಷಪಾತ ನಿಲುವಿನಿಂದ ಸಿ. ಆರ್. ರೆಡ್ಡಿಯವರ ಆಗ್ರಹಕ್ಕೆ ಪಾತ್ರರಾಗಲಿಲ್ಲವೆ? ಈ ಸ್ವತಂತ್ರ ಹಾಗೂ ಪ್ರಾಮಾಣಿಕ ನಿಲುವು ಬಹುಮಂದಿಗೆ ಮಾನ್ಯವಾದರೂ, ಶರ್ಮರ ಬಗೆಗೆ ಇನ್ನು ಕೆಲವರಿಗೆ ಅದರಲ್ಲಿಯೂ ಸಂಗೀತ ಕ್ಷೇತ್ರದಲ್ಲಿ ಅಸಮಾಧಾನಕ್ಕೆ ಎಡೆಗೊಟ್ಟಿತು.

"ಏನ್ರಿ ಆ ಪಂಡಿತರನ್ನ ಬಹುದೊಡ್ಡದು ಮಾಡಿ ಕೂರಿಸುತ್ತೀರಿ. ಆತನಿಗೇನುಗೊತ್ತು ಸಂಗೀತ?" ಎಂದು ಕೆಲವು ವಿದ್ವಾಂಸರು ನನ್ನನ್ನು ಆಕ್ಷೇಪಿಸಿದುದುಂಟು.

"ನಾನೇನು ಅವರನ್ನು ದೊಡ್ಡವರನ್ನಾಗಿ ಮಾಡಬೇಕಾಗಿಲ್ಲ. ನನಗೆ ಅವರ ಪರಿಚಯವಾಗುವ ವೇಳೆಗೇ ಬಹಳ ದೊಡ್ಡವರಾಗಿದ್ದರು" ಎಂದು ಹೇಳಬೇಕಾಯಿತು. ಇಂತಹುದೇ ಒಂದು ಸ್ವಾರಸ್ಯ ಸಂಭಾಷಣೆ ಒಬ್ಬ ವಿದ್ವಾಂಸರಿಗೂ ಮತ್ತು ಮೃದಂಗ ವಾದಕ ಮೂಗಯ್ಯನವರಿಗೂ ನಡೆದುದು.

"ಏನ್ರಿ ಆ ಪಂಡಿತರನ್ನ ಸಂಗೀತದಲ್ಲಿ ಬಹಳ ದೊಡ್ಡವರು ಅಂತ ಎತ್ತಿ ಕೂರಿಸ್ತಿದೀರಲ್ಲಾ. ಅವರೆಷ್ಟು ಕಚೇರಿ ಮಾಡಿದಾರೆ?" ಯಾರೋ ಒಬ್ಬ ಸಂಗೀತ ವಿದ್ವಾಂಸರ ಪ್ರಶ್ನೆ. ಅದಕ್ಕೆ ಮೂಗಯ್ಯನವರ ಉತ್ತರ.

"ದೇವಸ್ಥಾನದ ಗೋಪುರ ಕಟ್ಟೋವಾಗ ಕಲ್ಲು ಒಡೆಯುತ್ತಿದ್ದವನು ನನ್ನಿಂದಲೇ ಈ ದೇವಸ್ಥಾನ ಆಗುತ್ತಿದೆ ಎಂದುಕೊಂಡ ಹಾಗಿದೆ - ನೀವು ಹೇಳೋದು. ಗೋಪುರದ ಕಲ್ಪನೆ ಬಂದ ಮೇಲಲ್ಲವೇ ನೀವು ಕಟ್ಟೋದು? ಆ ಕಲ್ಪನೆ ಕೊಟ್ಟವರು ಪಂಡಿತರಂತಹವರು. ನಾವು ಕಚೇರಿ ಮಾಡೋದ ಆ ಕಲ್ಲು ಒಡೆಯುತ್ತಿದ್ದ ಹಾಗೆ" ಅಂದರು.

ಸಂಗೀತ ಜ್ಞಾನ

ರಾಳ್ಳಪಲ್ಲಿಯವರ ಗಾಢವಾದ ಸಂಗೀತಜ್ಞಾನ ಮದರಾಸು ಮ್ಯೂಸಿಕ್ ಅಕಾಡೆಮಿಯ ಒಂದಿನ ವಿದ್ವತ್ ಗೋಷ್ಠಿಗಳ ಕಾರ್ಯಕಲಾಪಗಳ ವರದಿಯನ್ನು ಓದಿದವರಿಗೆ ಅನುಭವವಾಗುತ್ತೆ.

ಅಲ್ಲದೆ ''ಗಾನಕಲೆ'' ಯೇ ಇದೆಯಲ್ಲ ಅದನ್ನು ಓದಿದವರಿಗೆ ಅಥವಾ ಅರ್ಥಮಾಡಿಕೊಂಡವರಿಗೆ ಈ ಬಗೆಯ ರೋಷಕ್ಕೆ ಅವಕಾಶವಿರುವುದಿಲ್ಲ.

ಸಂಗೀತ ಕ್ಷೇತ್ರಕ್ಕೆ ಅನಂತಕೃಷ್ಣಶರ್ಮರ ಅಪೂರ್ವ ಕೊಡುಗೆ - ತಾಳ್ಳಪಾಕ ಅಣ್ಣಮಾಚಾರ್ಯರ ಕೀರ್ತನೆಗಳ ಪರಿಷ್ಕರಣ ಮತ್ತು ಪ್ರಕಟಣೆ, ತಿರುಪತಿ ದೇವಸ್ಥಾನದ ಸಂಗ್ರಹದಲ್ಲಿದ್ದ ಆ ತಾಮ್ರಪತ್ರಗಳನ್ನು ತೆಗಸಿ, ಆ ಕೀರ್ತನೆಗಳನ್ನು ಶುದ್ಧಪಡಿಸಿ ಸ್ವರಸಹಿತ ಸಿದ್ಧಪಡಿಸಿದರು. ತಿರುಪತಿ ದೇವಸ್ಥಾನದವರು ಪ್ರಕಟಿಸಿದರು. ಅವುಗಳ ವರ್ಣಮಟ್ಟು ಸಿದ್ಧಪಡಿಸುವಾಗ ಉಂಟಾದ ಸಮಸ್ಯೆಗಳನ್ನು ವಿವರಿಸುತ್ತಾ ''ಮೂಲ ಸಂಗೀತಮಟ್ಟು ಹೋಗಿಬಿಟ್ಟು, ನಾವು ಹೊಸದಾಗಿ ಸಂಯೋಜಿಸಬೇಕಾದಾಗ ಸಾಧ್ಯವಾದ ಮಟ್ಟಿಗೆ ಆ ಕಾಲದ ಸಂಗೀತ ಹೇಗಿತ್ತು. ಅದರ ಆಕಾರವೆಂತಹುದು. ಅದು ಕೀರ್ತನ ಭಾವಕ್ಕೆ ಹೇಗೆ ಹೊಂದುತ್ತೆ ಎಂದು ತಿಳಿದು ಸಂಯೋಜಿಸಬೇಕು. ಮೂಲ ಭಾವಕ್ಕೆ ಸಮಂಜಸವಾಗಿರಬೇಕು. ಯಾವುದೋ ಈಚಿನ ಮಟ್ಟು ತಗಲಿಸಿದರೆ ಆಗಮೋಕ್ತವಾಗಿ ರಚಿತವಾದ ದೇವತಾ ವಿಗ್ರಹಕ್ಕೆ ಬುಷ್‌ಷರ್ಟ್ ಹಾಕಿದಂತಾಗುತ್ತದೆ. ಅಸಮಂಜಸವಾಗುತ್ತದೆ ಎನ್ನುತ್ತಿದ್ದರು. ಅಣ್ಣಮಾಚಾರ್ಯರ ಕೀರ್ತನೆಗಳ ಆ ಪದಲಾಲಿತ್ಯ ಮತ್ತು ಭಾವವನ್ನು ಪುರಂದರಾದಿ ಹರಿದಾಸ ಪದಗಳೊಂದಿಗೂ ಶರ್ಮರು ಹೋಲಿಸುತ್ತಿದ್ದುದೇ ಒಂದು ಸೊಗಸು. ನಿಜಗುಣ ಶಿವಯೋಗಿಯ ಪದಗಳ ಬಗೆಗೂ ಅಷ್ಟೇ. ಆತ ಬಹುದೊಡ್ಡ ವ್ಯಕ್ತಿ ಅನ್ನುತ್ತಿದ್ದರು.

ಹಾಗೆಯೇ ಗೀತಗೋವಿಂದ, ಅದರ ಲಯ ಮತ್ತು ಪದ ಲಾಲಿತ್ಯಗಳನ್ನು ಒಮ್ಮೆ ವರ್ಣಿಸಿದಾಗ - ನನ್ನಿಂದ ಪಾಶ್ಚಿಮಾತ್ಯರ ಕಾವ್ಯಗಳ ಸೊಗಸನ್ನು ತಿಳಿದ ಶರ್ಮರ ಭಾವನೆಗಳಲ್ಲಿಯೂ ವೈಶಾಲ್ಯವುಂಟಾಗಿದೆ ಎಂದು ಹೇಳಿದ ಸಿ.ಆರ್. ರೆಡ್ಡಿಯವರು ''ಕೇಳುತ್ತಿದ್ದರೆ ಮೈ ರೋಮಾಂಚನವಾಗುತ್ತೆಯಲ್ಲಾ. ಸಂಸ್ಕೃತ ಪದ್ಯಗಳಲ್ಲಿ ಇಷ್ಟು ಸೌಂದರ್ಯವಿದೆಯೆ?'' ಎಂದು ಆಶ್ಚರ್ಯಪಟ್ಟರಂತೆ. ಗೀತಗೋಪಾಲದ ಬಗೆಗೆ ಮಾತನಾಡುತ್ತಾ ಅದರ ಪದ ಸೌಂದರ್ಯವನ್ನು ವಿವರಿಸುತ್ತಾ - ಅದನ್ನು ಬರೆದವನ ಕನ್ನಡದ ಅಭಿಮಾನ ಮತ್ತು ಕೆಚ್ಚನ್ನು ಮೆಚ್ಚಬೇಕು ಎನ್ನುತ್ತಿದ್ದರು.

ಅವರು ಕಚೇರಿ ಮಾಡದಿದ್ದರೂ ಅನಂತ ಕೃಷ್ಣಶರ್ಮರ ಸಂಗೀತಾನುಭವಕ್ಕೆ ಸಾಕ್ಷಿಯಾಗಿ ಒಂದು ಸಂಗತಿ ನೆನಪಿಗೆ ಬರುತ್ತದೆ. ಒಮ್ಮೆ ಒಂದು ಅಧ್ಯಯನ ಗೋಷ್ಠಿಯಲ್ಲಿ ಶಂಕರಾಭರಣರಾಗದ ವಿಷಯ. ಆವತ್ತು ಶರ್ಮರು ಉದಾಹರಣಾ ಸಹಿತವಾಗಿ ಕೊಟ್ಟ ಈ ರಾಗದ ವಿವರಣೆ ಸಂಗೀತದ ಆಕಾರವೊಂದೇ ಅಲ್ಲ. ಅದರ ಅಂತಸ್ಸತ್ವವನ್ನೂ ಹೇಗೆ ಗ್ರಹಿಸಿದ್ದರು ಎಂಬುದನ್ನು ತೋರಿಸುವಂತಿತ್ತು. ಸಾವಿರಾರು ಕಚೇರಿಯ ದಿಗ್ಗಜಗಳೂ ಇಷ್ಟುಮಟ್ಟಿಗೆ ಶಂಕರಾಭರಣದ ಸತ್ವವನ್ನು ಗ್ರಹಿಸಿದ್ದರೇ ಎಂಬ ಸಂದೇಹ ಉಂಟುಮಾಡುವಂತಿತ್ತು. ಸಂಗೀತದ ಬಗೆಗೆ ಇಂತಹುದೆಷ್ಟೋ ಸಂದರ್ಭಗಳು ನೆನಪಿಗೆ ಬರುತ್ತವೆ. ರವೀಂದ್ರನಾಥ ಠಾಕೂರರು ಹಾಡುತ್ತಿದ್ದಂತೆಯೇ ಶರ್ಮರು ಸ್ವರಲಿಪಿಯಲ್ಲಿ

ಬರೆಯುತ್ತಿದ್ದುದನ್ನು ನೋಡಿ ಗುರುದೇವರು ಆಶ್ಚರ್ಯಪಟ್ಟಿದ್ದು. ಗೀತಗೋವಿಂದ ಪ್ರಸ್ತಾಪ ಮಾಡುತ್ತಾ ವಿಜಯನಗರದ ದೇವದಾಸಿಯೊಬ್ಬಳು - 19ನೆಯ ಅಷ್ಟಪದಿ ''ವದಿಸಿಯದಿ'' ಯನ್ನು ಭಗವಂತನ ಹಸ್ತಾಕ್ಷರವಿದೆಯೆಂದು ನೇಮದಿಂದ ಮಡಿಯುಟ್ಟು ಅಭಿನಯಿಸುತ್ತಿದ್ದುದು - ಆಕೆಯ ನಿಷ್ಠೆ - ಹೀಗೆ ಎಷ್ಟೋ ಸ್ಮೃತಿಯಲ್ಲಿ ಹಾದೂಹೋಗುತ್ತಿವೆ.

ಪಂಡಿತರು

ಅನಂತಕೃಷ್ಣ ಶರ್ಮರು ಮೊದಲಿನಿಂದಲೂ ಸಂಗೀತಕ್ಕೆ ವಾಲಿದವರು. ಮನೆಯಲ್ಲಿ ಸಂಗೀತ ವಾತಾವರಣ, ಮೈಸೂರಿನಲ್ಲಿ ಕರಿಗಿರಿರಾಯರು, ಚಿಕ್ಕರಾಮರಾಯರು ಅನಂತರ ಬಿಡಾರಂ ಕೃಷ್ಣಪ್ಪನವರಲ್ಲಿ ಅಭ್ಯಾಸ. ಆಸ್ಥಾನದ ಹಿರಿಯ ವಿದ್ವಾಂಸರೆಲ್ಲರ ಸಹವಾಸ. ಆದರೆ ಕೃಷ್ಣಪ್ಪನವರಲ್ಲಿ ಅವರ ಭಕ್ತಿ ಅಪಾರವಾದುದು. ಕೃಷ್ಣಪ್ಪನವರಿಗೂ ಶಿಷ್ಯ ಪಂಡಿತರ ಬಗೆಗೆ ಆದರ. ಎಲ್ಲರೂ ಶರ್ಮರನ್ನು ಪಂಡಿತರೆಂದೇ ಕರೆಯುವುದು ಪದ್ಧತಿ. ಆ ಯುಗದ ಅನೇಕ ಸ್ವಾರಸ್ಯ ಸನ್ನಿವೇಶಗಳು ಸಂಭಾಷಣೆಯಲ್ಲಿ ಬರುತ್ತಿದ್ದುವು.

ಜೀವನದ ಸಂಧ್ಯೆಯಲ್ಲಿ ನಾಟ್ಯ ಮತ್ತು ಸಂಗೀತ ಕ್ಷೇತ್ರಕ್ಕೆ ಶರ್ಮರ ಅಮೂಲ್ಯ ಕೊಡುಗೆಗಳೆಂದರೆ - ಜಾಯಪಸೇನಾನಿಯ ನೃತ್ಯ ರತ್ನಾವಳಿ - 2, ಸಂಗೀತ ಸಂಪ್ರದಾಯ ಪ್ರದರ್ಶಿನಿ. ಮೊದಲನೆಯದನ್ನು ಸಂಸ್ಕೃತದಿಂದ ತೆಲುಗಿಗೆ ಅನುವಾದ ಮಾಡಿದ್ದಾರೆ. ಎರಡನೆಯದನ್ನು ಪರಿಷ್ಕರಿಸಿ ತಪ್ಪುಗಳನ್ನು ತಿದ್ದಿ ಪ್ರಯೋಜನಕಾರಿಯಾಗುವಂತೆ ಮಾಡಿದ್ದಾರೆ.

ಅನಂತಕೃಷ್ಣ ಶರ್ಮರ ಜೀವಿತದಲ್ಲಿ ಆದ ಸನ್ಮಾನಗಳು ಬಹಳ. ಗೌರವ ಪ್ರಶಸ್ತಿಗಳು ಗಣನೀಯ ಪ್ರಮಾಣದಲ್ಲಿ. ಕರ್ನಾಟಕ, ಆಂಧ್ರ ಮತ್ತು ಕೇಂದ್ರ ಸಂಗೀತ ನಾಟಕ ಅಕಾಡೆಮಿಗಳು ಪ್ರಶಸ್ತಿ ನೀಡಿದುವು. ಮದರಾಸು ಮ್ಯೂಸಿಕ್ ಅಕಾಡೆಮಿ ಸಂಗೀತ ಕಳಾನಿಧಿ ಪ್ರಶಸ್ತಿ ಇತ್ತಿತ್ತು. ವೆಂಕಟೇಶ್ವರ ವಿಶ್ವವಿದ್ಯಾಲಯದವರು ಡಾಕ್ಟರೇಟ್ ಇತ್ತರು. ಆದರೂ ಅವರ ಹತ್ತಿರ ಹೋದವರು ದೊಡ್ಡವರಾಗಲೀ ಚಿಕ್ಕವರಾಗಲೀ ಒಂದೇ ರೀತಿಯ ಸೌಜನ್ಯ ಮತ್ತು ಆತ್ಮೀಯತೆ. ಸ್ಥಾನದ ಅಥವಾ ಪಾಂಡಿತ್ಯದ ಗರ್ವವಾಗಲೀ ಪ್ರತಿಷ್ಠೆಯಾಗಲೀ ಸಾಮಾನ್ಯವಾದ ವಿಷಯವಾಗಲೀ ಲೇಶವೂ ಇಲ್ಲ. ಅದು ಅವರ ತುಂಬು ಗುಣದ ಲಕ್ಷಣ. ಪ್ರೌಢವಾದ ವಿಷಯವಾಗಲೀ ಅಷ್ಟೇ ಸಹನೆಯಿಂದ ಆಸಕ್ತಿಯಿಂದ ವಿವರಿಸುತ್ತಿದ್ದರು. ಆ ಸಂಭಾಷಣೆ ನಮ್ಮ ನೆನಪಿನಲ್ಲಿ ಬಹುಕಾಲ ನಿಲ್ಲುವಂತಹುದು.

ಅವರಿಗೆ ನಾನಾ ಗೌರವ ಪ್ರಶಸ್ತಿಗಳೂ ಬಂದರೂ ಜೀವನದ ಕೊನೆಯ ಗಳಿಗೆಯಲ್ಲಿ ಬಂದ ತಿರುಪತಿ ದೇವಸ್ಥಾನದ ಗೌರವ ಪ್ರಶಸ್ತಿ ಬಹು ಅಮೂಲ್ಯವಾದುದು. ಅದನ್ನು ಸ್ವೀಕರಿಸಿದ ಎರಡು ಗಂಟೆಗಳ ಕಾಲದಲ್ಲಿಯೇ ನಿಧನರಾದ ಅನಂತಕೃಷ್ಣ ಶರ್ಮರು ಎಂತಹ ಸಜ್ಜನರು. ಅವರದೆಂತಹ ಸಾರ್ಥಕ ಜೀವನ ಎಂಬುದನ್ನು ನೆನಪು ಮಾಡುವಂತಿತ್ತು. ★ ★ ★ ★ ★

ಪ್ರಜಾವಾಣಿ, 1979

13. ಮಹಾ ವಾಗ್ಗೇಯಕಾರ ಪಾಪನಾಶಂ ಶಿವನ್

"ತಮಿಳುನಾಡಿನ ಇಂದಿನ ಸಂಗೀತ ಕಲೆಯ ಸತ್ವವು ಪಾಪನಾಶಂ ಶಿವನ್‌ರವರಲ್ಲಿ ಮೂರ್ತೀಭವಿಸಿದೆ" ಎಂದು ಹಿರಿಯ ಸಂಗೀತ ವಿದ್ವಾಂಸರೊಬ್ಬರು 1951ರಲ್ಲಿ ನಡೆದ ಶಿವನ್ ಅವರ ಷಷ್ಟ್ಯಬ್ದಿಯ ಸಂದರ್ಭದಲ್ಲಿ ಹೇಳಿದ್ದರು. ಅದರಲ್ಲಿ ಸತ್ಯಾಂಶವೂ ಇದೆ. ಶಿವನ್‌ರವರ ಸಂಗೀತ - ಅಂದರೆ ಕೀರ್ತನೆಗಳ ಧಾತು - ಅಚ್ಚ ಕರ್ಣಾಟಕ ಸಂಪ್ರದಾಯಕ್ಕೆ ಸೇರಿದುದು. ಸಾಹಿತ್ಯ - ಬಹು ಲಲಿತವಾದುದು. ಪಂಡಿತ ಪಾಮರರಾದಿಯಾಗಿ ಎಲ್ಲರಿಗೂ ಆಪ್ಯಾಯಮಾನವಾಗುವಂತಹ ಹಾಗೂ ಅರ್ಥವಾಗುವಷ್ಟು ಸರಳವಾದುದು. ಇವೆರಡು ಹದವಾಗಿ ಬೆರೆತು ಒಟ್ಟು ಕೃತಿಗೇ ಕುಂದಣವಿಟ್ಟಂತೆ ಮಾಡಿರುವುದು - ಅದರಲ್ಲಿ ಅಂತರ್ಗತವಾದ ಭಾವ. ಪಾಪನಾಶಂ ಶಿವನ್‌ರವರು ಉತ್ತಮ ಸಂಗೀತಜ್ಞರಹುದು. ಆದರೆ ಅದನ್ನೂ ಮೀರಿಸಿದ ಭಾವುಕರೂ ಸಹ. ತಮಿಳು ನಾಡಿನ ಒಂದೆರಡು ತಲೆಮಾರಿನ ರಸಿಕ ವರ್ಗವನ್ನೂ, ಸಂಗೀತ ವಿದ್ವಾಂಸರನ್ನೂ ತಮ್ಮ ಮಧುರ ಕೃತಿಗಳ ಮೂಲಕ ಸಂತೋಷಪಡಿಸಿದ್ದಾರೆ, ತೃಪ್ತಿಪಡಿಸಿದ್ದಾರೆ. ತಮಿಳುನಾಡಿನ ಜನತೆ ಅವರ ಬಗೆಗೆ ಎಷ್ಟರಮಟ್ಟಿನ ಆದರ ಮತ್ತು ಅಭಿಮಾನಗಳನ್ನಿಟ್ಟಿದ್ದರೆಂಬುದಕ್ಕೆ ಮದರಾಸಿನಲ್ಲಿ ನಡೆದ ಆ 60ನೆಯ ಹುಟ್ಟುಹಬ್ಬವೇ ಸಾಕ್ಷಿ.

ಸರ್ವಾದರಣೀಯ

ಆ ಸಮಾರಂಭದಲ್ಲಿ ಭಾಗವಹಿಸಿದವರು ಕೇವಲ ಹಿರಿಯ ಮತ್ತು ಗಣ್ಯ ರಸಿಕರೇ ಅಲ್ಲ. ಸಂಗೀತ, ನಾಟ್ಯ, ನಾಟಕ ಮತ್ತು ಚಲನಚಿತ್ರ - ಈ ಕ್ಷೇತ್ರಗಳ ಪ್ರತಿಭಾವಂತ ವ್ಯಕ್ತಿಗಳೆಲ್ಲಾ ಪಾಲುಗೊಂಡಿದ್ದರು. ಅಂದು ಸಾಂಪ್ರದಾಯಿಕ ರೀತಿಯ ಭಾಷಣ ಸಹಿತವಾದ ಬಿನ್ನವತ್ತಳೆ, ಶಾಲು, ಇತ್ಯಾದಿಗಳ ಪುರಸ್ಕಾರವೇ ಅಲ್ಲದೆ ಶಿವನ್‌ರವರಿಗೆ ರಾಜಬೀದಿಗಳಲ್ಲಿ ಮೆರವಣಿಗೆ. ಅದರಲ್ಲಿ ಸ್ವಾಗತ ಸಮಿತಿಯ ಕಲ್ಕಿ ಕೃಷ್ಣಮೂರ್ತಿ, ಚಲನಚಿತ್ರ ನಿರ್ದೇಶಕ ಕೆ. ಸುಬ್ರಹ್ಮಣ್ಯಂ ಮುಂತಾದವರೇ ಅಲ್ಲದೆ ವಿವಿಧ ಕ್ಷೇತ್ರಗಳ ಕುನ್ನಕ್ಕುಡಿ ಕೃಷ್ಣಯ್ಯರ್, ವಿ.ವಿ. ಷಡಗೋಪನ್, ತಿರುವೇಲಂಗಾಡುಸುಂದರೇಶ ಅಯ್ಯರ್, ಎಂ. ಎಲ್. ವಸಂತಕುಮಾರಿ, ಗಾನಸರಸ್ವತಿ, ಸಾವಿತ್ರಿ ಗಣೇಶನ್, ಕೊತ್ತಮಂಗಲಂ ಶೀನು, ಪೆರಿಯನಾಯಕಿ, ತ್ಯಾಗರಾಜ ಭಾಗವತರ್ ಮುಂತಾದ ಅನೇಕ ಕಲಾವಿದರೂ ಹೆಸರಾಂತ ನಾಗಸ್ವರ ವಾದಕರೂ ಭಾಗವಹಿಸಿದ್ದರು.

ಅದಕ್ಕೆ ಎರಡು ಮೂರು ದಶಕಗಳ ಹಿಂದೆ ಊರೂರು ಅಲೆಯುತ್ತಿದ್ದ ರಾಮಯ್ಯನಿಗೆ (ಶಿವನ್‌ರವರ ನಿಜವಾದ ಹೆಸರು) ಮುಂದೆ ತನಗೆ ಇಂತಹ ಅದ್ಭುತ ಸನ್ಮಾನ ದೊರೆಯಬಹುದೆಂದು ಕನಸಿನಲ್ಲಿಯೂ ಕಲ್ಪನೆ ಬಂದಿರಲಾರದು. 1890ರಲ್ಲಿ ತಂಜಾವೂರು ಜಿಲ್ಲೆಯ ಪೊಲಹಂ ಗ್ರಾಮದಲ್ಲಿ ಹುಟ್ಟಿದ ರಾಮಯ್ಯನಿಗೆ ಬಹುಶಃ ಹುಟ್ಟಿದಾಗಲೇ ಕಾಲಿನಲ್ಲಿ

ಚಕ್ರಗಳಿದ್ದಿರಬೇಕು. ಏಳನೆಯ ವಯಸ್ಸಿಗೇ ತಂದೆಯನ್ನು ಕಳೆದುಕೊಂಡ ರಾಮಯ್ಯ ತಾಯಿಯೊಂದಿಗೆ ಪಾಪನಾಶನದಲ್ಲಿದ್ದ ಅಣ್ಣನ ಮನೆ ಸೇರಿದರು. ಆ ವೇಳೆಗಾಗಲೇ ಸಂಸ್ಕೃತ ಮತ್ತು ಸಂಗೀತ ಎರಡರಲ್ಲಿಯೂ ಸ್ವಾಭಾವಿಕವಾಗಿಯೇ ಜ್ಞಾನಾಂಕುರವಾಗಿತ್ತು. ಸ್ವಲ್ಪ ದಿನಗಳ ನಂತರ ಅಣ್ಣನ ಮನೆ ಬಿಟ್ಟು ಹೊರಟ ರಾಮಯ್ಯ ಕ್ಷೇತ್ರಯಾತ್ರೆ ಮಾಡುತ್ತಾ ತಿರುವನಂತರಪುರಕ್ಕೆ ಬಂದರು. ಅಲ್ಲಿ ಕಷ್ಟ ಜೀವನ. ಕೊನೆಗೆ ಅವರ ಹನ್ನೊಂದನೆಯ ವಯಸ್ಸಿನಲ್ಲಿ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಯಾದರು. ಇಪ್ಪತ್ತನೆಯ ವಯಸ್ಸಿನವರೆಗೂ ವ್ಯಾಸಂಗ ಮಾಡಿ ಸಂಸ್ಕೃತ ಅದರಲ್ಲಿಯೂ ವ್ಯಾಕರಣದಲ್ಲಿ ಪಂಡಿತರಾದರು.

ತಿರುವನಂತಪುರದ ವಾಸ, ಶಿವನ್‌ರವರ ಜೀವನದಲ್ಲಿ ಒಂದು ಮುಖ್ಯವಾದ ಘಟ್ಟವೆನ್ನಬಹುದು. ಒಂದು ಕಡೆ ಸಾಹಿತ್ಯಭಾಗದ ತಳಹದಿ ಭದ್ರವಾಗಲು ಪ್ರಾರಂಭ. ಇನ್ನೊಂದು ಕಡೆ ಸುಪ್ತವಾಗಿದ್ದ ಸಂಗೀತಾಕಾಂಕ್ಷೆ ಬೆಳೆದುಕೊಂಡು ಬರಲು ಅನೂಕೂಲ ವಾತಾವರಣ. ಪ್ರಸಿದ್ಧ ಸಂಗೀತ ವಿದ್ವಾಂಸರಿದ್ದ ಊರು-ತಿರುವನಂತಪುರ. ಆದರೆ ಬಾಲಕ ರಾಮಯ್ಯ ಆಕರ್ಷಿತನಾದುದು - ಆ ದಿಗ್ಗಜಗಳ ಸಂಗೀತದಿಂದಲ್ಲ. ಸಂತೋಷದಿಂದ ತನ್ಮಯರಾಗಿ ಹಾಡುತ್ತಿದ್ದ ಭಜನ ಗೋಷ್ಠಿಗಳಲ್ಲ. ಸುಪ್ರಸಿದ್ಧ ವಾಗ್ಗೇಯಕಾರ ನೀಲಕಂಠಶಿವನ್‌ರವರ ಪ್ರಭಾವ ರಾಮಯ್ಯನ ಮನಸ್ಸಿನ ಮೇಲೆ ಹೆಚ್ಚಾಗಿತ್ತು. ಅವನಲ್ಲಡಗಿದ್ದ ಸಂಗೀತಚೇತನವು ಬಲಗೊಂಡು ವೃದ್ಧಿಯಾಗಲು ಸಹಾಯಕವಾಯಿತು. ನೀಲಕಂಠಶಿವನ್‌ರವರ ಕೀರ್ತನೆಗಳನ್ನೇ ಹಾಡುತ್ತಿದ್ದ 200-300 ಮಂದಿ ಇದ್ದ ಭಜನಗೋಷ್ಠಿಯೊಂದಿತ್ತು. ಆ ಗಾಯಕರೊಂದಿಗೆ ತಾನೂ ಸೇರಿ ಪರವಶನಾಗಿ ಹಾಡುತ್ತಿದ್ದ - ರಾಮಯ್ಯ.

ಪಾಠಶಾಲೆಯ ವ್ಯಾಸಂಗ ಮುಗಿಯುವ ವೇಳೆಗೆ ರಾಮಯ್ಯನ ತಾಯಿ ತೀರಿಕೊಂಡರು. ತಾಯಿಯ ಬಗೆಗೆ ರಾಮಯ್ಯನ ಪ್ರೀತಿ ಅಪಾರ. ತುಂಬಾ ಹೊಂದಿಕೊಂಡಿದ್ದ. ಆಕೆಯ ನಿಧನದಿಂದ ರಾಮಯ್ಯನ ಮನಸು ಕಲಕಿಹೋಯಿತು. ವಿರಕ್ತಿಯುಂಟಾಯಿತು. ಇಲ್ಲಿಂದ ಮುಂದೆ ರಾಮಯ್ಯನ ಜೀವನದಲ್ಲಿ ಇನ್ನೊಂದು ಘಟ್ಟ, ಯಾರೊಡನೆಯೂ ಮಾತಾಡುವುದನ್ನು ನಿಲ್ಲಿಸಿದ. ಮೌನವ್ರತಧಾರಿಯಾದ. ಧಾವಳಿ ಚೀಲದಲ್ಲಿ ಒಂದೋ ಎರಡೋ ಬಟ್ಟೆ, ವಿಭೂತಿ, ಅರುಳ್‌ಪ ಎಂದು ಕರೆಯಲ್ಪಡುವ ರಾಮಲಿಂಗಸ್ವಾಮಿಗಳ ಭಕ್ತಿಪದ್ಯಗಳ ಒಂದು ಪುಸ್ತಕ. ಇಷ್ಟನ್ನೂ ಹೆಗಲಿಗೇರಿಸಿ ದಕ್ಷಿಣದೇಶದ ಪುಣ್ಯಕ್ಷೇತ್ರಗಳನ್ನೆಲ್ಲ ಸುತ್ತಲು ಪ್ರಾರಂಭಿಸಿದ.

ಅದರದೇ ಒಂದು ವೈಖರಿ. ಈ ಕ್ಷೇತ್ರಗಳ ಮುಖ್ಯ ಉತ್ಸವಗಳಲ್ಲಿ ರಾಮಯ್ಯ ಹಾಜರ್. ಉತ್ಸವದಲ್ಲಿ ಮುಂದೆ ನಾಗಸ್ವರ, ಅದರ ಹಿಂದೆ ಪ್ರಾಚೀನ ತೇವಾರಗಳನ್ನು ಹಾಡಿಕೊಂಡು ನಡೆವ ಓಡುವರ್ ಗೋಷ್ಠಿ. ಕಡೆಯಲ್ಲಿ ರಾಮಯ್ಯನ ಭಜನೆ, ಪುರಾತನ ಸಾಧುಸಂತರ ಪದ್ಯ ಮತ್ತು ಪದಗಳು, ಗೋಪಾಲಕೃಷ್ಣ ಭಾರತಿ, ವೇದನಾಯಕಂ ಪಿಳ್ಳೆ ಮುಂತಾದವರ ಕೀರ್ತನೆಗಳನ್ನು ಸುಸ್ವರದಿಂದ ಭಾವಾವೇಶದಿಂದ ಹಾಡಿಕೊಂಡು ಹೋಗುತ್ತಿದ್ದ ಈ ಗಾಯಕನ

ಸುತ್ತಲೂ ಜನ ಗುಂಪುಗಟ್ಟಿ ಅವನ ಗಾಯನದಿಂದ ಪುಳಕಿತರಾಗುತ್ತಿದ್ದರು. ಬರುಬರುತ್ತಾ ಉತ್ಸವಗಳಲ್ಲಿ ಈ ಅನಾಮಧೇಯ ಭಕ್ತನ ಸ್ಫೂರ್ತಿಯುತ ಭಕ್ತಿಸಂಗೀತವು ಜನಗಳಿಗೆ ಮುಖ್ಯ ಆಕರ್ಷಣೆಯಾಗತೊಡಗಿತು. ತನ್ಮಯತೆಯಿಂದ ಹಾಡುತ್ತಿದ್ದ ರಾಮಯ್ಯನ ಭಕ್ತಿಸಂಗೀತವನ್ನು ಕೇಳಿ ಪುಳಕಿತರಾದ ಜನಗಳ ಕಣ್ಣಿನಲ್ಲಿ ಕಂಬನಿ ತುಂಬುತ್ತಿದ್ದುದೂ ಸಹಜವೇ. ಇಲ್ಲಿ ಒಂದು ಸ್ವಾರಸ್ಯ ಸಂದರ್ಭ ನೆನಪಿಗೆ ಬರುತ್ತದೆ.

ಮಧುರೆಯಲ್ಲಿ ಉತ್ಸವ, ಮುಂದುಗಡೆ ಮನ್ನಾರ್‌ಗುಡಿ ಚಿನ್ನಪಕೀರಿ ಪಿಳ್ಳೆಯ ನಾಗಸ್ವರ. ಆತನು ಚೋಳದೇಶದ ನಾಗಸ್ವರ ದಿಗ್ಗಜಗಳಲ್ಲಿ ಒಬ್ಬನೆಂದು ಖ್ಯಾತನಾಗಿದ್ದವನು. ಅದಕ್ಕೆ ಸಹಜವಾಗಿ ಆತನ ಸುತ್ತಲೂ ಜನಸಂದಣಿ. ಉತ್ಸವ ಮುಂದು ಹೋಗುತ್ತಾ ಹೋಗುತ್ತಾ ನಾಗಸ್ವರದ ಸುತ್ತಲೂ ಇದ್ದ ಜನಸಾಂದ್ರತೆ ಕಡಿಮೆಯಾಗುತ್ತಾ ಬಂದುದನ್ನು ಪಕೀರಿ ಗಮನಿಸಿದರು. ಕ್ರಮೇಣ ಸಾವಿರಾರು ಜನರಿಂದ ನೂರಾರಕ್ಕೆ ಇಳಿಯಿತು. ಎಲ್ಲರೂ ಹಿಂದೆ ಹಿಂದೆ ಹೋಗುತ್ತಿದ್ದುದನ್ನು ನೋಡಿ ಅದೇನು ವಿಶೇಷವೋ ನೋಡಬೇಕೆಂದು ತಾವೂ ಉತ್ಸವದ ಹಿಂಭಾಗಕ್ಕೆ ಬಂದರು, ಚಿನ್ನಪಕೀರಿ. ಅಲ್ಲಿ ನೋಡಿದರೆ ನಾಗಸ್ವರದ ವರ್ತುಳದಿಂದ ಕಳಚಿಕೊಂಡ ಜನವೆಲ್ಲ, ವಿಭೂತಿ ಬಳಿದುಕೊಂಡು ಪರಕಲುಪರಕಲಾಗಿದ್ದ ಶಿವನ್‌ರವರ ಗಾಯನವನ್ನು ಉತ್ಸಾಹದಿಂದ ಕೇಳಿ ಅನೇಕರು ಕಣ್ಣನ್ನೂ ಒರೆಸಿಕೊಳ್ಳುತ್ತಿದ್ದಾರೆ. ಚಿನ್ನಪಕೀರಿಗೆ ಆಶ್ಚರ್ಯವಾಯಿತು. ನೇರವಾಗಿ ಹೋಗಿ ಶಿವನ್‌ರವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ - "ನನ್ನ ಜೀವನದಲ್ಲಿ ಸಾಧಿಸಲು ಆಗದಿದ್ದರೂ ನಿಜವಾದ ಸಂಗೀತದ ಗುಣವೇನೆಂಬುದನ್ನು ಇಂದು ನಾನು ಕಣ್ಣಾರೆ ಕಂಡ ಹಾಗಾಯಿತು" ಎಂದರು.

ಆ ವೇಳೆಗಾಗಲೇ ರಾಮಯ್ಯ 'ಪಾಪನಾಶಂ ಶಿವನ್' ಆಗಿದ್ದರು. ಅದಕ್ಕೆ ಕಾರಣವಿಷ್ಟೇ. ಭಗವತ್ಪ್ರೀತ್ಯರ್ಥವಾಗಿ ಹಾಡುತ್ತಿದ್ದಾಗ ವಿನಾ ಇತರ ವೇಳೆಯಲ್ಲಿ ರಾಮಯ್ಯ ಮೌನ. ಆದುದರಿಂದ ಅವರು ಯಾರು, ಹೆಸರೇನು ಎಂಬುದೇ ಯಾರಿಗೂ ತಿಳಿಯದು. ಆದರೆ ಪ್ರತಿ ವರುಷವೂ ತುಂಡುಬಟ್ಟೆಯುಟ್ಟು, ತಲೆಯಿಂದ ಕಾಲಿನವರೆಗೂ ವಿಭೂತಿ ಬಳಿದುಕೊಂಡು ತಪ್ಪದೆ ಪಾಪನಾಶದ ದೇವಸ್ಥಾನದ ಜಾತ್ರೆಗೆ ಹಾಜರಾಗುತ್ತಿದ್ದ ಈ ವ್ಯಕ್ತಿಯನ್ನು ಎಲ್ಲರೂ 'ಪಾಪನಾಶಂ ಶಿವನ್' ಎಂದು ಕರೆಯಲು ಪ್ರಾರಂಭಿಸಿದರು. ಅದೇ ಹೆಸರು ಉಳಿದುಕೊಂಡು ಬಂದಿತು.

ಮಹಾ ವಾಗ್ಗೇಯಕಾರ

ಪಾಪನಾಶಂ ಶಿವನ್ ತಮಿಳು ನಾಡಿನ ಪ್ರಸಿದ್ಧ ಸಂತ, ವಾಗ್ಗೇಯಕಾರರಾದ ಅರುಣಗಿರಿ, ರಾಮಲಿಂಗಸ್ವಾಮಿ, ಗೋಪಾಲಕೃಷ್ಣಭಾರತಿ, ವೇದನಾಯಕಂಪಿಳ್ಳೆ, ಅಚ್ಯುತದಾಸರ್ ಮುಂತಾದವರ ಸಾಲಿಗೆ ಸೇರಿದವರು; ಅನುಭಾವಿ. ಆದುದರಿಂದ ಹೃದಯದಿಂದ ಹೊಮ್ಮಿ ಭಾವಪ್ರಧಾನವಾದ ಅವರ ಕೀರ್ತನೆಗಳು ಅನೇಕ ಸಮಕಾಲೀನ ವಾಗ್ಗೇಯಕಾರರ ಕೃತಿಗಳಿಗಿಂತ ಹೆಚ್ಚಾಗಿ ಜನಗಳ ಹೃದಯವನ್ನು ಮುಟ್ಟಿದುದರಲ್ಲಿ ಆಶ್ಚರ್ಯವಿಲ್ಲ. ಈ ಶತಮಾನದ ಕರ್ಣಾಟಕ

ಸಂಗೀತದ ಮಹಾನ್ ವಾಗ್ಗೇಯಕಾರರಲ್ಲಿ ಶಿವನ್‌ರವರೂ ಒಬ್ಬರೆಂದು ನಿಸ್ಸಂದೇಹವಾಗಿ ಹೇಳಬಹುದು. ಅವರ ಕೃತಿಗಳು ತಮಿಳು ನಾಡಿನಲ್ಲಿಯೇ ಹೆಚ್ಚು ಪ್ರಚಾರದಲ್ಲಿದ್ದರೂ ಇತ್ತ ಕಡೆಯ ಸಂಗೀತ ಕಛೇರಿಗಳಲ್ಲಿಯೂ ಅನೇಕವು ಜನಪ್ರಿಯವಾಗಿವೆ. ತೋಡಿರಾಗದ ಕಾರ್ತಿಕೇಯಗಾಂಗೇಯ; ವರಾಳಿಯ-ಕಾವಾವಾ; ಮುಖಾರಿಯ – ಶಿವಕಾಮ ಸುಂದರಿ; ಮೋಹನದ – ಕಾಪಾಲಿ; ಕಾಪಿರಾಗದ - ರಾಧಾಮುಖಕಮಲ; ಮಾರುವಧನ್ಯಾಸಿಯ – ಮೃದುಭಾಷಣ; ಷಣ್ಮುಖ ಪ್ರಿಯದ-ಶರವಣಭವ; ನಟಭೈರವಿಯ-ಶ್ರೀವಲ್ಲಿದೇವ ಸೇನಾಪತೇ; ಪುನ್ನಾಗವರಾಳಿಯ – ಶಿವಗಂಗಾನಗರ ನಿವಾಸಿನಿ; ಭೌಳಿರಾಗದ-ಕರುಣಾನಿಧಿಯೇ ಮುಂತಾದವನ್ನು ನೆನೆಯಬಹುದು.

ಯಾವ ಒಂದು ಕಡೆಯೂ ನೆಲೆಯಾಗಿ ನಿಲ್ಲದೆ ಊರೂರು ಅಲೆಯುತ್ತಿದ್ದಾಗ, ಮನಸ್ಸಿನ ದುಗುಡವನ್ನು, ಸಂತೋಷವನ್ನು ಮತ್ತು ಭಕ್ತಿಯನ್ನು ತೋಡಿಕೊಂಡ ಶಿವನ್‌ರವರ ಕೃತಿಗಳ ರಾಗ ಮತ್ತು ಭಾವಗಳು ಭಾಷೆಯನ್ನೂ ಮೀರಿ ಎಲ್ಲರಿಗೂ ಸಂತೋಷವುಂಟುಮಾಡಬಲ್ಲ ಹಾಗೂ ನೆಮ್ಮದಿ ನೀಡಬಲ್ಲ ಗುಣದಿಂದ ಕೂಡಿವೆ. ಮದುವೆಯಾಗಿ ಮದರಾಸಿನಲ್ಲಿ ನೆಲೆಸಿದ ನಂತರ ಕೀರ್ತನೆಗಳೇ ಅಲ್ಲದೆ ನಾಟಕ, ನೃತ್ಯ, ಚಲನಚಿತ್ರ ಮುಂತಾದವಕ್ಕೂ ಕೃತಿರಚನೆ ಮಾಡಿದರು. ಸಂಗೀತವೇ ಪ್ರಧಾನವಾಗಿದ್ದ ಕಾಲದಲ್ಲಿ ತಾವೂ ಎರಡು ಮೂರು ಚಿತ್ರಗಳಲ್ಲಿ ಭಾಗವಹಿಸಿದ್ದರು. ಅಲ್ಲದೆ ಗುರುಗಳಾದ ನೀಲಕಂಠ ಶಿವನ್‌ರವರ ಕೀರ್ತನೆಗಳನ್ನು ಪ್ರಚಾರಕ್ಕೆ ತರುವುದರಲ್ಲಿಯೂ ಶ್ರದ್ಧೆಯಿಂದ ಕೆಲಸ ಮಾಡಿದರು. ನಾಟಕ, ಚಿತ್ರ ಇವುಗಳಿಗೆ ರಚಿಸಿದ ಕೃತಿಗಳನ್ನು ಬಿಟ್ಟಲ್ಲಿ ಶಿವನ್‌ರವರು ಎರಡು ಸಾವಿರಕ್ಕೂ ಹೆಚ್ಚಾಗಿ ಸಂಗೀತದ ಗೇಯಪ್ರಬಂಧಗಳನ್ನು ರಚಿಸಿದ್ದಾರೆ. ಅಲ್ಲದೆ 24 ರಾಗಗಳಲ್ಲಿ ರಾಮಾಯಣವನ್ನೂ ಕೀರ್ತನೆಗಳ ರೂಪದಲ್ಲಿ ರಚಿಸಿದ್ದಾರೆ. ಇದರ ಜೊತೆಗೆ ಕಲಾಕ್ಷೇತ್ರದ ಗೀತಗೋವಿಂದ, ಬೇಡರಕಣ್ಣಪ್ಪ ಮುಂತಾದ ನೃತ್ಯ ನಾಟಕಗಳ ಸಂಗೀತವೆಲ್ಲ ಶಿವನ್‌ರವರದೇ.

ಜೀವನದ ಸಂಧ್ಯೆಯಲ್ಲಿ ಪಾಪನಾಶಂ ಶಿವನ್‌ರವರಿಗೆ ರಾಷ್ಟ್ರೀಯ ಫೆಲೋಷಿಪ್ ಪ್ರಶಸ್ತಿ, ತಮಿಳುನಾಡು ಸಂಗೀತ ನಾಟಕ ಸಂಘದ ಪ್ರಶಸ್ತಿ, ತಮಿಳು ಇಶೈ ಸಂಘ, ಫೈನ್ ಆರ್ಟ್ಸ್ ಸೊಸೈಟಿ, ಮ್ಯೂಸಿಕ್ ಅಕಾಡೆಮಿ ಮುಂತಾದ ಸಂಸ್ಥೆಗಳ ಸನ್ಮಾನ ಇವೆಲ್ಲಾ ದೊರೆತವು. ಇದರಿಂದ ಅವರಿಗೆ ಎಷ್ಟು ಸಂತೋಷವಾಯಿತೋ ಏನೋ ತಿಳಿಯದು. ಆದರೆ ತಮ್ಮ 83ನೆಯ ವಯಸ್ಸಿನಲ್ಲಿ ಇದೇ ಅಕ್ಟೋಬರ್ ಮೊದಲನೆಯ ದಿನದಂದು ನಿಧನರಾದಾಗ ಪಾಪನಾಶಂ ಶಿವನ್‌ರವರಿಗೆ ತಮ್ಮ ಕೃತಿಗಳು ತಮಿಳುನಾಡಿನಲ್ಲಿಯೇ ಅಲ್ಲದೆ ಹೊರಗೂ ಜನಪ್ರಿಯವಾಗಿರುವುದನ್ನು ಕಂಡು ತಾವು ತಮ್ಮ ಆರಾಧ್ಯ ದೈವಕ್ಕೆ ಹಾಗೂ ಸಂಗೀತಕ್ಕೆ ಮಾಡಿದ ಕೈಂಕರ್ಯ ಸಾರ್ಥಕವಾಯಿತು - ಎಂದು ಮನಶ್ಶಾಂತಿಯುಂಟಾಗಿರಬಹುದು. ★ ★ ★ ★ ★ ★ ★ ★ ★ ★ ★ ★ ★ ★ ★

ಸುಧಾ, 1973

14. ವೇಣುವಾದನ ನಿಪುಣ ಸ್ವ॥ ಟಿ. ಸ್ವಾಮಿನಾಥಪಿಳ್ಳೈ

ನಾನು ಚಿಕ್ಕವನಿದ್ದಾಗ ನಮ್ಮ ಸಂಗೀತ ಕ್ಷೇತ್ರದಲ್ಲಿ ಬಹು ಹಿರಿಮೆಯ ಸ್ಥಾನದಲ್ಲಿದ್ದ ಕೆಲವು ಸಂಗೀತಜ್ಞರು- ಕೊನೇರಿ ರಾಜಪುರಂ ವೈದ್ಯನಾಥಯ್ಯರ್, ರಾಮನಾಡ್ ಶ್ರೀನಿವಾಸಯ್ಯಂಗಾರ್, ಪಂಚಾಪಗೇಶ ಶಾಸ್ತ್ರಿಗಳ್, ಕಾರೈಕ್ಕುಡಿ ಸಾಂಬಶಿವೈಯ್ಯರ್, ನಾಯನಾಪಿಳ್ಳೈ, ಮುತ್ತಯ್ಯ ಭಾಗವತರ್, ವೀಣಾ ಧನಮ್ಮಾಳ್ ಮುಂತಾದವರು. ಇವರ ಸಂಗೀತ ಕಲೆಯ ಶ್ರೇಷ್ಠತೆಯು ನಿರ್ವಿವಾದವಾದುದು. ಆದರೆ ಅವರುಗಳಲ್ಲಿ ಇದ್ದ ಒಂದು ದೊಡ್ಡ ಗುಣವೆಂದರೆ, ಕಿರಿಯರಿಗೆ, ಪ್ರವರ್ಧಮಾನಕ್ಕೆ ಬರುತ್ತಿರುವ ಸಂಗೀತ ಕಲಾವಿದರಿಗೆ ನೀಡುತ್ತಿದ್ದ ಪ್ರೋತ್ಸಾಹ. ಪ್ರತಿಭೆಯನ್ನು ಪ್ರದರ್ಶಿಸಲು ಈ ತರುಣ ಸಂಗೀತಗಾರರಿಗೆ, ಅನೇಕ ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದುದೇ ಅಲ್ಲದೇ, ಅನಂತರ ಏಕಾಂತವಾಗಿ, ಲೋಪದೋಷಗಳನ್ನು ತೋರಿಸಿ, ತಿದ್ದಿಕೊಳ್ಳಲು ಅವಕಾಶ ಮಾಡಿಕೊಡುತ್ತಿದ್ದರು. ಚಿಕ್ಕ ವಯಸ್ಸಿನಲ್ಲಿ, ಅವರಿಂದ ನಾನೂ ಎಷ್ಟೋ ಬಾರಿ ಪ್ರೋತ್ಸಾಹಿತನಾಗಿದ್ದೇನೆ. ಸಂಗೀತಗಾರರು, ತಾವು ಹಿರಿಮೆಯ ಸ್ಥಾನಕ್ಕೇರಿರುವುದೇ ಅಲ್ಲ, ಕಿರಿಯರನ್ನು ಆ ಸ್ಥಾನಕ್ಕೆ ಬರಲು ಪ್ರೋತ್ಸಾಹಿಸಬೇಕು. ಅದು ಅವರ ಕರ್ತವ್ಯ, ಕಲಾಸೇವೆ ಮಾಡಿದ ಸಾರ್ಥಕ್ಯ ಎಂದು 1953ರಲ್ಲಿ ಮದರಾಸಿನ ಸಂಗೀತ ಪರಿಷತ್ತಿನ ವಾರ್ಷಿಕಾಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದ ತಿರುಪ್ಪಾಂಬರಂ ಸ್ವಾಮಿನಾಥ ಪಿಳ್ಳೆಯವರು ಹೇಳಿದರು. ಆಡಿದುದನ್ನೇ ಆಚರಣೆಗೆ ತರುತ್ತಿದ್ದ ಪಿಳ್ಳೆಯವರು, ಖಾಸಗಿಯಾಗಿಯೂ ನಾನಾ ವಿದ್ಯಾಪೀಠಗಳಲ್ಲಿ ಹಿರಿಯ ಅಧ್ಯಾಪಕರಾಗಿಯೂ ಅನೇಕ ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣವನ್ನಿತ್ತಿದ್ದಾರೆ, ಪ್ರತಿಭಾವಂತರಿಗೆ ಪ್ರೋತ್ಸಾಹವನ್ನಿತ್ತಿದ್ದಾರೆ. ಹಾಗೆ ಮುಂದೆ ಬಂದವರಲ್ಲಿ ಸ್ವಾಮಿನಾಥ ಪಿಳ್ಳೆಯವರಂತೆಯೇ ವೇಣುವಾದಕರಾದ ಟಿ. ವಿಶ್ವನಾಥನ್ ಮತ್ತು ಗಾಯಕರಾದ ಶೀರ್ಕಾಳಿ ಗೋವಿಂದರಾಜನ್‌ರವರನ್ನು ಹೇಳಬಹುದು.

ಸ್ವಾಮಿನಾಥ ಪಿಳ್ಳೆಯವರು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಖ್ಯಾತರಾಗಿದ್ದುದು ವೇಣುವಾದಕರೆಂದು. ಆದರೆ ಅಷ್ಟೇ ಖ್ಯಾತರಾಗಿದ್ದುದು ಅವರ ಪಾಂಡಿತ್ಯಕ್ಕೆ, ನಾನಾ ಸಂಪ್ರದಾಯಗಳ ಗಾಢವಾದ ಪರಿಚಯಕ್ಕೆ. ಅದು ಕೇವಲ ತಮಿಳು ಸಂಗೀತದ ಗೋಷ್ಠಿಯಾಗಲೀ ಅಥವಾ ಮದರಾಸ್ ಸಂಗೀತ ಪರಿಷತ್ತಿನ ಸಾಂಪ್ರದಾಯಿಕ ಕರ್ನಾಟಕ ಸಂಗೀತದ ವಿದ್ವತ್ ಗೋಷ್ಠಿಯಾಗಲಿ ಕಣ್ಣಿಗೆ ಕಟ್ಟಿದಂತೆ ಈ ದಢೂತಿ ಆಕಾರದ ಪಿಳ್ಳೆಯವರು ಹಾಜರಿರುತ್ತಿದ್ದರು. ಸಂಪ್ರದಾಯಗಳ ಸಮಸ್ಯೆಗಳ ಚರ್ಚೆಗಳಲ್ಲಿ ತಮ್ಮ ಅನುಭವಾಂಶಗಳ ನಿವೇದನದಿಂದ ಸಹಕರಿಸುತ್ತಿದ್ದರು. ಆದರೆ ಸ್ವಾಮಿನಾಥ ಪಿಳ್ಳೆಯವರ ಒಂದು ವೈಶಿಷ್ಟ್ಯವೆನಿಸಿದ್ದುದು ಅವರ ದೀಕ್ಷಿತ ಸಂಪ್ರದಾಯದ ವಿಶೇಷ ಪರಿಚಯ ಮತ್ತು ದೀಕ್ಷಿತರ ಅಪಾರ ಕೃತಿಸಂಗ್ರಹ. ಇದಲ್ಲದೆ ಅಪರೂಪವಾದ ಮತ್ತು ಕ್ಲಿಷ್ಟವಾದ ಇತರ ಅನೇಕ ವಾಗ್ಗೇಯ ಕಾರರ ಕೃತಿಗಳು ಸ್ವಾಮಿನಾಥ ಪಿಳ್ಳೆಯವರ ಸಂಗ್ರಹದಲ್ಲಿದ್ದವು.

ಮಹಾಪ್ರಬಂಧ ಪರಿಚಯ

ನವರೂಪ ದೀಕ್ಷಿತ ಕೃತಿಗಳ ಪರಿಚಯದ ಬಗೆಗೆ ನೀಡಬಹುದಾದ ಒಂದು ನಿದರ್ಶನವೆಂದರೆ, ಈಗ ಕೆಲವು ವರ್ಷಗಳ ಹಿಂದೆ, ಮದರಾಸ್ ರೇಡಿಯೋ ಕೇಂದ್ರದಿಂದ ಧಾರಾವಾಹಿಯಾಗಿ ಪ್ರಸಾರವಾದ ರಾಮಸ್ವಾಮಿ ದೀಕ್ಷಿತರ ಅಷ್ಟೋತ್ತರ ಶತರಾಗತಾಳ ಮಾಲಿಕಾ, ನೂರೆಂಟು ರಾಗ ಮತ್ತು ಅಷ್ಟೇ ಸಂಖ್ಯೆಯ ತಾಳಗಳನ್ನು ಈ ಮಹಾಪ್ರಬಂಧದ ಕೆಲವು ಭಾಗಗಳ ಸಂಚಾರ ಕ್ರಮವೇ ನಶಿಸಿ ಹೋಯಿತೆಂಬ ಭಾವನೆಯಿದ್ದಿತು. ಅಂತಹುದನ್ನು ಉದ್ಧರಿಸಿ, ತಮ್ಮ ಶಿಷ್ಯರುಗಳ ಮೂಲಕ ಹಾಡಿಸಿ ಧಾರಾವಾಹಿಯಾಗಿ ಪರಿಚಯ ಮಾಡಿಸಿದರು ಸ್ವಾಮಿನಾಥ ಪಿಳ್ಳೆ.

ದೀಕ್ಷಿತರ ಸಾಮಗ್ರಿ ಮತ್ತು ಸಂಪ್ರದಾಯಗಳ ವಿಶೇಷ ಪರಿಚಯಕ್ಕೆ ಒಂದು ಕಾರಣವೂ ಇದೆ. ಅರುವತ್ತು ವರ್ಷಗಳ ಹಿಂದೆ, ತಂಜಾವೂರು ಬಳಿಯ ತಿರುಪ್ಪಾಂಬರಂ ಗ್ರಾಮದಲ್ಲಿ ಸ್ವಾಮಿನಾಥ ಪಿಳ್ಳೆಯವರು ಹುಟ್ಟಿದುದು. ದೀಕ್ಷಿತ ಸಂಪ್ರದಾಯಾನುವರ್ತಿಯಾಗಿದ್ದ ಒಂದು ಸಂಗೀತ ಮನೆತನದಲ್ಲಿ ಪಿಳ್ಳೆಯವರಾದ ನಟರಾಜ ಸುಂದರಂರವರು, ದೀಕ್ಷಿತ ಶಿಷ್ಯ ಪರಂಪರೆಯಲ್ಲಿ ಬಂದ ಸಾತನೂರ್ ಪಂಜನದಯ್ಯರವರ ಶಿಷ್ಯರು. ಬಾಲ್ಯದಲ್ಲಿ ತಂದೆಯವರಿಂದಲೇ ಸಂಗೀತ ಶಿಕ್ಷಣ ಪಡೆದ ಸ್ವಾಮಿನಾಥ ಪಿಳ್ಳೆ ಪ್ರಾರಂಭದಲ್ಲಿ ಗಾಯಕರಾಗಿದ್ದರೂ ಅನಂತರ ಸ್ವಲ್ಪ ಕಾಲ ಪಿಟೀಲುವಾದಕರಾಗಿದ್ದು ಕಡೆಗೆ ವೇಣುವಾದನದಲ್ಲಿ ಆಸಕ್ತರಾಗಿ ಆ ವಾದ್ಯ ವಾದನದಲ್ಲಿ ನಿಷ್ಣಾತರಾದರು.

ಆಗಿನ ಪ್ರಮುಖ ವಿದ್ವಾಂಸರಿಂದ ಪ್ರೋತ್ಸಾಹಿತರಾದುದೇ ಅಲ್ಲದೇ, ಅವರುಗಳ ಸಂಗೀತ ಕಲೆಯಿಂದಲೂ ಪ್ರಭಾವಿತರಾದ, ಸ್ವಾಮಿನಾಥ ಪಿಳ್ಳೆಯವರು, ಅಣ್ಣಾಮಲೆ ವಿಶ್ವವಿದ್ಯಾಲಯದಲ್ಲಿ ಸಂಗೀತ ವಿಭಾಗಾಧಿಪತಿಗಳಾಗಿದ್ದರು. ಅಲ್ಲದೆ ಈ ಹತ್ತು ವರ್ಷಗಳಿಂದಲೂ ಮದರಾಸಿನ ಕೇಂದ್ರ ಕರ್ನಾಟಕ ಸಂಗೀತ ಶಾಲೆಯಲ್ಲಿ ಪ್ರಾಧ್ಯಾಪಕರಾಗಿದ್ದರು.

ಸುಮಾರು ನಲವತ್ತು ವರ್ಷಗಳಿಗೂ ಮೀರಿದ ಅವರ ಸಂಗೀತ ಜೀವನದಲ್ಲಿ ನಾನಾ ಸ್ಥಳಗಳಲ್ಲಿ, ನಾನಾ ರೂಪದಲ್ಲಿ ಸನ್ಮಾನಿತರಾಗಿದ್ದರು. ಮೈಸೂರು, ಪುದುಕೋಟೆಯ ಆಸ್ಥಾನದಲ್ಲಿ ಸನ್ಮಾನಿತರಾಗಿದ್ದರು, ಅಂತೆಯೇ ಮದರಾಸ್ ಸಂಗೀತ ಪರಿಷತ್ತಿನಿಂದಲೂ 'ಸಂಗೀತ ಕಲಾನಿಧಿ' ಪ್ರಶಸ್ತಿಯಿಂದ ಗೌರವಿಸಲ್ಪಟ್ಟಿದ್ದರು. ಇದೇ ಸಾಲಿನಲ್ಲಿಯೇ ಈ ವರ್ಷದ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ರಾಷ್ಟ್ರೀಯ ಪ್ರಶಸ್ತಿಗೆ ಆರಿಸಲ್ಪಟ್ಟರು ಸ್ವಾಮಿನಾಥ ಪಿಳ್ಳೆ. ಆದರೆ ಮುಂದಿನ ಮಾಸ, ಅದನ್ನು ಸ್ವೀಕರಿಸುವ ಮೊದಲೇ ಕಳೆದ ಬುಧವಾರ ಸ್ವಾಮಿನಾಥ ಪಿಳ್ಳೆಯವರು ಹೃದಯಸ್ತಂಭನದಿಂದ ನಿಧನವಾದುದು ಬಹು ಖೇದಕರವೆನ್ನಬೇಕು. ಅಂತೆಯೇ, ಕರ್ನಾಟಕ ಸಂಗೀತಕ್ಷೇತ್ರಕ್ಕೆ ಒಬ್ಬ ಹಿರಿಯ ಕಲಾವಿದನ ನಷ್ಟವೂ ಆದುದೆನ್ನಬೇಕು. ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★

ಪ್ರಜಾವಾಣಿ, 1961

15. ಮೈಸೂರಿನ ಹಿರಿಯ ವೈಣಿಕ ಪ್ರವೀಣ ಆರ್.ಎಸ್. ಕೇಶವಮೂರ್ತಿ

1938ರ ಆಷಾಢ ಬಹುಳ ನವಮಿ. ವೀಣೆ ಭಕ್ಷಿ ಸುಬ್ಬಣ್ಣನವರ ಮನೆಯಲ್ಲಿ ಒಂದು ಕೂಟ. ವೈದಿಕರೂ, ಸಂಗೀತ ಸಾಹಿತ್ಯ ವಿದ್ವಾಂಸರೂ ನೆರೆದಿದ್ದಾರೆ. ಸುಬ್ಬಣ್ಣನವರು ಗೋಡೆಗೆ ಒರಗಿಕೊಂಡು ಕುಳಿತಿದ್ದಾರೆ. ಎದುರಿಗೆ ವೀಣೆ ನುಡಿಸುತ್ತಾ ಅವರ ಶಿಷ್ಯ ಕೇಶವಮೂರ್ತಿ. ಸುಬ್ಬಣ್ಣನವರಿಗೆ ಪ್ರಿಯವಾಗಿದ್ದ ರಾಗ, ಕೀರ್ತನೆಗಳೆಲ್ಲಾ ಒಂದೊಂದಾಗಿ ನಿರೂಪಿಸಲ್ಪಡುತ್ತಿದ್ದುವು. ಕಾಂಭೋಜಿ ರಾಗಾಲಾಪನೆ, ತ್ಯಾಗರಾಜರ ''ಎವರಿಮಾಟ'' ಕೀರ್ತನೆ, ಕಲ್ಯಾಣಿ ರಾಗಾಲಾಪನೆ ''ನಿಜದಾಸ ವರದ'' ಕೀರ್ತನೆ, ವಾಸುದೇವಾಚಾರ್ಯರ ''ಬ್ರೋಚೇವಾರೆವರುರಾ'' ಇತ್ಯಾದಿ. ಕೊನೆಗೆ ಶೇಷಣ್ಣನವರ ಜಂಜೂಟಿ ತಿಲ್ಲಾನದಿಂದ ಮುಗಿಯಿತು.

ಇದಾದನಂತರ ಒಳಗಿನಿಂದ ತಾವು ನುಡಿಸುತ್ತಿದ್ದ ವೀಣೆಯನ್ನು ತರಿಸಿ ಮುಂದಿಟ್ಟುಕೊಂಡು ಸುಬ್ಬಣ್ಣನವರು ಅಲ್ಲಿದ್ದ ಶ್ರೋತ್ರಿಯರು ಮಂತ್ರಗಳನ್ನು ಹೇಳುತ್ತಿರಲು ಶಾಸ್ತ್ರೋಕ್ತವಾಗಿ ಪೂಜೆ ಮಾಡಿದರು. ಅನಂತರ ತಮಗೆ ಅರಮನೆಯಿಂದ ಪ್ರಶಸ್ತಿಯೊಡನೆ ಬಂದಿದ್ದ ಶಾಲುವನ್ನು ಹೊದಿಸಿದರು. ಪೂಜೆ ಎಲ್ಲಾ ಆದಮೇಲೆ ಶಿಷ್ಯನನ್ನು ಕುರಿತು ''ಕೇಶವಯ್ಯಾ ಮುಂದೆ ಬಾ, ತೊಗೋ, ನನ್ನ 12 ಲಕ್ಷ ರೂಪಾಯಿಯೂ ಒಂದೇ, ಈ ವೀಣೆಯೂ ಒಂದೇ. ಇದರಲ್ಲಿ ಲಕ್ಷ್ಮೀಸರಸ್ವತಿಯರ ಆವಾಹನೆಯಾಗಿದೆ. ಈಗ ನಾನೂ ಸಹ ಇದರಲ್ಲಿ ಐಕ್ಯವಾಗುವವನಾಗಿದ್ದೇನೆ. ನಾನು ಪಡೆದ ಯಶಸ್ಸಿಗೆ ಇಮ್ಮಡಿಯಾದ ಯಶಸ್ಸನ್ನು ಪಡೆದು ವಂಶಪಾರಂಪರ್ಯ ವಾಗಿ ಬಾಳಿ ಬದುಕಿ ಸುಖವಾಗಿರು'' ಎಂದು ಶಿಷ್ಯನ ಕೈಯಲ್ಲಿಟ್ಟು ಹರಸಿದರು.

ಅಮೂಲ್ಯವಾದ ವೀಣೆ

· ಆ ವೀಣೆಯ ಐತಿಹ್ಯವಿಷ್ಟೆ. ಮೊದಲನೆಯದಾಗಿ ಒಂದೇ ಮರದಿಂದ ಕೊರೆದ ಅಖಂಡ ವೀಣೆ ಅದು. ಅದರಲ್ಲಿರುವ ಸಾಮಗ್ರಿಯ ದೃಷ್ಟಿಯಿಂದ ಅದು ಬೆಲೆಬಾಳುವಂತಹುದೇನೋ ನಿಜ. ವಾದ್ಯದ ಪೂರ್ತ ಕೆತ್ತನೆ ಕೆಲಸಕ್ಕೆ ದಂತದ ಬದಲು ಬೆಳ್ಳಿ. ಬಿರಡೆಗಳ ತಲೆಯ ಭಾಗವೆಲ್ಲಾ ಗಟ್ಟಿಬೆಳ್ಳಿ ದಂಡಿಯ ಮೇಲಿನ ದೋಣಿಪಟ್ಟಿಯ ಸುತ್ತಲೂ ಇರುವ ಕೆತ್ತನೆ ಅಲಂಕಾರ-ಚಿನ್ನದಲ್ಲಿ ಮಾಡಿದುದು. ದಂಡಿಯ ಕೆಳಭಾಗದಲ್ಲಿ ಸೋರೆಬುರುಡೆ ಸೇರಿಸುವ ಸ್ಥಳದ ಎಡ ಪಾರ್ಶ್ವಕ್ಕೆ ಇರುವ ಅಲಂಕಾರದ ಮಧ್ಯೆ ದಂತದ ನಾಗರ ಹೆಡೆ, ಅದರಲ್ಲಿ ಕೆಂಪು ಹರಳು. ವಾದ್ಯದ

ಮೇಲ್ಮೈಯಲ್ಲಿ ದಂಡಿಗೂ ಕುದುರೆಗೂ ಮಧ್ಯೆ ಚಿನ್ನದಲ್ಲಿ ಮಾಡಿದ ಸರಸ್ವತಿ, ಎಡ ಪಾರ್ಶ್ವದಲ್ಲಿ ವ್ಯಾಳಿ ಕಡೆಗೆ ತಿರುಗುವಾಗ ಬೆಳ್ಳಿಯಲ್ಲಿ ಮಾಡಿದ ಸರಸ್ವತಿ, ಅದಕ್ಕೆ ಸ್ವಲ್ಪ ಮುಂದೆ ಬೆಳ್ಳಿಯ ಮಹಿಷಾಸುರ ಮರ್ದಿನಿ. ಇದಿಷ್ಟೂ ಅದರಲ್ಲಿ ಅಡಕವಾದ ವಸ್ತುಗಳ ಬೆಲೆಯನ್ನು ಸೂಚಿಸಬಹುದು. ಆದರೆ ಸುಬ್ಬಣ್ಣನವರ ವಾಕ್ಯಗಳ ಹಿಂದೆ ಇವಕ್ಕೂ ಮೀರಿದ ಬೆಲೆಯನ್ನು ಸೂಚಿಸುವ ಅಂಶವೊಂದಿದೆ.

ಈ ವೀಣೆಯನ್ನು ಮಾಡಿಸುವಾಗ ಸುಬ್ಬಣ್ಣನವರು ಅನೇಕರ ಸಲಹೆ ಸಹಾಯಗಳನ್ನು ಪಡೆದರು. ಯಾವ ವಿಷಯಕ್ಕೂ ಬದಲು ಮಾತನಾಡದೆ ಕೈಎತ್ತಿ ಧಾರಾಳವಾಗಿ ಕೊಡುವಂತಹ ಪ್ರಕೃತಿ ಅವರದು. ಆದುದರಿಂದ ಆ ವೀಣೆಯನ್ನು ಮಾಡಿಸುವಾಗ ಆದ ವೆಚ್ಚವನ್ನು ಹೇಳಲೇಬೇಕಾಗಿಲ್ಲ. ಅದರಲ್ಲಿರುವ ಚಿನ್ನದ ಸರಸ್ವತಿ ಮೈಸೂರಿನ ಸುಪ್ರಸಿದ್ಧ ಶಿಲ್ಪಿ ನಾರಾಯಣಾಚಾರ್ಯರಿಂದ ಕೆತ್ತಲ್ಪಟ್ಟುದು. ವೀಣೆಯು ಸಿದ್ಧವಾದ ನಂತರ ಈ ಸರಸ್ವತಿ ವಿಗ್ರಹವನ್ನು ಆಗಮೋಕ್ತವಾಗಿ ಪ್ರತಿಷ್ಠಾಪನೆ ಮಾಡಿ ಸಹಸ್ರಜನ ಸಂತರ್ಪಣೆಯಿಂದ ಅನ್ನಶಾಂತಿ ಮಾಡಿಸಿ ಅನಂತರ ಉಪಯೋಗಿಸಲಾರಂಭಿಸಿದರಂತೆ ! ಆದುದರಿಂದ ಆ ವಾದ್ಯದ ಆಧ್ಯಾತ್ಮಿಕ ಮೌಲ್ಯವು ವಸ್ತುಮೌಲ್ಯಕೆ ಏನೂ ಕಡಿಮೆಯಿರಲಿಲ್ಲ ಎನ್ನಬಹುದು. ಇದಲ್ಲದೆ ಆ ವಾದ್ಯವು ಸುಬ್ಬಣ್ಣನವರಿಗೆ ಜೀವನದ ಒಡನಾಡಿಯಂತೆ ಆಗಿದ್ದಿತು. ಇದಿಷ್ಟೂ ಕೂಡಿ ಅದಕ್ಕೆ ಒಂದು ವಿಶೇಷ ಬೆಲೆ ಬಂದಿದೆ ಎನ್ನಬೇಕು.

ಇದಾದ ಮೂರು ದಿನಗಳ ನಂತರ ವಿದ್ವಾಂಸರ ಸಂಗೀತರವವನ್ನು ಕೇಳುತ್ತಾ ಸುಬ್ಬಣ್ಣನವರು ಪರಂಧಾಮವನ್ನೈದಿದರು. ಗುರುಗಳ ಆಜ್ಞೆಯನ್ನು ತಲೆಯ ಮೇಲೆ ಹೊತ್ತು ಇಂದೂ ಆ ವೀಣೆಯ ಮೂಲಕ ಸಂಗೀತಾರಾಧನೆ ಮಾಡುತ್ತಿದ್ದಾರೆ - ಕೇಶವಮೂರ್ತಿ. ಅನೇಕರಿಗೆ ವಿದ್ಯಾದಾನ ಮಾಡಿದ್ದಾರೆ, ಮಾಡುತ್ತಿದ್ದಾರೆ. ಅವರ ಮಕ್ಕಳು ಅಂದರೆ ಶ್ರೀನಿವಾಸಮೂರ್ತಿ ಮತ್ತು ಸೂರ್ಯನಾರಾಯಣ ಇಂದಿನ ಪ್ರವರ್ಧಮಾನಕ್ಕೆ ಬರುತ್ತಿರುವ ಪ್ರಬುದ್ಧ ವೈಣಿಕರ ಶ್ರೇಣಿಯಲ್ಲಿದ್ದಾರೆ.

ಕೇಶವಮೂರ್ತಿಗಳು ಬಹು ಹಳೆಯ ವೈಣಿಕರ ಪೀಳಿಗೆಗೆ ಸೇರಿದವರು. ಮನೆತನದ ಆ ಪರಂಪರೆಯಲ್ಲಿ ಇವರು 25ನೆಯವರೆಂದು ತಿಳಿದುಬರುತ್ತದೆ. ತಂದೆ ಸುಬ್ಬರಾಯರೂ, ದೊಡ್ಡಪ್ಪ ವೆಂಕಟರಾಮಯ್ಯನವರೂ, ತಾತ ರಂಗಪ್ಪನವರೂ ಎಲ್ಲಾ ವೈಣಿಕರೇ. ಅವರ ಹಿಂದಿನವರಲ್ಲಿಯೂ ಪ್ರಾಯಶಃ ಇದೇ ಹೆಸರುಗಳು ಪುನರಾವೃತ್ತವಾಗುತ್ತಿವೆ.

ತಾಯಿಯ ಕಡೆಯೂ ಅಷ್ಟೇ. ಕೇದಾರಗೌಳ ರಾಗದ ''ವಿರಿಬೋಣಿ'' ಮತ್ತು ನಾಯಕಿ ರಾಗದ ''ಸರಸಿಜಾಕ್ಷ'' ವರ್ಣಗಳೇ ಅಲ್ಲದೆ ಇನ್ನೂ ಅನೇಕ ಕೀರ್ತನೆಗಳನ್ನು ರಚಿಸಿದ

ವೆಂಕಟರಮಣಯ್ಯನವರು ಅವರ ಸೋದರಮಾವ. ಹೀಗೆ ಆ ಪೀಳಿಗೆಯೆಲ್ಲಾ ವೈಣಿಕರೇ. ಆದುದರಿಂದ ಮನೆಯಲ್ಲೂ ವೀಣಾಗಾನದ ವಾತಾವರಣವೇ. ಬೇರೆ ಕಡೆಯಿಂದ ಪ್ರಚೋದನೆಯೇ ಬೇಕಾಗಲಿಲ್ಲ. ಬಾಲ್ಯದಿಂದಲೇ ವಾದ್ಯದ ಮೇಲೆ ಕೈ ಆಡಿಸುತ್ತಿದ್ದರು. ಹಾಗೆಯೇ ನುಡಿಸುವುದೂ ಅವರಿಗೆ ಸ್ವಾಭಾವಿಕವಾಗಿ ಬಂದಿತು. ದಿವ್ಯವಾಗಿ ನುಡಿಸುತ್ತಲೂ ಇದ್ದರು. ಅದನ್ನು ನೋಡಿ ತಿದ್ದಿ ಪರಿಷ್ಕರಿಸಿ ಸರಿಯಾದ ಮಾರ್ಗಕ್ಕೆ ತಿರುಗಿಸಬೇಕಾದ ಗುರುವು ಮಾತ್ರ ಅವಶ್ಯಕವಾಗಿದ್ದಿತು.

ಅಪೂರ್ವ ಅವಕಾಶ

ಕೇಶವಮೂರ್ತಿಗಳ ಪೂರ್ವಿಕರು ರುದ್ರಪಟ್ಟಣದವರು. ವೇದ ಮತ್ತು ವೀಣೆ ಎರಡೂ ಅನುಷ್ಠಾನದಲ್ಲಿ ಇದ್ದುವೆಂದು ಹೇಳಲೇಬೇಕಾಗಿಲ್ಲ. ಕೇಶವಮೂರ್ತಿಗಳು ಹುಟ್ಟಿದುದು ಬೇಲೂರು. ಬೆಳೆದು ಮೆಟ್ರಿಕ್ಯುಲೇಷನ್‌ವರೆಗೂ ವಿದ್ಯಾಭ್ಯಾಸ ಮಾಡಿದುದು ಚಿಕ್ಕಮಗಳೂರು ಗಾಯನ ಮತ್ತು ವೀಣಾವಾದನವೆರಡೂ ಮನೆಯಲ್ಲೇ ತಂದೆಯವರ ನೇತೃತ್ವದಲ್ಲಿಯೇ ನಡೆಯಿತು. ತಂದೆ ಸುಬ್ಬರಾಯರು ಸರಕಾರಿ ಉದ್ಯೋಗಿ. ಸಂಗೀತದ ಮೇಷ್ಟ್ರು. ಆದರೆ ಸಂಪ್ರದಾಯನಿಷ್ಠರು. ಅವರ ಬೋಧನಕ್ರಮವೂ ಅಷ್ಟೇ ಕಲಿಯುವಾಗ ಒಂದು ಸಣ್ಣತಪ್ಪನ್ನೂ ಸಹಿಸರು. ತಪ್ಪಿದಲ್ಲಿ ಮೊದಲಿಂದ ಪ್ರಾರಂಭ ಮಾಡಿ, ಖಚಿತವಾಗಿ ಬರುವವರೆಗೂ ಪದೇ ಪದೇ ನುಡಿಸುತ್ತಲೇ ಇರಬೇಕಾಗಿದ್ದಿತು.

ಹಳೇ ಜಾಡನ್ನೇ ಹಿಡಿದು ಕೊನೆಗೆ ಕೇಶವಮೂರ್ತಿಗಳೂ ''ಮೇಷ್ಟ್ರ'' ರಾಗಿಯೇ ಜೀವನ ನಡೆಸುವ ಸಂದರ್ಭವೇ ಇದ್ದಿತೋ ಏನೋ! ಒಂದು ಕಾರಣದಿಂದ ಅವರ ಜೀವನ ಪಥವೇ ಬದಲಾಯಿಸಿತು. ಕೇಶವಮೂರ್ತಿಗಳಿಗೆ ಆಗ ಸುಮಾರು 16 ವರುಷಗಳಿರಬಹುದು. ದೊಡ್ಡಪ್ಪ ರುದ್ರಪಟ್ಟಣದ ವೆಂಕಟರಾಮಯ್ಯನವರು ಯಾವುದೋ ಮದುವೆಯ ಸಂದರ್ಭದಲ್ಲಿ ಊರಿಗೆ ಬಂದಿದ್ದರು. ಆಗ ಅವರಿಗೆ ಇಳಿ ವಯಸ್ಸು. ದೇಶಸಂಚಾರವೆಲ್ಲಾ ಮಾಡಿ ಅರಮನೆಯ ಸಂಗೀತ ಶಾಲೆಯ ಮೇಲ್ವಿಚಾರಕರಾಗಿ ಮೈಸೂರಿನಲ್ಲಿ ನೆಲೆಸಿದ್ದರು. ಮದುವೆಯ ಮನೆಯಲ್ಲಿ ತಮ್ಮನ ಮಗನ ವೀಣಾವಾದನವನ್ನು ಗಮನಿಸಿ ''ಕೇಶವೂನ ಮೈಸೂರಿಗೆ ಕಳಿಸಿ. ಅವನನ್ನು ಇನ್ನೂ ಚೆನ್ನಾಗಿ ತಯಾರು ಮಾಡುತ್ತೇನೆ'' ಎಂದರು. ವೆಂಕಟರಾಮಯ್ಯನವರಿಗೂ ಮಕ್ಕಳಿರಲಿಲ್ಲ. ಈ ಮಾತುಗಳನ್ನು ಕೇಳಿ ಹಿಗ್ಗಿಹೋಗಿ ಮೈಸೂರು ಮತ್ತು ಅಲ್ಲಿನ ಅರಮನೆಯ ವೈಭವದ ಕನಸನ್ನು ಕಾಣುತ್ತಿದ್ದ ಕೇಶವಮೂರ್ತಿ ಸ್ವಲ್ಪ ದಿನಗಳಲ್ಲಿಯೇ ಮೈಸೂರಿಗೆ ಬಂದರು.

ಅರಮನೆಯ ನಕಾರ

ದೊಡ್ಡಪ್ಪನವರನ್ನು ಕಂಡುದಾಯಿತು. ಸ್ವಲ್ಪ ದಿವಸವೂ ಆಯಿತು. ''ನನಗೆ ವೃದ್ಧಾಪ್ಯ, ನಿನಗೆ ಪಾಠ ಹೇಳಿಕೊಡಲು ಶಕ್ತಿಯೇ ಇಲ್ಲವಲ್ಲೋ'' ಅಂದುಬಿಟ್ಟರು. ಇನ್ನೇನು

ಮಾಡುವುದು? ಊರಿಗೆ ಮುಖ ಹಿಡಿದುಕೊಂಡು ಹೋಗೋದಾಗುತ್ತದೆಯೇ? ಬೇರೆ ಕಡೆ ಕೊಠಡಿಯಲ್ಲಿ ವಾಸ ಮಾಡುತ್ತಾ ಅರಮನೆಯ ಚಂದ್ರಶಾಲೆ ತೊಟ್ಟಿಯಲ್ಲಿ ನಡೆಯುತ್ತಿದ್ದ ಸಂಗೀತ ಶಾಲೆಗಾದರೂ ಸೇರಬೇಕೆಂದು ಆಸೆಯಿಂದ ಅರ್ಜಿಯನ್ನು ಬರೆದುಕೊಂಡು ದರ್ಬಾರ್ ಭಕ್ಷಿಯವರ ಹತ್ತಿರ ಹೋದರು. ಆಗ ನಡೆದ ಸಂಭಾಷಣೆ :

ಭಕ್ಷಿ : ಯಾರಯ್ಯಾ ನೀನು?

ಕೇಶವಮೂರ್ತಿ : ಸಂಗೀತ ಸ್ಕೂಲಿಗೆ ಸೇರಬೇಕೂಂತ ಅರ್ಜಿ ಬರೆದು ತಂದಿದೀನಿ ಸಾರ್.

ಭಕ್ಷಿ : (ದುರುಗುಟ್ಟಿಕೊಂಡು) ಕಳಿಸೋ ಇವನ್ನ ಆಚೆಗೆ.

ಕೇಶವಮೂರ್ತಿ : ಯಾಕೆ ಸಾರ್, ಏನು ತಪ್ಪು ಮಾಡಿದೆ ಸಾರ್.

ಭಕ್ಷಿ : ಮುಚ್ಚು ಬಾಯ್, ಯಾರ ಮನೇವ್ನೋ ನೀನು?

ಕೇಶವಮೂರ್ತಿ : ವೀಣೆ ವೆಂಕಟರಾಮಯ್ಯನವರು ನಮ್ಮ ದೊಡ್ಡಪ್ಪ ಸಾರ್.

ಭಕ್ಷಿ : ತಿರುಗೀ ನೋಡು ! ಅವರನ್ನ ಕೇಳಿ ನಿನ್ನ ನಡವಳಿಕೇನೆಲ್ಲಾ ವಿಚಾರಿಸ್ಕೋತೇನೆ. ಕಳಿಸೋ ಇವನ್ನ ಆಚೇಗೆ.

ಏನು ಆಚಾತುರ್ಯವಾಯಿತು ! ಒಂದೂ ಕೇಶವಮೂರ್ತಿಗೆ ಅರ್ಥವಾಗಲಿಲ್ಲ. ಇದರ ಹಿನ್ನೆಲೆಯಿಷ್ಟೆ. ಅರಮನೆ ಮರ್ಯಾದೆ ಕಟ್ಟಳೆಯ ಪಾರಿಭಾಷಿಕ ಶಬ್ದಗಳೇ ಬೇರೆ. ಖಾವಂದ್, ಮಹಾಸ್ವಾಮಿ, ಸವಾರಿ ಇತ್ಯಾದಿ. ಭಕ್ಷಿಯವರನ್ನು ಸಂಬೋಧಿಸುವಾಗ ''ಬುದ್ಧಿ'' ಎನ್ನಬೇಕಾಗಿದ್ದಿತು. ''ಸಾರ್'' ಎಂದರು ಕೇಶವಮೂರ್ತಿ. ಅದೇ ಪ್ರಮಾದವಾದುದು. ಫಲಿತಾಂಶ ಶಾಲೆಗೆ ಪ್ರವೇಶ ದೊರೆಯಲಿಲ್ಲ. ಮರ್ಯಾದೆಯ ಮೊದಲ ಪಾಠವೇ ಕಲಿಯದಿದ್ದ ಹುಡುಗನಿಗೆ ಅರಮನೆಗೆ ಪ್ರವೇಶಮಾಡಲು ಅವಕಾಶವಿರುತ್ತದೆಯೇ !

ತಿರುಗಿ ಒಬ್ಬ ಗುರುವಿನ ಆಸರೆ ಹುಡುಕಲು ಪ್ರಾರಂಭ. ಅದರಲ್ಲಿ ವೀಣೆ ಸುಬ್ಬಣ್ಣನವರ ಬಳಿಯೇ ಕಲಿಯಬೇಕೆಂಬ ಆಸೆ. ಆದರೆ ಸುಬ್ಬಣ್ಣನವರ ಬಳಿ ಸೇರೋದು ಹಾಗಿರಲಿ, ಅವರನ್ನು ನೋಡುವ ಅವಕಾಶವಾದರೂ ಹೇಗೆ. ಚಿನ್ನದ ತಟ್ಟೇಲಿ ಪ್ರಪಂಚಕ್ಕೆ ಪ್ರವೇಶ ಮಾಡಿ ಚಿನ್ನದ ಸರಪಣಿ ಕಟ್ಟಿದ ತೊಟ್ಟಿಲಿನಲ್ಲಿ ತೂಗಿಸಿಕೊಂಡು ಅರಮನೆಗೆ ಸಮನಾದ ಅದ್ದೂರಿ ಜೀವನ ನಡೆಸುತ್ತಿದ್ದ ಸುಬ್ಬಣ್ಣನವರ ಹತ್ತಿರವಾದರೂ ಹೋಗೋದು ಹೇಗೆ? ಈ ಸಮಸ್ಯೆಯನ್ನು ಪರಿಹರಿಸಿ ಸಹಾಯ ಮಾಡಿದವರು ನಾಯಬ ವೆಂಕಟರಾಯರು. ಅವರ ಮನೆಗೆ ಒಮ್ಮೆ ಸುಬ್ಬಣ್ಣನವರ ಪತ್ನಿ ನಾಮಗಿರಿಯಮ್ಮನವರು ಬಂದಿದ್ದಾಗ ಅವರಿಗೆ ಕೇಶವಮೂರ್ತಿಯ ವಿಷಯವನ್ನೆಲ್ಲಾ ಹೇಳಿ ಅವರ ಮುಖಾಂತರ ಸುಬ್ಬಣ್ಣನವರ ಬಳಿ ಸೇರಿಸಲಾಯಿತು.

ಸುಬ್ಬಣ್ಣನವರ ಬಳಿ

ಅವರ ಗುರುಗಳ ಬಳಿ ಮೊದಲಬಾರಿಗೆ ವೀಣೆ ನುಡಿಸಿದ ಸನ್ನಿವೇಶವನ್ನು ಇಂದೂ ನೆನೆಯುತ್ತಾರೆ: ''ವೀಣೆ ತಂದಿದೀಯಾ. ಹಾಗಾದರೆ ನುಡಿಸು ಕೇಳೋಣ'' ಅಂದರು ಎಂದು ಪ್ರಾರಂಭಿಸಿದರು - ಕೇಶವಮೂರ್ತಿ. ''ಅನಂತರ ಕಾಂಭೋಜಿ ರಾಗದ ''ಸರಸಿಜನಾಭ'' ವರ್ಣವನ್ನು ಎರಡು ಕಾಲದಲ್ಲಿ ನುಡಿಸಿದೆ. ಸುಬ್ಬಣ್ಣನವರೂ ಮತ್ತು ಅವರೊಂದಿಗಿದ್ದ ಕೆಲವು ಸ್ನೇಹಿತರೂ ತೃಪ್ತಿ ಸೂಚಿಸಿದರು. ಸುಬ್ಬಣ್ಣನವರೂ ಶಿಷ್ಯನನ್ನಾಗಿ ತೆಗೆದುಕೊಳ್ಳುವ ಭರವಸೆಯಿತ್ತರು. ಅನಂತರ ಪಾಠಮಾಡಿಕೊಂಡು ಬರಲು ಒಂದು ಸ್ವರಜತಿಯನ್ನು ಕೊಟ್ಟರು. ಅದನ್ನು ಕಲಿತು ಮಾರನೆಯ ದಿನವೇ ಹೋಗಿ ಒಪ್ಪಿಸಿದೆ. ಅವರಿಗೆ ಬಹು ಸಂತೋಷವಾಯಿತು. ಅಂದಿನಿಂದಲೇ ನನ್ನ ಗುರುಕುಲವಾಸ ಪ್ರಾರಂಭ'' ಎಂದು ನೆನೆಸಿಕೊಂಡರು.

ಸುಬ್ಬಣ್ಣನವರ ಬಳಿಯ ಈ ಗುರುಕುಲ ವಾಸ 15 ವರುಷಗಳ ಕಾಲ ನಡೆಯಿತು. ಅವರ ಶಿಕ್ಷಣ ಕ್ರಮ ನೋಡಲು ಎಷ್ಟು ಸುಲಭವೋ ಕಲಿಯುವಾಗ ಅಷ್ಟೇ ಕಷ್ಟವಾಗುತ್ತಿದ್ದಿತೆನ್ನುತ್ತಾರೆ ಕೇಶವಮೂರ್ತಿಗಳು. ''ದಿನಾ ಬೆಳಗ್ಗೆ ಸ್ವರಜತಿ ಮತ್ತು ವರ್ಣಗಳನ್ನು ತ್ರಿಕಾಲ ಸಾಧನೆ ಮಾಡಬೇಕು. ಅವುಗಳಲ್ಲಿ ಕೆಲವನ್ನು ಐದು ಆರು ಸಾರಿಯಾದರೂ ಪುನರಾವೃತ್ತಿ ಮಾಡಬೇಕು. ಸಾಯಂಕಾಲ ಅವರು ನಮ್ಮೊಂದಿಗೇ ಕುಳಿತು ಆಗಾಗ್ಗೆ ವೀಣೆ ನುಡಿಸುತ್ತಾ ಪ್ರೌಢವಾದ ಅಂಶಗಳನ್ನು ಹೇಳಿಕೊಡುತ್ತಿದ್ದರು. ಇದಲ್ಲದೆ ಸ್ವರಸಹಿತ ಬರೆದ ಕೀರ್ತನೆಗಳನ್ನು ಕೊಟ್ಟು ನಾವೇ ಕಲಿಯುವಂತೆ ಮಾಡಿ ಅನಂತರ ನಮ್ಮ ತಪ್ಪುಗಳನ್ನು ತಿದ್ದಿ ಪರಿಷ್ಕರಿಸುತ್ತಿದ್ದರು. ಇದಕ್ಕೆ ಮಿಗಿಲಾಗಿ ಶಿಷ್ಯರಲ್ಲಿ ಅವರಿಗಿದ್ದ ವಾತ್ಸಲ್ಯ. ಟೈಗರ್ ವರದಾಚಾರ್ಯರೊಮ್ಮೆ ಸುಬ್ಬಣ್ಣನವರನ್ನು ಸಂಗೀತಗಾರರಲ್ಲಿ ರಾಜನೆಂದಿದ್ದರು. ಅವರು ಜೀವನದಲ್ಲಿ ಭೋಗಿ. ಆದರೆ ಸ್ವಾರ್ಥಿಯಲ್ಲ. ಶಿಷ್ಯರಿಗೂ ನಿರ್ವಂಚನೆಯಿಂದ ಸುಖವಾಗಿರಲು ಎಲ್ಲಾ ಸೌಕರ್ಯಗಳನ್ನೂ ಕೊಡುತ್ತಿದ್ದರು.

ಗುರುಗಳ ಹತ್ತಿರ ಹಲವಾರು ವರುಷ ವ್ಯಾಸಂಗವಾದ ನಂತರ ಕೇಶವಮೂರ್ತಿಗಳು ಉತ್ತರ ಭಾರತದಲ್ಲಿ ಸಂಚಾರ ಹೊರಟರು. ಬೊಂಬಾಯಿಯಲ್ಲಿ ಒಂದು ವಿಶೇಷ ನಡೆಯಿತು. ಕೇಶವಮೂರ್ತಿಗಳ ಕಚೇರಿಗೆ ಆಕಸ್ಮಿಕವಾಗಿ ಬಂದಿದ್ದ ಹಿಂದೂಸ್ತಾನೀ ವಿದ್ವಾಂಸರಲ್ಲಿ ಒಬ್ಬರು - ಉಸ್ತಾದ್ ಮಂಜೀಖಾನ್. ಅವರು ಅಲ್ಲಾದಿಯಾಖಾನ್ ಸಾಹೇಬರ ಪುತ್ರರು. (ಮಲ್ಲಿಕಾರ್ಜುನ ಮನ್‌ಸೂರ್ ಅವರು ಮಂಜೀಖಾನ್ ಅವರ ಶಿಷ್ಯರೆಂದು ಇಲ್ಲಿ ನೆನೆಯಬಹುದು.)

ಮುಂಬೈ ರಸಿಕರ ಮಧ್ಯೆ

ವೀಣೆಯನ್ನು ಕೇಳಿ ಸಂತೋಷಭರಿತರಾದ ಮಂಜೀಖಾನ್ ಕೇಶವಮೂರ್ತಿಗಳನ್ನು ಅತಿಯಾ ಬೇಗಂರವರ ಪರಿಚಯ ಮಾಡಿಸಿ ಅವರ ಕಲಾಸಂಸ್ಥೆಯಲ್ಲಿ ಕಚೇರಿ ನಡೆಸಿಕೊಡುವ

ಆಹ್ವಾನಿಸಿದ್ದರು. ಅಂದು ಬೊಂಬಾಯಿಯಲ್ಲಿ ಅತಿಯಾ ಬೇಗಂ ಅವರ ಆರ್ಟ್ಸ್ ಸರ್ಕಲ್, ಬಹು ಪ್ರಸಿದ್ಧ ಕಲಾಸಂಸ್ಥೆ. Music of India ಎಂಬ ಸ್ವಾರಸ್ಯವಾದ ಪುಸ್ತಕವನ್ನು ಬರೆದ ಅತಿಯಾ ಬೇಗಂ ಕ್ಯಾಂಬೆ ನವಾಬರ ಬಂಧು. ಆಕೆಯ ಕಲಾಸಂಸ್ಥೆ ಭಾರತದ ಪ್ರಸಿದ್ಧ ಕವಿ, ಕಲಾವಿದ ಮತ್ತು ಶ್ರೀಮಂತ ರಸಿಕವರ್ಗದಿಂದ ಸದಾ ತುಂಬಿರುತ್ತಿದ್ದಿತು. ಇಂತಹವರ ಮಧ್ಯೆ ಅಪರಿಚಿತ ವೈಣಿಕನೊಬ್ಬನ ವಾದನವನ್ನು ಮಾಡಿಸಿದಲ್ಲಿ ಹೇಗೋ ಏನೋ ಆಕೆಯ ಚಿಂತೆ. ಆದರೆ ಮಂಜಿಖಾನ್ ಭರವಸೆಯಿತ್ತರು. ಕಚೇರಿಯಾದ ಮೇಲೆ ಅತಿಯಾ ಬೇಗಂ ಬಹು ಸಂತೋಷಪಟ್ಟರು. ಅಭಿಪ್ರಾಯವನ್ನು ಬದಲಾಯಿಸಿಕೊಂಡರು. ಅಲ್ಲಿ ಕೇಶವಮೂರ್ತಿಗಳ ಪರಿಚಯವಾದ ಕಲಾಭಿಮಾನಿಗಳಲ್ಲಿ ಒಬ್ಬರು ಸರೋಜಿನಿ ನಾಯಿಡು.

ಕೇಶವಮೂರ್ತಿಗಳ ಜೀವನದಲ್ಲಿ ಮುಂದಿನ ಸ್ವಾರಸ್ಯ ಸನ್ನಿವೇಶವೆಂದರೆ - ಗಾಂಧೀಜಿಯವರ ಮುಂದೆ - ವೀಣಾವಾದನ. ಇದಕ್ಕೆ ಮುತುವರ್ಜಿ ಮಾಡಿದವರು - ಸರೋಜಿನಿ ನಾಯಿಡು. ಆಗ ದುಂಡು ಮೇಜಿನ ಪರಿಷತ್ತಿಗೆ ಲಂಡನ್ನಿಗೆ ಹೊರಡಲು ಗಾಂಧೀಜೀ ಬೊಂಬಾಯಿಗೆ ಬಂದಿದ್ದರು. ಅವರಿಗೆ ಬಿಡುವೇ ಇಲ್ಲ. ಅಂತಹುದರಲ್ಲಿ ಸರೋಜಿನಿಯವರ ಒತ್ತಾಯಕ್ಕೆ ಅರ್ಧಗಂಟೆ ಮಾತ್ರ ಕೇಳಲು ಒಪ್ಪಿಕೊಂಡರು.

ಬಾಪೂ ತಲ್ಲೀನರಾದರು

"ಸಂಜೆ ಸುಮಾರು ಏಳೂವರೆ ಗಂಟೆ", ಎಂದು ಪ್ರಾರಂಭಿಸಿದರು ಕೇಶವಮೂರ್ತಿ ಆ ಸನ್ನಿವೇಶವನ್ನು ನೆನೆಯುತ್ತಾ. ಗಾಂಧೀಜಿ ಬಂದು ಕುಳಿತರು. ನಾನೂ ಸ್ವಲ್ಪ ನುಡಿಸಿ ಅನಂತರ ಅವರಿಗೆ ಪ್ರಿಯವಾದ "ವೈಷ್ಣವ ಜನತೋ" ಪ್ರಾರಂಭಮಾಡಿ ಸಾವಕಾಶವಾಗಿ ರಾಗಮಾಲಿಕೆಯಲ್ಲಿ ನುಡಿಸಿದೆ. ಅರ್ಧ ಗಂಟೆಯಾಯಿತು. ಗಾಂಧೀಜಿ ಮುಂದುವರೆಯಲಿ ಎಂದು ಸನ್ನೆಮಾಡಿದರು. ನಾನೂ ಮುಂದುವರೆಸಿ ಭಕ್ತಿಗೀತೆಗಳನ್ನೇ ನುಡಿಸಲಾರಂಭಿಸಿದೆ. ಕೆಲವು ನಿಮಿಷಗಳಾದ ಮೇಲೆ ದೀಪಗಳನ್ನು ಆರಿಸಲು ಹೇಳಿದರು. ಕತ್ತಲೆಯಲ್ಲಿ ಆ ನಿಶ್ಶಬ್ದದಲ್ಲಿ ಕೇಳುತ್ತಿದ್ದರು. ನಾನೂ ನುಡಿಸಿಕೊಂಡೇ ಹೋದೆ. ಹೊತ್ತು ಹೋದುದೇ ತಿಳಿಯದು. ಇದ್ದಕ್ಕಿದ್ದ ಹಾಗೆ ದೀಪ ಹತ್ತಿತ್ತು. ಗಂಟೆ ನೋಡಿದರೆ ಹತ್ತು. ಮೀರಾಬೆನ್ ನಿಂತಿದ್ದಾರೆ. ಗಾಂಧೀಜಿಯವರ ಹತ್ತಿರ ಹೋಗಿ ಏನೋ ಹೇಳಿ ಎಬ್ಬಿಸಿ ಕರೆದುಕೊಂಡು ಹೋಗಲು ಅನುವಾದರು. ಗಾಂಧೀಜಿ ನನ್ನ ಕಡೆಗೆ ನೋಡಿ "Heavenly pleasure" ಎಂದು ಹೇಳಿದರು.

ಠಾಕೂರರ ಸಮ್ಮುಖದಲ್ಲಿ

ಇಂತಹುದೇ ಇನ್ನೊಂದು ಮರೆಯಲಾಗದ ಸನ್ನಿವೇಶವೆಂದರೆ ವಿಶ್ವಕವಿ ರವೀಂದ್ರರ ಮುಂದೆ ನಡೆದ ವೀಣಾವಾದನ ಅದು ನಡೆದುದು ಹೈದರಾಬಾದಿನಲ್ಲಿ. ರಾಜಾ ಧನರಾಜಗಿರಿಯವರ ಮನೆಯಲ್ಲಿ. ದೊಡ್ಡ ಅರಮನೆ. ಏಳೆಂಟು ಎಕರೆ ವಿಶಾಲವಾದ ತೋಟ. ಅದರಲ್ಲಿ ಒಂದೊಂದು ಮರದ ಕೆಳಗೂ ಒಂದೊಂದು ಮೇಜು ಮತ್ತು ಎರಡು ಮೂರು

ಕುರ್ಚಿಗಳನ್ನು ಹಾಕಿ ಅತಿಥಿಗಳಿಗೆ ಸತ್ಕಾರ. ಅಲ್ಲಿ ಒಂದು ಮರದ ಕೆಳಗೆ ಕೇಶವಮೂರ್ತಿಗಳ ವೀಣಾವಾದನಕ್ಕೆ ಏರ್ಪಾಟಾಗಿದ್ದಿತು. ಸಾಯಂಕಾಲ ಐದಕ್ಕೆ ಸರಿಯಾಗಿ ರವೀಂದ್ರರು ಬಂದರು. ಧನರಾಜಗಿರಿಯವರು ಅತಿಥಿಗಳನ್ನು ಪರಿಚಯ ಮಾಡಿಸುತ್ತಾ ಈ ಮರದ ಬಳಿಗೆ ಕರೆದುಕೊಂಡು ಬಂದರು. ಕೇಶವಮೂರ್ತಿಗಳೇ ಹೇಳಿದಂತೆ - "ನಮ್ಮನ್ನು ನೋಡಿದೊಡನೇ 'ಇದೇನು ಸಂಗೀತ ಕೇಳುವುದಕ್ಕೆ ಈ ಜಾಗವೇ' - ಎಂದು ಹೇಳಿ ನೇರವಾಗಿ ಬಂಗಲೆಯ ಕಡೆಗೆ ಹೋದರು ರವೀಂದ್ರರು. ಅವರ ಹಿಂದೆ ಧನರಾಜಗಿರಿ ಮತ್ತು ಇತರ ಗಣ್ಯ ಅತಿಥಿಗಳೂ ದೌಡು. ನಾವೂ ವಾದ್ಯಗಳನ್ನು ಎತ್ತಿಕೊಂಡು ಹೊರಟೆವು. ಬಂಗಲೆಯ ಹಜಾರವನ್ನು ಪ್ರವೇಶಮಾಡಿ ಒಂದು ಕುರ್ಚಿಯ ಮೇಲೆ ಕುಳಿತು 'ಈಗ ಪ್ರಾರಂಭವಾಗಲಿ, ಆದರೆ ನಾನು ಅರ್ಧಗಂಟೆ ಮಾತ್ರ ಇರಲು ಸಾಧ್ಯ' ಎಂದರು. ನಾನೂ ಪ್ರಾರಂಭಮಾಡಿದೆ. ಮೊದಲು ವಿರಿಬೋಣಿ ವರ್ಣ, ಅನಂತರ ಪೂರ್ವಿಕಲ್ಯಾಣಿ, ಕಾಂಭೋಜಿ, ಬೆಹಾಗ್, ಕಾಪಿ ಮುಂತಾದ ರಾಗಗಳು. ಅರ್ಧ ಗಂಟೆಯಾದ ನಂತರ ರವೀಂದ್ರರು ಎದ್ದರು. ಆದರೆ ಹೊರಡಲಿಲ್ಲ. ಮುಂದೆ ಬಂದು ಕೆಳಗೆ ಕುಳಿತರು. ರಾತ್ರಿ 8-30 ಗಂಟೆಯವರೆಗೂ ನನ್ನ ವೀಣಾವಾದನವನ್ನು ಆಸಕ್ತಿಯಿಂದ ಕೇಳಿದರು. ಹೊರಡುವಾಗ - 'ದಕ್ಷಿಣಾದಿ ಸಂಗೀತವು ಇಷ್ಟು ಆಕರ್ಷಣೀಯ ವಾಗಿರುವುದೆಂಬುದನ್ನು ನನ್ನ ಜೀವಮಾನದಲ್ಲಿ ಮೊದಲ ಸಲ ಕಂಡ ಹಾಗಾಯಿತು' ಎಂದು ಹೇಳಿ ನನ್ನನ್ನು ತಬ್ಬಿಕೊಂಡರು."

ಬಿರಾರ್ ರಾಜಕುಮಾರರ ಭಾರಿ ಚಿನ್ನದ ಪದಕ

ಹೈದರಾಬಾದಿನಲ್ಲಿಯೇ ಇನ್ನೊಂದು ಸ್ವಾರಸ್ಯ ಘಟನೆ ನಡೆಯಿತು. ರೇಡಿಯೋ ಕೇಂದ್ರದಲ್ಲಿ ಕಚೇರಿ ಮಾಡಲು ಹೋಗಿದ್ದಾಗ ಅಲ್ಲಿಗೆ ನೈಜಾಮರ ಮಗ (ಬಿರಾರ್ ರಾಜಕುಮಾರ) ಯುವರಾಜ ಅಜಮ್ ಝೂ ಬಹದ್ದೂರ್ (ಈಗಿನ ತರುಣ ನೈಜಾಮರ ತಂದೆ) ಬಂದಿದ್ದರು. ಕೇಶವಮೂರ್ತಿಗಳನ್ನು ಅಧಿಕಾರಿಗಳು ಅವರಿಗೆ ಪರಿಚಯ ಮಾಡಿಸಿದರು. ರಾಜಕುಮಾರರು ತಮ್ಮ ಅರಮನೆಯಲ್ಲಿ ಕಚೇರಿ ಮಾಡಲು ಆಹ್ವಾನಿಸಿದರು. ಅಲ್ಲಿ ಅಧಿಕವಾಗಿದ್ದ ಮುಸಲ್ಮಾನೀ ಶ್ರೋತೃಗಳ ಅಭಿರುಚಿಯನ್ನನುಸರಿಸಿ ಹಿಂದೋಳ, ಬೆಹಾಗ್ ಮತ್ತು ಜುಂಜೂಟಿ ರಾಗಗಳನ್ನೇ ಆರಿಸಿದೆ. ಜಂಜೂಟಿಯಂತೂ ಅವರಿಗೆ ಬಹು ಆನಂದ ವನ್ನುಂಟುಮಾಡಿ ಪದೇ ಪದೇ ನುಡಿಸಹೇಳಿದರು. ಕಚೇರಿ ಮುಗಿದ ನಂತರ ರಾಜಕುಮಾರ ರೆದ್ದು "ಬಹು ಆನಂದವಾಯಿತು. ಅದರ ಗುರುತಾಗಿ ಇದನ್ನು ಕೊಡಲು ಇಚ್ಛಿಸಿದ್ದೇವೆ" ಎಂದು ಹೇಳಿ ಅವರ ಎದೆಯ ಮೇಲೆ ಧರಿಸಿದ್ದ ಅಂಗೈ ಅಗಲದ ಚಿನ್ನದ ನಕ್ಷತ್ರ ಪದಕವನ್ನು ತೆಗೆದುಕೊಟ್ಟರು. ಅದು ಈಗಲೂ ಕೇಶವಮೂರ್ತಿಗಳ ಬಳಿಯಿದೆ.

ಕೇಶವಮೂರ್ತಿಗಳಿಗೆ ಈಗ 68 ವರುಷ ವಯಸ್ಸು. ನೋಡಿದಾಗ ಅಷ್ಟು ಹೇಳಲಾಗು ವುದಿಲ್ಲ. ಇದರಲ್ಲಿ ಅರ್ಧ ಶತಮಾನಕ್ಕೂ ಹೆಚ್ಚಾಗಿ ವೀಣೆಗೂ ಅವರಿಗೂ ನಿಕಟ ಸಂಪರ್ಕವಿದೆ.

ಪಿಟೀಲು, ಗೋಟುವಾದ್ಯ ಮತ್ತು ಬಾಲಕೋಕಿಲ ವಾದ್ಯಗಳನ್ನು ಅವರು ನುಡಿಸಬಲ್ಲರು. ಆದರೆ ಅವರ ಜೀವವೆಲ್ಲಾ ವೀಣೆಯಲ್ಲಿ. ಆ ವಾದ್ಯದ ವೈಖರಿಯನ್ನು ಉತ್ತರ ಭಾರತದ ಅನೇಕ ಸಾಂಸ್ಕೃತಿಕ ಕೇಂದ್ರಗಳಲ್ಲಿ ಪ್ರದರ್ಶಿಸಿ ಬಂದಿದ್ದಾರೆ. ಅದರ ಫಲವಾದ ಪಾರಿತೋಷಕ ಮತ್ತು ಪ್ರಶಸ್ತಿಗಳನ್ನು ತಂದಿದ್ದಾರೆ. ಅವರಿಗೆ ಬಂದಿರುವ ಪ್ರಶಸ್ತಿಗಳಲ್ಲಿ ಮುಖ್ಯವಾದುವು ಮೈಸೂರು ಅರಮನೆಯಿಂದ ಬಂದಿರುವ "ವೈಣಿಕ ಪ್ರವೀಣ" ಮತ್ತು ರಾಜ್ಯ ಅಕಾಡೆಮಿಯ ಪ್ರಶಸ್ತಿ.

ಸಂಪ್ರದಾಯ ರಕ್ಷಣೆ

ಕೇಶವಮೂರ್ತಿಗಳು ಆರ್ಷೇಯವಾದ ಸಂಗೀತ ಸಂಪ್ರದಾಯದಲ್ಲಿ ಬೆಳೆದುಬಂದರೂ ಹೊಸ ತತ್ತ್ವ ಮತ್ತು ಅಭಿಪ್ರಾಯಗಳಿಗೆ ವಿಮುಖರಾಗಿಲ್ಲ. ಕರ್ನಾಟಕ ಸಂಗೀತದಷ್ಟೇ, ಹಿಂದೂಸ್ತಾನೀ ಹಾಗೂ ಪಾಶ್ಚಿಮಾತ್ಯ ಸಂಗೀತಗಳಲ್ಲೂ ಅಭಿಮಾನಿಗಳಾಗಿದ್ದಾರೆ. ಪಾಶ್ಚಿಮಾತ್ಯ ಸಂಗೀತದಲ್ಲಿ ಲಂಡನ್ನಿನ ಟ್ರನಿಟಿ ಕಾಲೇಜಿನ ಪದವೀಧರರಾಗಿದ್ದಾರೆ. ಇವರ ವಾದನದಲ್ಲಿ ಅನುಭವವಾಗುವ ಅನೇಕ ವಿಶೇಷ ಧ್ವನಿಮೇಳನಗಳಿಗೆ ಈ ಪದ್ಧತಿಯ ಅನೇಕ ಅಂಶಗಳೂ ಪ್ರಚೋದಕವಾಗಿರಬಹುದೇನೋ! ಕೇಶವಮೂರ್ತಿಗಳ ವಾದನವು ಹಾಡುಗಾರಿಕೆಯ ಶೈಲಿಯನ್ನು ಅನುಸರಿಸಿದೆಯೆಂದು ಹೇಳಿದರೂ ಅದರಲ್ಲಿ ವಾದ್ಯದ ವೈಶಿಷ್ಟ್ಯ ಮತ್ತು ಆದಿಪತ್ಯದ ಅನುಭವವೂ ಆಗುವುದು. ಅವರಿಗೆ ವೀಣೆಯದೇ ಚಿರಂತನವಾದ ಚಿಂತನ. ಹಾಗೆಯೇ ಇನ್ನೊಂದು ಚಿಂತೆಯೆಂದರೆ ಮೈಸೂರು ದೇಶದಲ್ಲಿ ಬೆಳೆದುಬಂದ ಈ ದಿವ್ಯ ಸಂಪ್ರದಾಯವನ್ನು ಮುಂದಿನ ಪೀಳಿಗೆಯವರು ಸಾರ್ಥಕವಾಗಿ ಬೆಳೆಸಿಕೊಂಡು ಹೋಗಬೇಕು. ★ ★ ★ ★ ★

ಸುಧಾ, 1971

16. ಹಿರಿಯ ವೇಣುವಾದನ ವಿಶಾರದ ವಿದ್ವಾನ್ ಸುಬ್ಬರಾಯರು

ನಮ್ಮ ಸಂಗೀತ ವಾದ್ಯಗಳಲ್ಲಿ ಬಹು ಸರಳವಾದುದು ಮತ್ತು ಬೆಲೆಯಲ್ಲಿಯೂ ಅಷ್ಟೇ ಸುಲಭವಾದುದು – ಕೊಳಲು. ಎಂಟೊಂಬತ್ತು ತೂತು ಕೊರೆದ ಬಿದಿರಿನ ಒಂದು ಕೊಳವೆ ಅದು. ಆದರೂ ಅದರಲ್ಲಿ ಅದೆಂತಹ ಮೋಹಗೊಳಿಸುವ ಶಕ್ತಿ. ಸಾ, ಪಾ, ಸಾ ಎಂದರೆ ಏನೆಂದು ತಿಳಿಯದ ದನಕಾಯುವ ಗೊಲ್ಲನಿಂದ ಹಿಡಿದು ಗಾಢವಾದ ಜ್ಞಾನದಿಂದ ಚಿತ್ರ ವಿಚಿತ್ರ ಸ್ವರ ಲಯ ಶಿಲ್ಪಗಳನ್ನು ರಚಿಸುವ ಸಂಗೀತ ವಿದ್ವಾಂಸರವರೆಗೂ ಈ ವಾದ್ಯದ ಮೋಹಕ ಶಕ್ತಿ ಆವರಿಸಿದೆ. ಇದು ಸಂಗೀತಗಾರರ ಮಟ್ಟಿಗೇ ಅಲ್ಲ, ಕವಿಗಳೂ ಕೊಳಲಿನ ಗಾನವನ್ನು ವಿಧವಿಧವಾಗಿ ಬಣ್ಣಿಸಿದ್ದಾರೆ.

"...ನಾಳಿಕೇರ ರಸಧಾರಾವೃಷ್ಟಿ ಜೇನೆಯ್ಯ ಸೋನೆ ಸುಧಾಸಾರಪಿದೆತ್ತಣಿಂ ಪಸರಿಸಿತ್ತೆಂಬಂತು ದೈತ್ಯಾರಿ ಬಾಜಿಸಿದಂ ಬಣ್ಣಿಸೆ ವಾಸಮುಂ ಮಧುರ ನಾದಾವಾಸವಂ ವಾಸವಂ"

ಎಂದು ಕೃಷ್ಣನ ಕೊಳಲಿನ ನಾದಜಾಲವನ್ನು ವರ್ಣಿಸಿದ್ದಾನೆ ರುದ್ರಭಟ್ಟ ಜಗನ್ನಾಥ ವಿಜಯದಲ್ಲಿ. ಒಳ್ಳೆಯ ಎಳನೀರಿನ (ಬಹುಶಃ ಗಂಗಾಪಾನಿ ಇರಬಹುದು) ಮಳೆ ಅಥವಾ ಜೇನುತುಪ್ಪದ ಸೋನೆ ಅಥವಾ ಅಮೃತದ ಕಂಪೋ ಅಥವಾ ಮಂಜೋ ಹರಡಿಕೊಂಡಂತೆ ಅನುಭವವಾಗುತ್ತಿತ್ತಂತೆ ಅವನಿಗೆ ಕೃಷ್ಣನ ಕೊಳಲಿನ ನಾದವನ್ನು ಕೇಳಿದಾಗ.

ಈ ವಾದ್ಯದ ಗುಣವನ್ನು ಮಾತನಾಡುವಾಗ ಸುಬ್ಬರಾಯರಿಗೆ ಅದೇ ಬಗೆಯ ಸ್ಫೂರ್ತಿ ಕಾಣಬರುತ್ತದೆ. ಅವರು ಅದನ್ನು ಬೇರೆ ದೃಷ್ಟಿಯಿಂದ, ಅಂದರೆ ಸಂಗೀತದ, ಅದರ ನಾದ ಲಯಗಳ ವಿಧವಿಧ ಆಕಾರಗಳನ್ನು ಸುಮಧುರವಾಗಿ ರೂಪಿಸುವ ದೃಷ್ಟಿಯಿಂದ ಮಾತನಾಡಲಾರಂಭಿಸಿದರೆ ಅವರ ಗಾಢವಾದ ಜ್ಞಾನದ ಜೊತೆಗೆ ಅವರ ದೀರ್ಘಕಾಲದ ಅನುಭವದ ಅರಿವೂ ಉಂಟಾಗುವುದು. ಆ ಮಾತುಗಳು ಕೇವಲ ಕೊಳಲು ಅಥವಾ ಅದರ ಪ್ರಭೇದಗಳಿಗೆ ಮಿತಿಗೊಳ್ಳುವುದಿಲ್ಲ. ಆ ಪ್ರಕಾರಕ್ಕೆ ಸೇರುವ ನಾಗಸ್ವರ, ಮುಖವೀಣೆ ಮುಂತಾದ ವಾದ್ಯಗಳ ಗುಣವಿಶೇಷಗಳನ್ನು ಕೊಳಲಿನ ಹಿನ್ನೆಲೆಯಿಂದ ವಿಮರ್ಶಿಸುತ್ತಾರೆ. ಇದಕ್ಕೆ ಕಾರಣ ಇಲ್ಲದಿಲ್ಲ. ಸುಬ್ಬರಾಯರ ಮತ್ತು ಕೊಳಲಿನ ಸಂಬಂಧ ಹತ್ತಿರ ಹತ್ತಿರ 70 ವರುಷಗಳಿಂದ ಕೂಡಿಬಂದುದು. ಅದಕ್ಕೆ ಸಂಬಂಧಿಸಿದ ಪರಿಶೋಧನೆ ಮತ್ತು ಪ್ರಯೋಗಗಳನ್ನು ಸುಮಾರು 50 ವರುಷಗಳಿಂದ ನಡೆಸುತ್ತಾ ಬಂದಿದ್ದಾರೆ. ಆದುದರಿಂದ ಆ ವಾದ್ಯದ ಬಗೆಗೆ ಮಾತನಾಡುವಾಗ ಅವರಿಗೆ ಅಧಿಕಾರದಷ್ಟೇ ಅಭಿಮಾನದ ವಾಣಿ ಕೂಡಿಬರುವುದು ಸಹಜವೇ.

ಸುಬ್ಬರಾಯರು ಮೈಸೂರು ರಾಜ್ಯದ ಹಿರಿಯ ಕೊಳಲು ವಿದ್ವಾಂಸರು. ಮೈಸೂರು ಆಸ್ಥಾನದಿಂದ ಸನ್ಮಾನಿತರಾದವರು. ರಾಜ್ಯದ ಅಕಾಡೆಮಿ ಪ್ರಶಸ್ತಿಯನ್ನು ಪಡೆದವರು.

ಕೊಳಲಿಗೂ ಅವರಿಗೂ ಹೇಗೆ ಸಂಬಂಧವು ಕೂಡಿಬಂದಿತು ಎಂದು ಕೇಳಿದಲ್ಲಿ – "ಸಾಧಾರಣವಾಗಿ ಹಳ್ಳಿಗಾಡಿನಲ್ಲಿರುವ ಎಲ್ಲರಿಗೂ ಆದ ಹಾಗೆಯೇ, ದನ ಕಾಯುವ ಗೊಲ್ಲನೊಬ್ಬ ಹೊತ್ತು ಕಳೆಯಲು ತಾನೇ ಸಿದ್ಧಮಾಡಿಟ್ಟ ಬಿದಿರು ಕೊಳವೆಯೊಂದನ್ನು ಹರುಷದಿಂದ ಊದುತ್ತಿದ್ದಾಗ" ಎನ್ನುತ್ತಾರೆ. 70 ವರುಷದ ಹಿಂದೆ ಅರಕಲಗೂಡಿನಲ್ಲಿ ಅವರ ಮನೆ ದನಕಾಯುತ್ತಿದ್ದ ಸುಬ್ಬೇಗೌಡ ತಾನೇ ತಲ್ಲೀನನಾಗಿ ನುಡಿಸುತ್ತಿದ್ದ ಕೊಳಲಿನ ಇಂಚರ ಸುಬ್ಬರಾಯರಿಗೆ ಪ್ರಚೋದನೆಯುಂಟುಮಾಡಿತು. ಸುಬ್ಬೇಗೌಡನಿಗೆ ಪಾಪ! ಸಾ, ಪಾ ಎಂದರೇನೋ ಗೊತ್ತಿಲ್ಲ. ಮೂರು ನಾಲ್ಕು ತೂತು ಮಾಡಿದ ಬಿದಿರಿನ ಕೊಳವೆಯನ್ನು ಊದಿ ಅದರಿಂದ ಸುಖವಾಗಿ ಹೊರಟ ನಾದವನ್ನು ಅನುಭವಿಸಿ ಸಂತೋಷಪಡುತ್ತಿದ್ದ. ನನಗೂ ಹಾಗೇ ಮಾಡಬೇಕೆಂದು ಆಸೆ. "ನಾನೂ ಒಂದು ಕೊಳಲು ಮಾಡಿ ಊದಲಾರಂಭಿಸಿದೆ. ಕೊಳಲು ಎಷ್ಟು ಉದ್ದವಿರಬೇಕು, ಅದಕ್ಕೆ ಎಷ್ಟು ರಂಧ್ರವಿರಬೇಕು ಎಂಬುದು ನಮ್ಮಿಬ್ಬರಿಗೂ

ತಿಳಿಯದು. ಆದರೆ ನನಗೆ ಆಗಲೇ ಸಂಗೀತ ಪರಿಚಯ ಇದ್ದುದರಿಂದ ಸುಸ್ವರಬದ್ಧವಾಗಿ ನುಡಿಸಲು ಪ್ರಾರಂಭ ಮಾಡಿದೆ'' ಎನ್ನುತ್ತಾರೆ.

ಸಂಗೀತಮಯ ವಾತಾವರಣ

ಈ ಸ್ವರಜ್ಞಾನಕ್ಕೆ ಒಳ್ಳೆಯ ತಳಹದಿಯಾಗಲು ಸಹಾಯಕವಾದುದು ಮನೆ ಮತ್ತು ಅದರ ವಾತಾವರಣ. ಚಿಕ್ಕಂದಿನಿಂದಲೂ ಒಂದಲ್ಲ ಒಂದು ರೂಪದಲ್ಲಿ ಸಂಗೀತವು ಕಿವಿಯ ಮೇಲೆ ಬೀಳುತ್ತಲೇ ಇದ್ದಿತು. ತಂದೆ ಕೃಷ್ಣಪ್ಪನವರು ಸಂಗೀತಾಭಿಮಾನಿಗಳೇ ಅಲ್ಲದೆ ಅಭಿರುಚಿಯುಳ್ಳವರು. ತಾಯಿಯವರೂ ಅಷ್ಟೇ. ಬೆಳಗಿನಿಂದ ರಾತ್ರಿಯವರೆಗೂ ಪೂಜೆ, ಪುನಸ್ಕಾರ, ಹೊತ್ತು ಹೋಗುವುದಕ್ಕೆ ಹೀಗೆ ವಿಧವಿಧ ಕಾರಣಗಳಿಂದ ಸಂಗೀತ ಕಿವಿಯ ಮೇಲೆ ಬೀಳುತ್ತಲೇ ಇದ್ದಿತು. ಇದರ ಜತೆಗೆ ಶನಿವಾರ ಭಜನೆ. ''ಅದರಲ್ಲಿ ನಮ್ಮ ಸೋದರಮಾವ ಕೇಶವಶಾಸ್ತ್ರಿಗಳು ಜಯದೇವನ 24 ಅಷ್ಟಪದಿಗಳನ್ನೂ ಕಡ್ಡಾಯವಾಗಿ ಹಾಡುತ್ತಿದ್ದರು'' ಎಂದು ನೆನೆಯುತ್ತಾರೆ ಸುಬ್ಬರಾಯರು.

ಚಿಕ್ಕಂದಿನಿಂದಲೂ ಚೆನ್ನಾಗಿ ಹಾಡಬಲ್ಲವರಾಗಿ, ಹಾಡಿದ್ದನ್ನು ಸರಾಗವಾಗಿ ಕೊಳಲಿನಲ್ಲಿ ನುಡಿಸುವಷ್ಟು ಶಕ್ತಿಯಿದ್ದರೂ ಕ್ರಮಬದ್ಧವಾಗಿ ಸಂಗೀತವನ್ನು ಕಲಿಯಬೇಕೆಂಬ ಆಕಾಂಕ್ಷೆ ಸುಬ್ಬರಾಯರಿಗೆ ತಪ್ಪಲಿಲ್ಲ. ಇದಕ್ಕಾಗಿ ಮನೆಯಲ್ಲಿ ಒತ್ತಾಯಮಾಡಿ ಅಲ್ಲಿ ಪ್ರೋತ್ಸಾಹ ದೊರೆಯುವ ಸೂಚನೆ ಕಂಡುಬಾರದಿರಲು ಸುಬ್ಬರಾಯರು ಜಗಳವಾಡಿಕೊಂಡು ಮೈಸೂರಿಗೆ ಬಂದು ಸಂಸ್ಕೃತ ಪಾಠಶಾಲೆಗೆ ಸೇರಿದರು. ಅಲ್ಲಿ ಸಾಹಿತ್ಯ ಮತ್ತು ನಾಟಕದ ವ್ಯಾಸಂಗ. ಬಿಡುವಿನ ವೇಳೆಯಲ್ಲಿ ಸರಿಯಾದ ಒಬ್ಬ ಗುರುವನ್ನು ಹುಡುಕಲಾರಂಭ.

ಪ್ರಾರಂಭದಲ್ಲಿ ಸ್ವಲ್ಪ ಕಾಲ ಸುಂದರ ಶಾಸ್ತ್ರಿಗಳಲ್ಲಿ ವ್ಯಾಸಂಗ. ಅನಂತರ ಮೈಸೂರಿನಲ್ಲಿಯೇ ಮೊಕ್ಕಾಂ ಮಾಡಿದ್ದ ತಿರುಚಿನಾಪಳ್ಳಿಯ ಕಡೆಯ ಗಣಪತಿ ಅಯ್ಯರ್ ಎಂಬವರ ಬಳಿ ಸೇರಿದರು. ಕಾರಣ, ಅಯ್ಯರ್ ಚೆನ್ನಾಗಿ ಕೊಳಲು ನುಡಿಸುತ್ತಿದ್ದರು. ತಾವೂ ಆ ವಾದ್ಯದ ರಹಸ್ಯಗಳನ್ನೆಲ್ಲಾ ಅಯ್ಯರ್‌ರವರ ಬಳಿ ಗ್ರಹಿಸಿ ತಮ್ಮ ಕೊಳಲುವಾದನವನ್ನು ಇನ್ನೂ ಪರಿಷ್ಕರಿಸಿಕೊಳ್ಳಬೇಕೆಂದು ಸುಬ್ಬರಾಯರ ಆಸೆ.

ಬ್ಲಾಟಿಂಗ್ ಪೇಪರ್

ಹಳೆಯ ಕಾಲದ ಗುರುಶಿಷ್ಯ ಸಂಬಂಧ. ಸಂಗೀತಕ್ಕಿಂತ ಗುರುಸೇವೆಯೇ ಶಿಷ್ಯನ ಪಾಲಿಗೆ ಹೆಚ್ಚು ಲಭ್ಯ. ''ಒಂದು ದಿನ ಅಯ್ಯರ್ ಅವರು ಕೇದಾರ ಗೌಳದ ಒಂದು ಕೀರ್ತನೆಯನ್ನು ನುಡಿಸುತ್ತಿದ್ದರು. ನಾನೂ ಹಾಗೆಯೇ ಕೇಳುತ್ತಿದ್ದೆ. ಚೆನ್ನಾಗಿ ನುಡಿಸಿದರು. ಅದು ನನ್ನ ಕಿವಿಯಲ್ಲಿಯೇ ಪ್ರತಿಧ್ವನಿಯಾಗುತ್ತಿದ್ದಿತು. ಸಾಯಂಕಾಲ ಅವರೆಲ್ಲೋ ಹೊರಗೆ ಹೋಗಿದ್ದರು. ನನ್ನ ಪಾಡಿಗೆ ನಾನು ಕೊಳಲಿನಲ್ಲಿ ಅದೇ ಕೇದಾರ ಗೌಳದ ಕೃತಿಯನ್ನು ನುಡಿಸುತ್ತಿದ್ದೆ. ಹೊರಗೆ ಹೋಗಿದ್ದ ಅಯ್ಯರ್ ಮನೆಗೆ ಬಂದರು. ಹೊರಗೆ ಸ್ವಲ್ಪ ಹೊತ್ತು ನಿಂತು ಕೇಳುತ್ತಿದ್ದರೆಂದು

ಕಾಣುತ್ತದೆ. ಒಳಗೆ ಬಂದರು. ತಕ್ಷಣ ನಾನು ಕೊಳಲು ಊದುವುದನ್ನು ನಿಲ್ಲಿಸಿದೆ. ನನ್ನನ್ನು ಸ್ವಲ್ಪ ಹೊತ್ತು ದಿಟ್ಟಿಸಿ ನೋಡಿದರು. ಅನಂತರ ಒಳಗೆ ಹೋದರು. ಅವರ ಹೆಂಡತಿಯೊಂದಿಗೆ ''ಬ್ಲಾಟಿಂಗ್ ಪೇಪರ್'' ಎಂದರು. ನನಗೆ ಅದೇನೆಂಬುದು ಅರ್ಥವಾಗಲಿಲ್ಲ. ಆದರೆ ಅಂದಿನಿಂದ ಹೇಳುತ್ತಿದ್ದ ಚೂರುಪಾರು ಪಾಠವೂ ಕಡಿಮೆಯಾಯಿತು. ಅವರು ಅಭ್ಯಾಸ ಮಾಡುವಾಗಲೆಲ್ಲಾ ಏನಾದರೂ ನೆವಮಾಡಿ, ನನ್ನನ್ನು ಎಲ್ಲಾದರೂ ಹೊರಗೆ ಕಳುಹಿಸುತ್ತಿದ್ದರು. ಎರಡು ಮೂರು ತಿಂಗಳಾದ ನಂತರ ಅವರು ಊರಿಗೆ ಹೋದರು. ಅಲ್ಲಿಗೆ ಅವರ ಬಳಿ ಕೊಳಲ ಪಾಠವೂ ಮುಕ್ತಾಯವಾಯಿತು'' ಎಂದು ಸುಬ್ಬರಾಯರು ತಮ್ಮ ಮೊದಲ ಗುರುಕುಲವಾಸದ ಅನುಭವವನ್ನು ಹೇಳಿದರು.

ಸುಬ್ಬರಾಯರಿಗೆ ಕ್ರಮಬದ್ಧವಾಗಿ ಪಾಠ ಪ್ರಾರಂಭವಾದುದು ರುದ್ರಪಟ್ಟದ ಕೃಷ್ಣ ಶಾಸ್ತ್ರಿಗಳ (ಆರ್. ಕೆ. ಶ್ರೀಕಂಠನ್‌ರವರ ತಂದೆ) ಬಳಿಯಲ್ಲಿ. ''ಎಲ್ಲೋ ಓಡಿಹೋಗುತ್ತಿದ್ದ ನನ್ನ ಹುಚ್ಚು ಕಲ್ಪನೆಗಳಿಗೆ ತಡೆಹಾಕಿ ತಿದ್ದಿ ಸರಿಯಾದ ಆಕಾರ ಕೊಟ್ಟಂತಹವರು ಕೃಷ್ಣಶಾಸ್ತ್ರಿಗಳು'' ಎಂದು ನೆನೆಯುತ್ತಾರೆ ಸುಬ್ಬರಾಯರು. ''ಯಾವ ವಾದ್ಯದಲ್ಲಿ ಪ್ರಾವೀಣ್ಯತೆಯುಂಟಾಗಬೇಕಾದರೂ ಮೊದಲು ಬಾಯಿ ಹಾಡುಗಾರಿಕೆ ಅತ್ಯಗತ್ಯ. ಚೆನ್ನಾಗಿ ಹಾಡಿ ಮನದಟ್ಟು ಮಾಡಿಕೊಂಡ ಅಂಶಗಳನ್ನು ವಾದ್ಯದಲ್ಲಿ ಖಚಿತವಾಗಿ ನುಡಿಸಲು ಸುಲಭ. ಇದು ಶಾಸ್ತ್ರಿಗಳ ಉಪದೇಶ. ಅದು ಅನುಭವದ ಮೇಲೆ ನನಗೆ ಅರ್ಥವಾಗಲಾರಂಭಿಸಿತು'' ಎನ್ನುತ್ತಾರೆ.

ಕೃಷ್ಣಶಾಸ್ತ್ರಿಗಳ ಪಾಠ ಸುಬ್ಬರಾಯರಿಗೆ ಒಳ್ಳೆಯ ತಳಹದಿಯಾಯಿತು. ಅನತಿ ಕಾಲದಲ್ಲಿಯೇ ಖಚಿತವಾಗಿ ಪಲ್ಲವಿ ನಿರೂಪಿಸುವ ಮಟ್ಟಕ್ಕೂ ಬಂದರು. ಅಲ್ಲಲ್ಲಿ ಕಚೇರಿಗಳನ್ನೂ ಮಾಡುತ್ತಿದ್ದರು. ಒಮ್ಮೆ ಮೈಸೂರಿನಲ್ಲಿ ತಮ್ಮ ಊರಿನವರೊಬ್ಬರು – ಶ್ರೀಕಂಠಯ್ಯನವರು ಸುಬ್ಬರಾಯರ ಕೊಳಲುವಾದನವನ್ನು ಕೇಳಿ ಪ್ರಶಂಸಿಸಿದಾಗ, ತಮಗೆ ಸಂಗೀತವನ್ನು ಇನ್ನೂ ವೃದ್ಧಿಗೊಳಿಸಿಕೊಳ್ಳಬೇಕೆಂಬ ಆಸೆಯಿರುವುದಾಗಿ ಸುಬ್ಬರಾಯರು ಹೇಳಿದರು. ''ಹಾಗಾದರೆ ಯಾರ ಹತ್ತಿರ ಕಲಿಯಬೇಕೆಂದು ನಿನ್ನ ಆಸೆ'' ಎಂದು ಕೇಳಿದರು ಶ್ರೀಕಂಠಯ್ಯ.

ಬಿಡಾರಂ ಅವರ ಬಳಿಗೆ

''ಬಿಡಾರಂ ಕೃಷ್ಣಪ್ಪನವರ ಹತ್ತಿರ'' ಎಂದರು ಸುಬ್ಬರಾಯರು. ''ಹಾಗಾದರೆ ನಾನು ಕರೆದುಕೊಂಡು ಹೋಗಿ ಸೇರಿಸ್ತೇನೆ'' ಎಂದರು ಶ್ರೀಕಂಠಯ್ಯ. ಇಲ್ಲಿ ಸ್ವಾರಸ್ಯವೆಂದರೆ ಇಬ್ಬರಿಗೂ ಕೃಷ್ಣಪ್ಪನವರ ಪರಿಚಯವಿಲ್ಲ. ಏನೋ ಒಂದು ಧೈರ್ಯದ ಮೇಲೆ ಇಬ್ಬರೂ ಮೈಸೂರು ಶಿವರಾಂ ಪೇಟೆಯಲ್ಲಿದ್ದ ಕೃಷ್ಣಪ್ಪನವರ ಮನೆಗೆ ಹೋದರು. ಮನೆಯಲ್ಲಿ ಕೃಷ್ಣಪ್ಪನವರಿರಲಿಲ್ಲ. ಆದರೆ ಚೌಡಯ್ಯನವರಿದ್ದರು. ಶ್ರೀಕಂಠಯ್ಯನವರಿಗೆ ಸ್ವಲ್ಪ ಅವರ ಪರಿಚಯವಿದ್ದಿತು.

ಯಾರು ಏನು ಎಂದು ವಿಚಾರಿಸಿದ ಮೇಲೆ ಚೌಡಯ್ಯನವರು ಕೊಳಲಿನಲ್ಲಿ ಏನು ನುಡಿಸುತ್ತಾರೆ ಎಂದು ಕೇಳಿದರು. ಕಚೇರಿ ಕೂಡ ಮಾಡುತ್ತಿದ್ದಾರೆ ಎಂದು ಕೇಳಿದ ಕೂಡಲೇ ಸಂತೋಷದಿಂದ – "ಹಾಗೆಯೇ! ನಮ್ಮಲ್ಲಿ ಕಚೇರಿ ಮಾಡುವಷ್ಟು ಸಾಮರ್ಥ್ಯವುಳ್ಳ ಕೊಳಲಿನವರಿರುವುದನ್ನು ಕೇಳಿ ಸಂತೋಷವಾಗುತ್ತದೆ. ಗುರುಗಳಿಗೂ ಹೇಳುತ್ತೇನೆ. ಸಂತೇಪೇಟೆ ರಾಮಮಂದಿರದಲ್ಲಿ ಮೊದಲು ನಿಮ್ಮ ಕಚೇರಿ ಆಗಲಿ" ಎಂದು ಹೇಳಿದರು ಚೌಡಯ್ಯ.

"ತಂಪು ಹೊತ್ತಿನಲ್ಲಿ ನೆನೆಯಬೇಕು ಸ್ವಾಮಿ ಚೌಡಯ್ಯನ್ನ. ಸ್ವಲ್ಪ ಒರಟು ಮಾತಾಡಿರ ಬಹುದು. ಆದರೆ ಗುಣಗ್ರಾಹಿ, ಉಪಕಾರಿ" ಎನ್ನುತ್ತಾರೆ ಸುಬ್ಬರಾಯರು.

"ಸಂತೆಪೇಟೆಯ ರಾಮಮಂದಿರದಲ್ಲಿ ನಡೆದ ನನ್ನ ಆ ಮೊದಲನೆಯ ಕಚೇರಿ ನನ್ನ ಜೀವಮಾನದಲ್ಲಿ ಮರೆಯಲಾಗದ ಅನುಭವ" ಎಂದು ಪ್ರಾರಂಭಿಸಿದರು ಸುಬ್ಬರಾಯರು. "ಚೌಡಯ್ಯನವರೇ ಪಿಟೀಲು, ಪಕ್ಕವಾದ್ಯ ನುಡಿಸಿದರು. ಅನೇಕ ವಿದ್ವಾಂಸರೂ ರಸಿಕರೂ ಸೇರಿದ್ದರು. ಮುಂದುಗಡೆ ಬಿಡಾರಂ ಕೃಷ್ಣಪ್ಪನವರು. ತೇಜಃಪುಂಜರಾದ ವ್ಯಕ್ತಿ. ಸ್ವಲ್ಪ ಅಧೈರ್ಯದಿಂದಲೇ ಪ್ರಾರಂಭ ಮಾಡಿದೆ ಭೈರವಿ ರಾಗದ ವಿರಿಬೋಣಿ ವರ್ಣದಿಂದ. ಅದನ್ನು ಎರಡು ಕಾಲದಲ್ಲಿ ನುಡಿಸಿದ ನಂತರ ಹಂಸಧ್ವನಿಯ ಕೃತಿ – ಮನಸು ಕರಗದೇಮಿ. ಮುಂದೆ ಶಂಕರಾಭರಣದ ಎಂದುಕು ಪೆದ್ದಲ, ದೀಕ್ಷಿತರ ಭೈರವಿ ರಾಗದ ಚಿಂತಯಾಮಿ; ಬಿಲಹರಿ ರಾಗದ ಪರಿದಾನ ಮಿಚ್ಚಿತೆ ಮುಂತಾದ ಕೆಲವು ಕೃತಿಗಳನ್ನು, ರಾಗವನ್ನು ಸವಿಸ್ತಾರವಾಗಿ ನಿರೂಪಿಸಿ ನುಡಿಸಿದೆ. ಕಚೇರಿ ಮುಗಿದ ನಂತರ ಪದ್ಧತಿಯಂತೆ ಕೃಷ್ಣಪ್ಪನವರು ಹೂವಿನ ಹಾರವನ್ನು ತಂದರು. ನಾನು ಅದನ್ನು ಹಾಕಿಸಿಕೊಳ್ಳಲು ಒಪ್ಪಲಿಲ್ಲ. "ತಾವು ದೊಡ್ಡವರು, ನನಗೆ ಆಶೀರ್ವದಿಸಬೇಕು. ಈ ರೀತಿ ಮರ್ಯಾದೆ ಮಾಡಬಾರದು. ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕು" ಎಂದು ನಮಸ್ಕಾರ ಮಾಡಿದೆ. ಕೃಷ್ಣಪ್ಪನವರು "ಆಗಲಿ, ಅದಕ್ಕೇನಂತೆ. ನಮ್ಮಲ್ಲಿ ಸ್ವತಂತ್ರವಾಗಿ ಕೊಳಲು ಕಚೇರಿ ಮಾಡುವವರು ಯಾರಿದ್ದಾರೆ?" ಅಂದರು. "ನಾನೂ ಅದನ್ನೇ ಹೇಳಬೇಕೆಂದಿದ್ದೆ" ಎಂದು ಚೌಡಯ್ಯನವರೂ ದನಿಕೂಡಿಸಿದರು ಎಂದು ಆ ದಿನವನ್ನು ಸುಬ್ಬರಾಯರು ನೆನೆದರು.

ಗುರುಗಳೊಡಗೂಡಿ....

ಬಿಡಾರಂ ಕೃಷ್ಣಪ್ಪನವರ ಶಿಷ್ಯತ್ವ ಸುಬ್ಬರಾಯರ ಜೀವನದಲ್ಲಿ ಒಂದು ಹೊಸ ಅಧ್ಯಾಯ. ಪಾಠ ಪ್ರವಚನದೊಂದಿಗೆ ಅವರ ಕಚೇರಿಗಳಲ್ಲಿ ಹಿಂದೆ ತಂಬೂರಿ ಶ್ರುತಿ ಹಾಕಿ ದನಿ ಕೂಡಿಸುವುದು, ಗುರುಗಳೊಂದಿಗೆ ಊರೂರು ಹೋಗಿ ಬರುವುದು. "ನನಗೆ ಗುರುಗಳೊಂದಿಗೆ ಊರೂರಿಗೆ ಹೋದುದು ಹೊಸ ಜಾಗಗಳನ್ನು ನೋಡುವ ಆಸೆಯಿಂದಲ್ಲ. ನಾನು ಆ ವೇಳೆಗಾಗಲೇ ದಕ್ಷಿಣ ದೇಶವನ್ನೆಲ್ಲಾ ಸುತ್ತಿ ಅಲ್ಲಿನ ಪ್ರಸಿದ್ಧ ಸಂಗೀತ ಕ್ಷೇತ್ರಗಳಲ್ಲಿ ನಾಲ್ಕಾರು ದಿನಗಳು ಇದ್ದೂ ಬಂದಿದ್ದೆನು. ನನ್ನ ಆಸೆ ಗುರುಗಳ ಸಂಗೀತವನ್ನು ಕೇಳಬೇಕೆಂದು.

ಅವರ ಅಮೋಘ ವ್ಯಕ್ತಿತ್ವವನ್ನು ಹೆಚ್ಚು ಹೆಚ್ಚು ಅರ್ಥ ಮಾಡಿಕೊಳ್ಳಬೇಕೆಂದು'' ಎನ್ನುತ್ತಾರೆ ಸುಬ್ಬರಾಯರು.

ಕೃಷ್ಣಪ್ಪನವರ ಶಿಷ್ಯಪರಿವಾರದಲ್ಲಿ ಸೇರಿದ ಮೇಲೆ ಮೈಸೂರಿನಲ್ಲಿ ಸುಬ್ಬರಾವ್, ಸುಬ್ಬರಾಯ ಶಾಸ್ತ್ರಿ, ಪುಟ್ಟಣ್ಣ, ಫ್ಲೂಟ್ ಶಾಸ್ತ್ರಿ ಮುಂತಾದ ನಾನಾ ಹೆಸರುಗಳಿಂದ ಪರಿಚಯವಿದ್ದ ಸುಬ್ಬರಾಯರು ಒಂದು ರೀತಿಯ ಕ್ರಮಬದ್ಧ ಜೀವನ ಪ್ರಾರಂಭಿಸಿದರು. ಬೆಳಿಗ್ಗೆ ಗುರುಗಳ ಮನೆಯಲ್ಲಿ ಪಾಠ, ಸಾಧನೆ. ತಿರುಗಿ ಮನೆಯಲ್ಲಿ ಸಾಧನೆ. ಮಧ್ಯೆ ಅವಕಾಶ ದೊರೆತಾಗ ಸ್ವಂತವಾಗಿ ಕಚೇರಿ. ಆದರೆ ಪ್ರಾಯಿಕವಾಗಿ ಗುರುಗಳ ಹಿಂಬಲವಾಗಿ ವೇದಿಕೆಯ ಮೇಲೆ – ಇದು ಅವರ ದಿನಚರಿ.

''ಗುರುಗಳದು ಪಾಠಕ್ರಮದಲ್ಲಿ ಬಹು ಕಟ್ಟುನಿಟ್ಟು, ಶಿಸ್ತೂ ಬಹು ಕಠಿಣವಾದುದು. ಸಣ್ಣ ತಪ್ಪನ್ನೂ ಸಹಿಸರು. ಆದರೆ ಇತರ ಸಮಯದಲ್ಲಿ ಶಿಷ್ಯರ ಬಗೆಗೆ ಅವರು ತೋರುತ್ತಿದ್ದ ವಾತ್ಸಲ್ಯದಲ್ಲಿ ನಮ್ಮ ಮನಸ್ಸಿನ ವೇದನೆ ಏನಿದ್ದರೂ ಮರೆತುಹೋಗುತ್ತಿದ್ದಿತು. ನನ್ನ ಮಟ್ಟಿಗೆ ಹೇಳಬಹುದಾದಲ್ಲಿ ಅಂತಹ ಎಷ್ಟೋ ಸಂದರ್ಭಗಳು ಅನುಭವವಾಗಿವೆ. ನಿದರ್ಶನವಾಗಿ ಅವರೊಂದಿಗೆ ಸರ್ಕೀಟು ಹೊರಟಾಗ ಮೊದಲನೆಯ ತಾರೀಕಾದ ಕೂಡಲೇ ನನ್ನ ಕೈಯಲ್ಲಿ 40 ರೂ.ಗಳನ್ನು ಕೊಡುತ್ತಿದ್ದರು, ನನ್ನ ಮನೆಯ ಖರ್ಚಿಗೆ ಮನಿ ಆರ್ಡರ್ ಮಾಡಲು. ಅದನ್ನು ಕಳಿಸಿದೆನೆ ಇಲ್ಲವೇ ಎಂಬುದನ್ನು ಅವರಿಗೆ ಖಚಿತಪಡಿಸಲೇಬೇಕಾಗಿತ್ತು.''

ವರ್ಚಸ್ವೀ ನಾಯಕ

''ಅವರು ಕಚೇರಿಗೆ ಬಂದು ಕುಳಿತುಕೊಳ್ಳುವಾಗ ನೋಡಬೇಕಿತ್ತು. ಗುರುಗಳು ಸಭಾಂಗಣಕ್ಕೆ ಬಂದಕೂಡಲೇ ಜನಗಳು ಅವರಾಗಿ ಎದ್ದು ನಿಂತುಕೊಳ್ಳುವಂತೆ ಮಾಡುತ್ತಿದ್ದ ವ್ಯಕ್ತಿತ್ವ ಅವರದು. ಒಳ್ಳೆ ಸಭಾನಾಯಕ ಲಕ್ಷಣ. ಅವರಾಗಿ ಅವರೇ ಯಾರನ್ನೂ ಕೆಣಕಿದವರಲ್ಲ. ಆದರೆ ಅವರನ್ನು ಯಾರಾದರೂ ಕೆಣಕಿದರೆ ಬಿಸಿಮುಟ್ಟಿಸದೆ ಬಿಡುತ್ತಿರಲಿಲ್ಲ. ನಾನು ತಂಬೂರಿ ಮೀಟುವುದರ ಜೊತೆಗೆ ಅವರೊಂದಿಗೆ ದನಿ ಸೇರಿಸಿ ಹಾಡುವುದು ಪದ್ಧತಿ. ಮಧ್ಯೆ ಅವರು ಕೈಸನ್ನೆ ಮಾಡಿದ ಕೂಡಲೇ ಏನೋ ವಿಶೇಷವಿದೆ ಎಂಬ ಸೂಚನೆ ಕಾಣಬರುತ್ತಿದ್ದಿತು. ನಾನು ಹಾಡುವುದನ್ನು ನಿಲ್ಲಿಸಿ ಸುಮ್ಮನೆ ತಂಬೂರಿ ಮೀಟುಹಾಕುತ್ತಿದ್ದೆ. ಕಚೇರಿಗಳಲ್ಲೆಲ್ಲಾ ಗುರುಗಳು ಸಭಾನಾಯಕನಾಗಿಯೇ ಬಾಳಿದರು. ಯಾರಿಗೂ ಸಲಾಮು ಹೊಡೆದವರಲ್ಲ'' ಎಂದು ಬಿಡಾರಂ ಕೃಷ್ಣಪ್ಪನವರನ್ನು ಸ್ಮರಿಸುತ್ತಾರೆ ಸುಬ್ಬರಾಯರು.

''ಇಂತಹ ಗುರುಗಳ ಅನುಗ್ರಹದಿಂದ ಪಡೆದ ನಿಮ್ಮ ಸಂಗೀತದ ಬಲವು ಏತರಲ್ಲಿ ಅನುಭವವಾಗುತ್ತದೆ?'' ಎಂದು ಕೇಳಿದುದಕ್ಕೆ,

''ಅದರಲ್ಲಿ ಸಂಸ್ಕಾರ ಬಲವಿದೆ, ನಿಜ. ಆದರೆ ಸಾಧನ ಬಲವೂ ಅಷ್ಟೇ ಮುಖ್ಯವಾದುದು'' ಎಂದರು ಸುಬ್ಬರಾಯರು. ಮುಂದುವರಿಯುತ್ತಾ ''ಸಂಯಮ ಶಿಸ್ತು ಮತ್ತು ನಿಷ್ಠೆಯಿಂದ ಕೂಡಿದ ಸಾಧನೆ ಕಲೆಯನ್ನು ದೃಢವಾಗಿ ಖಚಿತರೂಪದಲ್ಲಿ

ಅಭಿವ್ಯಕ್ತಪಡಿಸಲು ಬಹುಸಹಾಯಕ. ಇದೇ ಮಾತನ್ನು ಮೊದಲು ಗುರುಗಳಾಗಿದ್ದ ಕೃಷ್ಣಶಾಸ್ತ್ರಿಗಳೂ ಒತ್ತಿ ಒತ್ತಿ ಹೇಳುತ್ತಿದ್ದರು. ದೊಡ್ಡ ದೊಡ್ಡವರು ಈ ಸಾಧನೆ ಯಾವ ರೀತಿ ಮಾಡುತ್ತಾರೆ ಎಂದು ತಿಳಿದುಕೊಳ್ಳಲು ಕುತೂಹಲ. ಅದಕ್ಕಾಗಿ ದಕ್ಷಿಣ ದೇಶವನ್ನೆಲ್ಲಾ ಸುತ್ತಿದ್ದೇನೆ. ದಕ್ಷಿಣ ದೇಶವನ್ನೆಲ್ಲಾ ಸುತ್ತುಹಾಕಲು ಇನ್ನೂ ಒಂದು ಕಾರಣವೆಂದರೆ ನಾಗಸ್ವರ ಕೇಳುವ ಹುಚ್ಚು. ಅಲ್ಲಿನ ಪ್ರತಿಭಾವಂತ ನಾಗಸ್ವರದವರ ಸಂಗೀತವೆಲ್ಲಾ ಕೇಳುವ ಸುಯೋಗ ನನಗೆ ಲಭ್ಯವಾಯಿತು. ಇದರಲ್ಲಿ ಎಷ್ಟೋ ಸಂದರ್ಭಗಳು ಇನ್ನೂ ನನ್ನ ಸ್ಮೃತಿಯಿಂದ ಅಳಿಸಲಾಗಿಲ್ಲ.

ಬಿಲಹರಿ ವೈವಿಧ್ಯ

"ನಿದರ್ಶನವಾಗಿ ಕುಂಭಕೋಣದಲ್ಲಿ ನಡೆದ ಒಂದು ನಾಗಸ್ವರವಾದನ. ಯಾವುದೋ ಶ್ರೀಮಂತರ ಮನೆ ಮದುವೆ. ಬೆಳಿಗ್ಗೆ ಮೆರವಣಿಗೆ. ನಾಗಸ್ವರವಾದಕ ತಿರುಮರುಘಲ್ ನಟೇಶ ಪಿಳ್ಳೆ. ಮೆರವಣಿಗೆ ಮಹಾಮಾಘ ಕೊಳದ ಒಂದು ಮೂಲೆಯಿಂದ ಹೊರಟಾಗ ಬೆಳಿಗ್ಗೆ ಸುಮಾರು 7 ಗಂಟೆ. ಆಗ ಬಿಲಹರಿ ರಾಗ ಪ್ರಾರಂಭಿಸಿದ ಪಿಳ್ಳೆ. ಕೊಳವನ್ನೆಲ್ಲಾ ಸುತ್ತುಹಾಕಿ ಮೊದಲ ಸ್ಥಳಕ್ಕೆ ಬರುವ ವೇಳೆಗೆ ಸುಮಾರು ಹನ್ನೊಂದು ಹನ್ನೊಂದೂವರೆ ಗಂಟೆ. ಆಗ ಬಿಲಹರಿ ರಾಗ ಮುಗಿಯಿತು. ಅದೇನು ಮನೋಧರ್ಮ. ನಮಗೆ ಹೊತ್ತು ಹೋದುದೇ ಗೊತ್ತಾಗಲಿಲ್ಲ.

"ಹಾಗೆಯೇ ಇನ್ನೊಂದು ಸನ್ನಿವೇಶ. ತಿರುಚಿನಾಪಳ್ಳಿಯಲ್ಲಿ. ಅದು ಒಂದು ಉತ್ಸವ. ಅದರಲ್ಲಿ ನಾಗಸ್ವರ ನುಡಿಸಿದುದು ವರಾಹೂರ್ ಗೋಪಾಲಸ್ವಾಮಿ. ಬಹುಪ್ರತಿಭಾವಂತ. ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡ. ಅಂದು ಅವನು ನಿರೂಪಿಸಿದ ಆಹಿರಿ ರಾಗ ಇನ್ನೂ ನನಗೆ ಮರೆಯಲು ಸಾಧ್ಯವಾಗಿಲ್ಲ. ಸುಮಾರು 4 ಗಂಟೆಗಳ ಕಾಲ. ಅದೇನು ಮನೋಧರ್ಮ, ಅದೇನು ಕಲ್ಪನೆ. ಆಹಿರಿಯನ್ನು ಅಷ್ಟು ವಿಸ್ತಾರವಾಗಿ ನಿರೂಪಿಸಲು ಸಾಧ್ಯವೇ ಎಂದು ಇಂದಿಗೂ ನನಗೆ ಅನ್ನಿಸುತ್ತಿದೆ. ಹೀಗೆಯೇ ಮಧುರೆ ಪೊನ್ನುಸಾಮಿ, ಮನ್ನಾರ್ ಗುಡಿ ಚಿನ್ನಫಕೀರಿ ಮುಂತಾದವರ ನಾಗಸ್ವರದ ಇಂಚರ ಇನ್ನೂ ನನ್ನ ಕಿವಿಯಲ್ಲಿ ಮೊರೆಯುತ್ತಿದೆ."

"ಚಿನ್ನಫಕೀರಿ ಎಂದೊಡನೆ ಆತನ ಸಾಧಕ ಕ್ರಮವು ನೆನಪಿಗೆ ಬರುತ್ತದೆ. ಬೆಳಿಗ್ಗೆ 4 ಗಂಟೆಗೆ ಎದ್ದು ಸಾಧಕ ಪ್ರಾರಂಭ. ಬರೇ ಸರಳೆ, ಜಂಟಿ ವರಸೆ. ಅಲಂಕಾರ ಒಂದೊಂದು ದಿನ ಒಂದೊಂದು ರಾಗದಲ್ಲಿ. ಹೀಗೆ 6-30ರವರೆಗೆ. ಅನಂತರ ವಿರಾಮ. ದೇವಸ್ಥಾನದಲ್ಲಿ ರಾಜಸೇವೆಯಾದೊಡನೆ ಸ್ನಾನ ಉಪಹಾರ. ಅನಂತರ ಒಂದು ರಾಗವನ್ನು ತೆಗೆದುಕೊಂಡು ವರಸೆವರಸೆಯಾಗಿ ವಿಸ್ತರಿಸಲು ಪ್ರಾರಂಭ. ಸೂರ್ಯ ನೆತ್ತಿಯ ಮೇಲೆ ಬಂದ ಕೂಡಲೇ ಊಟ, ವಿಶ್ರಾಂತಿ, 4 ಗಂಟೆಯಾದ ಮೇಲೆ ಪುನಃ ಇನ್ನೊಂದು ರಾಗ ವಿಸ್ತಾರ. ಎಂತಹ ದ್ರುತಗತಿಯಲ್ಲಿಯೂ ಸ್ವರಗಳು ಎಷ್ಟು ಶುದ್ಧ. ರಚನೆಗಳು ಗಜಿಬಿಜಿಯಿಲ್ಲದೆ ಎಷ್ಟು ಸ್ವಚ್ಛವಾಗಿರುತ್ತಿದ್ದುವು!"

ಆ ಬೆಳಗಿನ ಜಾವ

ಹಾಗೆಯೇ ಸಾಧನೆಯ ವಿಷಯ ಮಾತನಾಡುತ್ತಾ "ಇನ್ನೊಂದು ಅನುಭವ ಹೇಳ್ತೀನಿ ಕೇಳಿ" ಅಂದರು. "ಅದು ತಿರುಕ್ಕೋಡಿ ಕಾವಲ್ ಕೃಷ್ಣಯ್ಯರ್‌ರವರಿಗೆ ಸಂಬಂಧಪಟ್ಟಿದ್ದು. ನಮ್ಮೂರಿಗೆ ಬರುತ್ತಿದ್ದ ಶತಾವಧಾನಿ ವೆಂಕಟರಾಮಯ್ಯನವರು ಒಮ್ಮೆ "ನನ್ನ ಜೊತೆಯಲ್ಲಿ ಬಾ ಕೇಳಿಸುತ್ತೇನೆ" ಎಂದು ಕರೆದುಕೊಂಡು ಹೋದರು. ಕೃಷ್ಣಯ್ಯರ್ ಅವರ ಊರು ಸೇರಿದಾಗ ಸರಿರಾತ್ರಿಯಾಗಿತ್ತು. ಹೋಗಿ ಅವರ ಮನೆಯ ಜಗಲಿಯ ಮೇಲೆ ಮಲಗಿಕೊಂಡೆವು. ಬೆಳಗಿನ ಜಾವ ಇನ್ನೂ ಕೋಳಿ ಕೂಗಿರಲಿಲ್ಲ. ಮನೆಯ ಒಳಗಿಂದ ಮೃದುವಾದ ನಾದ ಪ್ರಾರಂಭ. ಪಿಳ್ಳು ಕುದುರೆಯನ್ನು ಹಾಕಿ ಪಿಟೀಲು ನುಡಿಸುತ್ತಿದ್ದಾರೆ ಅಯ್ಯರು. ಸ್ವರಗಳ ವಿಧ ವಿಧವಾದ ವರಸೆಗಳು. 3 ಕಾಲ ಸ್ಥಾಯಿಯಲ್ಲಿ. ಒಂದಾದರೂ ಅಪಸ್ವರ, ಕಳಪೆ ಸಂಚಾರ, ಬೇಡವೇ? ಬೆಳಕು ಮೂಡಿತು. ಸ್ವಲ್ಪ ಕೆಮ್ಮಿದರು. ಬಾಗಿಲು ತೆಗೆದು ಹೊರಗೆ ಬಂದರು. ಮಲಗಿದ್ದ ನಮ್ಮನ್ನು ನೋಡಿ "ಯಾರದು?" ಎಂದು ಗದರಿಸುವ ದನಿಯಲ್ಲಿ ಕೇಳಿದರು. ಶತಾವಧಾನಿಗಳು ಮುಸುಗು ತೆಗದ ಕೂಡಲೇ ಗುರ್ತಿಸಿ "ಇದೇಕೆ ಹೀಗೆ ಮಾಡಿದಿರಿ, ಒಳಗೆ ಬರಬಾರದಾಗಿತ್ತೇ?" ಎಂದರು. "ರಾತ್ರಿ ಬಹಳ ಹೊತ್ತಾದುದರಿಂದ ನಿಮ್ಮನ್ನು ಎಬ್ಬಿಸಲಿಲ್ಲ" ಎಂದರು ಶತಾವಧಾನಿಗಳು.

ನನ್ನನ್ನು ನೋಡಿ "ಯಾರು ಇವರು" ಎಂದು ಕೇಳಿದರು ಅಯ್ಯರು. "ನಮ್ಮ ಸಂಬಂಧಿಕ ಹುಡುಗ, ಜೊತೆಯಲ್ಲಿ ಇಲ್ಲಿ ಪುಣ್ಯಕ್ಷೇತ್ರಗಳನ್ನು ನೋಡಲು ಬಂದಿದ್ದಾನೆ" ಎಂದು ಶತಾವಧಾನಿಗಳು ಹೇಳಿದರು. "ಸಂಗೀತ ಬರುತ್ತದೋ" ಎಂದು ತಿರುಕ್ಕೋಡಿಕಾವಲ್‌ರವರ ಪ್ರಶ್ನೆ. "ಇಲ್ಲ, ಪಾಠಶಾಲೆಯಲ್ಲಿ ವೇದಾಭ್ಯಾಸ ಮಾಡುತ್ತಿದ್ದಾನೆ" ಎಂದು ಉತ್ತರವಿತ್ತರು ಶತಾವಧಾನಿಗಳು.

ಅವರು ವಿರಾಮವಾಗಿ ಮಾತನಾಡಲಾರಂಭಿಸಿದರೆ ತಮ್ಮ ದೇಶಸಂಚಾರದ ಎಷ್ಟೋ ಅನುಭವಗಳನ್ನು ಹೀಗೆ ಸುಬ್ಬರಾಯರು ತಿಳಿಯಪಡಿಸುತ್ತಾರೆ. ಅದರಲ್ಲಿ ಸಂಗೀತ, ನಾಟ್ಯ ಮುಂತಾದವುಗಳಿಗೆ ಸಂಬಂಧಿಸಿದ ಅನುಭವಗಳೇ ಹೆಚ್ಚು. ಸುಬ್ಬರಾಯರಿಗೆ ಸಂಗೀತದಷ್ಟೇ ನಾಟ್ಯಕಲೆಯ ವಿಷಯದಲ್ಲಿ ಗಾಢವಾದ ಜ್ಞಾನವಿದೆ.

ಕೊಳಲಿನ ನಾದ ವೈವಿಧ್ಯ

ಅವರಿಗೆ ಪ್ರಿಯವಾದ ಕೊಳಲಿನ ವಿಷಯವಾಗಿ ಮಾತನಾಡುವುದೆಂದರೆ ಸುಬ್ಬರಾಯರಿಗೆ ಬಹು ಉತ್ಸಾಹ. "ನೋಡಿ, ಕೊಳಲಿನ ನಾದ ಎಂತಹವರನ್ನೂ ಮೋಹಗೊಳಿಸಬಲ್ಲದು ಎಂಬ ವಿಷಯ ಹಿಂದಿನಿಂದಲೂ ತಿಳಿದಿದ್ದರೂ ಅದಕ್ಕೆ ಒಂದು ಸ್ವತಂತ್ರ ಸ್ಥಾನ ಕಲ್ಪಿಸಿಕೊಟ್ಟರು ಶರಭ ಶಾಸ್ತ್ರಿಗಳು. ಅಲ್ಲಿಯವರಿಗೂ ಕೊಳಲು ಸಂಗೀತ ಕಚೇರಿಗಳಲ್ಲಿ ಇರಲೇ ಇಲ್ಲ. ಆದರೆ ಶ್ರುತಿಗೆ ಹಾಗೂ ಪಕ್ಕವಾದ್ಯವಾಗಿ ಉಪಯೋಗಿಸಲ್ಪಡುತ್ತಿತ್ತು. ಅದನ್ನು ಕಚೇರಿಗಳಲ್ಲಿ ಪಕ್ಕವಾದ್ಯದಿಂದ

ಪ್ರಧಾನ ವಾದ್ಯಸ್ಥಾನಕ್ಕೆ ತಂದುದು ಶರಭ ಶಾಸ್ತ್ರಿಗಳ ಅಮೋಘ ಪ್ರತಿಭೆ'' ಎನ್ನುತ್ತಾರೆ ಸುಬ್ಬರಾಯರು.

ವಾದ್ಯದ ಬಗೆಗೆ ಮಾತನಾಡುತ್ತಾ ''ಕೆಲವು ಭಾಗದಲ್ಲಿ ಕೊಳಲು ಬಹು ಸುಲಭವಾದ್ಯವೆನ್ನಬಹುದು. ಬೆಲೆಯಲ್ಲಿ ಸುಲಭ. ಹಾಗೆಯೇ ಸ್ವಲ್ಪ ಕಷ್ಟಪಟ್ಟರೆ ತಿಳಿವಳಿಕೆಯುಳ್ಳವರು ಕೊಳಲನ್ನು ಅಭ್ಯಾಸ ಮಾಡಲು ಆರಂಭಿಸಿದ ಒಂದು ವರುಷದಲ್ಲಿ ಇತರ ವಾದ್ಯಗಳ ವಾದನಕ್ಕಿಂತ ಹೆಚ್ಚಿನ ಪ್ರಾವೀಣ್ಯತೆ ಪಡೆಯಬಹುದು. ಒಳ್ಳೆಯ ಶಿಕ್ಷಣವಾದವರು ಕೊಳಲಿನಲ್ಲಿ ಮೂರು ಸ್ಥಾಯಿಯನ್ನೂ ಸರಾಗವಾಗಿ ನುಡಿಸಬಹುದು. ಕಾಲವೂ ಅಷ್ಟೇ. ಆದರೆ ಇದೆಲ್ಲಾ ಫಲಿಸುವುದು ವಾದ್ಯದಲ್ಲಿ ಕ್ರಮಬದ್ಧವಾಗಿ ಗಾಳಿಯನ್ನು ಊದಿ, ಸರಿಯಾದ ಸ್ವರಸ್ಥಾನಗಳು ಮೂಡಿಬರುವಂತೆ ಅಭ್ಯಾಸ ಮಾಡಿದ ನಂತರವೇ ಸಾಧ್ಯ.''

''ಉತ್ತಮವಾದ ನಾದ ಕೂಡಿಬರಲು ಬಿದಿರೇ ಶ್ರೇಷ್ಠವಾದುದು'' ಎನ್ನುತ್ತಾರೆ ಸುಬ್ಬರಾಯರು - ಕೊಳಲನ್ನು ಮಾಡಬಹುದಾದ ಸಾಮಗ್ರಿಯ ವಿಷಯವಾಗಿ. ''ನಾನು ಉಪಯೋಗಿಸುವ ಕೊಳಲು ಕರಿಮರದಿಂದ ಮಾಡಿದೆ. ನನ್ನಲ್ಲಿ ಬಿದಿರಿನ ಕೊಳಲುಗಳಿವೆ. ಕೆಲವರು ಬೆಳ್ಳಿಯಿಂದಲೂ ಮಾಡಿಸಿದ್ದಾರೆ. ಆದರೆ ನಾನು ನಡೆಸಿದ ನಾನಾ ಪ್ರಯೋಗಗಳ ಅನುಭವದಿಂದ ಹೇಳಬೇಕಾದಲ್ಲಿ, ಸ್ವಚ್ಛವಾದ ಸುನಾದಕ್ಕೆ ಬಿದಿರೇ ಯುಕ್ತವಾದ ಸಾಮಗ್ರಿ. ಬಿದಿರಿನ ಕೊಳಲುಗಳಲ್ಲಿಯೂ ಕೆಲವರು ಗಿಣ್ಣನ್ನು ಕೊರೆದು ಆ ಜಾಗದಲ್ಲಿ ಇನ್ನಾವುದಾದರೂ ವಸ್ತುವಿನಿಂದ ರಂಧ್ರವನ್ನು ಮುಚ್ಚುತ್ತಾರೆ. ಇದರಲ್ಲಿ ನಾದದ ಗುಣ ಕಡಮೆಯಾಗುತ್ತದೆಂದು ನನ್ನ ಅನುಭವ. ಹಣ್ಣಾಗುವಂತೆ ಬಲಿತು ಹಳದಿಯ ಬಣ್ಣಕ್ಕೆ ಬಂದು ಓರೆಕೋರೆಯಿಲ್ಲದೆ ನೆಟ್ಟಗಿರುವ ಬಿದಿರನ್ನು ತಂದು ನೆರಳಿನಲ್ಲಿ ಒಣಗಿಸಿ, ಒಂದು ಕಡೆ ಗಿಣ್ಣು ಬಿಟ್ಟು ಇನ್ನೊಂದು ಕಡೆ ತೆಗೆದು ಗಿಣ್ಣು ಬಿಟ್ಟ ಕಡೆ ಮುಖರಂಧ್ರ ಮಾಡಿ ಅಲ್ಲಿಂದ ಸ್ವಲ್ಪ ದೂರ ಬಿಟ್ಟು ಒಂದೊಂದಾಗಿ 8 ರಂಧ್ರಗಳನ್ನು ಮಾಡಿ ಉಪಯೋಗಿಸಬೇಕು.''

''ಹಾಗೆ ಮಾಡಿದ ಕೊಳಲು ಸರಾಗವಾಗಿ ನುಡಿಸಲು ಬರುತ್ತದೆಯೇ?'' ನನ್ನ ಪ್ರಶ್ನೆ.

ಸಿದ್ಧಿ ದೊರಕುವುದೆಂತು?

''ಬರಬೇಕು. ರಂಧ್ರಗಳು ಸರಿಯಾಗಿ ಕೊರೆಯಲ್ಪಟ್ಟಿದ್ದಲ್ಲಿ ಅವುಗಳ ಪರಸ್ಪರ ಅಂತರ ಒಂದೇ ಸಮನಾಗಿರುವುದಿಲ್ಲ. ಇದನ್ನು ಅನುಭವದಿಂದ ತಿಳಿದು, ನಮಗೆ ಉಚಿತವಾದ ಕೊಳಲುಗಳನ್ನು ನಾವೇ ತಯಾರು ಮಾಡಿಕೊಳ್ಳುವುದು ಯುಕ್ತವಾದುದು. ಹೀಗೆ ತಯಾರು ಮಾಡಿದ ಕೊಳಲು ಹರಿಕಾಂಭೋಜಿ ಮೇಳಕ್ಕೆ ಹೊಂದಿಕೊಂಡಲ್ಲಿ ಬಹು ಉಚಿತ. ಅದರಲ್ಲಿ ಯಾವ ರಾಗವನ್ನಾದರೂ ಸರಾಗವಾಗಿ ನುಡಿಸಬಹುದು'' ಎಂದರು ಸುಬ್ಬರಾಯರು.

''ಕೊಳಲು ವಾದನದಲ್ಲಿ ಸಿದ್ಧಿ ಪಡೆಯಬೇಕಾದಲ್ಲಿ ವಾದಕನಿಗೆ ಅವಶ್ಯ ಗುಣಗಳೇನು?'' ಎಂದುದಕ್ಕೆ

"ಮೊದಲು ಆರೋಗ್ಯ ಮತ್ತು ದೇಹದಾರ್ಢ್ಯ ಸ್ವಾಮಿ. ವಾದ್ಯವನ್ನು ಸರಾಗವಾಗಿ ಊದುವುದಕ್ಕೆ ಗಾಳಿಯ ಸಹಾಯ ಬೇಡವೇ? ಶ್ವಾಸಕೋಶದ ಬಲ ಬೇಡವೇ? ಎರಡನೆಯದು ತಾಳ್ಮೆ. ಗುರುವಿನ ಮಾರ್ಗದರ್ಶನವಾದರೂ ಆಯಾ ಸ್ವರ ಸ್ಥಾನವನ್ನು ಹಿಡಿಯಲು ತಾನೇ ಸಾಧನೆ ಮಾಡಿ ಗ್ರಹಿಸಬೇಕಲ್ಲವೇ? ಇದರ ಜೊತೆಗೆ ವಾದ್ಯಕ್ಕೂ ಸಂಪ್ರದಾಯಕ್ಕೂ ನಿಷ್ಠೆ. ಎಲ್ಲಕ್ಕೂ ಮಿಗಿಲಾಗಿ ಇವೆಲ್ಲಕ್ಕೂ ಬಲಕೊಡಲು ಸದಾಚಾರ ಮತ್ತು ನಡತೆ. ವಾದ್ಯವು ಸರಳವಾದರೂ, ಅದರಲ್ಲಿ ಸಿದ್ಧಿ ಪಡೆಯಲು ಪಡಬೇಕಾದ ಈ ಕಷ್ಟದ ಫಲವಾಗಿ ಕೊಳಲುವಾದಕರ ಸಂಖ್ಯೆ ಇತರ ವಾದ್ಯ ವಾದಕರ ಸಂಖ್ಯೆಗಿಂತ ಕಡಿಮೆ ಇರುವುದರಲ್ಲಿಯೇ ಅರ್ಥವಾಗುವುದಿಲ್ಲವೇ?" ಎಂದರು ಸುಬ್ಬರಾಯರು. ★ ★ ★ ★

ಸುಧಾ, ಆಗಸ್ಟ್ 1971

17. ಪ್ರಖ್ಯಾತ ಪಿಟೀಲು ವಾದನಕಾರರಾದ ಪರೂರ್ ಸುಂದರಂ ಅಯ್ಯರ್ ಮತ್ತು ಗೋಪಾಲ ಕೃಷ್ಣನ್

ಈ ಸಲದ ಮೈಸೂರಿನ ರಾಮೋತ್ಸವ ಸಂಗೀತ ಕಚೇರಿಗಳಲ್ಲಿ ಕೇಳುವವರಿಗೆ ಪಂಡಿತ ಪಾಮರರಾದಿಯಾಗಿ ಎಲ್ಲರ ಮನಸ್ಸನ್ನೂ ತಣಿಸಿದ ಕಾರ್ಯಕ್ರಮವು, ಪ್ರಸಿದ್ಧ ಪಿಟೀಲು ವಾದನಕಾರರಾದ ವಿದ್ವಾನ್ ಪರೂರ್ ಸುಂದರಂ ಅಯ್ಯರ್ ಮತ್ತು ಇವರ ಮಗ ಶ್ರೀ ಎಂ.ಎಸ್. ಗೋಪಾಲಕೃಷ್ಣನ್ ಇವರುಗಳ ವಾದನ. ಹೋದ ವರ್ಷವೂ ಇದೇ ಕಾಲದಲ್ಲಿ ಇವರಿಬ್ಬರೂ ಸಂಗೀತ ಕಚೇರಿ ನಡೆಯಿಸಿ ಪಿಟೀಲಿನಲ್ಲಿ ತಮ್ಮ ಕೈಚಳಕ ಮತ್ತು ಬಿಗಿಯಾಗಿಯೂ ಇಂಪಾಗಿಯೂ ಇದ್ದ ನಾದ ಲಯ ಪ್ರಧಾನವಾದ ಸಂಗೀತವನ್ನು ನುಡಿಸಿ ಸಭಾಸದರನ್ನು ಬೆರಗುಗೊಳಿಸಿದರು. ಹೋದಸಲ ಇವರಿಬ್ಬರ ಕಚೇರಿಯಾದ ಮಾರನೆಯ ದಿನ, ಮದರಾಸಿನ ಇನ್ನೊಬ್ಬ ಗಾಯಕರಿಗೆ, ಗೋಪಾಲಕೃಷ್ಣನ್‌ರವರ ಪಿಟೀಲು ಏರ್ಪಾಡಾಗಿದ್ದಿತು. ಗಾಯಕರು ಸ್ವಲ್ಪ ಸ್ವಭಾವತಃ ಒರಟು ಮತ್ತು ಅಸೂಯಾಪರರೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಹಿಂದಿನ ದಿನ ಗೋಪಾಲಕೃಷ್ಣನ್‌ರವರ ವಾದನವನ್ನು ಕೇಳಿದ್ದರು. ತಮ್ಮ ಗಾಯನದಲ್ಲಿ ಗೋಪಾಲಕೃಷ್ಣನ್‌ರವರಿಗೆ ಮಧ್ಯೆ ಮಧ್ಯೆ ಬಾರಿಸಲು ಅವಕಾಶವನ್ನೇ ಕೊಡಲಿಲ್ಲ. ಇದನ್ನು ನೋಡಿದ ಸಭಿಕವೃಂದವು ಗಲಾಟೆಮಾಡಿದನಂತರ ಬಾರಿಸಲು ಬಿಟ್ಟರು, ಆದರೆ ಅವರೊಂದು ದೊಡ್ಡ ಅವಿವೇಕವನ್ನು ಮಾಡಿಕೊಂಡರು. ಸಭಿಕರು ಗಲಾಟೆಮಾಡಿದಾಗ ಅವರು ಹಾಡುತ್ತಿದ್ದುದು ಬೇಹಾಗ್ ರಾಗ. ಹಿಂದಿನ ದಿನ ಗೋಪಾಲಕೃಷ್ಣನ್‌ರವರು ಬೇಹಾಗ್ ರಾಗವನ್ನು ಚೆನ್ನಾಗಿ ಬಾರಿಸಿ ಸಭಿಕರನ್ನು ಮುಗ್ಧಗೊಳಿಸಿದ್ದರು. ಗಾಯಕರು ಅದನ್ನು ಮರೆತಿದ್ದರೋ ಏನೋ! ಅವರು ಬಿಟ್ಟಕೂಡಲೇ, ಗೋಪಾಲಕೃಷ್ಣನ್‌ರವರು ಎರಡು ಸಲ

ಕಮಾನು ಎಳೆಯುವುದರ ಒಳಗೆ, ಗಾಯಕರು ಅಲ್ಲಿಯವರೆಗೆ ಹಾಡಿದುದೆಲ್ಲಾ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದಂತೆ ಆಯಿತು. ಗೋಪಾಲಕೃಷ್ಣನ್‌ರವರ ಕೈ ಅಂತಹುದು. ಇವರು ವಸಂತಕುಮಾರಿಯವರ ಜತೆಯಲ್ಲಿ, ಅನೇಕವೇಳೆ ಪಿಟೀಲು ಬಾರಿಸಿರುವುದನ್ನು ನೋಡಿರಬಹುದು. ಆಕೆಯ ರಾಷ್ಟ್ರೀಯ ಸಂಗೀತ ಕಾರ್ಯಕ್ರಮದಲ್ಲಿಯೂ, ಇವರೇ ಪಿಟೀಲನ್ನು ಬಾರಿಸಿದರು.

ಪರೂರ್‌ರವರ ಕಾರ್ಯಕ್ರಮ

ಈ ವರ್ಷದ ಕಾರ್ಯಕ್ರಮದಲ್ಲಿ ಮುಖ್ಯವಾದ ಅಂಶ ಮೊದಲು ಪಲ್ಲವಿ ಗೋಪಾಲಯ್ಯನವರ ಸುಪ್ರಸಿದ್ಧ ಕಲ್ಯಾಣಿ ರಾಗ, ಅಟತಾಳದ ವರ್ಣ 'ವನಜಾಕ್ಷಿ'. ಇದನ್ನು ಮಧ್ಯಮ ಶೃತಿಗೆ ಏರಿಸಿದ್ದ ಒಂದೇ ತಂತಿಯಲ್ಲಿ, ಎರಡು ಕಾಲದಲ್ಲಿ ಬಾರಿಸಿದರು. ಇದಾದನಂತರ ನಾಟರಾಗದ, ದೀಕ್ಷಿತರ ಕೃತಿ "ಪವನಾತ್ಮಜಾಗಚ್ಛ". ಕದನಕುತೂಹಲದ "ರಘುವಂಶ ಸುಧಾಂಬುಧಿ." ಸರಸ್ವತಿ ಮನೋಹರಿಯ "ಎಂತವೇಡುಕೊಂದು ರಾಘವ", ರುದ್ರ ಪ್ರಿಯ ರಾಗದ "ಅಂಬ ಪರದೇವತೆ", "ಮನವ್ಯಾಲಕಿಂಚಿರಾ", ಕಾಮವರ್ಧಿನಿ "ಅಪ್ಪರಾಮ ಭಕ್ತಿ", ಆಭೇರಿಯ "ನಗುಮೊಮು", ಹಿಂದೋಳದ "ನೀರಜಾಕ್ಷಿ ಕಾಮಾಕ್ಷಿ", ಕಲ್ಯಾಣಿ ರಾಗದ ಆಲಾಪನೆ ಖಂಡಗತಿಯ ತ್ರಿಶ್ರಜಾತಿ ತ್ರಿಪುಟ ತಾಳದಲ್ಲಿ ಪಲ್ಲವಿ. ಕೊನೆಯಲ್ಲಿ ಚಿಲ್ಲರೆ ಇತರ ಕೃತಿಗಳು. ವಾದನವನ್ನು ನಾನಾ ಮತ ಭೇದ ಮತ್ತು ಭಾವನೆಗಳಿಂದ ಕೂಡಿದ್ದ ಶ್ರೋತೃವೃಂದವು ನಾಲ್ಕು ಘಂಟೆಗಳ ಕಾಲ ನಿಶ್ಶಬ್ದವಾಗಿ ಕೇಳಿ ಆನಂದಿಸಿದರು.

ವಾದನದ ಶೈಲಿ

ಪರೂರ್‌ರವರ ವಾದನವು, ಬಹು ಹಿತವಾಗಿದ್ದರೂ, ನಾನಾ ವಾದಗಳಿಗೆ ಎಡೆಕೊಟ್ಟಿದೆ. ಕಾರಣ ಪಿಟೀಲು ವಾದನವನ್ನು ಚೆನ್ನಾಗಿ ಅಭ್ಯಾಸ ಮಾಡಿರುವ ಈ ದಾಕ್ಷಿಣಾತ್ಯ ವಿದ್ವಾಂಸರು, ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿಯೂ ಅಷ್ಟೇ ಪಳಗಿದ್ದಾರೆ. ಸ್ವ| ವಿಷ್ಣು ದಿಗಂಬರ್‌ರವರ ಹತ್ತಿರ ಪಿಟೀಲು ಬಾರಿಸುತ್ತಿದ್ದು, ಅವರ ಗಾಂಧರ್ವ ವಿದ್ಯಾಲಯದಲ್ಲಿ ಇದೇ ವಾದ್ಯದ ಅಧ್ಯಾಪಕರಾಗಿದ್ದ ಪರೂರ್‌ರವರಿಗೆ, ಹಿಂದೂಸ್ಥಾನಿ ಸಂಗೀತದಲ್ಲಿ ಅದರಲ್ಲಿಯೂ, ಗ್ವಾಲಿಯರ್ ಸಂಪ್ರದಾಯದ ಪೂರ್ಣ ಪರಿಚಯವಿದೆ. ಇದರಿಂದ ಇವರ ವಾದನದ ಶೈಲಿಯಲ್ಲಿ ಬಹು ವ್ಯತ್ಯಾಸವಿದೆ. ನಮ್ಮ ದಾಕ್ಷಿಣಾತ್ಯ ಪದ್ಧತಿಯ ವಾದನವನ್ನು ಕೇಳಿದವರಿಗೆ, ಇದು ತೀರ ಹೊಸದಾಗಿ ಕಾಣುವುದು. ಕೆಲವು ವೇಳೆ ದಿಗ್ಭ್ರಮೆಯಾಗುವುದೂ ಸಹಜ, ಸಂಪ್ರದಾಯ ಶರಣರಿಗಂತೂ, ಕೆಂಡದ ಮೇಲೆ ಕುಳಿತಂತಿರುವುದು. ಇವರು ಬಾರಿಸುವ ರಾಗಗಳೆಲ್ಲವೂ, ಕರ್ಣಾಟಕ ಸಂಗೀತದ ರಾಗಗಳೇ ಆದರೂ, ಬಾರಿಸುವ ಶೈಲಿ ಮಾತ್ರ ಹಿಂದೂಸ್ಥಾನಿಯದೇ. ಇದರಿಂದ ನಮ್ಮ ಶ್ರೋತೃಗಳೇ ಅಲ್ಲದೇ ಉತ್ತರಭಾರತದ ಶ್ರೋತೃಗಳು ಯಾರಾದರೂ ಕೇಳಿದಲ್ಲಿ, ಅವರೂ ನಮ್ಮವರಷ್ಟೇ ದಿಗ್ಭ್ರಮಿತರಾಗಬಹುದು.

ರಾಗಾಲಾಪನೆ

ಪರೂರ್‌ರವರ ವಾದನದ ಪ್ರತಿಕ್ರಿಯೆಗಳನ್ನು ಬರೆಯುವ ಮೊದಲು ಅವರ ವಾದನದ ಕೆಲವು ಅಂಶಗಳನ್ನು ಪರಿಶೀಲಿಸುವ. ವರ್ಣವು ಕಲ್ಯಾಣಿ ರಾಗ, ಅಟತಾಳವೆಂದು ಆಗಲೇ ಹೇಳಿದ್ದೇನೆ. ಬರೇ ವರ್ಣವನ್ನೇ ಎರಡು ಕಾಲಗಳಲ್ಲಿ ಬಾರಿಸುವುದರಿಂದ, ಅದು ಕರ್ಣಾಟಕ ಸಂಪ್ರದಾಯದ ಶೈಲಿಯಲ್ಲಿಯೇ ಇದ್ದು ಬೇರೆ ಹಿಂದೂಸ್ಥಾನಿ ಛಾಯೆಯೇನೂ ಕಾಣಲಿಲ್ಲ. ಎರಡನೆಯ ನಾಟರಾಗದ ಆಲಾಪನೆಯಿಂದ, ಶೈಲಿಯ ಬದಲಾವಣೆಯು ಕಾಣಲು ಪ್ರಾರಂಭವಾಯಿತು. ಆಲಾಪನೆಯ ಪ್ರಾರಂಭವು ಮಂದ್ರಸ್ಥಾಯಿಯಲ್ಲಿ, ನಿೀೀೀ ಪ, ನಿ ನಿ ಸಾ ಎಂದು ಪ್ರಾರಂಭವಾಯಿತು. ನಾನು ಮಿಯಾನ್ ಮಲ್ಹಾರ್ ರಾಗದ ಹಾಗಿದೆಯಲ್ಲಾ ಎಂದು ಭ್ರಮಿತನಾಗಿದ್ದೆ. ಏಕೆಂದರೆ ಮಿಯಾನ್ ಮಲ್ಹಾರ್ ರಾಗವೂ ಮಂದ್ರಸ್ಥಾಯಿಯಿಂದಲೇ ಪ್ರಾರಂಭ. ಅದರ ಮುಖ್ಯ ಅಂಶವೂ (ಪಕಡ್) ಮಂದ್ರದಲ್ಲಿಯೇ ಇದೆ. ಅದು ಈ ರೀತಿ ಪ್ರಾರಂಭವಾಗುವುದು. ಸಾ ......ನಿೀೀಧ, ನಿನಿಸಾ. ಇವೆರಡನ್ನೂ ಪರಿಶೀಲಿಸಿದಲ್ಲಿ ಪರಸ್ಪರ ಅತಿ ವ್ಯತ್ಯಾಸವು ಕಾಣುವುದಿಲ್ಲ. ಮುಂದೆ ಸ ಗ ಮಾ, ಸ್ವರಗಳನ್ನೇ ಆಡಿಸುತ್ತಾ ಪ ನಿ ಸಾ ಭಾಗದಲ್ಲಿಯೂ ಓಡಾಡಿಸುತ್ತಾ ಅವರೋಹಣದಲ್ಲಿ ಅಲ್ಲಲ್ಲಿ ಅಲ್ಪವಾಗಿ ಷಟ್‌ಶ್ರುತಿ ಋಷಭವನ್ನು ಉಪಯೋಗಮಾಡುತ್ತಿದ್ದರು. ಮಧ್ಯೆ ಮಧ್ಯಮದ ಬಳಿ ಆಲಾಪಿಸುತ್ತಿದ್ದಾಗ, ಮಧ್ಯಮವನ್ನೇ ಸ್ವಲ್ಪ ಜೋರಾಗಿ ಮೀಟಿ, ಶ್ರುತಿ ಭೇದ ಅಥವಾ ಗ್ರಹಭೇದ ಕ್ರಮದಿಂದ (Modal Shift) ಬೇರೆ ರಾಗವು ಕಾಣುವಂತೆ ಚಮತ್ಕಾರದಿಂದ ಬಾರಿಸಿದರು. ಈ ಗ್ರಹಭೇದದಿಂದ ಕಾಣುವ ರಾಗವು, ಸ್ವಲ್ಪ ಉತ್ತರಾದಿ 'ಶುದ್ಧಸಾರಂಗ್' ರಾಗದಂತಿರುವುದು. ಶೈಲಿಯ ಬದಲಾವಣೆ, ಮತ್ತು ಹೊಸ ವಾದನ ಕ್ರಮದಿಂದ ಶ್ರೋತೃಗಳಲ್ಲಿ ಬಹುಮಂದಿಗೆ, ಇದು ಯಾವ ರಾಗವೆಂದೇ ಅರಿವಾಗದೆ, ಯಾವುದೋ ಇಂಪಾದ ಒಂದು ಹೊಸ ರಾಗವೆಂದು ಭ್ರಮಿತರಾಗಿದ್ದರು. ಇನ್ನು ಕೆಲವು ಮಂದಿಗೆ ಕೃತಿಯನ್ನು ಬಾರಿಸುವವರೆಗೂ, ನಾಟ ರಾಗವು ಹೌದೋ ಅಲ್ಲವೋ ಎಂಬ ಅಲ್ಪ ಸಂದೇಹವೂ ಇದ್ದಿತು.

ಸ್ವರ ವಿಸ್ತಾರ

ಸ್ವರವಿನ್ಯಾಸ ಕ್ರಮವೂ ಹಾಗೆಯೇ, ನಮ್ಮಲ್ಲಿ ರೂಢಿಯಲ್ಲಿರುವ ಕ್ರಮದಿಂದ ಬೇರೆಯಾಗಿದ್ದಿತು. ಅದನ್ನು ಬರೆದು ತೋರಿಸಲು ಸಾಧ್ಯವಿಲ್ಲ. ಉದಾಹರಣೆಗೆ, ರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳಲ್ಲಿ, ವಿ.ಜಿ. ಜೋಗ್, ಶ್ರೀಧರ್ ಪಾರ್ಸಿಕರ್ ಇವರುಗಳು ಬೋಲ್‌ತಾನ್‌ಗಳನ್ನು ಬಾರಿಸುವುದನ್ನು ಕೇಳಿದವರಿಗೆ, ಇವರ ಸ್ವರ ವಿನ್ಯಾಸ ಕ್ರಮದ ಅನುಭವವು ಕಾಣುವುದು. ಇನ್ನು ಕೆಲವೆಡೆಗಳಲ್ಲಿ ಪಾಶ್ಚಾತ್ಯ ಪಿಟೀಲುಕಾರರ ವಾದನದ ಶೈಲಿಯಂತೆಯೂ ಬರುತ್ತಿದ್ದಿತು. ಆದರೆ ಪೂರ್ಣವಾಗಿಯೂ, ನಾದ ಮತ್ತು ಲಯ ಬದ್ಧವಾಗಿದ್ದುದರಿಂದ ಶ್ರೋತೃಗಳು ಹರ್ಷಿತರಾದರೆಂದು ಹೇಳಬಹುದು. ಈ ಸ್ವರ ವಿನ್ಯಾಸ

ಕ್ರಮವು ಸರಸ್ವತಿ ಮನೋಹರಿ ಮತ್ತು ನಳಿನಕಾಂತಿ ರಾಗಗಳಲ್ಲಿ ಹೆಚ್ಚಾಗಿ ಕಂಡುಬಂದಿತು. ಅನಂತರ ಇವರು ದೀರ್ಘವಾಗಿ ಆಲಾಪಿಸಿದ ರಾಗ, ಪಂತುವರಾಳಿ ಎಂದು ಕರೆಯಲ್ಪಡುವ ಕಾಮವರ್ಧಿನಿ. ಈ ಆಲಾಪನೆಯನ್ನೂ ನೂತನ ಶೈಲಿಯಲ್ಲಿಯೇ ಮಾಡಿದರು. ಇದು ಅವರಿಗೆ ಬಹಳ ಸೌಕರ್ಯವಾಗಿದ್ದಿರಬಹುದು. ಏಕೆಂದರೆ ನಮ್ಮ ಕಾಮವರ್ಧಿನಿ ರಾಗಕ್ಕೂ, ಹಿಂದೂಸ್ಥಾನಿಯ ಪೂರಿಯಾ ಧನಾಶ್ರೀ ರಾಗಕ್ಕೂ ಶೈಲಿಯಲ್ಲಿ ವಿನಾ ಬೇರೆ ವ್ಯತ್ಯಾಸವೇನಿಲ್ಲ. ಇದರಲ್ಲಿ ರಾಗಾಲಾಪನೆ ಮಾಡಿ "ಅಪ್ಪ ರಾಮ ಭಕ್ತಿ" ಕೃತಿಯನ್ನು ಬಾರಿಸಿದರು. ಮುಂದಿನದು ಸ್ವಲ್ಪ ಆಲಾಪನಾನಂತರ "ನಗು ಮೋಮು" ಕೃತಿ. ಇದರಲ್ಲಿಯೂ ಹಾಗೆಯೇ, ಭೀಮ್ ಪಲಾಸ್ ರಾಗವನ್ನು ಆಲಾಪಿಸಿದರು. ವಸ್ತುತಃ ನಮ್ಮ ಅಭೇರಿ ರಾಗಕ್ಕೆ ಹಿಂದೂಸ್ಥಾನಿಯ ಭೀಮ್ ಪಲಾಸ್ ರಾಗಕ್ಕೂ ಶೈಲಿಯ ವಿನಾ ಬೇರೆ ವ್ಯತ್ಯಾಸವಿಲ್ಲ. ಅನಂತರ ಹಿಂದೋಳದ ಆಲಾಪನೆ. ಎಲ್ಲರೂ ಬಲ್ಲಂತೆ ನಮ್ಮ ಹಿಂದೋಳಕ್ಕೂ ಹಿಂದೂಸ್ಥಾನಿಯ ಮಾಲ್‌ಕೌಂಸ್ ರಾಗಕ್ಕೂ ಶೈಲಿಯ ವಿನಾ ಬೇರೆ ವ್ಯತ್ಯಾಸವಿಲ್ಲ. ಆದ್ದರಿಂದ ಪೂರ್ಣವಾಗಿ ಮಾಲ್‌ಕೌಂಸ್ ರಾಗವನ್ನೇ ಆಲಾಪಿಸಿದರೆಂದು ಹೇಳಬೇಕಾಗಿಲ್ಲ. ಇದರಲ್ಲಿಯೂ, ಮಧ್ಯಮದ ಬಳಿ ಆಲಾಪಿಸುತ್ತಾ ಶ್ರುತಿಭೇದ ಮಾಡಿದಲ್ಲಿ ಉದಯರವಿಚಂದ್ರಿಕಾ ರಾಗವಾಗುವುದು. ಈ ಅಪೂರ್ವ ಅನುಭವವನ್ನು ಶ್ರೋತೃಗಳು ಪಡೆದರು. ಶ್ರುತಿಭೇದ ಕ್ರಮದಲ್ಲಿ ಬೇರೆ ರಾಗವು ಕಾಣುವುದು ನಮ್ಮ ಕಿವಿಯ ಒಂದು ಭ್ರಮೆ. ಏಕೆಂದರೆ ಬೇರೆ ಶ್ರುತಿ ಮತ್ತು ರಾಗಗಳು ಗೋಚರವಾಗುತ್ತಿದ್ದರೂ ವಾಸ್ತವವಾಗಿ, ಅದು ಮೊದಲಿನ ರಾಗವೇ. ಹಿಂದೆ ತಂಬೂರಿ ಮಿಾಟುವವರು ಸ್ವಲ್ಪ ಜೋರಾಗಿ ಮಿಾಟದಲ್ಲಿ ಈ ಭ್ರಮೆಯು ಹಾರಿ ಹಿಂದಿನ ರಾಗವೇ ಕಾಣುವುದು.

ಹಿಂದೋಳ ರಾಗದಲ್ಲಿ "ನೀರಜಾಕ್ಷಿ ಕಾಮಾಕ್ಷಿ" ಕೃತಿಯಾದ ನಂತರ, ಸಭಿಕರು ಕೆಲವರು "ಕರ್ಣಾಟಕ" ಸಂಪ್ರದಾಯದ ರಾಗವನ್ನು ಬಾರಿಸಬೇಕೆಂದು ಕೇಳಿದ್ದರ ಮೇಲೆ, ಕಲ್ಯಾಣಿ ರಾಗವನ್ನು ಪೂರ್ಣವಾಗಿ ಕರ್ಣಾಟಕ ಶೈಲಿಯಲ್ಲೇ ಬಾರಿಸಿ, ಅದರಲ್ಲಿ ಪಲ್ಲವಿಯನ್ನು ಬಹುಬಗಿಯಾಗಿ ಬಾರಿಸಿದರು. ಇದಾದನಂತರ ಹಿಂದೂಸ್ಥಾನಿ ಭೈರವಿಯ ಆಲಾಪನೆ. ಹಿಂದೂಸ್ಥಾನಿ ಪದ್ಧತಿಯ ಪೂರ್ಣ ಪರಿಚಯುವಿರುವವರು ಬಾರಿಸಿದಮೇಲೆ ಹೇಗಿದ್ದಿತೆಂಬುದನ್ನು ವಿವರಿಸಬೇಕಾಗಿಲ್ಲ. ಅಂತೂ ಈ ಕಚೇಯು ಸರ್ವಜನಾದರಣೀಯ ವಾಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಈಗ ಇವರ ವಾದನವು ಶ್ರೋತೃಗಳ ಮೇಲೆ ಮಾಡಿದ ಪ್ರತಿಕ್ರಿಯೆಗಳನ್ನು ಬರೆಯಬೇಕಾಗಿದೆ. ಮೊದಲು ಇದಕ್ಕೆ ವಿರುದ್ಧವಾಗಿ ಬಂದ ಅಭಿಪ್ರಾಯ ವನ್ನು ಬರೆಯುತ್ತೇನೆ.

ವಾದನದ ಪ್ರತಿಕ್ರಿಯೆ

ಪರೂರ್‌ರವರ ವಾದನಕ್ಕೆ ಸ್ವಲ್ಪ ಬೇಸರಪಟ್ಟವರು, ಸಂಗೀತದಲ್ಲಿ ಸಾಂಪ್ರದಾಯಿಕತೆ ಯನ್ನು ಅಪೇಕ್ಷಿಸುವವರೆಂದು ಹೇಳಬಹುದು. ಅವರ ವಾದವಿಷ್ಟೆ : "ಪರೂರ್‌ರವರ

ವಾದನದಲ್ಲಿ, ಶ್ರುತಿ, ನಾದ ಮತ್ತು ಲಯಗಳಿವೆ. ಸಾಧನಬಲವೂ ಕಾಣುವುದು, ನಿಜ. ಆದರೆ ಭಾವವಿಲ್ಲ. ಇದರಿಂದ ಅವರು ಬಾರಿಸುವುದೆಲ್ಲಾ ಅರ್ಥರಹಿತವೆಂದು ಹೇಳುವುದಿಲ್ಲ. ಆದರೆ ಅದರಲ್ಲಿ ಒಂದೆರಡು ಅಂಶಗಳನ್ನು ನಾವು ಒಪ್ಪಲಾಗುವುದಿಲ್ಲ. ಅವರ ರಾಗಾಲಾಪನೆಗೂ ಬಾರಿಸುವ ಕೃತಿಗೂ, ಸಾಮರಸ್ಯವಿಲ್ಲ. ರಾಗಾಲಾಪನೆಯು ಎಷ್ಟೇ ಚತುರತೆಯಿಂದ ಕೂಡಿದ್ದರೂ, ಕೃತಿಗಳು ಆಯಾ ರಾಗದ ಭಾವಪೂರಿತವಾಗಿರುವುದರಿಂದ ಆಲಾಪನೆಯಲ್ಲಿಯೂ, ಅದೇ ಭಾವವು ಬರದಿದ್ದಲ್ಲಿ ರಸಭಂಗವಾಗುವುದು.'' ಇದು ಸಂಪ್ರದಾಯಜ್ಞರ ವಾದ.

ಇದಕ್ಕೆ ವಿರುದ್ಧವಾಗಿ ''ಪರೂರ್‌ರವರ ವಾದನದಲ್ಲಿ ತಪ್ಪೇನೂ ಇಲ್ಲ. ಅದು ಕರ್ಣಾಟಕ ಸಂಗೀತದಲ್ಲಿಯೇ ಒಂದು ಹೊಸ ಮಾರ್ಗ. ಶೈಲಿಯ ಬದಲಾವಣೆ ಎಂದರೆ, ಮಹಾಲಿಂಗಂರವರು ಕೊಳಲಿನಲ್ಲಿ ಮಾಡುವ ಸರ್ಕಸ್ ಎಲ್ಲಾ ಇಂಪೆ? ಅದಕ್ಕೆ ಜನ ತಲೆ ತೂಗುವುದಿಲ್ಲವೇ? ಭಾವದ ಬದಲಾವಣೆ ಎಂದರೆ, ಚಿತ್ತೂರ್ ಸುಬ್ರಹ್ಮಣ್ಯಂ ಪಿಳ್ಳೆಯವರು ಹಿಂದೋಳದಲ್ಲಿ ಗಮಧ್ನಿಸ – ಸನಿಧಮ – ಪ್ರಯೋಗವನ್ನು ಮಾಡುವುದಿಲ್ಲವೇ? ಅದೆಲ್ಲಾ ಭಾವ ಪೂರ್ಣವಾಗಿರುವುದೇ, ಅವರದೊಂದು ಹೊಸ ಮಾರ್ಗ, ಅದರಲ್ಲೇ ಒಂದು ಹೊಸ ಭಾವವಿದೆ ಮತ್ತು ಇಂಪಾಗಿದೆ'' ಇದೊಂದು ವಾದ, ಇವೆರಡರಲ್ಲಿಯೂ ತಪ್ಪಿಲ್ಲ. ಪರೂರ್‌ರವರು ತಮ್ಮ ಹೊಸ ಪ್ರಯೋಗವನ್ನು ಪ್ರಾರಂಭ ಮಾಡಿದಾಗಲೇ ಈ ಬಗೆಯ ಪ್ರತಿಕ್ರಿಯೆಗಳಾಗುವುದೆಂಬುದನ್ನು ಬಲ್ಲರು. ಅವರೊಡನೆ ಈ ವಿಷಯವನ್ನು ಚರ್ಚಿಸುವವರೊಡನೆ ಮಾತನಾಡಿ ಸಮಾಧಾನವನ್ನು ಕೊಡುವರು. ಈಗ ಈ ಎರಡು ಪ್ರತಿಕ್ರಿಯೆಗಳನ್ನು ತುಲನೆ ಮಾಡಿ ನೋಡುವ.

ವಿಮರ್ಶೆ

ಪರೂರ್‌ರವರು ದಾಕ್ಷಿಣಾತ್ಯ ವಿದ್ವಾಂಸರಾದರೂ, ಭಾರತದ ನಾನಾ ಭಾಗಗಳಲ್ಲಿಯೂ, ಆಫ್ರಿಕ ಮತ್ತು ಆಫ್ಘಾನಿಸ್ಥಾನ ಮುಂತಾದೆಡೆಗಳಲ್ಲಿ ಸಂಚಾರ ಮಾಡಿರುವುದರಿಂದ, ಅವರಿಗೆ, ಸಂಕುಚಿತ ಮನೋಭಾವವಿಲ್ಲ. ಕರ್ಣಾಟಕ ಮತ್ತು ಹಿಂದೂಸ್ಥಾನಿ ಪದ್ಧತಿಗಳ, ಪರಸ್ಪರ ಉತ್ತಮಾಂಶಗಳನ್ನು ತೆಗೆದುಕೊಂಡು ಕಲಾಭಿವೃದ್ಧಿಯನ್ನು ಮಾಡಬೇಕೆಂದು ಹೇಳುವರು. ಪರೂರ್‌ರವರು, ಕರ್ಣಾಟಕ, ಹಿಂದೂಸ್ಥಾನಿ ಪದ್ಧತಿಗಳೆಂದು ಬೇರೆ ಬೇರೆ ಕರೆಯುವುದಿಲ್ಲ. 'ಭಾರತೀಯ ಸಂಗೀತ'ವೆಂದು ಹೇಳುತ್ತಾರೆ. ಸಂಪ್ರದಾಯಕ್ಕೆ ಬಹು ಪ್ರಾಮುಖ್ಯತೆ ಇರುವ ಸಂಗೀತ ಪ್ರಪಂಚದಲ್ಲಿ ಈ ಬಗೆಯ ಭಾವನೆಗಳು ಕ್ರಾಂತಿಕಾರಕವಾಗಿ ಕಾಣಬಹುದು. ಈ ಬಗೆಯ ಭಾವನೆಗಳನ್ನು ವ್ಯಕ್ತಪಡಿಸಿದ್ದಕ್ಕೆ, ಸ್ವ । ಭಾತ್ಖಂಡೆಯವರೂ, ವಿಶ್ವಕವಿ ರವೀಂದ್ರರೂ, ಅನೇಕ ಪಂಡಿತ ಮತ್ತು ಉಸ್ತಾದರ ಆಗ್ರಹಕ್ಕೆ ಒಳಗಾಗಬೇಕಾಯಿತು. Leopald Stokowski ಯವರು, ತಮ್ಮ ಭೂಪ್ರದಕ್ಷಿಣೆಯನಂತರ, ಪೌರ್ವಾತ್ಯ ರಾಷ್ಟ್ರಗಳ ಅನೇಕ ಉತ್ತಮಾಂಶಗಳನ್ನು

ಪಾಶ್ಚಾತ್ಯ ಸಂಗೀತಕ್ಕೆ ಸೇರಿಸಿದ್ದರಿಂದ, ಅಲ್ಲಿಯ ಸಂಪ್ರದಾಯ ಶರಣರ, ಆಗ್ರಹಕ್ಕೆ ಗುರಿಯಾಗಬೇಕಾಯಿತು. ಹೊಸ ಪದ್ಧತಿಗಳು ಬರುವಾಗ, ಹೀಗಾಗುವುದು ಸಹಜವೇ.

ಪರೂರ್‌ರವರ ವಾದನವನ್ನು ಒಂದು ಉನ್ನತ ಮಟ್ಟದಲ್ಲಿ ಪರಿಶೀಲಿಸಿದಲ್ಲಿ ತಪ್ಪೇನೂ ಕಾಣುವುದಿಲ್ಲ. ಅವರ ವಾದನವು ಶಾಸ್ತ್ರ ವಿರುದ್ಧವೆಂದು ಅಭಿಪ್ರಾಯಪಡುವವರು ಮೊದಲು, ಪಿಟೀಲು ವಾದ್ಯವೇ ನಮ್ಮ ಭಾರತೀಯ ಸಂಪ್ರದಾಯಕ್ಕೆ ಹೊರಗಿನದೆಂಬುದನ್ನು ಗಮನಿಸಬೇಕು. ಅದು ಈ ನೂರು ನೂರೈವತ್ತು ವರ್ಷಗಳಿಂದ ಹೇಗೋ ಕರ್ಣಾಟಕ ಸಂಗೀತ ಪ್ರಪಂಚವನ್ನು ಹೊಕ್ಕು ಇಲ್ಲಿಯೇ ಬೀಡುಬಿಟ್ಟಿದೆ. ರಾಗಾಲಾಪನೆಯೂ ಹಾಗೆಯೇ. ಕರ್ಣಾಟಕ ರಾಗಗಳೇ, ಬಾರಿಸುವ ಶೈಲಿ ಹಿಂದೂಸ್ಥಾನಿ ಎಂದ ಮಾತ್ರಕ್ಕೆ ಅದು ಬೇರೆ ಬಗೆಯದೆಂದು ಹೇಳಲಾಗುವುದಿಲ್ಲ. ಭಾರತೀಯ ಸಂಗೀತದ ಗಮಕಗಳಲ್ಲಿ ಕೆಲವನ್ನು ಅವರು ಹೆಚ್ಚಾಗಿ ಉಪಯೋಗಿಸುವರು. ಇನ್ನು ಕೆಲವು ನಮ್ಮ ಕಡೆ ಹೆಚ್ಚಾಗಿ ಉಪಯೋಗದಲ್ಲಿವೆ. ಭಾರತೀಯ ಸಂಗೀತದ ಇತಿಹಾಸವನ್ನು ಪರಿಶೀಲಿಸಿದಲ್ಲಿ ಲಕ್ಷ್ಯಮಾರ್ಗವೂ, ಅದನ್ನನುಸರಿಸಿ ಲಕ್ಷಣವು ಆಗಾಗ್ಗೆ ಬದಲಾವಣೆಯಾಗುತ್ತಿರುವುದನ್ನು ಕಾಣಬಹುದು. ಈಗ್ಗೆ ನೂರು ನೂರೈವತ್ತು ವರ್ಷಗಳಿಂದೀಚೆಗೆ ಎಷ್ಟೋ ಬದಲಾವಣೆಗಳಾಗಿವೆ. ಅದಕ್ಕೆ ಹಿಂದೆ ಇಂದಿನ ನೀಲಾಂಬರಿ ರಾಗವು ಹರಿಕಾಂಭೋಜಿಯ ಜನ್ಯವಾಗಿ, ಅದರ ಛಾಯೆಯನ್ನು ತಳೆದಿದ್ದಿತು. ಅಷ್ಟೇಕೆ ಅದಕ್ಕೆ ಹಿಂದೆ ಈ ಹರಿಕಾಂಭೋಜಿ, ಖರಹರಪ್ರಿಯ, ಕೀರವಾಣಿ, ಷಣ್ಮುಖಪ್ರಿಯ, ಸಿಂಹೇಂದ್ರಮಧ್ಯಮ, ಕಾಮವರ್ಧಿನಿ, ಚಕ್ರವಾಕ ಮುಂತಾದ ರಾಗಗಳೇ ಇರಲಿಲ್ಲ. ಮಹಾ ವೈದ್ಯನಾಥರು ಮಹಾ ವಿದ್ವಾಂಸರಾದ ಪೆರಿಯವೈತಿ, ಚಿನ್ನ ವೈತಿಗಳನ್ನು, ಚಕ್ರವಾಕರಾಗವನ್ನು ಹಾಡಿ ಬೆರಗುಗೊಳಿಸಿ ಸೋಲಿಸಿದರು. ಆದ್ದರಿಂದ ಇವರುಗಳ ವಾದದಲ್ಲಿ ಅಂತಹ ಅಶಾಸ್ತ್ರೀಯ ಅಂಶಗಳೇನೂ ಇಲ್ಲ. ಭಾರತೀಯ ಸಂಗೀತದಲ್ಲಿಯೇ ಇದ್ದ ಅಂಶಗಳ ಒಂದು ಹೊಸ ಪ್ರಯೋಗ ಅಷ್ಟೆ.

ಪರೂರ್‌ರವರ ಪದ್ಧತಿಯು ಹಿಂದೂಸ್ಥಾನಿ ಮಿಶ್ರಿತವೆಂದು ಹೇಳುವವರಿಗಿಷ್ಟನ್ನು ಹೇಳಬಹುದು. ಈ ಎರಡು ಪದ್ಧತಿಗಳೂ ಒಂದೇ ಪದ್ಧತಿಯ ವಿವಿಧ ಪ್ರಯೋಗಗಳು. ಈಗ ಒಂದು ಶತಮಾನದ ಹಿಂದಿನವರೆಗೂ, ಎರಡು ಪದ್ಧತಿಗಳಲ್ಲಿಯೂ, ಪರಸ್ಪರ ಸೌಹಾರ್ದವು ಇಂದಿಗಿಂತ ಹೆಚ್ಚಾಗಿಯೇ ಇದ್ದವು. ಈವತ್ತು ನಾವು ಕೇಳಿ ಆನಂದಿಸಿ ತಲೆತೂಗುವ, ಬೇಹಾಗ್, ಝುಂಝೂಟಿ, ದರ್ಬಾರ್, ಶಹನಾ, ಸುರುಟಿ, ಹಮೀರ್, ಹುಸೇನಿ, ಕಾಪಿ, ಕಮಾಚ್, ಮುಂತಾದ ರಾಗಗಳೆಲ್ಲವು ನಾವು ಹಿಂದೂಸ್ಥಾನಿ ಪದ್ಧತಿಯಿಂದ ಪಡೆದವು. ಅವರೂ ಈಚೀಚೆಗೆ ನಮ್ಮಿಂದ ಹಂಸಧ್ವನಿ, ನಾರಾಯಣಿ, ಸಿಂಹೇಂದ್ರಮಧ್ಯಮ, ಜನರಂಜನಿ ಮುಂತಾದ ರಾಗಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಇನ್ನು ತೆಗೆದುಕೊಳ್ಳುತ್ತಲೂ ಇದ್ದಾರೆ. ಇದರಲ್ಲಿ ತಪ್ಪೇನೂ ಇಲ್ಲ. ಸಂಗೀತವು ವೃದ್ಧಿಯಾಗುತ್ತಿರುವ ಕಲೆ. ಕಾಲಾನುಗುಣವಾಗಿ, ಉತ್ತಮವಾದ ಹೊಸ ಅಂಶಗಳನ್ನು ತೆಗೆದುಕೊಂಡು ವೃದ್ಧಿಯಾಗುತ್ತದೆ.

ಇವರ ವಾದನದಿಂದ ರಾಗಭಾವವು ಕೆಟ್ಟತೆಂದು ಹೇಳುವವರಿಗಿಷ್ಟೆ. ಒಂದು ರಾಗಕ್ಕೆ ಒಂದೇ ಭಾವವೆಂದು ಹೇಳಲಾಗುವುದಿಲ್ಲ. ವಿವಿಧ ಭಾವಗಳನ್ನು ತೋರಿಸುವುದು ಸಂಗೀತಗಾರನ ಪ್ರತಿಭೆಯನ್ನವಲಂಬಿಸಿರುತ್ತದೆ. ಹಿಂದೂಸ್ಥಾನಿಯ, ಪೂರಿಯ, ಸೋಹನಿ, ಮಾರುವ ರಾಗಗಳಿಗೆ ಒಂದೇ ಆರೋಹಣ ಅವರೋಹಣಗಳು. ಆದರೆ ಪ್ರಯೋಗದ ಬದಲಾವಣೆಯಿಂದ ಒಂದಕ್ಕೊಂದು ವ್ಯತ್ಯಾಸ ಮತ್ತು ಬೇರೆ ಬೇರೆ ಭಾವಗಳು ಪ್ರದರ್ಶಿತವಾಗುವುದು. ಹಾಗೆಯೇ ನಮ್ಮ ರಾಗಗಳಿಗೂ ನಾವು ಒಂದೇ ಸ್ವರೂಪವನ್ನೇ ನೋಡಿ ಅಭ್ಯಾಸವಾಗಿ, ಬೇರೆ ರೂಪವಿರಬಹುದೆಂಬುದನ್ನೇ ಮರೆತಿದ್ದೇವೆ. ಪರೂರ್‌ರವರ ನೂತನ ಪ್ರಯೋಗದಿಂದ, ನಮಗೆ ಇದರ ಅರಿವಾಗಿದೆ. ಪರೂರ್‌ರವರ ಎರಡು ಪದ್ಧತಿಗಳ ಉತ್ತಮಾಂಶಗಳನ್ನು ತೆಗೆದುಕೊಂಡು ಹೊಸ ಪ್ರಯೋಗ ಮಾಡಿದ್ದಾರೆ, ನಮ್ಮಲ್ಲಿ ಹಿಂದೆ ಇದ್ದು ಈಗ ಕೈಬಿಟ್ಟಿರುವ ವಾದಿ-ಸಂವಾದಿ ಪದ್ಧತಿ, ಹಿಂದೂಸ್ಥಾನಿಯ ವಾದದಷ್ಟೆ, ಕರ್ಣಾಟಕದ ಲಯ ಇವುಗಳ ಸಂಮಿಶ್ರಣವೇ ಇವರ ಹೊಸ ಪ್ರಯೋಗ. ಈ ಸಂದರ್ಭದಲ್ಲಿ ಸ್ವ। ಭಾತ್ಕಂಡೆಯವರ ಈ ವಾಕ್ಯಗಳು ನೆನಪಿಗೆ ಬರುತ್ತವೆ : "In my opinion a happy fusion between the two great music systems of the country is most desirable, when it comes on, the Hindustani system will be considerably enriched. Hundreds of beautiful Ragas can be introduced here into our sysem by our leading living experts. The southern system again will have an opportunity of adopting our northern graces in the Vadi, Somvadi rules and thereby of enriching it's music much more interesting. All this however will be the province of Bhavi Sangeeth ...." ಬಾತ್ಕಂಡೆಯವರು ಹೇಳುವ ಭಾವೀ ಸಂಗೀತವೇ ಪರೂರ್‌ರವರೆಂದು ಹೇಳಬಹುದು. ಆದರೆ ಅವರ ನೂತನ ಪ್ರಯೋಗವನ್ನು ಸ್ವಲ್ಪ ಸ್ವಲ್ಪವಾಗಿ, ಶ್ರೋತೃಗಳಿಗೆ ಗ್ರಾಹ್ಯವಾಗುವಂತೆ ಮಾಡಿಕೊಡಬೇಕು. ಎರಡು ಪದ್ಧತಿಗಳನ್ನು ಶ್ರೋತೃಗಳು ಸುಲಭವಾಗಿ ಹೋಲಿಸಲನುಕೂಲವಾಗುವಂತೆ ಕಾರ್ಯಕ್ರಮಗಳಲ್ಲಿ ಅರ್ಧ ಭಾಗದಷ್ಟಾದರೂ ಕರ್ಣಾಟಕ ಸಂಪ್ರದಾಯದಲ್ಲಿಯೂ ಬಾರಿಸಬೇಕು. ಎರಡು ಪದ್ಧತಿಗಳಿಗೂ ಸಾಮರಸ್ಯವಿರುವ ರಾಗಗಳೇ ಅಲ್ಲದೆ, ಪೂರ್ಣವಾಗಿ ಕರ್ಣಾಟಕ ಶೈಲಿಯವೇ ಆದ, ಆನಂದ ಭೈರವಿ, ಯದುಕುಲ ಕಾಂಭೋಜಿ, ಆಹಿರಿ, ನಾಟಕುರಂಜಿ, ನೀಲಾಂಬರಿ ಮುಂತಾದ ರಾಗಗಳನ್ನೂ ಹೊಸ ಪ್ರಯೋಗಗದಿಂದ ಬಾರಿಸಲು ಸಾಧ್ಯವೇ ನೋಡಬೇಕು. ಅಂತೂ ಪರೂರ್ ಸುಂದರಂ ಅಯ್ಯರ್‌ರವರು ಕರ್ಣಾಟಕ ಸಂಗೀತ ಪ್ರಪಂಚದಲ್ಲಿ ಒಂದು ಕ್ರಾಂತಿಯನ್ನೆಬ್ಬಿಸಿರುವರೆಂಬುದರಲ್ಲಿ ಸಂದೇಹವಿಲ್ಲ. ★ ★ ★ ★

ಜನಪ್ರಗತಿ, 1954

18. ಸಂಕೋಚ ಪ್ರವೃತ್ತಿಯ ಪಾಪಾ ವೆಂಕಟರಾಮಯ್ಯ ಸರಸಿ, ಹಸನ್ಮುಖಿ ಗುರುರಾಜಪ್ಪ

ಮೇ ತಿಂಗಳಲ್ಲಿ ಇಬ್ಬರು ಹಿರಿಯ ಪಿಟೀಲು ವಾದಕರು ನಿಧನರಾದರು. ಎರಡು ತಿಂಗಳ ಹಿಂದೆ ರಾಷ್ಟ್ರೀಯ ಪ್ರಶಸ್ತಿ ತೆಗೆದುಕೊಳ್ಳುವ ಸ್ವಲ್ಪ ದಿನಗಳ ಮುಂಚೆಯೇ ಇನ್ನೂ ಒಬ್ಬ ಹಿರಿಯ ಪಿಟೀಲು ವಿದ್ವಾಂಸರು ನಿಧನರಾದರು. ಇದರಿಂದ ಹಳೆಯ ಅಂದರೆ ಈ ಶತಮಾನದ ಮೊದಲೆರಡು ದಶಕಗಳಲ್ಲಿದ್ದ ಸಂಗೀತ ಹಾಗೂ ಕಲಾವಿದರಿಗೂ ಮತ್ತು ಈ ಪೀಳಿಗೆಗೂ ಇದ್ದ ಒಂದು ಸಂಪರ್ಕ ಕಡಿದು ಹೋದಂತಾಯಿತು.

ಇವರಲ್ಲಿ ಮಾರ್ಚಿ ತಿಂಗಳಲ್ಲಿ ನಿಧನರಾದ ಮಧುರಾ ಸುಬ್ರಹ್ಮಣ್ಯಯ್ಯನವರು ತ್ಯಾಗರಾಜರ ಕುಟುಂಬದ ಪರಂಪರೆಗೆ ಸೇರಿದವರು. ಉತ್ತಮ ಶಿಕ್ಷಕರೆಂದು ಮಾನಿತರಾಗಿದ್ದರು. ಆದರೆ ಮೇನಲ್ಲಿ ನಿಧನರಾದ ಇಬ್ಬರೂ ಪಕ್ಕಾ ಪಿಟೀಲು ಪ್ರಾಕಾರಕ್ಕೇ ಸೇರಿದವರು. ಇವರಲ್ಲಿ ಮದರಾಸಿನ ಕೆ.ಎಸ್. (ಪಾಪಾ) ವೆಂಕಟರಾಮಯ್ಯನವರು. ದಕ್ಷಿಣ ಭಾರತಾದ್ಯಂತ ಮಾನಿತರಾಗಿದ್ದವರು. ಟಿ. ಗುರುರಾಜಪ್ಪನವರು ರಾಜ್ಯದ ಮಟ್ಟಿಗೆ ಹೆಚ್ಚು ಪರಿಚಿತರಾಗಿದ್ದರೆನ್ನಬಹುದು.

ಮುಖೇಡಿ ಸ್ವಭಾವ

"ಪಾಪಾ" ವೆಂಕಟರಾಮಯ್ಯನವರ ಪ್ರಸ್ತಾಪ ಬಂದಾಗಲೆಲ್ಲ ನಮ್ಮಲ್ಲೇ ಇದ್ದ ಇನ್ನೊಬ್ಬ ಪಿಟೀಲು ವಿದ್ವಾಂಸರ ನೆನಪು ಬರುತ್ತದೆ. ತಿರುಮಕೂಡ್ಲು ನರಸೀಪುರದ ವೆಂಕಟಸುಬ್ಬಯ್ಯನವರು ಎಂತಹ ಪ್ರತಿಭಾವಂತ ಪಿಟೀಲು ವಾದಕರೆಂಬುದು ಅವರು ವಾದ್ಯ ನುಡಿಸುವುದನ್ನು ಕೇಳಿದ್ದ ಸ್ವಲ್ಪಮಂದಿಗೆ ಮಾತ್ರ ತಿಳಿದ ವಿಷಯ. ಹಾಗೆ ಕೇಳಿದ್ದವರ ಸಂಖ್ಯೆಯೂ ಮಿತವೇ. ಏಕೆಂದರೆ ಸ್ವಲ್ಪ ದೊಡ್ಡ ಸಭೆ ಎಂದೊಡನೆ ವೆಂಕಟಸುಬ್ಬಯ್ಯನವರ ಕೈಯೇ ಓಡುತ್ತಿರಲಿಲ್ಲ. ಅಂಥ ಸನ್ನಿವೇಶಗಳಿಗೂ ಸಿಕ್ಕಿಹಾಕಿಕೊಳ್ಳುತ್ತಿರಲಿಲ್ಲ. ಜಾರಿಕೊಂಡುಬಿಡುತ್ತಿದ್ದರು. ಪಾಪಾರವರೂ ಹಾಗೆಯೇ.

ಅವರ ಪಿಟೀಲು ವಾದನದ ಸುನಾದ, ಅಚ್ಚುಕಟ್ಟು ಇವುಗಳನ್ನೆಲ್ಲಾ ಕೇಳಿ ಸಂತೋಷಪಡಲು ಅನೇಕರು ಅದರಲ್ಲಿಯೂ ವಿದ್ವಾಂಸರು ಬಹು ಆಸೆ ಪಡುತ್ತಿದ್ದರು. ಹಾಗೆ ಹೇಳಿಕೊಂಡು ಹೋದರೆ ಸಾಕು. ಪಾಪಾ ಅವರು ಏನೋ ನೆವ ಹೇಳಿ ಜಾರಿಕೊಳ್ಳಲು ಯತ್ನಿಸುತ್ತಿದ್ದರು. ಬಲವಂತಕ್ಕೆ ನುಡಿಸಬೇಕಾದಾಗ ಕಚೇರಿಯಲ್ಲಿ ಬರುತ್ತಿದ್ದ ಅಚ್ಚುಕಟ್ಟು ಬರದೆ ಎಲ್ಲೆಲ್ಲೋ ತೂಗಾಡಿಕೊಂಡು ಹೋಗುವಂತೆ ಭಾಸವಾಗುತ್ತಿದ್ದಿತು.

“ಎಂಥ ಜ್ಞಾನ, ಎಂಥ ಶುದ್ಧವಾದ ಕೈ. ಅದಕ್ಕೆ ತಕ್ಕ ಹಾಗೆ ಪಾಪನಿಗೆ ದೇವರು ಧೈರ್ಯ ಕೊಡಲಿಲ್ಲವಲ್ಲ; ಅದೇನಾದರೂ ಕೊಟ್ಟಿದ್ದರೆ ನಾವೆಲ್ಲಾ ಹಿಂದೆ ಬೀಳಬೇಕಾಗಿತ್ತೋ ಏನೋ!” ಎಂದು ಒಮ್ಮೆ ಚೌಡಯ್ಯನವರು ವೆಂಕಟರಾಮಯ್ಯನವರ ಬಗೆಗೆ ಹೇಳಿದ್ದರು. ಇದೇ ರೀತಿ ಹಿಂದಿನ ಪೀಳಿಗೆಯ ವಿದ್ವಾಂಸರಲ್ಲಿ ಅನೇಕರು ಪೇಚಾಡಿದ್ದಾರೆ. ಪಾಪಾ ವೆಂಕಟರಾಮಯ್ಯನವರ ಈ ಅಧೈರ್ಯದ ಬಗೆಗೆ ಒಂದು ಒಳ್ಳೆ ಸಂದರ್ಭ ನೆನಪಿಗೆ ಬರುತ್ತದೆ.

ಸುಮಾರು 36-37 ವರ್ಷಗಳ ಹಿಂದಿನ ಮಾತು. ಬೆಂಗಳೂರು ಗಾಯನ ಸಮಾಜದಲ್ಲಿ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರ ಸಂಗೀತ. ಪಾಪಾ ವೆಂಕಟರಾಮಯ್ಯನವರ ಪಿಟೀಲು ಮತ್ತು ದಕ್ಷಿಣಾಮೂರ್ತಿ ಪಿಳ್ಳೆಯವರ ಮೃದಂಗ. ಕಚೇರಿಯ ಬೆಳಿಗ್ಗೆ ಪಿಟೀಲು ಮತ್ತು ಮೃದಂಗದವರು ಬೆಂಗಳೂರಿನಲ್ಲಿ ಬಂದಿಳಿದರು. ಅಯ್ಯಂಗಾರ್ಯರು ಬಂದಿರಲಿಲ್ಲ. ಹೊತ್ತಾದ ಮೇಲೆ ಸಮಾಚಾರ ಬಂತು - ದೇಹಾಲಸ್ಯದಿಂದ ಅವರು ಬರಲಾಗುವುದಿಲ್ಲವೆಂದು.

‘ಹಣ ಹಿಂತಿರುಗಿಸುವೆ’

ವ್ಯವಸ್ಥಾಪಕರಿಗೆ ಒಳ್ಳೆ ಪೀಕಲಾಟ, ದೊಡ್ಡ ಕಚೇರಿಯೊಂದು ಆಗದೆ ಹೋಯಿತಲ್ಲ ಎಂದು. ಯಾರೋ ಸಲಹೆ ಮಾಡಿದರು. ಪಾಪಾ ಇದಾರಲ್ಲ. ಅವರ ಪಿಟೀಲಿನದೆ ತನಿ ಕಚೇರಿ ಏಕೆ ಇಡಬಾರದು? ಅದೂ ಒಳ್ಳೆಯ ಸಲಹೆಯೇ. ವೆಂಕಟರಾಮಯ್ಯನವರ ಬಳಿ ಹೋಗಿ ನಡೆದಿರುವ ಸಂದರ್ಭವನ್ನೂ ತನಿ ಕಚೇರಿಯ ವಿಷಯವನ್ನೂ ಪ್ರಸ್ತಾಪಿಸಿದರು. ಅದನ್ನು ಕೇಳಿದ ಕೂಡಲೆ ವೆಂಕಟರಾಮಯ್ಯನವರು ಬೆಚ್ಚಿಬಿದ್ದರು. “ನಾನು ಎಂದೂ ತನಿಯಾಗಿ ಕಚೇರಿ ಮಾಡಿಲ್ಲ”ವೆಂದರು. ವ್ಯವಸ್ಥಾಪಕರು ಸ್ವಲ್ಪ ಒತ್ತಾಯಮಾಡಿದುದಕ್ಕೆ “ಸಾಧ್ಯವಿಲ್ಲ ಕ್ಷಮಿಸಿ. ನಿಮ್ಮ ಅಡ್ವಾನ್ಸು ಹಣ ವಾಪಸು ಮಾಡುತ್ತೇನೆ ತೆಗೆದುಕೊಳ್ಳಿ. ಊರಿಗೆ ಹಿಂತಿರುಗುವ ರೈಲು ಚಾರ್ಜು ಮಾತ್ರ ಕೊಡಿ. ಇಲ್ಲದಿದ್ದರೆ ಅದೂ ಬೇಡ. ನಾನು ಹೇಗೋ ಮಾಡಿಕೊಂಡು ಹೋಗುತ್ತೀನಿ ಒತ್ತಾಯಮಾಡಬೇಡಿ” ಎಂದು ಹೇಳಿಬಿಟ್ಟರು.

ಈ ವಿಷಯವು ಹೇಗೋ ದಕ್ಷಿಣಾಮೂರ್ತಿ ಪಿಳ್ಳೆಯವರ ಕಿವಿಗೆ ಬಿದ್ದಿತು. ಅವರು ವ್ಯವಸ್ಥಾಪಕರನ್ನು ಕರೆದು ನಡೆದ ಸಂದರ್ಭವನ್ನೆಲ್ಲಾ ವಿಚಾರಿಸಿಕೊಂಡು, ಪಾಪಾ ಅವರನ್ನು ತಮ್ಮ ಬಳಿಗೇ ಕಳುಹಿಸಲು ಹೇಳಿದರು.

ಬಳಿಗೆ ಬಂದ ವೆಂಕಟರಾಮಯ್ಯನವರನ್ನು “ಏಕೆ ಕಚೇರಿ ಮಾಡಲು ಒಪ್ಪುವುದಿಲ್ಲ. ಏನಾದರೂ ವಿಶೇಷ ಕಾರಣವಿದ್ದರೆ ನನಗೆ ತಿಳಿಸಿ” ಎಂದು ಮೃದುವಾಗಿ ಹೇಳಿದರು - ದಕ್ಷಿಣಾಮೂರ್ತಿ ಪಿಳ್ಳೆ.

“ವಿಶೇಷ ಕಾರಣವೇನಿಲ್ಲ. ನನಗೆ ತನಿಯಾಗಿ ನುಡಿಸಿ ಅಭ್ಯಾಸವಿಲ್ಲ. ಪಕ್ಕ ವಾದ್ಯವಾಗಿ ನುಡಿಸಿದರೆ ಹಾಡುವವರ ಜೊತೆಯಲ್ಲಿ ಹೇಗೋ ಸೇರಿಕೊಂಡು ಹೋಗಬಹುದು. ತಪ್ಪುಗಳೇನಿದ್ದರೂ ಮುಚ್ಚಿಹೋಗುತ್ತವೆ. ತನಿಯಾಗಿ ನುಡಿಸಿದರೆ ಅವೆಲ್ಲಾ ಕೇಳಿಬರುತ್ತವೆ” ಎಂದರು - ಪಾಪಾ.

ಭರವಸೆ

"ಇಷ್ಟೇ ತಾನೆ. ದೊಡ್ಡವರ (ಗೋವಿಂದಸ್ವಾಮಿ ಪಿಳ್ಳೆಯವರು) ಜೊತೆಯಲ್ಲಿ ಅಷ್ಟು ಚೆನ್ನಾಗಿ ನುಡಿಸುತ್ತೀರಿ, ನಾನು ಕೇಳಿಲ್ಲವೇ? ಏನೂ ಹೆದರಬೇಡಿ ನಾನಿದ್ದೇನೆ. ನಾನು ಹೇಳಿದ ರೀತಿ ಕಚೇರಿ ಮಾಡಿಕೊಂಡು ಹೋಗಿ ಎಲ್ಲವೂ ಸರಿಹೋಗುವುದು" ಎಂದು ಭರವಸೆಯಿತ್ತರು ದಕ್ಷಿಣಾಮೂರ್ತಿ ಪಿಳ್ಳೆ. ಅಂದಿನ ಕಚೇರಿಯನ್ನು ಕೇಳಿದವರನೇಕರಿದ್ದಾರೆ. ಪಾಪಾರವರ ಕೈಯಿಂದ ಹೊರಟ ಸುನಾದ ರಾಗಗಳ ರಮ್ಯತೆ ಮತ್ತು ತ್ಯಾಗರಾಜರ ಬಿಲಹರಿ ರಾಗದ "ನಾ ಜೀವಾಧಾರ', ಶಹನ ರಾಗದ "ಗಿರಿ ಪೈ" ಶ್ಯಾಮಶಾಸ್ತ್ರಿಗಳ ಆನಂದಭೈರವಿ ರಾಗದ "ಮರಿವೇರೆ" ಮುಂತಾದ ಕೀರ್ತನೆಗಳ ಅಚ್ಚುಕಟ್ಟು ಮೊದಲಾದುವನ್ನು ಇಂದೂ ನೆನೆಯುತ್ತಾರೆ. ಆದರೆ ವೆಂಕಟರಾಮಯ್ಯನವರು ಮುಗಿದರೆ ಸಾಕೆಂದು ಕಚೇರಿಯಾದೊಡನೆ ಊರಿಗೆ ಓಡಿದರಂತೆ.

ಆತಂಕದ ಧ್ವನಿ.

ಇದು ವೆಂಕಟರಾಮಯ್ಯನವರ ಸ್ವಭಾವ. ಯಾವುದಕ್ಕೂ ನೇರವಾಗಿ ಖಡಾಖಂಡಿತವಾಗಿ ಉತ್ತರವಿಲ್ಲ. ಅವರನ್ನು ಬಲ್ಲವರಿಗೆಲ್ಲಾ ಅನುಭವವಾಗಿದ್ದ ವಿಷಯವದು. ಕೆಲವು ವರುಷಗಳ ಹಿಂದೆ ಅವರೊಡನೆ ಕುಳಿತು ಮಾತನಾಡಬೇಕಾದ ಸಂದರ್ಭ ಒದಗಿದಾಗ ನಾನು ಏನು ಕೇಳಿದರೂ ಪಾಪಾರವರದು ಒಂದೇ ರೀತಿಯ ಉತ್ತರ, "ನಾನು ಎಲ್ಲಾ ಬಿಟ್ಟು ದೂರವಾಗಿದ್ದೀನಿ. ನನಗೇನೂ ತಿಳಿಯದು." ಏನು ಹೇಳಿದರೆ ಏನು ಅಪಾಯವೋ ಎಂಬ ಆತಂಕದ ಧ್ವನಿಯಿದ್ದಂತೆ ಅನುಭವವಾಗುತ್ತಿದ್ದಿತು. ಅವರ ಜ್ಞಾನ ಮತ್ತು ಅನುಭವ, ಅಲ್ಲದೆ ಪರಂಪರೆ, ಇವುಗಳನ್ನು ಬಲ್ಲವರಿಗೆಲ್ಲಾ ಪಾಪಾರವರ ಈ ಅಧೈರ್ಯವು ಅರ್ಥವಾಗದಿದ್ದ ವಿಷಯ. ಪಾಪಾ ವೆಂಕಟರಾಮಯ್ಯನವರು "ಗರ್ಭಪುರಿ" ಅಂಕಿತವುಳ್ಳ ಕೀರ್ತನೆಗಳಿಂದ ಪ್ರಸಿದ್ಧರಾಗಿದ್ದ ಕರೂರು ದೇವುಡು, ಚಿನ್ನದೇವುಡು, ದಕ್ಷಿಣಾಮೂರ್ತಿ ಶಾಸ್ತ್ರಿ ಇವರುಗಳ ಕುಟುಂಬಕ್ಕೆ ಸೇರಿದವರು. ಪಿಟೀಲುವಾದ್ಯ ಕಲೆಯಲ್ಲಿ ಇತಿಹಾಸಪುರುಷರೆಂದು ನೆನೆಯಲ್ಪಡುವ ತಿರುಚಿನಾಪಳ್ಳಿ ಗೋವಿಂದಸಾಮಿಯವರ ಶಿಷ್ಯರು ಹಾಗೂ ಪಿಳ್ಳೆಯವರ ಬಳಿ ಹಿಂದಿನ ಗುರುಕುಲ ವಾಸ ಪದ್ಧತಿಯಂತೆ 13 ವರುಷ ಕಾಲ ಇದ್ದು ವಿದ್ಯೆ ಕಲಿತವರು. ಗುರುಗಳ ನಿಧನಾನಂತರ ವೀಣಾಧನಂ ಅವರ ಬಳಿ ವಿದ್ಯಾಭ್ಯಾಸವನ್ನು ಮುಂದುವರಿಸಿದವರವರು.

ಗುರು ಸ್ಮರಣೆ

ಪಾಪಾರವರು ಸ್ವಲ್ಪ ಮಾತನಾಡಲು ಪ್ರಚೋದನೆಯೆಂದರೆ ಅವರ ಗುರುಗಳ ವಿಷಯ. ಅದನ್ನೆತ್ತಿದರೆ ಸಾಕು, ಮಾತಿಗೆ ಪ್ರಾರಂಭ. "ಅವರ ವಿದ್ಯೆಯನ್ನು ಕುರಿತು ಮಾತನಾಡುವುದಾಗಲೀ ಅದರ ಆಳವನ್ನು ಅರ್ಥಮಾಡಿಕೊಳ್ಳುವುದಾಗಲೀ ನಾನು ಅಶಕ್ತನೆಂದು" ಪಲ್ಲವಿಯೆತ್ತಿ ಗೋವಿಂದಸಾಮಿ ಪಿಳ್ಳೆಯವರ ವ್ಯಕ್ತಿತ್ವ, ತಮ್ಮ ಬಗೆಗೆ ಅವರಿಗಿದ್ದ ವಾತ್ಸಲ್ಯ, ತ್ಯಾಗರಾಜರ ಬಗೆಗೆ ಇದ್ದ ಭಕ್ತಿ ಶ್ರದ್ಧೆ ಇವುಗಳನ್ನು ಕುರಿತು ಅನೇಕ ಪ್ರಸಂಗಗಳನ್ನು

ವಿವರಿಸುತ್ತಿದ್ದರು. ಅದರಲ್ಲಿಯೂ ವೀಣಾಧನಂರವರ ವಿಷಯದಲ್ಲಿ ತಮ್ಮ ಗುರುಗಳಿಗಿದ್ದ ಗೌರವಾದರಗಳ ಬಗೆಗೆ ಮಾತನಾಡುವಾಗ ಪಾಪಾರವರಿಗೆ ಏನೋ ಒಂದು ರೀತಿಯ ಸಂತೋಷ ಮತ್ತು ತೃಪ್ತಿಯಿದ್ದಂತೆ ಅನುಭವವಾಗುತ್ತಿದ್ದಿತು ಕೆಲವು ವೇಳೆ ಗಂಟಲು ಕಟ್ಟಿಕೊಳ್ಳುತ್ತಿದ್ದಿತು.

"ನಮ್ಮ ಗುರುಗಳು ಬಹು ಘನವಂತರು. ತುಂಬಿದ ಕೊಡ. ಸಂಗೀತದ ಬಗೆಗಾಗಲೀ, ಸಂಗೀತಗಾರರ ಬಗೆಗಾಗಲೀ ಏನೂ ಮಾತಾಡುತ್ತಿರಲಿಲ್ಲ. ಏನು ಅಭಿಪ್ರಾಯವಿದ್ದರೂ ಮನಸ್ಸಿನಲ್ಲಿಯೇ ಅಡಗಿರುತ್ತಿದ್ದಿತು. ಸಂಗೀತವು ಒಂದು ಉಪಾಸನೆ. ಅದರ ಒಂದೊಂದು ಅಂಗವನ್ನೂ ಚೊಕ್ಕವಾಗಿಡಬೇಕು. ಅದಕ್ಕಾಗಿ ತೀವ್ರ ನಿಷ್ಠೆಯನ್ನು ಬೆಳೆಸಿಕೊಳ್ಳಬೇಕು. ಸಾಧನೆ ಮಾಡಬೇಕು. ಇದು ಅವರ ಧ್ಯೇಯ. ಅದನ್ನೇ ನನಗೂ ಪದೇ ಪದೇ ಮನನ ಮಾಡಿಸುತ್ತಿದ್ದರು. ಅದಕ್ಕಾಗಿ ಬಹು ಶ್ರಮಪಟ್ಟು ಅಸಾಧ್ಯ ಸಾಧನೆ ಮಾಡಿದ್ದರು. ಮಾಡುತ್ತಲೂ ಇದ್ದರು. ವಾದ್ಯದಲ್ಲಿ ಅನೇಕ ತಾಂತ್ರಿಕ ವಿಧಾನವನ್ನು ವೃದ್ಧಿಸಿಕೊಂಡು, ಸಂಗೀತದ ಶುದ್ಧ ಸ್ವರೂಪವನ್ನೂ ಅಭಿವ್ಯಕ್ತಪಡಿಸುತ್ತಿದ್ದರು."

ಭಕ್ತಿ-ಗೌರವ

"ಒಂದು ದಿನ ಬೆಳಗಿನ ಜಾವ. ಇಬ್ಬರೂ ಜೊತೆಯಲ್ಲಿ ನುಡಿಸುತ್ತಿದ್ದೆವು. ಗುರುಗಳು ದರ್ಬಾರ್ ರಾಗವನ್ನು ಆಲಾಪಿಸುತ್ತಿದ್ದರು. ಅಮೋಘವಾದ ಆಲಾಪನೆ. ನನಗೂ ಕಣ್ಣಲ್ಲಿ ನೀರು ಉಕ್ಕಿ ಬರುತ್ತಿದ್ದಿತು. ಇದ್ದಕ್ಕಿದ್ದ ಹಾಗೆ ನಿಲ್ಲಿಸಿ ಪಿಟೀಲನ್ನು ಕೆಳಗಡೆ ಇಟ್ಟರು. ನನಗೆ ಸ್ವಲ್ಪ ಗಾಬರಿಯೇ ಆಯಿತು. ಏನು ತಪ್ಪು ಮಾಡಿದೆನೋ ಎಂದು. ಗುರುಗಳು ಸ್ವಲ್ಪ ಹೊತ್ತು ಕಣ್ಣುಮುಚ್ಚಿಕೊಂಡು ಕುಳಿತಿದ್ದರು. ಕಣ್ಣಲ್ಲಿ ನೀರು ಹರಿಯುತ್ತಿತ್ತು. ಇದ್ದಕ್ಕಿದ್ದ ಹಾಗೆ "ಕಾಲಮು ಪೋನು ಮಾಟ ನಿಲುಚುನು" ಎಂದು ತ್ಯಾಗರಾಜರ "ಜಾಲಕಲ್ಲಲಾಡು ಕೊನ್ನ" ಕೀರ್ತನೆಯ ಒಂದು ಪಂಕ್ತಿಯನ್ನು ಹೇಳಿದರು. ನನಗೆ ಅರ್ಥವಾಗಲಿಲ್ಲ. ಒಂದು ನಿಮಿಷ ಸುಮ್ಮನಿದ್ದು "ಕೃಷ್ಣಯ್ಯರ್ ಅವರು (ತಿರುಕ್ಕೋಡಿ ಕಾವಲ್) ಹೋಗಿಬಿಟ್ಟರು. ಆದರೆ ಅವರ ಅಮೋಘವಾದ ದರ್ಬಾರ್ ರಾಗ ನನ್ನ ಕಿವಿಯಲ್ಲಿ ಇನ್ನೂ ಮೊರೆಯುತ್ತಿದೆ. ಅದರ ಮುಂದೆ ನಾನು ನುಡಿಸತಕ್ಕದು ಏನಿದೆ?" ಎಂದು ನಿಟ್ಟುಸಿರುಬಿಟ್ಟರು. ಹೀಗೆ ಅವರಿಗೆ ಹಿಂದಿನ ಪೀಳಿಗೆಯ ವಿದ್ವಾಂಸರಲ್ಲಿ ಬಹುಭಕ್ತಿ-ಗೌರವ. ಅವರ ಕಲೆಯ ವಿಶೇಷಾಂಶಗಳನ್ನು ಗ್ರಹಿಸಿ ಹೃದ್ಗತ ಮಾಡಿಕೊಂಡು ಸುಖಪಟ್ಟಿದ್ದರು. ಅದರಲ್ಲಿಯೂ ಧನಮ್ಮಾಳ್ ಅವರನ್ನು ಕಂಡರೆ ದೇವತೆಯನ್ನು ಕಂಡಂತೆ. ಧನಂರವರಿಗೂ ನಮ್ಮ ಗುರುಗಳ ಬಗೆಗೆ ಬಹುವಾತ್ಸಲ್ಯ. ಅವರ ನಿಧನಾನಂತರ ಧನಮ್ಮಾಳ್‌ರವರ ಬಳಿ ನನ್ನ ವಿದ್ಯಾವ್ಯಾಸಂಗ ಮುಂದುವರೆಸಲು ಸಾಧ್ಯವಾದುದು ಇದೇ ಕಾರಣದಿಂದಲೇ" ಎಂದು ಹೇಳಿದರು ಪಾಪಾ.

71 ವರುಷಗಳ ಹಿಂದೆ ಈರೋಡಿನ ಬಳಿ ಕರೂರಿನಲ್ಲಿ ಜನಿಸಿದ ವೆಂಕಟರಾಮಯ್ಯನವರಿಗೆ ಬಾಲ್ಯ ಕಾಲದ ಸಂಗೀತ ಶಿಕ್ಷಣವೆಲ್ಲಾ ಅವರ ತಂದೆ

ಶ್ರೀಕಂಠಯ್ಯನವರಿಂದಲೇ. ಅನಂತರ ಅಲ್ಲಿಯೇ ಇದ್ದ ತಮ್ಮ ಜ್ಞಾತಿಗಳಾದ ಹಾಗೂ ಸುಪ್ರಸಿದ್ಧ ಪಿಟೀಲು ವಾದಕರಾದ ಕರೂರ್ ಚಿನ್ನಸಾಮಯ್ಯನವರ ಬಳಿ ವಿದ್ಯಾವ್ಯಾಸಂಗವು ಮುಂದುವರೆಯಿತು. ಸ್ವಲ್ಪ ಕಾಲಾನಂತರ ಶ್ರೀಕಂಠಯ್ಯನವರು ಮದರಾಸಿಗೆ ಬಂದು ನೆಲೆಸಬೇಕಾಯಿತು. ಅಲ್ಲಿ ತಮ್ಮ 'ಪಾಪ'ನ ಮುಂದಿನ ಶಿಕ್ಷಣಕ್ಕೂ ವ್ಯವಸ್ಥೆಮಾಡುತ್ತಾ ಕೊನೆಗೆ ಗೋವಿಂದಸಾಮಿ ಪಿಳ್ಳೆಯವರ ಆಶ್ರಯಕ್ಕೆ ಮಗನನ್ನು ಸೇರಿಸಿದರು. ಅಲ್ಲಿ ಏಕಪ್ರಕಾರವಾಗಿ 13 ವರುಷಗಳ ಕಾಲ ಶಿಕ್ಷಣ ದೊರೆತು ದಾಕ್ಷಿಣಾತ್ಯ ಸಂಗೀತ ಕ್ಷೇತ್ರದಲ್ಲಿ ಬಹುಮಾನ್ಯತೆ ಪಡೆದ ಒಬ್ಬ ಪಿಟೀಲು ಕಲೆಗಾರರೆನ್ನಿಸಿಕೊಂಡರು-ಪಾಪಾ. ಅದಕ್ಕೆ ಉಚಿತವಾದ ಬಿರುದು ಪ್ರಶಸ್ತಿಗಳೆಲ್ಲಾ ಬಂದುವು.

ತಿರುಕ್ಕೋಡಿಕಾವಲ್ ಕೃಷ್ಣಯ್ಯರ್ ಮತ್ತು ಗೋವಿಂದಸಾಮಿ ಪಿಳ್ಳೆಯವರ ನಂತರ ಈ ಶತಮಾನದ ಪೂರ್ವಭಾಗವನ್ನು ಬೆಳಗಿದ ಪಿಟೀಲು ವಾದಕರಲ್ಲಿ ಪ್ರಸಿದ್ಧರಾದವರು-ದ್ವಾರಂ, ಚೌಡಯ್ಯ, ರಾಜಮಾಣಿಕಂ ಪಿಳ್ಳೆ ಮತ್ತು ಪಾಪಾ. ಇವರಲ್ಲಿ ಒಬ್ಬೊಬ್ಬರದೂ ಒಂದೊಂದು ವಿಶೇಷ. ಪಾಪಾರವರಲ್ಲಿ ದ್ವಾರಂರವರ ತನ್ಮಯತೆಯಿಲ್ಲದಿರಬಹುದು ಅಥವಾ ಚೌಡಯ್ಯನವರ ಠೀವಿ ಇಲ್ಲದಿರಬಹುದು. ಆದರೆ ಅವರದು ಬಹು ಅಡಕವಾದ ಸಂಗೀತ. ಸುನಾದ, ಉಚಿತಧ್ವನಿ ಪ್ರಮಾಣವನ್ನು ಉತ್ಪತ್ತಿ ಮಾಡಿ ಅದಕ್ಕೆ ಉಚಿತ ಲಯವನ್ನನುಸರಿಸಿ ಹದವರಿತು ಓಡಾಡುತ್ತಿದ್ದ ಕಮಾನು. ಸಾರವತ್ತಾದ ರಾಗ. ಕ್ಲುಪ್ತ ಪ್ರಮಾಣ. ಇದು ಪಾಪಾರವರ ಸಂಗೀತದ ಪ್ರಧಾನ ಗುಣಗಳೆಂಬುದು ಕೇಳಿದ್ದವರೆಲ್ಲರ ಅನುಭವ.

ಪ್ರಭಾವ

"ಕಮಾನಿನ ಉಪಯೋಗ ನನ್ನ ಗುರುಗಳು ಮಾಡುತ್ತಿದ್ದುದನ್ನು ನೋಡಿ ಯಥಾಶಕ್ತಿ ಗ್ರಹಿಸಿದುದು ನಿಜ. ಆದರೆ ರಾಗದ ನಿರೂಪಣೆಯಲ್ಲಿ ಧನಮ್ಮನವರ ಪ್ರಭಾವವು ಮುಖ್ಯ" ಎನ್ನುತ್ತಿದ್ದರು - ಪಾಪಾ. "ರಾಗವನ್ನು ನಿರೂಪಿಸುವುದರಲ್ಲಿ ಕ್ಲುಪ್ತವಾಗಿರಬೇಕು. ಅತಿಯಾಗಬಾರದು. ಆದರೆ ಅಷ್ಟರಲ್ಲಿಯೇ ರಾಗದ ಸಾರವೆಲ್ಲಾ ಅಡಗಿರಬೇಕು. ಇದು ಧನಮ್ಮನವರ ಕ್ರಮ. ಅದೇ ನನಗೆ ಆದರ್ಶವಾಗಿದೆ" ಎಂದಿದ್ದರು – ವೆಂಕಟರಾಮಯ್ಯ ಒಮ್ಮೆ. ತಮ್ಮ ಸಂಗೀತವನ್ನು ಪ್ರಸ್ತಾಪಿಸುತ್ತಾ. ಅವರ ಸಂಗೀತವನ್ನು ಕೇಳಿದ್ದವರಿಗೆ ಇದು ಬಹುಮಟ್ಟಿಗೆ ಅನುಭವವಾಗಿದೆ. ಸಾರವತ್ತಾದ ರಾಗದ ಜೊತೆಗೆ ಅವರ ಕೀರ್ತನೆಗಳ ನಿರೂಪಣೆಯಲ್ಲಿದ್ದ ಸೊಗಸು ಮತ್ತು ಅಚ್ಚುಕಟ್ಟು ಪದೇ ಪದೇ ಸ್ಮೃತಿಗೆ ಬರುತ್ತದೆ.

ಶುಚಿ, ರುಚಿ, ನೆಮ್ಮದಿ

ಮಾಯಾ ಮಾಳವ ಗೌಳ ರಾಗದ - ಮೇರುಸಮಾನ, ಬಿಲಹರಿಯ - ನಾ ಜೀವಾಧಾರ, ಶಹನಾರಾಗದ - ಗಿರಿಪೈ, ಆನಂದಭೈರವಿಯ - ಮರಿವೇರೆಗತಿ, ಕನ್ನಡ ರಾಗದ - ಭಜರೆಭಜ ಹೀಗೆ ಶಂಕರಾಭರಣ, ಪೂರ್ವಿಕಲ್ಯಾಣಿ, ಭೈರವಿ, ಸುರುಟಿ, ಬೆಹಾಗ್ ಎಷ್ಟೋ ನೆನಪಿಗೆ

ಬರುತ್ತವೆ. ಅವರ ಚೊಕ್ಕ ನಿರೂಪಣೆಯಿಂದ ಸ್ಫಟಿಕದಲ್ಲಿ ಮಾಡಿದ ಕೃತಿಗಳನ್ನು ನೋಡಿದರೆ ಆಗುವ ಅನುಭವವಾಗುತ್ತಿದ್ದಿತು. ಶುಚಿ, ರುಚಿ ಮತ್ತು ನೆಮ್ಮದಿ ಇವು ಮೂರು ಪಾಪಾರವರ ಪಿಟೀಲಿನ ಪ್ರಧಾನ ಗುಣಗಳೆನ್ನಬಹುದು.

ಇಷ್ಟಿದ್ದರೂ ಅವರ ಅಧೈರ್ಯ ಹಾಗೂ ಮುಖೇಡಿ ಸ್ವಭಾವಗಳು ಆಶ್ಚರ್ಯ ಉಂಟುಮಾಡುವಂತಹುದೇ. ಬಹುಶಃ ಅವರ ಜೀವನದ ಪೂರ್ವಭಾಗವೆಲ್ಲಾ ಕಷ್ಟಕಾರ್ಪಣ್ಯದಿಂದ ತುಂಬಿದ್ದುದೂ ಅನಂತರ ಬಹುಕಾಲ ದೊಡ್ಡ ಆಲದ ಮರದಂತಹ ಇಬ್ಬರು ಪ್ರಸಿದ್ಧ ಕಲಾವಿದರ ನೆರಳಿನಲ್ಲಿ ಬೆಳೆದು ಧಾರ್ಷ್ಟೀಕ ಮತ್ತು ಆತ್ಮವಿಶ್ವಾಸಕ್ಕೆ ಕೊರತೆಯಾಯಿತೇನೋ. ಆದರೆ ಇದರಿಂದ ಪಾಪಾರವರ ಕಲೆ ಮತ್ತು ನಿಷ್ಠೆಗೇನೂ ಚ್ಯುತಿಯಾಗಲಿಲ್ಲ. ''ಸಂಗೀತದಲ್ಲಿ ಬುದ್ಧಿಚಾತುರ್ಯಕ್ಕಿಂತ ಅನುಭವ ಮುಖ್ಯ. ಸಾವಿರ ಜನರ ಚಪ್ಪಾಳೆಗಿಂತ ಅನುಭವಿಸಿ ಆಹಾ ಎನ್ನುತ್ತಿದ್ದ ಒಬ್ಬಿಬ್ಬರ ಸುಖೋದ್ಗಾರಗಳೇ ನನಗೆ ಅಮೂಲ್ಯವೆನಿಸುತ್ತಿದ್ದವು'' ಎನ್ನುತ್ತಿದ್ದರು - ಪಾಪ ವೆಂಕಟರಾಮಯ್ಯ.

ಆಲದ ಮರ ಮತ್ತು ನೆರಳು ಎಂದು ಹೇಳುವ ಸಂದರ್ಭವೂ ಗುರುರಾಜಪ್ಪನವರಿಗೂ ಚೆನ್ನಾಗಿ ಅನ್ವಯಿಸುತ್ತದೆ. ಅವರದು ಸಂಗೀತವನ್ನು ಚೆನ್ನಾಗಿ ಪೋಷಿಸಿಕೊಂಡು ಬಂದ ಮನೆತನ. ಪ್ರಸಿದ್ಧ ಪಿಟೀಲು ಕಲಾವಿದ ಮೈಸೂರು ಟಿ. ಚೌಡಯ್ಯ ನವರೂ ಗುರುರಾಜಪ್ಪನವರೂ ಅಕ್ಕ ತಂಗಿಯರ ಮಕ್ಕಳು. ಈ ಕುಟುಂಬದಲ್ಲಿ ಚೌಡಯ್ಯ ಮತ್ತು ಗುರುರಾಜಪ್ಪನವರೇ ಅಲ್ಲದೆ ಸಂಗೀತಶಾಸ್ತ್ರಜ್ಞ ಲಿಂಗಪ್ಪ, ಗಾಯಕ ಟಿ. ಪುಟ್ಟಸ್ವಾಮಯ್ಯ, ಗಾಯಕಿಯರಾದ ಚಂದ್ರಮುಖಿ, ಶಾರದಾಂಬ, ನಾಗಮ್ಮ ಇವರೆಲ್ಲಾ ಉತ್ತಮ ಕಲಾವಿದರೆಂದು ಮಾನ್ಯ ಮಾಡಲ್ಪಟ್ಟಿದ್ದಾರೆ. ಇನ್ನೂ ಒಂದು ಗಮನಾರ್ಹ ವಿಷಯವೆಂದರೆ ಇವರೆಲ್ಲಾ ಬಿಡಾರಂ ಕೃಷ್ಣಪ್ಪನವರ ಶಿಷ್ಯರು.

ಮೈಸೂರಿನ ಪಿಟೀಲು ತ್ರಯರು

ಚೌಡಯ್ಯನವರು ಕಚೇರಿಗಳಲ್ಲಿ ಪ್ರಸಿದ್ಧರಾದ ಸ್ವಲ್ಪ ಕಾಲದನಂತರ ಗುರುರಾಜಪ್ಪನವರೂ ವೇದಿಕೆಯ ಮೇಲೆ ಕಾಣಿಸಿಕೊಳ್ಳಲಾರಂಭಿಸಿದರು. ಆಕಾರ ಇಬ್ಬರದೂ ಹತ್ತಿರ ಹತ್ತಿರ. ಗುರುರಾಜಪ್ಪನವರು ಒಂದು ಸುತ್ತು ಕಡಿಮೆ ಇರಬಹುದು ಅಷ್ಟೆ. ಪಿಟೀಲಿನ ನಾದವು ಅಂತಹ ಘಾತವಿಲ್ಲ. ಮೃದು. ನೆಮ್ಮದಿಯಾಗಿ ನುಡಿಸುತ್ತಿದ್ದರು. ರಾಜ್ಯದ ಮತ್ತು ಹೊರಗಡೆಯ ಪ್ರಸಿದ್ಧ ಕಲಾವಿದರಿಗೆಲ್ಲಾ (ಅಂದರೆ ಗಂಡಸರು) ಕಚೇರಿಗಳಲ್ಲಿ ಪಕ್ಕವಾದ್ಯ ನುಡಿಸಿ ಅವರ ಪ್ರಶಂಸೆಗಳಿಸಿದ್ದರು. ಅಲ್ಲದೆ ಅವರ ಅಣ್ಣಂದಿರ ಜೊತೆಯಲ್ಲಿ ತನಿ ಕಚೇರಿಯಲ್ಲಿ ಭಾಗವಹಿಸುತ್ತಿದ್ದರು. ಚೌಡಯ್ಯ-ಗುರುರಾಜಪ್ಪ - ವೆಂಕಟರಾಮಾಶಾಸ್ತ್ರಿ ಈ ಪಿಟೀಲುತ್ರಯರು ಮೈಸೂರಿನಲ್ಲಿ ನೂರಾರು ಜನಪ್ರಿಯ ಕಚೇರಿಗಳನ್ನು ಮಾಡಿದ್ದನ್ನು ಅನೇಕರು ಈಗಲೂ ನೆನೆಯುತ್ತಾರೆ.

ಒಳ್ಳೆಯ ಪ್ರಾಪ್ತ ವಯಸ್ಸಿನಲ್ಲಿ ಅವರ ಸಂಗೀತವು ಒಂದು ಪಕ್ವ ಸ್ಥಿತಿಯಲ್ಲಿದ್ದಾಗ ಗುರುರಾಜಪ್ಪನವರು ತಿರುಚಿ ರೇಡಿಯೋ ಕೇಂದ್ರದಲ್ಲಿ ಉದ್ಯೋಗಿಯಾದರು. ಇವರ ಪ್ರಾಪ್ತಿಯೂ ಹೆಚ್ಚಿತು. ಇವರ ಮೃದುವಾದ ಸುನಾದಯುತ ವಾದನವನ್ನು ಬಯಸಿ ಅನೇಕ ವಿದ್ವಾಂಸರು ಇವರ ಪಿಟೀಲು ಪಕ್ಕವಾದ್ಯವನ್ನು ಏರ್ಪಡಿಸಿಕೊಳ್ಳುತ್ತಿದ್ದರು. ಕಚೇರಿಗಳಿಗೆ ಸಮಯ ಸಾಲದೆ ಉದ್ಯೋಗವನ್ನೂ ಬಿಟ್ಟರು. ಆದರೆ ಆ ವಿಜೃಂಭಣೆ ನಿಂತಮೇಲೆ ರಾಜ್ಯಕ್ಕೇ ಹಿಂತಿರುಗಿದರು. ಪುನಃ ಆಕಾಶವಾಣಿಗೆ ಸೇರಿದರು. ಆದರೆ ಈ ಸಲ ಏನೋ ಸ್ವಲ್ಪ ವ್ಯತ್ಯಾಸವಾದಂತೆ ತೋರಿತು. ಹಿಂದಿನ ಕಚೇರಿಯ ಭರಾಟೆ ಒದಗಿಬರಲಿಲ್ಲ.

ಸದಾ ಹಸನ್ಮುಖಿ

ಈ ಕುಟುಂಬದಲ್ಲೆಲ್ಲಾ ಚೌಡಯ್ಯನವರು, ಅವರ ಪ್ರತಿಭೆ ಮತ್ತು ಕೀರ್ತಿ ಪ್ರತಿಷ್ಠೆಗಳಿಂದ ತುಂಗ ಕೃತಿಯಂತೆ ಬೆಳೆದು ಬಂದರು. ಮಿಕ್ಕವರು ಪ್ರತಿಭಾವಂತರಾದರೂ ಅವರ ನೆರಳಿನಲ್ಲಿದ್ದಂತೆ ಆಗಿಹೋಯಿತು. ಅದರ ಮಾನಸಿಕ ಪರಿಣಾಮ ಗುರುರಾಜಪ್ಪನವರಿಗೂ ಇದ್ದಂತೆ ಅನೇಕ ವೇಳೆ ಅನುಭವವಾಗುತ್ತಿದ್ದಿತು. ಇಷ್ಟಾದರೂ ಅವರದು ಯಾವತ್ತೂ ಹಸನ್ಮುಖ. ಮಾತಿನಲ್ಲಿ ಸರಸ, ಇಂದು ಬದಲಾದ ಕಾಲಸ್ಥಿತಿಗೆ ಹೊಂದಿಕೊಳ್ಳುವುದು ಅವರಿಗೆ ಕಷ್ಟವೆನಿಸಿದರೂ, ಅದಕ್ಕಾಗಿ ಕೋಪಿಸುತ್ತಿರಲಿಲ್ಲ. ಯಾರಾರೋ ಸಂಗೀತ ಕ್ಷೇತ್ರದಲ್ಲಿ ಯಾರಿಗೂ ಗೊತ್ತಿಲ್ಲದಂತಹ ಸೇವೆ ಸಲ್ಲಿಸಿದರೂ, ಅನಾಮಧೇಯರೂ ಸರ್ಕಾರ ಅಕಾಡೆಮಿಗಳಿಂದ ಸಹಾಯ ಪಡೆಯುತ್ತಿರುವಲ್ಲಿ, ಅದನ್ನು ಅರಸಿಕೊಂಡು ಹೋಗಲಿಲ್ಲ - ಗುರುರಾಜಪ್ಪ. ತುಂಬು ಸಂಸಾರಿಯಾದರೂ ಹೇಗೋ ತೂಗಿಕೊಂಡು ಹೋಗುತ್ತಿದ್ದರು ಆಕಾಶವಾಣಿಯಿಂದ ನಿವೃತ್ತರಾದ ಮೇಲೂ ಸಹ. ನಿಧನರಾದಾಗ ಅವರಿಗೆ 67 ವಯಸ್ಸೆಂದು ಹೇಳಲಾಯಿತು. ನೋಡಿದವರಿಗೆ ನಂಬುವುದು ಕಷ್ಟವಾಗಿತ್ತು. ಗುಂಡುಗುಂಡಾದ ಗೌರವವರ್ಣದ ಆಕಾರ. ಒಂದಾದರೂ ನೆರೆತ ಕೂದಲಿಲ್ಲ. ಬಾಳಿನಲ್ಲಿ ಏನು ಕಷ್ಟನೋವಿದ್ದರೂ ಹಸನ್ಮುಖದಿಂದ ನಿರ್ವಹಿಸಿಕೊಂಡು ಬಂದರು. ಹಾಗೆಯೇ ಹೋದರು - ಗುರುರಾಜಪ್ಪ. ★

ಸುಧಾ, 1972

19. ಸಾವಿನಲ್ಲೂ 'ಸ್ವರಮೂರ್ತಿ'

ಗುರುವಾರ 7ನೆಯ ಆಗಸ್ಟ್ ಸಂಜೆ ನಿಧನರಾದ ವಿ.ಎಸ್. ರಾವ್ ಅಥವಾ ವೆಂಕಟನಾರಾಯಣರಾಯರಿಗೆ ಸ್ವರಮೂರ್ತಿ ಎಂಬ ಅಭಿದಾನವಿತ್ತು. ಅವರನ್ನು ಎಲ್ಲರೂ

ಕರೆಯುತ್ತಿದ್ದುದೂ ಈ ಹೆಸರಿನಿಂದಲೇ. ವೆಂಕಟನಾರಾಯಣ ಎಂಬ ಹೆಸರು ಹೆಚ್ಚಾಗಿ ಬಳಕೆಯಲ್ಲಿರಲಿಲ್ಲ. ವಿ.ಎಸ್. ರಾವ್ ಎಂಬುದು ಈಚೆಗೆ ಹೆಚ್ಚು ಬಳಕೆಗೆ ಬಂದ ಹೆಸರು.

ಸ್ವರಮೂರ್ತಿ ಎಂಬ ಅಭಿದಾನ ಒಂದು ಬಿರುದೂ ಹೌದು. ಅದು ಗದ್ವಾಲ್ ಆಸ್ಥಾನದಲ್ಲಿ ಕೊಟ್ಟಿದುದು–ರಾಯರು ತೀರ ಚಿಕ್ಕವರಿದ್ದಾಗ. ರಾಯರಿಗೆ ಅರಮನೆಗಳೇನೂ ಹೊಸದಲ್ಲ. ಅವರ ಪೂರ್ವಿಕರೆಲ್ಲಾ ಅರಮನೆಯ ಆದರ ಗೌರವಗಳನ್ನು ಸಂಪಾದಿಸಿದವರು. ಅರಮನೆಯ ಅಂಬ್ರೆಲಾ ಅಥವಾ ಶ್ವೇತಛತ್ರದ ನೆರಳಿನಲ್ಲಿ ಬೆಳೆದವರು. ಅವರುಗಳಿಗೆ ಆ ನೆರಳಿನ ಆಚೆಗೆ ಇರುವ ಪ್ರಪಂಚ ಅದರ ವಿದ್ಯಮಾನಗಳೇ ಮುಂತಾದುವು ತಿಳಿದಿರಬಹುದೇನೋ. ಆದರೆ ಅವುಗಳನ್ನು ಅಷ್ಟಾಗಿ ಹಚ್ಚಿಕೊಂಡವರಲ್ಲ. ಅದು ಅವರುಗಳಿಗೆ ಬೇಕಾಗಿಯೂ ಇರಲಿಲ್ಲ. ಅವರ ಮನಸ್ಸು ದೇಹ ಎಲ್ಲಾ ಅರಮನೆಗೆ ಮುಡುಪಾಗಿತ್ತು. ಬಹುಶಃ ಅವರ ನಾಡಿಗಳೂ ಅರಮನೆ ಎಂದೇ ಮಿಡಿಯುತ್ತಿದ್ದುವೇನೋ. ರಕ್ತದಲ್ಲಿ ರಾಜಭಕ್ತಿ ತುಂಬಿತ್ತು. ವಿ.ಎಸ್. ರಾಯರೂ ಅಷ್ಟೇ. ಅರಮನೆಯ ಬಗೆಗೆ ಭಕ್ತಿ. ಮೈಸೂರಿನ ಬಗೆಗೆ ತೀವ್ರ ಅಭಿಮಾನ.

ಆ ಮೈಸೂರಿನದೇ ಒಂದು ಸೊಗಸು. ಆ ನಗರದ, ರಾಜ್ಯದ ವಾತಾವರಣ ಜೀವನ ಮತ್ತು ಆ ಸಭ್ಯತೆಯ ಚಿತ್ರವು ನಮಗೆ ವಾಸುದೇವಾಚಾರ್ಯರ ನೆನಪುಗಳಲ್ಲಿ ಡಿ.ವಿ.ಜಿ.ಯವರ ಜ್ಞಾಪಕ ಚಿತ್ರಶಾಲೆಯ ಸಂಪುಟಗಳಲ್ಲಿ ಅನುಭವವಾಗುತ್ತದೆ. ಜನಗಳ ಆಶಯ ದೃಷ್ಟಿ ಎಲ್ಲಾ ಕೇಂದ್ರೀಕೃತವಾಗಿದ್ದುದು ಅರಮನೆಯಲ್ಲಿ. ಸುಂದರವಾಗಿ ಚೊಕ್ಕಟವಾಗಿದ್ದ ನಗರ. ವಿಸ್ತಾರವಾದ ಪಾರ್ಕ್‌ಗಳು. ಮಲ್ಲಿಗೆ, ಬುತ್ತಿಚಿಗುರೆಲೆ, ಸುಗಂಧ, ಸೆಟ್ ದೋಸೆ... ಇತ್ಯಾದಿ. ಎಂತಹ ಬಡವನಾದರೂ ಅದನ್ನು ಮೀರಿನಿಂತ ರಸಿಕತೆ. ಇಂತಹವರಿಂದ ತುಂಬಿದ್ದ ನಗರವದು. ಬಿ.ಎಂ.ಶ್ರೀಯವರ ಕವಿತೆಯ ಮೈಸೂರು.

ರಾಯರು ಹುಟ್ಟಿದುದು ಮೈಸೂರಿನ ಅಂತಹ ಯುಗದ ಸಂಧ್ಯಾಕಾಲದಲ್ಲಿ, 64 ವರುಷದ ಹಿಂದೆ. ಸದಾ ಸಂಗೀತವು ಮೊಳಗುತ್ತಿದ್ದ ಮನೆಯಲ್ಲಿ. ''ವೀಣೆಯ ಅರಸ'' ನೆಂದು ಖ್ಯಾತರಾಗಿದ್ದ ತಾತನವರ ಮುದ್ದು ಆರೈಕೆಯಲ್ಲಿ ಬೆಳೆದ ಪ್ರಾಡಿಜಿ (ಬಾಲ ಪ್ರತಿಭಾವಂತ) ರಾವ್. ತಾತ ಶೇಷಣ್ಣನವರೇ ಅಲ್ಲದೆ ಅವರ ಮನೆಗೆ ಬರುತ್ತಿದ್ದ ಮಹಾನ್ ಸಂಗೀತ ವಿದ್ವಾಂಸರೂ ರಸಿಕರೂ ಎಲ್ಲರಿಗೂ ಮೆಚ್ಚು. ಪ್ರತಿಭೆಗೆ ಸೋತವರಿಂದ ಮುದ್ದು. ಅವರ ಬಗೆಗೆ ಗೌರವ. ಆದರೆ ಭಯವಿಲ್ಲ. ಆ ಭಯವೆಲ್ಲಾ ಅರಮನೆಯ ಬಗೆಗೆ.

ನಾಲ್ವಡಿ ಕೃಷ್ಣರಾಜರ ಕೃಪೆಗೆ ಒಳಗಾದ ಪುಟ್ಟಶಾಮಿಗೆ (ಮನೆಯವರು ಕರೆಯುತ್ತಿದ್ದ ಹೆಸರು) ಪ್ರಾಡಿಜಿಗೆ ದೊರೆಯಬಹುದಾದ ಸನ್ಮಾನ, ಪ್ರೋತ್ಸಾಹ ಎಲ್ಲಾ ದೊರೆತವು. ಮೈಸೂರಿನ ಸಂಗೀತ ಪರಂಪರೆಯಲ್ಲಿ ಬಂದ ಅನೇಕ ಅಮೂಲ್ಯ ಅಂಶಗಳೆಲ್ಲಾ ತಾತನವರಿಂದ ಲಭ್ಯವಾಯಿತು. ಅವರ ನಿಧನಾನಂತರ ಸುಬ್ಬಣ್ಣ ತಾತ (ವೀಣೆ ಭಾಕ್ಷಿ ಸುಬ್ಬಣ್ಣನರು) ಅದನ್ನು ಮುಂದುವರೆಸಿದರು. ಅಲ್ಲಿಂದ ಮುಂದೆ ಮುತ್ತಯ್ಯ ಭಾಗವತರಿಂದ. ಅದರ ಫಲವಾಗಿ ಅವರಲ್ಲಿ ಅಪರೂಪವಾದ ಸಂಗೀತದ ಸರಕಿತ್ತು. ಜೊತೆಗೆ ಪಾಶ್ಚಾತ್ಯ ಸಂಗೀತದಲ್ಲಿಯೂ ಪಳಗಿದ್ದರು.

ಪ್ರಾಯ ಕಾಲದಲ್ಲಿ ಪುಟ್ಟ ಶಾಮಿಯನ್ನು ನೋಡಬೇಕಿತ್ತು. ಸರ್ಜ್ ಸೂಟು, ಯುವರಾಜರು ಕಟ್ಟುತ್ತಿದ್ದಂತಹ ಓರೆ ಪೇಟ. ಹಣೆಗೆ ಸಣ್ಣ ಕುಂಕುಮದ ಬೊಟ್ಟು. ನಡೆಯಲ್ಲಿ ಠೀವಿ. ನಡವಳಿಕೆಯಲ್ಲಿ ಗಾಂಭೀರ್ಯ. ಅರಮನೆಗೆ ಸಮೀಪದ ಯಾರೋ ಅರಸು ಮಕ್ಕಳು ಇರಬಹುದೇನೋ ಅನ್ನಿಸುವಂತಿತ್ತು. ಗಾಯನ ಮತ್ತು ವೀಣಾವಾದನ ಎರಡೂ ಪ್ರಾಕಾರಗಳಲ್ಲಿಯೂ ಒಳ್ಳೆಯ ಪ್ರೌಢಿಮೆ ರಾಯರದು.

ವೆಂಕಟನಾರಾಯಣರಾಯರ ಜೀವನದಲ್ಲಿ ಎರಡು ದುರಂತ ಘಟ್ಟಗಳೆಂದರೆ – (1) ತಾತ ಶೇಷಣ್ಣನವರ ಮರಣ. (2) ನಾಲ್ವಡಿ ಕೃಷ್ಣರಾಜ ಒಡೆಯರವರ ಮರಣ. ತಾತ ಅಕ್ಕರೆಯಿಂದ ಅಮೂಲ್ಯ ವಿಷಯಗಳನ್ನೆಲ್ಲಾ ಹೇಳಿಕೊಟ್ಟು ಸಂಗೀತ ಪ್ರತಿಭೆಯನ್ನು ಬಲಪಡಿಸಿದರು. ಮಹಾರಾಜರು ಅಷ್ಟೇ ವಿಶ್ವಾಸವಿಟ್ಟು, ಉದಾರ ಸಹಾಯ ಮಾಡಿ ಪ್ರೋತ್ಸಾಹಿಸುತ್ತಿದ್ದವರು. ಮುಂದೆ ಸುಬ್ಬಣ್ಣ ತಾತ ಮೊದಲನೆಯ ದುಃಖವನ್ನು ಮರೆಸಿದರು. ಜಯಚಾಮರಾಜ ಒಡೆಯರು ಎರಡನೆಯ ದುಃಖವನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿದರು. ಆದರೆ ರಾಯರ ಮನಸ್ಸಿನಲ್ಲಿ, ಈ ಎರಡರ ನೋವು ಆಗಾಗ ಕಾಣಿಸಿಕೊಳ್ಳುತ್ತಿತ್ತು.

ರಾಯರಿಗೆ ಮೈಸೂರು, ಅರಮನೆಗಳಂತೆಯೇ ಅವರ ಮನೆತನದ ಹಿರಿಮೆಯ ಬಗೆಗೆ ತೀವ್ರ ಅಭಿಮಾನ. ಮನೆತನದ ಹಿರಿಮೆಯ ಭಾರದಿಂದ ಜಗ್ಗುತ್ತಿದ್ದರೋ ಎನ್ನುವಂತೆಯೂ ಇತ್ತು. ಕಷ್ಟಸ್ಥಿತಿಯಲ್ಲಿಯೂ ಪರಂಪರೆಯಿಂದ ಬಂದ ಸರಸ್ವತಿಯ ಬಳುವಳಿಯಾದ ಪುಸ್ತಕ, ಹಸ್ತಪ್ರತಿ, ಚಿತ್ರಪಟ, ವಾದ್ಯ ಮುಂತಾದುವನ್ನು ಕುಲಧನದಂತೆ ಕಾಪಾಡಿಕೊಂಡು ಬಂದರು. ಮೈಸೂರಿನ ಸಂಗೀತ ಇತಿಹಾಸ ದೃಷ್ಟಿಯಿಂದ ಅದು ಅಮೂಲ್ಯ ಸಾಮಗ್ರಿ. ಮನೆತನದ ಹಿರಿಮೆಯ ಅರಿವು ಅವರ ನಡೆವಳಿಕೆಯಲ್ಲಿ ಅದನ್ನು ಕಾಪಾಡುವ ತೀವ್ರ ಉತ್ಸಾಹ ಮತ್ತು ಕೆಚ್ಚು ಅವರ ಮಾತಿನಲ್ಲಿಯೂ ಕಂಡು ಬರುತ್ತಿತ್ತು.

ಇಂತಹ ಪ್ರಾಡಿಜಿಗೆ ಆತನಲ್ಲಿದ್ದ ಪ್ರತಿಭೆಗೆ ಅನುಗುಣ ಪ್ರಮಾಣದ ಕೀರ್ತಿ ಮತ್ತು ಮಾನ್ಯತೆ ಏಕೆ ದೊರೆಯಲಿಲ್ಲ? ಈ ಪ್ರಶ್ನೆ ನನ್ನಂತಹವರನೇಕರನ್ನು ಕಾಡಿದೆ. ಇದಕ್ಕೆ ಇಷ್ಟು ಕಾರಣ ಹೇಳಬಹುದು. ಈ ಸ್ಥಿತಿಗೆ ಗುರಿಯಾದವರಲ್ಲಿ ರಾಯರೇ ಅಲ್ಲದೆ ಮೈಸೂರಿನ ಅವರ ಅನೇಕ ಸಹಬಾಂಧವರನ್ನೂ ಸೇರಿಸಬಹುದು. ಅರಮನೆ, ಕಲೆಗೆ ಉತ್ತೇಜನವಿತ್ತಿತು. ಕಲಾವಿದರನ್ನು ಪ್ರೋತ್ಸಾಹಿಸಿತು. ನಿಜ. ಆದರೆ ಆ ಸ್ಥಾನವು ಅವರನ್ನು ಮೆರೆಸಿದಂತೆಯೇ ವಿದ್ವಾಂಸರಿಗೆ ಒಂದು ರೀತಿಯ ಬಂಗಾರದ ಪಂಜರವಾಯಿತು. ಸ್ಪರ್ಧೆಯಿಂದ ಜನರ ಮಧ್ಯೆ ಸಂಗೀತ ಕ್ಷೇತ್ರಲ್ಲಿ ನುಗ್ಗಿ ಮೇಲೆ ಬರುವ ಕೆಚ್ಚು, ಉತ್ಸಾಹಗಳ ಬೆಳವಣಿಗೆಗೆ ಸಹಾಯಕವಾಗಲಿಲ್ಲ. ಅಲ್ಲದೆ ಸಮಾಜದಲ್ಲಿ ಆಗುತ್ತಿದ್ದ ಬದಲಾವಣೆಗಳಿಂದಲೂ ದೂರವಿದ್ದವರವರು. ಅದರ ಫಲವಾಗಿ ಅರಮನೆಯ ಬಲವಾದ ಆಸರೆ ತಪ್ಪಿದ ಮೇಲೆ, ಈ ವಿದ್ವಾಂಸರ ಜೀವನ ನೆಲೆಯಿಲ್ಲದೆ ಎತ್ತೆತ್ತಲೋ ಕೊಚ್ಚಿಕೊಂಡು ಹೋಯಿತು. ಇದರಲ್ಲಿ ರಾಯರು ಬಹು ಕಷ್ಟ ಅನುಭವಿಸಿದರು. ಬೆಂಗಳೂರಿಗೆ ಬಂದು ನೆಲೆಸುವ ಸಂದರ್ಭದಲ್ಲಿ ಅವರು ಎಂತಹ ಕಷ್ಟ ಸ್ಥಿತಿಯಲ್ಲಿದ್ದರೆಂಬುದು ಅವರ

ಆತ್ಮೀಯರಿಗೆ ಗೊತ್ತಿದ್ದ ವಿಷಯ. ಇಷ್ಟಾದರೂ ಅವರಿಗೆ ಮೈಸೂರು ಬಿಡಲಿಷ್ಟವಿಲ್ಲ. ಅವರ ಜೀವ ಮೈಸೂರಿಗೆ ಅಷ್ಟು ಅಂಟಿಕೊಂಡಿತ್ತು. ಆದರೆ ಅವರಿಗೆ ಇದ್ದ ಒಂದು ಅನುಕೂಲವೆಂದರೆ ಹೊಸ ಜೀವನವನ್ನು ಪ್ರಾರಂಭಿಸಲು ಆಗಲಾರದಷ್ಟು ಇಳಿವಯಸ್ಸಾಗಿರಲಿಲ್ಲ.

ಬೆಂಗಳೂರಿನಲ್ಲಿ ತಾತನವರ ಹೆಸರಿನಲ್ಲಿ ಸಂಗೀತ ಶಾಲೆಯನ್ನು ಪ್ರಾರಂಭಿಸಿದರು. ಜೀವನ ಸ್ವಲ್ಪ ಸುಗಮವಾಯಿತು. ಇಲ್ಲಿನ ಸಂಗೀತ ಕ್ಷೇತ್ರದ ಅವಿಭಾಜ್ಯ ಭಾಗವಾದರು. ಹಿರಿಯ ವಿದ್ವಾಂಸರಾಗಿ ಮಾನ್ಯತೆ, ಬಿರುದು ಪ್ರಶಸ್ತಿಯನ್ನು ಪಡೆದರು. ವಯಸ್ಸಿಗನುಗುಣವಾಗಿ ಸ್ವಲ್ಪ ಸೌಮ್ಯವಾಗಿದ್ದರು. ಆದರೆ ಮೈಸೂರಿನ ಬಗೆಗೆ ಅಸಡ್ಡೆ, ಅವಹೇಳನ ಸಹಿಸುತ್ತಿರಲಿಲ್ಲ. ಅವರ ಜೀವ ನಂದಿಹೋದುದು ದಾರುಣ ಸನ್ನಿವೇಶ. ರಾಯರು ಹೋಗುತ್ತಿದ್ದ ವಾಹನಕ್ಕೆ ಇನ್ನಾವುದೋ ವಾಹನ ಡಿಕ್ಕಿ ಹೊಡೆದು ಒಡಿಹೋಯಿತು. ಸ್ಮೃತಿ ತಪ್ಪಿ ಬಿದ್ದ ರಾಯರ ಬಾಯಲ್ಲಿ ಒಂದೇ ಸಮನೆ ಸ್ವರ ಪ್ರಸ್ತಾರ. ಮಿದುಳಿನ ಎಲ್ಲ ಭಾಗ ನಷ್ಟವಾಗಿದ್ದರೂ ಸಂಗೀತದ ಒಂದು ಮೂಲ ಜೀವಂತವಾಗಿತ್ತು. ಆಸ್ಪತ್ರೆಗೆ ಸಾಗಿಸಿದಾಗಲೂ ಸ್ವರ ಹಾಡುತ್ತಲೇ ಅಸುನೀಗಿದರು. ಅರವತ್ತು ವರುಷದ ಹಿಂದೆ ಅವರಿಗೆ ದೊರೆತ ಸ್ವರಮೂರ್ತಿ ಎಂಬ ಬಿರುದು ಕೇವಲ ಅಲಂಕಾರವಾಗದೆ ಅರ್ಥಪೂರ್ಣವೂ ಆಯಿತೆನ್ನುವಂತಿತ್ತು. ★ ★ ★ ★ ★ ★ ★ ★ ★

ಪ್ರಜಾವಾಣಿ, 1980

20. ತಲೆಮಾರುಗಳಿಂದ ವೀಣೆಯ ನಂಟು
ವೈಣಿಕ ವೆಂಕಟಸುಬ್ಬರಾಯರು

ಇದೇ ಜನವರಿ ತಿಂಗಳಿನಲ್ಲಿ ನಡೆವ ಕರ್ನಾಟಕ ಗಾನಕಲಾ ಪರಿಷತ್ತಿನ 13ನೆಯ ಸಂಗೀತ ಸಮ್ಮೇಳನದ ಅಧ್ಯಕ್ಷರಾದ ವೈಣಿಕ ವೆಂಕಟಸುಬ್ಬರಾಯರು ಎಲೆಮರೆಯ ಕಾಯಿಯಂತಹ ವ್ಯಕ್ತಿ. ಮುಂದೆ ನುಗ್ಗಿ ಕಾಣಿಸಿಕೊಳ್ಳುವ ಸ್ವಭಾವದವರಲ್ಲ. ಮಿತಭಾಷಿ. ಆದುದರಿಂದ ಸಂಗೀತ ಕ್ಷೇತ್ರದ ನಿಕಟ ಸಂಪರ್ಕವಿರುವವರ ವಿನಾ ಇತರ ಜನಸಾಮಾನ್ಯರಿಗೆ ರಾಯರ ಪರಿಚಯ ಅಷ್ಟಾಗಿ ಇರಲಾರದು. ಹೆಸರು ಕೇಳಿರಬಹುದು, ಆದರೆ ಹತ್ತು ಜನರ ಮಧ್ಯೆ ಇರುವ ವೆಂಕಟುಸುಬ್ಬರಾಯರನ್ನು ಇಂತಹವರೇ ಎಂದು ಗುರುತಿಸಲಾರರು. ಇದಕ್ಕೆ ಕಾರಣವೂ ಇದೆ. ರಾಜ್ಯದ ಇತರ ಅನೇಕ ವೈಣಿಕರಿಗೆ ಹೋಲಿಸಿದರೆ ಕಚೇರಿಯ ವೇದಿಕೆಯ ಮೇಲೆ ವೆಂಕಟಸುಬ್ಬರಾಯರು ಕಾಣಿಸಿಕೊಂಡ ಕಾಲಪ್ರಮಾಣ ಕಡಿಮೆ.

ಆದರೂ ವೆಂಕಟಸುಬ್ಬರಾಯರು ಒಳ್ಳೆಯ ವೈಣಿಕರು. ವೈಣಿಕ ಮನೆತನಕ್ಕೆ ಸೇರಿದವರು. ಅವರ ಮುತ್ತಜ್ಜ ದೊಡ್ಡ ಸುಬ್ಬರಾಯರು ಮೈಸೂರು ಆಸ್ಥಾನದ ವೈಣಿಕರಾಗಿದ್ದವರು. ಅದಕ್ಕೂ ಪೂರ್ವ ಶ್ರೀರಂಗಪಟ್ಟಣದಲ್ಲಿ ನವಾಬರ ಜನಾನಾದವರಿಗೆ ವೀಣೆಯ ಗುರುಗಳಾಗಿದ್ದವರು. ತಾತನವರಾದ ಚಿಕ್ಕಸುಬ್ಬರಾಯರೂ ಮೈಸೂರು ಆಸ್ಥಾನದ ವೈಣಿಕರು. ವೀಣೆಯನ್ನು ನೆಟ್ಟಗೆ

ನಿಲ್ಲಿಸಿಕೊಂಡು ನುಡಿಸುತ್ತಿದ್ದರು. ತಂದೆ ವೆಂಕಟಕೃಷ್ಣಪ್ಪನವರೂ ವೈಣಿಕರೇ. ಶೇಷಣ್ಣನವರ ಶಿಷ್ಯರು. ಚಿಕ್ಕಪ್ಪನವರು ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರು ..... ಹೀಗೆ ನಾಲ್ಕಾರು ತಲೆಮಾರುಗಳಿಂದ ಏಕಪ್ರಕಾರವಾಗಿ ವೀಣೆಯ ರವ ಮೊಳಗುತ್ತಿದ್ದ ಕುಟುಂಬದವರು - ವೆಂಕಟಸುಬ್ಬರಾಯರು. ಆದುದರಿಂದ ಅವರಿಗೂ ವೀಣೆಗೂ ನಂಟು ಬೆಳೆದುಬಂದುದು ಸ್ವಾಭಾವಿಕವೇ.

ಈ ಶತಮಾನದ ಮೂರನೆಯ ದಶಕದಲ್ಲಿ ಮೈಸೂರು ನಗರದಲ್ಲಿ ಇಬ್ಬರು ಪ್ರತಿಭಾವಂತ ಬಾಲವೈಣಿಕರ ಹೆಸರು ಕೇಳಿ ಬರುತ್ತಿತ್ತು. ಇಬ್ಬರೂ ಹತ್ತಿರ ಹತ್ತಿರ ಒಂದೇ ವಯಸ್ಸಿನವರು ತೊಡುತ್ತಿದ್ದ ಬಟ್ಟೆಬರೆ ಒಂದೇ ರೀತಿ. ನಿಕ್ಕರ್, ಕ್ಲೋಸ್ ಕಾಲರ್ ಕೋಟು, ಫರ್‌ಕ್ಯಾಪ್ .... ಹೀಗೆ. ಇಬ್ಬರ ವೀಣಾವಾದನ ಶೈಲಿಯೂ ಪ್ರಾಯಶಃ ಒಂದೇ ರೀತಿ. ಇನ್ನೂ ವಿಶೇಷವೆಂದರೆ ಇಬ್ಬರೂ ಹಾಡಿಕೊಂಡು ವೀಣೆ ನುಡಿಸುತ್ತಿದ್ದರು. ಇಬ್ಬರೂ ಬೇರೆ ಬೇರೆ ಗುರುಗಳ ಶಿಷ್ಯರು. ಆದರೆ ಒಂದೇ ಪರಂಪರೆಗೆ ಸೇರಿದವರು. ಇದರಲ್ಲಿ ಒಬ್ಬರು ವೆಂಕಟಸುಬ್ಬರಾಯರು. ಅವರ ತಂದೆ ವೆಂಕಟಕೃಷ್ಣಪ್ಪನವರಿಂದ ಶಿಕ್ಷಣ ಪಡೆದವರು. ಇನ್ನೊಬ್ಬರು - ದೊರೆಸ್ವಾಮಯ್ಯಂಗಾರ್ಯರು ವೆಂಕಟಗಿರಿಯಪ್ಪನವರಿಂದ ತರಪೇತಾದವರು.

ಈ ಸರಿ ಸುಮಾರಿನಲ್ಲಿ ಮೈಸೂರಿನಲ್ಲಿ ಸಂಗೀತ ಸಮ್ಮೇಳನಗಳನ್ನು ನಡೆಸುವ ಉತ್ಸಾಹ ಪ್ರಾರಂಭವಾಗಿತ್ತು. ಅದರಂತೆ ಒಂದು ಸಮ್ಮೇಳನವು ನಂಜನಗೂಡಿನಲ್ಲಿ ನಡೆಯಿತು. ಅಲ್ಲಿ ಹುಡುಗರ ಸಂಗೀತ ಕಚೇರಿಗಳೂ ಏರ್ಪಾಡಾದವು. ಅದರಲ್ಲಿ ವೆಂಕಟಸುಬ್ಬರಾಯರದೂ ಒಂದು. ಸಭೆಯಲ್ಲಿದ್ದ ರಸಿಕರು ಸಂತೋಷಪಟ್ಟರು. ಅದರಲ್ಲಿಯೂ ಮುಖಾರಿರಾಗದ ಕೃತಿಯ ನಂತರ ಚಪ್ಪಾಳೆಗಳ ಜೊತೆಗೆ ''ಒನ್ಸ್‌ಮೋರ್'' ಎಂಬ ಕೂಗೂ ಕೇಳಿಬಂದಿತು. ''ಅದನ್ನು ಕೇಳಿ ನಗು ಬರುವಂತಾಯಿತು'' ಎನ್ನುತ್ತಾರೆ ವೆಂಕಟಸುಬ್ಬರಾಯರು ಆ ಘಟನೆಯನ್ನು ನೆನೆಯುತ್ತಾ. ಏಕೆಂದರೆ ಆ ಪದವನ್ನು ನಾಟಕದಲ್ಲಿ ಮಾತ್ರ ಕೇಳುತ್ತಿದ್ದೆವು ಸಂಗೀತ ಕಚೇರಿಯಲ್ಲಿ ಕೇಳಿರಲಿಲ್ಲ ಎನ್ನುತ್ತಾರೆ.

ಕಚೇರಿ

ಇದನ್ನು ನೋಡಿ ಸಂತೋಷಪಟ್ಟ ಮುತ್ತಯ್ಯ ಭಾಗವತರು ವೆಂಕಟಸುಬ್ಬರಾಯರನ್ನು ತಮ್ಮ ಪ್ರಾಕಾರಕ್ಕೆ ಸೇರಿಸಿಕೊಂಡರು. ಆಗಾಗ ಮನೆಗೆ ಕರೆಸಿಕೊಂಡು ವೀಣೆಯನ್ನು ನುಡಿಸಲು ಹೇಳಿ ಆಯಾ ರಾಗಗಳ ಸ್ವಾರಸ್ಯಾಂಶಗಳನ್ನೂ ಅವುಗಳನ್ನು ಗ್ರಹಿಸಿ ನಿರೂಪಿಸುವ ವಿಧಾನ ಮುಂತಾದವುಗಳ ಬಗೆಗೆ ತೋರಿಸಿ ರಾಯರ ಜ್ಞಾನಾಭಿವೃದ್ಧಿಗೆ ಬಹು ಸಹಾಯಕರಾದರು. ಇದಲ್ಲದೆ ವೆಂಕಟಸುಬ್ಬರಾಯರ ಬಗೆಗೆ ಭಾಗವತರ ಮಮತೆಗೆ ಇನ್ನೂ ಒಂದು ಕಾರಣವಿತ್ತು. ಆಗ ಮಹಾರಾಜರ ಆಜ್ಞೆಯಂತೆ ಕನ್ನಡದಲ್ಲಿ ಚಾಮುಂಡೇಶ್ವರಿ ಅಷ್ಟೋತ್ತರ ಶತ ಕೀರ್ತನೆಗಳ ರಚನೆ ಪ್ರಾರಂಭಿಸಿದ್ದರು. ಭಾಗವತರು ಕೀರ್ತನೆಗಳ ರಾಗ ಹಂದರ ರಚಿಸಿದ ಮೇಲೆ ಅದಕ್ಕೆ ಕನ್ನಡ ಸಾಹಿತ್ಯ ಒದಗಿಸಿದವರು ದೇವೋತ್ತಮ ಜೋಯಿಸರು. ಅವರು ವೆಂಕಟಸುಬ್ಬರಾಯರ

ತಾತನವರು. ಭಾಗವತರು ಈ ಕೀರ್ತನೆಗಳನ್ನು ಬಾಲಕ ವೆಂಕಟಸುಬ್ಬರಾಯರ ಕೈಲಿ ಹಾಡಿಸಿ, ನುಡಿಸಿ ಸಂತೋಷಪಡುತ್ತಿದ್ದರು. ಇದರ ಫಲವಾಗಿ ಮುಂದೆ ಮಹಾರಾಜರ ಸಮ್ಮುಖದಲ್ಲಿ ಕಚೇರಿ ಬಹುಮಾನ ಎಲ್ಲವೂ ದೊರೆತವು. ಪಾಶ್ಚಾತ್ಯ ಸಂಗೀತ ಕಲಿಯಲೂ ಪ್ರೋತ್ಸಾಹ ದೊರೆಯಿತು. ವೆಂಕಟಸುಬ್ಬರಾಯರು ಪಾಶ್ಚಾತ್ಯ ಸಂಗೀತದಲ್ಲಿ ಲಂಡನ್ನಿನ ಟ್ರಿನಿಟಿ ಕಾಲೇಜಿನ ಉನ್ನತ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

ಪ್ರಭಾವ

ವೆಂಕಟಸುಬ್ಬರಾಯರ ಮೈಸೂರಿನ ದಿನಗಳಲ್ಲಿ ಅಂತಹ ವಿಶೇಷ ಘಟನೆಗಳೇನೂ ಇಲ್ಲದಿದ್ದರೂ ಕಲೆಯನ್ನು ಆಸಕ್ತಿಯಿಂದ ಕೇಳುವವರಿಗೆ ಬಹು ಅವಕಾಶಗಳಿದ್ದುವೆನ್ನುತ್ತಾರೆ. ಮೊದಲು ಮೈಸೂರು ನಗರದಲ್ಲಿಯೇ ಇದ್ದ ಅನೇಕ ಸಂಗೀತ ವಿದ್ವಾಂಸರು. ಅನಂತರ ರಾಜಾಸ್ಥಾನದಲ್ಲಿ ಹಾಡಲು ಬರುತ್ತಿದ್ದ ಹೊರಗಿನ ವಿದ್ವಾಂಸರು ಫೈಯ್ಯಾಜ್ ಖಾನ್, ಹಾಫಿಸ್ ಖಾನ್, ಬರಕತುಲ್ಲಾ ಖಾನ್ ಮುಂತಾದವರ ಸಂಗೀತ ಕೇಳುವ ಸುಯೋಗ ದೊರಕಿತು. "ಅದರಲ್ಲಿಯೂ ಅಬ್ದುಲ್ ಕರೀಂಖಾನರ ಸಂಗೀತದ ಬಗೆಗೆ ಬಹು ಕುತೂಹಲ. ಏಕೆಂದರೆ ಅವರು ಕನ್ನಡ ದೇವರ ನಾಮಗಳನ್ನು ಹಾಡುತ್ತಿದ್ದರು" ಎನ್ನುತ್ತಾರೆ ರಾಯರು - ಅವರೇ ಹೇಳುವಂತೆ ಅವರ ವೀಣಾವಾದನಗಳ ಮೇಲೆ ಹೆಚ್ಚು ಪರಿಣಾಮ ಮಾಡಿದವರು - ಕಾರೈಕ್ಕುಡಿ ಸೋದರರು. ಅವರ ವಾದನದಂದ ಮುಗ್ಧನಾಗಿ ಅನೇಕ ಅಂಶಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿದೆ ಎನ್ನುತ್ತಾರೆ.

ಇದಲ್ಲದೆ ಅಂದು ಹೊಸ ಪ್ರಯತ್ನಕ್ಕೂ ಹೇಗೆ ಪ್ರೋತ್ಸಾಹವಿದ್ದಿತು ಎಂಬುದಕ್ಕೆ ನಿದರ್ಶನವಾಗಿ ಹೇಳುತ್ತಾ "ಒಮ್ಮೆ ವೀಣೆ ಸುಬ್ಬಣ್ಣನವರು ನನ್ನನ್ನು ಕೆದಕುತ್ತಾ ಅಟ್ಟತಾಳದ ವರ್ಣವನ್ನು ಆದಿತಾಳದಲ್ಲಿ ಹಾಡಬಲ್ಲೆಯೋ ಎಂದು ಕೇಳಿದರು. ನಾನು ಓಹೋ ಆಗಬಹುದು. ಆದರೆ ಸ್ವಲ್ಪ ಕಾಲಾವಕಾಶ ಕೊಡಿ" ಎಂದೆ. ಸರಿ ಮೂರು ದಿವಸ ವಾಯಿದೆ. ಆದರೆ ಯಾರಿಗೂ ಹೇಳಕೂಡದು ಎಂದು ಮಾತು ತೆಗೆದುಕೊಂಡರು. ಆದರೆ ಮನೆಗೆ ಹೋದ ಮೇಲೆ ಚಿಂತೆ...... ಇದು ಹೇಗೆ ಸಾಧ್ಯ ಎಂದು. ಇಂದು ಇದನ್ನು ಅನೇಕರು ಮಾಡಬಲ್ಲರು. ಆದರೆ 50 ವರುಷಗಳ ಹಿಂದೆ ಇಂತಹವು ಬಹು ರಹಸ್ಯ ವಿಷಯಗಳಾಗಿದ್ದುವು. ನಾನು ರಾತ್ರಿ ಯೋಚಿಸಿದೆ, ಪರಿಹಾರ ಹೊಳೆಯಿತು. ವರ್ಣವನ್ನು ಆದಿತಾಳ ಮಿಶ್ರ ನಡೆಯಲ್ಲಿ ಅಭ್ಯಾಸ ಮಾಡಿದೆ. ಇನ್ನೇನಾದರೂ ಕೇಳಬಹುದೆಂದು ಮೂರು ಕಾಲದಲ್ಲಿಯೂ ಅಭ್ಯಾಸ ಮಾಡಿದೆ. ಮಾರನೆಯದಿನ ಸುಬ್ಬಣ್ಣನವರ ಮನೆಗೆ ಹೋಗಿ ಸಿದ್ಧ ಎಂದೆ. ಹಾಡು ಎಂದರು, ಹಾಡಿದೆ. ಆಶ್ಚರ್ಯದಿಂದ ಹೇಗೆ ಮಾಡಿದೆ ಎಂದು ಕೇಳಿ ಅನಂತರ ಬಹು ಸಂತೋಷಪಟ್ಟರು.

1944ರಲ್ಲಿ ಆಕಾಶವಾಣಿಯ ಉದ್ಯೋಗಕ್ಕೆ ಸೇರಿದ ನಂತರ ವೆಂಕಟಸುಬ್ಬರಾಯರು ಕಚೇರಿ ವೇದಿಕೆಯ ಮೇಲೆ ಹೆಚ್ಚು ಹೆಚ್ಚು ಕಾಣದಾದರು. ಆಕಾಶವಾಣಿಯಲ್ಲಿ ಒಂದು ವಿಚಿತ್ರ ಘಟನೆ. ಒಮ್ಮೆ ಮದರಾಸು ಮ್ಯೂಸಿಕ್ ಅಕಾಡೆಮಿಯಲ್ಲಿ ರಾಯರಿಗೆ ವೀಣೆ ಕಚೇರಿ ಮಾಡಲು

ಆಹ್ವಾನ ಬಂದಿತು. ಕಚೇರಿ ಮಾಡಿಬಂದರು. ಬಂದ ಮೇಲೆ ಸಂತೋಷದ ಬದಲು ಕಾದಿತ್ತು ವಿಪತ್ತು. ``ಲಿಖಿತ ಅಪ್ಪಣೆ ಇಲ್ಲದೆ ಹೇಗೆ ಕಚೇರಿ ಮಾಡಿದಿರಿ ನಿಮ್ಮ ಮೇಲೆ ಏಕೆ ಶಿಸ್ತಿನ ಕ್ರಮ ನಡೆಸಬಾರದು'' ಎಂಬ ನೋಟೀಸು. ಆಕಾಶವಾಣಿ ಡೈರೆಕ್ಟರರಿಂದ.

ವೆಂಕಟಸುಬ್ಬರಾಯರು ವೀಣೆಯ ಶಿಕ್ಷಣದಲ್ಲಿ ಒಳ್ಳೆಯ ಕೈ. ಅದರ ಫಲವಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿಯೂ ಸ್ವಲ್ಪಕಾಲ ವೀಣೆಯ ಅಧ್ಯಾಪಕರಾಗಿದ್ದರು. ರಾಜ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ಸಂಸ್ಥೆಗಳ ಪ್ರಶಸ್ತಿ ಪಡೆದಿದ್ದಾರೆ. ಮಿತಭಾಷಿಯಾದರೂ ವಿಷಯಗಳ ಬಗೆಗೆ ಸೂಕ್ಷ್ಮ ಮತ್ತು ವಿವೇಚನಾಪೂರಿತ ದೃಷ್ಟಿ. ಕಲೆಯ ಬಗೆಗೂ ಹಳೆಯದನ್ನೇ ನೆನೆಯುತ್ತಾ ಹೋಯಿತಲ್ಲ ಎಂದು ಹಲುಬುವವರಲ್ಲ. ಅದರ ಮೌಲ್ಯ, ನಾಲ್ಕಾರು ಕಾಲ ನಿಲ್ಲಬಲ್ಲ ಗುಣಗಳೇ ಮುಂತಾದವನ್ನು ಅರಿತವರು. ಮಾತಿನಲ್ಲಿ ಈ ಹೃದಯ ವೈಶಾಲ್ಯ ಕಾಣಬರುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ಸಜ್ಜನ ಎಂಬ ಕೂಟಕ್ಕೆ ಸೇರಿದವರು. ★ ★

ಪ್ರಜಾವಾಣಿ, 1983

21. ಸಂಪ್ರದಾಯ ಅನುಸರಿಸಿದವರು

ಅದು ಒಂದು ವಿಚಿತ್ರವೆನ್ನಬೇಕು. ಒಂದು ವಾರದ ಅಂತರದಲ್ಲಿ ರಾಜ್ಯದ ತಾಳವಾದ್ಯ ಕ್ಷೇತ್ರದ ಇಬ್ಬರು ಹಿರಿಯ ವಿದ್ವಾಂಸರು ಮರೆಯಾದರು. ಮೊದಲು ಎಂ.ಎಲ್. ವೀರಭದ್ರಯ್ಯ. ಅವರ ಹಿಂದೆಯೇ ಐದಾರು ದಿನಗಳ ನಂತರ ಕೆ.ಎಸ್. ಮಂಜುನಾಥ್.ಇದರಲ್ಲಿಯೂ ಸಂಪ್ರದಾಯ ಬಿಡಲಿಲ್ಲವೋ ಎನ್ನುವಂತಿತ್ತು.

ವೀರಭದ್ರಯ್ಯನವರು ವಯಸ್ಸಿನಲ್ಲಿ ಹಿರಿಯರು. ಅಲ್ಲದೆ ಅವರು ನುಡಿಸುತ್ತಿದ್ದ ವಾದ್ಯ – ಮೃದಂಗ. ಕಚೇರಿಯ ತಾಳವಾದ್ಯಗಳಲ್ಲಿ ಸಂಪ್ರದಾಯದಂತೆ ಅದಕ್ಕೆ ಮೊದಲ ಸ್ಥಾನ. ಇತರ ಘಟ, ಖಂಜರಿ ಮುಂತಾದವುಗಳು ಅದರ ಹಿಂದೆ ಅನುಸರಿಸುವುದು. ಈ ಸಂಪ್ರದಾಯವು ಇಲ್ಲಿಯೂ ಅನುಸರಿಸಿದಂತೆ ಕಾಣಬರುತ್ತದೆ. ಅದು ಈ ತಾಳವಾದ್ಯಗಳ ಕರ್ತವ್ಯ ಮತ್ತು ಧರ್ಮವೂ ಹೌದು. ಅಂದರೆ ಅನುಸರಿಸುವುದು.

ಸಾಮ್ಯ – ಅಂತರ

ಈ ಭಾಗದಲ್ಲಿ ಇಬ್ಬರದೂ ಸಾಮ್ಯ. ಇತರ ಕೆಲವು ಅಂಶಗಳಲ್ಲಿಯೂ ಅಂದರೆ ಅವರವರ ವಾದ್ಯಗಳ ನಾದಶುದ್ಧತೆ ಮತ್ತು ಸಾಮ್ಯ, ವೇದಿಕೆಯ ಮೇಲೆ ಸಂಪ್ರದಾಯ ಮತ್ತು ಸಭಾ ಮರ್ಯಾದೆಗೆ ಉಚಿತವಾದ ನಡೆವಳಿಕೆ. ತಾವು ಕಲಿತ ವಿದ್ಯೆಯ ಬಗೆಗೆ ನಿಷ್ಠೆ ಮುಂತಾದವುಗಳಲ್ಲಿ ಹಾಗೆಯೇ ಅನೇಕ ಅಂಶಗಳಲ್ಲಿ ಮುಖ್ಯವಾಗಿ ಸ್ವಭಾವದಲ್ಲಿ ಅಂತರ. ವೀರಭದ್ರಯ್ಯನವರು ಬಹು ಸಾಧು. ನಾಲ್ಕು ಜನರ ಮಧ್ಯೆ ಇದ್ದರೆ ಅವರ ಇರವೇ ತಿಳಿದು ಬರುತ್ತಿರಲಿಲ್ಲ.

ಮಂಜುನಾಥ್‌ರವರು ಇದ್ದ ಕಡೆ ಅವರ ಮೃದು ದನಿ ಕೇಳಿಬರುವುದಲ್ಲದೆ ಸ್ವಾರಸ್ಯವಾದ ಕಿರು ಕತೆಗಳೂ ಕೇಳಿಬರುತ್ತಿದ್ದುವು. ಅವರ ಮಾತುಗಳು ಮಂಜುರವರ ವಾದ್ಯವಾದನದಷ್ಟೇ ಸ್ವಾರಸ್ಯ.

ವೀರಭದ್ರಯ್ಯನವರು ಹುಟ್ಟಿಬೆಳೆದುದು ಸಂಗೀತ ವಾತಾವರಣದಲ್ಲಿ. ಮನೆಯಲ್ಲಿ ವೀಣೆ, ತಬಲಾಗಳ ನಾದ ಮೊಳಗುತ್ತಿತ್ತು. ಅಣ್ಣ ನಂಜುಂಡ ಶಾಸ್ತ್ರಿಗಳಿಂದ ಅವರಿಗೆ ಮೊದಲು ಮಾರ್ಗದರ್ಶನ. ಮುಂದೆ ತಂಜಾವೂರಿನಲ್ಲಿ ಹೋಗಿ ವೈದ್ಯನಾಥ್ ಅಯ್ಯರ್‌ರವರ ಮನೆಯಲ್ಲಿ ಪಾಲಕ್ಕಾಡು ಮಣಿ ಅಯ್ಯರ್‌ರವರಿಂದ ಮೃದಂಗ ಕಲೆಯಲ್ಲಿ ಶಿಕ್ಷಣ ಗುರುಕುಲವಾಸ ರೀತಿಯಲ್ಲಿ.

ಬೆಂಗಳೂರಿಗೆ ಹಿಂದಿರುಗಿದ ನಂತರ ಮೃದಂಗ ವಾದನವನ್ನೇ ವೃತ್ತಿಯನ್ನಾಗಿ ಮಾಡಿಕೊಂಡರು. ಆಗ ಪ್ರಾರಂಭವಾಗಿದ್ದ ಸರಸ್ವತಿ ಆರ್ಕೆಸ್ಟ್ರಾದಲ್ಲಿ ವೀರಭದ್ರಯ್ಯನವರೂ ಪಾಲುಗೊಂಡು ವಾದ್ಯ ಪ್ರಬಂಧ ರಚನೆಗಳಲ್ಲಿ ಸಹಕರಿಸುತ್ತಿದ್ದರು. ಈ ತರುಣನ ಕೈಚಳಕವನ್ನು ಗಮನಿಸಿದ ವಿದ್ವಾಂಸರು ಪಕ್ಕವಾದ್ಯಕ್ಕೆ ಕರೆಸಿಕೊಳ್ಳುವ ಪ್ರಾರಂಭ. ಪ್ರಾಯಶಃ ರಾಜ್ಯದ ಹಾಗೂ ಕಣಿವೆ ಕೆಳಗಿನ ಖ್ಯಾತ ಸಂಗೀತಗಾರರಿಗೆಲ್ಲಾ ಮೃದಂಗ ಪಕ್ಕವಾದ್ಯ ನುಡಿಸಿದ್ದರು ವೀರಭದ್ರಯ್ಯ.

ಹೃದಯವಂತ

ಒಂದು ಕಾಲದಲ್ಲಿ ಹೊನ್ನಪ್ಪ ಭಾಗವತರ ಗಾಯನ. ಭುವನೇಶ್ವರಯ್ಯನವರ ಪಿಟೀಲು ಮತ್ತು ವೀರಭದ್ರಯ್ಯನವರ ಮೃದಂಗ. ಈ ಸೆಟ್ ಬಹು ಜನಾದರಣೀಯವಾಗಿತ್ತು ಮತ್ತು ವಿಜೃಂಭಿಸಿತ್ತು. ಹಾಗೆಯೇ ಚೌಡಯ್ಯನವರ ಅನೇಕ ಕಚೇರಿಗಳಲ್ಲಿ ರಾಜ್ಯದ ಒಳಗೆ ಮತ್ತು ಹೊರಗೆ ವೀರಭದ್ರಯ್ಯನವರು ಮೃದಂಗ ಪಕ್ಕವಾದ್ಯ ನುಡಿಸಿದ್ದಾರೆ– ಅದೂ ಚೌಡಯ್ಯನವರ ಆಹ್ವಾನ. ಕೆಲವು ವೇಳೆ ಆಜ್ಞೆಯಿಂದ. ಅವರ ಸಹ ವಾದನದ ಬಗೆಗೆ ಬಹುತೇಕ ಪ್ರತಿಕ್ರಿಯೆ ನಾದಸೌಖ್ಯ. ನಿರ್ಣಯದಿಂದ ಕೂಡಿದ ಅನುಸರಣೆ. ಯಾವುದೂ ಅತಿ ಇಲ್ಲದೆ ಒಟ್ಟಂದವನ್ನು ಹೆಚ್ಚಿಸುವಂತಹ ಕೈಗುಣ. ಎಲ್ಲದಕ್ಕಿಂತ ಒಬ್ಬ ಸಂಭಾವಿತ. ಸಜ್ಜನ ಎಂದು ಮಾನಿತರಾಗಿದ್ದರವರು. ಧನದ ದಾಹವಿರಲಿಲ್ಲ. ಅನೇಕ ಸಲ ಆದರಲ್ಲಿಯೇ ಪ್ರಯೋಗಾರ್ಥ ರೀತಿಯ ಕಾರ್ಯಕ್ರಮಗಳಲ್ಲಿ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಬಂದು ಪಾಲುಗೊಳ್ಳುತ್ತಿದ್ದ ಸಹೃದಯಿ ವೀರಭದ್ರಯ್ಯನವದು. ಕಲಾತ್ಮಕ ಜೀವನ ಅನೇಕ ಬಿರುದು ಪ್ರಶಸ್ತಿಗಳನ್ನೂ ತಂದಿದ್ದಿತು. ಕ್ಷೇತ್ರವು ಒಬ್ಬ ಪ್ರತಿಭಾವಂತ ಅಂತಯೇ ಹೃದಯವಂತ ಕಲಾವಿದನನ್ನು ಕಳೆದುಕೊಂಡಿತು.

ಚೆಂಡೆ ಮದ್ದಲೆ ಮಧ್ಯೆ

ಕೆ.ಎಸ್. ಮಂಜುನಾಥನ್ ಅವರು ನಡೆದು ಬಂದ ದಾರಿ ಇನ್ನೊಂದು ರೀತಿಯದು. ಹುಟ್ಟಿಬೆಳೆದುದು ತಾಳವಾದ್ಯಗಳ ಅಂದರೆ ಚೆಂಡೆಮದ್ದಳೆಗಳರವರ ಮಧ್ಯೆ. ಆದರೆ ಕೃಷಿ ಮಾಡಿದ್ದು ಘಟ. ಇವೆರಡರ ಮಧ್ಯೆ ಸ್ವಲ್ಪ ಕಾಲ ಕೈ ಆಡಿಸಿದ್ದು ಮೃದಂಗದ ಮೇಲೆ. ಮಲೆನಾಡಿನ

ಪರಿಸರದಲ್ಲಿ ಹುಟ್ಟಿ ಬೆಳೆದ ಕಡೂರು ಶೇಷಗಿರಿ ಉಪಾಧ್ಯಾಯರ ಮಗ ಮಂಜುನಾಥ ಮದ್ದಳೆಯಿಂದ ಮೃದಂಗದ ಕಡೆಗೆ ವಾಲಿ ಪಾಲಘಾಟ್ ಅಯ್ಯರುಗಳ ಬಳಿ ಮಾರ್ಗದರ್ಶನ ಪಡೆದು, ಬೆಂಗಳೂರಿನ ವಕೀಲ್ ಎಲ್.ಎಸ್. ಶೇಷಗಿರಿರಾಯರ ಬಳಿ ವಾದನ ತಂತ್ರವನ್ನು ವೃದ್ಧಿಪಡಿಸಿಕೊಂಡರು. ಮುಂದೆ ಈ ಬಲದಿಂದ ಘಟವಾದ್ಯ ಕಲೆಯನ್ನು ಸ್ವಂತ ಮೆಹನತ್ತಿನಿಂದ ಸಂಪಾದಿಸಿಕೊಂಡರು. 'ಮಾಣಿ' ಘಟವಾದನದಲ್ಲಿ ಪಡೆದ ಚಾತುರ್ಯವನ್ನು ಬಣ್ಣಿಸಿ ಮಂಜುನಾಥರ ಬಗೆಗೆ ಪ್ರಜಾವಾಣಿಯಲ್ಲಿ ಬಹು ಹಿಂದೆಯೇ ಲೇಖನ ಪ್ರಕಟವಾಗಿದೆ.

ಮಂಜುವಿನ ಘಟವಾದನ ಚಳಕ ಎಲ್ಲರಿಗೂ ಪರಿಚಿತವಾದರೂ ಕಚೇರಿ ವೇದಿಕೆಯ ಮೇಲೆ ಅದಕ್ಕೆ ಸರಿಯಾದ ಅವಕಾಶ ದೊರೆಯಬೇಕಾದರೆ ಸ್ವಲ್ಪ ಸಮಯವೇ ಆಯಿತು. ಇದನ್ನು ದೊರಕಿಸಿಕೊಟ್ಟವರು – ಖ್ಯಾತ ಪಿಟೀಲು ವಿದ್ವಾಂಸ ಮೈಸೂರು ಚೌಡಯ್ಯನವರು. ಅವರಿಗೆ ಮಂಜು ಅಂದರೆ ಏನೋ ಮಮತೆ. ಆತನ ನಮ್ರತೆಯೂ ಕಾರಣವಿರಬಹುದು – ಈ ವಾತ್ಸಲ್ಯ ಮತ್ತು ಕೋಪಮಿಶ್ರಿತ ಸಂಬಂಧಕ್ಕೆ ಅಂಜುತ್ತಿದ್ದ ಮಂಜುವಿನ ಘಟ ಪಕ್ಕವಾದ್ಯಕ್ಕೆ ಚೌಡಯ್ಯನವರೇ ನೇರವಾಗಿ ಮುತುವರ್ಜಿ ವಹಿಸಿ ಪ್ರಸಿದ್ಧ ದಾಕ್ಷಿಣಾತ್ಯ ಸಂಗೀತಗಾರರ ಕಚೇರಿಯಲ್ಲಿ ಘಟ ಪಕ್ಕವಾದ್ಯ ನುಡಿಸಿ, ಮಂಜುನಾಥ್ ಮಂಜುನಾಥನ್ ಎಂದು ಪ್ರಸಿದ್ಧಿಗೆ ಬರುವಂತೆ ಮಾಡಿದರು. ಚೌಡಯ್ಯನವರ ವಿಷಯದಲ್ಲಿ ಬಹು ಭಕ್ತಿ ಮಂಜುನಾಥರಿಗೆ.

ಪಕ್ಕ ವಾದ್ಯದವರಿಗೆ ಘನತೆ

ಮಂಜುನಾಥರ ವಾದನದ ವಿಶೇಷವೆಂದರೆ – ಮೊದಲು ವೇದಿಕೆಯ ಮೇಲೆ ಎದ್ದು ಕಾಣುವಂತಹ ವ್ಯಕ್ತಿತ್ವ. ಎರಡನೆಯದು ಅವರ ವಾದ್ಯದ ನಾದ. ಅದರ ಹೊಳಪು, ಶ್ರವ್ಯತೆ ಯಾವುದೂ ಅತಿ ಇಲ್ಲದೆ ಉಚಿತ ಪ್ರಮಾಣದಲ್ಲಿ ಹೊಂದಿಕೊಂಡು ಹೋಗುವಂತಹ ನುಡಿಸಾಣಿಕೆ. ಈ ಗುಣಗಳಿಂದ ಅವರು ಹಿರಿಯ ಸಂಗೀತಗಾರರಿಗೆ ಅಚ್ಚುಮೆಚ್ಚಾಗಿದ್ದರು. ಇನ್ನು ವೃತ್ತಿಗೆ ಸಂಬಂಧಪಟ್ಟ ಹಾಗೆ ಪರೋಕ್ಷ ರೀತಿಯಲ್ಲಾದರೂ ಅವರ ಪ್ರಭಾವ. ಹಿಂದೆ ಸಂಗೀತ ಕಚೇರಿಗಳಲ್ಲಿ ಒಟ್ಟು ಸಂಭಾವನೆ ಕೊಡಲಾಗುತ್ತಿದ್ದುದು – ಪ್ರಧಾನ ಸಂಗೀತಗಾರನಿಗೆ. ಕಚೇರಿಯಾದ ಮೇಲೆ ಆತನು ಸಿಂಹಪಾಲನ್ನು ಸ್ವಂತಕ್ಕಿಟ್ಟುಕೊಂಡು ಚೂರುಪಾರು ಪಕ್ಕವಾದ್ಯದವರಿಗೆ ದಕ್ಕುತ್ತಿತ್ತು. ಇದು ಎಲ್ಲರೂ ಬಲ್ಲ ವಿಷಯವೇ. ಆದರೆ ಮಂಜುನಾಥ್ ಒಂದು ಘಟ್ಟದಲ್ಲಿ ಕನಿಷ್ಠ ಸಂಭಾವನೆ ನಿಗದಿ ಮಾಡಿ ಅದಕ್ಕೆ ಕಡಿಮೆಯಾದರೆ ನಿರಾಕರಿಸಿದರು. ಚೌಡಯ್ಯನವರೂ ದಾರಿಗೆ ಬರಬೇಕಾಯಿತು. ಇದರಿಂದ ಎಲ್ಲ ಪಕ್ಕವಾದ್ಯಗಾರರಿಗೂ ಹೆಚ್ಚು ಸಂಭಾವನೆ ದೊರೆಯುವಂತಾಯಿತು.

ಮಂಜುನಾಥ್ ಅನೇಕ ಪದವಿ ಪ್ರಶಸ್ತಿಗಳನ್ನು ಪಡೆದಿದ್ದರು. ಸರಸಿ. ಒಳ್ಳೆಯ ಮಾತುಗಾರ. ಅವರ ಅನುಭವಗಳನ್ನು ಹೇಳತೊಡಗಿದರೆ ಆ ಕತೆಗಳು ಅವರ ವಾದನದಷ್ಟೇ ಸ್ವಾರಸ್ಯ. ಅವರ ಅನುಭವಗಳನ್ನು ಧ್ವನಿಮುದ್ರಿಸಿದ್ದರೆ ನಮ್ಮ ಸಂಗೀತ ಇತಿಹಾಸಕ್ಕೆ ಪ್ರಯೋಜನವಾಗುತ್ತಿತ್ತು. ಸಾವಿನಲ್ಲಿಯೂ ಈ ಇಬ್ಬರು ಕಲಾವಿದರಲ್ಲಿ ಒಂದು ಸಾಮ್ಯ ವಿಚಿತ್ರವೆನಿಸಿತು. ಪ್ರಜ್ಞೆ ಹೋದ

ಸ್ಥಿತಿಯಲ್ಲಿ ವೀರಭದ್ರಯ್ಯನವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಪ್ರಜ್ಞೆ ಮರಳದೇ ಅಸುನೀಗಿದರು. ಮಂಜುನಾಥ್ ರಾತ್ರಿ ಮಲಗಿದವರು ಬೆಳಿಗ್ಗೆ ಏಳಲಿಲ್ಲ. ನಿದ್ರೆಯಲ್ಲಿಯೇ ನಿಧನರಾದರು. ★

ಪ್ರಜಾವಾಣಿ, 1989

22. ಭಾರತೀಯ ಸಂಗೀತಕ್ಕೆ ಹೊಸ ವರ್ಚಸ್ಸನ್ನಿತ್ತ ಗಾಯಕಕವಿ ಅಮೀರ್ ಖುಸ್ರು

ದಕ್ಷಿಣ ಭಾರತದಿಂದ ದೆಹಲಿಗೆ ಹೋಗುವಾಗ ಹೊಸದಿಲ್ಲಿ ತಲಪುವ ಮುನ್ನ ರೈಲು ನಿಲ್ಲುವ ಕಡೆಯ ಸ್ಟೇಷನ್ನಿನ ಹೆಸರು – ಹಜರತ್ ನಿಜಾಮುದ್ದೀನ್. ಹಿಂಬದಿಯಲ್ಲಿ ಮೊಘಲ್ ಚಕ್ರವರ್ತಿ ಹುಮಾಯೂನನ ಭವ್ಯವಾದ ಗೋರಿ ಕಂಡುಬರುತ್ತದೆ. ಸ್ಟೇಷನ್ನಿಗೆ ಆ ಹೆಸರು ಬರಲು ಕಾರಣನಾದ ಸಾಧು ನಿಜಾಮುದ್ದೀನನ ಗೋರಿ ಹುಮಾಯೂನನ ಗೋರಿಗೆ ಇನ್ನೂ ಸ್ವಲ್ಪ ಹಿಂದಕ್ಕಿದೆ. ಆ ಸಾಧುವಿನ ಗೋರಿಯದೇ ಒಂದು ವಿಶೇಷ. ಮಥುರಾ ರಸ್ತೆಯಿಂದ ಬಲಕ್ಕೆ ತಿರುಗಿ ಸಣ್ಣ ಗೊಂದಿ, ಗಲ್ಲಿಗಳನ್ನು ಹಾದು ಪ್ರವೇಶಿಸಬೇಕು.

ಆದರೆ ಪ್ರವೇಶಮಾಡಿದ ಕೂಡಲೆ ಅದರದೇ ಒಂದು ವಿಶೇಷ ಪ್ರಪಂಚ. ತಂಪಾದ ಮರದ ನೆಳಲು, ದೆಹಲಿಯಲ್ಲಿ ಒಂದಾನೊಂದು ಯುಗದಲ್ಲಿ ಜೀವಿಸಿದ್ದ ರಾಜಮನೆತನದವರ, ಅಧಿಕಾರಿ ಹಾಗೂ ಇತರ ಪ್ರಸಿದ್ಧ ಪುರುಷರಗೋರಿಗಳೂ ಇವೆ. ಇವುಗಳ ಮಧ್ಯೆ ಅಮೃತಶಿಲೆಯಿಂದ ನಿರ್ಮಿತವಾದ ನಿಜಾಮುದ್ದೀನರ ಗೋರಿ. ಅದರ ಮುಂದುಗಡೆ ಮೊಘಲ್ ಚಕ್ರವರ್ತಿ ಮಹಮ್ಮದ್ ಷಾರಂಗೀಲೆಯ ಗೋರಿ. ಅದರಿಂದಾಚೆಗೆ ಸರಳವಾದ ಒಂದು ಕಟ್ಟಡ. ಅದರ ಮಧ್ಯೆ ಅಮೀರ್ ಖುಸ್ರು ಅವರ ಗೋರಿ.

ಇಲ್ಲಿ ದೀರ್ಘ ನಿದ್ರೆ ಮಾಡುತ್ತಿರುವ ಇತಿಹಾಸಪುರುಷರಲ್ಲಿ ನಿಜಾಮುದ್ದೀನ್ ಔಲಿಯಾ ಮತ್ತು ಅಮೀರ್ ಖುಸ್ರು ಅವರಿಬ್ಬರದೇ ಒಂದು ವಿಶೇಷವಾದ ಜೋಡಿ. ಜೀವನದಲ್ಲಿ ಬಹು ಅನ್ಯೋನ್ಯವಾಗಿದ್ದುದೇ ಅಲ್ಲದೆ ದೆಹಲಿಯ ಆರು ಸುಲ್ತಾನ್ ಷಾಹಿಯ ಇತಿಹಾಸದಲ್ಲಿ ಮುಖ್ಯಪಾತ್ರವನ್ನೂ ವಹಿಸಿದ್ದವರು. ನಿಜಾಮುದ್ದೀನ್ ಔಲಿಯಾ ಗುರು; ಅಮೀರ್ ಖುಸ್ರು ಶಿಷ್ಯ. ಅದು ಭಾರತದ ಇತಿಹಾಸದಲ್ಲಿ, ಅದರಲ್ಲಿಯೂ ಸಂಗೀತ ಇತಿಹಾಸದಲ್ಲಿ ಬಹುಮುಖ್ಯ ಯುಗವೆನ್ನಬಹುದು. ಅಮೀರ್ ಖುಸ್ರು ಭಾರತೀಯ ಸಂಗೀತಕ್ಕೆ ಕಸಿಮಾಡಿ ಕಲೆಗೆ ಹೊಸಕಳೆ ಕೊಟ್ಟವನೆಂದು ಮಾನಿತನಾಗಿದ್ದಾನೆ. ಇದಕ್ಕೆ ಪರೋಕ್ಷವಾಗಿಯಾದರೂ ಬೆಂಬಲ ನಿಜಾಮುದ್ದೀನ್. ಈ ಸಂಗೀತದ ತೀವ್ರ ಅಭಿಮಾನದಿಂದ ಆಗಿನ ಇಬ್ಬರು ಚಕ್ರವರ್ತಿಗಳ ಆಗ್ರಹಕ್ಕೂ ಗುರುಯಾಗಿದ್ದ – ನಿಜಾಮುದ್ದೀನ್. ಆದರೆ ಕಾವ್ಯ ಮತ್ತು ಕಲೆಯಲ್ಲಿದ್ದ ಪ್ರೌಢಿಮೆಯಿಂದ ಅದೇ ಚಕ್ರವರ್ತಿಗಳ ಪ್ರೀತಿಗೆ ಪಾತ್ರನಾದ – ಅಮೀರ್ ಖುಸ್ರು.

ಅಮೀರ್ ಖುಸ್ರು ಕವಿಯೇ ಅಥವಾ ಸಂಗೀತಜ್ಞನೇ? ಎರಡೂ ಕ್ಷೇತ್ರಗಳಲ್ಲಿಯೂ ಆತನು ಸಮವಾಗಿ ಮಾನಿತನಾಗಿದ್ದಾನೆ. ಅವನು ಬಿಟ್ಟುಹೋಗಿರುವ ಸಾಮಗ್ರಿಯೆಲ್ಲಾ ಕಾವ್ಯವೇ. ಆದರೆ ಆತನು ಉತ್ತಮ ಗಾಯಕನೂ ಹೌದು. ಬಾಲ್ಯದಿಂದಲೂ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡುವ ಪ್ರವೃತ್ತಿ ಅವನದು. ಈ ಕಾವ್ಯಗಾಯನವೇ ಸಾಧುವಾದ ನಿಜಾಮುದ್ದೀನ್‌ನಿಂದ ಹಿಡಿದು ಚಕ್ರವರ್ತಿಗಳವರೆಗೂ ಎಲ್ಲರನ್ನೂ ಆಕರ್ಷಿಸಿ ಅವರ ಪ್ರೋತ್ಸಾಹ ಹಾಗೂ ಮರ್ಯಾದೆಗಳನ್ನೂ ಮತ್ತು ಐಶ್ವರ್ಯವನ್ನೂ ಖುಸ್ರುವಿಗೆ ತಂದುಕೊಟ್ಟುದು. ಆದರೆ ಸಂಗೀತದಲ್ಲಿ ಹೊಸ ಪಂಥವನ್ನಾಗಲಿ ಹೊಸ ಸಾಮಗ್ರಿಯನ್ನಾಗಲಿ ನಿರ್ಮಿಸಿದುದಕ್ಕೆ ಆತನ ಗ್ರಂಥಗಳಲ್ಲಿಯೇ ದಾಖಲೆಗಳಿಲ್ಲ. ಭಾರತೀಯ ಸಂಗೀತಕ್ಕೆ ಅಮೀರ್ ಖುಸ್ರುವಿನ ಕಾಣಿಕೆ ಎಂದು ಹೇಳಲಾದ ವಿಷಯಗಳ ಬಗೆಗೆ ಸಾಕಷ್ಟು ಜಿಜ್ಞಾಸೆ ಆಗಿದೆ. ಉಂಟು ಅಥವಾ ಇಲ್ಲ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಪುರಂದರದಾಸರನ್ನು ಕರ್ನಾಟಕ ಸಂಗೀತ ಪಿತಾಮಹ ಎಂದು ಹೇಳಿದ ಹಾಗೆ.

ಅಮೀರ್ ಖುಸ್ರು ಹುಟ್ಟಿದುದು – 1253ರಲ್ಲಿ. ಈಗಿನ ಉತ್ತರಪ್ರದೇಶದ ಮೋಮೀನ್ ಪುರ ಎಂಬ ಗ್ರಾಮದಲ್ಲಿ. ಆತನ ಪೂರಾ ಹೆಸರು ಅಬುಲ್ ಹಸನ್ ಯಾಮಿನುದ್ದೀನ್ ಖುಸ್ರು. ತಂದೆ ಅಮೀರ್ ಸೈಫುದ್ದೀನ್ ಮಹಮದ್. ಮೂಲತಃ ಮಧ್ಯ ಏಷ್ಯದಿಂದ ಬಂದವನು; ತುರ್ಕರ ಹಜಾರಾ ಬುಡಕಟ್ಟಿಗೆ ಸೇರಿದವನು. ದೆಹಲಿಯ ಸುಲ್ತಾನ್ ಆಲ್ತಮಷನ ಆಸ್ಥಾನದ ಅಧಿಕಾರಿ. ಆದುದರಿಂದ ಬಾಲ್ಯದಿಂದಲೂ ಅಮೀರ್ ಖುಸ್ರು ಅರಮನೆಯ ನೆರಳಿನಲ್ಲಿ, ವಾತಾವರಣದಲ್ಲಿ ಅಧಿಕಾರಿ, ಪಂಡಿತರ ಮಧ್ಯೆ ಬೆಳೆದವನೆಂದು ಹೇಳಬೇಕಾಗಿಲ್ಲ. ತನ್ನ 71 ವರುಷದ ಜೀವನದಲ್ಲಿ ದೆಹಲಿಯ ಆರು ಸುಲ್ತಾನರ ಆಳ್ವಿಕೆಯನ್ನು ಕಂಡವನವನು. ಅವರ ವಿಶ್ವಾಸವನ್ನು ಗಳಿಸಿದವನು. ಇದಕ್ಕೆ ವಿರುದ್ಧ ಅವನ ಗುರು. ನಿಜಾಮುದ್ದೀನ್ ಯಾವ ಚಕ್ರವರ್ತಿಯ ಆಸ್ಥಾನಕ್ಕೂ ಪ್ರವೇಶಮಾಡನು. ಅವನ ಸಮಯವೆಲ್ಲಾ ಸಾಮಾನ್ಯ ಜನತೆಗೆ, ಬಡವರಿಗೆ ಮೀಸಲು. ತನ್ನ ಭೇಟಿಗೆ ಬಂದ ಸುಲ್ತಾನನೊಬ್ಬನನ್ನು ಹಾಗೆಯೇ ಹಿಂದಕ್ಕೆ ಕಳಿಸಿದಂತಹವನು. ವಿರಕ್ತಿ ಎಂಬುದನ್ನು ಅವನು ನಿಜವಾಗಿಯೂ ಅನುಷ್ಠಾನಕ್ಕೆ ತಂದಿದ್ದನೆನ್ನಬಹುದು.

ಈ ಗುರು ಶಿಷ್ಯರಿಬ್ಬರ ಜೀವನಕಾಲದಲ್ಲಿ ದೆಹಲಿಯನ್ನು ಆಳಿದ ಸುಲ್ತಾನರು - (1) ಘಯಾಸುದ್ದೀನ್ ಬಲ್ಬನ್, (2) ಕೈಕೋಬಾದ್, (3) ಜಲಾಲುದ್ದೀನ್ ಖಿಲ್ಜಿ (4) ಅಲ್ಲಾಉದ್ದೀನ್, (5) ಮುಬಾರಕ್ ಷಾ ಖಿಲ್ಜಿ ಮತ್ತು (6) ಘಯಾಸುದ್ದೀನ್ ತುಘಲಕ್, ಇವರಲ್ಲಿ 1 ಮತ್ತು 4ನೆಯವರನ್ನು ಬಿಟ್ಟು ಮಿಕ್ಕವರೆಲ್ಲಾ ದುರ್ಮರಣ ಪಡೆದವರೇ, 5 ಮತ್ತು 6ನೆಯವರಿಗೆ ನಿಜಾಮುದ್ದೀನ್ ಬಗೆಗೆ ದ್ವೇಷ. ಮುಬಾರಕ್ ಷಾ ಖಿಲ್ಜಿ ನಿಜಾಮುದ್ದೀನನ ಮೇಲೆ ಆಪಾದನೆ ಹೊರಿಸಿ ಒಂದು ದಿನ ಗೊತ್ತು ಮಾಡಿ ಆದಿನ ಮಧ್ಯಾಹ್ನದೊಳಗೆ ಆಸ್ಥಾನದಲ್ಲಿ ಹಾಜರಾಗಬೇಕೆಂದು ಆಜ್ಞೆಮಾಡಿ ಬರದಿದ್ದರೆ ಏನು ಮಾಡಬೇಕೆಂದು ತನಗೆ ಗೊತ್ತೆಂದೂ ಎಚ್ಚರಿಕೆ ಇತ್ತ. ಈ ಇಬ್ಬರ ಘರ್ಷಣೆ ಹೇಗೆ ಮುಗಿಯುತ್ತದೆಯೋ ಎಂದು ದೆಹಲಿಯೆಲ್ಲಾ ತಲ್ಲಣಗೊಂಡಿತು. ಆದರೆ ನಿಜಾಮುದ್ದೀನ್ ಅರಮನೆಗೆ ಹೋಗಲಿಲ್ಲ.

ಗಡುವಿನ ಹಿಂದಿನ ರಾತ್ರಿ ಮುಬಾರಕ್ ಷಾ ಖಿಲ್ಜಿಯ ಕೊಲೆಯಾಯಿತು.

ಇಂತಹುದೇ ಸಂದರ್ಭ : ಘಯಾಸುದ್ದೀನ್ ತುಘಲಕ್ ಕಾಲದಲ್ಲಿ ನಿಜಾಮುದ್ದೀನನ ವಿಚಾರಣೆ - ಸುಲ್ತಾನನ ಮುಂದೆ. ಆಪಾದನೆ? ಸಂಗೀತ ನರ್ತನಗಳಿಗೆ ತನ್ನ ನಿವಾಸದಲ್ಲಿ ಪ್ರೋತ್ಸಾಹ ಕೊಡುತ್ತಿದ್ದಾನೆಂದು. ಇಸ್ಲಾಮಿನ ಆಚಾರದಲ್ಲಿ ಈ ಸಂಗೀತ ನರ್ತನಗಳು ನಿಷಿದ್ಧ. ಇಲ್ಲಿ ವಾದ ಮಾಡಿ ಜಯಿಸಿದ, ನಿಜಾಮುದ್ದೀಮನ್. ಆದರೆ ಸ್ವಲ್ಪ ದಿನಗಳಲ್ಲೇ ಇನ್ನೊಂದು ಆಪತ್ತು. ಸುಲ್ತಾನನು ಯಾವುದೋ ಯುದ್ಧದಲ್ಲಿ ಜಯಗಳಿಸಿ ನಾನು ದೆಹಲಿಗೆ ಬರುವವೇಳೆಗೆ ನಿಜಾಮುದ್ದೀನ್ ದೆಹಲಿ ಬಿಟ್ಟು ತೊಲಗಬೇಕು. ಇಲ್ಲದಿದ್ದರೆ ... ಎಂದು ಆಜ್ಞೆ ಕಳುಹಿಸಿದ. ತಿರುಗಿ ದೆಹಲಿಯಲ್ಲಿ ಕಳವಳ. ನಿಜಾಮುದ್ದೀನ್ ಮಾತ್ರ ದೆಹಲಿ ಇನ್ನೂ ದೂರವಿದೆ ಎಂದು ನಕ್ಕ. ಆ ರಾತ್ರಿಯೇ ಸುಲ್ತಾನನ ಗುಡಾರವು ಕುಸಿದು ಆತನು ನಿಧನನಾದುದು ಇತಿಹಾಸ ಓದಿದವರೆಲ್ಲಾ ಬಲ್ಲ ವಿಷಯವೇ.

ಆದರೆ ಅಮೀರ್ ಖುಸ್ರು ಈ ಎಲ್ಲ ಸುಲ್ತಾನರ ಅನುಗ್ರಹ ಮತ್ತು ವಿಶ್ವಾಸಕ್ಕೆ ಪಾತ್ರನಾಗಿದ್ದ. ಒಬ್ಬೊಬ್ಬರ ಕಾಲದಲ್ಲಿಯೂ ಅವರ ಪರಾಕ್ರಮಾದಿಗುಣಗಳು, ಅವರ ಆಳ್ವಿಕೆಯ ಸುಖದಿನಗಳನ್ನು ಪ್ರಶಂಸಿಸಿ ಮನೋಹರ ಶೈಲಿಯಲ್ಲಿ ಕಾವ್ಯರಚನೆ ಮಾಡಿದ್ದನು. ಅದರ ಫಲವಾಗಿ ಅನೇಕ ಪ್ರಶಸ್ತಿ ಮತ್ತು ಬಹುಮಾನಗಳನ್ನು ಗಳಿಸಿದುದೇ ಅಲ್ಲದೆ ಜೀವನವೂ ಸುಖಮಯವಾಗಿತ್ತು ಅವನಿಗೆ. ಒಬ್ಬ ಸುಲ್ತಾನನು ಸತ್ತು ಇನ್ನೊಬ್ಬನು ಸಿಂಹಾಸನದ ಮೇಲೆ ನೆಲೆಸುವವರೆಗೂ ಒಂದು ಕಾರ್ಮೋಡ ಅದು ಕಳೆಯುತ್ತಲೇ ಹೊಸ ಸುಲ್ತಾನನಿಂದ ಏಕರೀತಿಯ ಅನುಗ್ರಹ. ಈ ರೀತಿಯ ಆಲಂಕಾರಿಕ ಮತ್ತು ಉತ್ಪ್ರೇಕ್ಷೆಯಿಂದ ಕೂಡಿದ ರಾಜ ಪ್ರಶಂಸಾಕಾವ್ಯಗಳು ಭಾರತಕ್ಕೆ ಹೊಸದೇನಲ್ಲ. ಬಾಣನ ಹರ್ಷಚರಿತೆ ಇಲ್ಲವೆ? ಅಥವಾ ಬಿಲ್ಹಣನ ವಿಕ್ರಮಾಂಕದೇವಚರಿತವಿದೆಯಲ್ಲ. ಇಂತಹ ಆಕರ್ಷಕ ಕಾವ್ಯರಚನೆಯ ಜೊತೆಗೆ ಅವುಗಳ ರುಚಿಯನ್ನು ಎತ್ತಿ ತೋರುವಂತಹ ಗುಣವೂ ಇತ್ತು - ಅಮೀರ್ ಖುಸ್ರುವಿನಲ್ಲಿ. ಸುಶ್ರಾವ್ಯವಾದ ದನಿ. ಇಂಪಾದ ಕಾವ್ಯಗಾಯನ, ಅಂದವಾದ ಕಾವ್ಯಶೈಲಿ ಸುಲ್ತಾನರು ಮನಸೋತುದರಲ್ಲಿ ಏನೂ ಆಶ್ಚರ್ಯವಿಲ್ಲ.

ಸಂಗೀತಕ್ಕೆ ಕೊಡುಗೆ

ಇದಿಷ್ಟೂ ಅಮೀರ್ ಖುಸ್ರು ಜೀವನದ ಒಂದು ಮುಖ ಅಂದರೆ ಸಾರಸ್ವತ ಕ್ಷೇತ್ರದಲ್ಲಿ ಅದರಲ್ಲಿಯೂ ಆಸ್ಥಾನ ಕವಿಯಾಗಿ ಆತನು ಮಾಡಿದ ಸೇವೆಯ ಪ್ರಸ್ತಾಪವಾಯಿತು. ಆದರೆ ಭಾರತೀಯ ಸಂಗೀತದ ಬೆಳವಣಿಗೆಯಲ್ಲಿ ಆತನ ಪಾತ್ರವೆಂತಹುದು? ಇರಾನ್ ಸಂಗೀತದಲ್ಲಿ ತನಗಿದ್ದ ಪ್ರೌಢಿಮೆಯಿಂದ ಅದರ ಅನೇಕ ಅಂಶಗಳನ್ನು ಅಡಕಮಾಡಿ ಭಾರತೀಯ ಸಂಗೀತಕ್ಕೆ ಒಂದು ಹೊಸ ಕಳೆಯನ್ನೂ ಆಕಾರವನ್ನೂ ಅಮೀರ್ ಖುಸ್ರು ಇತ್ತನೆಂದು ಪ್ರತೀತಿ.

ಇತಿಹಾಸ ಗ್ರಂಥಗಳಲ್ಲಿ ಹೇಳಿರುವಂತೆ ಭಾರತೀಯ ಸಂಗೀತಕ್ಕೆ ಅಮೀರ್ ಖುಸ್ರುವಿನ ಅಮೂಲ್ಯ ಕಾಣಿಕೆ ಎಂದರೆ, ರಾಗಗಳಲ್ಲಿ - ಸಾಜಗಿರಿ, ಯಮನ್, ಜಿಲಾಫ್, ಶಹನಾ, ಸರ್ಪರ್ದಾ

ಮುಂತಾದುವು; ಕೃತಿಗಳಲ್ಲಿ: ಖ್ಯಾಲ್, ತರಾನ, ಕೌಲ್, ಕಲ್ಬನಾ, ಕವ್ವಾಲಿ, ನಕ್ಷ್, ಗುಲ್, ಇತ್ಯಾದಿ; ವಾದ್ಯಗಳಲ್ಲಿ: ಸಿತಾರ್, ತಬಲಾ; ತಾಳಗಳಲ್ಲಿ: ಚಾರ್‌ತಾಲ್, ಅಡಾತಾಲ್, ಚೌತಾಲ್, ಸೂಲ್‌ಫಾಕ್ತಾ ಇತ್ಯಾದಿ.

ಇತಿಹಾಸಜ್ಞರಲ್ಲಿ, ಬಹುತೇಕ ಮುಸಲ್ಮಾನ್ ಇತಿಹಾಸ ಮತ್ತು ಸಂಗೀತಜ್ಞರಲ್ಲಿ ಇಂದಿನ ಹಿಂದೂಸ್ತಾನಿ ಸಂಗೀತಪದ್ಧತಿಯ ಮೂಲಪುರುಷ ಅಮೀರ್ ಖುಸ್ರು ಎಂದೇ ನಂಬಿಕೆ.

"ಅಲ್ಲಾವುದ್ದೀನನ ಆಸ್ಥಾನದಲ್ಲಿದ್ದ ಅಮೀರ್ ಖುಸ್ರು, ಇಸ್ಲಾಂ ಸಂಪ್ರದಾಯದ ಕೌಲ್, ಕಲ್ಬನಾ ಮುಂತಾದ ಗೀತೆಗಳ ಆಧಾರದ ಮೇಲೆ ಒಂದು ಹೊಸ ಪಂಥವನ್ನೇ ಪ್ರಾರಂಭಿಸಿದ. ಇದರ ಪ್ರತಿಪಾದಕರು ಕವ್ವಾಲ್ ಅಥವಾ ಖಯಾಲಿಯಾ ಎಂದು ಪ್ರಸಿದ್ಧರಾದರು. ಈ ಪಂಥವನ್ನು ಹಲವಾರು ನಾಯಕರು ಬೆಳಗಿದರು. ಅದರಲ್ಲಿ ಮೊದಲನೆಯವನು - ಅಮೀರ್ ಖುಸ್ರು" ಎಂದು ಹೇಳಿದ್ದಾನೆ - ಹಕೀಮ್ ಮಹಮದ್ ಕರಮ್ ಇಮಾಮ್ ತನ್ನ 'ಮಾದ್ನೂಲ್ ಮೂಸಿಕಿ' ಗ್ರಂಥದಲ್ಲಿ. ಅಲ್ಲಿಯೇ ವಿವರಿಸಿದಂತೆ 'ನಾಯಕ' ಪದವಿ ಅತ್ಯಂತ ಶ್ರೇಷ್ಠವಾದುದು. ಸಂಗೀತ ಕಲಾವಿದನಿಗೆ ದೊರಕಬಹುದಾದ ಪರಮಾವಧಿ ಸ್ಥಾನ ಅದು. ಆ ಶ್ರೇಣಿ ಹೀಗಿದೆ: ಮೊದಲು ಪಂಡಿತ, ಅನಂತರ ಕ್ರಮವಾಗಿ ಗುಣಿ, ಗಂಧರ್ವ, ಜ್ಞಾನಿ, ನಾಯಕ.

ತಬಲ, ಸಿತಾರ್

ಇನ್ನು ತಬಲಾವಾದ್ಯ. ಅರಬ್ಬಿದೇಶಗಳಲ್ಲಿ ತಬಲ್ ಎಂಬ ಚರ್ಮವಾದ್ಯವಿದೆ ನಿಜ. ಆದರೆ ಅದಕ್ಕೂ ನಮ್ಮ ತಬಲಾವಾದ್ಯಕ್ಕೂ ಸಂಬಂಧವಿಲ್ಲ. ಪ್ರಾಚೀನ ಮೃದಂಗ ಅಥವಾ ಔತ್ತರೇಯರು ಹೇಳುವಂತೆ ಪಖಾವಜ್ ವಾದನವನ್ನು ಇನ್ನೂ ಸುಲಭಗೊಳಿಸಲು, ಅದರ ನಾದಕ್ಕೆ ಇನ್ನೂ ಹೆಚ್ಚಿನ ಇಂಬುಕೊಡಲು ವಾದ್ಯವನ್ನು ಎರಡು ಹೋಳುಮಾಡಿ ಎರಡು ಭಾಗಗಳೂ ಮೇಲುಮುಖನಾಗಿರುವಂತೆ ಹೊಸ ವಾದ್ಯವನ್ನು ನಿರ್ಮಿಸಿ ಅದಕ್ಕೆ 'ತಬಲಾ' ಎಂದು ಹೆಸರಿತ್ತ - ಅಮೀರ್ ಖುಸ್ರು. ಇದು ಬಹುಕಾಲದಿಂದ ಬಂದ ನಂಬಿಕೆ. ಆದರೆ ಇದನ್ನು ಒಪ್ಪದಿದ್ದವರೂ ಇದ್ದಾರೆ. ಮೇಲುಮುಖನಾಗಿಟ್ಟುಕೊಂಡು ಚರ್ಮವಾದ್ಯಗಳನ್ನು ಬಾರಿಸುವ ಪದ್ಧತಿ ಭಾರತದಲ್ಲಿ ಬಹು ಹಿಂದಿನದೆಂದು ಪುಷ್ಕರ ವಾದ್ಯ ಕುತುಪಗಳ ಶಿಲ್ಪಗಳನ್ನು ಉದಹರಿಸುತ್ತಾರೆ.

ಸಿತಾರ್‌ವಾದ್ಯದ ವಿಷಯದಲ್ಲಿಯೂ ಹಾಗೆಯೇ. ಇರಾನಿನ ತಬ್ಬೂರ್ ಅಥವಾ ತಾರ್ ವಾದ್ಯವನ್ನು ಪರಿಷ್ಕರಿಸಿ ಭಾರತೀಯ ಸಂಗೀತಕ್ಕೆ ಅಳವಡಿಸಿ ಸಿತಾರ್ ಎಂಬ ಹೆಸರಿನಿಂದ ಅಮೀರ್ ಖುಸ್ರು ಪ್ರಚಾರಕ್ಕೆ ತಂದನೆಂಬ ದೃಢನಂಬಿಕೆಯಿದೆ. ಇದಕ್ಕೆ ವಿರುದ್ಧವಾಗಿ ಆರು ತಂತಿಗಳುಳ್ಳ ಪ್ರಾಚೀನ ಚಿತ್ರಾ ಅಥವಾ ಪರಿವಾದಿನಿ ವೀಣೆಗಳು ಪರಿಷ್ಕೃತವಾಗಿ ಈ ಸಿತಾರ್ ಆಕಾರವನ್ನು ತಾಳಿದುವೆಂದೂ ಇದರಲ್ಲಿ ಅಮೀರ್ ಖುಸ್ರುವಿನ ಪಾತ್ರವೇನೂ ಇಲ್ಲವೆಂದೂ ಒಂದು ವಾದವಿದೆ.

ಇನ್ನು ಅಮೀರ್ ಖುಸ್ರುವಿಗೂ ಗೋಪಾಲನಾಯಕನಿಗೂ ನಡೆದ ಇತಿಹಾಸ ಪ್ರಸಿದ್ಧ ಸಂಗೀತಸ್ಪರ್ಧೆ. ಗೋಪಾಲ ನಾಯಕನು ಇತಿಹಾಸ ಪುರುಷನೆಂಬುದರಲ್ಲಿ ಸಂಶಯವಿಲ್ಲ.

ಸಂಗೀತ ರತ್ನಾಕರಕ್ಕೆ ಬರೆದ ಕಳಾನಿಧಿ ಎಂಬ ವ್ಯಾಖ್ಯಾನದಲ್ಲಿ ಕಲ್ಲಿನಾಥನು ಗೋಪಾಲನಾಯಕನನ್ನು ಸ್ಮರಿಸಿದ್ದಾನೆ. ಈ ಸ್ಪರ್ಧೆಯ ವಿಷಯವು ಅಮೀರ್ ಖುಸ್ರುವಿನ 'ಘುರ್ರಾತುಲ್ ಕಮಾಲ್' ಎಂಬ ಗ್ರಂಥದಲ್ಲಿದೆಯೆಂದು ಹೇಳಲಾಗಿದೆ. ಆದರೆ ಈಗ ಪ್ರಚಾರದಲ್ಲಿರುವ ಕತೆಯ ಮೂಲವು ಫಕೀರುಲ್ಲಾ ಬರೆದ ರಾಗದರ್ಪಣವೆಂದು ಹೇಳಬಹುದು. ಫಕೀರುಲ್ಲಾ ಔರಂಗಜೇಬನ ಕಾಲದಲ್ಲಿ ಕಾಶ್ಮೀರದ ಸುಬೇದಾರನಾಗಿದ್ದವನು. ಸ್ವತಃ ಸಂಗೀತಜ್ಞ. ರಾಜಾ ಮಾನಸಿಂಹ ತಂವರನು ಬರೆದ 'ಮಾನ್‌ಕುತೂಹಲ್' ಗ್ರಂಥವನ್ನು 'ರಾಗದರ್ಪಣ' ವೆಂಬ ಹೆಸರಿನಿಂದ ಪಾರ್ಸಿ ಭಾಷೆಗೆ ಭಾಷಾಂತರ ಮಾಡಿದ್ದಾನೆ. (ಈ ಸ್ಪರ್ಧೆಯ ಕತೆ ಹಿಂದೆ ಸುಧಾದಲ್ಲಿ ಪ್ರಕಟವಾಗಿದೆ: ಯುಗಾದಿ ವಿಶೇಷಾಂಕ, 1970).

ಖ್ಯಾಲ್, ತರಾನ

ಆದರೆ ಭಾರತೀಯ ಸಂಗೀತದಲ್ಲಿ ಅಮೀರ್ ಖುಸ್ರುವಿನ ಸ್ಥಾನ ಮತ್ತು ಕೊಡುಗೆಯ ಬಗೆಗೆ ವಾದ-ಪ್ರತಿವಾದಗಳಾಗುತ್ತಲೇ ಇವೆ. ನಿದರ್ಶನವಾಗಿ ಖ್ಯಾಲ್‌ಕೃತಿಯನ್ನೇ ಹೇಳಬಹುದು. ಇದನ್ನು ನಿರ್ಮಿಸಿದವನು ಅಮೀರ್ ಖುಸ್ರುವಲ್ಲ, ಅವನಿಗಿಂತ ಒಂದು ಶತಮಾನದ ಅನಂತರ ಜೀವಿಸಿದ್ದ ಜಾನ್‌ಪುರದ ಸುಲ್ತಾನ್ ಹುಸೇನ್‌ಷಾರ್ಕಿ ಎಂದೂ, ಅವನೂ ಅಲ್ಲ ಮೊಘಲ್ ಚಕ್ರವರ್ತಿ ಮುಹಮುದ್‌ಷಹನ ಆಸ್ಥಾನದಲ್ಲಿದ್ದ ನಿಯಾಮತ್ ಷಾ ಸದಾರಂಗ್ ಎಂದೂ ವಾದವಿದೆ. ಈ ಕೃತಿಯ ರಚನೆಗೆ ಇವರಾರೂ ಕಾರಣರಲ್ಲ. ನಮ್ಮ ಪ್ರಾಚೀನ ಕೈವಾಡ ಪ್ರಬಂಧಗಳ ಒಂದು ಪ್ರಕಾರವು ಈ ರೀತಿ ವಿಕಾಸವಾಯಿತು. ನಮ್ಮ ಹಳೆಯ ಯುಗ್ಮನಿ ಪ್ರಬಂಧಗಳ ಹೊಸ ರೂಪವೇ ಖ್ಯಾಲ್ – ಎಂದೂ ಇನ್ನೊಂದು ಪಂಥದ ವಾದ ಡಾ. ಚೈತನ್ಯ ದೇಸಾಯಿ, ಸ್ವಾಮಿ ಪ್ರಜ್ಞಾನಾನಂದ ಮುಂತಾದವರು ಈ ಬಗೆಗೆ ಬರೆದ ದೀರ್ಘ ಲೇಖನಗಳನ್ನು ಪರಿಶೀಲಿಸಬಹುದು.

ಖ್ಯಾಲ್ ಕೃತಿಯ ಬಗೆಗೆ ವಿವಾದವಿದ್ದರೂ ತರಾನಾ ಕೃತಿಗಳ ವಿಷಯದಲ್ಲಿ ವಿವಾದವಿರದು. ಅಮೀರ್ ಖುಸ್ರುವಿನಿಂದ ರಚಿತವಾದ ತರಾನಾಗಳು ದೊರೆಯುತ್ತವೆ.

ರಾಗಗಳ ಬಗೆಗೆ ಹೇಳಬೇಕಾದಲ್ಲಿ ಅಮೀರ್ ಖುಸ್ರುವೇ ಇರಾನಿ ರಾಗಗಳನ್ನು ಭಾರತೀಯ ಸಂಗೀತಕ್ಕೆ ಅಳವಡಿಸಿದನೋ ಅಥವಾ ದೆಹಲಿಯ ಸುಲ್ತಾನರ ಆಸ್ಥಾನದಲ್ಲಿದ್ದ ಅನೇಕ ಅರಬ್ಬಿ, ತುರ್ಕಿ, ಇರಾನಿ ಕಲಾವಿದರು ಹಾಡುತ್ತಿದ್ದು, ಕ್ರಮೇಣ ಪ್ರಚಾರಕ್ಕೆ ಬಂದವೋ ಖಚಿತವಾಗಿ ಹೇಳಲಾಗುವುದಿಲ್ಲ. ಆದರೆ 13ನೆಯ ಶತಮಾನದಿಂದೀಚೆಗೆ ಅನೇಕ ಪಾರ್ಸಿರಾಗಗಳು ಭಾರತದಲ್ಲಿ ಪ್ರಚಾರಕ್ಕೆ ಬಂದುದಂತೂ ನಿಜ. ಅಮೀರ್ ಖುಸ್ರುವಿಗೆ 2 ಶತಮಾನಗಳ ನಂತರ ಜೀವಿಸಿದ್ದ ಪುಂಡರೀಕ ವಿಠ್ಠಲನ ರಾಗಮಂಜರಿ ಗ್ರಂಥದಲ್ಲಿ ಇದಕ್ಕೆ ಸಮರ್ಥನೆ ದೊರೆಯುತ್ತದೆ. "ರಹಾಯಿ ದೇವಗಾಂಧಾರೇ...." ಎಂದು ಪ್ರಾರಂಭವಾಗುವ ಶ್ಲೋಕಗಳಲ್ಲಿ ಪ್ರಚಾರಕ್ಕೆ ಬಂದಿರುವ ಪಾರಸಿಕ ಪರದಾ (ರಾಗ)ಗಳನ್ನೂ ಅವಕ್ಕೆ ಸಮನಾದ ಭಾರತೀಯ ರಾಗಗಳನ್ನೂ ಪ್ರಸ್ತಾಪಿಸಿದ್ದಾನೆ. ಆದರಂತೆ ಪಾರಸಿ ರಹಾಯಿ ಪರದಾಕ್ಕೆ

ಭಾರತೀಯ ದೇವಗಾಂಧಾರ ರಾಗ; ನಿಶಾಬರಕ್ಕೆ – ಕಾನಡ, ಮಾಹುರ - ಸಾರಂಗ; ಜಂಗೂಲ – ಬಂಗಾಳ, ಅಹಂಗ್ – ದೇಸಿ; ಬಾರಾ – ಮಲ್ಹಾರ; ಸೊಹಾ – ಕೇದಾರ; ಇರಾಕ್ – ಧನ್ಯಾಸಿ; ಯಮನ್ – ಕಲ್ಯಾಣಿ; ಬಾಖ ರೇಜ – ದೇಶಿಕಾರ; ಇತ್ಯಾದಿ.

ಸಂಗೀತಾಭಿಮಾನ

ಅಮೀರ್ ಖುಸ್ರುವಿನ ಸಾಧನೆ ಮತ್ತು ಕೊಡುಗೆಯ ಬಗೆಗೆ ಭಿನ್ನಾಭಿಪ್ರಾಯವಿದ್ದರೂ ಆತನಿಗೆ ಸಂಗೀತಜ್ಞಾನ ಮತ್ತು ಅಭಿಮಾನ ಇರಲಿಲ್ಲವೆಂದು ಯಾರೂ ಹೇಳಲಾಗುವುದಿಲ್ಲ. ಸಂಗೀತದ ಬಗೆಗೆ ಆತನು ಪ್ರತ್ಯೇಕ ಗ್ರಂಥ ಬರೆಯದಿರಬಹುದು ಅಥವಾ ಆ ವಿದ್ಯೆಯಲ್ಲಿ ತನ್ನ ಸಾಧನೆಯ ಬಗೆಗೆ ಏನನ್ನೂ ಹೇಳಿಕೊಳ್ಳದಿರಬಹುದು. ಅಷ್ಟು ಮಾತ್ರದಿಂದಲೇ ಭಾರತೀಯ ಸಂಗೀತದ ಬೆಳವಣಿಗೆಯಲ್ಲಿ ಆತನದೇನೂ ಪಾತ್ರವಿಲ್ಲವೆಂದು ಭಾವಿಸುವುದು ತಪ್ಪು. ಆತನ ಗ್ರಂಥಗಳಲ್ಲಿ ಅವನ ಪೋಷಕರಾಗಿದ್ದ ಸುಲ್ತಾನರ ಅರಮನೆ, ಆಸ್ಥಾನಗಳ ವರ್ಣನೆಗಳ ಸಂದರ್ಭದಲ್ಲಿ ಅನೇಕ ಕಡೆ ಸಂಗೀತದ ಪ್ರಸ್ತಾಪವಿದೆ. ಅದಕ್ಕಿಂತ ಹೆಚ್ಚಾಗಿ ಹಿಂದೂಸ್ತಾನದ ಸಂಗೀತದ ಬಗೆಗೆ ತನ್ನ ನುಸಿಂತಾರ್ ಗ್ರಂಥದಲ್ಲಿ ಅಮೀರ್ ಖುಸ್ರು ನುಡಿದ ವಾಕ್ಯಗಳು ಗಮನಾರ್ಹವಾಗಿವೆ.

"ನಮ್ಮ ಹೃದಯ ಮತ್ತು ಆತ್ಮವನ್ನು ಬೆಳಗುವ ಮಹಾಜ್ವಾಲೆ ಹಿಂದೂಸ್ಥಾನದ ಸಂಗೀತ. ಪ್ರಪಂಚದ ಯಾವುದೇ ದೇಶದ ಸಂಗೀತಕ್ಕಿಂತ ಶ್ರೇಷ್ಠವಾದುದು. ಮೂವತ್ತು ನಲವತ್ತು ವರುಷಗಳು ಇಲ್ಲಿ ವಾಸ ಮಾಡಿದಂತಹ ವಿದೇಶಿಯರು ಆ ಸಂಗೀತದ ಒಂದು ತುಣುಕನ್ನೂ ಸಹ ಖಚಿತವಾಗಿ ನಿರೂಪಿಸಲಾರರು. ಹಿಂದೂಸ್ತಾನದ ಸಂಗೀತವು ಮನುಷ್ಯರನ್ನೇ ಅಲ್ಲದೆ ಮೃಗಗಳನ್ನೂ ಮೋಹಗೊಳಿಸುವ ಶಕ್ತಿಯುಳ್ಳದು. ಈ ದೇಶದಲ್ಲಿ ಸಂಗೀತದಿಂದ ಜಿಂಕೆಗಳನ್ನು ಮರುಳುಮಾಡಿ ಬೇಟೆಯಾಡುತ್ತಾರೆ" ಎಂದಿದ್ದಾನೆ. ಇಷ್ಟು ಅಭಿಮಾನವುಳ್ಳವನೂ ಸ್ವತಃ ಸಂಗೀತಜ್ಞ ಮತ್ತು ಬಹುಭಾಷಾಪ್ರವೀಣನೂ ಆಗಿದ್ದ ಅಮೀರ್ ಖುಸ್ರು ಸಂಗೀತದಲ್ಲಿ ಹೊಸ ಪ್ರಯೋಗಗಳಿಗೆ ಕೈಹಾಕದೆ ಇರಲು ಸಾಧ್ಯವಿಲ್ಲ. ಅವನ ಕೃತಿಗಳು ಬಹುಬೇಗ ಉತ್ತರ ಭಾರತಾದ್ಯಂತ ಪ್ರಚಲಿತವಾದವು. ಜನಪ್ರಿಯವಾದವು. ಅವು ದಕ್ಷಿಣ ಭಾರತದಲ್ಲಿಯೂ ಪ್ರಚಾರಕ್ಕೆ ಬಂದುದಕ್ಕೆ ದಾಖಲೆಗಳಿವೆ. ಈ ಅಮೀರ್ ಖುಸ್ರುವಿನ ಕೃತಿಗಳಿಗೆ ಸಂಬಂಧಿಸಿದಂತೆ ಬಹಮನಿ ರಾಜ್ಯದ ಸುಲ್ತಾನ್ ಮಹಮದ್ ಷಾ ಮತ್ತು ವಿಜಯನಗರದ ಬುಕ್ಕರಾಯನಿಗೂ ಯುದ್ಧವಾಯಿತು.

ವಿವಾದ ಮೂಲ

ಅಮೀರ್ ಖುಸ್ರು ಸಾಧನೆಯ ಬಗೆಗೆ ನಡೆಯುತ್ತಿರುವ ವಾದವಿವಾದಗಳಲ್ಲಿ ಒಂದು ಅಂಶ ಸ್ಪಷ್ಟವಾಗುತ್ತದೆ. ಅಲ್ಲಿ ನಿಷ್ಪಕ್ಷಪಾತ ಪರಿಶೀಲನೆಗಿಂತ ಧರ್ಮದ ಸೋಂಕು ಕಂಡುಬರುತ್ತದೆ. ಪ್ರಾಯಶಃ ಮುಸಲ್ಮಾನ್ ಸಂಗೀತಜ್ಞರೆಲ್ಲಾ ಇಂದಿನ ಹಿಂದೂಸ್ತಾನಿ ಸಂಗೀತದ

ಆದ್ಯಪ್ರವರ್ತಕ ಅಮೀರ್ ಖುಸ್ರು ಎಂದೇ ನಂಬಿದ್ದಾರೆ. ಅದಕ್ಕೆ ವಿರುದ್ಧವಾಗಿ ಆತನಿಗೇ ಈ ಕೀರ್ತಿಯನ್ನು ಪೂರಾ ಸಲ್ಲಿಸಲು ಇಷ್ಟವಿಲ್ಲದವರು ಭಾರತದ ಪ್ರಾಚೀನ ಪರಂಪರೆಯನ್ನು ಉದಹರಿಸುತ್ತಾರೆ. ಆದರೆ ಇಷ್ಟು ಮಾತ್ರ ನಿಜ. ಪ್ರಪಂಚದಲ್ಲಿ ಯಾವ ದೇಶದ ಸಂಗೀತಕಲೆಯೇ ಆಗಲಿ, ತಾನೇ ಸ್ವತಃ ವಿಕಾಸವಾಗಿಲ್ಲ. ಇತರ ದೇಶ, ಸಂಸ್ಕೃತಿಗಳಿಂದಲೂ ಎಷ್ಟೊ ಅಂಶಗಳನ್ನು ತೆಗೆದುಕೊಂಡು ತನ್ನದಾಗಿ ಮಾಡಿಕೊಂಡಿದೆ ಎಂಬುದು ಇತಿಹಾಸ ಓದಿದವರಿಗೆ ತಿಳಿದಿದೆ. ಭಾರತೀಯ ಸಂಗೀತವು ಇದಕ್ಕೆ ಹೊರತೇನಲ್ಲ. ಅಮೀರ್ ಖುಸ್ರುವು ಎಷ್ಟೋ ಹೊಸ ಪ್ರಯೋಗಗಳನ್ನು ಮಾಡಿರಬೇಕು. ಅದು ಸಂಪ್ರದಾಯಸ್ಥರಿಂದ ಸ್ವೀಕರಿಸಲ್ಪಟ್ಟು ಫಲಪ್ರದವಾಗಬೇಕಾದಲ್ಲಿ ಸ್ವಲ್ಪ ಕಾಲಬೇಕು. ಇಂದಿನ ಆಕಾರದಲ್ಲಿ ಖ್ಯಾಲ್ ಕೃತಿ ಮತ್ತು ಸಿತಾರ್‌ವಾದ್ಯ ಪ್ರಚಾರಕ್ಕೆ ಬಂದುದು 18ನೆಯ ಶತಮಾನದಿಂದ, ಸದಾರಂಗ್ ಮತ್ತು ಅಮೃತ್‌ಸೇನ್ ಇವರುಗಳು ಈ ಹೊಸರೂಪ ಕೊಟ್ಟವರು. ಆದರೆ ತಮಗೂ ಹಿಂದೆ ಪ್ರಚಾರದಲ್ಲಿದ್ದವಕ್ಕೆ ಹೊಸರೂಪ ಮತ್ತು ವರ್ಚಸ್ಸು ಕೊಟ್ಟರು ಎನ್ನಬಹುದು.

"ಅಮೀರ್ ಖುಸ್ರು ಅಳವಡಿಸಿದ ಇರಾನೀ ಸಂಗೀತಪದ್ಧತಿಯ ಪ್ರಭಾವ ಕರ್ನಾಟಕ ಸಂಗೀತದ ಇಂದಿನ ಸರಸ್ವತಿ ವೀಣೆಯಲ್ಲಿಯೂ ಕಂಡುಬರುತ್ತದೆ" ಎನ್ನುತ್ತಾರೆ ಡಾ. ಕೈಲಾಸ ಚಂದ್ರದೇವ ಬೃಹಸ್ಪತಿ. ಅವರ ವಾದದಂತೆ ಇಂದು ಸರಸ್ವತಿ ವೀಣೆಯಲ್ಲಿ ಒಂದು ಸ್ಥಾಯಿಗೆ 12 ಮೆಟ್ಟಿಲು ಇಡುವ ವಿಧಾನ, ಅಮೀರ್ ಖುಸ್ರು ಆಚರಣೆಗೆ ತಂದ ಮಾಕಂಪದ್ಧತಿಯನ್ನು ಅವಲಂಬಿಸಿದೆ. ವೀಣೆಯ ಈ 12 ಸ್ಥಾನಗಳಿಗೆ ಈಗಿರುವ ಹೆಸರುಗಳು ರಾಮಾಮಾತ್ಯನಿಂದ ಪ್ರಚಾರಕ್ಕೆ ಬಂದುದು. ಅವನ ಕಾಲದಲ್ಲಿ ಈ 12 ಸ್ಥಾನಗಳಿದ್ದ ತಂತ್ರೀವಾದ್ಯ ಪ್ರಚಾರದಲ್ಲಿದ್ದು ಸ್ಥಾನಗಳಿಗೆ ಔತ್ತರೇಯ ಹಿಂದೂಸ್ತಾನೀ ಹೆಸರುಗಳಿದ್ದುವು. ಮುಸಲ್ಮಾನರು ಕೊಟ್ಟಿದ್ದ ಈ ಹೆಸರುಗಳನ್ನು ಅಂಗೀಕರಿಸಲಿಷ್ಟಪಡದೆ ಸಂಗೀತ ರತ್ನಾಕರದ ಪರಿಭಾಷೆಯನ್ನು ರಾಮಾಮಾತ್ಯನು ಬಳಸಿದ್ದಾನೆ" ಎಂದು ಡಾ. ಬೃಹಸ್ಪತಿ ಹೇಳುತ್ತಾರೆ.

ಈ ವಾದವಿವಾದಗಳೇನೇ ಇದ್ದರೂ ಅಮೀರ್ ಖುಸ್ರು ಮತ್ತು ಭಾರತೀಯ ಸಂಗೀತಗಳಿಗೆ ಇರುವ ಸಂಬಂಧ ನಿಕಟವಾದುದು, ನಿರ್ವಿವಾದವಾದುದು. ಆತನ ಸಂಬಂಧ ಮತ್ತು ಪಾತ್ರ ಹಿಂದೆಯೇ ಹೇಳಿದಂತೆ ಕರ್ನಾಟಕ ಸಂಗೀತಕ್ಕೂ ಪುರಂದರದಾಸರಿಗೂ ಇದ್ದಂತೆ. ಇಬ್ಬರ ಅನುಯಾಯಿಗಳೂ ಮತ್ತು ಅಭಿಮಾನಿಗಳೂ ಅವರ ಪ್ರತಿಭೆ, ಸಾಧನೆ ಮುಂತಾದವುಗಳ ಬಗೆಗೆ ಶತಮಾನಗಳಿಂದ ಅಭಿಮಾನದ ಪೊದೆಯನ್ನೇ ಬೆಳೆಸಿದ್ದಾರೆ. ಅದನ್ನು ಕಿತ್ತುಹಾಕಿ ಸತ್ಯದ ಬೆಳಕನ್ನು ಕಾಣಬೇಕಾಗಿದೆ. ಪುರಂದರದಾಸರ ನಾಲ್ಕನೆಯ ಶತಮಾನೋತ್ಸವ ಸಂದರ್ಭದಲ್ಲಿ ಈ ಕಾರ್ಯವು ಸಮರ್ಪಕವಾಗಿ ನಡೆಯಲಿಲ್ಲ. ಈಗ ಅಮೀರ್ ಖುಸ್ರುವಿನ ಸಪ್ತಶತಮಾನೋತ್ಸವ. ಅಂದರೆ ಆತನು ಹುಟ್ಟಿ 700 ವರ್ಷಗಳಾದುವು. ಈ ವರುಷ ದಲ್ಲಾದರೂ ಸಂಗೀತದಲ್ಲಿ ಆತನ ಸಾಧನೆ ಮತ್ತು ಭಾರತೀಯ ಸಂಗೀತಕ್ಕೆ ಆತನು ಮಾಡಿದ ಸೇವೆ ಇವುಗಳ ಬಗೆಗೆ ಖಚಿತವಾದ ಸಾಮಗ್ರಿ ಬೆಳಕಿಗೆ ಬರುವುದೇನೋ ನೋಡಬೇಕು.

ತನ್ನ 71ನೆಯ ವರುಷದಲ್ಲಿ ಅಮೀರ್ ಖುಸ್ರು ತೀರಿಕೊಂಡ. ಅದೊಂದು ವಿಶೇಷ ಸಂದರ್ಭ. ಆತನ ಪರಮಗುರು ಹಜರತ್ ನಿಜಾಮುದ್ದೀನ್ ಔಲಿಯಾ 95ನೆಯ ವಯಸ್ಸಿನಲ್ಲಿ ನಿಧನನಾದ. ಆ ದಿನ ಖುಸ್ರು ಊರಿನಲ್ಲಿರಲಿಲ್ಲ. ವಿಷಯ ತಿಳಿದೊಡನೆಯೆ ದೆಹಲಿಗೆ ಶೀಘ್ರವಾಗಿ ಹಿಂತಿರುಗಿ ಗುರುವಿನ ಸಮಾಧಿಯ ಬಳಿ ಕುಳಿತು ಕಣ್ಣೀರಿಟ್ಟ. ಆಗ ರಚಿತವಾದುದೆಂದು ಹೇಳಿದ ಪದ್ಯ ಇದು :

ಗೋರೀ ಸೋಜೇ ಸೇಜ್ ಪರ್‌ಮುಖ ಪರ್ ಡಾರೆ ಕೇಸ್ ।
ಚಲ್ ಖುಸರೋ ಘರ್ ಆಪನೇ ರೈನ ಭಯಿಾ ಚಹೂಂ ದೇಸ್ ॥

ಆ ದಿನದಿಂದ ಜೀವನದಲ್ಲಿ ಜುಗುಪ್ಸೆಗೊಂಡ ಅಮೀರ್ ಖುಸ್ರು ಕೆಲವೇ ದಿನಗಳಲ್ಲಿ ಜೀವತೊರೆದ.

ಈ ಗುರು ಶಿಷ್ಯರಿಬ್ಬರೂ ನಿಧನರಾದ ದಿನ ಪ್ರತಿವರುಷವೂ ಈ ಸ್ಥಳದಲ್ಲಿ ಉರುಸ್ ನಡೆಯುತ್ತದೆ. ಅಲ್ಲಿ ಏಕಪ್ರಕಾರವಾಗಿ ಅಮೀರ್‌ಖುಸ್ರು ರಚಿಸಿದ ಕವ್ವಾಲಿ ಮತ್ತು ಗಜಲ್‌ಗಳ ಗಾಯನ – ಇಡೀ ದಿನ. ಅದು ಶ್ರೀಮಂತರ ಮತ್ತು ಪ್ರತಿಷ್ಠಿತರ ಸಮಾರಂಭವಲ್ಲ; ಕಲಾಭಿಮಾನಿಗಳು, ಜನಸಾಮಾನ್ಯರು ಕಲೆತು ಭಕ್ತಿ ಅಭಿಮಾನಗಳಿಂದ ಮನಸಾರ ಹಾಡಿ ತೃಪ್ತರಾಗುವ ಕೂಟ. ದಕ್ಷಿಣದಲ್ಲಿ ಇದೇ ರೀತಿ ನಡೆವ ತಿರುವಯ್ಯಾರಿನ ತ್ಯಾಗರಾಜಾರಾಧನೆ ಪ್ರಾರಂಭವಾಗಿ ಶತಮಾನವೂ ಆಗಿಲ್ಲ. ಆದರೆ ಈ ಅಮೀರ್ ಖುಸ್ರು ಉರುಸ್ ಏಳು ಶತಮಾನಗಳಿಂದಲೂ ನಡೆಯುತ್ತಿದೆ ಎಂಬ ಅಂಶ ಗಮನಾರ್ಹ. ★ ★ ★ ★ ★ ★ ★ ★

ಸುಧಾ, 1976

23. ಔತ್ತರೇಯ ಸಂಗೀತದ ರಾಯಭಾರಿ
ಬಡೇ ಗುಲಾಂ ಆಲೀಖಾನ್

ಭಾರತೀಯ ಸಂಗೀತದ ಉಭಯಕ್ಷೇತ್ರಗಳಲ್ಲಿಯೂ, ಪರಸ್ಪರ ಸಹವರ್ತನೆ, ಕೊನೆಗೆ ಸಹನೆಯಾಗಲೀ ಅಪರೂಪವಾದುದು. ಅದರಲ್ಲಿಯೂ ದಾಕ್ಷಿಣಾತ್ಯ ಕ್ಷೇತ್ರಗಳಲ್ಲಿಯಂತೂ ಹಿಂದೂಸ್ತಾನಿ ಸಂಗೀತ ಸೋಕಿತೆಂದರೆ ಮೈಲಿಗೆಯಾದಂತೆ ಭಾವನೆ.

ಇದಕ್ಕೆ ತೌರೂರೆಂದರೆ ಮದರಾಸ್ ನಗರವೆನ್ನಬಹುದು. ಇಂತಹ ಅಗ್ರಹಾರವನ್ನು ಅನೇಕ ಹಿಂದೂಸ್ತಾನಿ ಗಾಯಕರು ಪ್ರವೇಶಿಸಿ ಹಿಂದಿರುಗಿದ್ದರೂ, ಹಿಂದೂಸ್ತಾನಿ ಪದ್ಧತಿಯ ಬಗೆಗೆ ಇರುವ ಅನೇಕ ದುರ್ಭಾವನೆಗಳನ್ನು ತೊಡೆದು, ಅದರ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಮತ್ತು ಶ್ರದ್ಧೆಗಳನ್ನು ತೋರಲು ಸಾಧಕವಾದ ಸತ್ಕೀರ್ತಿಯು, ಇಂದಿನ ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಹಿರಿಯ ಗಾಯಕವರ್ಗದಲ್ಲೊಬ್ಬರೂ, ಭಾರತ ಪಾಕಿಸ್ತಾನ ಸಂಗೀತ ಕ್ಷೇತ್ರಗಳೆರಡರಲ್ಲೂ ಸಮನಾದ ಖ್ಯಾತಿ ಗಳಿಸಿರುವವರೂ ಆದ ಖಾನ್‌ಸಾಹೇಬ್ ಬಡೇ ಗುಲಾಮ್ ಆಲೀಖಾನ್‌ರವರಿಗೆ ಸಲ್ಲತಕ್ಕದ್ದಾಗಿದೆ.

ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಬಡೇ ಗುಲಾಮ್ ಆಲಿಖಾನ್‌ರವರನ್ನು ಪರಿಚಯಮಾಡಿಸಿ ಉಪಕಾರ ಮಾಡಿದುದು, ಮದರಾಸ್ ಸಂಗೀತ ವಿದ್ವತ್ ಪರಿಷತ್ತು, ಬಡೇ ಸಾಹೇಬರ ಬಗ್ಗೆ ದಕ್ಷಿಣ ಭಾರತದ ಜನತೆಗೆ ಇರುವ ಆದರ, ಮದರಾಸಿನಲ್ಲಿಯ ಅವರ ಕಚೇರಿಗಳಿಗೆ ಕಿಕ್ಕಿರಿದು ನೆರೆದ ಜನ ಸಮೂಹ, ಮೇಲಾಗಿ ಅವರ ಸಂಗೀತ ವ್ಯಕ್ತಿತ್ವ, ಕೊನೆಗೆ ಆಗಮನ ನಿರ್ಗಮನದ ಬಗ್ಗೆಯೂ ಜನತೆಗೆ ಇದ್ದ ಕಾತುರ, ಇವುಗಳನ್ನು ನೋಡಿದಲ್ಲಿ, ಪರಿಷತ್ತಿನ ಸತ್ಕಾರ್ಯವು ವ್ಯರ್ಥವಾಗಲಿಲ್ಲವೆನ್ನಬಹುದು. ಈ ಎರಡು ವರ್ಷಗಳಿಂದ ನಡೆದ ಬಡೇ ಸಾಹೇಬರ ಕಚೇರಿಗಳು, ಸಂಗೀತೋತ್ಸವದ ಇತರ ಕಾರ್ಯಕ್ರಮಗಳು ಕಳಾವಿಹೀನವಾಗುವಂತೆ ಮಾಡಿ, ಅನೇಕ ದಾಕ್ಷಿಣಾತ್ಯ ಗಾಯಕರ ಅಸಮಾಧಾನಕ್ಕೆ ಕಾರಣವಾಗುವಂತಾದರೂ, ಕಲಾಭಿಮಾನಿಗಳೂ, ಜನತೆಯೂ, ಹಿಂದೂಸ್ಥಾನಿ ಗಾಯನದ ವಿಷಯದಲ್ಲಿ ಹೆಚ್ಚಿನ ಆದರ ಆಕಾಂಕ್ಷೆಗಳನ್ನು ತೋರಲು ಸಹಾಯಕವಾಗಿವೆಯೆನ್ನಬಹುದು. ಅವರ ಸ್ವರ ಮಾಧುರ್ಯ, ಲಯ ವೈಚಿತ್ರ್ಯ, ಮೇಲಾಗಿ 'ಬಡೇ' ಪದವನ್ನು ಸಾರ್ಥಕಪಡಿಸುವ ವ್ಯಕ್ತಿತ್ವ ಇವೆಲ್ಲಾ ಅವರ ಜನಪ್ರಿಯತೆಗೆ ಸಾಧಕವಾಗಿವೆ. ಇದು ಮದರಾಸ್ ನಗರ ಒಂದಕ್ಕೇ ಸೇರಿದುದಲ್ಲ. ಇದರ ಕೀರ್ತಿ ಮತ್ತು ಜನಪ್ರಿಯತೆಯು ಭಾರತದಲ್ಲಿ ಎಲ್ಲಾ ಭಾಗದಲ್ಲಿಯೂ ಇದ್ದು, ಇವರು ಯಾವ ಮುಖ್ಯ ನಗರಕ್ಕೆ ಭೇಟಿ ಇತ್ತರೂ, ಕಡೆಯ ಪಕ್ಷ ನಾಲ್ಕಾರು ಕಚೇರಿಗಳನ್ನಾದರೂ ನಡೆಸದೇ ತಪ್ಪಿಸಿಕೊಂಡು ಬರಲು ದುಸ್ಸಾಧ್ಯವೆನ್ನಬಹುದು. ದೇಶದ ಈ ಭಾಗದಲ್ಲಿ ಅವರ ವಿಷಯದಲ್ಲಿರುವ ಮಮತೆಯನ್ನು ಪರಿಶೀಲಿಸಿದಲ್ಲಿ, ಅವರನ್ನು ಔತ್ತರೇಯ ಸಂಗೀತದ ರಾಯಭಾರಿಯೆನ್ನಬಹುದು.

ಸಂಗೀತ ರಕ್ತಗತ

ಉಸ್ತಾದ್ ಬಡೇ ಗುಲಾಮ್ ಆಲೀಖಾನ್‌ರವರಿಗೆ ಈಗ 54 ವಯಸ್ಸು. ಅವರ ಮನೆತನವೇ ಕಲಾವಿದರ ಮನೆತನ. ಅವರ ತಂದೆ ಆಲೀ ಬಕ್ಸ್‌ರವರೂ, ಚಿಕ್ಕಪ್ಪ ಕಾಲೇಖಾನ್‌ರವರೂ, ಪ್ರಸಿದ್ಧ ಗಾಯಕರು. ಇವರ ಸಹೋದರರೆಲ್ಲಾ ಸಂಗೀತಗಾರರೇ! ಇಂತಹ ಕುಟುಂಬದಲ್ಲಿ ಬೆಳೆದ ಗುಲಾಮ್ ಆಲೀಖಾನ್‌ರವರಿಗೆ, ಸಂಗೀತವು ರಕ್ತಗತವೆನ್ನಬಹುದು. ಅವರ ಕಲಾಭ್ಯಾಸವು ಕೇವಲ ಬಾಲ್ಯದಲ್ಲಿಯೇ ಪ್ರಾರಂಭವಾದುದು. ತಂದೆಯವರ ಹತ್ತಿರವೇ ಪಾಠವಾಗಿದ್ದ ಗುಲಾಮ್ ಆಲೀಖಾನ್‌ರವರು ತಮ್ಮ ಏಳನೆಯ ವಯಸ್ಸಿನಲ್ಲಿ ಚಿಕ್ಕಪ್ಪನವರಾದ ಉಸ್ತಾದ್ ಕಾಲೇಖಾನ್‌ರವರ ಬಳಿ ಕಲಾಭ್ಯಾಸವನ್ನು ಮಾಡತೊಡಗಿ ಅವರು ವಿಧಿವಶರಾಗುವವರೆಗೂ, ಏಳು ವರ್ಷಕಾಲ ಏಕಾಗ್ರತೆಯಿಂದ ಕಲಾಸಾಧನೆ ಮಾಡಿದರು. ಆಗಿನ ಬಿಗಿಯಾದ ತಳಹದಿಯೇ ಇವರ ಶ್ರುತಿ ಮತ್ತು ಲಯ ಶುದ್ಧತೆ ಮತ್ತು ಕಂಠದ ಮಾರ್ದವತೆಗೆ ಬಹು ಸಹಾಯಕಾರಿಯಾಯಿತೆಂದು ಹೇಳಬಹುದು. ಖಲೀಖಾನ್‌ರವರು ವಿಧಿವಶರಾದ ನಂತರ 'ಖಾನ್‌ಸಾಹೇಬರ ಜತೆಯಲ್ಲಿಯೇ ಶುದ್ಧ ಸಂಗೀತವೂ ಗೋರಿಯಾಯಿತೆಂದು' ನುಡಿದ ಮಿತ್ರರೊಬ್ಬರ ಬಿರುನುಡಿಗೆ ಮನನೊಂದು, ಗುಲಾಮ್ ಆಲೀಖಾನ್‌ರವರು, ಏಕಾಗ್ರತೆಯಿಂದ ಕಲೆಯನ್ನು ಹಠಸಾಧನೆ ಮಾಡತೊಡಗಿ

ಮುಂದೆ ಅದೇ ಮಿತ್ರರೇ ತಮ್ಮ ಬಿರುನುಡಿಗೆ ವಿಷಾದಿಸುವಂತೆ ಮಾಡಿದರು. ಈ ಹಠಸಾಧನೆಗೆ ಮಾರ್ಗದರ್ಶಕರಾದವರು, ಜಯಪುರದ ಆಸ್ಥಾನದ ವಿದ್ವಾಂಸರೂ ಮತ್ತು ಈ ಶತಮಾನದ ಆದಿಭಾಗದ ಒಬ್ಬ ಸುಪ್ರಸಿದ್ಧ ಕಲಾವಿದರೂ ಆದ ಖಾನ್‌ಸಾಹೇಬ್ ಕಲ್ಲನ್‌ಖಾನ್‌ರವರು.

ಕಲ್ಲನ್‌ಖಾನ್‌ರವರು, ತಮ್ಮ ಅಸಾಧಾರಣ ಪಾಂಡಿತ್ಯಕ್ಕೇ ಅಲ್ಲದೆ, ನೂತನ ರಾಗ ಮತ್ತು ಕೃತಿ ರಚನೆಗಳಿಗೂ ಪ್ರಸಿದ್ಧರಾಗಿದ್ದರು. ಈ ಶತಮಾನದ ಅನೇಕ ಸುಪ್ರಸಿದ್ಧ ಗಾಯಕರಾದ ಫೈಯ್ಯಾಜ್‌ಖಾನ್, ವಿಲಾಯತ್ ಹುಸೇನ್‌ಖಾನ್, ನಿಸಾರ್ ಹುಸೇನ್‌ಖಾನ್ ಮುಂತಾದವರಿಗೆಲ್ಲಾ ಕಲ್ಲನ್‌ಖಾನ್‌ರವರು ಗುರುಗಳಾಗಿದ್ದರು. ಈ ಗುರುಕುಲವಾಸವು, ಬಡೇ ಸಾಹೇಬರ, ಕಲ್ಪನೆ ಮತ್ತು ಶೈಲಿಗಳು ಬಹುಪಕ್ವವಾಗಲು ಸಾಧಕವಾಯಿತೆನ್ನಬಹುದು. ಇಲ್ಲಿಂದ ಮುಂದೆ ಬಡೇ ಸಾಹೇಬರು, ಪಾಟಿಯಾಲದ ಸಂಸ್ಥಾನ ಗಾಯಕರಾದ ಉಸ್ತಾದ್ ಫತೇ ಆಲೀಖಾನ್ ಅವರ ಪುತ್ರ ಆಶೀಖ್ ಆಲೀಖಾನ್ ಮುಂತಾದವರ ಬಳಿಯೆಲ್ಲಾ ಅಭ್ಯಾಸಮಾಡಿ ತಮ್ಮ ಪಾಂಡಿತ್ಯಕ್ಕೆ ಇನ್ನಷ್ಟು ಮೆರಗು ಕೊಟ್ಟು ಅದು ಹೆಚ್ಚು ಕಳಾಪೂರ್ಣವಾಗಿ ಪ್ರಕಾಶಿಸಲು ಅಣಿಮಾಡಿಕೊಂಡರು. ಈ ನಾನಾ ವಿದ್ವಾಂಸರ ಬಳಿಯ ಸಾಧನೆಯು ಗುಲಾಮ್ ಆಲಿಖಾನ್‌ರವರ ಪಾಂಡಿತ್ಯವು ವೃದ್ಧಿಯಾಗುವುದೇ ಅಲ್ಲದೆ, ಅವರದೇ ಒಂದು ವಿಶೇಷ ಕಲ್ಪನೆ ಮತ್ತು ಶೈಲಿಯು ಉತ್ಪನ್ನವಾಗಲು ಸಹಾಯಕಾರಿಯಾಯಿತೆನ್ನಬಹುದು.

ಬಡೇಸಾಬ್

ಬಡೇ ಗುಲಾಮ್ ಆಲೀಖಾನ್‌ರವರ ಯಾವ ಕಾರ್ಯಕ್ರಮವನ್ನೇ ಪರೀಕ್ಷಿಸಲಿ, ಅದು ಶ್ರೋತೃಗಳಿಗೆ ಒಂದು ಹಬ್ಬವೆನ್ನಬಹುದು. ಆ ಶ್ರುತಿಪೂರ್ಣ ಕೋಮಲ ಶಾರೀರ, ವಿವಿಧ ರಸ ಮತ್ತು ಕಲ್ಪನಾಯುಕ್ತ ರಚನೆಗಳು ಪಂಡಿತ ಪಾಮರರಾದಿಯಾಗಿ ಎಲ್ಲರನ್ನೂ ತಲೆದೂಗಿಸುವುವು. ಗುಲಾಮ್ ಆಲೀಖಾನ್‌ರವರನ್ನು ಕಾಣದೆ ಬರೇ ಅವರ ಗಾಯನವನ್ನು ಕೇಳಿದವರಿಗೆ, ಆ ಕೋಮಲ ಶಾರೀರಕ್ಕೂ ಆ ಗಾತ್ರ ಶರೀರಕ್ಕೂ ಸಂಬಂಧ ಕಲ್ಪಿಸಲು ಕಷ್ಟವಾಗುತ್ತದೆ. ಸ್ವರ, ರಾಗ, ಮಾಧುರ್ಯ ಉಳ್ಳ ಶೈಲಿ ಮತ್ತು 'ಬಡೆ' ಪದವನ್ನು ಸಾರ್ಥಕಪಡಿಸುವ ಗಾತ್ರ ಮತ್ತು ಪರಿಕರಣಗಳನ್ನುಳ್ಳ ಶರೀರ ಇವೆರಡೂ ವೇದಿಕೆಯಲ್ಲಿ, ಬಡೇ ಸಾಹೇಬರೇ ಪ್ರಧಾನವಾಗಿ ಮಿಕ್ಕವರೆಲ್ಲಾ ಮುಚ್ಚಿಹೋಗುವಂತೆ ಮಾಡುತ್ತವೆ. ವೇದಿಕೆಯ ಮೇಲೆ ಖಾನ್‌ಸಾಹೇಬರು ಕುಳಿತರೆಂದರೆ, ಹೆಚ್ಚಾಗಿ ಅಂಗವಿಕಾರಗಳಿಲ್ಲದೆ, ತಾನೇ ತಾನಾಗಿ ಹೊರಹೊಮ್ಮುವ ರಾಗ ರಸ ಪ್ರವಾಹಗಳು ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತವೆ. ಇದರ ಜತೆಗೆ ಬಡೇ ಸಾಹೇಬರು, ಸಭಿಕರ ಮನೋಧರ್ಮವನ್ನು ಅರಿತು, ಯಾವ ಯಾವ ಸಭೆಗೆ ಯಾವ ಬಗೆಯ ಸಂಗೀತವನ್ನು ಒದಗಿಸಬೇಕೆಂದು ಗ್ರಹಿಸಿ ಅದರಂತೆ ಹಾಡುವುದರಲ್ಲಿ ಚತುರರು. ಇದನ್ನು ಇವರ ಮದರಾಸಿನ ಕಾರ್ಯಕ್ರಮಗಳಲ್ಲಿ ಕಾಣಬಹುದಾಗಿದ್ದಿತು. ಅಲ್ಲಿ ದಾಕ್ಷಿಣಾತ್ಯ ಜನತೆಗೆ ಸುಲಭ ಗ್ರಾಹ್ಯವಾದ ಸಂಗೀತವನ್ನು ಒದಗಿಸಲು ಸ್ವಲ್ಪ ಸಂಪ್ರದಾಯವನ್ನೂ ತಳ್ಳಿಹಾಕಿ, ಸಭಿಕರ ಮನಸ್ಸನ್ನು ಸುಲಭವಾಗಿ ಸೆಳೆದರು.

ಮದರಾಸಿನ ಕಚೇರಿಯಲ್ಲಿ ಹಿಂದೂಸ್ಥಾನಿಯ ಬಿಕ್ಕಟ್ಟಾದ ರಾಗಗಳನ್ನು ಬಿಟ್ಟು, ಇಲ್ಲಿನ ಪದ್ಧತಿಯಲ್ಲಿ ಸುಲಭವಾಗಿ ಸಾಮ್ಯವನ್ನು ಕಾಣಬಹುದಾಗಿದ್ದ ನಾಲ್ಕು ರಾಗಗಳನ್ನು ಚುನಾಯಿಸಿದರು. ಅಲ್ಲಿ ಹಾಡಿದುದು, ಪೂರಿಯಾ, ಧನಾಶ್ರೀ ಮತ್ತು ಯಮನ್ ಕಲ್ಯಾಣ್ ರಾಗಗಳಲ್ಲಿ ಒಂದೊಂದು ವಿಲಂಬಿತ್ ಮತ್ತು ದೃತ್ ಖ್ಯಾಲ್, ಮಾಲ್ ಕೌಸ್ ಮತ್ತು ದರ್ಬಾರೀ ಕಾನಡಾ ರಾಗಗಳಲ್ಲಿ ವಿಲಂಬಿತ್, ದೃತ್ ಖ್ಯಾಲ್ ಮತ್ತು ತರಾನಾಗಳನ್ನು ಹಾಡಿದರು. (ಹಿಂದೂಸ್ಥಾನೀ ಸಂಪ್ರದಾಯದಲ್ಲಿ ಮಾಲ್ ಕೌಸ್ ಮತ್ತು ದರ್ಬಾರೀ ಕಾನಡಾ ರಾಗಗಳನ್ನು ರಾತ್ರಿ ಹತ್ತು ಘಂಟೆಯ ಮೇಲೆ ಹಾಡಬೇಕು) ಬಡೇ ಸಾಹೇಬರು ಹಾಡಿದ ನಾಲ್ಕು ರಾಗಗಳಿಗೆ ಇಲ್ಲಿಯ ಕಾಮವರ್ಧಿನಿ, ಕಲ್ಯಾಣಿ, ಹಿಂದೋಳ ಮತ್ತು ಕಾನಡಾ ರಾಗಗಳು ಸಮವಾಗಿದ್ದು, ಮದರಾಸಿನ ಶ್ರೋತೃಗಳು ಕಚೇರಿಯನ್ನು ಸುಲಭವಾಗಿ ಮನನ ಮಾಡಿಕೊಳ್ಳುವುದೇ ಅಲ್ಲದೆ, ಹೆಚ್ಚಾಗಿ ಆನಂದಿಸಲು ಅನುವಾಗಿದ್ದಿತು. ಆದರೆ ಸಭಿಕರನ್ನು ಸ್ತಬ್ಧಗೊಳಿಸಿದ ಅಂಶವೆಂದರೆ, ನೂತನ ಪ್ರಯೋಗಗಳು. ಈ ರಾಗಗಳ ಇಲ್ಲಿಯ ಸಂಪ್ರದಾಯಬದ್ಧ ಸ್ವರೂಪ ಮತ್ತು ರಚನೆಗಳಿಗೆ ಅಭ್ಯಾಸವಾಗಿದ್ದ ಶ್ರೋತೃವರ್ಗವು. ತಮ್ಮ ಊಹೆಗೆ ವಿಶೇಷವಾದ ನಾನಾ ರಚನಾಪ್ರವಾಹಗಳಿಂದ ಮುಗ್ಧರಾದುದರಲ್ಲಿ ಆಶ್ಚರ್ಯವೇನಿಲ್ಲ. ಇದನ್ನು ಹಿಂದೋಳ ರಾಗದಲ್ಲಿ ಕಾಣಬಹುದು.

ತಾನ-ಸ್ವರ ಪ್ರವಾಹ

ಎಲ್ಲರೂ ಬಲ್ಲಂತೆ ಐದು ಸ್ವರವುಳ್ಳ ಹಿಂದೋಳ ರಾಗವು ಕರ್ನಾಟಕ ಪದ್ಧತಿಯ ಪ್ರಧಾನ ರಾಗಗಳಲ್ಲಿ ಒಂದಾದರೂ, ವಿಶೇಷವಾಗಿ ವಾಡಿಕೆಯಲ್ಲಿಲ್ಲವಾದ ಪ್ರಯುಕ್ತ ಇದರ ಆಲಾಪನೆ ಮತ್ತು ಸ್ವರಪ್ರಸ್ತಾರಗಳಲ್ಲಿ ಕೆಲವು ಸಂಪ್ರದಾಯಬದ್ಧ ಸ್ವರೂಪಗಳು ಮಾತ್ರ ನಮಗೆ ಪರಿಚಯವಿದೆ. ಆದರೆ ಬಡೇ ಸಾಹೇಬರು ಈ ರಾಗವನ್ನು ಹಾಡಿದಾಗ, ಬಂದ ರಾಗ ರಸ ಪ್ರವಾಹವು ಅದ್ಭುತವಾದುದು. ಆ ಶ್ರುತಿ, ನಾದಪುಷ್ಟಿ ಎಲ್ಲದಕ್ಕೂ ಮಿಗಿಲಾದ ಲಯ ಇವುಗಳು ಸಭಿಕರ ತಲೆತೂಗಿಸಿದವು. ತಾನದಲ್ಲಿಯೇ ಆಗಲೀ 'ಸಾರ್‌ಗಮ್' ನಲ್ಲಿಯೇ ಆಗಲೀ ಬಂದ ವಿವಿಧ ಪ್ರಯೋಗ ಮತ್ತು ಸ್ವರೂಪಗಳು ನಮ್ಮ ಅರಿವಿಗೆ ಮೀರಿದವು. ಅವುಗಳ ದೃತಗಮನವೂ ಅಷ್ಟೇ, ನಮ್ಮಲ್ಲಿ ವಾಡಿಕೆಯಲ್ಲಿರುವುದರ ಎರಡು ಮೂರರಷ್ಟು ವೇಗವುಳ್ಳದ್ದಾಗಿದ್ದವು. ನಮ್ಮಲ್ಲಿ ಬಹು ಭ್ರಮೆಹಿಡಿಸಿರುವ ಉರುಟುಗಳೂ, ಬಿರ್‌ಕಾಗಳೂ, ಇವುಗಳ ಮುಂದೆ ಎಟುಕಲಾರವು, ಸ್ವರಪ್ರಸ್ತಾರದಲ್ಲಿಯೂ ಅಷ್ಟೇ ವಿಶೇಷವಾದ ಜತೆ ಮತ್ತು ದಾಟು ಸ್ವರಗಳಿಂದ ಕೂಡಿದ್ದೂ, ಅನೇಕ ವೇಳೆ ಈ ತಾನ ಮತ್ತು ಸ್ವರ ಪ್ರವಾಹಗಳು, ಷಹನಾಯ್ ವಾದನದಂತೆ ಕೇಳುವಂತೆ ಭಾಸವಾಗುತ್ತಿದ್ದವು. ಈ ಅಪೂರ್ವ ರಾಗಮಾಧುರ್ಯ, ತಾನ-ಸ್ವರಪ್ರವಾಹ, ಅವುಗಳ ನೂತನ ಸ್ವರೂಪ ಮತ್ತು ಪ್ರಯೋಗಗಳು ಸಭಿಕರನ್ನು ಮಂತ್ರಮುಗ್ಧರನ್ನಾಗಿ ಮಾಡಿದುದೇ ಅಲ್ಲದೆ, ಸಭೆಯೆಲ್ಲವೂ ಶ್ರೋತೃಗಳ 'ಶಹಬಾಸ್' ಗಿರಿಗಳಿಂದ ಮುಳುಗಿ ಹೋಗಿದ್ದಿತು.

ಶಾಸ್ತ್ರೀಯ ಸಂಗೀತ ಭಾಗದಲ್ಲಿ ಬಡೇ ಗುಲಾಮ್ ಆಲೀಖಾನ್‌ರವರಿಗೆ ಇಷ್ಟು ಪಾಂಡಿತ್ಯವಿದ್ದರೂ, ಅವರ ಉತ್ತಮ ಮನೋಧರ್ಮವನ್ನು 'ಠುಮ್ರಿ' ಕೃತಿಗಳ ಗಾಯನದಲ್ಲಿ ಕಾಣಬಹುದು. ಆ ಕೃತಿಗಳ ಶೃಂಗಾರ, ಕರುಣಾರಸಪೂರಿತ ಸಾಹಿತ್ಯ ಸ್ವಚ್ಛಂದರಾಗ - ರಸ ಪ್ರವಾಹಗಳನ್ನು ಅವರ ಹೃದಯಾಂತರಾಳದಿಂದ ತರುವುದೆನ್ನಬಹುದು. ಇವರ ಪ್ರಸಿದ್ಧವಾದ ರಿಕಾರ್ಡ್‌ಗಳೆಲ್ಲವೂ ಠುಮ್ರಿಯವೇ. ಇವರ ಠುಮ್ರಿಗಳ ಭಾವಪೂರ್ಣತೆಯೂ ಎಂತಹವರ ಮನವನ್ನಾಗಲೀ ಕಲಕಿಬಿಡುವುದು. ಈ ಸಲದ ಮದರಾಸಿನ ಕಾರ್ಯಕ್ರಮದಲ್ಲಿಯೂ, ಹಾಡಿದ ಜಿಂಗ್ಲಾ ಭೈರವಿಯ ಠುಮ್ರಿಯಲ್ಲಿ 'ಹರಿ ಓಂ' ಎಂಬ ಭಜನ್ ಕೃತಿಯೂ, ಶ್ರೋತೃಗಳ ಕಣ್ಣಲ್ಲಿ ಆನಂದಬಾಷ್ಪಗಳನ್ನು ತಂದವು.

ಬಡೇ ಗುಲಾಮ್ ಆಲೀಖಾನ್‌ರವರ ಹಿಂದೂಸ್ತಾನಿ ಸಂಗೀತದಲ್ಲಿ ಇಷ್ಟು ಅದ್ಭುತ ಪಾಂಡಿತ್ಯವಿದ್ದರೂ, ದಕ್ಷಿಣ ಭಾರತದಲ್ಲಿ ಅವರ ಜನಪ್ರಿಯತೆಗೆ ಸಾಧಕವಾದುದು ಮೊದಲಾಗಿ ನಾಭಿಯಿಂದ ಹೊಮ್ಮುವ, ಶ್ರುತಿ ಶುದ್ಧತೆಯನ್ನು ಪಡೆದು ಬಳುಕುತ್ತ ತ್ರಿಸ್ಥಾಯಿಯಲ್ಲಿಯೂ ಮಿಂಚಿನ ನಡೆಯಲ್ಲಿ ಸಂಚರಿಸುವ ಶಾರೀರ ಮತ್ತು ವಿಚಿತ್ರ ಲಯ ಮತ್ತು ಗತಿಪೂರಿತವಾದ ಅವರ ತಾನ ಮತ್ತು ಸ್ವರಪ್ರಸ್ತಾರ, ಕಚೇರಿಯಲ್ಲಿ ತಮ್ಮ ಪಕ್ಕದಲ್ಲಿರುವ 'ಸ್ವರಮಂಡಲ' ಮತ್ತು ಬರೇ ಎರಡೇ ತಂಬೂರಿ ಮತ್ತು ತಬಲಾಗಳನ್ನುಳಿದು ಬೇರೆ ಪಕ್ಕವಾದ್ಯಗಳೇನೂ ಇಲ್ಲದೆ, ಜನಾದರಣೀಯ ಸಂಗೀತ ಕಾರ್ಯಕ್ರಮಕ್ಕೆ ಗಾಯಕನ ಶ್ರುತಿ, ನಾದಪುಷ್ಟಿ, ಉತ್ತಮ ಮನೋಧರ್ಮ ಮತ್ತು ಆಕರ್ಷಕ ಶೈಲಿಯೇ ಪ್ರಧಾನವಲ್ಲದೇ, ಬರೇ ಪಕ್ಕವಾದ್ಯ ಜಮಾವಣೆಯಲ್ಲವೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಸದಾ ತನ್ಮಯತೆ

ಬಡೇ ಸಾಹೇಬರ ಸ್ವಭಾವವು ಬಹುಮೃದು. ಅವರಿಗೆ ಸಂಗೀತದಿಂದ ಯಾವಾಗ ಬಿಡುವಾಗಿರುವುದೆಂಬುದನ್ನು ಹೇಳುವುದೇ ಕಷ್ಟ. ಸದಾ 'ಸ್ವರಮಂಡಲ'ವನ್ನು ಪಕ್ಕದಲ್ಲಿಟ್ಟುಕೊಂಡು ಏನಾದರೂ ಕುರುಕುತ್ತಲೇ ಇರುತ್ತಾರೆ. ಭಾರತ ವಿಭಜನಾ ನಂತರ ಇವರು ಪಾಕಿಸ್ತಾನದಲ್ಲುಳಿದರೂ, ಕಲೆಯಲ್ಲಿ ಇವರು ಎಲ್ಲೆಗಳನ್ನು ಲಕ್ಷಿಸುವಂತೆ ಕಾಣಬರುವುದಿಲ್ಲ. ಭಾರತದಲ್ಲಿ ಯಾವ ಸಂಗೀತ ಸಮ್ಮೇಳನಕ್ಕೆ ಆಹ್ವಾನವು ಹೋಗಲೀ ತಪ್ಪದೇ ಬಂದೇ ಬರುತ್ತಾರೆ. ಇವರ ಮಕ್ಕಳಲ್ಲಿ ಸದಾ ಇವರ ಜತೆಯಲ್ಲಿರುವ ಮುನಾವರ್ ಆಲಿಯವರು ತಮ್ಮ ಪಿತೃವರ್ಯರ ಮೇಲ್ಪಂಕ್ತಿಯನ್ನೇ ಅನುಸರಿಸಿ, ಉತ್ತಮ ಕಲಾವಿದರಾಗಿದ್ದಾರೆ.

ಬಡೇ ಗುಲಾಮ್ ಆಲೀಖಾನ್‌ರವರು ಬೆಂಗಳೂರಿಗೆ ಬರುವುದು ರಸಿಕ ವರ್ಗದವರಿಗೆಲ್ಲಾ ನೂತನ ವರ್ಷದ ಒಂದು ಶುಭ ಸಮಾಚಾರ. ಬಡೇ ಸಾಹೇಬರು ಇಲ್ಲಿಗೆ ಬಂದಾಗ್ಗೆ ಉತ್ತಮ ಸ್ವಾಗತ ನೀಡುವುದೂ, ಸಂಗೀತ ರಸಾಸ್ವಾದನೆ ಮಾಡುವುದೂ ಕಲಾಭಿಮಾನಿಗಳ ಮತ್ತು ರಸಿಕ ವರ್ಗದವರ ಕರ್ತವ್ಯ. ★ ★ ★ ★ ★ ★ ★ ★ ★ ★ ★

ಪ್ರಜಾವಾಣಿ, 1956

24. ಸಂಪ್ರದಾಯ ನಿಷ್ಠ ಸರೋದ್ ವಾದಕ ಉಸ್ತಾದ್ ಹಫೀಸ್ ಆಲಿಖಾನ್

ಕಳೆದ ಡಿಸೆಂಬರ್ 27ನೆಯ ತಾರೀಖು ಮದರಾಸು ಮ್ಯೂಸಿಕ್ ಅಕಾಡೆಮಿಯಲ್ಲಿ ಅಮ್ಜಾದ್ ಆಲಿಖಾನ್‌ರ ಸರೋದ್‌ವಾದನ. ಮಾರನೆಯ ಬೆಳಿಗ್ಗೆ ಆತುರಾತುರವಾಗಿ ದಹಲಿಗೆ ಹಿಂತಿರುಗಿದರು. ಅದೇ ರಾತ್ರಿ ಅವರ ತಂದೆ ಉಸ್ತಾದ್ ಹಫೀಸ್ ಆಲಿಖಾನರು ನಿಧನರಾದರು. ಅಮ್ಜಾದ್ ಆಲಿಖಾನರು ಉಸ್ತಾದರ ಕಿರಿಯ ಮಗ. ಬಹುಮಮತೆಯಿಂದ ಸಾಕಿ ವಿದ್ಯೆ ಕಲಿಸಿದರು. ಬಹು ಪ್ರತಿಭಾವಂತ. ಹತ್ತನೆಯ ವಯಸ್ಸಿಗೆ ಮೊದಲೇ ದಿಟ್ಟತನದಿಂದ ಸಂಗೀತ ಕಛೇರಿ ಮಾಡಿ ಎಲ್ಲರ ಪ್ರಶಂಸೆಗೆ ಪಾತ್ರನಾದವ - ಅಮ್ಜಾದ್ ಆಲಿ. ಮಗನ ಈ ಪ್ರತಿಭೆ ಮತ್ತು ಅಭ್ಯುದಯವನ್ನು ನೋಡಿ ಹಫೀಸ್ ಆಲಿಖಾನರಿಗೆ ಎಷ್ಟೋ ಸಂತೋಷವಾಗಿರಬಹುದು. ನಿಜ. ಆದರೆ ಮಗನ ವಾದನದ ಶೈಲಿಯನ್ನಾಗಲೀ, ಜನಗಳು ಸಂತೋಷದಿಂದ ಚಪ್ಪಾಳೆ ಹೊಡೆಯುತ್ತಿದ್ದ ಆ ವಾದನ ವೈಖರಿಯನ್ನಾಗಲೀ ಅವರು ಒಪ್ಪಿದ್ದರೆ? ಅದನ್ನು ಹೇಳುವುದು ಕಷ್ಟ.

ತಾರುಣ್ಯದ ಭರ

26 ವಯಸ್ಸಿನ ಅಮ್ಜಾದ್ ಆಲಿ ಇಂದಿನ ಪೀಳಿಗೆಗೆ ಸೇರಿದವರು - ಸ್ವಭಾವ, ವೇಷಭೂಷಣ ಎಲ್ಲದರಲ್ಲಿಯೂ. ಕೆದರಿದ ತೆಂಗಿನ ನಾರಿನಂತಹ ಕೂದಲು, ಮಾಸಲು ಬಣ್ಣದ ಬಟ್ಟೆ, ಮಣಿಸರ ಧರಿಸಿದ 'ಮಾಡ್' ಜನಾಂಗಕ್ಕೆ ಅವರು ಬಹು ಅಚ್ಚುಮೆಚ್ಚು. ಅವರ ವಾದನದಲ್ಲಿಯೂ ತಾರುಣ್ಯದ ಭರಕ್ಕೆ ಅನುಗುಣವಾದ ಓಟ. 'ತಯ್ಯಾರಿ' ಅಥವಾ ಸಾಧನೆಯ ಫಲವಾದ ಕೈ ಚಮತ್ಕಾರ ಮುಂತಾದುವು ಪ್ರಧಾನವಾಗಿ ಕಾಣಬರುತ್ತವೆ. ಮಗನ ಮೇಲೆ ಎಷ್ಟೇ ಪ್ರೀತಿ ಇದ್ದರೂ ಅವನ ಸಂಗೀತವನ್ನು ಹಫೀಸ್ ಆಲಿಖಾನರು ಒಪ್ಪಿರಲಾರರು. ಅವರದು ಮಡಿವಂತಿಕೆಯೆನ್ನಬಹುದು ಅಥವಾ ಪೂರ್ವ ಸಂಪ್ರದಾಯಕ್ಕೆ ಹೆಚ್ಚು ನಿಷ್ಠೆ ಎನ್ನಲೂಬಹುದು.

'ಭಕ್ತಿ - ಶ್ರದ್ಧೆ ಬೇಕು'

''ಬುದ್ಧಿ ಇರಬಹುದು. ಭಕ್ತಿ ಶ್ರದ್ಧೆ ಇಲ್ಲದಿದ್ದರೆ ವಿದ್ಯೆ ಬರುತ್ತದೆಯೇ'' ಎನ್ನುತ್ತಿದ್ದರು ಹಫೀಸ್ ಆಲಿಖಾನ್. ''ಇಂದು ನೋಡಿ, ಸಂಗೀತ ಗೋಷ್ಠಿಗೆ ಪಾದರಕ್ಷೆ ಹಾಕಿಕೊಂಡೇ ಬರತ್ತಾರೆ. ಕಲಿಯುವವರೂ ಅಷ್ಟೇ. ಕೈಕಾಲು ಯಾವುದೂ ತೊಳೆಯದೇ ಹಾಗೆಯೇ ಬಂದು ವಾದ್ಯವನ್ನು ಕೈಗೆ ತೆಗೆದುಕೊಂಡು ನುಡಿಸಲು ಪ್ರಾರಂಭ. ಅದರ ಬಗೆಗೆ ಅಷ್ಟು ಅಸಡ್ಡೆ. ಇಂತಹ ಜನಕ್ಕೆ ಸಂಗೀತದ ಬಗೆಗೆ ಎಷ್ಟು ಮರ್ಯಾದೆ? ಅದು ಎಂತಹ ದಿವ್ಯಕಲೆ ಎಂಬುದೇನು ತಿಳಿದಿದೆ? ಇವರ ಮಧ್ಯೆ ಆ ಕಲೆ ಏನು ಬಾಳಬಹುದು? ಬೆಳೆಯಬಹುದು?'' ಎನ್ನುತ್ತಿದ್ದರು.

ಕಲೆ – ತಪಸ್ಸು

ಹಫೀಸ್ ಆಲಿಖಾನ್ ಹಳೆಯ ವಾತಾವರಣದಲ್ಲಿ ಬೆಳೆದವರು. ಸಾಧನೆ, ಶ್ರಮ, ನಿಷ್ಠೆ ಇವುಗಳ ಮೂಲಕ ಕಲೆಯನ್ನು ಅಭ್ಯಾಸ ಮಾಡಿದವರು. ಅವರ ದೃಷ್ಟಿಯಲ್ಲಿ ಕಲಾಭ್ಯಾಸಕ್ಕೆ ಅಂತ್ಯವಿಲ್ಲ. ಕಾಲಮಿತಿಯಿಲ್ಲ. ಅದೊಂದು ತಪಸ್ಸು. ''ಎರಡು ವರುಷವೋ, ಮೂರು ವರುಷವೋ ಪಾಠ ಹೇಳಿ ಒಂದು ಡಿಪ್ಲೊಮಾ ಅಥವಾ ಡಿಗ್ರಿ ತಗಲಿ ಹಾಕಿ ಕಳಿಸಿದಲ್ಲಿ ವಿದ್ಯೆಬಂದ ಹಾಗೆ ಆಯಿತೆ? ಒಂದು ರಾಗವನ್ನೇ ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಲದಲ್ಲ. ಅದಕ್ಕೇ ಈಗ ಅನೇಕರ ರಾಗ ನಿರೂಪಣೆಯಲ್ಲಿ ಸತ್ವವಿಲ್ಲದಿರುವುದು. ರಾಗಗಳಿಗೆ ಜೀವಸ್ವರಗಳಿಲ್ಲವೇ? ವರ್ಚಸ್ಸಿಲ್ಲವೇ? ಅದನ್ನು ಗ್ರಹಿಸಿ ಅರ್ಥ ಮಾಡಿಕೊಂಡು ಸರಿಯಾಗಿ ಉಚಿತ ರೀತಿಯಲ್ಲಿ, ಉಚಿತ ಪ್ರಮಾಣದಲ್ಲಿ ಪ್ರಯೋಗಿಸಿದರೇ ಅಲ್ಲವೆ ಆಯಾ ರಾಗದ ಸ್ಪಷ್ಟ ವ್ಯಕ್ತಿತ್ವದ ಅನುಭವವಾಗುವುದು? ಇದು ಅನುಭವಶಾಲಿಯಾದ ಗುರುವಿನ ಮಾರ್ಗದರ್ಶನದಿಂದ ಏಕಾಗ್ರಸಾಧನೆಯಿಂದ ಮಾತ್ರ ಲಭ್ಯವಾಗುವುದು. ಅದು ಇಲ್ಲದೇ ಇಂದು ಆತುರವಾಗಿ ಕಲಿತು ಮಾಡುತ್ತಿರುವ ಪ್ರಯೋಗದ ಫಲವಾಗಿ ರಾಗ-ರಾಗಿಣಿಗಳು ವೇದನೆಯಿಂದ ಗೋಳಾಡುತ್ತಿರುವಂತೆ ಅನುಭವವಾಗುತ್ತಿದೆ'' ಎನ್ನುತ್ತಿದ್ದರು ಹಫೀಸ್ ಆಲಿಖಾನ್.

ಕಲಾವಿದರ ವಂಶ

ನಿಧನರಾದಾಗ ಉಸ್ತಾದ್ ಹಫೀಸ್ ಆಲೀಖಾನರ ವಯಸ್ಸು 93. ಅವರ ಸಹಪಾಠಿಗಳಾಗಿದ್ದ ದಿ॥ ಉಸ್ತಾದ್ ಅಲ್ಲಾವುದ್ದೀನ್ ಖಾನರಿಗಿಂತ 18 ವರ್ಷ ಕಿರಿಯರು. ಹಫೀಸ್ ಆಲಿಖಾನರು ಹುಟ್ಟಿದುದು ಗ್ವಾಲಿಯರ್‌ನಲ್ಲಿ, ಉತ್ತಮ ಸಂಗೀತ ಮನೆತನದಲ್ಲಿ. ಅವರ ಜೀವನದ ಬಹುಭಾಗ ಕಳೆದುದು - ರಾಜಾಸ್ಥಾನಗಳಲ್ಲಿ. ಅವರ ಪೂರ್ವಿಕರು ಆಫ್ಘಾನಿಸ್ಥಾನದವರು. ಕಾಬೂಲಿನಿಂದ ಬಂದು ಉತ್ತರ ಭಾರತದ ರಾಜಾಸ್ಥಾನಗಳಲ್ಲಿ ಉದ್ಯೋಗದಲ್ಲಿದ್ದವರು. ರಬಾಬ್, ಸರೋದ್ ಮುಂತಾದ ತಂತ್ರೀ ವಾದ್ಯಗಳ ವಾದನದಲ್ಲಿ ಸಿದ್ಧಹಸ್ತರು. ಅವರಲ್ಲಿ ಒಬ್ಬರು ಸರೋದ್ ವಾದ್ಯ ನಿರ್ಮಾಪಕರೆಂದೂ ಹೇಳಲಾಗಿದೆ.

ಹಫೀಸ್ ಆಲಿಖಾನರ ತಂದೆ ಉಸ್ತಾದ್ ನನ್ನೇಖಾನರು ಗ್ವಾಲಿಯರ್ ಆಸ್ಥಾನದ ವಿದ್ವಾಂಸರಾಗಿದ್ದರು. ಗಾಯಕರು. ಮಗನಿಗೆ ಅದೇ ಪಾಠ. ಮುಂದೆ ವೃಂದಾವನದಲ್ಲಿ ಗಣೇಶ್ ಲಾಲ್ ಚೌಬೆ ಅವರಿಂದ ಧ್ರುಪದ ಗಾಯನದಲ್ಲಿ ಶಿಕ್ಷಣ. ತಂದೆಯವರ ಮರಣ. ಅನಂತರ ಗಾಯನದಿಂದ ಸರೋದ್ ವಾದ್ಯವಾದನಕ್ಕೆ ಪ್ರಾರಂಭ. ಚಿಕ್ಕವಯಸ್ಸಿನಲ್ಲಿಯೇ 'ಅಫ್‌ತಾಬ್-ಏ-ಸರೋದ್' ಎಂದು ಹೊಗಳಿಸಿಕೊಳ್ಳುತ್ತಿದ್ದರು. ಮುಂದೆ ಉಚ್ಚಶಿಕ್ಷಣಕ್ಕಾಗಿ ರಾಂಪುರಕ್ಕೆ ಆಗಮನ. ಅಲ್ಲಿ ಮೊದಲು ಸಾರಂಗಿ ವಾದಕ ಮುನ್ಷನ್ ಖಾನ್ ಅವರಲ್ಲಿ ಅನಂತರ ಆಸ್ಥಾನದ ಮುಖ್ಯ ವಿದ್ವಾಂಸರಾಗಿದ್ದ ಉಸ್ತಾದ್ ವಜೀರ್‌ಖಾನರಿಂದ ಶಿಕ್ಷಣ. ಪುನಃ ಗ್ವಾಲಿಯರ್ ಆಸ್ಥಾನದ ವಿದ್ವಾಂಸರು - ಇವು ಅವರ ಜೀವನದ ಮುಖ್ಯ ಘಟ್ಟಗಳು.

ಜನಪ್ರಿಯತೆ

ಅರಮನೆಯ ಆಸರೆಯಲ್ಲಿ ಬೆಳೆದುಬಂದ ಹಫೀಸ್ ಅಲಿಯವರಿಗೆ ಜನಾನುರಾಗ, ಜನಪ್ರಿಯತೆ ಮುಂತಾದವುಗಳಲ್ಲಿ ಅಷ್ಟಾಗಿ ನಂಬಿಕೆಯಿಲ್ಲ. ಕಲೆಯ ಸ್ವಾರಸ್ಯವನ್ನು ಬಲ್ಲ ರಸಿಕ ಹಾಗೂ ಜ್ಞಾನಸ್ಥರ ಪ್ರಶಂಸೆಗೆ ಹೆಚ್ಚು ಬೆಲೆ. "ಜನರ ಚಪ್ಪಾಳೆಗೇನಂತೆ ಯಾವ್ಯಾವುದಕ್ಕೋ ಹೊಡೆಯುತ್ತಾರೆ. ಕೋತಿಗಳು ಸಂಗೀತ ವಾದ್ಯದ ಮೇಲೆ ಕೈಯಾಡಿಸಿ ಕರಪಲ ಮಾಡಿದಲ್ಲಿ ಅವಕ್ಕೆ ಸಂಗೀತಗಾರರಿಗಿಂತ ಹೆಚ್ಚು ಚಪ್ಪಾಳೆಗಳು ಬೀಳುತ್ತವೆ. ಅದನ್ನಪೇಕ್ಷಿಸಿ ಸಂಗೀತಗಾರರೂ ಹಾಗೆಯೇ ನಡೆವುದು ಸರಿಯೇ? ವೇದಿಕೆಯ ಮೇಲೆ ಕೇವಲ ಸಾಧನಾ ಬಲದಿಂದ ಬಂದ ಕೈ ಚಮತ್ಕಾರವನ್ನು ಪ್ರದರ್ಶನ ಮಾಡಿದಲ್ಲಿ ಚಪ್ಪಾಳೆ ಬೀಳಬಹುದು. ಆದರೆ ಅದು ಕಲೆಗೆ ಮರ್ಯಾದೆಯ ಸೂಚನೆಯೇ? ಸಾಧನೆಯ ಬಲದಿಂದ ಪಕ್ವವಾದ ಕೈ ಕಲೆಯ ಅಧೀನವಲ್ಲವೇ ಉತ್ತಮ ಕಲ್ಪನೆಗಳನ್ನು. ಸರಿಯಾಗಿ, ಸ್ಪಷ್ಟವಾಗಿ ಅಭಿವ್ಯಕ್ತಪಡಿಸುವ ಮಾಧ್ಯಮವಲ್ಲವೇ? ರಾಗಗಳನ್ನು ಶುದ್ಧವಾಗಿ, ಅವುಗಳ ಭಾವವು ಪುಷ್ಟಿಗೊಂಡು ಕೇಳುವವರ ಮೇಲೆ ಪರಿಣಾಮಕಾರಿಯಾಗುವಂತೆ ತಾನೂ ಅನುಭವಿಸಿ ನಿರೂಪಿಸುವುದು ಕಲಾವಿದನ ಕರ್ತವ್ಯ" ಹೀಗೆ ಅವರ ವಾದಸರಣಿ ಹರಿಯುತ್ತಿತ್ತು.

ಸಾಧನಾ ಬಲವೆಂದೊಡನೆ ಅವರ ಪೂರ್ವ ವಯಸ್ಸಿನ ಕಛೇರಿಯೊಂದು ನೆನಪಿಗೆ ಬರುತ್ತದೆ. ಒಮ್ಮೆ ಹಫೀಸ್ ಅಲಿಖಾನರು ಮೂರು-ನಾಲ್ಕು ಗಂಟೆಗಳ ಕಾಲ ಕಚೇರಿ ಮಾಡಿ ನಿಲ್ಲಿಸಿದಾಗ ಅಲ್ಲಿ ನೆರೆದಿದ್ದ ಕೆಲವರು, ಒಬ್ಬ ತಬಲಾ ವಾದಕನನ್ನು ಮುಂದೆ ಮಾಡಿಕೊಂಡು, ಅವನೊಂದಿಗೆ ಸ್ವಲ್ಪ ಕಾಲ ನುಡಿಸಬೇಕೆಂದು ಒತ್ತಾಯ ಮಾಡಿದರು. ಖಾನರು ಸಾಧ್ಯವಿಲ್ಲವೆಂದು ಎಷ್ಟೇ ಹೇಳಿದರೂ ಕೇಳದುದರಿಂದ ಅವರ ಬಲವಂತಕ್ಕೆ ಪುನಃ ಪ್ರಾರಂಭಿಸಿದರು. ಕ್ರಮೇಣ ಕಾವೇರುತ್ತಾ ದೃತಲಯದಲ್ಲಿ ವಿನ್ಯಾಸ ಮಾಡಲಾರಂಭಿಸಿದರು. ತಬಲಾ ವಾದಕನೂ ಕಾವೇರುತ್ತಾ ಸಮಸಮವಾಗಿ ನುಡಿಸುತ್ತಿದ್ದನು. ಇಬ್ಬರಿಗೂ ಕೈ ಓಡುತ್ತಾ ಓಡುತ್ತಾ ತಲೆ ತಿರುಗುವಂತಹ ಓಟ ಖೇಚರಕ್ಕೆ ಮುಟ್ಟಿದಾಗ ತಬಲಾ ವಾದಕನಿಗೆ ಹೃದಯ ಕ್ರಿಯೆಯೇ ನಿಂತಿತು. ಆತ ಅಲ್ಲಿಯೇ ಒರಗಿದನು.

ಕಲೆ, ಅದರ ಸಂಪ್ರದಾಯಗಳ ಬಗೆಗೆ ಭಕ್ತಿ, ತೀವ್ರ ನಿಷ್ಠೆ, ಅದನ್ನು ಪ್ರತಿಪಾದಿಸುವ ದಿಟ್ಟ ನಿಲುವು, ಖಂಡಿತವಾದ ಇವುಗಳ ಫಲವಾಗಿ ಹಫೀಸ್ ಅಲಿಖಾನರು ಮಿಕ್ಕವರಂತೆ ಜನಜೀವನದಲ್ಲಿ ಹೆಚ್ಚಾಗಿ ಬೆರೆಯಲು ಸಾಧ್ಯವಾಗಲಿಲ್ಲ. 18 ವರುಷಗಳ ಹಿಂದೆ ರಾಷ್ಟ್ರೀಯ ಪ್ರಶಸ್ತಿ, ಅನಂತರ ವಿಶ್ವ ಭಾರತೀಯ ಡಾಕ್ಟರೇಟ್, ಪದ್ಮಭೂಷಣ ಮುಂತಾದ ಪ್ರಶಸ್ತಿಗಳು ಬಂದಾಗಲೂ ಅವರು ವಿಚಲಿತರಾಗಲಿಲ್ಲ. ಜೀವನದ ಸಂಧ್ಯೆಯಲ್ಲಿಯೂ ಅಷ್ಟೆ. ಗ್ವಾಲಿಯರ್ ಆಸ್ಥಾನದಿಂದ ದೆಹಲಿಯ ಭಾರತೀಯ ಕಲಾಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ನೇಮಿತರಾದರು. ಕೆಲವು ಕಾಲಾನಂತರ ಆ ಉದ್ಯೋಗವೂ ಹೋಯಿತು. ಅನಂತರ ಅವರೇನು ಪಾಡುಪಟ್ಟರೋ ಯಾರಿಗೂ ತಿಳಿಯದು. ಈಗ ಮೂರು ನಾಲ್ಕು ವರುಷಗಳ ಹಿಂದೆ ದೆಹಲಿಯ ಪತ್ರಿಕೆಗಳಲ್ಲಿ

ಅವರ ಜಗೆಗೆ ವಿಷಾದದ ಸುದ್ದಿಯೊಂದು ಪ್ರಕಟವಾಗಿದ್ದಿತು. ಹಿಂದೆ ಅವರ ಪೋಷಕರಾಗಿದ್ದ ಒಬ್ಬರು ಹಫೀಸ್ ಆಲಿಖಾನರನ್ನು ನೋಡಲು ಹೋದಾಗ ದಾರುಣಸ್ಥಿತಿ ತಿಳಿಯಿತು. ದೆಹಲಿಯ ಯಾವುದೋ ಮೂಲೆಯಲ್ಲಿ ವಾಸ. ಬಹುದಿನಗಳಿಂದ ಕಾಹಿಲೆಯಿಂದ ನರಳುತ್ತಿದ್ದರು. ಔಷಧಿಗೂ ಹಣವಿರಲಿಲ್ಲ. ತಮ್ಮ ನೋವನ್ನು ಮೌನವಾಗಿ ಸಹಿಸಿಕೊಂಡು ದಿನ ತಳ್ಳುತ್ತಿದ್ದರು. ಆಸುಪಾಸಿನಲ್ಲಿದ್ದವರಿಗೂ ಅವರು ಯಾರೋ 'ಉಸ್ತಾದ್'ರೆಂದೇ ತಿಳಿದಿತ್ತೆ ವಿನಾ, ಖ್ಯಾತ ಹಫೀಸ್‌ಖಾನರೆಂದು ತಿಳಿದಿರಲಿಲ್ಲ.

ಉಸ್ತಾದ್ ಹಫೀಸ್ ಆಲಿಖಾನರು ಈಗ ಅನೇಕರಿಗೆ ಅರಿವಿಲ್ಲದ ಕಳೆದು ಹೋದ ಒಂದು ಯುಗದ ಸಂಕೇತದಂತಿದ್ದರು - ನದೀ ತೀರದಲ್ಲಿರುವ ಅಶ್ವತ್ಥವೃಕ್ಷದಂತೆ. ಪ್ರವಾಹ ಬರುತ್ತದೆ. ಮರವನ್ನು ಬಳಸಿ ಸುತ್ತಿ ನೆಲವನ್ನು ಕೊರೆಯುತ್ತದೆ. ಅದನ್ನು ಹಿಂದೆ ಬಿಟ್ಟು ಮುಂದೆ ಹೋಗುತ್ತದೆ. ತಾನು ಹುಟ್ಟಿದ ನೆಲದಲ್ಲಿ ಭದ್ರವಾಗಿ ಬೇರುಬಿಟ್ಟು ಈ ಆಘಾತವನ್ನು ತಡೆದುಕೊಂಡು ಮರವು ನಿಂತಿರುತ್ತದೆ. ಹಫೀಸ್ ಆಲಿಖಾನರ ಜೀವನವೂ ಹಾಗೆಯೇ ಆಯಿತು. ಅವರ ಮಕ್ಕಳು ರಹಮತ್ ಆಲಿ ಖಾನ್ ಮತ್ತು ಅಮ್ಜಾದ್ ಆಲಿಖಾನ್ ಇಬ್ಬರೂ ಉತ್ತಮ ಸರೋದ್ ವಾದಕರು. ಅದರಲ್ಲಿ ಅಮ್ಜಾದ್ ಭಾರತ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಖ್ಯಾತಿಗಳಿಸಿದ್ದಾರೆ. ★

ಸುಧಾ, 1973

25. ರಾಷ್ಟ್ರದ ಸುಪ್ರಸಿದ್ಧ ಗಾಯಕಿ ಗಂಗೂಬಾಯಿ ಹಾನಗಲ್

ಪದ್ಮಭೂಷಣ ಮೊದಲಾಗಿ ನಾನಾ ಪ್ರಶಸ್ತಿಗಳನ್ನು ಗಳಿಸಿ ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಅಗ್ರಶ್ರೇಣಿಯಲ್ಲಿರುವ ವಿದುಷಿ ಗಂಗೂಬಾಯಿ ಹಾನಗಲ್ಲರಿಗೆ 60 ವರ್ಷ ತುಂಬಿತೆಂದು ನಂಬಲು ಕಷ್ಟವಾದೀತು. ನಿರಾಡಂಬರ ಹಾಗೂ ಅವರ ಗಂಭೀರ ಕಲಾಸೇವೆ ನಾಲ್ಕು ದಶಕಗಳಿಗೂ ಮೀರಿದ್ದಾಗಿದೆ. ಕನ್ನಡನಾಡಿನ ಈ ಪ್ರಖ್ಯಾತ ಗಾಯಕಿಯ ಸಾಧನೆ ಮತ್ತು ನಿಷ್ಠೆ ಕನ್ನಡಿಗರಿಗೆ ಹೆಮ್ಮೆ ತಂದಿದೆ.

ಕಳೆದ ಮಾರ್ಚ 5ನೆಯ ತಾರೀಕಿಗೆ ಗಂಗೂಬಾಯಿ ಹಾನಗಲ್ ಅವರಿಗೆ 60 ವರುಷ. ಅವರನ್ನು ನೋಡಿದವರಿಗೆ ಗಂಗೂ ಬಾಯಿಯವರು ಷಷ್ಟ್ಯಬ್ದಿಯನ್ನು ದಾಟಿರುವರೆಂದು ನಂಬಲು ಕಷ್ಟ. ಒಬ್ಬ ಮಧ್ಯಮ ವಯಸ್ಸಿನ ಮಹಿಳೆ ಎನ್ನಬಹುದು. ಅದರಲ್ಲಿಯೂ ಹತ್ತೂ ಜನರ ಮಧ್ಯೆ ಸೇರಿಕೊಂಡಿದ್ದರೆ ಅವರು ಯಾರು ಎಂದು ಗುರ್ತಿಸುವುದೂ ಕಷ್ಟ. ಒಬ್ಬ ಕಲಾವಿದೆ ಎಂದು ಹೇಳಲಂತೂ ಸಾಧ್ಯವೇ ಆಗುವುದಿಲ್ಲ. ಗಣ್ಯವಾದ ಸ್ಥಾನವನ್ನು ಸಂಪಾದಿಸಿ ಅದನ್ನು ಉಳಿಸಿಕೊಳ್ಳಲು ವಿದ್ಯೆಯಷ್ಟೇ ಅಥವಾ ಅದಕ್ಕಿಂತ ಹೆಚ್ಚಾಗಿ ಆಕಾರ ಮತ್ತು ಆಡಂಬರಗಳು

ಅವಶ್ಯಕವೆಂದು ಭಾವಿಸಲ್ಪಟ್ಟಿರುವ ಕ್ಷೇತ್ರ - ಸಂಗೀತ. ಆದರೆ ಗಂಗೂಬಾಯಿಯವರ ಸ್ವಭಾವ ಇದಕ್ಕೆ ವಿರುದ್ಧ. ಅವರೆಂದೂ ತಮ್ಮ ವಿದ್ಯಾ ಬಲ, ಸ್ಥಾನ ಬಲಗಳನ್ನು ಪ್ರದರ್ಶನ ಮಾಡಲಿಲ್ಲ. ತಾವು ರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ಶ್ರೇಷ್ಠ ಕಲಾವಿದೆ ಎಂದು ಮಾನ್ಯ ಮಾಡಲ್ಪಟ್ಟಿದ್ದರೂ ಹತ್ತೂ ಜನರಲ್ಲಿ ತಾವೂ ಒಬ್ಬರಂತೆ ಸಹೃದಯತೆಯಿಂದ ಬೆರೆಯುತ್ತಾರೆ - ತುಂಬಿದ ಕೊಡದಂತೆ. ಇದೇ ರೀತಿ ನಾಲ್ಕು ದಶಕಗಳಿಗೂ ಮೀರಿ ಸಂಗೀತಕ್ಕೆ ಸೇವೆ ಸಲ್ಲಿಸಿದ್ದಾರೆ.

ನಿರಾಡಂಬರ

ಅವರ ಸರಳವಾದ ಆಕಾರ ಮತ್ತು ನಿರಾಡಂಬರ ಸ್ವಭಾವದ ಫಲವಾಗಿ ಗಂಗೂಬಾಯಿಯವರನ್ನು ಸಂಗೀತ ಕಲಾವಿದೆಯೆಂದು ನಂಬಲಾಗದೆ ಆಭಾಸ ಪ್ರಕರಣಗಳಿಗೂ ಅನೇಕಬಾರಿ ಆಸ್ಪದವಾಗಿದೆ. ಅದರಲ್ಲಿ ಒಂದು ಪ್ರಕರಣ ಆಕಾಶವಾಣಿಗೆ ಸಂಬಂಧಿಸಿದುದು. ಆಗ್ಗೆ ಗಂಗೂಬಾಯಿ ಅವರಿಗೆ ಸುಮಾರು 25 ವರುಷವಿರಬಹುದು. ದೆಹಲಿ ಕೇಂದ್ರದಿಂದ ಅವರು ಸಂಗೀತ ಕಚೇರಿಯಾಗಬೇಕಾಗಿದ್ದಿತು. ಹೊತ್ತಿಗೆ ಮುಂಚೆಯೇ ಬಂದಿದ್ದರು ಗಂಗೂಬಾಯಿ. ಸಾಧಾರಣವಾದ ಸೀರೆಯುಟ್ಟು, ಠೀಕು ಠಾಕಾಗಿಲ್ಲದೆ ಹಳ್ಳಿಯ ಹೆಂಗಸಿನಂತೆ ಕಂಡುಬರುತ್ತಿದ್ದ ಗಂಗೂಬಾಯಿಯವರನ್ನು ಯಾರೂ ಗಮನಿಸಲಿಲ್ಲ. ಅಧಿಕಾರಿಗಳನ್ನು ವಿಚಾರಿಸಿದ್ದಕ್ಕೆ ಮರುಮಾತಿಲ್ಲದೆ ಜವಾನರು ಕೂರುವ ಒಂದು ಮೂಲೆಯಲ್ಲಿ ಕುಳ್ಳಿರಹೇಳಿದರು. ಕಚೇರಿ ಸಮಯಕ್ಕೆ ಯಾರ ಸಹಾಯವೂ ಕೊಡದೆ ಗಂಗೂಬಾಯಿಯವರ ಕೈಯಲ್ಲೇ ತಂಬೂರಿಯನ್ನೂ ಹೊರಿಸಿಕೊಂಡು ಹೋದರು. ಕಚೇರಿ ಆದಮೇಲೆ ಎಲ್ಲರಿಗೂ ದಿಗ್ಭ್ರಮೆ. ದಿವ್ಯವಾದ ಗಾಯನ. ಪೆಚ್ಚು ಮುಖ ಹಾಕಿಕೊಂಡೇ ಅಧಿಕಾರಿ ವರ್ಗದವರೆಲ್ಲಾ ಗಂಗೂಬಾಯಿಯವರ ಬಳಿ ಬಂದು ಅಭಿನಂದಿಸಿದರು. ತಾವು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಟ್ಟರು.

ಇಂಥಾದ್ದೇ ಇನ್ನೊಂದು ಸಂದರ್ಭ - ಕಲ್ಕತ್ತೆಯಲ್ಲಿ ನಡೆಯಿತು. ಆ ವೇಳೆಗಾಗಲೇ ಗಂಗೂಬಾಯಿಯವರು ಉತ್ತರ ಭಾರತದಲ್ಲೇ ಸ್ವಲ್ಪ ಪ್ರಸಿದ್ಧರಾಗಿದ್ದರು. ಈ ಕೀರ್ತಿಯ ಫಲವಾಗಿ ಕಲ್ಕತ್ತೆಯಲ್ಲಿ ಪ್ರತಿವರುಷ ನಡೆವ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಹಾಡಲು ಆಹ್ವಾನಿಸಲ್ಪಟ್ಟರು. ಕಾರ್ಯಕ್ರಮದ ದಿನ ಕಲ್ಕತ್ತೆಗೂ ತಲುಪಿದರು. ಬೆಳಿಗ್ಗೆ ಸಮ್ಮೇಳನದ ಸ್ಥಳಕ್ಕೆ ಹೋಗಿ ವ್ಯವಸ್ಥಾಪಕರನ್ನು ಕಂಡರು. ವ್ಯವಸ್ಥಾಪಕರು ಗಂಗೂಬಾಯಿಯವರನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದರು. ಆಭರಣ, ಆಡಂಬರ ಯಾವುದೂ ಇಲ್ಲ. ಸಾದಾ ಸೀರೆಯುನ್ನುಟ್ಟು ಹಳ್ಳಿಯ ಹೆಂಗಸಿನಂತೆ ಕಾಣುವ ಈ ಮಹಿಳೆ ಪ್ರಸಿದ್ಧ ಗಾಯಕಿ ಗಂಗೂಬಾಯಿಯೇ? ಒಂದು ವೇಳೆ ಇದ್ದರೂ ಉಫ್ ಎಂದು ಊದಿದರೆ ತೂರಿ ಹೋಗುವಂತಹ ಈ ವ್ಯಕ್ತಿ ಹಾಡುತ್ತದೆಯೇ. ಸಮ್ಮೇಳನದಲ್ಲಿ ಹಾಡಲು ಸಾಧ್ಯವೇ? ಮುಂತಾದ ಸಂಶಯಗಳು ಅವರ ಮನಸ್ಸಿನಲ್ಲಿ. ಕೊನೆಗ ಕೇಳಿಯೇಬಿಟ್ಟರು "ನೀವು ಹಾಡುವುದನ್ನು ಸ್ವಲ್ಪ ಕೇಳಬೇಕು. ಅನಂತರ ಸಮ್ಮೇಳನದಲ್ಲಿ ಹಾಡುವ ಯೋಚನೆ ಮಾಡುವ" ಎಂದು.

'ಹಾಡಿ ಬಿಡಿ'

ಗಂಗೂಬಾಯಿಯವರಿಗೆ ಸ್ವಲ್ಪ ಸಂದಿಗ್ದ - ಮನಸ್ಸಿಗೆ ಬೇಸರ ಬೇರೆ. ಕೊನೆಗೆ ಅಲ್ಲಿದ್ದ ಉಸ್ತಾದರೊಬ್ಬರು "ಬಾಯಿಯವರೇ ನಿಮ್ಮನ್ನು ನೋಡಿದರೆ ಹಾಡಲು ಶಕ್ತಿಯಿದೆಯೋ ಇಲ್ಲವೋ ಎಂದು ಬಾಬು ಅವರು ಆತಂಕ ಪಡುತ್ತಿದ್ದಾರೆ. ಒಂದು ಐದು ನಿಮಿಷ ಹಾಡಿಬಿಡಿ. ಯೋಚನೆ ಮಾಡಬೇಡಿ" ಎಂದು ಪ್ರೋತ್ಸಾಹಿಸಿದರು. ಗಂಗೂಬಾಯಿಯವರು ಹಾಡಿದರು. ಕೇಳಿ ಸಂತೋಷಪಟ್ಟ ವ್ಯವಸ್ಥಾಪಕರು ಕ್ಷಮಾಪಣೆ ಕೇಳಿದರು. ಅಂದು ರಾತ್ರಿ ಅಮೋಘವಾದ ಗಾಯನ-ಗಂಗೂಬಾಯಿಯವರದು. ಸಂತೋಷಪಟ್ಟ ಶ್ರೀಮಂತ ರಸಿಕರಿಂದ ಏಳೆಂಟು ಚಿನ್ನದ ಪದಕಗಳು ಬಹುಮಾನವಾಗಿ ಕೊಡಲ್ಪಟ್ಟವು.

ಹೀಗೆಯೇ ಪುಣೆಯಲ್ಲಿ ಮೊದಲಬಾರಿ ಕಾರ್ಯಕ್ರಮಕ್ಕೆ ಹೋದಾಗ ಚಿತ್ತೋಪಂತ್ ಗುರವ್ ಎಂಬ ಹಿರಿಯ ರಸಿಕರೊಬ್ಬರು ಗದರಿಸಿದ್ದರಂತೆ "ಬೊಂಬಾಯಿ, ಪುಣೆಗಳ ಜ್ಞಾನಸ್ಥ ರಸಿಕರ ಮುಂದೆ ಹಾಡಲು ಬಂದೆಯೋ? ನಿನಗೆಷ್ಟು ಧೈರ್ಯ" ಎಂದು. ಗಾಯನವನ್ನು ಕೇಳಿದ ಮೇಲೆ ಸಂತೋಷಪಟ್ಟು ಅವರು ಆಶೀರ್ವಾದ ಮಾಡಿದರಂತೆ. ಹೀಗೆ ಗಂಗೂಬಾಯಿಯವರ ಜೀವನದಲ್ಲಿ ಘಟನೆಗಳೆಷ್ಟೋ. ಅವುಗಳನ್ನು ನಿಸ್ಸಂಕೋಚವಾಗಿ ವಿವರಿಸುತ್ತಾರೆ. ಈ ಘಟನೆಗಳಿಂದ ತಮ್ಮ ಗೌರವಕ್ಕೆ ಹಾನಿ, ಸ್ಥಾನಕ್ಕೆ ಚ್ಯುತಿ ಆದುದರಿಂದ ಮುಚ್ಚಿಟ್ಟುಕೊಳ್ಳಬೇಕೆಂಬ ಭ್ರಮೆ ಮತ್ತು ಭಾವನೆಯಿಲ್ಲ ಎಲ್ಲರ ಜೀವನದಲ್ಲಿಯೂ ಒದಗಿಬರುವ ಏರುಪೇರುಗಳಂತೆ ತೂಗಿಕೊಂಡು ಹೋಗಬೇಕು. ಎಂಬ ಮನೋಧರ್ಮ ಅವರದು.

ರೂಪ ಮತ್ತು ದನಿ ಇವು ಹೆಂಗಸರ ಸಂಗೀತದ ಆಕರ್ಷಣೆಗೆ ಪ್ರಧಾನ ಸಾಮಗ್ರಿಗಳು. ವಿದ್ಯೆಯಲ್ಲಿ ಹಿಂದೆ ಬಿದ್ದರೂ ಈ ಎರಡೂ ಅಂಶಗಳು ಗಾಯಕಿಯರ ಕೀರ್ತಿ ಹೆಚ್ಚಲು ಸಾಧಕವಾದವು - ಇದು ಸಾರ್ವತ್ರಿಕವಾಗಿರುವ ನಂಬಿಕೆ. ಆದರೆ ಗಂಗೂಬಾಯಿಯವರ ಸ್ಥಿತಿ ಅದಕ್ಕೆ ವಿರುದ್ಧ. ರೂಪಭಾಗದಲ್ಲಿ ನೋಡಿದರೆ ಗೃಹಕೃತ್ಯ ಜೀವನದಲ್ಲಿ ಪಕ್ವವಾದ ಮಧ್ಯಮವರ್ಗದ ಸಾಧಾರಣ ಮಹಿಳೆಯಂತೆ ಅನುಭವವಾಗುತ್ತದೆ. ದನಿ ವಿಷಯದಲ್ಲಿ ಹೇಳಬೇಕಾದರೆ ನಾವು ಅವರು ಹಾಡುವುದನ್ನು ಪ್ರತ್ಯಕ್ಷವಾಗಿ ಕೇಳದೇ ಇದ್ದರೆ ಅವರದು ಹೆಂಗಸಿನ ದನಿಯೆಂದು ಹೇಳಲಾಗುವುದೇ ಇಲ್ಲ. ಗಂಗೂಬಾಯಿಯವರನ್ನು ಕುರಿತು "ಬದುಕಿದ್ದಾಗ ಹಾಡಿ ಯಶಸ್ಸುಗಳಿಸಲಾಗದೆ ನಿರಾಶೆಗೊಂಡ ಯಾವುದೋ ಉಸ್ತಾದನ ಜೀವ ನಿನ್ನಲ್ಲಿ ಸೇರಿಕೊಂಡು ಹೀಗೆ ಹಾಡಿಸುತ್ತಿದೆ" ಎಂದು ಒಮ್ಮೆ ಹಾಸ್ಯಮಾಡಿದರಂತೆ ಕವಿವರ್ಯ ದ.ರಾ. ಬೇಂದ್ರೆ. ಗಂಗೂಬಾಯಿಯವರಿಗೆ ಇಂದು ರಾಷ್ಟ್ರಮಟ್ಟದ ಮಾನ್ಯತೆ ತಂದಿರುವುದು ಮುಖ್ಯವಾಗಿ ಅವರ ಕಲೆ. ಅದರ ಬಗೆಗೆ ಅವರಿಗಿರುವ ನಿಷ್ಠೆ. ಮಿಗಿಲಾಗಿ ವಿದ್ಯೆಗೆ ಅನುಗುಣವಾದ ವಿನಯ ಮತ್ತು ಸರಳ ಸ್ವಭಾವ.

ತಾಯಿ ಅಂಬಾ ಬಾಯಿ

ಸುಮಾರು 50 ವರುಷಗಳ ಹಿಂದೆ ಅವರ ತಾಯಿ ಅಂಬಾಬಾಯಿಯವರು "ಗಂಗೂ" ವಿಗೆ ಸಂಗೀತ ಕಲಿಸಲು ಪ್ರಾರಂಭ ಮಾಡಿದಾಗ ಮಗಳು ಹೀಗೆ ಕೀರ್ತಿಶಿಖರವನ್ನು

ಏರುವಳೆಂದು ನೆನೆಸಿದ್ದರೋ ಇಲ್ಲವೋ ತಿಳಿಯದು. ಸಂಗೀತ ಕಲೆಗೆ ಹೆಸರಾದುದು –ಹಾನಗಲ್ ಮನೆತನ. ಅಂಬಾಬಾಯಿಯವರ ತಾಯಿ ಕಮಲಾಬಾಯಿಯವರೂ ಒಳ್ಳೆಯ ಗಾಯಕಿ. ಆದರೆ ಅಂಬಾಬಾಯಿಯವರು ಉತ್ತರ ಕರ್ನಾಟಕದಲ್ಲೆಲ್ಲಾ ಬಹು ಹೆಸರಾಂತ ಗಾಯಕಿ ಮತ್ತು ನರ್ತಕಿ. ಇಲ್ಲಿ ವಿಶೇಷವೇನೆಂದರೆ ಅಂಬಾಬಾಯಿಯವರು ಹಾಡುತ್ತಿದ್ದುದು ಕರ್ನಾಟಕ ಸಂಗೀತ. ಅವರಿಗೆ ಗುರು- ಹರಪನಹಳ್ಳಿ ಇಮಾಂ ಸಾಹೇಬರು. "ಅವರು ಬಂದು ಪಾಠ ಹೇಳುತ್ತಿದ್ದುದು ನೆನಪಿದೆ. ಪಾಠ ಹೇಳಿ ಊಟವಾದ ಮೇಲೆ ಅವರ ಎಂಜಲೆಲೆಯನ್ನು ಎತ್ತಲು ಯಾರಿಗೂ ಬಿಡದೆ ತಾವೇ ಎತ್ತಿ ಹಾಕುತ್ತಿದ್ದರು" ಎನ್ನುತ್ತಾರೆ ಗಂಗೂಬಾಯಿ – ತಾಯಿಯ ಗುರುಗಳನ್ನು ಸ್ಮರಿಸಿಕೊಳ್ಳುತ್ತಾ.

ಹುಬ್ಬಳ್ಳಿಗೆ ಹೋಗಿದ್ದಾಗ ಗಂಗೂಬಾಯಿಯವರ ಮನೆಯಲ್ಲಿ ಅಂಬಾಬಾಯಿಯವರ ಪುಸ್ತಕಗಳನ್ನು ನೋಡುವ ಅವಕಾಶ ದೊರಕಿತ್ತು. ಅವರ ಕೈ ಬರೆಹದ ಪುಸ್ತಕಗಳಲ್ಲಿ ವರ್ಣಗಳಿವೆ, ತ್ಯಾಗರಾಜ, ದೀಕ್ಷಿತರೇ ಮೊದಲಾದ ಕರ್ನಾಟಕ ವಾಗ್ಗೇಯಕಾರರ ಕೀರ್ತನೆಗಳಿವೆ, ಹರಿದಾಸರ ಪದಗಳಿವೆ. ಮಿಗಿಲಾಗಿ ಅನೇಕ ಜಾವಳಿಗಳಿವೆ. ಅಲ್ಲಿಯೇ ಗೀತಗೋವಿಂದದ 'ನಿಂದತಿ ಚಂದನ' ಎಂದು ಪ್ರಾರಂಭವಾಗುವ 8ನೆಯ ಅಷ್ಟಪದಿಯನ್ನು ಕಾಂಬೋಜಿರಾಗದಲ್ಲಿ ನೋಡಿದುದು. ಅಂಬಾಬಾಯಿಯವರು ಅವರ ಗಾಯನವನ್ನು ಪ್ರಾಯಶಃ "ಸಮುದ್ರವಸನೇ ದೇವಿ" ಎಂಬ ಶ್ಲೋಕದಿಂದ ಪ್ರಾರಂಭಿಸುತ್ತಿದ್ದರಂತೆ. ಸಭೆಯೆಲ್ಲಾ ನಾದಮಯವಾಗುತ್ತಿದ್ದಿತಂತೆ. ಅವರು ಉತ್ತಮ ನರ್ತಕಿಯಾಗಿದ್ದರೆಂಬುದಕ್ಕೆ ಅವರ ಪುಸ್ತಕದಲ್ಲಿದ್ದ ನಾಟ್ಯ ಸಂಬಂಧ ಕೃತಿಗಳೇ ಸಾಕ್ಷಿ.

ಮಗಳಿಗೆ ಹಿಂದೂಸ್ತಾನಿ

ತಾವು ಕರ್ನಾಟಕ ಸಂಗೀತದ ಪ್ರಬುದ್ಧ ಕಲಾವಿದೆಯಾದರೂ, ಮಗಳಿಗೆ ಹಿಂದೂಸ್ತಾನೀ ಸಂಗೀತವನ್ನೇ ಕಲಿಸಲು ನಿರ್ಧರಿಸಿದರು –ಅಂಬಾಬಾಯಿ. ಇದಕ್ಕೆ ಕಾರಣವಿಷ್ಟೆ: ಒಂದು ಕಾಲದಲ್ಲಿ ಆ ಪ್ರಾಂತದಲ್ಲೆಲ್ಲಾ ಕರ್ನಾಟಕ ಸಂಗೀತವೇ ಪ್ರಚಾರದಲ್ಲಿದ್ದರೂ ಅಂಬಾಬಾಯಿಯವರ ಕಾಲದ ವೇಳೆಗೆ ಹಿಂದೂಸ್ತಾನೀ ಸಂಗೀತವು ಜನಪ್ರಿಯವಾಗಿ ಕರ್ನಾಟಕ ಸಂಗೀತವು ಹಿಂದೆ ಬೀಳುತ್ತಿದ್ದಿತು. ಆದುದರಿಂದ ಮಗಳಿಗೆ ಹಿಂದೂಸ್ತಾನೀ ಸಂಗೀತವನ್ನೇ ಕಲಿಸಬೇಕೆಂದು ನಿರ್ಧರಿಸಿದರು. ಕರ್ನಾಟಕ ಸಂಗೀತವನ್ನು ಕಲಿಸಿದರೆ ಹಿಂದೂಸ್ತಾನೀ ಶೈಲಿಗೆ ಧ್ವನಿ ಒದಗುವುದೋ ಇಲ್ಲವೋ ಎಂದು ಗಂಗೂವಿಗೆ ಅಂಬಾಬಾಯಿ ತಮ್ಮ ಸಂಗೀತವನ್ನು ಕಲಿಸಲಿಲ್ಲ. "ಆದರೂ ಬಾಲ್ಯದಲ್ಲಿ ನಾನು ಕೇಳಿದ್ದನ್ನೆಲ್ಲಾ ಸುಲಭವಾಗಿ ಅನುಕರಿಸಿ ಹಾಡುತ್ತಿದ್ದೆ. ಅದರಂತೆ ಕರ್ನಾಟಕಿಯ ನೆನರುಂಚಿ ನಾನು, ಅಲಕಲಲ್ಲ, ಮುಂತಾದ ಕೀರ್ತನೆಗಳನ್ನು ಚೆನ್ನಾಗಿ ಹಾಡುತ್ತಿದ್ದೆ" ಎನ್ನುತ್ತಾರೆ ಗಂಗೂಬಾಯಿ.

ಕ್ರಮಬದ್ಧ ಸಂಗೀತ ಶಿಕ್ಷಣ ಪ್ರಾರಂಭವಾದುದು ಗಂಗೂಬಾಯಿಯವರ 8ನೆಯ ವಯಸ್ಸಿನಲ್ಲಿ, ಪ್ರಸಿದ್ಧ ಲಕ್ಷಣಜ್ಞ ಹುಲಗೂರು ಕೃಷ್ಣಾಚಾರ್ಯರ ಸಂಗೀತ ಶಾಲೆಯಲ್ಲಿ.

ಅವರದು ಬಹು ಶಾಸ್ತ್ರಬದ್ಧ ಕ್ರಮ. "ಅಲ್ಲಿಗೆ ಆಗಾಗ್ಗೆ ದತ್ತೋಪಂತ ದೇಸಾಯರು ಬರುತ್ತಿದ್ದರು. ಅವರು ಬಂದರೆ ಮಾಸ್ತರಿಗೂ ದೇಸಾಯರಿಗೂ ಶ್ರುತಿ, ಸ್ವರ ಇವುಗಳ ಮೇಲೆ ಚರ್ಚೆ ಬೀಳುತ್ತಿತ್ತು. ಎಷ್ಟು ಹೊತ್ತಾದರೂ ನಿಲ್ಲುವಂತಿಲ್ಲ. ನಮಗೆ ಪಾಠಕ್ಕೆ ಸೊನ್ನೆ" ಎಂದು ಆ ದಿನಗಳನ್ನು ಕುರಿತು ನೆನೆಸಿಕೊಳ್ಳುತ್ತಾರೆ ಗಂಗೂಬಾಯಿ.

ಗುರುವರ್ಯರು

ಹುಲಗೂರರ ನಂತರ ಸ್ವಲ್ಪ ಕಾಲ ದತ್ತೋಪಂತ ದೇಸಾಯರೇ ಪಾಠ ಹೇಳುತ್ತಿದ್ದರು. ಅನಂತರ ಸವಾಯಿ ಗಂಧರ್ವರ ಬಳಿ ಶಿಷ್ಯತ್ವ. ಈ ಮಧ್ಯೆ ಅಂಬಾಬಾಯಿಯವರು ನಿಧನರಾದಾಗ, ಬಹು ದುಃಖದಿಂದ ವ್ಯಾಸಂಗವನ್ನೇ ನಿಲ್ಲಿಸಿಬಿಟ್ಟರು ಗಂಗೂಬಾಯಿ. ಅನಂತರ ಸೋದರಮಾವ ರಾಮಣ್ಣ ಮತ್ತು ದತ್ತೋಪಂತರ ಪ್ರಚೋದನೆಯಿಂದ ಪುನಃ ಸಂಗೀತಾಭ್ಯಾಸ ಪ್ರಾರಂಭಿಸಿದರು. ಐದಾರು ವರ್ಷಗಳ ನಂತರ ಸವಾಯ್ ಗಂಧರ್ವ ಅವರು ಕುಂದಗೋಳದಲ್ಲಿ ನೆಲೆಸಿದ ಮೇಲೆ ನಿತ್ಯವೂ ರಾಮಣ್ಣನವರೊಂದಿಗೆ ಕುಂದಗೋಳಕ್ಕೆ ಹೋಗಿ ಗುರುಗಳ ಬಳಿ ಪಾಠ ಹೇಳಿಸಿಕೊಂಡು ಬರುತ್ತಿದ್ದರು. ಐದು ವರುಷಗಳ ನಂತರ ಅವರಿಗೆ ಪಾರ್ಶ್ವವಾಯು ಹೊಡೆದ ಮೇಲೆ ರಾಮಭಾವು (ಸವಾಯಿ ಗಂಧರ್ವ) ಅವರು ಒಂದೆರಡು ವರುಷಕಾಲ ಹುಬ್ಬಳ್ಳಿಯಲ್ಲಿ ಗಂಗೂಬಾಯಿಯವರ ಮನೆಯಲ್ಲಿಯೇ ಚಿಕಿತ್ಸೆಗಾಗಿ ಬಂದಿದ್ದರು. ಆಗಲೂ ಗಂಗೂಬಾಯಿಯವರ ಗಾಯನವನ್ನು ಪರಿಷ್ಕರಿಸುತ್ತಿದ್ದರು. ಗಂಗೂಬಾಯಿಯವರಿಗೆ ಅಪಾರವಾದ ಗುರುಭಕ್ತಿ. ರಾಮಭಾವು ಅವರ ಅಪೂರ್ವ ಕಲ್ಪನಾ ಪ್ರತಿಭೆ, ಶಿಕ್ಷಣದಲ್ಲಿ ಅವರ ಶಿಸ್ತು ಮತ್ತು ವಾತ್ಸಲ್ಯ ಇವುಗಳ ಬಗೆಗೆ ಒಂದು ವಿಶೇಷ ಲೇಖನವನ್ನೇ ಬರೆದಿದ್ದಾರೆ.

ಸವಾಯಿ ಗಂಧರ್ವರ ಶಿಷ್ಯೆಯಾಗಿ ಸ್ವತಂತ್ರವಾಗಿ ಸಂಗೀತ ಕಚೇರಿ ಮಾಡುವಾಗ್ಗೆ ಗಂಗೂಬಾಯಿಯವರಿಗೆ ಪ್ರಾಯಶಃ 25 ವಯಸ್ಸು. ಆದರೆ ಅದಕ್ಕೂ ಪೂರ್ವ ಸಂಗೀತ ಕಚೇರಿಗಳನ್ನು ಮಾಡಿ ಜನಗಳ ಅಭಿಮಾನವನ್ನು ಗಳಿಸಿದ್ದರು. ಹಾಗೆಯೇ ಗ್ರಾಮೊಫೋನ್ ರಿಕಾರ್ಡುಗಳನ್ನೂ ಕೊಟ್ಟಿದ್ದರು. ಅಂದಿನಿಂದ ಇಂದಿನವರೆಗೂ ಏಕಪ್ರಕಾರವಾಗಿ ಯಶಸ್ಸಿನ ಹಂತಗಳನ್ನು ಏರುತ್ತಲೇ ಬಂದಿದ್ದಾರೆ. ಭಾರತದ ನಾನಾ ಸಂಸ್ಥೆಗಳಿಂದ ನಾನಾ ರೀತಿಯಲ್ಲಿ ಸನ್ಮಾನಿತರಾಗಿದ್ದಾರೆ. 1963ರಲ್ಲಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಇತ್ತು ಸನ್ಮಾನಿಸಲಾಯಿತು. 1972ರಲ್ಲಿ ಭಾರತ ಸರಕಾರದ 'ಪದ್ಮಭೂಷಣ' ಪ್ರಶಸ್ತಿ ಕೊಡಲಾಯಿತು. ನೇಪಾಳ, ಪಾಕಿಸ್ತಾನಗಳಲ್ಲೂ ಸಂಚರಿಸಿ ಹಾಡಿ ಬಂದಿದ್ದಾರೆ.

ಸಾಧಾರಣವಾಗಿ ಹೆಂಗಸರ ಗಾಯನದಲ್ಲಿ ನಾವು ನಿರೀಕ್ಷಿಸುವ ಸಂಚು ಲಾಲಿತ್ಯ ಮತ್ತು ಧ್ವನಿಯ ಕೋಮಲತೆ ಇಲ್ಲಿಲ್ಲ ನಿಜ. ಆದರೆ ಅದೆಂತಹ ಚೈತನ್ಯ ಮತ್ತು ಸತ್ವಪೂರ್ಣ ಗಾಯನ? ಅದೆಂತಹ ವೀರ್ಯವತ್ತಾದ ಶೈಲಿ? ರಾಗಗಳು ತುಂಬಿಕೊಂಡು ಪುಷ್ಟವಾಗಿ ಭೋರ್ಗರೆಯುತ್ತಾ ಸಾವಕಾಶವಾಗಿ ಹರಿದುಬರುವಂತೆ ಅನುಭವವಾಗುತ್ತದೆ. ಗಂಗೂಬಾಯಿಯವರ ಅನೇಕ

ಕಚೇರಿಗಳನ್ನು ಕೇಳಿದ್ದೇನೆ. ಅನೇಕ ರಾಗಗಳ ನಿರೂಪಣೆಯನ್ನು ಕೇಳಿದ್ದೇನೆ. ಕೆಲವಂತೂ ಅವರ ಶೈಲಿಗೇ ಮಾಡಿಸಿಟ್ಟಂತೆ ಅನುಭವವಾಗುತ್ತದೆ. ಮಾರವಾ, ಮಿಯಾಮಲ್ಲಾರ್ ಮುಂತಾದ ರಾಗಗಳ ಗಾಂಭೀರ್ಯ ಗಂಗೂಬಾಯಿಯವರ ನಿರೂಪಣೆಯಲ್ಲಿ ಇಮ್ಮಡಿಸುವಂತೆ ಅನುಭವವಾಗುತ್ತದೆ.

ಪುತ್ರಿ ಕಷ್ಣಾ ಜೋಡಿ

ಗಂಗೂಬಾಯಿಯವರ ಗಾಯನದಲ್ಲಿ ಕಾಣಬರದ ಲಾಲಿತ್ಯ ಮತ್ತು ಕೋಮಲತೆ ಮಗಳು ಕೃಷ್ಣ ಹಾನಗಲ್ ಅವರ ಗಾಯನದಲ್ಲಿ ಕಂಡುಬರುತ್ತಿದೆ. ತಾಯಿಯವರ ಜೊತೆಯಲ್ಲಿ ಹಾಡುತ್ತಾ ಕೃಷ್ಣಾ ತಾರ ಷಡ್ಜವನ್ನು ಹಿಡಿದು ನಿಂತರೆ ಸಾಕು. ಅದೊಂದು ಸುಖಾನುಭವ. ವೇದಿಕೆಯ ಮೇಲೆ ತಾಯಿ ಮಗಳಿಬ್ಬರು ಒಂದು ಆಪ್ಯಾಯಮಾನವಾಗುವಂತಹ ಸಮ್ಮಿಳನ.

ಮಿಕ್ಕ ವಿಷಯಗಳಲ್ಲಿ ಎಷ್ಟೇ ಸರಳವಾಗಿದ್ದರೂ ಮತ್ತು ಅಭಿಪ್ರಾಯಗಳಲ್ಲಿಯೂ ಮನೋವೈಶಾಲ್ಯವು ಕಂಡುಬಂದರೂ ಸಂಗೀತದ ವಿಷಯದಲ್ಲಿ ಗಂಗೂಬಾಯಿಯವರದು ಸ್ವಲ್ಪ ಮಡಿವಂತಿಕೆಯೇ ಎನ್ನಬಹುದು. ಸಂಗೀತ ಶಾಸ್ತ್ರದ ಬಗೆಗೆ ಭಾಷಣಗಳ ಪ್ರಸ್ತಾಪ ಬಂದಾಗ ''ಸಂಗೀತ ಹಾಡಬೇಕು, ಕೇಳಬೇಕು. ಅದರಲ್ಲಿ ಮಾತಾಡಲಿಕ್ಕೆ ಏನದೆ'' ಎನ್ನುತ್ತಾರೆ. ಸಂಪ್ರದಾಯಶೀಲತೆ ಅವರ ಸಂಗೀತದಲ್ಲಿ ಸ್ಪಷ್ಟವಾಗಿ ಅನುಭವವಾಗುತ್ತದೆ.

ಸಂಗೀತದಲ್ಲಿ ತೀವ್ರ ಸಂಪ್ರದಾಯನಿಷ್ಠರಾದ ಗಂಗೂಬಾಯಿಯವರನ್ನು ಇಂದಿನ ಸ್ಥಿತಿಯ ಬಗೆಗೆ ಕೇಳಿದಲ್ಲಿ ಏನು ಉತ್ತರ ಬರಬಹುದೆಂಬುದನ್ನು ನಾವು ನಿರೀಕ್ಷಿಸಬಹುದು. ''ಸಂಗೀತವು ಕಷ್ಟಸಾಧನೆಯಿಂದ ಸ್ವಾಧೀನಪಡಿಸಿಕೊಳ್ಳಬೇಕಾದ ವಿದ್ಯೆ. ಆದರೆ ಈಗ ಕಷ್ಟ ಪಡದೆ ಫಲಬೇಕೆಂದು ಎಲ್ಲರೂ ಅಪೇಕ್ಷೆ ಪಡುತ್ತಿದ್ದಾರೆ. ಆದುದರಿಂದ ಇಂದಿನ ಸಂಗೀತದಲ್ಲಿ ಸ್ವಲ್ಪ ಸತ್ವ ಕಡಿಮೆಯಾದ ಹಾಗೆ ಕಾಣಬರುತ್ತದೆ'' ಎನ್ನುತ್ತಾರೆ.

ಮಾರ್ಗದರ್ಶನ, ಸಾಧನೆ

ಈ ವಿಷಯವನ್ನೇ ಪ್ರಸ್ತಾಪಿಸುತ್ತಾ ''ಇಂದು ಸಂಗೀತದ ಬಗೆಗೆ ಪ್ರಚಾರವು ಹೆಚ್ಚಾಗಿದೆ. ಸಭೆ ಸರ್ಕಲ್‌ಗಳ ಮೂಲಕ ಎಲ್ಲರಿಗೂ ದೊರಕುವಂತೆ ಆಗಿದೆ. ನಮ್ಮ ಬಾಲ್ಯದಲ್ಲಿ ನಮಗೆ ಗೊತ್ತಿಲ್ಲದಿದ್ದ ಅನೇಕ ಅಂಶಗಳು ಇಂದಿನವರಿಗೆ ಲಭ್ಯವಾಗುತ್ತಿವೆ. ಆದರೆ ಈ ಪ್ರಚಾರಕ್ಕೆ ಅನುಗುಣವಾಗಿ ಸಂಗೀತದಲ್ಲಿ ತಿಳಿವಳಿಕೆಯೂ ಹೆಚ್ಚಾಗಿದೆಯೇ ಎಂಬುದನ್ನು ಹೇಳಲಾರೆ. ಗಾಯನವು ಹಾಡುತಾ ಹಾಡುತಾ ಏರುತ್ತಾ ಹೋಗಬೇಕು, ಇಳಿಮುಖವಾಗಬಾರದು. ಅದಕ್ಕೆ ರಾಗಗಳ ಜೀವಸ್ವರಗಳೇ ಮುಂತಾದುವುಗಳ ಅರಿವು. ಅವುಗಳನ್ನು ಗ್ರಹಿಸಿ ಉತ್ತಮವಾಗಿ ಪೋಷಿಸಿ ರಾಗವನ್ನು ಭಾವಪೂರಿತವಾಗಿ ಹಾಡಲು ಅವಶ್ಯಕವಾದ ಮಾರ್ಗದರ್ಶನ ಮತ್ತು ಸಾಧನಾ ಬಲ ಇವುಗಳು ಬಹುಮುಖ್ಯ'' ಎಂದರು ಗಂಗೂ ಬಾಯಿ.

ಹಾಗೆಯೇ ಮಾತನಾಡುತ್ತಾ ಕನ್ನಡದ ಭಾಷೆಯ ಹರಿದಾಸರೇ ಮುಂತಾದವರ ಕೃತಿಗಳ ಪ್ರಸ್ತಾಪ ಬಂತು. ''ನೀವು ಏಕೆ ಕನ್ನಡ ಭಾಷೆಯ ಕೃತಿಗಳನ್ನು ಹಾಡುವುದಿಲ್ಲ?'' ಎಂದುದಕ್ಕೆ

"ಕನ್ನಡದ ಕೃತಿಗಳಲ್ಲಿ ಸಾಹಿತ್ಯ ಶುದ್ಧತೆ ಮತ್ತು ಅರ್ಥ ಭಾವ ಎರಡೂ ಮುಖ್ಯ. ನನ್ನ ಗಾಯನ ಶೈಲಿಯಲ್ಲಿ ಅವುಗಳನ್ನು ಕಾಪಾಡಿಕೊಂಡು ಹಾಡುವುದು ಕಷ್ಟವಾದುದರಿಂದ ಬಿಟ್ಟಿದ್ದೇನೆ. ಹಾಗೂ ಅವುಗಳನ್ನು ಕೆಡಿಸಿ ಹಾಡಿದರೆ ಕೃತಿಗಳಿಗೆ ಅಪಚಾರ ಮಾಡಿದಂತೆ ಎಂದು ನನ್ನ ನಂಬಿಕೆ" ಎಂದು ಹೇಳಿದರು ಗಂಗೂಬಾಯಿ.

ಕನ್ನಡ ಕೃತಿಗಳಿಂದ ಮಾತು ಕರ್ನಾಟಕ ಸಂಗೀತಕ್ಕೆ ತಿರುಗಿತು. "ಸ್ವರ, ಶಬ್ದ ಮತ್ತು ಸಾಹಿತ್ಯ ಇವು ಮೂರೂ ಮುಖ್ಯ" ಎಂದು ಹೇಳಿದರು, ಹಾನಗಲ್, "ಕರ್ನಾಟಕ ಸಂಗೀತದ ಯಾವ ಅಂಶಗಳು ನಿಮಗೆ ಮುಖ್ಯ ಎನಿಸುತ್ತವೆ?" ಎಂಬ ನನ್ನ ಪ್ರಶ್ನೆಗೆ ಉತ್ತರವಾಗಿ.

"ಹಾಗಾದರೆ ಇಂದಿನ ಕರ್ನಾಟಕ ಸಂಗೀತದಲ್ಲಿ ಈ ಅಂಶಗಳು ನಿಮಗೆ ಪ್ರಧಾನವಾಗಿ ಕಾಣಬರುತ್ತಿವೆಯೇ?"

ಈ ಪ್ರಶ್ನೆಗೆ ಉತ್ತರ ಕೊಡಲು ಗಂಗೂ ಬಾಯಿಯವರು ಇಷ್ಟಪಡಲಿಲ್ಲ. ಸ್ವಲ್ಪ ಒತ್ತಾಯದಿಂದ "ಹ್ಯಾಂಗೆ ಹಾಡಬೇಕೋ ಹಾಂಗೆ ಇಂದು ಹಾಡ್ತಿಲ್ಲ ಅಂತ ಹೇಳಬಹುದು. ಸಾಹಿತ್ಯ ಮತ್ತು ಅರ್ಥಭಾವವನ್ನು ಬಿಟ್ಟು ಹಾಡ್ತಿದಾರೋ ಅನ್ನಿಸ್ತದೆ" ಎಂದರು.

ನಾನು ಹ್ಯಾಂಗೆ ಹೇಳಲಿ

"ಈ ಸಂಪ್ರದಾಯ ಸಂಗೀತವು ಇನ್ನು ಮುಂದೆಯೂ ಹೀಗೆಯೇ ಇರುತ್ತದೆಯೇ? ಇಲ್ಲದಿದ್ದರೆ ಅದು ಅಭಿವೃದ್ಧಿಯಾಗಲು ಏನಾದರೂ ಸಲಹೆ ಕೊಡಲು ಸಾಧ್ಯವೆ?" ಎಂದು ಕೇಳಿದುದಕ್ಕೆ.

"ನಾನು ಗುರುಗಳು ಹೇಳಿಕೊಟ್ಟ ಪಾಠವನ್ನು ಶ್ರದ್ಧೆಯಿಂದ ನಿಷ್ಠೆಯಿಂದ, ಅಭ್ಯಾಸ ಮಾಡಿ ನನ್ನ ಕೈಲಾದಷ್ಟು ಹಾಡುತ್ತಿದ್ದೀನಿ. ಅವರು ಹೇಳಿದ ಉಪದೇಶವನ್ನು ಮರಿಯದೆ ಅವರು ಹಾಕಿಕೊಟ್ಟ ದಾರಿಯನ್ನೇ ಅನುಸರಿಸಿಕೊಂಡು ಹೋಗುತ್ತಿದ್ದೇನೆ. ಇದಕ್ಕಿಂತ ಹೆಚ್ಚಾಗಿ ನಾನು ಏನು ಮಾಡಲು ಸಾಧ್ಯ? ಮುಂದೆ ಏನಾಗುತ್ತದೆಯೋ ನಾನು ಹ್ಯಾಂಗೆ ಹೇಳಲಿ" ಎಂದರು ಗಂಗೂಬಾಯಿ ಹಾನಗಲ್. ★ ★ ★ ★ ★ ★ ★ ★ ★ ★ ★ ★ ★ ★ ★ ★ ★

ಸುಧಾ, 1973

26. ರಾಷ್ಟ್ರಪುರಸ್ಕೃತ ಕನ್ನಡ ಪುತ್ರ ಭೀಮಸೇನ ಜೋಶಿ

"ಇಂದು ಸಂಗೀತ ಕಲೆಗೆ ನಾನಾ ರೀತಿಯ ವಿಪತ್ತುಗಳು ಒದಗಿಬರುತ್ತಿವೆ ಎಂದು ಅನೇಕರು ಆತಂಕ ಪಡುತ್ತಿದ್ದಾರೆ. ಅವರು ಹೇಳುವ ಕಾರಣಗಳಲ್ಲಿ ಸ್ವಲ್ಪ ಭ್ರಮೆಯೆನಿಸಬಹುದು. ಸ್ವಲ್ಪ ನಿಜವೂ ಇರಬಹುದು. ಆದರೆ ಒಂದು ವಿಪತ್ತು ಮಾತ್ರ

ಸತ್ಯವೆನಿಸುತ್ತದೆ. ಅದು ಭಾಷೆಗೂ ಕಲೆಗೂ ಗಂಟು ಹಾಕುವುದು. ಕಲೆ, ಭಾಷೆಗಳಿಗೆ ಅತೀತ. ನಾಲ್ಕಾರು ಭಾಷಾ ಪ್ರದೇಶಗಳಲ್ಲಿ ಒಂದೇ ಕಲಾ ಸಂಪ್ರದಾಯವು ಬೆಳೆದುಕೊಂಡು ಬರುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಕಲೆಯಲ್ಲಿರುವ ಸೌಂದರ್ಯ ಮತ್ತು ಆನಂದಗಳು ಭಾಷೆಯ ಎಲ್ಲೆಕಟ್ಟುಗಳನ್ನು ಮೀರಿನಿಂತವು. ಆದುದರಿಂದ ಕಲಾವಿದನ ನಿಷ್ಠೆ ಮೊದಲು ಕಲೆಗೆ; ಅನಂತರ ಭಾಷೆಗೆ. ನಮ್ಮ ಸಾಮಾಜಿಕ ಜೀವನದಲ್ಲಿ ನಾವು ಹೇಗೆ ಮೊದಲು ಭಾರತೀಯ, ಅನಂತರ ಆಯಾ ರಾಜ್ಯದವ ಎಂದುಕೊಳ್ಳುತ್ತೇವೆಯೋ - ಹಾಗೆ.'' – ಇದು ಭೀಮಸೇನ ಜೋಶಿ ಅವರ ವಿಶಾಲ ದೃಷ್ಟಿ; ಕಲಾ ದೃಷ್ಟಿ.

ಕನ್ನಡ ಪುತ್ರ ಮಹಾರಾಷ್ಟ್ರದಲ್ಲಿ

ಡಿಸೆಂಬರ್ ತಿಂಗಳಲ್ಲಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನು ತೆಗೆದುಕೊಳ್ಳಲು ಜೋಶಿಯವರು ಬಂದಿದ್ದರು. ಆಗ ಇಂದಿನ ಸಂಗೀತ ಪ್ರಪಂಚದ ಸ್ಥಿತಿಗತಿಗಳನ್ನು ಕುರಿತು ವಿಚಾರ ವಿನಿಮಯ ನಡೆಯಿತು.

ಮನುಷ್ಯನು ಯಾವುದೇ ಕ್ಷೇತ್ರದಲ್ಲಿ ಆಗಲಿ ಪ್ರಾರಂಭದ ದೆಸೆಯಲ್ಲಿ, ತನ್ನದೊಂದು ಸ್ಥಾನವನ್ನು ಸ್ಥಾಪಿಸಿಕೊಳ್ಳಲು ಕಷ್ಟಪಡುತ್ತಿರುವಾಗ, ಯಾರೂ ಗಮನವೀಯರು. ಅದೇ ಅವನು ಪ್ರಸಿದ್ಧನಾದನೆಂದರೆ ಎಲ್ಲಿಯದೋ ಬಾದರಾಯಣ ಸಂಬಂಧವನ್ನು ಹುಡುಕಲಾರಂಭ. ಇದು ಪ್ರಪಂಚ ನಿಯಮ. ಜೋಶಿಯವರ ಬಗೆಗೂ ಹಾಗೆಯೇ ಆಗಿದೆ. ಅವರು ಈಗ ಪುಣೆಯಲ್ಲಿ ನೆಲೆಸಿದ್ದಾರೆ. ಮಹಾರಾಷ್ಟ್ರದವರು ಜೋಶಿಯವರು ನಮ್ಮವರೆನ್ನುತ್ತಾರೆ. ನಿಜವಾಗಿ ನೋಡಿದರೆ ಭೀಮಸೇನ ಜೋಶಿಯವರು ಕನ್ನಡಿಗರೂ ಹೌದು, ಮಹಾರಾಷ್ಟ್ರೀಯರೂ ಹೌದು. ಮಿಗಿಲಾಗಿ ಭಾರತದ ಒಬ್ಬ ಶ್ರೇಷ್ಠ ಕಲಾವಿದರೂ ಹೌದು.

''ನಮ್ಮ ಭಾಷೆ ಮತ್ತು ನಮ್ಮ ಸಂಸ್ಕೃತಿಯ ಬಗೆಗೆ ನಮಗೆ ಅಭಿಮಾನ ಇರಬೇಕು, ನಿಜ. ಆದರೆ ಅದು ನಮ್ಮ ವಿವೇಚನೆಯನ್ನು ಮೀರುವಷ್ಟು ದೂರ ಹೋಗಬಾರದು. ಈ ಅಂಥ ಅಭಿಮಾನವು ಕೇವಲ ಕೆಲವರಿಗೆ ಅಂದರೆ ರಾಜಕೀಯದ ಸೋಂಕು ತಗುಲಿದವರಿಗೆ ಮಾತ್ರ ಇರುವ ಹಾಗೆ ಕಾಣಬರುತ್ತದೆ. ಜನತೆಗೆ ಅಷ್ಟಿಲ್ಲ'' ಎನ್ನುತ್ತಾರೆ ಜೋಶಿ. ಇದಕ್ಕೆ ಅವರು ಒಂದು ನಿದರ್ಶನ ಕೊಡುತ್ತಾರೆ. ''ಆಷಾಢಮಾಸದಲ್ಲಿ ಏಕಾದಶಿಯಂದು ನಾನು ಪುಣೆಯಲ್ಲಿ 'ಸಂತವಾಣಿ' ಎಂಬ ಕಾರ್ಯಕ್ರಮವನ್ನು ಮಾಡುತ್ತೇನೆ. ಅದರಲ್ಲಿ ಭಾರತದ ವಿವಿಧ ಭಾಷೆಗಳಲ್ಲಿ ಸಂತ ಶಿರೋಮಣಿಗಳು ರಚಿಸಿರುವ ಭಕ್ತಿಗೀತೆಗಳನ್ನು ಹಾಡಲಾಗುವುದು. ಆ ಕಾರ್ಯಕ್ರಮ ನೋಡಬೇಕು. ಅಲ್ಲಿ ಸೇರುವ ಜನಗಳ ಸಂಖ್ಯೆ ಶಾಸ್ತ್ರೀಯ ಸಂಗೀತ ಕಚೇರಿಗಿಂತ ಹೆಚ್ಚು. ಎಲ್ಲಾ ಭಾಷೆಗಳ ಕೃತಿಗಳನ್ನು ಒಂದೇ ರೀತಿಯ ಉತ್ಸಾಹದಿಂದ, ಶ್ರದ್ಧೆಯಿಂದ ಕೇಳುವುದನ್ನು ನೋಡಬೇಕು. ತಮಗೆ ಅರ್ಥವಾಗುವ ಗೀತೆಗಳು ಬಂದಾಗ ಹೆಚ್ಚು ಹುರುಪಿನಿಂದ ಚಪ್ಪಾಳೆ ಹೊಡೆಯುತ್ತಾರೆ, ಅಷ್ಟೆ. ಅವರಿಗೆ ಈ ಭಾಷೆ ಹೆಚ್ಚು. ಅದು ನಮ್ಮದಲ್ಲ ಎಂಬ ಭಾವನೆಯಿಲ್ಲ. ಅವುಗಳನ್ನು ಮೀರಿನಿಂತ ನಾದಸೌಖ್ಯ, ಭಕ್ತಿಭಾವ, ತನ್ಮಯತೆ, ಇವು ಆ

ಜನತೆಗೆ ಸುಖವನ್ನು ಕೊಡುತ್ತವೆ; ಹರ್ಷವನ್ನೂ ನೆಮ್ಮದಿಯನ್ನೂ ಕೊಡುತ್ತವೆ. ಅವರಿಗೆ ಬೇಕಾಗಿರುವುದೂ ಅಷ್ಟೇ.''

ಕಾಳಸಂತೆಯಲ್ಲಿ ಮಾರಾಟ

ಭೀಮಸೇನ ಜೋಶಿಯವರು ಈ ಮಾತುಗಳನ್ನು ಒಬ್ಬ ಕಲಾವಿದನಾಗಿ, ಅನುಭವದಿಂದ, ಅಧಿಕಾರವಾಣಿಯಿಂದ ಹೇಳುತ್ತಾರೆನ್ನಬಹುದು. ಅವರು ಎಲ್ಲಿಯೋ ಹುಟ್ಟಿರಬಹುದು. ಎಲ್ಲೋ ನೆಲೆಸಿರಬಹುದು. ಇಂದು ಆ ಪ್ರಾಕಾರಗಳನ್ನು ಮೀರಿ ಎಷ್ಟೋ ಮುಂದೆ ಹೋಗಿದ್ದಾರೆ. ಅವರ ಕಾರ್ಯಕ್ಷೇತ್ರದ ವ್ಯಾಪ್ತಿ ಇಡೀ ಭಾರತದ ನಾಲ್ಕು ಮೂಲೆಗಳಿಗೂ ಹರಡಿದೆ. ನಿದರ್ಶನವಾಗಿ ಅಕಾಡೆಮಿಯ ಪ್ರಶಸ್ತಿ ತೆಗೆದುಕೊಂಡೊಡನೆಯೇ ಮಾರನೆಯ ದಿನವೇ ಆತುರಾತುರವಾಗಿ ಹೊರಟರು. ಕಾರಣ ದೆಹಲಿಯಲ್ಲಿ ಕಚೇರಿ. ಅದಾದ ನಾಲ್ಕಾರು ದಿನಗಳ ನಂತರ ಮದರಾಸಿನಲ್ಲಿ ಕಚೇರಿ. ಹೀಗೆ ಅವರ ಸಂಗೀತ ಜೀವನ. ದೆಹಲಿ, ಕಲ್ಕತ್ತ ಮುಂತಾದ ನಗರಗಳಲ್ಲಿ ಅವರ ಸಂಗೀತ ಕಚೇರಿಗಳಿಗೆ ಟಿಕೀಟು ದೊರೆಯುವುದೂ ಕಷ್ಟ. ಕೆಲವು ವೇಳೆ ಸಿನಿಮಾದ ''ಬ್ಲಾಕ್'' ಟಿಕೇಟುಗಳಂತೆ ಹೆಚ್ಚಿನ ಹಣ ಕೊಟ್ಟು ಕೊಂಡುಹೋಗುವವರೂ ಇದ್ದಾರೆ.

ಸಂಗೀತದ ಹುಚ್ಚು

ಸುಮಾರು 40 ವರುಷಗಳ ಕೆಳಗೆ ಸಂಗೀತದ ಹುಚ್ಚು ಹತ್ತಿ ಉತ್ತರ ಭಾರತದಲ್ಲಿ – ಊರೂರು ಅಲೆಯುತ್ತಿದ್ದ ಭೀಮಸೇನನಿಗೆ ಈ ಜನಪ್ರಿಯತೆ, ಈ ಮೌಲ್ಯ, ಈ ಸ್ಥಾನ– ಒಂದು ದಿನ ದೊರಕಬಹುದೆಂಬ ಕಲ್ಪನೆಯೂ ಇತ್ತೋ ಇಲ್ಲವೋ ಹೇಳುವುದು ಕಷ್ಟ. ಮಗನ ಈ ಸಂಗೀತದ ಹುಚ್ಚಿನ ವೈಖರಿಯನ್ನು ಗುರುರಾಜ ಜೋಶಿಯವರು ಮನಮುಟ್ಟುವಂತೆ ವರ್ಣಿಸಿದ್ದಾರೆ ನಡೆದುಬಂದ ದಾರಿಯಲ್ಲಿ. ಎಂತಹ ಕಷ್ಟಗಳನ್ನೂ ಕಡೆಗಾಣಿಸುವಂತಹ ಸಂಗೀತ ಮೋಹ, ಅದನ್ನು ಸಾಧಿಸಲು ಅವಶ್ಯಕವಾದ ಎದೆಗಾರಿಕೆ ಇವೆರಡೂ ಭೀಮಸೇನ ಜೋಶಿಯವರಿಗೆ ಬಾಲ್ಯದಿಂದಲೇ ಬೆಳೆದುಬಂದ ಗುಣಗಳು ಎನ್ನಬಹುದು.

ನಿದರ್ಶನವಾಗಿ ಅವರು ಎರಡನೆಯ ಬಾರಿ ಮನೆಬಿಟ್ಟು ಓಡಿದಾಗ ಭೀಮಸೇನ ಜೋಶಿಯವರಿಗೆ ಸುಮಾರು 13-14 ವರುಷ. ಈ ಸಂದರ್ಭವನ್ನು ಅವರ ಮಾತಿನಲ್ಲೇ ಕೇಳಬೇಕು. ''ನನಗೆ ಯಾವ ರೈಲು ಯಾವೂರಿಗೆ ಹೋಗುವುದೋ ಗೊತ್ತಿಲ್ಲ. ಸುಮ್ಮನೆ ಹತ್ತುವುದು. ಕನ್ನಡದ ಜೊತೆಗೆ ಕೆಲವು ಮರಾಠಿ ವಾಕ್ಯಗಳು ಬರುತ್ತಿದ್ದವು ಅಷ್ಟೆ. ಹಾಗೆಯೇ ಬಂಗಾಳ ಉತ್ತರ ಭಾರತ ಎಲ್ಲಾ ತಿರುಗಿದೆ. ಹೇಗೋ ಕೈ ಸನ್ನೆಯೋ ಚೌ ಚೌ ಭಾಷೆಯೋ ಮಾತನಾಡುತ್ತಾ.''

ಈ ಎದೆಗಾರಿಕೆಗೆ ಅನುಗುಣವಾದ ದೇಹದಾರ್ಢ್ಯ. ಇದು ಪ್ರಕೃತಿದತ್ತವಾದುದು ಮತ್ತು ಅವರ ಹೆಸರಿಗೆ ಸಮಂಜಸವಾದುದೂ ಹೌದು.

ದೇಹದಾರ್ಢ್ಯದ ಪ್ರಸ್ತಾಪ ಬಂದಾಗ ಭೀಮಸೇನ ಜೋಶಿಯವರು ಹೇಳಿದ ಒಂದು ಸಂದರ್ಭ ನೆನಪಿಗೆ ಬರುತ್ತದೆ. ಆಗ ಅವರಿಗೆ ಸುಮಾರು 20-21 ವರುಷ. ಸ್ವಲ್ಪಕಾಲ ಬೆಂಗಳೂರಿನಲ್ಲಿದ್ದರು. ಆ ದಿನಗಳನ್ನು ಸ್ಮರಿಸಿಕೊಂಡು ಅವರೆನ್ನುತ್ತಾರೆ : "ಆಗ ನನಗೆ ಸಾಕಷ್ಟು ಕಚೇರಿಗಳು ಬರುತ್ತಿದ್ದುವು. ಅದರಲ್ಲಿಯೂ ಗಣಪತಿ ಉತ್ಸವದಲ್ಲಿ ಇದು ಹೆಚ್ಚು. ಆಗ ಕೆಲವು ವೇಳೆ ದಿನಕ್ಕೆ ನಾಲ್ಕು ನಾಲ್ಕು ಕಚೇರಿಗಳನ್ನು ಮಾಡಿದ್ದೂ ಉಂಟು. ಬೆಳಿಗ್ಗೆ 8 ಗಂಟೆಯಿಂದ ಮಾರನೆಯ ಮುಂಜಾನೆ 4 ಗಂಟೆಯವರೆಗೆ ಸಾಲಾಗಿ ಮೂರು ನಾಲ್ಕು ತಾಸಿನ ಪ್ರಮಾಣದ ಕಚೇರಿಗಳನ್ನು ನಾಲ್ಕಾರು ಸ್ಥಳಗಳಲ್ಲಿ ನಿರಾಯಾಸವಾಗಿ ಮಾಡಿದ್ದೇನೆ. ಅಂದು ನನ್ನೊಂದಿಗೆ ಇರುತ್ತಿದ್ದ ಸಂಗೀತಾಭಿಮಾನಿಗಳು ನಗರದಲ್ಲಿ ಇನ್ನೂ ಇರಬಹುದು, ಕೇಳಿನೋಡಿರಿ."

ಸಂಗೀತವು ಭೀಮಸೇನ ಜೋಶಿಯವರಿಗೆ ರಕ್ತಗತವಾದುದು. ಸಂಗೀತ ಹಾಗೂ ಹೆಸರು (ಬಹುಶಃ ದೇಹದಾರ್ಢ್ಯವೂ ಇರಬಹುದೇನೋ) ಅವರಿಗೆ ಅಜ್ಜ ಭೀಮಾಚಾರ್ಯರಿಂದ ಬಂದುದು. ಆಚಾರ್ಯರು ಉತ್ತಮ ಪುರಾಣಿಕರು, ಕಾವ್ಯ ಪುರಾಣಗಳನ್ನು ರಾಗಭರಿತವಾಗಿಯೂ, ಭಾವಪೂರಿತವಾಗಿಯೂ ನಿರೂಪಿಸುವುದರಲ್ಲಿ ಹೆಸರಾಗಿದ್ದವರು. ಸಂಗೀತದಲ್ಲಿ ಗವಾಯಿ ಆಗಿದ್ದರೂ ಜ್ಞಾನಸ್ಥರಾಗಿದ್ದವರು. ಅವರ ನಂತರ ಗೌನುಹಾಕಿ ನಿಶ್ಶಬ್ದವಾಗಿ ಧೂಳು ಕವಿಸಿಕೊಂಡು ಮೂಲೆಯಲ್ಲಿ ನಿದ್ದೆ ಮಾಡುತ್ತಿದ್ದ ಭೀಮಾಚಾರ್ಯರ ತಂಬೂರಿ ಪುನಃ ಝೇಂಕರಿಸಿದುದು ಅವರ ಮೊಮ್ಮಗ ಭೀಮಸೇನ ತನ್ನ ಏಳನೆಯ ವರುಷದಲ್ಲಿ ಅದನ್ನು ಈಚೆಗೆ ತಂದು ಕೊಡವಿ ಮೀಟಿ ಇಪ್ಪತ್ತು ವರುಷಗಳ ನಿದ್ದೆಯಿಂದ ಎಚ್ಚರಿಸಿದಾಗಲೇ.

ಭೀಮಸೇನ ಜೋಶಿ ಹುಟ್ಟಿದುದು ಧಾರವಾಡ ಜಿಲ್ಲೆಯ ರೋಣದಲ್ಲಿ, 1922ನೆಯ ಇಸವಿಯಲ್ಲಿ, ಫೆಬ್ರುವರಿ 14ನೆಯ ತಾರೀಖು ರಥಸಪ್ತಮಿಯಂದು, ಆಚಾರಶೀಲರೂ ಸುಸಂಸ್ಕೃತರೂ ಆದವರ ಮನೆತನದಲ್ಲಿ. ತಂದೆ ಗುರುರಾಜ ಜೋಶಿಯವರು – ಉಪಾಧ್ಯಾಯರು. ಚಿಕ್ಕಪ್ಪ ಜಿ. ಬಿ. ಜೋಶಿಯವರು ಉತ್ತರ ಕರ್ನಾಟಕದ ಸಾರಸ್ವತ ಕ್ಷೇತ್ರದಲ್ಲಿ ಪ್ರಸಿದ್ಧರಾದವರು. ಮನೋಹರ ಗ್ರಂಥಮಾಲೆಯ ಪ್ರಕಾಶಕರು. ತಾಯಿ ಆಚಾರಶೀಲ ಮಾಧ್ವ ಸಂಪ್ರದಾಯದವರಾದುದರಿಂದ ಮನೆಯಲ್ಲಿ ಹರಿದಾಸ ಕೀರ್ತನೆಗಳ ಇಂಚರದ ವಾತಾವರಣವೆಂದು ಹೇಳಲೇಬೇಕಾಗಿಲ್ಲ.

ಬಾಲ್ಯದಿಂದಲೂ ಸಂಗೀತದ ಗುಂಗು ಹತ್ತಿದವರ ಜೀವನದಲ್ಲಿ ನಡೆವಂತೆಯೇ ಭೀಮಸೇನ ಜೋಶಿಯವರ ಜೀವನದಲ್ಲಿಯೂ ಸಹ. ಶಾಲೆಗೂ ಸಂಗೀತಾಕಾಂಕ್ಷೆಗೂ ಘರ್ಷಣೆ. ಸಂಗೀತವಿದ್ದೆಡೆ ಮನಸ್ಸು, ಅದರ ಹಿಂದೆ ದೇಹ. ಕೇಳಿದಾಕ್ಷಣ ಏಕಸಂಧಿ ಗ್ರಾಹಿಯಂತೆ ಹಿಡಿದು ಮನಸ್ಸಿನಲ್ಲಿಟ್ಟುಕೊಳ್ಳುವುದು, ಇಂಪಾಗಿ ಹಾಡುವುದು. ಸಂಗೀತ ಕೇಳುವಾಗ ಬಾಹ್ಯ ಪ್ರಪಂಚದ ಪರಿವೆಯೇ ಇಲ್ಲದಿರುವುದು ..... ಹೀಗೆ ಈ ಉತ್ಕಟಾಕಾಂಕ್ಷೆಗೆ ಕಟ್ಟೆ ಕಟ್ಟಿ ಸರಿಯಾದ ಮಾರ್ಗಕ್ಕೆ ತಿರುಗಿಸಲು ಸಂಗೀತ ಶಿಕ್ಷಣ. ಪ್ರಾರಂಭ ಗುರುಗಳು – ಕುರ್ತುಕೋಟಿ ಚನ್ನಪ್ಪ. ಭೀಮಸೇನ ಜೋಶಿಯವರ ಸಂಗೀತ ಶಿಕ್ಷಣ ಕ್ರಮಬದ್ಧವಾಗಿ ಭೀಮ್‌ಪಲಾಸ್ ರಾಗದಿಂದ ಪ್ರಾರಂಭವಾಯಿತು.

ಈ ಕ್ರಮಬದ್ಧ ಶಿಕ್ಷಣವು ಅವರ ಉತ್ಕಟ ಆಕಾಂಕ್ಷೆಯನ್ನು ಇನ್ನೂ ಉಲ್ಬಣಗೊಳಿಸಿತೆನ್ನಬಹುದು. ಮೊದಲನೆಯ ಸಲ ಮನೆಬಿಟ್ಟು ಓಡಿದರು – ಸಂಗೀತದ ಬಿಸಿಲುಗುದುರೆ ಹಿಡಿಯಲು. ದಾರಿಯಲ್ಲಿ ಹಾಡಿಕೊಂಡೇ ನಾಲ್ಕಾರು ಕಾಸು ಸಂಪಾದಿಸಿಕೊಂಡು ಬೊಂಬಾಯಿಗೆ ಹೋದರು. ಪುನಃ ಮನೆಗೆ ಹಿಂತಿರುಗಿದರು. "ಆಗ ನನಗೆ ಸಂಗೀತದ ಸಂಪಾದನೆ ಆಗದಿದ್ದರೂ ಧೈರ್ಯದ ಸಂಪಾದನೆಯಂತೂ ಆಯಿತು" ಎನ್ನುತ್ತಾರೆ ಜೋಶಿ.

ಕ್ಷೇತ್ರ ಬದಲಾವಣೆಯಾದರೆ ಈ ಪಿಡುಗು ಹೋಗಬಹುದು. ಮಗನೂ ಹದ್ದುಮೀರದಿರಬಹುದು ಎಂದು ಸ್ವಲ್ಪ ಕಾಲ ಭೀಮಸೇನನನ್ನು ಮೈಸೂರಿನಲ್ಲಿ ತಂದುಬಿಟ್ಟರು – ಗುರುರಾಜ ಜೋಶಿಯವರು. ಪ್ರೊ॥ ಕೆ. ಬಿ. ಮಾಧವ ಅವರ ಮನೆಯಲ್ಲಿದ್ದ ಭೀಮಸೇನನಿಗೆ ಆ ಊರಿನ ಸಂಗೀತ ವಾತಾವರಣ, ಅಲ್ಲಿ ನಡೆಯುತ್ತಿದ್ದ ಗೋಷ್ಠಿಗಳೂ ಹೊಸ ಅನುಭವವೇ. ಕಳೆದ ಅಕ್ಟೋಬರ್ ತಿಂಗಳಲ್ಲಿ ಗಾಯನ ಸಮಾಜಕ್ಕೆ ಬಂದಿದ್ದ ಭೀಮಸೇನ ಜೋಶಿಯವರನ್ನು ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರಿಗೆ ಪರಿಚಯ ಮಾಡಿಸಲು ಯತ್ನಿಸಿದಾಗ, "ಓಹೋ ಅವರು ಗೊತ್ತು. ಅವರು ಹಾಡುವುದನ್ನು ಮೈಸೂರಿನಲ್ಲಿ ಕೇಳಿದ್ದೇನೆ" ಎಂದರು. ಶರ್ಮರಿಗೆ ಜ್ಞಾಪಕವಿಲ್ಲ. 40 ವರುಷಗಳ ಹಿಂದಿನ ಮಾತು. ಅವರ ಮನೆಯ ಸಂಗೀತ ಗೋಷ್ಠಿಗೆ ಬಂದಿದ್ದ ಹನ್ನೊಂದು ವರುಷದ ಬಾಲಕನ ನೆನೆಪಿರಲು ಸಾಧ್ಯವಿಲ್ಲ.

ಮತ್ತೆ ಗೃಹತ್ಯಾಗ

"ಇಂದಿರಾಬಾಯಿಯವರಿಗೆ (ಮಾಧವಾರವರ ಪತ್ನಿ) ಸಂಗೀತ ಬರುತ್ತಿದ್ದಿತು. ನನ್ನನ್ನು ಕೂರಿಸಿಕೊಂಡು ಪಾಠ ಮಾಡಿಸುತ್ತಿದ್ದರು. ಆಡಿಸಿದಳೆಶೋದಾ – ಕೀರ್ತನೆಯನ್ನು ತಿದ್ದಿ ಚೆನ್ನಾಗಿ ಅಭ್ಯಾಸ ಮಾಡಿಸಿದರು" ಎನ್ನುತ್ತಾರೆ ಜೋಶಿ. ಗದಗಿಗೆ ಹಿಂತಿರುಗಿದ ನಂತರ ಒಮ್ಮೆ ಪಂಚಾಕ್ಷರಿ ಗವಾಯಿಯವರೆದುರಿಗೆ ಭೀಮಸೇನನ ಗಾಯನವಾಯಿತು. ಕೇಳಿ ಸಂತೋಷಪಟ್ಟ ಗವಾಯಿಗಳು, ಒಳ್ಳೆಯ ಸಂಗೀತ ಶಿಕ್ಷಣ ಕೊಡಿಸಬೇಕೆಂದು ಸಲಹೆ ಮಾಡಿದರು. ಈ ಮಾತುಗಳು ಬಹುಶಃ ಭೀಮಸೇನನ ಕಾಲಿನ ಚಕ್ರಗಳಿಗೆ ಕೀಲಿಕೊಟ್ಟಂತೆ ಮಾಡಿರಬಹುದು. ದೂರದ ಬಿಸಿಲುಗುದುರೆಯೂ ಒತ್ತಾಯ ಮಾಡುತ್ತಿತ್ತೇನೋ! ಎರಡನೆಯ ಸಲ ಭೀಮಸೇನ ಜೋಶಿ ಮನೆಬಿಟ್ಟು ಓಡಿದರು.

ಈ ಬಾರಿಯ ಸಂಚಾರ ದೀರ್ಘಾವಧಿಯದು. ಬಹುಕಷ್ಟದಿಂದ ಕೂಡಿದ್ದುದು. ಉತ್ತರ ಭಾರತದ ತೀವ್ರವಾದ ಚಳಿ, ನಿಲ್ಲಲು ನೆರಳಿಲ್ಲ, ಮೈಮೇಲೆ ಸರಿಯಾಗಿ ಬಟ್ಟೆಯಿಲ್ಲ. ಇದರ ಮೇಲೆ ಅಲ್ಲಿಯ ಭಾಷೆ ಬರದು. ಉಪವಾಸ ವನವಾಸ. ಕಲ್ಕತ್ತೆಗೆ ಹೋದರು – ಪಹರಿ ಸಾನ್ಯಾಲ್‌ರವರ ಬಳಿ ಸಂಗೀತ ಕಲಿಯುವುದಕ್ಕೆ. ಹಾಡಿಕೊಂಡು ಅಲೆದಾಡುತ್ತಿದ್ದ ಈ ಬಾಲಕನನ್ನು ಜಿತ್ನದೇವ ಮುಖರ್ಜಿಯವರು ಸಾನ್ಯಾಲರ ಬಳಿ ಕರೆದುಕೊಂಡು ಹೋಗಿಬಿಟ್ಟರು. ಸಾನ್ಯಾಲ್‌ರವರು ವಿಶ್ವಾಸದಿಂದ ಕಂಡರು. "ಅಲ್ಲಿ ನೀವು ಕಲಿತಿದ್ದೇನು?"

ಎಂದರೆ– "ಸಾನ್ಯಾಲರು ಹಾಡುತ್ತಿದ್ದುದನ್ನು ಕೇಳಿ ಅಷ್ಟು ಇಷ್ಟು ಮಾಡಿದ್ದೇನು? - ಮನೆಗೆಲಸ" ಎನ್ನುತ್ತಾರೆ ಜೋಶಿ. ಹರಿವಲ್ಲಭ ಸಂಗೀತ ಸಮ್ಮೇಳನಕ್ಕೆ ಎಲ್ಲಾ ಪ್ರಸಿದ್ಧ ಸಂಗೀತ ವಿದ್ವಾಂಸರೂ ಬರುವುದರಿಂದ ಪಂಜಾಬಿನ ಜಲಂಧರ್ ನಗರಕ್ಕೆ ಹೋದರೆ ನಿನ್ನ ಆಸೆ ಈಡೇರಬಹುದೆಂದು ಪಹರಿ ಸಾನ್ಯಾಲರು ಸಲಹೆ ಮಾಡಿದಂತೆ ಭೀಮಸೇನ ಜೋಶಿ ಆ ಊರಿಗೆ ಹೋಗಿ ಅಲ್ಲಿ ಬಹುಕಾಲ ಪಾಡುಪಟ್ಟುಕೊಂಡಿದ್ದು ಊರಿಗೆ ಹಿಂತಿರುಗಿದರು.

ಸವಾಯ್ ಗಂಧರ್ವರ ಬಳಿ

ಭೀಮಸೇನ ಜೋಶಿ ಸವಾಯಿ ಗಂಧರ್ವರ ಒಬ್ಬ ಮುಖ್ಯ ಶಿಷ್ಯನೆಂದು ಖ್ಯಾತರಾಗಿದ್ದಾರೆ. ಎರಡನೆಯಸಲ ಓಡಿ ಹೋಗಿ ಹಿಂತಿರುಗಿದ ಮಗನನ್ನು ಗುರುರಾಜ ಜೋಶಿಯವರು ಬಹುಪ್ರಯತ್ನಮಾಡಿ ಸವಾಯಿ ಗಂಧರ್ವರೆಂದು ಅನ್ವರ್ಥನಾಮ ಪಡೆದ ರಾಮಭಾವು ಕುಂದಗೋಳಕರ್‌ರ ಬಳಿ ಸಂಗೀತ ಶಿಕ್ಷಣಕ್ಕೆ ಸೇರಿಸಿದರು. ಗುರುಕುಲವಾಸ. ರಾಮಭಾವು ಅವರು ಸಂಗೀತ ಶಿಕ್ಷಣದ ವಿಷಯದಲ್ಲಿ ಹಳೆಯ ಪಂಥಕ್ಕೆ ಸೇರಿದವರು. ಆದುದರಿಂದ ಆ ಗುರುಕುಲವಾಸದ ಜೀವನ ಎಂತಹುದೆಂಬುದನ್ನು ವಿವರಿಸಬೇಕಾಗಿಲ್ಲ. ಮೊದಲನೆಯ ಸಲ ಇದ್ದ ಒಂದೂವರೆ ವರುಷದಲ್ಲಿ ಜೋಶಿ ಕಲಿತುದು – ಒಂದೇ ರಾಗ – ಪೂರಿಯಾ. ಈ ಮಧ್ಯೆ ಇನ್ನು ಪಾಠ ಹೇಳುವುದಿಲ್ಲವೆಂದು ಕಳಿಸಿಬಿಟ್ಟರು. ಪುನಃ ಲಂಗರು ಇಲ್ಲದೆ ತೇಲಾಡುವ ದೋಣಿಯಂತೆ ಆಯಿತು – ಜೋಶಿಯವರ ಸ್ಥಿತಿ.

ಪುನಃ ಗುರುಶಿಷ್ಯರ ಸಮಾಗಮವಾದುದು ಸವಾಯಿ ಗಂಧರ್ವರ 60ನೆಯ ವರ್ಷದ ಹುಟ್ಟುಹಬ್ಬದಂದು. ಪರಸ್ಪರ ಆಗಲಿದ ಮೇಲೂ ಶಿಷ್ಯನು ಪ್ರವರ್ಧಮಾನಕ್ಕೆ ಬರುತ್ತಿದ್ದುದನ್ನು ದೂರದಿಂದಲೇ ನೋಡುತ್ತಿದ್ದ ರಾಮಭಾವು ಅಂದಿನ ಸಮಾರಂಭದಲ್ಲಿ ಭೀಮಸೇನನ ಗಾಯನಕ್ಕೆ ಅನುಮತಿಯಿತ್ತರು. "ಅಂದು ನಾನು ಹಾಡಿದ ಮಿಯಾಮಲ್ಹಾರ್ ರಾಗ ನನ್ನ ಜೀವನದಲ್ಲಿ ಮರೆಯಲಾಗದ ಅನುಭವ" ಎನ್ನುತ್ತಾರೆ ಜೋಶಿ.

ರಾಗಗಳ ವಿಶ್ವರೂಪದರ್ಶನ

ಭೀಮಸೇನ ಜೋಶಿ ಸವಾಯಿ ಗಂಧರ್ವರ ಬಳಿ ಒಟ್ಟು ಐದು ವರುಷಕಾಲ ಶಿಷ್ಯವೃತ್ತಿ ಮಾಡಿದರು. ಈ ಐದು ವರುಷಗಳು ಐದು ರಾಗಗಳನ್ನು ಕಲಿತರು. "ಇಲ್ಲಿ ಸಂಖ್ಯೆ ಮುಖ್ಯವಲ್ಲ. ಕ್ರಮ ಮುಖ್ಯವಾದುದು. ರಾಗದ ಮುಖ್ಯಾಂಶಗಳೇನು, ತಿರುಳೇನು? ಜೀವನಾಡಿಯೇನು, ಅವುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಹೇಗೆ, ಅವುಗಳಿಂದ ರಾಗವನ್ನು ವಿಸ್ತರಿಸುವ ಕ್ರಮ. ಹೊಸ ಹೊಸ ಕಲ್ಪನೆಗಳನ್ನು ರೂಢಿಸಿಕೊಳ್ಳುವುದು, ಅವುಗಳ ಮೂಲಕ ರಾಗದ ವೈಶಾಲ್ಯ ಭಾವ ಮತ್ತು ವರ್ಚಸ್ಸು ಇವುಗಳನ್ನು ವರ್ಧಿಸುವುದು ಮುಂತಾದ ಭಾಗಗಳಲ್ಲಿ ಮಾರ್ಗದರ್ಶನ, ಇದು ಅಮೂಲ್ಯವಲ್ಲವೇ. ನಮ್ಮ ಗುರುಗಳು ಹೇಳಿಕೊಟ್ಟ ರಾಗಗಳ ಸಂಖ್ಯೆ ಮಿತವಿರಬಹುದು. ಆದರೆ ಅವುಗಳ ವಿಶ್ವರೂಪದರ್ಶನ ಮಾಡಿಸಿದರು. ಆ ವಿಧಾನದಲ್ಲಿ ಯಾವ ರಾಗವನ್ನೂ ಹೊಸ

ಹೊಸ ಕಲ್ಪನೆಗಳಿಂದ ಅಂದಗೊಳಿಸಿ ರುಚಿಗೊಳಿಸಿ ವಿಶಾಲವಾಗಿ ನಿರೂಪಿಸಲು ಸಾಧ್ಯವಾಗಿದೆ" ಎನ್ನುತ್ತಾರೆ.

ಸಂಗೀತ ಶೈಲಿ

ಈ ಮಾತುಗಳ ಸತ್ಯವನ್ನು ಅವರ ಗಾಯನದಲ್ಲಿ ನಾವು ಮನಗಾಣ ಬಹುದು. ಜೋಶಿಯವರ ದಾರ್ಢ್ಯವನ್ನು ಆಗಲೇ ಪ್ರಸ್ತಾಪಿಸಲಾಗಿದೆ. ಅವರ ದನಿಯೂ ಅದಕ್ಕೆ ಅನುಗುಣವಾದುದು, ತುಂಬುನಾದ. ಒಂದು ಕ್ಷಣದಲ್ಲಿ ಸಭಾಂಗಣವೆಲ್ಲಾ ತುಂಬಿಕೊಂಡಂತೆ ಅನುಭವವಾಗುವ ಘೂಂಕರಿಸುವ ನಾದ. ಗಾಯನದ ಶೈಲಿಯೂ ಅಷ್ಟೇ ವೀರ್ಯವತ್ತಾದುದು. ಅವರ ಮಾತಿನಂತೆಯೇ ಅವರ ಸಂಗೀತವು ಹರಿದುಬರುವುದೂ ನೇರವಾಗಿ. ಅದರಲ್ಲಿ ಸಂಚು, ಕುಸುರಿ ಕೆಲಸವಿಲ್ಲ. ಶ್ರವ್ಯವಾದ ನಾದದ ದಪ್ಪ ದಪ್ಪ ತುಣುಕುಗಳು. ಅವು ಪರಸ್ಪರ ಕೂಡಿಕೊಂಡು ಹರಿವಾಗ ರಾಗಗಳ ಧಾರೆಗಿಂತ ಒಂದು ಪ್ರವಾಹವೇ ಬಂದಂತೆ ಅನುಭವವಾಗುವುದು. ಅವರ ತಾನ ಪ್ರಸ್ತಾರದ ವೈಖರಿಯೂ ಅಷ್ಟೇ. ಒಂದೇ ಸಮನೆ ಒಂದೆರಡು ನಿಮಿಷಗಳ ಕಾಲ ಉಸಿರು ಹಿಡಿದು ಧ್ವನಿಯನ್ನು ಗುಡುಗಿಸುವುದನ್ನು ಎಲ್ಲರೂ ಬಲ್ಲರು. ಆದರೆ ಅದರಲ್ಲಿ ವೈವಿಧ್ಯವನ್ನೂ ತುಂಬುವರು.

ತುಂಬು ಗಾಂಭೀರ್ಯ

ಭೀಮಸೇನ ಜೋಶಿಯವರ ಗಾಯನವನ್ನು ಕೇಳುವಾಗ ರಾಗಗಳ ದಿಟ್ಟವಾದ ಹಾಗೂ ದೃಢವಾದ ಆಕಾರ, ಖಚಿತವಾದ ಲಯ ಮತ್ತು ಅವೆಲ್ಲವನ್ನೂ ಆವರಿಸಿಕೊಂಡ ತುಂಬುನಾದ ಇವುಗಳಿಂದ 'ಬಾದಾಮಿಯ ಗುಹೆಗಳಲ್ಲಿನ ಶಿಲ್ಪಗಳು' ನೆನಪಿಗೆ ಬರುತ್ತವೆ. ಅಲ್ಲಿ ಹೊಯ್ಸಳ ಶಿಲ್ಪದಂತಹ ನಾಜೂಕು ನವಿರಾದ ಅಲಂಕರಣವಿಲ್ಲ. ಎಲ್ಲವೂ ದಿಟ್ಟ, ದೃಢ ಮತ್ತು ಮನಸ್ಸಿನ ಮೇಲೆ ನೇರವಾದ ಪರಿಣಾಮವನ್ನುಂಟುಮಾಡುತ್ತವೆ. ಅವರು ಹಾಡುವ ರಾಗಗಳಲ್ಲಿ ಯಮನ್, ಪೂರಿಯಾ, ಪೂರಿಯಾ ಕಲ್ಯಾಣ್, ಪೂರಿಯಾ ಧನಾಶ್ರೀ, ಭೀಮ್‌ಪಲಾಸ್, ಜೋಗಿಯಾ, ಮಿಯಾಮಲ್ಹಾರ್, ಮುಂತಾದುವು ಬಹುಜನಪ್ರಿಯವಾಗಿವೆ. ಆಗಾಗ್ಗೆ ಅಪರೂಪವಾಗಿ ಬಾಗೇ ಶ್ರೀ ಬಹಾರ್, ಭೈರವ್ ಬಹಾರ್ ಮುಂತಾದುವುಗಳನ್ನೂ ಕೇಳಿದ್ದೇವೆ. ಆದರೆ ಅವುಗಳಲ್ಲಿ ನಮಗೆ ಮೊದಲು ಪರಿಣಾಮ ಉಂಟುಮಾಡುವ ಅಂಶವೆಂದರೆ- ಗಾಂಭೀರ್ಯ. ಕಾಪಿ, ಪೀಲು ಮುಂತಾದ ರಾಗಗಳಲ್ಲಿಯೂ, ಕಾರುಣ್ಯಕ್ಕಿಂತ ಈ ಗಾಂಭೀರ್ಯ ಮತ್ತು ಒಂದು ಶಾಂತಭಾವವು ನಮಗೆ ಹೆಚ್ಚು ಅನುಭವವಾಗುವುದು.

ಇದನ್ನೇ ಜೋಶಿಯವರು ಹಾಡುವ ದೇವರ ನಾಮಗಳಿಗೂ ಹೇಳಬಹುದು. ಕರುಣಾಕರನೀ, ಯಾದವ ನೀ ಬಾ, ಮೂರುತಿಯನು ನಿಲ್ಲಿಸೋ ಮುಂತಾದ ಕೀರ್ತನೆಗಳ ಧ್ವನಿಮುದ್ರಿಕೆಗಳಿವೆ. ಅವರ ಕಚೇರಿಗಳಲ್ಲಿಯೂ ಕೇಳಿದ್ದೇವೆ. ಇದರ ಜೊತೆಗೆ ಠುಮ್ರಿ, ಅಭಂಗ್, ಭಜನ್ ಮುಂತಾದುವುಗಳನ್ನು ಕೇಳಿದ್ದೇವೆ. ಅವುಗಳ ಭಾವಕ್ಕೆ ಅನುಗುಣವಾಗಿ

ರಾಗಗಳನ್ನು ಪುಷ್ಟಿಗೊಳಿಸಿ ಹಾಡುತ್ತಾರೆ - ಜೋಶಿ. ಆದರೆ ಅವುಗಳ ಪರಿಣಾಮ-ಹೃದಯವನ್ನು ಮುಟ್ಟುತ್ತದೆ, ಇನ್ನು ಒಳಗೆ ಹೋಗುವುದಿಲ್ಲ ಎನಿಸುತ್ತದೆ. ಲಾಲಿತ್ಯಕ್ಕಿಂತ ಗಾಂಭೀರ್ಯ ಸ್ವಲ್ಪ ಮುಂದು ಎನ್ನಿಸುತ್ತದೆ. ವಯಸ್ಸಿನಲ್ಲಿ ಅರ್ಧಶತಮಾನವನ್ನು ದಾಟಿದ್ದರೂ ಜೋಶಿಯವರ ಸಂಗೀತದಲ್ಲಿ ನಾದಪುಷ್ಟಿಯಿದೆ. ಶ್ರವ್ಯತೆಯಿದೆ. ಕೇಳುವವರ ಮನಸ್ಸಿನ ಮೇಲೆ ನೆಮ್ಮದಿಯುಂಟುಮಾಡುವ ಗುಣವಿದೆ. ಆದರೆ ಪೌರುಷದ ಕಾವೂ ಇನ್ನೂ ಬಲವಾಗಿದೆಯೋ ಎಂದೂ ಅನುಭವವಾಗುತ್ತದೆ.

ಸಂಗೀತದಲ್ಲಿ ಹೇಗೋ ಮಾತಿನಲ್ಲಿಯೂ ಅಷ್ಟೆ- ಜೋಶಿ. ತಮ್ಮ ಅಭಿಪ್ರಾಯಗಳನ್ನು ನೇರವಾಗಿ ತಿಳಿಸಿಬಿಡುವರು. ಆ ಮಾತುಗಳಲ್ಲಿ ಗುರುಭಕ್ತಿ ಮತ್ತು ಸಂಪ್ರದಾಯನಿಷ್ಠೆ ಸ್ಪಷ್ಟವಾಗಿ ಕಾಣಬರುತ್ತದೆ. ಹಾಗೆಂದು ಇಂದಿನ ಭಾವನೆಗಳ ಬಗೆಗೆ ತಾತ್ಸಾರವಿಲ್ಲ.

ಕರ್ನಾಟಕ ಹಿಂದೂಸ್ತಾನಿ ಪದ್ಧತಿ

ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧರಾದ ಹಲವಾರು ಕಲಾವಿದರಿದ್ದಾರೆ. ಅವರುಗಳ ಶೈಲಿ ಸಂಪ್ರದಾಯಗಳು ಬೇರೆಬೇರೆ ಇರಬಹುದು. ಆದರೆ ಅವರೆಲ್ಲರಿಗೂ ಕರ್ನಾಟಕ ಸಂಗೀತವೂ ತಿಳಿದಿದೆ. ಒಬ್ಬಿಬ್ಬರಿಗೆ ಪ್ರಾರಂಭ ಶಿಕ್ಷಣವೇ ಕರ್ನಾಟಕ ಸಂಗೀತ ಪದ್ಧತಿಯಲ್ಲಿ. ಈ ಹಿನ್ನೆಲೆಯಿಂದ ಎರಡೂ ಪದ್ಧತಿಗಳ ಬಗೆಗೆ ಅವರು ಹೆಚ್ಚು ಅಧಿಕಾರ ವಾಣಿಯಿಂದ ಮಾತನಾಡಬಲ್ಲರು.

ಭೀಮಸೇನ ಜೋಶಿಯವರೂ ಅಷ್ಟೇ. ಟೈಗರ್ ವರದಾಚಾರ್ಯರು ಮೊದಲುಗೊಂಡು ಕರ್ನಾಟಕ ಸಂಗೀತದ ಅನೇಕ ವಿದ್ವಾಂಸರ ಸಂಗೀತವನ್ನು ಕೇಳಿದ್ದಾರೆ. ಸ್ಫುರಿತರಾಗಿದ್ದಾರೆ. ಅವರಲ್ಲಿ ಅನೇಕರು ಅವರಿಗೆ ಆಪ್ತರೂ ಹೌದು. ಎರಡೂ ಪದ್ಧತಿಗಳನ್ನು ತುಲನೆ ಮಾಡಿ ಮಾತನಾಡಬಲ್ಲರು. ಅದರಲ್ಲಿ ಕೆಲವು ಮಾತುಗಳು ಚಿಂತನಕ್ಕೆ ಒಳ್ಳೆಯ ಸಾಮಗ್ರಿಯೂ ಹೌದು.

ಶಾರೀರದ ಗುಣಗಳ ಬಗೆಗೆ ಮಾತನಾಡುತ್ತಾ, ''ಹಿಂದೂಸ್ತಾನಿ ಪದ್ಧತಿಯಲ್ಲಿ ಸ್ವರಸಾಧನಮಾಡಿ ನಾದವನ್ನು ನಿಲ್ಲಿಸಿಕೊಂಡವರು ಕರ್ನಾಟಕ ಸಂಗೀತವನ್ನು ಕಲಿಯಬಹುದು. ಇನ್ನೂ ರುಚಿಕರವಾಗಿ ಹಾಡಬಹುದು'' ಎನ್ನುತ್ತಾರೆ.

ಹಿಂದೂಸ್ತಾನಿ ಸಂಗೀತವು ದಕ್ಷಿಣ ಭಾರತದಲ್ಲಿ ರುಚಿಸಿದ ಹಾಗೆ ಔತ್ತರೇಯರಿಗೇಕೆ ದಕ್ಷಿಣಾದಿ ಸಂಗೀತವು ರುಚಿಸುವುದಿಲ್ಲ? ಎಂದು ಕೇಳಿದುದಕ್ಕೆ ''ಔತ್ತರೇಯರಲ್ಲಿ ಕೆಲವು ಭಾಗ ತಪ್ಪು ಕಲ್ಪನೆಯಿರಬಹುದು. ಆದರೆ ಕರ್ನಾಟಕ ಸಂಗೀತ ವಿದ್ವಾಂಸರೂ ಸ್ವಲ್ಪ ತಪ್ಪು ಮಾಡುತ್ತಾರೆ. ಔತ್ತರೇಯರ ಗಮನವನ್ನು ಹಿಡಿಯುವಂತಹ ಎರಡೂ ಪದ್ಧತಿಗಳಿಗೆ ಸಮಾನವಾದ ಅಂಶಗಳಿಂದ ಕೂಡಿರುವಂತೆ ಕಾರ್ಯಕ್ರಮವನ್ನು ರೂಪಿಸಿ ಅವರಿಗೆ ರುಚಿ ಹತ್ತಿಸಿ ಅವರ ಅಭಿರುಚಿಯನ್ನು ಬೆಳೆಸಬೇಕು. ಇದು ಸಾಧ್ಯ'' ಎಂದರು ಜೋಶಿ.

ಭೀಮಸೇನ ಜೋಶಿಯವರು ಇಂದು ಭಾರತದ ಅತ್ಯುತ್ತಮ ಗಾಯಕರಲ್ಲೊಬ್ಬರೆಂದು ಮಾನ್ಯ ಮಾಡಲ್ಪಟ್ಟಿದ್ದಾರೆ. 1972ರಲ್ಲಿ ರಾಜ್ಯಮಟ್ಟದ ಅಕಾಡೆಮಿ ಪ್ರಶಸ್ತಿ, ರಾಷ್ಟ್ರಮಟ್ಟದ ಪದ್ಮಶ್ರೀ ಹಾಗೂ ಹುಬ್ಬಳ್ಳಿಯ ಕಲಾಭಿಮಾನಿಗಳಿಂದ ಅಭೂತಪೂರ್ವ ಸತ್ಕಾರಗಳು ದೊರೆತಿವೆ. ಈಗ ಪುಣೆಯಲ್ಲಿ ನೆಲೆಸಿದ್ದಾರೆ. ವರ್ಷದಲ್ಲಿ 10 ತಿಂಗಳು ಬಿಡುವಿಲ್ಲದಷ್ಟು ಕಾರ್ಯಕ್ರಮಗಳು. ಎರಡು ತಿಂಗಳು ವಿಶ್ರಾಂತಿ. ಹಿಂದೆ ಪ್ರತಿಯೊಂದು ಊರಿಗೂ ತಮ್ಮದೊಂದು ಮೋಟಾರ್ ಗಾಡಿಯಲ್ಲೇ ಹೋಗುತ್ತಿದ್ದರು. ಆ ಪ್ರಯಾಣಗಳದೇ ಒಂದು ವಿಶೇಷ ಕತೆ. ಈಗ ವಿಮಾನದಲ್ಲಿ ಪ್ರಯಾಣಮಾಡುತ್ತಾರೆ. ಜೊತೆಯಲ್ಲಿ ಪ್ರಾಯಶಃ ಅವರ ಪತ್ನಿ ವತ್ಸಲಾಬಾಯಿ ಜೋಶಿಯವರೂ ಇರುತ್ತಾರೆ. ವತ್ಸಲಾ ಅವರು ಜೋಶಿಯವರೊಂದಿಗೆ ಕಲಾವಿಲಾಸಿ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು.

ಶಾಸ್ತ್ರೀಯ ಸಂಗೀತ ಇನ್ನು ಮುಂದೆ ಉಳಿಯುವ ಸೂಚನೆ ಇದೆಯೇ! ಎಂದು ಪ್ರಶ್ನಿಸಿದರೆ "ಕಲೆಯು ಎಂದೂ ಜಡವಾಗಿಲ್ಲ. ಶಾಸ್ತ್ರೀಯ ಮತ್ತು ಸಂಪ್ರದಾಯ ಸಂಗೀತ ಒಂದು ದೊಡ್ಡ ನದಿಯಂತೆ ಒಂದೊಂದು ತಲೆಮಾರಿನಲ್ಲಿಯೂ ಹೊಸ ಹೊಸ ಕಲ್ಪನೆ ವಿಚಾರಧಾರೆಗಳು ಕೂಡಿಕೊಳ್ಳುತ್ತವೆ. ಆ ತಲೆಮಾರಿನಲ್ಲಿ ಬೆಳೆದು ಹಳೆಯದಾದುದಕ್ಕೆ ಮುಂದಿನ ಪೀಳಿಗೆಯ ಹೊಸ ನೀರು ಕೂಡಿಕೊಂಡು ಹರಿಯುತ್ತದೆ. ಇದು ಪ್ರಕೃತಿ-ನಿಯಮ. ಇದಕ್ಕೆ ಅಂತ್ಯವಿಲ್ಲ. ಇದರಲ್ಲಿ ನಮ್ಮಗಳ ಪಾತ್ರ ನಿಮಿತ್ತಮಾತ್ರ" ಎನ್ನುತ್ತಾರೆ ಭೀಮಸೇನ ಜೋಶಿ. ★ ★ ★ ★ ★ ★ ★

ಸುಧಾ, 1973

27. ಕರ್ನಾಟಕದ ಏಕಮಾತ್ರ ಸರೋದ್ ವಾದನ ಪ್ರವೀಣ ರಾಜೀವ್ ತಾರಾನಾಥ್

ಹದಿಮೂರು ವರುಷಗಳ ಹಿಂದೆ ಬೆಂಗಳೂರಿನಲ್ಲಿ ರವಿಶಂಕರ್ ಮತ್ತು ಅಲಿ ಅಕ್ಬರ್ ಖಾನ್ ಅವರ ಸಿತಾರ್-ಸರೋದ್ ಜುಗಲಬಂದಿ ಕಾರ್ಯಕ್ರಮ ನಡೆಯಿತು. ಕಚೇರಿಯಾದ ಮೇಲೆ ನಡೆದ ಭೋಜನ ಕೂಟದಲ್ಲಿ ಅಲಿ ಅಕ್ಬರ್ ಖಾನ್‌ರೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ "ನಮ್ಮ ರಾಜೀವ್ ತಾರಾನಾಥ್ ಹೇಗೆ?" ಎಂದು ಕೇಳಿದೆ. ಇಲ್ಲಿ "ನಮ್ಮ" ಎಂಬ ಪದಕ್ಕೆ ಬೆಂಗಳೂರಿನವರೆಂದು ಅರ್ಥ. ಆಗ ನನಗೆ ರಾಜೀವ ತಾರಾನಾಥರ ಪರಿಚಯವೇ ಇರಲಿಲ್ಲ. ಅವರು ಖಾನ್ ಸಾಹೇಬರ ಬಳಿ ಸರೋದ್ ಕಲಿಯುತ್ತಿದ್ದಾರೆಂದು ಮಾತ್ರ ತಿಳಿದಿದ್ದಿತು.

ಸಿಗರೇಟು ಸೇದುತ್ತಿದ್ದ ಖಾನ್‌ರವರು ನನ್ನನ್ನೇ ನೋಡುತ್ತಾ "ಒಳ್ಳೆಯ ಹುಡುಗ, ಬುದ್ಧಿಶಾಲಿ ಚೆನ್ನಾಗಿ ಕಲಿತಿದ್ದಾನೆ" ಎಂದರು – ಹೊಗೆ ಬಿಡುತ್ತಾ, ಅವರು ಹೇಳಿದ್ದು ಕೇವಲ

ಐದು ಪದಗಳು. ಆದರೆ ಅದಕ್ಕೆ ಬಹು ಮಹತ್ವವಿದೆ. ಏಕೆಂದರೆ ಅಲಿ ಅಕ್ಬರ್ ಖಾನ್ ಅವರು ಎಂತಹ ಮಿತಭಾಷಿ ಎಂಬುದು ಅವರನ್ನು ಬಲ್ಲವರಿಗೆಲ್ಲಾ ಗೊತ್ತಿರುವ ವಿಷಯವೇ. ಅಲ್ಲದೇ ಬಹು ಕಷ್ಟಪಟ್ಟು ಸಂಗೀತ ಕಲಿತವರು ಅವರು–ಹಳೆಯ ಕಠಿಣ ಶಿಸ್ತಿನ ಕ್ರಮದಲ್ಲಿ. ಆದುದರಿಂದ ಅವರು ಯಾವ ಸಂಗೀತವನ್ನೂ ಪ್ರಾಯಶಃ ಒಪ್ಪುವುದು ಕಷ್ಟ. ಈ ಹಿನ್ನೆಲೆಯಿಂದ ನೋಡಿದಲ್ಲಿ ಈ ಐದು ಪದಗಳಿಗೆ ಎಷ್ಟು ಮಹತ್ವವೆಂದು ಮನಗಾಣಬಹುದು. ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಪಾಸಾದವರಿಗೆ ದೊರೆತ ಪ್ರಶಸ್ತಿ ಪತ್ರದಂತೆ ಎಂದೂ ಭಾವಿಸಬಹುದು.

ಕಚೇರಿ ನುಡಿಸಿ....

ಅಲಿ ಅಕ್ಬರ್ ಖಾನರು ಇಷ್ಟು ಮಾತುಗಳನ್ನಾದರೂ ಹೇಳಲು ಒಂದು ವಿಶೇಷ ಪ್ರಚೋದನೆಯಿರಬಹುದೋ ಏನೋ. ಏಕೆಂದರೆ ಅಂದಿಗೆ ಸುಮಾರು ಒಂದು, ಒಂದೂವರೆ ವರುಷದ ಹಿಂದೆ ಕಲ್ಕತ್ತೆಯಲ್ಲಿ ಒಂದು ಘಟನೆ ನಡೆಯಿತು. ಆಗ ರಾಜೀವ್ ತಾರಾನಾಥರೂ ಇನ್ನೂ ಖಾನ್ ಸಾಹೇಬರ ಬಳಿ ಸಂಗೀತಾಭ್ಯಾಸ ಮಾಡುತ್ತಿದ್ದರು. ವಿದ್ಯಾರ್ಥಿದೆಸೆ. ಹಣಕ್ಕೆ ಬಹು ತಾಪತ್ರಯ. ಯಾರೂ ಸಹಾಯ ಮಾಡುವವರಿಲ್ಲ. ಒಂದು ಸಲ ಬಹು ಕಷ್ಟಕ್ಕಿಟ್ಟುಕೊಂಡಿದ್ದಿತು. ಅಂದು ಅಲಿ ಅಕ್ಬರ್ ಖಾನರೂ ಊರಲ್ಲಿರಲಿಲ್ಲ. ಏನೂ ತೋಚದೇ ದುರ್ಗಾಪೂಜೆಯ ಉತ್ಸವ ಮಂಟಪದಲ್ಲಿ ಸರೋದ್ ನುಡಿಸಲು ಒಪ್ಪಿಕೊಂಡರು. ಕಚೇರಿಗೆ ಪ್ರತಿಫಲ - ಒಂದು ಊಟ ಮತ್ತು 20 ರೂಪಾಯಿ. ಕಚೇರಿ ಚೆನ್ನಾಗಿಯೇ ನಡೆಯಿತು. ಬಂದಿದ್ದವರೆಲ್ಲಾ ಸಂತೋಷಪಟ್ಟರು. ಆದರೆ ಅವರಿಗೆ ತಿಳಿಯದೇ ಒಂದು ಅಪಾಯವೂ ಕಾದಿದ್ದಿತು.

ಚಪ್ಪರದಲ್ಲಿ ಲೌಡ್ ಸ್ಪೀಕರ್ ವ್ಯವಸ್ಥೆ ಇತ್ತು. ಧ್ವನಿ ಖಾನ್ ಸಾಹೇಬರ ಮನೆಯವರೆಗೂ ಕೇಳಿಸುತ್ತಿತ್ತೋ ಏನೋ! ಅದನ್ನು ಕೇಳಿದವರು ಯಾರೋ ವಾದಕರಾರೆಂದು ವಿಚಾರಿಸಿ ಕೊಂಡರು. ಖಾನ್‌ರವರು ಊರಿಗೆ ಬಂದ ನಂತರ ಅವರ ಕಿವಿಯಲ್ಲಿ ಉಸುರಿದರು. ಮುಂದಿನ ಕಥೆಯನ್ನು ರಾಜೀವರ ಬಾಯಲ್ಲಿಯೇ ಕೇಳಬೇಕು.

''ಎಂದಿನಂತೆ ಪಾಠಕ್ಕೆ ಹೋದೆ. ಗುರುಗಳು ನಿಂತಿದ್ದರು. ಮುಖದಲ್ಲಿ ಸಹಜವಾದ ಮುಗುಳು ನಗೆಯಿಲ್ಲ. ದುರುಗುಟ್ಟಿಕೊಂಡು ನೋಡುತ್ತಾ 'ದೊಡ್ಡ ಉಸ್ತಾದನಾಗಿ ಬಿಟ್ಟಿಯೋ' ಎಂದರು. ನನಗೆ ನಡುಕ ಹುಟ್ಟಿತು. ಕಾಲಿಗೆ ಬಿದ್ದೆ. ತಪ್ಪಾಯಿತು ಎಂದು ನನ್ನ ಕಷ್ಟದ ಕಥೆಯೆಲ್ಲಾ ಹೇಳಿದೆ. ಅವರು ಅದನ್ನು ಮನಸ್ಸಿಗೇ ಹಚ್ಚಿಕೊಂಡಂತೆ ಕಾಣಲಿಲ್ಲ. 'ತೊಗೋ ಸರೋದನ್ನ' ಎಂದು ಗದರಿಸಿದರು. ವಾದ್ಯವನ್ನು ನಾನು ತದನಂತರ 'ಹೂಂ, ಮೊನ್ನೆ ನೀನು ಮಾಡಿದ ಕಚೇರಿಯನ್ನೆಲ್ಲಾ ಪುನಃ ನುಡಿಸು' ಎಂದು ಎದುರಿಗೆ ಕುಳಿತರು. ನಾನೂ ಅಧೈರ್ಯದಿಂದಲೇ ನುಡಿಸಿಕೊಂಡುಹೋದೆ. ಕೊನೆಯವರೆಗೂ ಅಲ್ಲಾಡದೇ ಕೂತು ಕೇಳಿದರು. ಎಲ್ಲಾ ಆಯಿತು. ಒಂದು ನಿಮಿಷ ಸುಮ್ಮನಿದ್ದು 'ಸರಿ' ಎಂದರು. ಅನಂತರ ಸಿಗರೇಟ್ ಹಚ್ಚಿ ಸೇದುತ್ತಾ 'ನಾನು ಏನು ಮಾಡಬೇಕೆಂದಿದ್ದೆ ಗೊತ್ತೇ' ಎಂದು ಕೇಳಿದರು. ನಾನು ಮಾತನಾಡಲಿಲ್ಲ. 'ನಿನ್ನನ್ನು

ನನ್ನ ಬಳಿಯಿಂದ ಓಡಿಸಿಬಿಡಬೇಕೆಂದಿದ್ದೆ. ಆದರೆ ಕೇಳಿ ನೋಡಿ ಅನಂತರ ಮಾಡೋಣವೆಂದು ನಿರ್ಧರಿಸಿದೆ. ನೀನು ನುಡಿಸಿದುದು ಸರಿಯಿಲ್ಲದಿದ್ದಲ್ಲಿ ಈಗಲೇ ನಿನ್ನನ್ನು ಮನೆಬಿಟ್ಟು ಓಡಿಸಿಯೇಬಿಡುತ್ತಿದ್ದೆ.' ಎಂದು ಹೇಳಿ 'ಹೀಗೇಕೆ ಮಾಡಿದೆ. ನನಗೆ ಹೇಳಬಾರದಾಗಿದ್ದಿತೇ. ಇನ್ನು ಮುಂದೆ ಹಾಗೆ ಮಾಡಬೇಡ' ಅಂದರು ಗುರುಗಳು. ಅಂದು ರಾಜೀವ್ ತಾರಾನಾಥರು ನಿರೂಪಿಸಿದುದು ಕೀರವಾಣಿ ರಾಗ. ಅದು ಅವರಿಗಿನ್ನೂ ಪಾಠವಾಗಿರಲಿಲ್ಲ.

ಅದೇನು ವಾದ್ಯ ?

ಅಲಿ ಅಕ್ಬರ್ ಖಾನರು ಬೆಂಗಳೂರಿನಲ್ಲಿ ಶಿಷ್ಯನ ಬಗೆಗೆ ವ್ಯಕ್ತಪಡಿಸಿದ ಅಭಿಪ್ರಾಯವು ಈ ಅಗ್ನಿ ಪರೀಕ್ಷೆಯ ಫಲವಿರಬಹುದು. ಇಲ್ಲಿ ವಿಶೇಷವೆಂದರೆ ರಾಜೀವ್‌ರವರಿಗೆ ಸರೋದ್ ವ್ಯಾಮೋಹವು ಪ್ರಾರಂಭವಾದುದು ಬೆಂಗಳೂರಿನಲ್ಲಿಯೇ. ಆ ಕಲೆಯಲ್ಲಿ ಅವರು ಪಾಸಾದರೆಂದು ಗುರುಮುಖದಿಂದ ವ್ಯಕ್ತವಾದುದೂ ಅಲ್ಲಿಯೇ. ಇಲ್ಲಿ ಒಂದು ವಿಚಿತ್ರವೆಂದರೆ ಬಹುಕಾಲ ರಾಜೀವ ತಾರಾನಾಥರಿಗೆ ಸರೋದ್ ವಾದ್ಯವೆಂದರೆ ಅಸಹ್ಯ. ಅದೇನು ವಾದ್ಯ ಆ ಮರದ ತುಂಡು, ಅದಕ್ಕೆ ಚರ್ಮದ ಹೊದ್ದಿಕೆ, ಮೀಟುವುದು ನರಗಳನ್ನು. ಇದೊಂದು ವಾದ್ಯವೆ? ನೋಡಲೂ ಅಸಹ್ಯ. ವಾದ್ಯಗಳಲ್ಲಿ ರಾಜಾ ಅಂದರೆ ಸಿತಾರ್. ಇದು ರಾಜೀವ್‌ರವರ ನಂಬಿಕೆ. 1949ರಲ್ಲಿ ರವಿಶಂಕರ್ ರವರ ಸಿತಾರ್ ವಾದನವನ್ನು ಪ್ರತ್ಯಕ್ಷ ಕೇಳಿದ ಮೇಲೆ ಈ ನಂಬಿಕೆ ಇನ್ನೂ ದೃಢವಾಯಿತು.

ಹದಿನೆಂಟು ವರುಷಗಳ ಹಿಂದೆ ಈ ನಂಬಿಕೆಯು ಹೋಗುವ ಒಂದು ಸಂದರ್ಭ ಒದಗಿತು. ಅದೇ ಮೊದಲನೆಯ ಸಲ ರವಿ ಶಂಕರ್ ಮತ್ತು ಅಲಿ ಅಕ್ಬರ್ ಖಾನ್‌ರವರು ಬೆಂಗಳೂರಿನಲ್ಲಿ 'ಸಿತಾರ್-ಸರೋದ್' ಜುಗಲಬಂದಿ ಕಚೇರಿ ನಡೆಸಿದರು. "ನನಗೆ ಸಿತಾರ್ ಕೇಳುವ ಹುಚ್ಚು" ಎಂದು ಪ್ರಾರಂಭಿಸಿದರು ರಾಜೀವ್, ಆ ಸಂದರ್ಭವನ್ನು ನೆನೆಯುತ್ತಾ. "ನನಗೆ ಒಬ್ಬ ಯುರೋಪಿಯನ್ ಮಹಿಳೆ ಪರಿಚಯವಿದ್ದಳು. ಆಕೆಗೆ ಭಾರತೀಯ ಸಂಗೀತವನ್ನು ಕೇಳಬೇಕೆಂಬ ಆಸೆ. ಈ ಕಚೇರಿಗೆ ಬರುವುದಾಗಿ ತಿಳಿಸಿದರು. ಆದರೆ ನನಗೆ ಕರೆದುಕೊಂಡು ಹೋಗಲು ಸ್ವಲ್ಪ ಹಿನಾಯ. ರವಿಶಂಕರ್‌ರವರ ತನಿ ಸಿತಾರ್ ವಾದನವಾಗಿದ್ದಲ್ಲಿ ಏನೂ ತೊಂದರೆಯಿರಲಿಲ್ಲ. ಆದರೆ ಅದರ ಜೊತೆಯಲ್ಲಿರುವ ಸರೋದ್? ಆಕೆಗೆ ಈ ಸರೋದ್ ವಾದ್ಯವನ್ನು ಮರೆತುಬಿಟ್ಟು ಸಿತಾರನ್ನೇ ಕೇಳಿ ಎಂದು ಮುಂಚೆಯೇ ತಿಳಿಸಿ ಕರೆದುಕೊಂಡು ಹೋದದ್ದಾಯಿತು. ಕಾರ್ಯಕ್ರಮದಲ್ಲಿ ಮೊದಲನೆಯ ರಾಗವೇ 'ಪೂರ್ಯಾ ಕಲ್ಯಾಣ್'. ಸರೋದ್‌ನಲ್ಲಿ ಅದರ ಮೊದಲ ಸಂಚಾರಗಳು ಮೂಡಿಬರುತ್ತಿದ್ದಂತೆಯೇ ನನಗೆ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಅಲಿ ಅಕ್ಬರ್ ಖಾನರು ಆ ರಾಗವನ್ನು ಸರದಿಯಲ್ಲಿ ಎತ್ತುವುದನ್ನೇ ಕಾಯಲಾರಂಭಿಸಿದೆ. ಆ ರಾಗವು ಮುಗಿಯುವ ವೇಳೆಗೆ ನನ್ನ ಮನಸ್ಸೇ ಅಲ್ಲೋಲಕಲ್ಲೋಲವಾಯಿತು. ನನಗೆ ಎಲ್ಲವೂ ಮರೆತಂತಾಯಿತು. ಅಂದು ವಿಪರೀತ ಮಳೆ. ನೆನೆದುಕೊಂಡು ಮನೆ ಸೇರಿದ್ದು ಲೆಕ್ಕವಿಲ್ಲ. ಮನಸ್ಸಿನಲ್ಲಿ ಸರೋದಿನ ಅದೇ ಗಂಭೀರವಾದ ನಾದ. ಆ ವಾದ್ಯದ ವಿಷಯದಲ್ಲಿ ನಾನೇಕೆ ಹೀಗೆ ಭಾವಿಸಿದ್ದೆ ಎಂಬ ಸಂಶಯ. ಈ ವಾದ್ಯವನ್ನು

ಕಲಿಯಲೇಬೇಕು. ಕಲಿತರೆ ಅಲಿ ಅಕ್ಬರ್ ಖಾನರ ಹತ್ತಿರವೇ ಕಲಿಯಬೇಕು ಎಂಬ ಉತ್ಕಟ ಆಕಾಂಕ್ಷೆ ಮೂಡಿತು'' ಎಂದರು.

ಎಲ್ಲದಕ್ಕೂ ಸಿದ್ಧ

ಆದರೆ ಅವರ ಬಳಿ ಸೇರುವುದು ಹೇಗೆ? ಆ ವೇಳೆಗೆ ರಾಜೀವ ತಾರಾನಾಥರು ಬಿ.ಎ. (ಆನರ್ಸ್) ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸೆಂಟ್ರಲ್ ಕಾಲೇಜಿನಲ್ಲಿ ಲೆಕ್ಚರರಾಗಿದ್ದರು. ಅವರ ಅಂದಿನ ಸ್ಥಿತಿಯಲ್ಲಿ ಆ ಉದ್ಯೋಗವೇ ಅವರ ಜೀವನದ ಆಧಾರ. ಅಂತಹುದರಲ್ಲಿಯೂ ಬೊಂಬಾಯಿಗೆ ಹೋದರು. ಅಲ್ಲಿ ವನವಾಸ ಮಾಡಿ ಕೊನೆಗೆ ಅಲಿ ಅಕ್ಬರ್ ಖಾನರಿಗೆ ಪರಿಚಯವಿದ್ದ ಜ್ಯೋತಿಷಿಯೊಬ್ಬರನ್ನು ಹಿಡಿದರು. ಅವರು ರಾಜೀವರ ಕಥೆಯನ್ನೆಲ್ಲಾ ಕೇಳಿ ಖಾನ್ ಸಾಹೇಬರಿಗೆ ಹೇಳಿ ಅವರ ಶಿಷ್ಯನನ್ನಾಗಿ ತೆಗೆದುಕೊಳ್ಳುವ ಏರ್ಪಾಡು ಮಾಡುವ ಭರವಸೆಯಿತ್ತರು - ಅದರಂತೆ ಅವರ ಪರಿಚಯ ಮಾಡಿಸಿದಾಗ ರಾಜೀವ ತಾರಾನಾಥರ ಪೂರ್ವೋತ್ತರಗಳನ್ನೆಲ್ಲಾ ಅಲಿ ಅಕ್ಬರ್ ಖಾನರು ವಿಚಾರಿಸಿಕೊಂಡರು. ಅನಂತರ ಆ ವಿದ್ಯೆಗೆ ಸಂಬಂಧಪಟ್ಟ ಕಷ್ಟನಿಷ್ಠೂರಗಳನ್ನು ಮುಚ್ಚುಮರೆಯಿಲ್ಲದೆ ತಿಳಿಸಿದರು. ಮೊದಲನೆಯದಾಗಿ ಈ ವಾದ್ಯದ ಶಿಕ್ಷಣವು ಪ್ರಾರಂಭವಾಗಬೇಕಾದುದು ಬಹು ಪೂರ್ವವಯಸ್ಸಿನಲ್ಲಿ ಅಂದರೆ ನಮ್ಮ ಕೈ ಬೆರಳು ಮುಂತಾದುವನ್ನು ಸಾಧನೆಯಿಂದ ಬಗ್ಗಿಸಬಹುದಾದ ವಯಸ್ಸಿನಲ್ಲಿ. ಆದರೆ ರಾಜೀವರಿಗೆ ಅದಕ್ಕೆ ಮೀರಿದ ವಯಸ್ಸು – 23. ಸರೋದ್ ಬಹಳ ಕಷ್ಟಸಾಧನೆಯಿಂದಲೂ ಪಳಗಿಸಿಕೊಳ್ಳಲು ಸಾಧ್ಯವಾಗದಂತಹ ವಾದ್ಯ ಮತ್ತು ಅದನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಲು ಇರುವ ಅನಿಶ್ಚಯ ಸ್ಥಿತಿ. ಆದರೆ ಇದನ್ನೆಲ್ಲಾ ಅನುಭವಿಸಲು ತಯಾರಾಗಿರುವುದಾಗಿ ಹೇಳಿದರು ರಾಜೀವ ತಾರಾನಾಥ್.

ಹದಿನೇಳು ವರುಷಗಳ ಹಿಂದೆ ರಾಜೀವ ತಾರಾನಾಥರ ಸರೋದ್ ಶಿಕ್ಷಣ ಸಾಂಗವಾಗಿ ಪ್ರಾರಂಭವಾಯಿತು. ಇದಕ್ಕಾಗಿ ಅಲಿ ಅಕ್ಬರ್ ಖಾನರೇ ಒಂದು ಚಿಕ್ಕ ಸರೋದ್ ವಾದ್ಯವನ್ನೂ ಶಿಷ್ಯನಿಗೆ ಕೊಟ್ಟರು. ತಾರಾನಾಥರ ಬಳಿ ವಾದ್ಯವೇ ಇರಲಿಲ್ಲವಲ್ಲ. ಮೊದಲನೆಯ ದಿನವೇ ಸ್ವಲ್ಪ ನಿರಾಸೆ ಅಂಕುರವಾಗಲು ಪ್ರಾರಂಭವಾಯಿತು. ಏಕೆಂದರೆ ಆ ವಾದ್ಯವನ್ನು ಬೆರಳುಗಳ ಉಗುರುಗಳಿಂದ ನುಡಿಸಬೇಕೆಂಬ ವಿಷಯವು ರಾಜೀವ್‌ರವರಿಗೆ ತಿಳಿಯದು. ಕೈಯೆಲ್ಲಾ ನೋಯಲು ಪ್ರಾರಂಭ. ಹೀಗೆ ಎಂಟು ಹತ್ತು ದಿನಗಳಾದ ಮೇಲೆ ಅವರು ಬೆಂಗಳೂರಿಗೆ ಹಿಂತಿರುಗಿದರು. ಸೆಂಟ್ರಲ್ ಕಾಲೇಜಿನ ತಮ್ಮ ಹುದ್ದೆಗೆ ರಾಜೀನಾಮೆ ಕೊಡವುದಕ್ಕೋಸ್ಕರ – ಕೆಲವು ದಿನಗಳನಂತರ ಅವರು ಪುನಃ ಬೊಂಬಾಯಿಗೆ ಹೋಗಿ ಉಸ್ತಾದ್ ಅಲಿ ಅಕ್ಬರ್ ಖಾನರ ಮನೆಗೆ ಹೋದಾಗ ಖಾನ್ ಸಾಹೇಬರಿಗೆ ಆಶ್ಚರ್ಯವೇ ಆಯಿತು. ಏಕೆಂದರೆ ಅವರ ಹತ್ತಿರ ಸರೋದ್ ವಿದ್ಯೆಯನ್ನು ಕಲಿಯಲು ಅನೇಕ ಉತ್ಸಾಹಿಗಳು ಈಗಾಗಲೇ ಬಂದಿದ್ದರು. ಹೊರಟು ಹೋದವರು ಹಿಂತಿರುಗುತ್ತಿರಲಿಲ್ಲ. ರಾಜೀವ್‌ರವರದು ಒಂದು ವಿಶೇಷವೇ ಸರಿ. ಅವರ ಹತ್ತಿರ ಅವಕಾಶವಾದಾಗಲೆಲ್ಲಾ ಶಿಕ್ಷಣ, ಜೀವನೋಪಾಯಕ್ಕಾಗಿ ಬಿಡುವಿನವೇಳೆಯಲ್ಲಿ

'ಆರ್ಯನ್‌ಪಾತ್' ಪತ್ರಿಕೆ ಮತ್ತು ಭಾರತೀಯ ವಿದ್ಯಾಭವನ ಶಾಲೆಯಲ್ಲಿ ಉದ್ಯೋಗ. ಮುಂದೆ ಆಲಿ ಅಕ್ಬರ್ ಖಾನರು ಕಲ್ಕತ್ತೆಯಲ್ಲಿ ನೆಲೆಸಿದ್ದಾಗ ಅಲ್ಲಿ ಇದೇ ಪಾಠ ಕ್ರಮ ಆದರೆ ಉದ್ಯೋಗವಿಲ್ಲ, ಹಣವಿಲ್ಲ, ತಾಪತ್ರಯ.

ಎಳೆ ವಯಸ್ಸಿನಿಂದ

ರಾಜೀವ ತಾರಾನಾಥರಿಗೆ ಸಂಗೀತದಲ್ಲಿ ಅಭಿರುಚಿ ಮತ್ತು ಕಷ್ಟನಿಷ್ಠೂರಗಳನ್ನು ಧೈರ್ಯದಿಂದ ಎದುರಿಸುವ ಸಂಯಮ ಈ ಎರಡೂ ಗುಣಗಳೂ ಅನುವಂಶಿಕವಾದುವು. ಅವರು ಪಂಡಿತ ತಾರಾನಾಥರ ಮಗ ಎಂದಮೇಲೆ ಈ ವಿಷಯಗಳನ್ನು ಒತ್ತಿ ಹೇಳಲೇಬೇಕಾಗಿಲ್ಲ. ಮನೆಯಲ್ಲಿ ಬಹಳ ಶಿಸ್ತು, ಕ್ಲುಪ್ತವಾದ ವೇಳೆಯಲ್ಲಿ ಏಳುವುದು, ವ್ಯಾಯಾಮ, ಸಂಗೀತ ಸಾಧನೆ, ಪಾಠ ಪ್ರವಚನ ಮುಂತಾದುವುಗಳಲ್ಲಿ ಬಹು ಕಟ್ಟುನಿಟ್ಟು. ಪಂಡಿತ ತಾರಾನಾಥರು ನಾನಾ ಕ್ಷೇತ್ರಗಳಲ್ಲಿ ಪ್ರಸಿದ್ಧ ವ್ಯಕ್ತಿಯಾದ್ದರಿಂದ ಅವರ ಮನೆಯಲ್ಲಿ ವೈದ್ಯ, ಸಾಹಿತಿ, ಸಂಗೀತಗಾರ, ರಾಜಕಾರಣಿ ಮುಂತಾದವರ ಕೂಟಗಳು ಸರ್ವೇ ಸಾಧಾರಣವಾಗಿರುತ್ತಿದ್ದವು. ಅದರಲ್ಲಿಯೂ ಅನೇಕ ಹಿರಿಯ ಸಂಗೀತ ವಿದ್ವಾಂಸರೂ ಅವರ ಮನೆಯಲ್ಲೇ ತಂಗುವುದು. ಅವರ ಸಂಗೀತ ಕಚೇರಿಗಳಾಗುವುದು ಇವೆಲ್ಲಾ ಸರ್ವೇಸಾಮಾನ್ಯವಾಗಿದ್ದಿತು. ತಾರಾನಾಥರು ಹಾಡುತ್ತಿದ್ದರು. ತಬಲ ನುಡಿಸುತ್ತಿದ್ದರು. ಮಗನಿಗೆ ಚಿಕ್ಕಂದಿನಲ್ಲೇ ತಬಲಾ ವಾದನದಿಂದ ಸಂಗೀತ ಶಿಕ್ಷಣವನ್ನೂ ಪ್ರಾರಂಭಿಸಿದರು.

"ನನಗೆ ಇನ್ನೂ ಬಲಗೈ-ಎಡಗೈಗಳಿಗೆ ವ್ಯತ್ಯಾಸ ತಿಳಿಯದ ದಿನಗಳವು" ಎನ್ನುತ್ತಾರೆ ರಾಜೀವ್. "ಆದರೆ ಈ ತಬಲದ ಠಣತ್ಕಾರ, ಜೊತೆಗೆ ಸಂಸ್ಕೃತ, ಕನ್ನಡ, ಉರ್ದು, ಈ ಸಂಗೀತ ಪರಿಷೆಗಳು ಅವು ಬಹುಶಃ ನನಗೆ ಅರ್ಥವಾಗದಿದ್ದರೂ ಅವನ್ನೆಲ್ಲಾ ಕೇಳುತ್ತಿದ್ದರೆ ಏನೋ ಅಲೌಕಿಕ ಆನಂದ. ನಮ್ಮ ಮನೆಯಲ್ಲಿ ಹಿರಿಯ ಹಿಂದೂಸ್ಥಾನೀ ಸಂಗೀತ ವಿದ್ವಾಂಸರೆಲ್ಲರ ಗ್ರಾಮಫೋನ್ ರಿಕಾರ್ಡುಗಳಿದ್ದುವು. ಅವುಗಳಲ್ಲಿ ಅಬ್ದುಲ್ ಕರೀಂ ಖಾನರ ರಿಕಾರ್ಡ್‌ಗಳೆಂದರೆ ನನಗೆ ಬಹು ಇಷ್ಟ. ಇದಲ್ಲದೇ ಇನ್ನೂ ಓದಿ ಬರೆಯಲು ಬಾರದಿದ್ದರೂ ನನ್ನ ಮೂರು ನಾಲ್ಕನೆಯ ವಯಸ್ಸಿನಲ್ಲೇ ಇಂತಹ ಹಾಡಿನದೇ, ಇಂತಹವರದೇ ರಿಕಾರ್ಡ್ ತೆಗೆದುಕೊಂಡು ಬಾ ಅಂದರೆ ತರುತ್ತಿದ್ದೆ" ಅನ್ನುತ್ತಾರೆ ರಾಜೀವ್ ತಾರಾನಾಥರು ಆ ದಿನಗಳನ್ನು ನೆನೆಯುತ್ತಾ.

ಬಾಲ್ಯದ ಪಾಠ

"ನನಗೆ ಸಂಗೀತದಲ್ಲಿ ಕ್ರಮಬದ್ಧ ಶಿಕ್ಷಣ ನಮ್ಮ ತಂದೆಯರಿಂದಲೇ " ಎಂದು ಮುಂದುವರೆಸಿದರು ರಾಜೀವ ತಾರಾನಾಥರು. "ತಂದೆಯವರು ಸಂಗೀತದಲ್ಲಿ ಸ್ವರಶುದ್ಧಿಗೆ ಇರುವ ಪ್ರಾಮುಖ್ಯತೆಯನ್ನು ಒತ್ತಿ ಒತ್ತಿ ಹೇಳುತ್ತಿದ್ದುದೇ ಅಲ್ಲದೇ ಅದನ್ನು ಭೈರವ ರಾಗದ ಮೂಲಕ ಮತ್ತು ಅನೇಕ ಚಿಕ್ಕ ಪುಟ್ಟ ಚೀಜುಗಳು ಮೂಲಕ ಮನನ ಮಾಡಿಸುತ್ತಿದ್ದರು. ಸಂಗೀತದಲ್ಲಿ ಸ್ವರಶುದ್ಧತೆ ರಾಗಭಾವ ಮತ್ತು ಸ್ವಾನುಭವ ಇವು ಮೂರು ಅತ್ಯವಶ್ಯಕವೆಂದು,

ಅವರು ಮನನ ಮಾಡಿಸಿದ್ದರು. ನನಗೆ ಏಳು ಎಂಟು ವಯಸ್ಸಾಗುವ ವೇಳೆಗೆ ನಮ್ಮ ತಂದೆಯವರ ದೇಹಸ್ಥಿತಿಯು ಶಿಥಿಲವಾಗಿ ಅವರೇ ನೇರವಾಗಿ ಪಾಠ ಮಾಡಿಸಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಮನೆಗೆ ಬರುತ್ತಿದ್ದ ಅನೇಕ ವಿದ್ವಾಂಸರು ನನಗೂ ಸ್ವಲ್ಪ ಸ್ವಲ್ಪ ಪಾಠ ಹೇಳಿಕೊಡಲು ಪ್ರಾರಂಭಿಸಿದರು. ಅವರಲ್ಲಿ ವೆಂಕಟರಾವ್ ರಾಮದುರ್ಗ್, ಪಂಚಾಕ್ಷರೀ ಗವಾಯ್ ಮುಂತಾದವರನ್ನು ನೆನೆಯುತ್ತೇನೆ. ಅದರಲ್ಲಿಯೂ ಪಂಚಾಕ್ಷರಿಯವರು ವಾತ್ಸಲ್ಯದಿಂದ ಹಾಗೂ ತಾಳ್ಮೆಯಿಂದ ನನಗೆ ಪಾಠ ಮಾಡಿಸಿದ ಜೋಗಿಯ ಮತ್ತು ಮುಲ್ತಾನಿ ರಾಗಗಳನ್ನು ಮರೆಯಲಾರೆ.''

ರಾಜೀವ ತಾರಾನಾಥರಿಗೆ ಗುರುಮುಖೇಣ ಮೊದಲ ಬಾರಿಗೆ ಕ್ರಮಬದ್ಧ ಶಿಕ್ಷಣವೆಂದರೆ ದಿವಂಗತ ''ಶಂಕರ ರಾವ್ ಜೋಷಿ'' (ದೇವಗಿರಿ) ಅವರಿಂದ. ದೇಹಾರೋಗ್ಯದ ನಿಮಿತ್ತ ಮಗನ ಸಂಗೀತ ಶಿಕ್ಷಣಕ್ಕೆ ತಾವು ನೇರವಾಗಿ ಗಮನಕೊಡಲು ಸಾಧ್ಯವಾಗದಿದ್ದರಿಂದ ಯೋಗ್ಯವಾದ ಒಬ್ಬ ಗುರುವು ಅವಶ್ಯಕವೆಂದು ಪಂಡಿತ ತಾರಾನಾಥರು ಜೋಷಿಯವರಿಂದ ಶಿಕ್ಷಣ ಕೊಡಿಸಲು ನಿರ್ಧರಿಸಿದರು. ಇದಕ್ಕಾಗಿ ಧಾರವಾಡದಲ್ಲಿದ್ದ ಜೋಷಿಯವರನ್ನು ಬೆಂಗಳೂರಿಗೆ ಬರಲು ಒತ್ತಾಯ ಮಾಡಿ ಇಲ್ಲಿ ಸಂಗೀತ ಪಾಠಗಳನ್ನು ಗೊತ್ತುಮಾಡಿಕೊಡುವ ಭರವಸೆಯನ್ನೂ ಕೊಟ್ಟಿದ್ದರು.

ಜೋಷಿಯವರು ಬಂದ ಸಂದರ್ಭ ಎಂಥದ್ದು? ಅದನ್ನು ತಾರಾನಾಥರ ಮಾತಿನಲ್ಲೇ ಕೇಳಿ :

''ಶಂಕರರಾವ್ ಜೋಷಿಯವರು ಬೆಂಗಳೂರಿಗೆ ಬಂದ ದಿನ 31-10-42, ರೈಲಿಳಿದು ನೇರವಾಗಿ ನಮ್ಮ ಮನೆಗೇ ಬಂದರು. ಆದರೆ ಅಲ್ಲಿ ಸ್ವಲ್ಪ ಅವ್ಯವಸ್ಥೆ. ನಮ್ಮ ತಂದೆಯವರು ನಿಧನರಾಗಿ ಕೇವಲ ಒಂದೆರಡು ಗಂಟೆಗಳು ಮಾತ್ರವಾಗಿದ್ದಿತು. ಆದರೆ ನಮ್ಮ ತಾಯಿಯವರು ಜೋಷಿಯವರನ್ನು ಒಳಗೆ ಕರೆದು ಏನೆಂದು ವಿಚಾರಿಸಿ ಆದುದನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲವೆಂದು ಹೇಳಿ ತಾವು ಊರಿಗೆ ಹಿಂತಿರುಗಬೇಕಾದ ಅವಶ್ಯಕತೆಯಿಲ್ಲವೆಂದು ನಮ್ಮ ತಂದೆಯವರು ಹೇಳಿದಂತೆ ಪಾಠ ಪ್ರವಚನಗಳನ್ನು ನಡೆಸಿಕೊಂಡು ಹೋಗಬಹುದೆಂದೂ ಸಮಾಧಾನ ಮಾಡಿದರು. ಇದರ ಜೊತೆಗೆ ಸೆಂಟ್ರಲ್ ಕಾಲೇಜಿನ ಪ್ರೊಫೆಸರ್ ಕೆ.ಎಸ್.ಕೆ. ಅಯ್ಯಂಗಾರ್ಯರು ತಾವೂ ನನ್ನೊಡನೆ ಜೋಷಿಯವರಿಂದ ಸಂಗೀತ ಕಲಿಯಲು ಇಚ್ಛೆಪಡುತ್ತೇನೆ ಎಂಬ ಭರವಸೆಯನ್ನು ಕೊಟ್ಟರು'' ಹೀಗೆ ಶಂಕರರಾವ್ ಜೋಷಿಯವರಲ್ಲಿ ಸುಮಾರು 9 ವರ್ಷಗಳ ಕಾಲ ರಾಜೀವ ತಾರಾನಾಥರ ಸಂಗೀತ ವ್ಯಾಸಂಗ ನಡೆಯಿತು.

ಕಠಿಣವಾದ ವಾದ್ಯ

ರಾಜೀವ್ ತಾರಾನಾಥರಿಗೆ ಈಗ 40 ವರ್ಷವಯಸ್ಸು. ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ. ಇಂಗ್ಲೀಷ್ ಸಾಹಿತ್ಯ ಮತ್ತು ಅದರ ವಿಮರ್ಶೆಯಲ್ಲಿ ಬಹು ಪ್ರತಿಭಾವಂತರೆಂದು ಪರಿಗಣಿಸಲ್ಪಟ್ಟಿದ್ದಾರೆ. ಹಾಗೆಯೇ ಸರೋದ್ ವಾದನದಲ್ಲಿಯೂ ಅವರಿಗೆ ಸಿದ್ಧಿಯಿದೆ. ಇದು

ಸಾಧಾರಣವಾದ ಸಾಧನೆಯೇನಲ್ಲ. ನಮ್ಮಲ್ಲಿ ವೈಣಿಕರ ಸಂಖ್ಯೆಗೆ ಹೋಲಿಸಿದಲ್ಲಿ ಗೋಟುವಾದ್ಯ ವಾದಕರ ಸಂಖ್ಯೆ ಕಡಿಮೆ. ಹಿಂದೂಸ್ಥಾನೀ ಸಂಗೀತದಲ್ಲಿಯೂ ಹಾಗೆಯೇ. ಸಿತಾರ್‌ವಾದಕರ ಸಂಖ್ಯೆಗೆ ಹೋಲಿಸಿದರೆ ಸರೋದ್ ವಾದಕರ ಸಂಖ್ಯೆ ಕಡಿಮೆ. ಇದಕ್ಕೆ ಕಾರಣ – ವಾದ್ಯವನ್ನು ಪಳಗಿಸಿಕೊಳ್ಳುವುದು ಕಷ್ಟ. ಸರೋದ್ ಬಹು ಕಷ್ಟಸಾಧ್ಯವಾದ ವಾದ್ಯ. ಸ್ವರ ಸ್ಥಾನಗಳನ್ನು ಸೂಚಿಸುವ ಮೆಟ್ಟಿಲುಗಳಿಲ್ಲ. ಬರೇ ಒಂದು ಉಕ್ಕಿನ ತಗಡು-ಬೆರಳುಗಳು ಜಾರಿ ಹೋಗುವಂತಹುದು. ಜೊತೆಗೆ ಸಿತಾರ್‌ನಂತೆಯೇ ಬಹುಸಂಖ್ಯೆಯ ತರಬ್ ಅಂದರೆ ಪ್ರತಿಧ್ವನಿಸುವ ತಂತಿಗಳು. ಇದನ್ನು ಬಹು ಕಷ್ಟಸಾಧನೆ ಹಾಗೂ ಜಾಣ್ಮೆಯಿಂದ ಪಳಗಿಸಿ ಕೊಂಡಿದ್ದಾರೆ. ವಿಶ್ವವಿದ್ಯಾನಿಲಯದ ಶಿಕ್ಷಣದ ಫಲವಾದ ವಿಚಾರಶೀಲತೆ, ಜಿಜ್ಞಾಸೆ ಹಾಗೂ ವಿಧ ವಿಧ ಪ್ರಯೋಗಗಳಿಂದ ವಾದ್ಯವನ್ನು ನುಡಿಸುವುದರಲ್ಲಿ ವಿಶೇಷ ಸಿದ್ಧಿಯನ್ನು ಪಡೆದಿದ್ದಾರೆ.

ಅದೂ ಅಂತಹ ಸಾಧಾರಣ ಮಟ್ಟದ್ದೇನೂ ಅಲ್ಲ. ನಿದರ್ಶನವಾಗಿ ಈಗ ಐದಾರು ವರುಷಗಳ ಹಿಂದೆ ಯಾವುದೋ ಕೂಟದಲ್ಲಿ ಟೇಪ್ ರಿಕಾರ್ಡ್‌ನಿಂದ ಸಂಗೀತ ಹೊಮ್ಮುತ್ತಿತ್ತು. ಅದು ಚಂದ್ರನಂದನ್ ರಾಗದ ನಿರೂಪಣೆ– ಸರೋದ್ ವಾದ್ಯದಲ್ಲಿ. ರಾಗ ಮತ್ತು ವಾದ್ಯದಿಂದ ಅದು ಅಲಿ ಅಕ್ಬರ್ ಖಾನರದೇ ಎಂದು ತೀರ್ಮಾನಿಸಿದೆವು. ಅದೇ ಘಾತ, ಅದೇ ಲಯಕಾರಿ ರಾಗವು ಮುಗಿದನಂತರ ತಿಳಿಯಿತು - ಅದು ರಾಜೀವ್ ತಾರಾನಾಥರದೆಂದು. ರಾಜೀವ್ ತಾರಾನಾಥರು ಆ ಮಟ್ಟದ ಕೌಶಲ್ಯವನ್ನು ರೂಢಿಸಿಕೊಂಡಿದ್ದಾರೆ. 1962ರಲ್ಲಿ ರಾಜ್ಯ ಸಂಗೀತ ನಾಟಕ ಆಕಾಡೆಮಿಯಲ್ಲಿ ನಡೆದ ಅವರ ಕಚೇರಿಯ ಟೇಪ್ ಮುದ್ರಿಕೆ ಅದು.

ಸರೋದ್ ವಾದ್ಯದ ಗುಣಾವಗುಣ ಮತ್ತು ಸಾಧ್ಯಾಸಾಧ್ಯತೆಗಳನ್ನು ಪ್ರಸ್ತಾಪಿಸಿದಾಗ ''ಕುರೂಪಿಯೆನ್ನಿಸಿಕೊಂಡವಳನ್ನು ಆಕರ್ಷಣೀಯವಾಗುವಂತೆ ಮಾಡುವುದು ಎಷ್ಟು ಸುಲಭವೋ ಈ ವಾದ್ಯ ಸಂಗೀತವನ್ನೂ ಆಕರ್ಷಣೀಯವಾಗುವಂತೆ ಮಾಡುವುದು ಅಷ್ಟೇ ಸುಲಭ. ಅಲ್ಲದೇ ವಾತಾವರಣದಲ್ಲಿ ಶೈತ್ಯವು ಹೆಚ್ಚಿದರೆ ವಾದ್ಯಕ್ಕೂ ತಲೆನೋವು. ಧ್ವನಿ ಕುಗ್ಗುತ್ತದೆ. ತಂತಿಗಳು ಕಿತ್ತುಹೋಗುತ್ತವೆ. ಈ ಎಡರು ತೊಡರುಗಳನ್ನು ಎದುರಿಸಿ, ನಿಗ್ರಹಿಸಿ ವಾದ್ಯವನ್ನು ಪಳಗಿಸಿಕೊಳ್ಳಬೇಕು. ಅದಕ್ಕೆ ತಾಳ್ಮೆ ಬೇಕು. ಕಷ್ಟವಾದುದನ್ನೂ ಸಾಧಿಸಬಲ್ಲೆನೆಂಬ ಕೆಚ್ಚು ಬೇಕು. ಅದಿಷ್ಟೂ ಇದ್ದು ವಾದ್ಯವನ್ನು ಪಳಗಿಸಿಕೊಂಡಲ್ಲಿ ಆ ವಾದ್ಯದ್ದೇ ಒಂದು ವಿಶೇಷ ಸೊಗಸು. ನಾದದ ಗಾಂಭೀರ್ಯ ಮಿನುಗುವ ಮುತ್ತುಗಳನ್ನು ಪೋಣಿಸಿದಂತಹ ಸ್ವರ ಶ್ರೇಣಿಗಳು. ಲಯಕಾರಿ. ಇದೆಲ್ಲಾ ಸರೋದ್ ಸಂಗೀತದ ಸೊಬಗನ್ನು ಎತ್ತಿ ಸಾರುತ್ತವೆ. ಇಂತಹ ಕಷ್ಟಮಯ ವಾದ್ಯಕ್ಕೆ ಒಂದು ವಿಶೇಷ ವರ್ಚಸ್ಸನ್ನೂ ಮತ್ತು ವ್ಯಕ್ತಿತ್ವವನ್ನೂ ಕೊಟ್ಟ ಖ್ಯಾತಿ ನಮ್ಮ ಗುರು ಉಸ್ತಾದ್ ಅಲಿ ಅಕ್ಬರ್ ಖಾನರದು'' ಎನ್ನುತ್ತಾರೆ ರಾಜೀವ್. ಅವರಿಗೆ ಅಪಾರ ಗುರುಭಕ್ತಿ, ಅಲ್ಲದೆ ಖಾನ್ ಸಾಹೇಬರ ಪ್ರವಾಹದಂತೆ ಹರಿದು ಬರುವ ಆ ಮನೋಧರ್ಮ, ಆ ಲಯ ವಿನ್ಯಾಸ, ತನ್ಮಯತೆ ಇವುಗಳನ್ನು ಪದೇ ಪದೇ ಸ್ಮರಿಸಿಕೊಳ್ಳುತ್ತಲೇ ಇರುತ್ತಾರೆ.

ಗುರುವಿನ ವರ

ಇಂದು ರಾಜೀವ್ ತಾರಾನಾಥರ ಜೀವನವು ನಾಣ್ಯದಂತೆ ಎರಡು ಮುಖವಾಗಿದೆ. ಒಂದು – ಅಧ್ಯಾಪಕ, ತರುಣ ಸಾಹಿತಿ, ಬುದ್ಧಿ ಜೀವಿಗಳ ಪ್ರಾಕಾರ, ಬೆಳೆದು ಬರುತ್ತಿರುವ ಪೀಳಿಗೆಯ ಆಶೋತ್ತರಗಳ ಬಗೆಗೆ ಸಹಾನುಭೂತಿ ಮತ್ತು ಸಹಭಾವನೆ. ಸಂಸ್ಕಾರ ಚಿತ್ರದಲ್ಲಿ ಸಂಗೀತವನ್ನು ನಿಯೋಜಿಸಿದ್ದಾರೆ. ಎರಡನೆಯದು - ಕಲಾವಿದ. ಸಂಗೀತದ ನಾನಾ ಪ್ರಕಾರಗಳ ಪರಿಚಯ, ಅನುಭವ. ಸರೋದ್ ವಾದ್ಯದಲ್ಲಿ ತಾಂತ್ರಿಕ ಮತ್ತು ಭಾವ ಸಿದ್ಧಿ. ಎರಡೂ ಭಾಗಗಳೂ ತೂಕ ಮಾಡಿದಲ್ಲಿ ಸಮ ಸಮ. ಸಂಗೀತದ ಸಂಪರ್ಕವಿಲ್ಲದೆಯೇ ಇಂಗ್ಲೀಷ್ ಸಾಹಿತ್ಯದಲ್ಲಿ ತಮಗಿರುವ ಪಾಂಡಿತ್ಯದಿಂದ ಅಧ್ಯಾಪಕರಾಗಿದ್ದಾರೆ. ಅಧ್ಯಾಪಕರಾಗದಿದ್ದಲ್ಲಿ ಸರೋದ್ ವಾದನದಲ್ಲಿಯೇ ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆಯಬಹುದಾದ ಸಿದ್ಧಿಯಿದೆ ಅವರಿಗೆ. ಹಿಂದೂಸ್ಥಾನೀ ಸಂಗೀತಕ್ಷೇತ್ರದಲ್ಲಿ ಕರ್ನಾಟಕವು ಮುಖ್ಯ ಸ್ಥಾನ ಪಡೆದಿದೆ. ಅನೇಕ ರಾಷ್ಟ್ರೀಯ ಶ್ರೇಣಿಯ ಕಲಾವಿದರು ಕರ್ನಾಟಕದಲ್ಲಿ ಹುಟ್ಟಿ ತಯಾರಾದವರು. ಆದರೆ ಅವರೆಲ್ಲಾ ಬಹುತೇಕ ಗಾಯಕರು. ವಾದ್ಯವಾದಕರ ಅದರಲ್ಲಿಯೂ ತಂತೀವಾದ್ಯ ವಾದಕರ ಸಂಖ್ಯೆ ಬಹು ಸ್ವಲ್ಪ. ಅದರಲ್ಲಿಯೂ ಸರೋದ್ ವಾದಕರು ಒಬ್ಬರೇ – ರಾಜೀವ್ ತಾರಾನಾಥ್. ★ ★ ★ ★ ★

ಸುಧಾ, 1972

28. ನೃತ್ಯ ಕಲೆಗೆ ಮೈಸೂರು ರಾಜಮನೆತನದ ಪ್ರೋತ್ಸಾಹ

ಮೈಸೂರು ರಾಜಮನೆತನದವರಿಂದ ನೃತ್ಯಕಲೆಗೆ ಪ್ರೋತ್ಸಾಹದ ವಿಷಯ ಪ್ರಸ್ತಾಪಿಸುವುದಕ್ಕೆ ಮೊದಲು ಈ ರಾಜಮನೆತನದ ಸಂಕ್ಷಿಪ್ತ ಇತಿಹಾಸವನ್ನೂ ತಿಳಿಯುವುದು ಅವಶ್ಯಕ. ಯದುರಾಯ - ಕೃಷ್ಣರಾಯರಿಂದ ಪ್ರಾರಂಭವಾದ ಈ ಮನೆತನ ಬಹುಕಾಲ ಒಂದು ದೊಡ್ಡ ಪಾಳೆಯಪಟ್ಟಾಗಿ ನಡೆದುಕೊಂಡು ಬಂದಿತು. ಯದುರಾಯರಿಂದ ಎರಡು ಶತಮಾನ ಗಳ ಅನಂತರ ಪಟ್ಟಕ್ಕೆ ಬಂದ ಈ ರಾಜಪೀಳಿಗೆಯಲ್ಲಿ ಒಂಭತ್ತನೆಯವರಾದ ರಾಜಒಡೆಯರ ಕಾಲದಲ್ಲಿ ಮೈಸೂರು, ನಿಜವಾದ ಅರ್ಥದಲ್ಲಿ ರಾಜ್ಯವಾಯಿತು. ನಾಲ್ಕಾರು ಸೀಮೆಗಳನ್ನು ಜಯಿಸಿ ರಾಜ್ಯದ ಎಲ್ಲೆಯನ್ನು ಗಣನೀಯ ಪ್ರಮಾಣಕ್ಕೆ ವಿಸ್ತರಿಸಿದ ರಾಜ ಒಡೆಯರು, ಅರಮನೆಯಲ್ಲಿ ನಡೆಯಬೇಕಾದ ಕಾರ್ಯಕ್ರಮಗಳಿಗೆ ಒಂದು ನಿರ್ದಿಷ್ಟ ರೂಪಕೊಟ್ಟರು. ನಿಯಮಗಳನ್ನು ನಿರ್ಧರಿಸಿದರು. ಅದರಲ್ಲಿ ಉತ್ಸವಾದಿಗಳ ಸಂದರ್ಭಗಳ ಕಟ್ಟಳೆಗಳಲ್ಲಿ ವೇಶ್ಯಾಸ್ತ್ರೀಯರಿಂದ ನೃತ್ಯಕಾರ್ಯಕ್ರಮಗಳೂ ಸೇರಿದ್ದುವು. ಇದನ್ನೇ ಮುಂದೆ ರಾಜ್ಯವಾಳಿದ ಒಡೆಯರುಗಳೆಲ್ಲಾ ಅನುಸರಿಸಿಕೊಂಡು ಬಂದರು. ಇದರಲ್ಲಿ ಕೆಲವರು ಸಂಪ್ರದಾಯದಂತೆ ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಂಡುಬಂದವರು. ಸ್ವತಃ ರಸಿಕರಾಗಿದ್ದು, ಈ

ಕಾರ್ಯಕ್ರಮಗಳನ್ನು ಪೋಷಿಸಿಕೊಂಡು ಬಂದವರು ಇನ್ನು ಕೆಲವರು. ಹೀಗೆ ಅರಮನೆಯ ನಾನಾ ಕಾರ್ಯಕಲಾಪಗಳಲ್ಲಿ ನೃತ್ಯವೂ ಹಾಸುಹೊಕ್ಕಾಗಿತ್ತು.

ರಾಜ ಒಡೆಯರ ನಂತರ ಒಬ್ಬರ ಹಿಂದೆ ಒಬ್ಬರಂತೆ ಚಾಮರಾಜ ಒಡೆಯರು ಮತ್ತು ಇಮ್ಮಡಿ ರಾಜ ಒಡೆಯರವರ ರಾಜ್ಯಭಾರ. ಇವರಲ್ಲಿ ಚಾಮರಾಜ ಒಡೆಯರದು ಸ್ವಲ್ಪ ರಸಿಕ ಪ್ರವೃತ್ತಿ. ಇಮ್ಮಡಿ ರಾಜ ಒಡೆಯರು ಆಳಿದುದು ಕೇವಲ ಒಂದೇ ವರುಷ. ಇವರ ನಂತರ ಪಟ್ಟಕ್ಕೆ ಬಂದವರು ರಣಧೀರ ಕಂಠೀರವ ನರಸಿಂಹರಾಜ ಒಡೆಯರು. ವಿಜಯನಗರ ಸಾಮ್ರಾಜ್ಯದ ಪತನಾನಂತರ ಅಲ್ಲಿ ವಿಜೃಂಭಿಸುತ್ತಿದ್ದ ಸಂಸ್ಕೃತಿಯು ಬಹುತೇಕ ನೆಲೆಸಿದುದು ಎರಡು ಕೇಂದ್ರದಲ್ಲಿ - ತಂಜಾವೂರು ಮತ್ತು ಮೈಸೂರು. ಈಗ ತಂಜಾವೂರನ್ನು ಆಳಿದವರ ಬಗೆಗೂ ಪ್ರಸ್ತಾಪಿಸಬೇಕಾಗಿದೆ. ವಿಜಯನಗರ ಪತನಾನಂತರ ತಂಜಾವೂರಿನಲ್ಲಿ ಮೊದಲು ನಾಯಕ ವಂಶದವರೂ, ಅನಂತರ ಮಹಾರಾಷ್ಟ್ರ ವಂಶದವರೂ ರಾಜ್ಯವಾಳಿದರು. ಚೇವಪ್ಪನಾಯಕ ಮೊದಲ ರಾಜ. ನಾಯಕವಂಶದಲ್ಲಿ ಕ್ರಿ.ಶ. 1550-80ರಲ್ಲಿ ಆಳಿದವ. ಅನಂತರ ರಘುನಾಥ ನಾಯಕ 1600-31ರ ಅಂತರದಲ್ಲಿ ರಾಜ್ಯವಾಳಿದವ. ಈ ಇಬ್ಬರೂ ರಾಜ ಒಡೆಯರ ಸಮಕಾಲೀನರು. ಅನಂತರ ಬಂದವ ವಿಜಯರಾಘವ ನಾಯಕ. ಕಂಠೀರವ ನರಸಿಂಹರಾಜ ಒಡೆಯರ ಸಮಕಾಲೀನ.

ಕಂಠೀರವರ ಕಾಲದ ವೇಳೆಗೆ ಅರಮನೆಯ ಕಟ್ಟು ಕಟ್ಟಳೆ, ಸಂಪ್ರದಾಯಗಳು ಒಂದು ಸ್ಥಿರತೆಗೆ ತಲುಪಿದ್ದುವು. ಹಿಂದಿನಿಂದಲೂ ರಾಜಾಸ್ಥಾನಗಳಿಗೆ ಇರಬೇಕಾದ ಸಂಪ್ರದಾಯ ಲಕ್ಷಣಗಳೆಲ್ಲವೂ ಇವರ ಕಾಲದಲ್ಲಿ ಅರಮನೆಯ ಕಾರ್ಯಕಲಾಪಗಳಲ್ಲಿ ಕಂಡುಬರುತ್ತಿದ್ದುವು. ಕಂಠೀರವರ ಕಾಲದಲ್ಲಿ ಮೈಸೂರು ರಾಜ್ಯದ ರಾಜಧಾನಿ - ಶ್ರೀರಂಗಪಟ್ಟಣ. ರಣಧೀರರೆನಿಸಿ ಕೊಂಡ ಈ ಕಂಠೀರವರ ಸಾಹಸ ಕಾರ್ಯಗಳೆಲ್ಲಾ ಇತಿಹಾಸ ಓದಿದವರಿಗೆ ತಿಳಿದ ವಿಷಯವೇ. ಅವರ ಅರಮನೆಯ ಉತ್ಸವಾದಿಗಳ ವೈಭವವನ್ನು ಗೋವಿಂದ ವೈದ್ಯನು ಕಂಠೀರವ ನರಸರಾಜೇಂದ್ರ ವಿಜಯದಲ್ಲಿ ವರ್ಣಿಸಿದ್ದಾನೆ. ಅದರಲ್ಲಿ ನೃತ್ಯಕ್ಕೆ ಸಂಬಂಧಿಸಿದಂತೆ ಆರಿಸಿದ ಭಾಗ—

ಆ ಸಮಯದಲಿ ಸೂರ್ಯತ್ರಯ ಮಂಗಳ
ಘೋಷವೆಸೆಯೆ ನಸುನಗುತ
ಭೂಸುರ ಬಿರುದಿನ ನಾಟ್ಯವಧುಗಳು ಸಂ।
ತೋಷದೆ ನಡೆತಂದರೊಲಿದು ॥
ತೊಳಗುವ ನವರತ್ನಕಾಸೆಯ ಸರ್ವಾಂಗ
ಕಳವಟ್ಟಿ ಮಣಿಭೂಷಣದ
ಥಳಥಳಿಸುವ ಮುದ್ದುಮೊಗದ ನರ್ತಕಿಯರು
ಘಳಿಲನೆ ನಡೆತಂದರಾಗ

ಕಾಂಡಪಟ ಸರಿಯಿತು. ಈ ನರ್ತಕಿಯರು ಪುಷ್ಪಾಂಜಲಿ ಮಾಡಿದರು. ಅನಂತರ:

ನರಸಿಂಹಸ್ತುತಿಗೀತ ಪ್ರಬಂಧವ
ಪಿರಿದು ಸುಳಾದಿ ತಾಳದಲಿ
ಕರದಭಿನಯಗೂಡಿ ಕಡುಕುಶಲದೆ ನಾಟ್ಯ
ದಿರವ ಮೆರೆದರಂಗನೆಯರು
ಪಿರಿದು ಪ್ರಬಂಧ ಜಕ್ಕಿಣಿ ರಾಜಕೀರನ
ಮೆರೆವ ಕಟ್ಟಳೆಯಾಟಗಳ
ದೊರೆ ರಾಯ ನರಸರಾಜೇಂದ್ರಗೆ ಸಂತಸ
ದೊರೆಯಲಾಡಿದರಂಗನೆಯರು

ಇಲ್ಲಿ ನರ್ತಕಿಯರು, ಕಂಠೀರವ ನರಸರಾಜೇಂದ್ರನ ಆಸ್ಥಾನದಲ್ಲಿ ನಾಟ್ಯವಾಡಿದ ವರ್ಣನೆ ಇದೆ. ಅವರು ಧರಿಸಿದ ನಾಟ್ಯೋಚಿತವಾದ ಉಡಿಗೆ, ತೊಡಿಗೆ ಮತ್ತು ನರ್ತಿಸಿದ ಕೃತಿಗಳ ಪ್ರಸ್ತಾವವಿದೆ. ರಣಧೀರರ ನಂತರ ಆಳಿದವರು ದೊಡ್ಡ ದೇವರಾಜ ಒಡೆಯರು. ಅನಂತರ ಪಟ್ಟಕ್ಕೆ ಬಂದವರು ಚಿಕ್ಕದೇವರಾಜ ಒಡೆಯರು.

1673-1704ರ ಮಧ್ಯೆ ರಾಜ್ಯವಾಳಿದ ಚಿಕ್ಕದೇವರಾಜ ಒಡೆಯರ ಕಾಲ ಮೈಸೂರಿನ ಇತಿಹಾಸದಲ್ಲಿ ಬಹುಮುಖ್ಯವಾದುದು. ಸಾರಸ್ವತ ಕ್ಷೇತ್ರದಲ್ಲಿ ಅದು ಒಂದು ಸ್ವರ್ಣಯುಗವೆನ್ನ ಬೇಕು. ಚಿಕದೇವರಾಜನು ಸ್ವಯಂ ಸಾಹಿತಿ, ವೈಣಿಕ. ಅವನ ಕಾಲದಲ್ಲಿ ಕನ್ನಡ ಸಾಹಿತ್ಯವು ಹುಲುಸಾದ ಬೆಳೆ. ಸಂಗೀತದಷ್ಟೇ ನಾಟ್ಯಕ್ಕೂ ಅದೇ ಪ್ರಮಾಣದ ಪ್ರೋತ್ಸಾಹ ಇದ್ದಿತು. ಇದಕ್ಕೆ ಉತ್ತಮ ನಿದರ್ಶನ ಆತನ ಶೃಂಗಾರಪದಗಳು. ಚಿಕದೇವರಾಜ ಸಪ್ತಪದಿ ಎಂದು ಕರೆಯಲಾಗುವ ಈ ಶೃಂಗಾರಪದಗಳು, ನಾಯಕ-ನಾಯಿಕಾ ಭಾವದಿಂದ ಕ್ಷೇತ್ರಯ್ಯನ ಪದಗಳ ರೀತಿಯಲ್ಲಿಯೇ ಇವೆ. ಚಿಕದೇವರಾಜರಿಗೆ 7ನೇ ಸಂಖ್ಯೆಯ ಬಗೆಗೆ ಅದೇನೋ ಇಷ್ಟ. ಗೀತಗೋಪಾಲವೆಲ್ಲಾ ಏಳೇಳು ಚರಣಗಳಿರುವ ಸಪ್ತಪದಿಗಳೇ. ಹಾಗೆಯೇ ಈ ಶೃಂಗಾರ ಪದಗಳು ಸಪ್ತಪದಿಗಳೇ. ಇದರಲ್ಲಿಯೂ ಏಳು ವಿಭಾಗ—
(1) ಬಿರುದಾವಳಿಯ ಸಪ್ತಪದಿ (2) ವಿರಹ ಸಪ್ತಪದಿ (3) ವಿರಹಿಣೆಯರ ವಚನ ಪ್ರಕಾರ ಸಪ್ತಪದಿ (4) ಚಿಕದೇವ ಮಹಾರಾಯನ ವೃತ್ತಾಂತ ಸಪ್ತಪದಿ (5) ಶೃಂಗಾರಭಾವ ಸಪ್ತಪದಿ (6) ಕಾಂತೆ ಸಮ್ಮೊಗದೊಳ್ ನುಡಿವ ಬಗೆಗೆ ಸಪ್ತಪದಿ (7) ಸ್ವಾಧೀನ ವಲ್ಲಭೆಯರ ವೃತ್ತಾಂತ ಸಪ್ತಪದಿ.

ಈ ಶೃಂಗಾರ ಪದಗಳ ನಾಯಕ ಚಿಕದೇವರಾಜ. ಮೊದಲನೆಯ ಸಪ್ತಪದಿಯಲ್ಲಿ ರಾಜನ ಗುಣ, ಪರಾಕ್ರಮ ಮುಂತಾದುವುಗಳ ವರ್ಣನೆ. ಎರಡನೆಯ ಸಪ್ತಪದಿಯಲ್ಲಿ ರಾಯನಿಗೆ ಮನಸೋತ ವಿರಹಿಣೆಯರ ಮನದ ವಿವಿಧ ಭಾವನೆಗಳು ನಿರೂಪಿತವಾಗಿವೆ. ವಿರಹಿಣಿಯರ

ವಚನ ಪ್ರಕಾರಗಳು - ದೂತಿಯರ ಮೂಲಕ ತಿಳಿಯಪಡುತ್ತವೆ. ನಾಲ್ಕನೆಯದರಲ್ಲಿ ಚಿಕದೇವರಾಯನ ವೃತ್ತಾಂತ. ಇಲ್ಲಿ ಮೊದಲನೆಯ ಸಪ್ತಪದಿಯಲ್ಲಿ ನರ್ತಕಿಯ ಒಂದು ವರ್ಣಮಯ ಚಿತ್ರವನ್ನು ನಿರೂಪಿಸಲಾಗಿದೆ. ಐದನೆಯದು ಶೃಂಗಾರ ಭಾವದಶಪದಿ. ಇಲ್ಲಿ ನಾನಾ ಶೃಂಗಾರ ಭಾವಗಳ ವರ್ಣನೆ ಇದೆ. ಆರನೆಯದು ನಾಯಕಿಯ ನುಡಿ. ರಾಯನ ಲೋಪಗಳನ್ನು ಟೀಕಿಸುವಂತಹ ಧೀರೆ- ಧೀರಾ ಧೀರೆ ನಾಯಕಿಯ ಭಾವವಿದೆ. ಮೊದಲನೆಯ ಪದದಲ್ಲಿ ನಾಯಕಿ - 'ಅಂದವೇ ಈ ವಗೆಯ ಮಾಯ। ಆಯಿತಾಯಿತೇಳು ಚಿಕದೇವರಾಯ' ಎಂದು 'ಬಲ್ಲೆ ಬಲ್ಲೆನಯ್ಯ ನಿನ್ನ ಬಗೆಯನೆಲ್ಲ। ಬರಿಯ ಬಿನ್ನಣೆಗಿಲ್ಲಿ ಬಹಳಸಲ್ಲ। ನಿನ್ನ ಬೆಲ್ಲ ಮಾತಿಗೆ ನಾನು ಬೆರೆವಳಲ್ಲ। ಬೇಡ ಬೇಡ ಇನ್ನು ಬಿನದವಲ್ಲ।' ಎಂದು ಕೋಪಿಸಿಕೊಳ್ಳುತ್ತಾಳೆ. ಒಲಿಸಿಕೊಳ್ಳಲು ಯತ್ನಿಸಿದ ರಾಯನನ್ನು —

'ಅಹುದಹುದು ಬಲ್ಲೆ ಬಿಡು ಕೈಯ್ಯ। ಆನು ಈ ಗರುಡಿಯೊಳಾಡಿದವಳಯ್ಯ। ಸಾಕು ಸುಮ್ಮನಿರು ಚಿಕದೇವರಾಯ।' ಎಂದು ಮೂದಲಿಸುತ್ತಾಳೆ. ಏಳನೆಯದು ಸ್ವಾಧೀನವಲ್ಲಭೆಯ ವೃತ್ತಾಂತ ಸಪ್ತಪದಿ. ವಿರಹಿಣಿಯರ ನಾನಾ ಮನೋಭಾವಗಳ ಧ್ವನಿ ಇದೆ ಇಲ್ಲಿ. ಈ ಶೃಂಗಾರ ನಾಯಕ- ನಾಯಿಕಾ ಭಾವಗಳನ್ನು ಧ್ವನಿಸುವ ಪದಗಳು ಅವಕ್ಕೆ ಹಿನ್ನೆಲೆಯಾಗಿ ನಿರೂಪಿತವಾದ ಶ್ಲೋಕಗಳೇ ಮುಂತಾದುವನ್ನು ಒಟ್ಟು ಪರಿಶೀಲಿಸಿದಾಗ, ಚಿಕದೇವರಾಯನ ಆಸ್ಥಾನದಲ್ಲಿ ಉತ್ತಮ ಮಟ್ಟದ ನೃತ್ಯಕಲೆ ಬೆಳೆದು ಬಂದಿದ್ದಿತೆನ್ನಬಹುದು. ತಂಜಾವೂರಿನಲ್ಲಿ ಚಿಕದೇವರಾಜರ ಸಮಕಾಲೀನ - ಷಹಾಜಿರಾಜ ಇವರಿಬ್ಬರೂ ಸ್ಪರ್ಧಿಗಳು. ಒಬ್ಬರನ್ನೊಬ್ಬರು ಮೀರಿಸಬೇಕೆಂಬ ಅಭಿಲಾಷೆಯುಳ್ಳವರು ಅದಕ್ಕಾಗಿ ಕೆಲಸ ಮಾಡಿದರು.

ಕಂಠೀರವರಾಜ (1704- 14)

ಚಿಕದೇವರಾಜರ ಅನಂತರ ಕಂಠೀರವ ಮಹಾರಾಜ ಒಡೆಯರು ಪಟ್ಟಕ್ಕೆ ಬಂದರು. ಇವರನ್ನು ಮೂಕರಸು ಎಂದೂ ಕರೆಯುತ್ತಿದ್ದರು. ಏಕೆಂದರೆ ಇವರು ಮಾತನಾಡುತ್ತಿರಲಿಲ್ಲ. ಎಲ್ಲಾ ಕೈಸನ್ನೆಯಿಂದಲೇ ನಡವಳಿಕೆ. ಚಿಕದೇವರಾಜರಿಗೆ ಸ್ವಲ್ಪ ಹಿಂದಿನಿಂದಲೇ ದಕ್ಷಿಣಭಾರತ ದಲ್ಲಿ ಯಕ್ಷಗಾನಯುಗ ಪ್ರಾರಂಭವಾಗಿ ಈ ಪ್ರಕಾರವು ಜನಾದರಣೆಯನ್ನು ಗಳಿಸಿದ್ದಿತು. ಈ ಯಕ್ಷಗಾನಗಳು ಬಹುತೇಕ ತೆಲುಗು, ಆದರೆ ಪ್ರಾದೇಶಿಕ ಭಾಷೆಗಳಲ್ಲಿಯೂ ರಚಿತವಾಗಿ ಪ್ರಚಲಿತವಿದ್ದುವು. ನಿದರ್ಶನವಾಗಿ ಚಿಕದೇವರಾಯ ವಿಲಾಸಮು, ಇಮ್ಮಡಿ ಹಿರಿಯ ಕೆಂಪೇಗೌಡನ ಗಂಗಾಗೌರೀವಿಲಾಸಮು, ಹೀಗೆ. ಯುಗಧರ್ಮಕ್ಕನುಸಾರವಾಗಿ ಕಂಠೀರವರಾಜರೂ ಯಕ್ಷಗಾನಗಳನ್ನು ರಚಿಸಿದರು. ಅವುಗಳಲ್ಲಿ ಈಗ ಲಭ್ಯವಿರುವುದು 17. ಇದರಲ್ಲಿ ಮೂರು ವಿನಾ ಮಿಕ್ಕವೆಲ್ಲಾ ತೆಲುಗು ಭಾಷೆಯಲ್ಲಿವೆ. ಕೊರವಂಜಿ ಕೇಂದ್ರವಾಗಿರುವ ನಾಲ್ಕು ಚಿಕ್ಕ ಚಿಕ್ಕ ಯಕ್ಷಗಾನಗಳಿವೆ: (1) ಆಂಧ್ರಕೊರವಂಜಿ (2) ಕನ್ನಡ ಕೊರವಂಜಿ (3) ಪ್ರಾಕೃತ ಕೊರವಂಜಿ ಮತ್ತು (4) ತಿಗುಳ (ತಮಿಳು) ಕೊರವಂಜಿ. ಹಾಗೆಯೇ ನಾಟ್ಯಕ್ಕೆ ಸಂಬಂಧಿಸಿದ ಯಕ್ಷಗಾನಗಳೂ ಇವೆ. ನಿದರ್ಶನವಾಗಿ 'ಕಲವಾಣಿ ವಿಲಾಸಮು'. ಇದರ

ನಾಯಕಿಯ ಹೆಸರು - ಕಲವಾಣಿ. ಅವಳೊಬ್ಬ ರಾಜನರ್ತಕಿ. ಅವಳು ಕಂಠೀರವ ರಾಜನನ್ನು ಮೋಹಿಸಿದ ಕಥೆ ಈ ಯಕ್ಷಗಾನ. 'ನಾಟ್ಯವಿದ್ಯಾವಿಲಾಸಮು' ಇನ್ನೊಂದು ಯಕ್ಷಗಾನದ ಹೆಸರು. ಇಲ್ಲಿ ಆಸ್ಥಾನದ ನರ್ತಕಿಯರು ತಮ್ಮ ತಮ್ಮ ಹಿರಿಮೆಯನ್ನು ಪ್ರದರ್ಶಿಸುವ ಸಂದರ್ಭವಿದು. ಹಾಗೆಯೇ 'ವಸಂತೋತ್ಸವ ವಿಲಾಸಮು' ಇದು ಅರಮನೆಯಲ್ಲಿ ವಸಂತ ಋತುವಿನ ಉತ್ಸವದ ಆಚರಣೆಯ ವರ್ಣನೆ. ಇದರಲ್ಲಿ ಮಲ್ಲಿಕ, ಮಂದಾರಿಕ, ಮಂಜುಭಾಷಿಣಿ, ಮಧುರವಾಣಿ ಮುಂತಾದ ಅನೇಕ ನರ್ತಕಿಯರ ಹೆಸರುಗಳು ಬರುತ್ತವೆ.

ಈ ಯಕ್ಷಗಾನಗಳೇ ಅಲ್ಲದೆ, ಕಂಠೀರವ ರಾಜನಿಗೆ ಸಂಬಂಧಿಸಿದ ಶೃಂಗಾರ ಪದಗಳೂ ಇವೆ. ಭೈರವಿ, ಘಂಟಾರವ, ಅಶೋಕವರಾಳಿ, ತೋಡಿ, ಮುಖಾರಿ, ಕಾಂಭೋಜಿ ಮುಂತಾದ ರಾಗಗಳಲ್ಲಿ ರಚಿತವಾದ ಈ ಪದಗಳ ನಾಯಕ ಕಂಠೀರವ ರಾಜ. ಆ ಪದಬಂಧವೆಲ್ಲಾ ಕ್ಷೇತ್ರಯ್ಯನ ಪದಗಳ ಮಾದರಿಯಲ್ಲಿಯೇ ಇವೆ. ಆ ವೇಳೆಗೆ ಕ್ಷೇತ್ರಯ್ಯನ ಪದಗಳು ಹೆಚ್ಚು ಪ್ರಚಾರಕ್ಕೆ ಬಂದಿರಬಹುದು. ತಂಜಾವೂರಿನಲ್ಲಿ ಕಂಠೀರವರಾಜನ ಸಮಕಾಲೀನ ದೊರೆ ಮೊದಲನೆಯ ಶರಭೋಜಿ. ಅಲ್ಲಿ ಆಗಲೇ ಯಕ್ಷಗಾನಗಳ ಹುಲುಸಾದ ಬೆಳೆ. ಕಂಠೀರವ ರಾಜರ ನಂತರ 85 ವರುಷಕಾಲ ರಾಜ್ಯದ ಸಾಂಸ್ಕೃತಿಕ ಕ್ಷೇತ್ರಕ್ಕೆ ಕತ್ತಲು ಆವರಿಸಿತು. ಆ ಅಂತರದಲ್ಲಿ ಆರು ಒಡೆಯರು ಪಟ್ಟಕ್ಕೆ ಬಂದರು. ಆದರೆ ಅವರುಗಳೆಲ್ಲಾ ಬಹುತೇಕ ಉತ್ಸವಮೂರ್ತಿಗಳಂತೆ ಪರಿಣಮಿಸಿದರು. ರಾಜ್ಯಾಡಳಿತವೆಲ್ಲಾ ಪ್ರಾರಂಭದಲ್ಲಿ ಸರ್ವಾಧಿಕಾರಿ ಹಾಗೂ ದಳವಾಯಿಗಳಾಗಿದ್ದ ದೇವರಾಜಯ್ಯ, ನಂಜರಾಜಯ್ಯ ಇವರ ಹಿಡಿತದಲ್ಲಿದ್ದು ಮುಂದೆ ನವಾಬರುಗಳಾದ ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನ್ ಅವರ ಕೈಗೆ ಅಧಿಕಾರ ಬಂದಿತು. ರಾಜರು ಮೂಲೆಗುಂಪಾದರು. ರಾಜ್ಯವು ನವಾಬರು, ಮರಾಟೆಯವರು, ನಿಜಾಂ, ಇಂಗ್ಲೀಷರು, ಫ್ರೆಂಚರೇ ಮುಂತಾದವರ ರಣಭೂಮಿ ಆಯಿತು.

ಈ ಭಯಂಕರ ಸ್ಥಿತಿ ಮತ್ತು ಅರಾಜಕತೆಯು ಕೊನೆಗಂಡುದು - 1799ರಲ್ಲಿ. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಹತನಾದನಂತರವೇ. ಮೈಸೂರು ರಾಜ್ಯವು ಪುನಃ ಹಳೆಯ ರಾಜಮನೆತನದವರಿಗೇ ಬಂದಿತು. ಮುಮ್ಮಡಿ ಕೃಷ್ಣರಾಜ ಒಡೆಯರವರು ಸಿಂಹಾಸನವನ್ನೇರಿದರು. ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿ ಮೈಸೂರೇ ಎಂಬ ನಂಬಿಕೆಯಿದ್ದ ಒಡೆಯರು ಹಾಗೂ ಅವರ ಆಪ್ತರೂ, ಆ ಸಾಮ್ರಾಜ್ಯದ ವೈಭವವನ್ನು ಪುನರುದ್ಧರಿಸುವ ರೀತಿಯಲ್ಲಿ ಸಾಂಸ್ಕೃತಿಕ ಪುನರುಜ್ಜೀವನಗೊಳಿಸಲು ಸಂಕಲ್ಪಿಸಿದರು. ವರ್ಷದುದ್ದಕ್ಕೂ ಅದೇ ರೀತಿಯ ಉತ್ಸವಾದಿಗಳು ನಡೆಯಲಾರಂಭವಾಯಿತು. ನವರಾತ್ರಿ ಉತ್ಸವವು ಹಳೆಯ ವೈಭವವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಪ್ರಾರಂಭವಾಯಿತು. ದೇಶದೇಶಗಳಿಂದ ಕವಿ, ಪಂಡಿತ, ಗಾಯಕ, ಚಿತ್ರಕಾರ, ಶಿಲ್ಪಿ ಮುಂತಾದವರು ಅಧಿಕ ಸಂಖ್ಯೆಯಲ್ಲಿ ಮೈಸೂರಿಗೆ ಬಂದು ನೆಲೆಸಲಾರಂಭಿಸಿದರು. ಅವರ ಒಟ್ಟು ಪ್ರಯತ್ನದ ಫಲವಾಗಿ ಅತೀ ಶೀಘ್ರದಲ್ಲಿಯೇ ಮೈಸೂರು ಪ್ರಮುಖ ಸಾಂಸ್ಕೃತಿಕ ಕೇಂದ್ರವೆಂದು ಪ್ರಸಿದ್ಧಿಪಡೆಯಿತು.

ನೃತ್ಯಕಲೆಯೂ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ಆದುದರಿಂದ ಅರಮನೆಯಲ್ಲಿ ನರ್ತಕಿಯರಿಗೆ ಆಸರೆ ಮತ್ತು ನೃತ್ಯಕಲೆಗೆ ಪೋಷಣೆ ಎರಡೂ ಇದ್ದುದು ಸಹಜವೇ. ಸಾಮಾಜಿಕ ಮತ್ತು ಧಾರ್ಮಿಕ ಸಮಾರಂಭಗಳಲ್ಲಿಯೂ ಉತ್ಸವಾದಿಗಳಲ್ಲಿಯೂ ನೃತ್ಯಕಾರ್ಯಕ್ರಮಗಳು ಇದ್ದೇ ಇರುತ್ತಿದ್ದುವು. ನರ್ತಕಿಯರು ನೃತ್ಯವೇ ಅಲ್ಲದೆ, ಉತ್ಸವಗಳಲ್ಲಿ ಮುಂದೆ ನಡೆವುದು, ಮುಖ್ಯ ಸಮಾರಂಭಗಳಲ್ಲಿ ಆರತಿ ಎತ್ತುವುದು ಮುಂತಾದ ಕರ್ತವ್ಯಗಳನ್ನು ನಿರ್ವಹಿಸ ಬೇಕಾಗಿತ್ತು. 30-6-1799 ಭಾನುವಾರ ಬೆಳಿಗ್ಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಪಟ್ಟಾಭಿಷೇಕ ಮಹೋತ್ಸವವು ಮೈಸೂರು ಕೋಟೆಯಲ್ಲಿರುವ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. ಆ ಸಮಯದಲ್ಲಿ ಸಾಂಪ್ರದಾಯಿಕ ವಿಧಿಗಳ ಜೊತೆಯಲ್ಲಿ ನೃತ್ಯ ಕಾರ್ಯಕ್ರಮವೂ ನಡೆಯಿತು. ಅಂದಿನ ನರ್ತಕಿ, ತಮಿಳು ನಾಡಿನ ನಾಚಿಯಾರ್‌ಕೋವಿಲ್ ರಮಾಮಣಿ. ಅದರ ಹಿಂದೆಯೇ ಆ ಪ್ರದೇಶದಿಂದ ಅನೇಕ ನರ್ತಕಿಯರೂ ಮತ್ತು ನಟ್ಟುವನಾರ್ ಗುರುಗಳೂ ಮೈಸೂರಿಗೆ ಬರಲಾರಂಭಿಸಿ ಮಹಾರಾಜರ ಎದುರಿಗೆ ತಮ್ಮ ಕಲಾ ಪ್ರದರ್ಶನವಿತ್ತು ಬಹುಮಾನಗಳನ್ನು ಪಡೆದು ಹಿಂತಿರುಗುತ್ತಿದ್ದರು. ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸಬೇಕಾದುದಗತ್ಯ.

ಮುಮ್ಮಡಿಯವರು ಸಿಂಹಾಸನಕ್ಕೆ ಬಂದನಂತರ ಮೈಸೂರಿಗೆ ರಾಜರ ಪ್ರೋತ್ಸಾಹ ಅಪೇಕ್ಷಿಸಿ ಕಲಾವಿದರ ಒಂದು ಸಮೂಹವೇ ಬರುತ್ತಿತ್ತು. ಇದು ಅವರ ಮೊಮ್ಮಗ ನಾಲ್ವಡಿ ಕೃಷ್ಣರಾಜರ ಕಾಲದವರೆಗೂ ಸುಮಾರು 160 ವರ್ಷಗಳ ಕಾಲ ನಡೆಯಿತು. ಜೊತೆಗೆ ಸ್ಥಳೀಯರಾದ ಅನೇಕ ಕಲಾವಿದರೂ ಅವರುಗಳ ಪೋಷಣೆಯಲ್ಲಿದ್ದರು. ಆದರೆ ಇದಕ್ಕೆ ಸಂಬಂಧಪಟ್ಟ ದಾಖಲೆಗಳಾವುವೂ ದೊರೆಯುವುದಿಲ್ಲ. ಇದಕ್ಕೆ ಮುಖ್ಯ ಕಾರಣ 1897ರಲ್ಲಿ ಮೈಸೂರು ಅರಮನೆಗೆ ಬೆಂಕಿಬಿದ್ದು ಸುಟ್ಟುಹೋದ ಭಾಗಗಳಲ್ಲಿ ಸರಸ್ವತಿ ಭಂಡಾರವೂ ಒಂದು. ಅಲ್ಲಿ ಕಾಪಾಡಿದ್ದ ದಾಖಲೆಗಳೆಲ್ಲಾ ನಾಶವಾದವು. ಆದರೆ ಹೊರಗಿನಿಂದ ಬಂದು ಇಲ್ಲಿ ಬಹುಮಾನಿತರಾದ ಕಲಾವಿದರನೇಕ ಮಂದಿ ಅರಮನೆಯಿಂದ ಬಂದ ಕಾಗದ ಪತ್ರಗಳು ಹಾಗೂ ಬಹುಮಾನಗಳನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದರು. ಅಂತಹವರನೇಕರ ಮನೆತನಗಳಲ್ಲಿ ಅವು ಇಂದೂ ಲಭ್ಯ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಆಣತಿಯಂತೆ ತಮಿಳು ನಾಡಿನ ಈ ದೇವದಾಸಿ ನೃತ್ಯ ಕಲಾವಿದರ ಕುಟುಂಬಗಳ ಬಗೆಗೆ ಮಾಹಿತಿ ಸಂಗ್ರಹಿಸಿ ವರದಿಯನ್ನು ಮಾಡಿದ ಶ್ರೀ ಬಿ.ಎಂ. ಸುಂದರಂ ಅವರು ಈ ಮೈಸೂರು ಅರಮನೆಯ ನೃತ್ಯಕಲೆಯ ಬಗೆಗೆ ತಮಿಳುನಾಡಿನಲ್ಲಿ ದೊರೆತ ಮಾಹಿತಿಯನ್ನು ಕೊಟ್ಟು ನೆರವಾಗಿದ್ದಾರೆ.

ತಮಿಳು ನಾಡಿನಿಂದ ರಾಜರ ಪ್ರೋತ್ಸಾಹವನ್ನರಸಿಬಂದವರಲ್ಲಿ ನರ್ತಕಿಯರೇ ಅಲ್ಲದೆ ನಟ್ಟುವನಾರ್ ಗುರುಗಳೂ ಇದ್ದರು. ಅವರಲ್ಲಿ ಮೊದಲಿಗರು ಕಾಂಚಿಪುರಂ 'ಅಶ್ವಧಾಟಿ' ಪಚ್ಚೈಮುತ್ತು ಮೊದಲಿಯಾರ್. ಇವರ ಹೆಸರಿನ ಜೊತೆಗೆ ಈ ಅಶ್ವಧಾಟಿ ಪದ ಸೇರಿಕೊಂಡುದು ಒಂದು ವಿಶೇಷ ಸಂದರ್ಭದ ಫಲವಾಗಿ. ಮೊದಲಿಯಾರರಿಗೆ ಕುದುರೆ ಷೋಕಿ. ಅವರ ಒಂದು

ಕುದುರೆಗೆ ವರ್ಣ ಒಂದಕ್ಕೆ ಕುಣಿಯುವುದನ್ನು ಕಲಿಸಿದ್ದರಂತೆ. ಆ ಕಾರಣದಿಂದ ಈ ಹೆಸರು ಅಂಟಿಕೊಂಡಿತು. ಇದನ್ನು ನೋಡಿ ಸಂತೋಷಗೊಂಡ ಮುಮ್ಮಡಿಯವರು ನಿನಗೆ ಏನು ಬಹುಮಾನ ಕೊಡಬಹುದು ಎಂದು ಕೇಳಿದ್ದಕ್ಕೆ "ನನಗೆ ಏನೂ ಬೇಡ. ತಾವು ಪೂಜಿಸುತ್ತಿರುವ ಚಾಮುಂಡೇಶ್ವರಿ ವಿಗ್ರಹಗಳಲ್ಲಿ ಒಂದನ್ನು ಕೊಡಿ ಅಷ್ಟೇ ಸಾಕು" ಎಂದರಂತೆ ಈ ಪಚ್ಚೈಮುತ್ತು ಮುದಲಿಯಾರ್. ಅದರಂತೆ ಕೊಟ್ಟ ವಿಗ್ರಹವನ್ನು ನಿತ್ಯ ಪೂಜೆಗೆ ಇಟ್ಟುಕೊಂಡರಂತೆ. ಹಾಗೆಯೇ ಮೈಸೂರಿಗೆ ಬಂದು ಅರಮನೆ ಆಶ್ರಯಪಡೆದ ಇನ್ನೊಬ್ಬ ನಟ್ಟುವನಾರ್ ಗುರು - ಕಂಚಿ ಸದಾಶಿವ ಮೊದಲಿಯಾರ್. ಇಲ್ಲಿಯೇ ಬಹುಕಾಲ ನೆಲೆಸಿದುದರಿಂದ ಕಂಚಿ ಸದಾಶಿವಯ್ಯ ಆದರು. ಅನೇಕ ಮಹಿಳೆಯರಿಗೆ ನೃತ್ಯಶಿಕ್ಷಣವಿತ್ತು ಮೈಸೂರಿನಲ್ಲಿಯೇ ತೀರಿಕೊಂಡರು. ತಂಜಾವೂರು ಸುಬ್ಬರಾಯ ನಟ್ಟುವನಾರ್, ಮೈಸೂರು ಅರಮನೆ ಆಶ್ರಯಪಡೆದ ಇನ್ನೊಬ್ಬ ಗುರು. ಈತನು ಸದಾಶಿವ ಮೊದಲಿಯಾರರ ಸೋದರಳಿಯ. ಜಟ್ಟಿ ತಾಯಮ್ಮನವರಿಗೆ ಗುರು ಆಗಿದ್ದವರು.

ಹಾಗೆಯೇ ರಾಜಾಶ್ರಯ ಪಡೆದ ಇನ್ನೊಬ್ಬ ನಟ್ಟುವನಾರ್ ಗುರು ತಂಜಾವೂರು ಚಿನ್ನಯ್ಯ. ಈತನು ಪ್ರಸಿದ್ಧ ತಂಜಾವೂರು ಸೋದರ ಚತುಷ್ಟಯದಲ್ಲಿ ಹಿರಿಯವನು. ಚಾಮರಾಜ ಅಂಕಿತದಲ್ಲಿ ಅನೇಕ ಜಾವಳಿಗಳನ್ನು ರಚಿಸಿದ್ದಾನೆ. ಈತನಿಂದ ಮೈಸೂರಿನಲ್ಲಿ ನೃತ್ಯ ಶಿಕ್ಷಣ ಪಡೆದವರಲ್ಲಿ ಭವಾನಿ, ದೇವಮ್ಮ ಎಂಬ ಹೆಸರುಗಳನ್ನು ಕೇಳಲಾಗಿದೆ. ಇನ್ನು ಮೈಸೂರು ಆಸ್ಥಾನದಲ್ಲಿ ನೃತ್ಯಮಾಡಿ ಬಹುಮಾನಿತರಾದ ತಮಿಳು ನಾಡಿನ ನರ್ತಕಿಯರಲ್ಲಿ ಕೆಲವರು. ಮುಮ್ಮಡಿಯವರ ಪಟ್ಟಾಭಿಷೇಕ ಸಂದರ್ಭದಲ್ಲಿ ನಡೆದ ನೃತ್ಯವನ್ನು ಆಗಲೇ ಪ್ರಸ್ತಾಪಿಸಿದೆ. ಈಗ ಅಲ್ಲಿಂದ ಮುಂದೆ ಮೈಸೂರು ಆಸ್ಥಾನದಲ್ಲಿ ನೃತ್ಯ ಮಾಡಿದ ತಮಿಳು ನಾಡಿನ ಇನ್ನು ಕೆಲವರು ನರ್ತಕಿಯರು.

ತಂಜಾವೂರು ಅರಮನೆಯ ದಾಖಲೆಗಳ ಪ್ರಕಾರ ಕ್ರಿ.ಶ. 1801ರಲ್ಲಿ ತಂಜಾವೂರಿನ ಮೂವರು ನರ್ತಕಿಯರು ಮೈಸೂರಿಗೆ ಬಂದು ರಾಜಾಸ್ಥಾನದಲ್ಲಿ ನೃತ್ಯ ಮಾಡಿದರು. ಅವರಲ್ಲಿ ಮೊದಲನೆಯವಳು ವೆಂಕಟಲಕ್ಷ್ಮೀ - ತಂಜಾವೂರಿನ ರಾಜ ಅಮರಸಿಂಹನ ಆಸ್ಥಾನದ ನರ್ತಕಿ. ಹಾಗೆಯೇ ಅದೇ ವರುಷ, ಕಾವೇರಿಯ ಮಗಳು ಪೆರಿಯಾ, ಮತ್ತು ಉಣ್ಣಾಮಲೈ ಎಂಬ ಇನ್ನಿಬ್ಬರು ತಂಜಾವೂರಿನಿಂದ ಬಂದು ಮೈಸೂರಿನ ಆಸ್ಥಾನದಲ್ಲಿ ನರ್ತಿಸಿದಂತೆ ತಿಳಿದುಬರುತ್ತದೆ. ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಮೈಸೂರು ಆಸ್ಥಾನಕ್ಕೆ ಬಂದು ನೃತ್ಯ ಮಾಡಿದ ತಂಜಾವೂರಿನ ಇತರ ನರ್ತಕಿಯರು - ತಂಜಾವೂರು ಕಾಮಾಕ್ಷಿ, ನಾರಾಯಿಣ ತಿಲಕಂ, ಮೀನಾಕ್ಷಿ, ಕೃಷ್ಣಾಳ್. ಅಲ್ಲಿಯ ದಾಖಲೆಗಳ ಪ್ರಕಾರ ಇನ್ನೂ ಒಬ್ಬ ನರ್ತಕಿ 1847ರಲ್ಲಿ ಮೈಸೂರಿಗೆ ಬಂದು ಅರಮನೆಯಲ್ಲಿ ನರ್ತಿಸಿದ್ದಾಳೆ. ಆಕೆಯ ಹೆಸರು ತಿಳಿಯದು. ಆದರೆ ಅದಕ್ಕೆ ಸಂಬಂಧಿಸಿದ ಒಂದು ಸ್ವಾರಸ್ಯಾಂಶವಿದೆ. ಮೈಸೂರಿಗೆ ಬಂದಾಗ ಬಹುಶಃ ಆಕೆ ಇಲ್ಲಿಯೇ ಸ್ವಲ್ಪ ದಿನಗಳು ನಿಂತಿರಬಹುದು. ಏಕೆಂದರೆ ಮೈಸೂರಿನಲ್ಲಿದ್ದಾಗ ಆಕೆ ಒಬ್ಬ ಮುಸಲ್ಮಾನನಿಗೆ ನೃತ್ಯ

ಕಲಿಸಿದಳಂತೆ. ಊರಿಗೆ ಹಿಂತಿರುಗಿದನಂತರ ಈ ಪಾಪಕಾರ್ಯ ಮಾಡಿದ್ದಕ್ಕಾಗಿ ಆಕೆಗೆ ಜುಲ್ಮಾನೆ ವಿಧಿಸಲಾಯಿತಂತೆ, ಜುಲ್ಮಾನೆ - 12 ತೆಂಗಿಕಾಯಿಗಳನ್ನು ಸಲ್ಲಿಸುವುದು. ಅನಂತರ ಮೈಸೂರಿನ ಆಸ್ಥಾನದಲ್ಲಿ ಪ್ರದರ್ಶನವಿತ್ತ ನರ್ತಕಿಯರಲ್ಲಿ ಹೇಳಬಹುದಾದವಳು - ನಾಗರತ್ನಂ. ಈಕೆ ಈ ಹಿಂದೆ ಹೇಳಿದ ಕೃಷ್ಣಾಳ್ ಮಗಳು.

ಅದೇ ಆಳ್ವಿಕೆಯಲ್ಲಿ ಒಂದು ಪ್ರದರ್ಶನವಿತ್ತ ಇನ್ನೊಬ್ಬ ನರ್ತಕಿ - ತಿರಿನೇಲ್ವೇಲಿ ಮಾಣಿಕ್ಯಂ. ಈಕೆ ತಂಜಾವೂರು ಸೋದರರಲ್ಲಿ ಒಬ್ಬರಾದ ಪೊನ್ನಯ್ಯನವರ ಶಿಷ್ಯೆ. ಮೈಸೂರಿಗೆ ಎರಡು ಸಲ ಬಂದಿದ್ದಳು. ತೆಂಕಾಶಿ ರಾಜಮ್ಮಾಳ್ ಇನ್ನೊಬ್ಬ ನರ್ತಕಿ. 1954ರ ವಿಜಯದಶಮಿ ಯಂದು ಮೈಸೂರು ಅರಮನೆಯಲ್ಲಿ ನೃತ್ಯಮಾಡಿದಳು.

ಮುಮ್ಮಡಿಯವರ ನಂತರ ಪಟ್ಟಕ್ಕೆ ಬಂದ ಚಾಮರಾಜ ಒಡೆಯರ ಕಾಲದಲ್ಲಿಯೂ ತಮಿಳು ನಾಡಿನ ಅನೇಕ ನರ್ತಕಿಯರು ಬಂದು ಮೈಸೂರು ಅರಮನೆಯಲ್ಲಿ ನೃತ್ಯಕಾರ್ಯಕ್ರಮವಿತ್ತರು. ಅವರಲ್ಲಿ ನೆನಪಿಗೆ ಬರುವವಳು - ಸ್ವಾಮಿಮಲೈ ನಾಗರತ್ನಂ. ಈಕೆ ಸುಪ್ರಸಿದ್ಧ ಗಾಯಕ ಮಧುರೈ ಸೋಮಸುಂದರಂ ಅವರ ಅಜ್ಜಿ. ಸಂಗೀತದಲ್ಲಿ ತ್ಯಾಗರಾಜರ ನೇರ ಶಿಷ್ಯರಾದ ಉಮಯಾಳ್ಪುರಂ ಸುಂದರಭಾಗವತರ ಶಿಷ್ಯೆ. ತಿರುವಾರೂರ್ ಜ್ಞಾನಂ ಈ ಕಾಲದಲ್ಲಿ ಮೈಸೂರಿಗೆ ಬಂದು ಅರಮನೆಯಲ್ಲಿ ನರ್ತಿಸಿದ ಇನ್ನೊಬ್ಬ ಕಲಾವಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿಗೆ ಬಂದು ಅರಮನೆಯ ಉತ್ಸವಾದಿಗಳಲ್ಲಿ ನೃತ್ಯ ಕಾರ್ಯಕ್ರಮವಿತ್ತ ನರ್ತಕಿಯರಲ್ಲಿ ನೆನಪಿಗೆ ಬರುವವರಲ್ಲಿ ಕೊಯಮತ್ತೂರು ತಾಯಿ ಹೆಸರು ನೆನಪಿಗೆ ಬರುತ್ತದೆ. ಈಕೆ ಖ್ಯಾತಳಾಗಿರುವುದು ಮಧುರ ಗಾಯಿನಿ ಎಂದು. ಆದರೆ ಪ್ರಾರಂಭದಲ್ಲಿ ನಾಗರತ್ನಮ್ಮನವರಂತೆ ತಾಯಿಯೂ ನರ್ತಕಿಯಾಗಿ ಹೆಸರುವಾಸಿಯಾಗಿದ್ದಳು. ಹಾಗೆಯೇ ಮೈಸೂರಿಗೆ ಬಂದಿದ್ದ ಇನ್ನೊಬ್ಬ ನರ್ತಕಿ ತಿರುವಳಿಪುತ್ತೂರ್ ಕಲ್ಯಾಣಿ. ಜೀವರತ್ನಂ ಮತ್ತು ಕಲ್ಯಾಣಿ ಜೋಡಿ ನೃತ್ಯ ಒಂದು ಕಾಲದಲ್ಲಿ ಬಹುಪ್ರಸಿದ್ಧವಾಗಿತ್ತು.

ಈ ಶತಮಾನದ ಪ್ರಾರಂಭ ವರುಷಗಳಿಂದ ಸ್ಥಿತಿ ಸ್ವಲ್ಪ ಸ್ಪಷ್ಟವಾಗತೊಡಗಿತು. ದಾಖಲೆ ಗಳೂ ದೊರೆಯುವಂತಿವೆ. ಈ ಹಿನ್ನೆಲೆಯಿಂದ ಪರಿಶೀಲಿಸಿದಲ್ಲಿ ಅರಮನೆಯಲ್ಲಿ ಹಿಂದಿನಿಂದ ಅನುಸರಿಸಿಕೊಂಡು ಬಂದ ರೀತಿಯಲ್ಲಿ ನಾನಾ ಹಬ್ಬ ಧಾರ್ಮಿಕ ಹಾಗೂ ಸಾಮಾಜಿಕ ಸಮಾರಂಭಗಳಲ್ಲಿ ನೃತ್ಯಕಾರ್ಯಕ್ರಮಗಳು ನಡೆಯುತ್ತಿದ್ದುವು. ಅವುಗಳು ಇಂದು ಸಾರ್ವಜನಿಕ ವಾಗಿ ನಡೆಯುತ್ತಿರುವ ರೀತಿಗಿಂತ ಸ್ವಲ್ಪ ಭಿನ್ನವಾಗಿದ್ದುವು. ನೃತ್ಯಕ್ಕಿಂತ ಅಭಿನಯ ಭಾಗ ಹೆಚ್ಚಾಗಿದ್ದಂತೆ ಕಾಣಬರುತ್ತದೆ. ಆಗ ಭರತನಾಟ್ಯವೆಂಬ ಹೆಸರೇ ಇರಲಿಲ್ಲ. ನೃತ್ಯವನ್ನು ತಾಫೆ ಎಂದು ಕರೆಯಲಾಗುತ್ತಿತ್ತು. ಈ ದಾಖಲೆಗಳಂತೆ 1902ರಲ್ಲಿ ಹೊರಗಡೆಯಿಂದ ಅಂದರೆ ಮದರಾಸು ಕಡೆಯಿಂದ. ಒಂದು ತಾಫೆ ವೃಂದವನ್ನು ಕರೆಯಿಸಿದ್ದು ಅವರಿಗೆ 50ರೂ. ಸಂಭಾವನೆ ಕೊಡಲಾಯಿತೆಂದು ತಿಳಿದುಬರುತ್ತದೆ. ಹೀಗೆ ಅಲ್ಲಿ ದೊರಕುವ ಇತರ ತಾಫೆಯವರ

ಹೆಸರುಗಳೆಂದರೆ, ರಮಾಮಣಿ, ಜಯಲಕ್ಷ್ಮಸಾನಿ, ಭವಾನಿಸಾನಿ, ವ್ಯಾಸಾಸಾನಿ, ಪುಟ್ಟದೇವಸಾನಿ, ಬಳ್ಳಾಪುರದ ಪುಟ್ಟಾಸಾನಿ, ಆದಿಲಕ್ಷ್ಮಸಾನಿ, ನಟ್ಟುವನಾರ್ ಸುಬ್ರಹ್ಮಣ್ಯ ಮುಂತಾದವರು. ಇವರಲ್ಲಿ ಕೆಲವರು ಮದರಾಸಿನಲ್ಲಿ ಕಲಿತು, ತಂಜಾವೂರು ಶೈಲಿಯಲ್ಲಿ ನರ್ತಿಸುತ್ತಿದ್ದರು. ಇದಲ್ಲದೆ ಉತ್ತರಭಾರತದ ನೃತ್ಯ ಪ್ರಕಾರ - ನಾಚ್ ಮಾಡುವವರು ಕೂಡಾ ಅರಮನೆ ಸಿಬ್ಬಂದಿಯಲ್ಲಿದ್ದರು. ಅದರಂತೆ ಗುಲಾಬ್ ಜಾನ್ ಎಂಬ ಟೈಫ್ ಅಥವಾ ನರ್ತಕಿ ಇದ್ದಳು. ಮುಂದೆ ಈ ಶತಮಾನದಲ್ಲಿ ಎಲ್ಲರಿಗೂ ತಿಳಿದಂತೆ ಜಟ್ಟಿತಾಯಮ್ಮ, ವೆಂಕಟಲಕ್ಷ್ಮಮ್ಮ, ಸುಂದರಮ್ಮ ಮುಂತಾದವರಿದ್ದರು. ಅರಮನೆಯಲ್ಲಿ ಇಷ್ಟು ನಾಟ್ಯ ಕಾರ್ಯಕ್ರಮಗಳು ನಡೆಯುತ್ತಿದ್ದರೂ ಅವು ಕೇವಲ ಒಂದು ಪ್ರಾಚೀನ ಸಂಪ್ರದಾಯವನ್ನು ನಡೆಸಿಕೊಂಡು ಹೋದಂತೆ ಇರುತ್ತಿದ್ದವು. ಆ ಕಲಾವಿದರ ಬಗೆಗೆ ಅಂತಹ ಗೌರವವೇನೂ ಕಾಣಬರುತ್ತಿರಲಿಲ್ಲ. ಅವರೂ ಒಂದು ರೀತಿಯ ಊಳಿಗದವರಂತೆ ಪರಿಗಣಿಸಲ್ಪಟ್ಟಿದ್ದರು. ಸಮಾಜದಲ್ಲಿಯೂ ಹಾಗೆಯೇ. ನಿದರ್ಶನವಾಗಿ 1910ರ ಒಂದು ದಾಖಲೆ. ಇದರ ಪ್ರಕಾರ ಮುಳಬಾಗಿಲಿನ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಗೆಜ್ಜೆಪೂಜೆ ಸಮಾರಂಭ ನಡೆಸಲು ತುಳಸಿ ಎಂಬುವಳು ಬರೆದುಕೊಂಡು ಅರ್ಜಿ. ಅನುಮತಿ ನಿರಾಕರಿಸಲಾಯಿತು. ಇದಕ್ಕೆ ಕೊಟ್ಟ ಕಾರಣಗಳಲ್ಲಿ - ಗೆಜ್ಜೆಪೂಜೆಯ ವಿಧಿಯನ್ನು ಆಚರಿಸಲು ಏನೇ ಕಾರಣಗಳನ್ನು ಕೊಟ್ಟರೂ ವಾಸ್ತವವಾಗಿ ಅದು ವೇಶ್ಯಾವೃತ್ತಿಗೆ ದಾರಿ ಆದುದರಿಂದ - ಎಂಬುದು ಪ್ರಧಾನವಾದುದು. ಮೈಸೂರು ಸಂಸ್ಥಾನದಲ್ಲಿ ಆಗಲೇ ದೇವಾಲಯಗಳಲ್ಲಿ ದೇವದಾಸಿಯರಿಂದ ನೃತ್ಯ ಮತ್ತು ದೀಪಾರಾಧನೆಗಳನ್ನು ಸರಕಾರದಿಂದ ನಿಷೇಧಿಸಲಾಗಿತ್ತು.

ಒಟ್ಟಿನಲ್ಲಿ ಅರಮನೆಯಲ್ಲಿ ಹಿಂದಿನಿಂದ ಬಂದ ಸಂಪ್ರದಾಯದಂತೆ ನರ್ತಕಿಯರು ಮತ್ತು ನೃತ್ಯಕಲೆಗೆ ಪೋಷಣೆ ನೀಡಿದರು. ಒಟ್ಟು ನೃತ್ಯಕ್ಷೇತ್ರಕ್ಕೆ ಇದರಿಂದ ಅಂತಹ ಪ್ರಯೋಜನವೇನೂ ಆಗಲಿಲ್ಲ. ನರ್ತಕಿಯರ ಕಲಿಕೆಯೆಲ್ಲಾ ದೇವಾಲಯ ಮತ್ತು ಅರಮನೆಗಳ ಅವಶ್ಯಕತೆಗೆ ಅನುಸಾರವಾಗಿ ನಡೆದುಬಂದಿತು. ಇದರಲ್ಲಿ ಸ್ವಲ್ಪ ಪ್ರಾದೇಶಿಕ ಛಾಯೆಯೂ ಕೂಡಿದ್ದಿತು- ಚೂರ್ಣಿಕೆ, ಸಂಸ್ಕೃತಶ್ಲೋಕ - ಕನ್ನಡ ಕಾವ್ಯಭಾಗಗಳು, ಅಭಿನಯ ಪ್ರಧಾನವಾದ, ಕ್ಷೇತ್ರಯ್ಯ ಹರಿದಾಸಪದ, ಜಾವಳಿ, ಗೀತಗೋವಿಂದ ಮುಂತಾದುವು; ಈ ಅಭಿನಯಕ್ಕೆ ನೃತ್ಯದಲ್ಲಿ ಶಿಕ್ಷಣ ಆ ಕುಲದವರಿಗೆ ಮಾತ್ರ ... ಹೀಗೆ.

ಮದರಾಸಿನಿಂದ ನೃತ್ಯಕಲೆಯ ಪುನರುಜ್ಜೀವನದ ಗಾಳಿ ಇತ್ತ ಕಡೆಯಲ್ಲಿ ಬೀಸಲಾರಂಭಿಸಿದ ನಂತರ ಇಲ್ಲಿಯ ನೃತ್ಯ ಕಲೆಗೆ ಪ್ರಾಶಸ್ತ್ಯ ದೊರೆತು, ಸಮಾಜದ ಶಿಷ್ಟವರ್ಗದವರು ಕಲಿಯಲಾರಂಭಿಸಿದರು. ಅದೇ ವೇಳೆಗೆ ರಾಜಕೀಯ ಕಾರಣಗಳಿಂದ ಆಸರೆ ತಪ್ಪಿ ವೆಂಕಟಲಕ್ಷ್ಮಮ್ಮನವರಂತಹವರು ಅರಮನೆ ಬಂಗಾರದ ಪಂಜರದಿಂದ ಈಚೆಗೆ ಬಂದನಂತರ ನೃತ್ಯಕಲೆಯ ವ್ಯಾಪ್ತಿ ವಿಸ್ತರಿಸುತ್ತಾ ಬಂದು, ಸಮಾಜದಲ್ಲಿ ಅದಕ್ಕೆ ಗೌರವಾದರಗಳು ಪ್ರಾಪ್ತವಾದವು. ಸಮಾಜದ ವಿವಿಧ ವರ್ಗಗಳಿಗೂ ಈ ಕಲೆ ವ್ಯಾಪಿಸುತ್ತಾ

ಬಂದಿತು. ಬೇಸರದಿಂದ ಕಲೆಗೆ ಇತಿಶ್ರೀ ಹೇಳಿದ ಪರಂಪರೆಯನ್ನು ಅರಮನೆಯೇ ಅಲ್ಲದೇ ಹೊರಗೂ ನಾನಾ ಊರುಗಳಲ್ಲಿದ್ದ ನಟ್ಟುವನಾರ್ ಗುರುಗಳಿಗೂ ಹೊಸ ಜೀವ ಬಂದಿತು. ಅವರ ಸ್ಥಿತಿ-ಆರ್ಥಿಕ ಹಾಗೂ ಸಾಮಾಜಿಕವಾಗಿ ಉತ್ತಮಗೊಂಡಿತು. ನೃತ್ಯಕಲೆ ಜನಪ್ರಿಯತೆಗೊಳಿಸಿ ಒಂದು ರೀತಿಯ ಕಾಳ್ಗಿಚ್ಚಿನಂತೆ ಹರಡುತ್ತಿದೆ. ವ್ಯಾಪ್ತಿಯೂ ಇಷ್ಟು ವಿಸ್ತರಿಸಿದ ಫಲವೇನು? ಕಲಿಯುವವರ ಸಂಖ್ಯೆ ಹೆಚ್ಚಿದೆ, ಹೆಚ್ಚಾಗುತ್ತಿದೆ. ಆದರೆ ಅವರಲ್ಲಿ ಶೇಕಡ 90ರಷ್ಟು ಕಲಿಯುತ್ತಿರುವುದು ಪ್ರದರ್ಶನ ಅಥವಾ ಸ್ವಪ್ರದರ್ಶನದ ಉದ್ದಿಶ್ಯದಿಂದ, ಕಲೆಯಾಗಿ ಅಲ್ಲ. ಕರ್ನಾಟಕದಲ್ಲಿ ನೃತ್ಯ ಕಲೆಯ ಪರಂಪರೆ, ಸಂಪ್ರದಾಯ ಮುಂತಾದವುಗಳ ಹಿರಿಮೆಯ ಬಗೆಗೆ ಕಹಳೆ ಊದಿದರೆ ಸಾಲದು; ಅದನ್ನು ಅರಿವ, ಅಧ್ಯಯನ ಮಾಡಿ ಸಾರ್ವಜನಿಕ ದೃಷ್ಟಿಗೆ ತರುವ ಅವರ ಆಸಕ್ತಿ, ಅಭಿಮಾನಗಳನ್ನು ಕುದುರಿಸುವ ಪ್ರಾಮಾಣಿಕ ಪ್ರಯತ್ನಗಳಾಗಬೇಕಾಗಿದೆ. ಅರಮನೆಯೇ ಅಲ್ಲದೆ ದೇವಾಲಯ, ಪರಂಪರೆಯಿಂದ ಮನೆತನಗಳಲ್ಲಿಯೇ ನೃತ್ಯಕಲೆಗೆ ಪೋಷಣೆ ದೊರೆಯಿತು. ಬೆಳೆದುಬಂದಿತು. ಆದರೆ ಇದಾವುದರ ಬಗೆಗೂ ನಮ್ಮ ನರ್ತಕ, ನರ್ತಕಿ ಯರು ಆಸಕ್ತಿ ಹೊಂದಿಲ್ಲ. ಪ್ರದರ್ಶನಗಳಂತೆಯೇ ಈ ಪ್ರಾಕಾರಕ್ಕೂ ಗಮನಕೊಡಬೇಕಾ ದುದು ಅವಶ್ಯಕ. ಈ ಅಧ್ಯಯನ ಇಡೀ ಕರ್ನಾಟಕವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕಾದುದೂ ಅಗತ್ಯ. ★ ★ ★ ★

1995

29. ಸ್ವಾತಂತ್ರ್ಯೋತ್ತರದಲ್ಲಿ ಭರತನಾಟ್ಯ ಹೊಸ ದಿಕ್ಕಿನತ್ತ ಹೆಜ್ಜೆ ಇಡುತ್ತಿರುವ ನೃತ್ಯಕಲೆ

ಏಳು ವರುಷಗಳ ಹಿಂದೆ ದೆಹಲಿಯಲ್ಲಿ ಒಂದು ಅಂತರರಾಷ್ಟ್ರೀಯ ನೃತ್ಯಸಮ್ಮೇಳನ ನಡೆಯಿತು. ಕಡೆಯ ದಿನದ ಪ್ರದರ್ಶನ – ಒಂದು ನೃತ್ಯ ನಾಟಕ. ಶೀರ್ಷಿಕೆ – ಘನಶ್ಯಾಮ್. ಇದನ್ನು ರಚಿಸಿದವರು ಪಂಡಿತ್ ರವಿಶಂಕರ್ ಮತ್ತು ಅವರ ಪತ್ನಿ ಸುಕನ್ಯ. ಇದರ ಬಗೆಗೆ ಪ್ರಶಂಸೆಯೂ ಬಂದಿತು. ಟೀಕೆಗಳೂ ಬಂದುವು. ಅದರಲ್ಲಿ ಒಂದು ಟೀಕೆ ಹೇಳಿದಂತೆ 'ಘನಶ್ಯಾಮ್ ನೃತ್ಯ ನಾಟಕದ ಸಂಗೀತ ಅದ್ಭುತ. ಆದರೆ ಕತೆ ಅಸಂಬದ್ಧ.' ಟೀಕೆಯ ಉತ್ತರಾರ್ಧ ಭಾಗಕ್ಕೆ ಕಾರಣವಿಷ್ಟೇ. ಈ ನೃತ್ಯನಾಟಕದ ಕಾಲವು ಈ ಶತಮಾನದ ಮೊದಲ ದಶಕವೆಂದು ಹೇಳಿ, ಉತ್ತರ ಭಾರತದ ಒಂದು ಸಣ್ಣ ಪಟ್ಟಣದಲ್ಲಿ ವಾಸವಾಗಿದ್ದರೆಂದು ಒಬ್ಬೊಬ್ಬ ಭರತನಾಟ್ಯ ಮತ್ತು ಕಥಕ್ ನೃತ್ಯ ಕುಟುಂಬಗಳಿಗೆ ಸಂಬಂಧಿಸಿದ ಕತೆ ಇದು. ಆದರೆ ಆ ಕಾಲದಲ್ಲಿ ನರ್ಮದೆಯಿಂದ ದಕ್ಷಿಣಕ್ಕಿದ್ದ ಇಂದು ಭರತನಾಟ್ಯವೆಂದು ಕರೆವ ನೃತ್ಯಪ್ರಕಾರದ ಅರಿವೇ ಇರಲಿಲ್ಲ – ಉತ್ತರ ಭಾರತದಲ್ಲಿ. ಅಲ್ಲದೆ ಭರತನಾಟ್ಯವೆಂಬ ಹೆಸರೂ ಬಳಕೆಗೆ ಬಂದಿರಲಿಲ್ಲ.

ಹಾಗೆಯೇ ವಿಂಧ್ಯದಿಂದ ಉತ್ತರದಲ್ಲಿ ಪ್ರಚಲಿತವಿದ್ದ ನೃತ್ಯಪ್ರಕಾರವು ದಕ್ಷಿಣದಲ್ಲಿ ಪರಿಚಯವಿರಲಿಲ್ಲ. ಇಲ್ಲಿ ಅಲ್ಲಿನ ನೃತ್ಯವನ್ನು 'ನಾಚ್' ಎಂದು ಕರೆಯುತ್ತಿದ್ದರು. ದೇಶದಲ್ಲಿ ಇವುಗಳ ಬಗೆಗೆ ಹೆಚ್ಚು ತಿಳುವಳಿಕೆ ಬಂದುದು, ಭಾರತಕ್ಕೆ ಸ್ವಾತಂತ್ರ್ಯ ಬಂದನಂತರವೇ. ಈ ಹಿನ್ನೆಲೆಯಿಂದ ಸ್ವತಂತ್ರ ಭಾರತದ 50 ವರುಷಗಳಲ್ಲಿ ನೃತ್ಯ ಕಲಾಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳನ್ನು ಪರಿಶೀಲಿಸಬೇಕಾಗಿದೆ.

1947ರ ಮಧ್ಯಭಾಗದಲ್ಲಿ ಸ್ವಾತಂತ್ರ್ಯ ಪಡೆದ ಭಾರತದಲ್ಲಿ ಅಂದು ನೃತ್ಯಕಲೆಯ ಸ್ಥಿತಿ ಏನಿತ್ತು? ದೀರ್ಘಕಾಲ ಸಮಾಜದ ಅನಾದರ ಹಾಗೂ ಅವಹೇಳನಕ್ಕೆ ಗುರಿಯಾಗಿದ್ದ ಶಾಸ್ತ್ರೀಯ ನೃತ್ಯಪ್ರಕಾರಕ್ಕೆ ಮರ್ಯಾದೆ ದೊರಕಲು ಪ್ರಾರಂಭವಾಗಿತ್ತು. ಇದರಲ್ಲಿ ದಕ್ಷಿಣ ಭಾರತ ಅದರಲ್ಲಿಯೂ ಈ. ಕೃಷ್ಣಯ್ಯರ್ ಅವರ ಪಾತ್ರ ಮುಖ್ಯವಾಗಿತ್ತು. ಅದರಂತೆಯೇ ಉದಯ ಶಂಕರ್, ಮೇನಕ, ರಾಂಗೋಪಾಲ್ ಮುಂತಾದವರು ನೀಡಿದ ಪ್ರದರ್ಶನಗಳಿಂದ ಭಾರತವೇ ಅಲ್ಲದೆ ವಿದೇಶಗಳಲ್ಲಿಯೂ ಭಾರತದ ನೃತ್ಯಕಲೆಗಳ ಸ್ಥೂಲ ಪರಿಚಯವಾದರೂ ಆಗಿದ್ದಿತು. ಆದರೆ ಈ ನೃತ್ಯ ಸಂಪತ್ತಿನ ವೈವಿಧ್ಯ ಮತ್ತು ನಿಜಸ್ವರೂಪಗಳು ಸ್ಪಷ್ಟವಾಗಿ ಅನುಭವವಾಗಿ ಅವುಗಳ ಕ್ರಮಬದ್ಧ ಬೆಳವಣಿಗೆ ಪ್ರಾರಂಭವಾದುದು ಸ್ವಾತಂತ್ರ್ಯದ ನಂತರವೇ.

ಭಾರತ ಸ್ವತಂತ್ರವಾದ ಮೇಲೆ ಪರಂಪರೆಯಿಂದ ಬಂದ ಕಲೆಗಳ ಪುನರುದ್ಧಾರ ಮತ್ತು ಹೊಸ ಜೀವ ತುಂಬುವಂತಹ ನಾನಾ ಪ್ರಯತ್ನಗಳಲ್ಲಿ ಅಕಾಡೆಮಿಗಳ ಸ್ಥಾಪನೆ ಮುಖ್ಯವಾದುದು. 1953ರಲ್ಲಿ ಸಂಗೀತ, ನೃತ್ಯ, ನಾಟಕ, ಜಾನಪದ ಮುಂತಾದ ವಿಭಾಗಗಳಲ್ಲಿ ನವಚೈತನ್ಯ ಉಂಟುಮಾಡಿ ಅವುಗಳ ಮುನ್ನಡೆ ಸಾಧಿಸಲು - ಭಾರತ ಸರಕಾರವು ಸಂಗೀತ ನಾಟಕ ಅಕಾಡೆಮಿಯನ್ನು ಸ್ಥಾಪಿಸಿತು. ಸಂಸ್ಥೆಯ ಸ್ಥಾಪನೆಯ ಅನಂತರ ಕಾರ್ಯದರ್ಶಿ ನಿರ್ಮಲಾ ಜೋಷಿಯವರು ಮೊದಲು ಮಾಡಿದ ಒಂದು ಮಹತ್ಕಾರ್ಯವೆಂದರೆ, ಭಾರತದಾದ್ಯಂತ ವಿವಿಧ ಭಾಗಗಳಲ್ಲಿ ಪ್ರಚಲಿತವಿದ್ದ ಪರಂಪರೆಯಿಂದ ಬೆಳೆದು ಬಂದ ಸಂಗೀತ, ನಾಟಕ, ನೃತ್ಯ, ಜಾನಪದ ಮುಂತಾದ ಕಲೆಗಳ ಮಾಹಿತಿ ಸಂಗ್ರಹಣ. ಇದಕ್ಕಾಗಿ ನಿಯಮಿತವಾದ ತಾಂತ್ರಿಕ ಸಿಬ್ಬಂದಿ ರಾಷ್ಟ್ರಾದ್ಯಂತ ಸಂಚರಿಸಿ ಧ್ವನಿಮುದ್ರಿಕೆ, ಛಾಯಾಚಿತ್ರ, ಸಂದರ್ಶನ ಮುಂತಾದುವುಗಳ ಮೂಲಕ ಅಪಾರವಾದ ಮಾಹಿತಿ ಸಂಗ್ರಹಿಸಿತು. ಅನಂತರ, ಚಲನಚಿತ್ರ, ನಾಟಕ, ಸಂಗೀತ ವಿಭಾಗಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳನ್ನು ನಡೆಸಿತು. ಇವುಗಳಿಂದ ಈ ಕಲೆಗಳು ಇಡೀ ರಾಷ್ಟ್ರದಲ್ಲಿ ಹೇಗೆ ಬದುಕಿ ಬಾಳುತ್ತಿವೆ ಎಂಬುದರ ಸ್ಪಷ್ಟ ಚಿತ್ರ ದೊರೆವಂತಾಯಿತು. ಅಲ್ಲದೆ ಈ ಕ್ಷೇತ್ರದಲ್ಲಿ ಭಾರತದ ನಾನಾ ಮೂಲೆಗಳಲ್ಲಿ ವಾಸವಿದ್ದ ಕಲಾವಿದರು ಪರಸ್ಪರ ಕಲೆತು ಪರಿಚಯಮಾಡಿಕೊಳ್ಳುವ ಅವಕಾಶವೂ ಆಯಿತು. ಇವುಗಳಂತೆಯೇ ನೃತ್ಯಕಲೆಗೆ ಸಂಬಂಧಿಸಿದ ರಾಷ್ಟ್ರೀಯ ವಿಚಾರ ಸಂಕಿರಣವೂ ದೆಹಲಿಯಲ್ಲಿ ನಡೆಯಿತು – 1958ರಲ್ಲಿ. ಇದರಲ್ಲಿ ಅಂದಿಗೆ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧರಾಗಿದ್ದ ರುಕ್ಮಿಣೀದೇವಿ ಅರುಂಡೇಲ್, ಬಾಲಸರಸ್ವತಿ, ಗುರುಗೋಪಿನಾಥ್, ನಾಯನರ್ಝಾವೇರಿ, ಎಂ. ಎಸ್. ಕಲ್ಯಾಣಪೂರ್‌ಕರ್, ಗುರುಕುಂಜು ಕುರುಪ್, ಶಂಭು ಮಹರಾಜ್, ಲಚ್ಚುಮಹರಾಜ್,

ತಂಜಾವೂರ್ ಕಿಟ್ಟಪ್ಪ, ವಳವೂರ್ ರಾಮಯ್ಯ ಪಿಳ್ಳೆ, ಯು.ಎಸ್. ಕೃಷ್ಣರಾವ್, ಮೃಣಾಳಿನಿ ಸಾರಾಭಾಯ್, ಗುರು ಅಮೋಬಿಸಿಂಗ್, ಹರಿಉಪ್ಪಲ್, ರೋಷನ್ ವಜೀಫ್‌ದಾರ್ ಮುಂತಾದ ನೃತ್ಯಪಟುಗಳೂ, ಪ್ರೊಜೇಶ್ ಬ್ಯಾನರ್ಜಿ, ಶಾಂತಿದೇವಘೋಷ್, ಈ. ಕೃಷ್ಣಯ್ಯರ್, ಶಿವರಾಂ ಕಾರಂತ, ಮೋಹನ್ ಖೋಕರ್, ಎಂ. ಮಹೇಶ್ವರ ನಿಯೋಗ್, ಕಾಳೀಚರನ್ ಪಟ್ನಾಯಕ್, ಡಾ. ವಿ. ರಾಘವನ್, ವಾಸಾ ಅಪ್ಪಾರಾವ್ ಮುಂತಾದ ಶಾಸ್ತ್ರಜ್ಞರೂ, ಡಿ. ಜಿ. ವ್ಯಾಸ್, ಜಿ. ವೆಂಕಟಾಚಲಂ, ಮುಂತಾದ ವಿಮರ್ಶಕರೂ ಭಾಗವಹಿಸಿದ್ದರು.

ಒಂಭತ್ತು ದಿನಗಳು ನಡೆದ ಈ ವಿಚಾರ ಸಂಕಿರಣದಲ್ಲಿ ಭಾರತದ ನೃತ್ಯಕಲಾ ಪರಂಪರೆಯ ಸಿಂಹಾವಲೋಕನ ಮಾಡಿದುದೇ ಅಲ್ಲದೆ, ವಿವಿಧ ಪ್ರಕಾರಗಳ ಸಂಪ್ರದಾಯ, ಅವುಗಳ ವೈಶಿಷ್ಟ್ಯ ಅವು ಅಭಿವೃದ್ಧಿಯಾಗಲು ಮಾಡಬೇಕಾದ ಕಾರ್ಯಕ್ರಮಗಳೇ ಮುಂತಾದುವುಗಳ ಬಗೆಗೆ ಬಿಚ್ಚುಮನಸ್ಸಿನ ಚರ್ಚೆ ಮತ್ತು ಪ್ರಾತ್ಯಕ್ಷಿಕೆಗಳೂ ನಡೆದುವು. ಇದೇ ಮೊದಲ ಬಾರಿಗೆ, ನೃತ್ಯಕಲೆಯ ಬೆಳವಣಿಗೆ, ಪ್ರಚಾರ ಮುಂತಾದವುಗಳ ಬಗೆಗೆ ಇರುವ ಕುಂದುಕೊರತೆಗಳನ್ನು ಈ ವಿಧವಿಧ ಪ್ರಕಾರಗಳ ಅಧ್ವರ್ಯುಗಳು ಅರಿಯಲೂ ಹಾಗೂ ವಿಚಾರ ವಿನಿಮಯ ಮಾಡಿಕೊಳ್ಳಲೂ ಅವಕಾಶವಾಯಿತು. ಈ ವಿಚಾರ ಸಂಕಿರಣ ನಡೆವ ವೇಳೆಗೆ ಭಾಷಾವಾರು ಪ್ರಾಂತಗಳ ರಚನೆಯಾಗಿ, ಪ್ರಾದೇಶಿಕ ಶೈಲಿಗಳ ಧ್ವನಿಗಳೂ ಕೇಳಲಾರಂಭವಾಗಿತ್ತು.

ವಿಚಾರ ಸಂಕಿರಣದಲ್ಲಿ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಗಳು, ಬಹುತೇಕ ಭರತನಾಟ್ಯ, ಕಥಕ್ಕಳಿ, ಕಥಕ್ ಮತ್ತು ಮಣಿಪುರಿ ನೃತ್ಯಗಳಿಗೆ ಸಂಬಂಧಿಸಿದ್ದುವು. ಇತರ ಕೆಲವು ರಾಜ್ಯಗಳು ಅಂದರೆ ಒರಿಸ್ಸಾ, ಅಸ್ಸಾಂ ರಾಜ್ಯಗಳ ನೃತ್ಯಗಳ ಬಗೆಗೆ ವಿದ್ವಾಂಸರಿಂದ ಕೇವಲ ವಿಷಯ ಪ್ರತಿಪಾದನೆಯಾಗಿತ್ತು. ಮುಂದೆ ನಾಲ್ಕಾರು ವರುಷಗಳಲ್ಲಿ ಹಲವಾರು ಪ್ರಾದೇಶಿಕ ನೃತ್ಯಶೈಲಿಗಳು ಎದ್ದು ಕಾಣಲು ಪ್ರಾರಂಭವಾಯಿತು. ಕೂಚಿಪುಡಿ, ಒಡಿಸ್ಸಿ, ಚೌ, ಓಝಾಫಲಿ, ಸತ್ರಿಯ, ಒಟ್ಟನ್‌ತುಳ್ಳಲ್, ಚಕ್ಕಿಯಾರ್‌ಕೂತು... ಹೀಗೆ ಒಂದೊಂದಾಗಿ, ಆಯಾ ರಾಜ್ಯದ ಉತ್ಸಾಹಿಗಳಿಂದ ಹೊರತರಲ್ಪಟ್ಟವು. ಈ ಪ್ರವೃತ್ತಿ ಇನ್ನೂ ಇಳಿದಿಲ್ಲ. ಈಚೆಗೆ ಬಂಗಾಳಕ್ಕೆ ವಿಶಿಷ್ಟವಾದುದೆಂದು 'ಗೌರ್' ನೃತ್ಯವೆಂದು ಒಂದು ಶೈಲಿ ಹೊರಬಂದಿದೆ. ಸ್ವಾತಂತ್ರ್ಯ ಬರುವ ಹಿಂದಿನ ಒಂದೆರಡು ದಶಕಗಳಲ್ಲಿಯೇ ನೃತ್ಯಕಲೆಯ ಸ್ಥಿತಿಗತಿಗಳಲ್ಲಿ ಎಷ್ಟೋ ಬದಲಾವಣೆಯಾಗಿದ್ದಿತು. ನೃತ್ಯಕಲೆ ಸಮಾಜದ ಹೀನಾಯಕ್ಕೆ ಗುರಿಯಾಗಿದ್ದು ಅದನ್ನು ಶತಮಾನಗಳಿಂದ ಕಾಪಾಡಿಕೊಂಡು ಬಂದಿದ್ದ ವರ್ಗದವರು, ತ್ಯಜಿಸುವುದರಲ್ಲಿದ್ದರು. ಬೇರೆಯ ಉದ್ಯೋಗ ಹಿಡಿಯುವುದರಲ್ಲಿದ್ದರು. ಕೃಷ್ಣಯ್ಯರ್‌ರವರ ಸತತ ಪ್ರಯತ್ನದಿಂದ ಶಿಷ್ಟವರ್ಗದವರೂ ಕಲಿಯಲು ಪ್ರಾರಂಭಿಸಿ, ಕಲೆಗೆ ಒಂದು ಗೌರವಸ್ಥಾನ ಬಂದಿತು. ಪರಂಪರೆಯಿಂದ ಕಾಪಾಡಿಕೊಂಡು ಬಂದಿದ್ದ ನಟುವನಾರ್‌ಗಳು ಚೇತರಿಸಿಕೊಂಡರು. ಕಲಿವವರ ಸಂಖ್ಯೆ ಹೆಚ್ಚುತ್ತಾ ಅವರಿಗೆ ಆದಾಯವೂ ಹೆಚ್ಚುತ್ತಾ ಬಂದು ಸಮಾಜದಲ್ಲಿಯೂ ಗೌರವ ದೊರೆಯಲಾರಂಭವಾಯಿತು. ಇದನ್ನೇ ಒಡಿಸ್ಸಿ ನೃತ್ಯಕ್ಕೂ ಹೇಳಬಹುದು. ಅಲ್ಲಿಯ ಮಹರಿಗಳೆಂಬ ದೇವದಾಸಿ ವರ್ಗದವರು ಕಾಪಾಡಿಕೊಂಡು ಬಂದ ಕಲೆ ಪ್ರಾಶಸ್ತ್ಯ ಪಡೆಯಿತು.

ಬೇರೆ ಶಿಷ್ಟವರ್ಗದವರೂ ಕಲಿಯಲಾರಂಭಿಸಿ ಅದರ ವ್ಯಾಪ್ತಿಯೂ ಹೆಚ್ಚುತ್ತಾ ಬಂದಿತು. ಕೂಚಿಪುಡಿಯದು ಇನ್ನೊಂದು ಕಥೆ. ಅದನ್ನು ಬೆಳೆಸಿಕೊಂಡು ಬಂದವರು ದೇವದಾಸಿಯರಲ್ಲ, ಬ್ರಾಹ್ಮಣರು. ಆದರೆ ಅವರ ಪ್ರದರ್ಶನಗಳೆಲ್ಲಾ ಬಹುತೇಕ ಗ್ರಾಮಾಂತರಗಳಲ್ಲಿ. ಆದುದರಿಂದ ಅವರಿಗೆ ಶಿಷ್ಟವರ್ಗದಿಂದ ಅಂತಹ ಉತ್ತೇಜನವೇನೂ ದೊರಕುತ್ತಿರಲಿಲ್ಲ. ಇನ್ನೊಂದು ಕಡೆ ಉದಯಶಂಕರ್‌ರವರು ಪ್ರಚಾರಕ್ಕೆ ತಂದ ಬ್ಯಾಲೆ ಮಾದರಿಯ ನೃತ್ಯನಾಟಕಗಳನ್ನು ಅವರ ಶಿಷ್ಯವರ್ಗಕ್ಕೆ ಸೇರಿದ ಶಾಂತಿಬರ್ದನ್, ನರೇಂದ್ರ ಶರ್ಮ ಮುಂತಾದವರು ಇಂಡಿಯನ್ ಪೀಪಲ್ಸ್ ಥಿಯೇಟರ್ಸ್ ಸಂಸ್ಥೆಯ ಆಶ್ರಯದಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದರು.

ಭರತ ನಾಟ್ಯವನ್ನು ಕಲಿತು ಸಾರ್ವಜನಿಕವಾಗಿ ಪ್ರದರ್ಶನವನ್ನಿತ್ತ ಶಿಷ್ಟವರ್ಗದಿಂದ ಬಂದ ಮೊದಲ ಮಹಿಳೆ ಕಲಾನಿಧಿ ನಾರಾಯಣನ್. ಅನಂತರ ಬಂದವರು ರುಕ್ಮಿಣಿದೇವಿ ಅರುಂಡೇಲ್. ರುಕ್ಮಿಣಿದೇವಿಯವರ ಪ್ರವೇಶದಿಂದ ಶಿಷ್ಟವರ್ಗದಲ್ಲಿ ನೃತ್ಯಕಲೆಯ ಬಗೆಗೆ ತೀವ್ರ ಆಸಕ್ತಿ ಉಂಟಾಗಿ ಕ್ರಮೇಣ ಕಲಿವವರ ಸಂಖ್ಯೆ ಹೆಚ್ಚುತ್ತಾ ಬಂದಿತು. ಹಿಂದೆ ಇಸೈವೆಲ್ಲಾಳ ವರ್ಗ (ದೇವದಾಸಿ) ನಿರೂಪಿಸುತ್ತಿದ್ದ 'ಸದಿರ್' ನೃತ್ಯಕ್ಕೆ ಗೌರವಾನ್ವಿತ 'ಭರತನಾಟ್ಯ' ಎಂಬ ಹೆಸರು ಬಂದು ಪ್ರಚಾರವಾಯಿತು. ಪರಂಪರೆಯಿಂದ ಬಂದ ಹಿರಿಯ ನಟ್ಟುವನಾರರ ಬಳಿ ಕಲಿವವರ ಸಂಖ್ಯೆಯು ಕ್ರಮೇಣ ಹೆಚ್ಚುತ್ತಾ ಬಂದಿತು. ಅಲ್ಲದೆ ನೃತ್ಯ ಕಲಾ ಶಿಕ್ಷಣ ನೀಡುವ ಕಲಾಕ್ಷೇತ್ರದಂತಹ ಪ್ರತ್ಯೇಕ ಸಂಸ್ಥೆಗಳೂ ಪ್ರಾರಂಭವಾದವು. ಭರತ ನಾಟ್ಯದಂತೆಯೇ ಕಥಕ್, ಒಡಿಸ್ಸಿ ಮುಂತಾದ ಕ್ಷೇತ್ರಗಳಲ್ಲಿಯೂ ಈ ರೀತಿಯ ಬದಲಾವಣೆ ಕಾಣಬರಲಾರಂಭವಾಯಿತು. ಕೂಚಿಪುಡಿಯ ಕತೆ ಬೇರೆ. ಬಹುತೇಕ ಗಂಡಸರಿಗೇ ಮೀಸಲೆನಿಸಿದ್ದ ಈ ಕ್ಷೇತ್ರಕ್ಕೆ ಹೆಂಗಸರೂ ಪ್ರವೇಶ ಮಾಡಲು ಪ್ರಾರಂಭವಾಯಿತು. ಭಾರತದ ನೃತ್ಯ ಕಲೆಯ ಬಗೆಗೆ ವಿದೇಶಗಳಲ್ಲಿಯೂ ಆಸಕ್ತಿ ಹೆಚ್ಚುತ್ತಾ ಅವುಗಳನ್ನು ಕಲಿವ ಆಸಕ್ತರೂ ಗಣನೀಯ ಪ್ರಮಾಣದಲ್ಲಿ ಭಾರತಕ್ಕೆ ಬರಲಾರಂಭಿಸಿದರು. ಅವರಲ್ಲಿ ಕೆಲವರು ಪ್ರಾವೀಣ್ಯತೆಯನ್ನು ಸಾಧಿಸಿದ್ದಾರೆ. ಇನ್ನು ಈ ಎರಡು ಮೂರು ದಶಕಗಳಿಂದ ಭಾರತದ ಹೊರಗೂ ಇಲ್ಲಿನ ನೃತ್ಯಕಲೆಗಳು ಬೇರುಬಿಟ್ಟಿವೆ. ಇವುಗಳಲ್ಲಿ ಭರತನಾಟ್ಯದ ಪ್ರಮಾಣ ಅಧಿಕ. ಮಿಕ್ಕ ಪ್ರಕಾರಗಳಿಗೂ ಸಾಕಷ್ಟು ಕಲಿವ ವರ್ಗ ಬೆಳೆದಿದೆ. ಈ ಹಿನ್ನೆಲೆಯಿಂದ ಭಾರತದ ಇಂದಿನ ನೃತ್ಯಕಲೆಯ ಸ್ಥಿತಿಗತಿಗಳನ್ನು ಪರಿಶೀಲಿಸಬೇಕಾಗಿದೆ. ಈ ಪರಿಶೀಲನೆ ಕಲಿಕೆ, ಪ್ರದರ್ಶನಾವಕಾಶ, ಪ್ರೋತ್ಸಾಹ, ಹೊಸ ದಿಕ್ಕಿನತ್ತ ಪ್ರಯತ್ನ ಮುಂತಾದ ಬೇರೆ ಬೇರೆ ದೃಷ್ಟಿಯಿಂದ ಮಾಡಬೇಕಾಗಿದೆ.

ಇಂದು ಕಲಿಕೆಯ ವಿಧಾನದಲ್ಲಿ ಪರಿಣತರಾದ ಹಿರಿಯ ಗುರುಗಳಿಂದ ನೇರವಾಗಿ ಮನೆಗಳಲ್ಲಿ ಕಲಿವುದು ಅಥವಾ ಅಂತಹ ಗುರುಗಳು ಅಥವಾ ಇತರ ನರ್ತಕ ನರ್ತಕಿಯರೂ ನಡೆಸುವ ಖಾಸಗಿ ಶಾಲೆಗಳಲ್ಲಿ ಕಲಿವುದು – ಹೀಗೆ ಎರಡು ಮಾರ್ಗಗಳಿವೆ. ಇದಲ್ಲದೆ ಹೆಚ್ಚಿನ ಅಧ್ಯಯನ, ಸಂಶೋಧನೆ ಮುಂತಾದುವುಗಳ ಬಗೆಗೆ ಕೆಲವು ವಿಶ್ವವಿದ್ಯಾಲಯಗಳಲ್ಲಿಯೂ ಅವಕಾಶವಿದೆ. ಇದಲ್ಲದೆ ರುಕ್ಮಿಣಿ ದೇವಿಯವರು ಮದರಾಸಿನಲ್ಲಿ ಸ್ಥಾಪಿಸಿರುವ ಕಲಾಕ್ಷೇತ್ರ, ಕವಿ ವಲ್ಲತ್ತೋಳ್‌ರವರು ಕೇರಳದಲ್ಲಿ ಸ್ಥಾಪಿಸಿದ ಕಲಾಮಂಡಲ, ಆಂಧ್ರದ ಕೂಚಿಪುಡಿ

ಗ್ರಾಮದಲ್ಲಿರುವ ಸಿದ್ಧೇಂದ್ರ ಕಲಾಕ್ಷೇತ್ರ, ಭುವನೇಶ್ವರದಲ್ಲಿರುವ ಒಡಿಸ್ಸಿ ಡ್ಯಾನ್ಸ್ ರಿಸರ್ಚ್ ಸೆಂಟರ್, ದೆಹಲಿಯಲ್ಲಿರುವ ಕಥಕ್ ಕೇಂದ್ರ, ಇಂಫಾಲದಲ್ಲಿರುವ ಜವಾಹರಲಾಲ್ ಮಣಿಪುರಿ ನೃತ್ಯ ಶಿಕ್ಷಣ ಕೇಂದ್ರ – ಹೀಗೆ ಹಲವಾರು ಪ್ರತಿಷ್ಠಿತ ಸಂಸ್ಥೆಗಳೂ ಇವೆ.

ಈ ಎಲ್ಲ ಮೂಲಗಳಿಂದ ಪ್ರತಿವರುಷವೂ ಸಾವಿರಾರು ಮಂದಿ ಶಿಕ್ಷಣ ಪಡೆದ ನರ್ತಕ ನರ್ತಕಿಯರು ನೃತ್ಯ ಕಲಾಕ್ಷೇತ್ರಕ್ಕೆ ಅಡಿ ಇಡುತ್ತಿದ್ದಾರೆ. ಸ್ವತಂತ್ರ ಭಾರತದ ಪ್ರಾರಂಭದ ದಿನಗಳಲ್ಲಿ ಒಂದೊಂದು ಪ್ರಕಾರದಲ್ಲಿಯೂ ಅತೀ ಹೆಚ್ಚು ಎಂದರೆ ನಲವತ್ತು ಐವತ್ತು ಮಂದಿಗಿಂತ ಶಿಕ್ಷಣ ಪಡೆದವರಿರಲಿಲ್ಲ. ಆದರೆ ಈಗ ಸ್ಥಿತಿ ಬದಲಾಗಿದೆ. ಕೇವಲ ಒಂದು ವರ್ಗಕ್ಕೆ ಸೀಮಿತವಾಗಿದ್ದ ಈ ನೃತ್ಯಕಲೆಯನ್ನು ಕಲಿಯಲು ಎಲ್ಲ ವರ್ಗಗಳಿಂದಲೂ ಆಸಕ್ತರು ಮುಂದೆ ಬರುತ್ತಿದ್ದಾರೆ. ಅದಕ್ಕೂ ಮಿಗಿಲಾಗಿ ವಿದೇಶಿಯರು ಬಂದು ಇಲ್ಲಿ ಹೆಸರಾಂತ ಗುರುಗಳ ಬಳಿ ಕಲಿಯುತ್ತಿದ್ದಾರೆ. ನೃತ್ಯ ಗುರುಗಳ ಆರ್ಥಿಕ ಸ್ಥಿತಿ ಉತ್ತಮಗೊಂಡಿದೆ. ಈ ಆಸಕ್ತರಲ್ಲಿ ವಿಶ್ವವಿದ್ಯಾಲಯಗಳ ಪದವೀಧರರು ಬಹುಮಂದಿ ಇದ್ದಾರೆ. ಇದರ ಫಲವಾಗಿ ಕೇವಲ ಪಾಠ ಒಪ್ಪಿಸುವಂತಹ ಸ್ಥಿತಿ ತಪ್ಪಿ, ಕಲೆಯಲ್ಲಿ ಶಾಸ್ತ್ರಭಾಗದ ಅಧ್ಯಯನ, ಪ್ರಯೋಗ ಇವುಗಳ ಬಗೆಗೂ ಗಮನ ಹೆಚ್ಚುತ್ತಿವೆ.

ನೃತ್ಯವು ಪ್ರದರ್ಶನ ಕಲೆ. ಆದುದರಿಂದ ಅದು ವೃದ್ಧಿಯಾಗಲು ಪ್ರದರ್ಶನಾವಕಾಶಗಳು ಅಗತ್ಯ. ಹಿಂದೆ ಇಂತಹ ಪ್ರದರ್ಶನಗಳು, ಅರಮನೆ, ದೇವಾಲಯದ ವಿಧಿ ಮತ್ತು ಮದುವೆ ಮುಂತಾದ ಸಮಾರಂಭಗಳಲ್ಲಿ ಮಾತ್ರ ನಡೆಯುತ್ತಿತ್ತು. ಈಗ ಈ ಮೂರೂ ಆಸರೆಗಳೂ ಇಲ್ಲ. ಅದರ ಬದಲು ಸಾರ್ವಜನಿಕ ಸಭಾಭವನಗಳ ರಂಗಮಂಟಪದಲ್ಲಿ ಆಧುನಿಕ ವಿದ್ಯುದ್ದೀಪಾದಿ ಸೌಕರ್ಯಗಳಿಂದ ಇನ್ನೂ ಆಕರ್ಷಣೀಯವಾಗಿ ನಡೆಯುತ್ತಿವೆ. ಈ ರೀತಿಯ ಪ್ರೋತ್ಸಾಹ ಸಾರ್ವಜನಿಕರು ಮತ್ತು ಸರಕಾರ ಎರಡೂ ಕಡೆಯಿಂದ ನಡೆಯುತ್ತಿದೆ. ಸಾರ್ವಜನಿಕವಾಗಿ ಸಭಾ ಕಾರ್ಯಕ್ರಮ ಹಾಗೂ ಪ್ರತ್ಯೇಕ ನೃತ್ಯೋತ್ಸವ ಮುಂತಾದ ರೀತಿಯಲ್ಲಿ ಪ್ರದರ್ಶನಾವಕಾಶಗಳು ದೊರೆಯುತ್ತಿವೆ. ಸರಕಾರದ ವತಿಯಿಂದ ಅದರ ಆಶ್ರಯದಲ್ಲಿ ನಡೆವ ಕಲಾಮಹೋತ್ಸವಗಳು, ವಿದೇಶಗಳಿಗೆ ಕಳಿಸಲಾಗುವ ಸಾಂಸ್ಕೃತಿಕ ತಂಡಗಳಲ್ಲಿ ನೃತ್ಯಕಲಾವಿದರಿಗೆ ಅವಕಾಶಗಳು ಸಿಗುತ್ತಿವೆ. ಇನ್ನು ಪ್ರೋತ್ಸಾಹದ ಬಗೆಗೆ ಹೇಳಬೇಕಾದರೆ, ಸ್ವಾತಂತ್ರ್ಯದ ನಂತರ ಭಾರತದಲ್ಲಿ ದೊರೆಯುವಷ್ಟು ಪ್ರಮಾಣ ಈ ಹಿಂದೆ ಇರಲಿಲ್ಲವೆನ್ನಬೇಕು. ಈ ಭಾಗದಲ್ಲಿ ಪ್ರಪಂಚದ ಅನೇಕ ದೇಶಗಳಿಗಿಂತ ಭಾರತವು ಮುಂದಿದೆ ಎನ್ನಬಹುದು. ರಾಜ್ಯ ಅಕಾಡೆಮಿಗಳಿಂದ ವಿದ್ಯಾರ್ಥಿವೇತನಗಳನ್ನು ಕೊಡಲಾಗುತ್ತಿದೆ. ಕೇಂದ್ರದ ಸಾಂಸ್ಕೃತಿಕ ವಿದ್ಯಾರ್ಥಿವೇತನಗಳಿವೆ. ವಿಶೇಷ ಅಧ್ಯಯನ, ಸಂಶೋಧನೆಗಳಿಗೆ ಫೆಲೋಶಿಪ್‌ಗಳಿವೆ. ರಾಜ್ಯ ಮತ್ತು ಕೇಂದ್ರ ಎರಡೂ ಕಡೆಯಿಂದ ಅಕಾಡೆಮಿಗಳು, ಸಾಂಸ್ಕೃತಿಕ ಇಲಾಖೆ ಮುಂತಾದ ಕಡೆಯಿಂದ ಬಿರುದು, ಪ್ರಶಸ್ತಿಗಳು. ಅವುಗಳಲ್ಲಿ ಕೆಲವು ಪ್ರಶಸ್ತಿಗಳೊಂದಿಗೆ ದೊರೆವ ದ್ರವ್ಯದ ಮೊತ್ತ ಈ ಹಿಂದೆ ಕಾಣದಿದ್ದ ಪ್ರಮಾಣದವು.

ಹೀಗೆ ಈ ಕ್ಷೇತ್ರದಲ್ಲಿ ಅನುಕೂಲವಾದ ವಾತಾವರಣವೇರ್ಪಡುತ್ತಾ ಬೆಳೆಯೂ ಹುಲುಸಾಗಿದೆ. ಬಂಪರ್ ಕ್ರಾಪ್ ಅಂಥಾರಲ್ಲ. ಆ ಪ್ರಮಾಣಕ್ಕೆ ಬಂದಿದೆ. ನರ್ತಕ ನರ್ತಕಿಯರ ಒಂದು ಹೊಳೆಯೇ ಹರಿದು ಬರುತ್ತಿದೆ. ಈ ಹೊಳೆಯ ಪ್ರಭಾವ ಭಾರತದ ಹೊರಕ್ಕೂ ತಲುಪಿದೆ. ಮದುವೆಯಾಗಿ ವಿದೇಶಗಳಿಗೆ ಹೋದ ನರ್ತಕಿಯರು ಅಲ್ಲಿಯೇ ಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಇದು ಭರತ ನಾಟ್ಯ, ಕೂಚಿಪುಡಿ, ಒಡಿಸ್ಸಿ, ಕಥಕ್ ಪ್ರಕಾರಗಳಲ್ಲಿ ಹೆಚ್ಚು ಕಾಣಬರುತ್ತಿದೆ. ಈ ಪ್ರಮಾಣ ನೃತ್ಯಗಾರರು ತಯಾರಾಗುತ್ತಿರುವುದು ಒಳ್ಳೆಯದೇ? ಕಲೆಯ ಬಗೆಗೆ ಅವರ ತೀವ್ರಾಸಕ್ತಿಯ ಸೂಚನೆಯೇ? ಬೇರೆ ಕಾರಣಗಳೂ ಇವೆಯೇ? ಎಂಬ ಪ್ರಶ್ನೆಗಳು ಮೂಡುವುದೂ ಸಹಜ. ಈ ಪ್ರವಾಹವು ಬಹುಕಾಲದಿಂದ ನೃತ್ಯಕಲೆಗೆ ಆಧಾರವೆನಿಸಿದ್ದ ಅನೇಕ ಅಂಶಗಳನ್ನು ಕೊಚ್ಚಿಕೊಂಡು ಹೋಗುತ್ತಿದೆ.

ಮೊದಲನೆಯದು, ಪರಂಪರೆಯಿಂದ ನೃತ್ಯಕಲೆಯನ್ನು ಬೆಳೆಸಿಕೊಂಡು ಬಂದ ವರ್ಗದವರಿಂದ ಶಿಷ್ಟವರ್ಗದ ಕೈಗೆ ಬಂದನಂತರ ಕಲೆಯಲ್ಲಿ ಹಾಗೂ ಅದರ ಹಿಂದಿನ ಮನೋಭಾವದಲ್ಲಿ ವ್ಯತ್ಯಾಸಗಳಾಗುವುದು ಸಹಜ. ಇದು ಮೂಲ ಮೌಲ್ಯ, ನಂಬಿಕೆ ಮುಂತಾದವುಗಳಲ್ಲಿ. ದೇವದಾಸಿ ವರ್ಗದವರು ಅನೂಚಾನವಾಗಿ ಬಂದ ಕಟ್ಟುಪಾಡು, ನಂಬಿಕೆ ಹಾಗೂ ಮೌಲ್ಯಗಳಿಗೆ ಬದ್ಧರಾಗಿದ್ದರು. ಅವುಗಳನ್ನು ಮೂಢನಂಬಿಕೆ ಎಂದರೂ ಪರವಾ ಇಲ್ಲ. ಮೀರುತ್ತಿರಲಿಲ್ಲ. ಈ ಶಿಸ್ತು ನೃತ್ಯ ಕಲೆಯ ಮೂಲ ಗುಣ ಹಾಗೂ ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿತು. ಶಿಷ್ಟವರ್ಗದವರಾದರೋ, ಈ ಕಟ್ಟುಪಾಡುಗಳಿಗೆ ಬದ್ಧರಲ್ಲ. ಅಲ್ಲದೆ ಅವರಲ್ಲಿ ಬಹುಮಂದಿ ಇಂದಿನ ಆಂಗ್ಲ ರೀತಿಯ ಶಿಕ್ಷಣ ಪಡೆದವರು. ವಿಷಯವನ್ನು ವಿಚಾರದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಸ್ವಭಾವದವರು. ಈ ವರ್ಗದಿಂದ ಮೊದಲು ಮೊದಲು ಕಲಿತವರು ಆಧುನಿಕ ದೃಷ್ಟಿಯಿದ್ದರೂ, ಪರಂಪರಾನುಗತವಾದ ಮೌಲ್ಯಗಳಲ್ಲಿ ಅಭಿಮಾನ ಇದ್ದವರು. ಅಲ್ಲದೆ ನೃತ್ಯಕಲೆಗೆ ಆಧಾರವೆನಿಸಿದ ಸಂಗೀತ, ಸಂಸ್ಕೃತ, ಪುರಾಣ ಮುಂತಾದುವುಗಳನ್ನು ಅರಿತಿದ್ದವರು. ಹಳೆಯ ರೀತಿಯ ಗುರುಗಳ ಬಳಿ ಭಕ್ತಿ ಶ್ರದ್ಧೆಗಳಿಂದ, ಕಷ್ಟಗಳನ್ನೆಲ್ಲಾ ಸಹಿಸಿ ಕಲಿತವರು. ಆದರೆ ಬರುಬರುತ್ತಾ ಇವೆಲ್ಲಾ ಹಿಂದೆ ಸರಿಯಲಾರಂಭವಾಗಿ ಈಗ ಒಂದು ಆಭಾಸ ಸ್ಥಿತಿಗೆ ಬಂದಿದೆ.

ಇಂದಿನ ಯುವ ಪೀಳಿಗೆಯು ಕ್ರಮೇಣ ನಮ್ಮ ಪರಂಪರೆಯ ಸಂಸ್ಕೃತಿ ಮತ್ತು ಅದರ ಮೌಲ್ಯಗಳಿಗೆ ವಿಮುಖವಾಗುತ್ತಿದೆ. ಇಂದು ನೃತ್ಯ ಕಲಿಯಲು ನುಗ್ಗುತ್ತಿರುವವರಲ್ಲಿ ಬಹುಪಾಲು ಕಾನ್ವೆಂಟ್ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದವರು. ಅವರಿಗೆ ಈ ಕಲೆಗೆ ಅವಶ್ಯಕವಾದ ಸಂಗೀತ, ಭಾಷಾಜ್ಞಾನ, ಪುರಾಣ ಮುಂತಾದುವುಗಳ ತಿಳುವಳಿಕೆ, ನಿಷ್ಠೆ ಇದಾವುವೂ ಇಲ್ಲ. ಅಷ್ಟೇಕೆ ಅವರ ಮಾತೃಭಾಷೆಯಲ್ಲಿಯೇ ತಿಳುವಳಿಕೆ ಸಾಲದು. ಈ ಹಿನ್ನೆಲೆಯಲ್ಲಿ ಕಾಳಿದಾಸನು 'ನೇತ್ರಯಜ್ಞ' ಎಂದು ಕರೆದ ನೃತ್ಯಕಲೆಯ ಪಾಡೇನು? ಬೇರಿಲ್ಲದ ಮರದಂತೆ ಹಣ ತೆತ್ತು ಕಲಿತ ಕೆಲವು ಅಂಶಗಳನ್ನು ಯಾಂತ್ರಿಕವಾಗಿ ಸೂತ್ರದ ಗೊಂಬೆಯಂತೆ ನಿರ್ವಹಿಸುವರು. ಅದರ ಅರ್ಥ, ಭಾವ ಮುಂತಾದುವುಗಳ ಬಗೆಗೆ ತಿಳುವಳಿಕೆ ಇಲ್ಲದೆ, ಅವರ ಗುರಿ ಕೇವಲ ರಂಗಸ್ಥಳದಲ್ಲಿ

ಮೆರೆಯಬೇಕು. ಒಂದು ಶಿಸ್ತು, ಮೌಲ್ಯಗಳ ಬಗೆಗೆ ನಿಷ್ಠೆ ಯಾವುದೂ ಇಲ್ಲದೇ ಕೇವಲ ಪ್ರದರ್ಶನ ಸಾಧ್ಯವಾದರೆ ಅದರ ಆರ್ಥಿಕ ಲಾಭ ಇವುಗಳ ಬಗೆಗೇ ಈ ಹೊಸ ಪೀಳಿಗೆಯ ಬಹುಮಂದಿಯ ದೃಷ್ಟಿ ಕೇಂದ್ರೀಕೃತವಾಗಿದೆ. ಕಲೆಯಲ್ಲಿಯೂ ಹೊಸ ಪ್ರಯೋಗದ ಹೆಸರಿನಲ್ಲಿ ಕಲಸುಮೇಲೋಗರ ಮಾಡುವ ಪ್ರವೃತ್ತಿ ಬೆಳೆದಿದೆ. ನೃತ್ಯಕಲೆ ಇಂದು ಗ್ಲಾಮರ್ - ಮೋಹಕತೆಯ ಸಾಧನವೆನಿಸುತ್ತಿದೆ. ಸಾಮಾಜಿಕ ಅಂತಸ್ತಿನ ಸಂಕೇತವಾಗಿ ಪರಿಣಮಿಸುತ್ತಿದೆ. ಕಡಿವಾಣ ಕಳೆದುಕೊಂಡು ಓಡುತ್ತಿರುವ ಕುದುರೆಯಂತೆ ಆಗಿ ಕೆಲವು ಅನಿಷ್ಟ ಪ್ರವೃತ್ತಿಗಳಿಗೂ ಅವಕಾಶ ಮಾಡಿದೆ. ಈ ಪರಿಸ್ಥಿತಿಯಿಂದ ಆತಂಕಗೊಂಡು ಸುವರ್ಣ ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ ವಿಚಾರಸಂಕಿರಣ ಇತ್ಯಾದಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪ್ರಜಾವಾಣಿ, 1997

30. ರುಕ್ಮಿಣಿದೇವಿ : ಸಾಂಸ್ಕೃತಿಕ ಕ್ಷೇತ್ರದ ಧ್ರುವತಾರೆ

ರುಕ್ಮಿಣಿ ಅರುಂಡೇಲ್ ಹೆಸರು ವಿಚಿತ್ರ ಮಿಶ್ರಣ. ಪೂರ್ವ-ಪಶ್ಚಿಮದ ಬೆರಕೆ. ಅದನ್ನು ಧರಿಸಿದ್ದ ವ್ಯಕ್ತಿ ಮತ್ತು ಜೀವನ ಎರಡೂ ಅಷ್ಟೇ ವಿಚಿತ್ರವಾಗಿತ್ತು. ಹುಟ್ಟಿ ಬೆಳೆದುದು ಪಕ್ಕಾ ನಿಷ್ಠಾವಂತ ಬ್ರಾಹ್ಮಣ ಕುಟುಂಬದಲ್ಲಿ, ಮದುವೆಯಾದದ್ದು ವೈದಿಕರು 'ಹೂಣ'ರೆಂದು ಹೀಯಾಳಿಸುವ ಪರಂಗಿಯವನನ್ನು. ಇನ್ನು ಮುಂದೆ ಗಾಯಕ್ಕೆ ಉಪ್ಪು ಉಜ್ಜಿದ ಹಾಗೆ ಕಲಿತದ್ದು, ಆ ಕಾಲದಲ್ಲಿ ಕುಲಸ್ಥರು ಕಣ್ಣೆತ್ತಿಯೂ ನೋಡಬಾರದ ನೃತ್ಯವಿದ್ಯೆ. ಅಂದಿನ ಸಂಪ್ರದಾಯಕರೂ ಸಮಾಜಕ್ಕೆ ಕ್ರಾಂತಿಕಾರಕವಾಗಿ ಕೋಲಾಹಲವೆಬ್ಬಿಸಿದ ಸಮಸ್ಯಾ ಮಹಿಳೆ – ರುಕ್ಮಿಣಿದೇವಿ. ಪತಿ ಜಾರ್ಜ್ ಅರುಂಡೇಲ್‌ರವರ ನಿಧನಾನಂತರ ಎಲ್ಲರೂ ಆಕೆಯನ್ನು ಕರೆಯುತ್ತಿದ್ದುದು ರುಕ್ಮಿಣಿದೇವಿ ಎಂದೇ.

ಇದು ಒಂದು ಸೋಜಿಗವೇ ಸರಿ. ಆದರೆ ಹೇಗೆ ಆಯಿತು? ರುಕ್ಮಿಣಿದೇವಿಯವರ ತಂದೆ ನೀಲಕಂಠಶಾಸ್ತ್ರಿಗಳು ನಿಷ್ಠಾವಂತರು, ಸಂಸ್ಕೃತಪಂಡಿತರು. ಆದರೆ ಅವರು ಬ್ರಹ್ಮಜ್ಞಾನಿ (ಥಿಯೋಸೊಫಿಸ್ಟ್) ಸಹ. ಇಲ್ಲಿ ಮಾನವೀಯ ಮೌಲ್ಯಗಳು ಪ್ರಧಾನ. ಮನಸ್ಸು ಮತ್ತು ಹೃದಯ ವೈಶಾಲ್ಯ ಈ ಪಂಥದವರಿಗೆ ಸ್ವಾಭಾವಿಕ. ರುಕ್ಮಿಣಿದೇವಿಯವರ ಜೀವನ ಮತ್ತು ಸಾಧನೆಯನ್ನು ಈ ಹಿನ್ನೆಲೆಯಿಂದ ನೋಡಿದಲ್ಲಿ ಆಶ್ಚರ್ಯವೆನಿಸದು. ಜೊತೆಗೆ ಮನೋದಾರ್ಢ್ಯ. ಮನಸ್ಸಿಗೆ ಸರಿ ಎನಿಸಿದುದನ್ನು ಬಿಡದೆ ಸಾಧಿಸುವ ಗುಣ. ಇದರ ಫಲವಾಗಿ ರೂಪುಗೊಂಡ ರುಕ್ಮಿಣಿದೇವಿ ಭಾರತ ಸಾಂಸ್ಕೃತಿಕ ಕ್ಷೇತ್ರದ ಧ್ರುವತಾರೆಯಂತೆ ಬೆಳೆದರು. ಅವರ ಕಾರ್ಯಕ್ಷೇತ್ರ ವಿವಿಧ ಮುಖ ಮತ್ತು ವಿಶಾಲ. ಆದರೆ ರುಕ್ಮಿಣಿದೇವಿಯವರು ಚಿರಸ್ಮರಣೀಯರಾಗಿರುವುದು ನೃತ್ಯ ಕಲಾಕ್ಷೇತ್ರದಲ್ಲಿ, ಆ ಕಲೆಯ ಪುನರುದ್ಧಾರಕರಾಗಿ.

ಒಮ್ಮೆ ಯಾವುದೋ ಸಭೆಯಲ್ಲಿ ರುಕ್ಮಿಣಿದೇವಿ ಮತ್ತು ಬಾಲಸರಸ್ವತಿಯರ ಒಂದು ರೀತಿಯ ತುಲನಾತ್ಮಕ ರೀತಿಯ ಮಾತುಕತೆ ನಡೆಯಿತು. ದಕ್ಷಿಣಭಾರತ ನೃತ್ಯ ಪ್ರಪಂಚದಲ್ಲಿ ಈ ಇಬ್ಬರು ಎರಡು ಕೇಂದ್ರ ಬಿಂದುಗಳಿದ್ದಂತೆ. ಬಾಲಸರಸ್ವತಿಯವರಿಗಿಂತ ರುಕ್ಮಿಣಿದೇವಿ ಹದಿನಾರು ವರುಷ ಹಿರಿಯರು. ಆದರೆ ನೃತ್ಯವೇದಿಕೆಯ ಮೇಲೆ ಬಾಲಸರಸ್ವತಿಯವರದು ಹತ್ತು ವರುಷಗಳಷ್ಟು ಹೆಚ್ಚು ಅನುಭವ. ಕಲಾಭಿಜ್ಞತೆಯಲ್ಲಿ ಇಬ್ಬರದೂ ಸಮತೂಕ. ಆದರೆ ಅಭಿವ್ಯಕ್ತಿಯಲ್ಲಿ ಬಾಲಸರಸ್ವತಿಯವರದು ಮೇಲುಗೈ. ರುಕ್ಮಿಣಿದೇವಿಯವರೇ ಮೆಚ್ಚಿ ಸ್ಮರಿಸುವರು. ಕಲಾಕ್ಷೇತ್ರದಲ್ಲಿ ಮಹಾನ್ ತಾರೆಗಳಂತೆ ಬೆಳಗಿದ ಇಬ್ಬರ ನಂತರ ಯಾರ ಯಾರ ಪ್ರಭಾವಮುದ್ರೆ ಎಷ್ಟೆಷ್ಟು? ಇದು ಸ್ವಲ್ಪ ತೊಡಕಾದ ಪ್ರಶ್ನೆ. ಬಾಲಸರಸ್ವತಿ ಅದ್ವಿತೀಯ ಕಲಾವಿದೆ. ತನ್ನ ಪ್ರತಿಭೆಯಿಂದ ನೃತ್ಯ ಕಲಾಕ್ಷೇತ್ರವನ್ನು ಬೆಳಗುವರು. ಅನಂತರ ಮುಂದಿನ ಪೀಳಿಗೆಗೆ ಅದರ ಸವಿ ನೆನಪೇ ಲಭ್ಯ. ರುಕ್ಮಿಣಿದೇವಿ ಪ್ರಬುದ್ಧ ಕಲಾವಿದೆ. ನೃತ್ಯ ಕಲಾಕ್ಷೇತ್ರವನ್ನು ಬೆಳಗುವುದರಲ್ಲಿ ಬಾಲ ಅವರಷ್ಟು ಪ್ರಕಾಶಬೀರದಿದ್ದರೂ ಅಷ್ಟೇ ಮಾನ್ಯತೆ ಪಡೆದಿದ್ದಾರೆ. ಅವರ ನಂತರವೂ ಅವರ ಪ್ರಭಾವ ಮುದ್ರೆ ನೃತ್ಯಕಲಾಕ್ಷೇತ್ರದಲ್ಲಿ ಬಹುಕಾಲ ಅನುಭವವಾಗುತ್ತಿರುತ್ತದೆ ಎಂದು ಒಮ್ಮತ ಅಭಿಪ್ರಾಯ ಮೂಡಿ ಬಂದಿತು.

ನಿಜ. ಇಂದು ಯಾವ ಭರತನಾಟ್ಯ ಕಾರ್ಯಕ್ರಮವೇ ಆಗಲೀ ಅದರ ಹಿಂದಿನ ಶಕ್ತಿ ರುಕ್ಮಿಣಿದೇವಿಯವರೇ ಎಂದು ಹೇಳಬಹುದು. ವಂಶಪಾರಂಪರ್ಯವಾಗಿ ಬಂದ ಈ ದಿವ್ಯಕಲೆಯನ್ನು ಪೋಷಿಸಿಕೊಂಡು ಬಂದ ದೇವದಾಸಿವರ್ಗ ಸಮಾಜಸುಧಾರಕರ ಕ್ರೂರದೃಷ್ಟಿಗೆ ಬಿದ್ದು, ದೇವದಾಸಿ ಮತ್ತು ಕಲೆ ಎರಡೂ ನಿರ್ನಾಮವಾಗುವಂತಹ ಪರಿಸ್ಥಿತಿಯಲ್ಲಿ ರುಕ್ಮಿಣೀದೇವಿಯವರ ಪ್ರವೇಶವಾಗಿ ಕಲೆ ಉಳಿದುಕೊಂಡಿತು. ಅಲ್ಲದೆ ಅದಕ್ಕೆ ಸಮಾಜದಲ್ಲಿ ಗೌರವ ಪ್ರತಿಷ್ಠೆ ಹೆಚ್ಚಿತು. ವ್ಯಾಪ್ತಿಯೂ ಹೆಚ್ಚಿತು. ಸಮಾಜದ ಶಿಷ್ಟವರ್ಗ ಧೈರ್ಯದಿಂದ ಆದರದಿಂದ ನೃತ್ಯಕಲೆಯನ್ನು ಸ್ವಾಗತಿಸಿ ಬೆಳೆಯಿಸಿತು. ಮೊದಲು ಸ್ವಲ್ಪ ಬ್ಯಾಲೆ ನೃತ್ಯದ ರುಚಿಕಂಡ ರುಕ್ಮಿಣಿದೇವಿಯವರು ಮುಂದೆ ಹೆಸರಾಂತ ಗುರುಗಳಿಂದ ದಾಕ್ಷಿಣಾತ್ಯ ನೃತ್ಯವನ್ನು ಕ್ರಮಬದ್ಧವಾಗಿ ಕಲಿತರು. ಮೈಲಾಪುರಗೌರಿ ಅಮ್ಮಾಳ್, ಪಂಡನಲ್ಲೂರ್ ಮೀನಾಕ್ಷಿಸುಂದರಂ ಪಿಳ್ಳೆ ಮುಖ್ಯ ಗುರುಗಳು.

ಸ್ವತಃ ಸಂಸ್ಕೃತದಲ್ಲಿ ಗಾಢವಾದ ಪಾಂಡಿತ್ಯ, ಸಂಗೀತದಲ್ಲಿ ಪ್ರೌಢಿಮೆ, ಕಲೆಯ ಎಲ್ಲ ಪ್ರಕಾರಗಳಲ್ಲಿಯೂ ಆಸಕ್ತಿ, ಚಿಂತನಶೀಲೆ, ಜೊತೆಗೆ ಪರಂಪರೆಯಿಂದ ಬಂದ ನೃತ್ಯಕಲೆಗೆ ಅಂಟಿದ್ದ ಕಳಂಕವನ್ನೆಲ್ಲಾ ತೊಳೆದು ಅದು ನಿಜಸೌಂದರ್ಯದಿಂದ ಬೆಳಗುವಂತೆ ಪುನರುದ್ಧರಿಸ ಬೇಕೆಂಬ ಸಂಕಲ್ಪ. ನೃತ್ಯಕಲೆಗೆ ಒಂದು ಹೊಸ ವರ್ಚಸ್ಸು ಕೊಟ್ಟು ಪ್ರಚಾರಮಾಡಿ ಅದಕ್ಕೆ ಯುಕ್ತ ಮಾನ್ಯತೆ ಮತ್ತು ಜನಪ್ರಿಯತೆ ಗಳಿಸಿಕೊಟ್ಟ ಮಹಾನ್ ಕೈಂಕರ್ಯ – ರುಕ್ಮಿಣಿದೇವಿಯವರದು. ನೃತ್ಯಕಲೆಯ ಒಂದೊಂದೂ ಅಂಶವನ್ನು ಪರಿಶೀಲಿಸಿ, ಪರಿಷ್ಕರಿಸಿ, ಏನಾದರೂ ಕೊಳೆ ಹತ್ತಿದ್ದಲ್ಲಿ

ತೊಳೆದು ನಿಜಮೌಲ್ಯದಿಂದ ಶೋಭಿಸುವಂತೆ ವೇದಿಕೆಯ ಮೇಲೆ ತಂದರು. ಇಂದು ದಾಕ್ಷಿಣಾತ್ಯಶೈಲಿಯ ನೃತ್ಯ ಮಾಡುವ ಅನೇಕ ಕಲಾವಿದರಿಗಾಗಲಿ, ಪ್ರೇಕ್ಷಕರಿಗಾಗಲಿ, ಕಾರ್ಯಕ್ರಮದಲ್ಲಿ ರುಕ್ಮಿಣಿದೇವಿಯವರ ಪ್ರಭಾವವೆಷ್ಟಿದೆಯೆಂಬ ಸಂಗತಿ ಅರಿವಿಲ್ಲ. ಮೊದಲನೆಯದಾಗಿ ಈ ನೃತ್ಯ ಪದ್ಧತಿಗೆ ಇಟ್ಟಿರುವ ಹೆಸರು - ಭರತನಾಟ್ಯ. ರುಕ್ಮಿಣಿದೇವಿಯವರ ಕೈಂಕರ್ಯ. ಎರಡನೆಯದಾಗಿ ರಂಗಸಜ್ಜಿಕೆ – ಹಿಮ್ಮೇಳದವರು ಕೂಡುವ ರೀತಿ, ನರ್ತಕಿಯ ವಸ್ತ್ರರಚನೆ, ಮುಂತಾದವೆಲ್ಲಾ ಅವರಿಂದ ಪರಿಷ್ಕರಿತವಾದ ರೂಪದಲ್ಲಿವೆ. ಬೆಳಕಿನ ಉಪಯೋಗವೂ ಅಷ್ಟೇ.

ಕಲೆಯಲ್ಲಿ ಮೂಲ ಆಧ್ಯಾತ್ಮಿಕ ಭಾವವೇ ಪ್ರಧಾನವಾಗಿ ಇರಬೇಕೆಂದು ಸಂಕಲ್ಪಿಸಿದ ರುಕ್ಮಿಣಿದೇವಿಯವರು ತಮ್ಮ ತತ್ವಗಳನ್ನು ಕಾರ್ಯಗತಮಾಡಲು ಒಂದು ಶಿಕ್ಷಣಸಂಸ್ಥೆಯನ್ನೇ ಪ್ರಾರಂಭಿಸಿದರು. ಅದೇ ಅಂತರರಾಷ್ಟ್ರೀಯ ಖ್ಯಾತಿವೆತ್ತ ಕಲಾಕ್ಷೇತ್ರ. ಕಲಾಕ್ಷೇತ್ರದ ಶಿಕ್ಷಣದಲ್ಲಿ ನೃತ್ಯ ಕಲೆಯ ಮೂಲಮೌಲ್ಯಗಳಿಗೇ ಆದ್ಯತೆ. ಅದರಿಂದಲೇ ಕಲಾಕ್ಷೇತ್ರದಲ್ಲಿ ಶಿಕ್ಷಣ ಪಡೆದವರೆಂದರೆ ಅವರ ವಿದ್ಯೆಯಲ್ಲಿ ಖಚಿತತೆ ಇದೆ, ನಿರ್ಣಯವಿದೆ ಎಂಬ ಸಾರ್ವತ್ರಿಕ ನಂಬಿಕೆ ಇದೆ. ಇಂದು ಭರತನಾಟ್ಯದ ಪ್ರಭೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪಸರಿಸಲು ರುಕ್ಮಿಣಿದೇವಿಯವರಷ್ಟೇ ಅವರ ಕಲಾಕ್ಷೇತ್ರವೂ ಕಾರಣವೆನ್ನಬಹುದು. ಎಂತೆಂತಹ ಗುರುಗಳು, ಕಲಾವಿದರು – ಸಿ.ವಿ. ಚಂದ್ರಶೇಖರ್, ಅಂಜಲಿಮೇಡ್, ಅಡ್ಯಾರ್ ಲಕ್ಷ್ಮಣ್, ಧನಂಜಯನ್, ಯಾಮಿನಿ ಕೃಷ್ಣಮೂರ್ತಿ, ಲಲಿತಾಶಾಸ್ತ್ರಿ, ಕೃಷ್ಣವೇಣಿ, ಲೀಲಾಸ್ಯಾಮ್‌ಸನ್ – ಹೀಗೆ ದೇಶವಿದೇಶಗಳಲ್ಲೆಲ್ಲಾ ಹರಡಿಕೊಂಡಿದ್ದಾರೆ.

ರುಕ್ಮಿಣಿದೇವಿಯವರ ಇನ್ನೊಂದು ಕೈಂಕರ್ಯ, ಭರತನಾಟ್ಯಕ್ಕೆ ಇತ್ತ ಹೊಸ ಆಯಾಮ – ನೃತ್ಯನಾಟಕಗಳು. ಕಲಾಕ್ಷೇತ್ರ ಸ್ಥಾಪನೆಯಾದ 8 ವರುಷಗಳ ನಂತರ ರಚಿಸಿ ಪ್ರದರ್ಶಿಸಲಾದ ಕುಟ್ರಾಲಕುರವಂಜಿಯಿಂದ ಪ್ರಾರಂಭವಾಗಿ 1984ರಲ್ಲಿ ಮೀರಾವರೆಗೆ 20-25 ನೃತ್ಯ ನಾಟಕಗಳನ್ನು ರಚಿಸಿ ವೇದಿಕೆಗೆ ತಂದರು. ಹೃದಯಸ್ಪರ್ಶಿ ಸಂಗೀತದ ದೃಶ್ಯರೂಪ ಈ ನೃತ್ಯನಾಟಕಗಳು. ಇದರಲ್ಲಿ ಮಹಾನ್ ಸಂಗೀತವಿದ್ವಾಂಸರ ಸಹಕಾರವು ಆಕೆಗೆ ದೊರೆಯಿತು. ಇವುಗಳಲ್ಲಿ ಮೇರುಕೃತಿ ಎನಿಸುವುದು ವಾಲ್ಮೀಕಿ ರಾಮಾಯಣವನ್ನು ಆಧರಿಸಿದ ಸೀತಾಸ್ವಯಂವರದಿಂದ ಮಹಾಪಟ್ಟಾಭಿಷೇಕದವರೆಗಿನ ಆರು ನೃತ್ಯನಾಟಕಗಳು. ಮೈಸೂರು ವಾಸುದೇವಾಚಾರ್ಯರ ಸಂಗೀತ, ರುಕ್ಮಿಣಿದೇವಿ ಅವರ ನೃತ್ಯ ಸಂಯೋಜನೆ ಇವುಗಳ ಬಗೆಗೇ ಒಂದು ದೀರ್ಘಲೇಖನ ಅವಶ್ಯಕ.

ಭಾರತದ ಕಲಾಕ್ಷೇತ್ರದಲ್ಲಿ ರುಕ್ಮಿಣಿದೇವಿ ಅಸಾಧಾರಣ ವ್ಯಕ್ತಿ. ಕಲೆಯ ಮೂಲತತ್ವ ಸೌಂದರ್ಯ ಘನಮೌಲ್ಯಗಳ ಸಹಿತ ನೃತ್ಯಕಲೆಗೆ ಒಂದು ಹೊಸ ಚೈತನ್ಯವಿತ್ತು ಅದು ಸರ್ವತೋಮುಖವಾಗಿ ಬೆಳೆದು ಮುಂದಿನ ಪೀಳಿಗೆಗಳಿಗೂ ಬೆಳಕು ತೋರಲು ಕಾರಣರಾದವರು. ಅನೇಕ ಗೌರವ, ಪ್ರಶಸ್ತಿಗಳನ್ನು ಪಡೆದವರು. ಕೊನೆಯವರೆಗೂ ಕಲೆಗೆ

ಅದರ ಉನ್ನತಿಗೆ, ಉತ್ಕೃಷ್ಟತೆಗೆ ದುಡಿದವರು. ಅವರು ಹುಟ್ಟಿದುದು 29ನೇ ಫೆಬ್ರವರಿ 1904. ನಿಧನರಾದುದು ಸರಿಯಾಗಿ 83 ವರುಷ ಕಳೆದು ತುಂಬಲು ಐದು ದಿನಗಳ ಮುಂಚೆ 24-2-1986. ಜೀವನ ಸಂಧ್ಯೆಯಲ್ಲಿ ಕಲಾಕ್ಷೇತ್ರ ಸ್ವಲ್ಪ ವಿವಾದದ ಸುಳಿಯಲ್ಲಿ ಸಿಕ್ಕಿದಂತಿತ್ತು. ಆದರೆ ಆಕೆ ಹಚ್ಚಿದ ದೀವಿಗೆ ನಂದಾದೀಪದಂತೆ ಉರಿಯುತ್ತಿದೆ. ★ ★ ★ ★ ★ ★ ★ ★

ಪ್ರಜಾವಾಣಿ, 1986

31. ಮೂಗೂರು ಜೇಜಮ್ಮ

ಸ್ವಲ್ಪ ದಿನಗಳ ಹಿಂದೆ ನಿಧನರಾದ ಮೂಗೂರು ಜೇಜಮ್ಮನವರು ಹಳೆಯ ಪೀಳಿಗೆಯ ನರ್ತಕಿ. ಕರ್ನಾಟಕದ ಒಂದು ಪುರಾತನ ನಾಟ್ಯಕಲೆಯ ಮನೆತನಕ್ಕೆ ಸೇರಿದವರು. ಒಳ್ಳೆಯ ಗುರುಸ್ಥಾನದಲ್ಲಿದ್ದವರು. ಮೈಸೂರು ಜಿಲ್ಲೆಯ ತಿರುಮಕೊಡ್ಲು ನರಸೀಪುರದ ಬಳಿ ಇರುವ ಮೂಗೂರು ಹಿಂದಿನಿಂದಲೂ ನಾಟ್ಯಕಲೆ ಹಾಗೂ ಅದರಲ್ಲಿ ಪ್ರಾವೀಣ್ಯತೆ ಪಡೆದವರ ಒಂದು ಮುಖ್ಯ ಕೇಂದ್ರವೆನಿಸಿಕೊಂಡಿದೆ. ಅಲ್ಲಿನ ಸ್ಥಳದೇವತೆ ತ್ರಿಪುರ ಸುಂದರಿ ಅಥವಾ ಆತ್ಮೀಯವಾಗಿ ಕರೆವ ತಿಬ್ಬಾದೇವಿ ಈ ನಾಟ್ಯ ಕಲಾವಿದೆಯರ ಕುಲದೇವತೆ. ಆಕೆಗೆ ಅರ್ಪಿಸಲಾದ ದೇವದಾಸಿಯರು ಅನೇಕರು ನಾಟ್ಯ ವಿದ್ಯೆಯಲ್ಲಿ ಒಳ್ಳೆಯ ಪ್ರೌಢಿಮೆಗಳಿಸಿ ಆ ಪ್ರಾಂತ್ಯದಲ್ಲೆಲ್ಲಾ ನಾಟ್ಯಕಲೆಯ ಬೆಳವಣಿಗೆಗೆ ಕಾರಣರಾದವರು. ಅವರಲ್ಲಿ ಕೆಲವರು ಕೀತಿಯನ್ನರಸಿ ನಗರಗಳಲ್ಲಿ, ಅರಮನೆಗಳಲ್ಲಿ ಸನ್ಮಾನಿತರಾದರು. ಆದರೆ ಬಹು ಮಂದಿ ಮೂಗೂರಿನಲ್ಲಿಯೇ ಅಲ್ಲದೆ ಆ ಪ್ರಾಂತ್ಯದ ಇತರ ಅನೇಕ ಪುಣ್ಯಕ್ಷೇತ್ರಗಳಲ್ಲಿ ನೆಲೆಸಿ ದೇವಾಲಯದ ಕೈಂಕರ್ಯ ನಡೆಸಿಕೊಂಡು ಬಂದರು.

ಅಬೆಡೂಬಾಯಿ ಮೂಗೂರನ್ನು ಹೇಳಿದ್ದಾನೆ. ಸಂದರ್ಭ - ಅಲ್ಲಿಯ ವಾರ್ಷಿಕ ರಥೋತ್ಸವ. ಅಂದು ಆ ಊರಿನ ನರ್ತಕಿಯರೂ ಅವರ ಕುಲದವರೂ ಬೇರೆ ಎಲ್ಲೇಯೇ ಚದುರಿರಲೀ; ಕ್ಷೇತ್ರಕ್ಕೆ ಬಂದು ತಿಬ್ಬಾದೇವಿಗೆ ಕೈಂಕರ್ಯ ಸಲ್ಲಿಸಬೇಕಿತ್ತು. ಇದು ಈ ಹಿಂದಿನ ಕೆಲವು ದಶಕಗಳವರೆಗೂ ನಡೆದುಕೊಂಡು ಬಂದಿತೆಂದು ತಿಳಿದುಬರುತ್ತದೆ. ಇಂತಹ ಮೂಗೂರು ನಾಟ್ಯ ಪರಂಪರೆಗೆ ಸೇರಿದವರು - ಜೇಜಮ್ಮ. ಅವರ ಪೂರ್ವಿಕರಲ್ಲಿ ಮೈಸೂರು ಸದಾಶಿವರಾಯರ ಸಮಕಾಲೀನರಾಗಿದ್ದ ಮೂಗೂರು ಸುಬ್ಬಣ್ಣನವರು ಪ್ರಸಿದ್ಧರು. ಹಾಗೆಯೇ ನಾಟ್ಯ ಕ್ಷೇತ್ರದಲ್ಲಿ ಪ್ರಸಿದ್ಧ ಗುರುಗಳಾಗಿದ್ದ ಮೂಗೂರು ಅಮೃತಪ್ಪನವರೂ ಜೇಜಮ್ಮನವರ ಪೂರ್ವಜರು. ಈ ಮನೆತನದವರು ಮೂಗೂರು ದೇವಾಲಯವೇ ಅಲ್ಲದೆ ಶ್ರೀರಂಗಪಟ್ಟಣದ ನವಾಬರ ಅರಮನೆಯಲ್ಲಿಯೂ ಹಾಗೆಯೇ ಮೈಸೂರು ಅರಮನೆಯಲ್ಲಿಯೂ ನೃತ್ಯಪ್ರದರ್ಶನ ಮತ್ತು ಶಿಕ್ಷಣ ಎರಡೂ ವಿಧದ ಸೇವೆ ಸಲ್ಲಿಸಿದ್ದವರು. ಸಂಗೀತ ನೃತ್ಯ ವಾತಾವರಣದಲ್ಲಿಯೇ ಬೆಳೆದ ಜೇಜಮ್ಮನವರಿಗೆ ಬಾಲ್ಯದಿಂದಲೇ ಕಲೆಯಲ್ಲಿ ಶಿಕ್ಷಣ ಪ್ರಾರಂಭ. ಅಮೃತಪ್ಪನವರು

ಪ್ರಾರಂಭವಲ್ಲಿ ಸಂಗೀತ ಮತ್ತು ನೃತ್ಯ ಎರಡರಲ್ಲಿಯೂ ಮಾರ್ಗದರ್ಶನ ನೀಡಿದರು. ಅನಂತರ ಗೌರಮ್ಮನವರಿಂದ ಸ್ವಲ್ಪ ಕಠಿಣ ರೀತಿಯಲ್ಲಿಯೇ ನೃತ್ಯ ಶಿಕ್ಷಣ ಮುಂದುವರೆಯಿತು. ಮುಂದೆ ಸುಬ್ಬಣ್ಣನವರು ಅನಂತರ ತಮ್ಮಯ್ಯನವರುಗಳಿಂದ ಸಂಗೀತದಲ್ಲಿ ಪ್ರೌಢಶಿಕ್ಷಣ ದೊರೆಯಿತು. ರಕ್ತದಲ್ಲಿಯೇ ಸಂಗೀತ ನೃತ್ಯಗಳು ಬಂದುದರಿಂದ ತಲತಲಾಂತರದಿಂದ ಬಂದ ಈ ಸಂಪ್ರದಾಯಬದ್ಧ ನಾಟ್ಯ ಕಲೆಯಲ್ಲಿ ಪ್ರೌಢಿಮೆ ಪಡೆಯುವುದು ಜೇಜಮ್ಮನವರಿಗೆ ಕಷ್ಟವಾಗಲಿಲ್ಲ. ಕಲೆಯ ಬಗೆಗೆ ಅವರಲ್ಲಿದ್ದ ಒಂದು ರೀತಿಯ ಮಡಿವಂತಿಕೆಗೂ ಇದೇ ಕಾರಣವೆನ್ನಬಹುದು.

ವೈಶಿಷ್ಟ್ಯ

ಜೇಜಮ್ಮನವರ ನೃತ್ಯ ಅಥವಾ ಅಭಿನಯ ಪ್ರದರ್ಶನವನ್ನು ನೋಡಿದ ಅನೇಕರ ಅಭಿಪ್ರಾಯವೂ ಇದೇ. ಅದು -ನಮ್ಮಲ್ಲಿ ಇಂದು ಬಹು ಬಳಕೆಯಲ್ಲಿರುವ ಹಾಗೂ ಜನಪ್ರಿಯತೆಗಳಿಸಿರುವ ತಮಿಳುನಾಡಿನ ಶೈಲಿಯಿಂದ ಸ್ವಲ್ಪ ಭಿನ್ನವಿದೆ. ಅದರಲ್ಲಿ ಕರ್ನಾಟಕದ ಅಂಶವಿದೆ ಎನ್ನುತ್ತಾರೆ. ಸುಮಾರು ಮೂವತ್ತು ವರುಷಗಳ ಹಿಂದೆ ಅವರ ಶಿಷ್ಯೆ ಕೊಡಗಿನ ಲೀಲಾವತಿ ಗಿರಿ ಅವರ ನೃತ್ಯವನ್ನು ಮೊಟ್ಟಮೊದಲು ನೋಡಿದವರಿಗೆ ಈ ಅಂಶದ ಅನುಭವವಾಯಿತು. ನೃತ್ಯ ಭಾಗದಲ್ಲಿ ಈ ವೈಶಿಷ್ಟ್ಯ ಕಾಣಬರುತ್ತಿತ್ತು. ಆಗ ಜೇಜಮ್ಮನವರು ಕೊಡಗಿನ ಸಂಗೀತ ನಾಟಕ ಅಕಾಡೆಮಿಯಲ್ಲಿ ನೃತ್ಯ ಶಿಕ್ಷಣ ನೀಡುತ್ತಿದ್ದರು. ಈಗ ಒಂದೆರಡು ವರುಷಗಳ ಹಿಂದೆ ಬೆಂಗಳೂರಿನಲ್ಲಿ ಬಂದಾಗ ಆ ಇಳಿವಯಸ್ಸಿನ ಅಭಿನಯದಲ್ಲಿಯೂ ಘನತೆ ಕಾಣುತ್ತಿತ್ತು. ಸಂಪ್ರದಾಯ ನಾಟ್ಯಕಲೆಯ ಬಗೆಗೆ ಜೇಜಮ್ಮನವರಿಗೆ ಬಹು ನಿಷ್ಠೆ. ಅದರಲ್ಲಿ ವ್ಯತ್ಯಾಸವಾದರೆ ಸಹಿಸರು. ಮಾತಿನಲ್ಲಿಯೂ ನೇರವೇ. ನಾಜೂಕಿಲ್ಲ, ಆತ್ಮಗೌರವ ಅಧಿಕ. ಯೋಜನಾ ಪ್ರವೃತ್ತಿಯಿಲ್ಲ. ಅದರಿಂದ ನೃತ್ಯ ಕಲಾಕ್ಷೇತ್ರದಲ್ಲಿ ಅವರ ಪ್ರೌಢಿಮೆಗೆ ಅನುಗುಣವಾದ ಮಾನ್ಯತೆ ಸಿಗಲಿಲ್ಲ ಎನ್ನಬಹುದು. ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ದೊರೆಕಿದೆ. ನಾಟ್ಯ ಎಂಬ ಪದ ಜೇಜಮ್ಮನವರಿಗೆ ನಿಜವಾಗಿ ಅನ್ವಯವಾಗುತ್ತಿತ್ತು. ನೃತ್ಯವೇ ಅಲ್ಲದೆ ನಾಟಕದಲ್ಲಿಯೂ ಕೃಷಿ ಮಾಡಿದ್ದರು. ಹೆಂಗಸರದೇ ಒಂದು ತಂಡವನ್ನೂ ಕಟ್ಟಿದ್ದರು. ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ಬಿ.ಆರ್. ಪಂತುಲು ಅವರ ಒಂದು ಚಿತ್ರದಲ್ಲಿ ಅಭಿನಯಿಸಿದ್ದರು.

ಜೇಜಮ್ಮನವರು ನಿಧನರಾದಾಗ ಅವರಿಗೆ ಎಂಭತ್ತುನಾಲ್ಕು ವರುಷ. ನೃತ್ಯಕಲೆಯಲ್ಲಿ ಈ ಅಂತರದಲ್ಲಿ ಆದ ನಾನಾ ಬದಲಾವಣೆಗಳನ್ನು ನೋಡಿದರು. ಅನುಭವಿಸಿದರು. ಅವರ ಬಾಲ್ಯ, ನೃತ್ಯಕಲೆಯಲ್ಲಿ ಒಳ್ಳೆಯ ಪ್ರೌಢಿಮೆಯನ್ನು ಅಪೇಕ್ಷಿಸುತ್ತಿದ್ದ, ಆದರಿಸುತ್ತಿದ್ದ ಕಾಲ. ಮುಂದೆ ನೃತ್ಯಕಲೆ ಹಾಗೂ ಅದರ ಪ್ರತಿಪಾದಕರು ಸಮಾಜದ ಹೀನಾಯಕ್ಕೆ ಗುರಿಯಾಗಿ ಕಲೆಯು ಕಣ್ಮರೆಯಾಗಲಾರಂಭವಾದ ಕಾಲ. ಅನಂತರ ಅದಕ್ಕೆ ಪುನಃ ಒಳ್ಳೆಯ ದೆಸೆ ಬಂದುದನ್ನೂ ನೋಡಿದರು. ಹಾಗೆಯೇ ಹೊಸ ವರ್ಗ ಒಂದು ಹುಟ್ಟಿ ಪರಂಪರೆಯಿಂದ ಬಂದವರ ಬಳಿ ಕಲಿತು ತಮ್ಮ ಹೆಗ್ಗಳಿಕೆ ಬೆಳೆಸಿಕೊಂಡು ಹತ್ತಿದ್ದ ಏಣಿಯನ್ನು ಮರೆತುದುದನ್ನೂ ನೋಡಿದರು. ಅವರ

ಜೀವನದ ಸಂಧ್ಯೆ ಸ್ವಲ್ಪ ವ್ಯಸನಕರವಾದುದು. ಕಣ್ಣು ಹೋಯಿತು. ಮಗಳೂ ಹೋಗಿ, ಕೇಳುವವರಿಲ್ಲವಾಯಿತು. ಇನ್ನು ಸರ್ಕಾರವಾಗಲೀ ಯಾರದಾದರೂ ಸಹಾಯ? ಅದನ್ನು ಹೇಳದಿರುವುದೇ ಲೇಸು. ಅಂತೂ ನೆಮ್ಮದಿ ಇಲ್ಲದೆ ನೊಂದಿ ಹೋದ ಜೀವ. ಜೇಜಮ್ಮ ಹಳೆಯ ಮತ್ತು ಇಂದಿನ ನೃತ್ಯಕಲಾ ಪ್ರಪಂಚದ ಒಂದು ಕೊಂಡಿಯಂತಿದ್ದರು. ಆ ಸಂಪರ್ಕ ಕಡಿದುಹೋಯಿತು. ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★

ಪ್ರಜಾವಾಣಿ, 1983

32. ನೃತ್ಯಕ್ಕೆ ಚೈತನ್ಯ ತುಂಬಿದ ಮಾಯಾರಾವ್

ನನಗೆ ಮಾಯಾರಾವ್ ಅವರ ಮೊದಲ ಪರಿಚಯ ಸುಮಾರು 1953-54ರಲ್ಲಿ ಎಂದು ನೆನಪು. ಅದಕ್ಕೆ ಹಿಂದೆ ಅವರ ಹೆಸರನ್ನು ಕೇಳಿದ್ದೆ. ಬೆಂಗಳೂರಿಗೆ ಕೆಲಸದ ಮೇಲೆ ಬಂದಾಗ ಎನ್.ಎಸ್. ಸೀತಾರಾಮ ಶಾಸ್ತ್ರಿಗಳು ಆಕೆಯ ಹೆಸರನ್ನು ಪ್ರಸ್ತಾಪಿಸುತ್ತಿದ್ದರು. ನೃತ್ಯಕಲೆಯಲ್ಲಿ ಪ್ರವೀಣರೆನ್ನುತ್ತಿದ್ದರು. ಶಾಸ್ತ್ರಿಗಳು 'ಜನಪ್ರಗತಿ' ಸಂಪಾದಕರಾಗಿದ್ದರು. ಆದುದರಿಂದ ಗಣ್ಯವ್ಯಕ್ತಿಗಳ ಬಗೆಗೆ ಅವರಿಗೆ ಆಸಕ್ತಿ ಇದ್ದುದು ಸಹಜವೇ.

ಆದರೂ ಮುಖತಃ ಮಾಯಾರಾವ್ ಪರಿಚಯ ಆಗಬೇಕಾದರೆ ಕೆಲವು ವರುಷಗಳೇ ಆದವು. ಆಗ ನೃತ್ಯಕಲೆಯ ನವೋದಯ ಕಾಲ. ಬೆಂಗಳೂರಿನಲ್ಲಿ ರಾಂಗೋಪಾಲ್ ಕೇಂದ್ರಬಿಂದುವಾಗಿ ಈ ಕಲೆಗೆ ಸಂಬಂಧಿಸಿದ ಕಾರ್ಯಕಲಾಪಗಳು ನಡೆಯುತ್ತಿದ್ದವು. ಸಮಾಜದ ಕುಲೀನ ವರ್ಗದವರಲ್ಲಿ ಅನೇಕರು ಆಸಕ್ತರಾಗಿದ್ದರು. ಪ್ರದರ್ಶನಗಳನ್ನೂ ನೀಡುತ್ತಿದ್ದರು. ಆದರೆ ನಾನಿದ್ದ ಮೈಸೂರಿನಲ್ಲಿ ನವೋದಯದ ಗಾಳಿ ಇನ್ನೂ ಬೀಸಿರಲಿಲ್ಲ. ಸಮಾಜದಲ್ಲಿ ನೃತ್ಯಕಲೆಯ ಬಗೆಗೆ ಹೀನಾಯವು ಇನ್ನೂ ಆರಿರಲಿಲ್ಲ.

ಈ ಸಂದರ್ಭದಲ್ಲಿ ದೆಹಲಿಯ ಕೇಂದ್ರ ಸಂಗೀತ-ನಾಟಕ ಅಕಾಡೆಮಿಯಿಂದ ನನಗೆ ಒಂದು ಕಾಗದ ಬಂದಿತು – 'ಅಕಾಡೆಮಿಯು ಭಾರತಾದ್ಯಂತ ಪ್ರದರ್ಶನ ಕಲೆಗಳ ಸರ್ವೆ ಮತ್ತು ದಾಖಲಾತಿಯ ಯೋಜನೆಯನ್ನು ಪ್ರಾರಂಭಿಸಿದೆ. ಅದಕ್ಕೆ ಪೂರ್ವಭಾವಿಯಾಗಿ ಪರಿಶೀಲನೆ ನಡೆಸಲು ಮಾಯಾರಾವ್ ಮತ್ತು ಅನಸೂಯರಾವ್ ಅವರುಗಳನ್ನು ಕಳಿಸಲಾಗುತ್ತಿದೆ. ಅವರುಗಳನ್ನು ಮೈಸೂರಿನ ಸಾಂಪ್ರದಾಯಿಕ ನೃತ್ಯ ಕಲಾವಿದರ ಬಳಿಗೆ ಕರೆದುಕೊಂಡು ಹೋಗಿ, ಅವರ ಪರಿಚಯ ಮಾಡಿಸಿ ವಿಚಾರ ವಿನಿಮಯ ಹಾಗೂ ವಿಷಯ ಸಂಗ್ರಹಕ್ಕೆ ಏರ್ಪಾಡು ಮಾಡಿ ಕೊಡಿ' ಎಂದು. ಇದು ನನಗೆ ಒಂದು ಸಂದಿಗ್ಧ ವಿಷಯವಾಯಿತು. ಈ ನರ್ತಕಿಯರಲ್ಲಿ ಕೆಲವರನ್ನು ದೂರದಿಂದ ನೋಡಿದ್ದೆ. ಕೆಲವರ ಹೆಸರನ್ನು ಕೇಳಿದ್ದೆ. ಆದರೆ ಅವರ ವಾಸ ಎಲ್ಲೆಂದು ತಿಳಿಯದು. ವಿಳಾಸಗಳನ್ನು ಕೇಳಿದಾಗ ಸ್ವಲ್ಪ ವಿಚಿತ್ರ ರೀತಿಯ ನೋಟದ ಪ್ರತಿಕ್ರಿಯೆ.

ಮೊದಲು ನಾವು ಭೇಟಿ ಮಾಡಿದುದು – ಕೆ. ವೆಂಕಟಲಕ್ಷ್ಮಮ್ಮನವರನ್ನು. ಅವರು ಅರಮನೆಯ ನರ್ತಕಿ. ವಿಚಾರ ವಿವರಿಸಿಯಾದ ನಂತರ ಮೊಮ್ಮಗಳು ಶಕುಂತಲಳನ್ನ ಕರೆದರು. ಲಂಗ- ಜಾಕೆಟ್ ಧರಿಸಿದ ತೆಳ್ಳನೆಯ ಚಟುವಟಿಕೆಯ ಹುಡುಗಿ. ಅಜ್ಜಿ ನಿರ್ದೇಶಿಸಿದ ಕೃತಿಗಳನ್ನು ಚೆನ್ನಾಗಿ ನರ್ತಿಸಿದಳು. ಅನಂತರ ವೆಂಕಟಲಕ್ಷ್ಮಮ್ಮನವರೂ ನಾನಾ ಕೃತಿಗಳ ಅಭಿನಯ ಮಾಡಿದರು. ಹೀಗೆ ಇನ್ನೂ ಕೆಲವು ಸಾಂಪ್ರದಾಯಿಕ ನರ್ತಕಿಯರನ್ನು ಸಂಧಿಸಿದ್ದಾಯಿತು. ಆ ವೇಳೆಗಾಗಲೇ ಮಾಯಾರವರು, ಬೆಂಗಳೂರಿನಲ್ಲಿ ಕಾಲೇಜ್ ವಿದ್ಯಾಭ್ಯಾಸ ಮುಗಿಸಿ ದೆಹಲಿಗೆ ಹೋಗಿದ್ದರು. ಸ್ವಲ್ಪಕಾಲ ಜಯಪುರದ ಕಾಲೇಜು ಉಪನ್ಯಾಸಕಿಯಾಗಿದ್ದು ಅನಂತರ ಕೇಂದ್ರ ಸರಕಾರದ ಸಾಂಸ್ಕೃತಿಕ ವಿದ್ಯಾರ್ಥಿವೇತನ ಪಡೆದು ಪ್ರಸಿದ್ಧ ಗುರುಗಳಾದ ಶಂಭು ಮಹರಾಜ್, ಸುಂದರಪ್ರಸಾದ್‌ರವರ ಬಳಿ ಕಥಕ್ ಅಭ್ಯಾಸ ಮಾಡುತ್ತಿದ್ದರು.

ಮಾಯಾರವರ ಕಥಕ್ ಗೀಳು ಆರಂಭವಾದುದು – ಬೆಂಗಳೂರಿನಲ್ಲಿ – ಅವರ ಬಾಲ್ಯಾವಸ್ಥೆಯಲ್ಲಿ. ಆದರೆ ಅಂದಿನ ಸಮಾಜಸ್ಥಿತಿ, ಶಿಷ್ಟವರ್ಗದವರು ನೃತ್ಯ ಕಲಿಯುವುದನ್ನು ಒಪ್ಪುತ್ತಿರಲಿಲ್ಲ. ಈ ವಾತಾವರಣದಲ್ಲಿ ಆಕೆ ನೃತ್ಯ ಕಲಿಯಲು ಪ್ರಾರಂಭಿಸಿದರು. ಕಥಕ್ ಹಾಗೂ ಮಣಿಪುರಿ ಸೋಹನ್ ಲಾಲ್‌ರವರಿಂದ. ಇದರ ಪರಿಣಾಮ ತಮ್ಮ ಶಾಲೆಯ ಸಹಪಾಠಿಗಳನ್ನು ಗುಂಪುಕೂಡಿಸಿ ನೃತ್ಯ ಕಲಿಸುವುದೂ ಹಾಗೂ ಪ್ರದರ್ಶನ ನೀಡುವ ಉತ್ಸಾಹ ಪ್ರಾರಂಭ. ಕ್ರಮೇಣ ಈ ಕಾರ್ಯಕ್ಕೆ ಜನಾದರವೂ ದೊರೆಯಲಾರಂಭವಾಯಿತು. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಅವರ ಸಹಪಾಠಿಗಳನೇಕರು ಇದರಲ್ಲಿ ಜೊತೆಗೂಡಿದರು. ನೃತ್ಯರೂಪಕಗಳ ಸಂಯೋಜನೆ ಪ್ರಾರಂಭವಾಯಿತು. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಮಾಯಾ ಅನೇಕ ನೃತ್ಯರೂಪಕಗಳನ್ನು ಸಂಯೋಜಿಸಿ ಪ್ರದರ್ಶಿಸಿದ್ದರು. ಅವುಗಳ ವಸ್ತು ವಿಭಿನ್ನ. ಪುರಾಣ, ಲೌಕಿಕ, ಸಾಮಾಜಿಕ ಸಮಸ್ಯೆಗಳನ್ನು ಪ್ರತಿಧ್ವನಿಸುವಂತಹವು ಎಲ್ಲವೂ ಇದ್ದುವು.

ಈ ಸಂದರ್ಭದಲ್ಲಿಯೇ ಅವರಿಗೆ ಎಂ.ಎಸ್. ನಟರಾಜನ್ ಅವರ ಪರಿಚಯವಾದುದು. ನಟರಾಜನ್ ಆಗಲೇ ಒಂದು ವಾದ್ಯಮೇಳವನ್ನು ರಚಿಸಿ ನಿರ್ದೇಶಿಸುತ್ತಿದ್ದರು. ಸರಸ್ವತಿ ಆರ್ಕೆಸ್ಟ್ರಾ ಎಂಬ ಈ ಮೇಳವು ಸುಪ್ರಸಿದ್ಧ ನಾಟ್ಯಪಟು ರಾಂಗೋಪಾಲರಿಗೆ ಹಿಮ್ಮೇಳವಾಗಿತ್ತು. ಮಾಯಾ ಮತ್ತು ನಟರಾಜನ್ ಕೂಡಿ 'ನಾಟ್ಯ ಸರಸ್ವತಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದರಲ್ಲಿ ನೃತ್ಯ ಶಿಕ್ಷಣ – ಪ್ರದರ್ಶನ ಎರಡೂ ನಡೆಯುತ್ತಿದ್ದವು.

ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ. ಆನರ್ಸ್ ಪದವಿ ಪಡೆದ ನಂತರ ಉತ್ತರದ ಜಯಪುರದ ಕಾಲೇಜೊಂದರಲ್ಲಿ ಉಪನ್ಯಾಸಕಿಯಾಗಿ ಸೇರಿದ ಮಾಯಾ ಅವರ ಜೀವನದಲ್ಲಿ ಒಂದು ಹೊಸ ತಿರುವು ತಂದುದು ಕೇಂದ್ರ ಸರ್ಕಾರದ ಸಾಂಸ್ಕೃತಿಕ ವಿದ್ಯಾರ್ಥಿವೇತನ. ಇದರ ಫಲವಾಗಿ ಮಾಯಾ ತಮ್ಮಲ್ಲಿ ಅಡಗಿದ್ದ ಕಥಕ್ ಶಿಕ್ಷಣ ಮುಂದುವರೆಸುವ ಒಂದು ಆಸೆಯನ್ನು ಕೈಗೂಡಿಸಿಕೊಳ್ಳುವಂತಾಯಿತು. ಆಕೆಗೆ ದೊರೆತ

ಗುರುಗಳು – ಮಹಾನ್ ಕಥಕ್ ನರ್ತಕ ಶಂಭು ಮಹರಾಜ್, ಅನಂತರ ಸುಂದರಪ್ರಸಾದ್. ಇಬ್ಬರೂ ಆಕೆಯನ್ನು ಮಗಳಂತೆಯೇ ನೋಡಿಕೊಂಡು ವಿದ್ಯೆಯನ್ನು ಧಾರೆ ಎರೆದರು. ಕಥಕ್ ಎಂದರೆ ಕೇವಲ ನಾಚ್ ಅಥವಾ ಬುಗುರಿಯಂತೆ ತಿರುಗುವುದು ಎಂಬ ಭಾವನೆಯಿದ್ದ ಕಾಲದಲ್ಲಿ ಅದರಲ್ಲಿ ಕೇವಲ ಪದಚಲನೆಯಲ್ಲದೆ ಅಭಿನಯವೂ ಇರುವುದನ್ನು ತೋರಿಸಿ ಸ್ಥಾಪಿಸಿದವರು, ಶಂಭು ಮಹರಾಜ್. ಮಾಯಾ ಅದನ್ನೇ ಪ್ರತಿಪಾದಿಸಿ ಮುಂದುವರೆಸಿಕೊಂಡು ಬರುತ್ತಿದ್ದಾರೆ.

1958ರಲ್ಲಿ ರಷ್ಯಾದಲ್ಲಿ ಬ್ಯಾಲೆ ಅಧ್ಯಯನ ಮಾಡಲು ಭಾರತ ಸರ್ಕಾರವು ಇಬ್ಬರು ವಿದ್ಯಾರ್ಥಿಗಳನ್ನು ಕಳುಹಿಸಲು ನಿರ್ಧರಿಸಿತು. ಇದಕ್ಕೆ ಬಂದ 1800 ಅರ್ಜಿಗಳಲ್ಲಿ ಪ್ರಥಮ ಸ್ಥಾನ ಗಳಿಸಿದರು – ಮಾಯಾ. ವಿದ್ಯಾರ್ಥಿದೆಸೆಯಲ್ಲಿ ಮಾಡಿದ ನೃತ್ಯಸಂಯೋಜನೆಗಳು ಈಗ ಫಲಕೊಟ್ಟವು. ಮಾಸ್ಕೋದ 'ಇನ್‌ಸ್ಟಿಟ್ಯೂಟ್ ಆಫ್ ಥಿಯೇಟರ್ ಆರ್ಟ್ಸ್'ನಲ್ಲಿ ಬ್ಯಾಲೆ ಸಂಯೋಜನೆ, ರಂಗಭೂಮಿಯ ವಿವಿಧ ತಂತ್ರ ಮುಂತಾದುವುಗಳಲ್ಲಿ ಪ್ರಸಿದ್ಧ ಗುರುಗಳಿಂದ ಶಿಕ್ಷಣ ಪಡೆದರು. 'ಅದೊಂದು ಅದ್ಭುತವಾದ ಅನುಭವ' ಎನ್ನುತ್ತಾರೆ, ಮಾಯಾ. ರಷ್ಯಾದವರು ಮಾಯಾರವರ ಪ್ರತಿಭೆಯನ್ನು ಪುರಸ್ಕರಿಸಿದುದರ ನಿದರ್ಶನವೆಂದರೆ, ಅವರನ್ನು ನೃತ್ಯ ಸಂಯೋಜನೆಗಳಿಗೆ ಆಗಾಗ್ಗೆ ಅಲ್ಲಿಗೆ ಕರೆಸಿಕೊಳ್ಳುತ್ತಿದ್ದುದು.

1964ರಲ್ಲಿ ಲ್ಯಾಟ್ವಿಯಾದಲ್ಲಿ ಶಾಕುಂತಲ ನೃತ್ಯ ನಾಟಕ ರಚಿಸಿ ಪ್ರದರ್ಶಿಸುವ ಯತ್ನ ನಡೆಯಿತು. ಅದಕ್ಕಾಗಿ ಮಾಯಾರವರನ್ನು ಭಾರತದಿಂದ ಕರೆಸಿಕೊಳ್ಳಲಾಯಿತು. ಎರಡು ವರುಷಗಳ ನಂತರ ಮಕ್ಕಳ ನಾಟ್ಯಭವನದವರು 'ರಾಮಾಯಣ' ನೃತ್ಯನಾಟಕವನ್ನು ಪ್ರದರ್ಶಿಸಲು ನಿರ್ಧರಿಸಿದಾಗ ರಷ್ಯಾ ಸರಕಾರ ಮಾಯಾರವರನ್ನು ಪುನಃ ಕರೆಸಿಕೊಂಡಿತು. ದಶಕದ ನಂತರ ಮಾಸ್ಕೋದ ಸ್ಟಾನಿಸ್ಲಾವ್‌ಸ್ಕಿ ಥಿಯೇಟರ್‌ನವರು ಶಾಕುಂತಲ ನೃತ್ಯನಾಟಕ ಪ್ರದರ್ಶನ ಮಾಡುವಾಗ ಮಾಯಾರವರನ್ನು ಕರೆಸಿಕೊಂಡರು. ನಂತರ ಉತ್ಸಾಹದಿಂದ ಭಾರತಕ್ಕೆ ಹಿಂತಿರುಗಿದರು; ದೆಹಲಿಯ ಭಾರತೀಯ ಕಲಾಕೇಂದ್ರದಲ್ಲಿ ನೃತ್ಯ ನಿರ್ದೇಶಕಿಯಾಗಿ ಸೇರಿದರು. ಅಲ್ಲಿ ಶಂಭು ಮಹರಾಜ್, ಸಂಗೀತ ದಿಗ್ಗಜಗಳಾದ ಮುಶ್ತಾಕ್ ಹುಸೇನ್ ಖಾನ್, ಹಾಫೀಸ್ ಅಲಿಖಾನ್, ಡಾಗರ್ ಸೋದರರೇ ಮುಂತಾದವರ ಸಹವಾಸ... ಆದರೆ ಭಾರತದ ವಿಚಿತ್ರ ಸ್ವರೂಪದ ಅರಿವುಂಟಾಗಲು ಬಹುಕಾಲ ಹಿಡಿಸಲಿಲ್ಲ. ನಿದರ್ಶನವಾಗಿ ಅಮೀರ್ ಖುಸ್ರು ನೃತ್ಯನಾಟಕವನ್ನೇ ಹೇಳಬಹುದು. ಇದನ್ನು ಆತನ 7ನೇ ಜನ್ಮ ಶತಾಬ್ದಿಗಾಗಿ ಸಿದ್ಧಪಡಿಸಿದರು. ರಷ್ಯಾದ ಉಜ್‌ಬೆಕಿಸ್ತಾನ್‌ನಂಥ ಕಡೆ ಖುಸ್ರು ಬಹುಪರಿಚಿತ. ಐದಾರು ವರ್ಷ ಸಂಶೋಧನೆ ಮಾಡಿ ನೃತ್ಯ ನಾಟಕ ರಚಿಸಿದರು – ಮಾಯಾ ಇದನ್ನು ರಷ್ಯಾದಲ್ಲಿ ಮೊದಲು ಪ್ರದರ್ಶಿಸಬೇಕೆಂದು ನಿರ್ಧರಿಸಿದರು. ಆದರೆ ಇಲ್ಲಿಯ ಅಧಿಕಾರಶಾಹಿ ಅದಕ್ಕೆ ಅಡ್ಡಗಾಲು ಹಾಕಿತು. ಕೊನೆಗೆ ರಷ್ಯಾದ ಅಮೀರ್ ಖುಸ್ರು ಶತಮಾನೋತ್ಸವ ಸಮಿತಿ ಅಧ್ಯಕ್ಷರು, ಸದಸ್ಯರೂ ಇಲ್ಲಿಗೇ ಬಂದು ವೀಕ್ಷಿಸಿದರು. ದೆಹಲಿಯ ಸಾಂಸ್ಕೃತಿಕ ಸುಳಿಗಳಲ್ಲಿ ಮಾಯಾ ಸಿಕ್ಕಿ ಕಷ್ಟಪಡುವಂತಾಯಿತು.

ಅಂತೂ ಹೇಗೋ ಒದ್ದಾಡಿಕೊಂಡು ಕಮಲಾದೇವಿ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ 1964ರಲ್ಲಿ ದೆಹಲಿಯಲ್ಲಿ 'ನಾಟ್ಯ ಇನ್‌ಸ್ಟಿಟ್ಯೂಟ್ ಆಫ್ ಕೋರಿಯೋಗ್ರಫಿ' ಪ್ರಾರಂಭಿಸಿದರು. 23 ವರ್ಷ ನೂರಾರು ಆಸಕ್ತರಿಗೆ ಶಿಕ್ಷಣ ನೀಡಿ 1987ರಲ್ಲಿ ಅದನ್ನು ಬೆಂಗಳೂರಿಗೆ ತಂದರು. ಈಗ ಇಲ್ಲಿ ಕಥಕ್ ಮತ್ತು ಕೋರಿಯೋಗ್ರಫಿ ಎರಡರಲ್ಲೂ ಶಿಕ್ಷಣ ನೀಡುತ್ತಿದ್ದಾರೆ. ನೂರಾರು ಆಸಕ್ತರನ್ನು ನೃತ್ಯ ಸಂಯೋಜನೆಯಲ್ಲಿ ಪರಿಣತರನ್ನಾಗಿ ಮಾಡಿದುದಷ್ಟೇ ಅಲ್ಲದೆ ಅನೇಕ ನೃತ್ಯ ನಾಟಕಗಳನ್ನು ರಚಿಸಿ ಪ್ರದರ್ಶಿಸಿದ್ದಾರೆ. ಅವುಗಳಲ್ಲಿ ಅಮೀರ್ ಖುಸ್ರು ಅಲ್ಲದೆ ಕುವೆಂಪುರವರ ರಾಮಾಯಣ ದರ್ಶನಂ, ಹೊಯ್ಸಳ ವೈಭವ, ಭಾಸನ ಊರುಭಂಗ, ವಿಜಯನಗರ ವೈಭವ, ಸೂರ್‌ದಾಸ್ ಹೀಗೆ.... ಸೂರ್‌ದಾಸ್ ದೆಹಲಿಯಲ್ಲಿ ತಿಂಗಳುಗಟ್ಟಲೆ ನಡೆಯಿತು. ಬ್ಯಾಲೆ ಅಥವಾ ನೃತ್ಯ ಸಂಯೋಜನೆ ಎಂದರೆ ನೃತ್ಯ, ಸಂಗೀತ ರಚನೆ ಮುಂತಾದುವುಗಳ ಸಮತೂಕದ ಹಾಗೂ ಪರಿಣಾಮಕಾರಿ ದೃಶ್ಯ ಮಿಶ್ರಣ ಎನ್ನುತ್ತಾರೆ ಮಾಯಾ.

1964ರಲ್ಲಿ ಬಹುಕಾಲ ಅವರ ಸಹೋದ್ಯೋಗಿಯಾಗಿದ್ದ ನಟರಾಜನ್‌ರವರೊಂದಿಗೆ ವಿವಾಹವಾದ ನಂತರ ಮಾಯಾನಟರಾಜನ್ ಆದರು. ಮಾಯಾ ಜತೆ ಆಗುವ ಮೊದಲ ಅನುಭವ ಅವರ ಮೃದು ನುಡಿ.... ಅನಂತರ ಕಲೆಯ ಬಗೆಗೆ ಇರುವ ಗಾಢವಾದ ಜ್ಞಾನ, ಸರಳವಾಗಿ ಅರ್ಥವತ್ತಾಗಿ ತಿಳಿಯಪಡಿಸುವ ಸಾಮರ್ಥ್ಯ, ಲೋಪಗಳ ಬಗೆಗೆ ಹೇಳಬೇಕಾದರೆ ಸ್ವಂತ ತುತ್ತೂರಿ ಊದಲು ಅಸಮರ್ಥತೆ. ಇದರಿಂದ ಅನೇಕರಿಗೆ ನೃತ್ಯ ಕ್ಷೇತ್ರಕ್ಕೆ ಅವರ ಕೊಡುಗೆ ಬಗೆಗೆ ಹೆಚ್ಚು ಅರಿವು ಇಲ್ಲದಂತಾಗಿದೆ.

ಮಾಯಾರಾವ್ ಅವರು ತಮ್ಮ ನೃತ್ಯವೃಂದಗಳೊಂದಿಗೆ ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ರಾಜ್ಯದ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಶಿಷ್ಯರನೇಕರು ಸ್ವತಂತ್ರವಾಗಿ ನೃತ್ಯಸಂಯೋಜಕರೆಂದು ಮಾನಿತರಾಗಿದ್ದಾರೆ. 1928ರ ಮೇನಲ್ಲಿ ಹುಟ್ಟಿದ ಮಾಯಾ ಮುಂದಿನ ಮೇ 2ರಂದು 70 ದಾಟಲಿದ್ದಾರೆ. ಹಿನ್ನೋಟದಿಂದ ಪರಿಶೀಲಿಸಿದರೆ ಅವರದು ನೃತ್ಯಕಲೆಯ ಒಂದು ಆಯಾಮಕ್ಕೆ ಚೈತನ್ಯ ಹಾಗೂ ವರ್ಚಸ್ಸು ನೀಡಿದಂತಹ ಸಾರ್ಥಕ ಬದುಕು. ★ ★ ★

ಪ್ರಜಾವಾಣಿ, 1998

33. ವಿಶೇಷ ಅನುಭವ ನೀಡಿದ ಬುಗಾಕು

ಫೆಸ್ಟಿವಲ್ ಆಫ್ ಇಂಡಿಯಾ ಅಥವಾ ಭಾರತ ಉತ್ಸವವು ಈಗ ಪ್ರತಿವರುಷ ನಡೆವ ಒಂದು ಸಾಂಸ್ಕೃತಿಕ ಸಮಾರಾಧನೆಯ ರೂಪ ಪಡೆಯುವಂತಿದೆ. ಅಮೆರಿಕದಲ್ಲಿ ನಡೆದಾಗ ನಮ್ಮಲ್ಲಿ ಬಹು ಸಡಗರ ಮತ್ತು ಸಂತೋಷ. ಇದು ಬಹುತೇಕ ಛಾನ್ಸ್ ಸಿಕ್ಕಿದ ಕಲಾವಿದರಿಗೆ ಮತ್ತು ನಮ್ಮಲ್ಲಿರುವ ಪಾಶ್ಚಾತ್ಯ ದೇಶ ಭಕ್ತ ಹಾಗೂ ಅಭಿಮಾನಿ ವರ್ಗಗಳವರಿಗೆ.

ಅಮೆರಿಕದಲ್ಲಿ ಈ ಉತ್ಸವ ನಡೆಯಿತು. ಮದುವೆಯ ಬೀಗರ ಔತಣದಂತೆ. ಇಲ್ಲಿಯೂ ಒಂದು ಅಮೆರಿಕಾ ಉತ್ಸವ ನಡೆಯಬೇಕಿತ್ತು. ನಡೆಯಲಿಲ್ಲ. ಆದರೆ ಈ ವರುಷ ಫೆಸ್ಟಿವಲ್ ನಡೆಯಲಿರುವ ರಾಷ್ಟ್ರ ರಷ್ಯಾ - ತಾನೂ ಪ್ರತಿಯಾಗಿ ಭಾರತದಲ್ಲಿ ಒಂದು ರಷ್ಯಾ ಸಾಂಸ್ಕೃತಿಕ ಉತ್ಸವ ನಡೆಸುತ್ತಿದೆ.

ಅದರಂತೆ ಮುಂದಿನ ವರುಷ ಜಪಾನ್ ರಾಷ್ಟ್ರದಲ್ಲಿ ಭಾರತ ಉತ್ಸವ ನಡೆವುದು. ಜಪಾನಿನವರು ಅಮೆರಿಕ ರಷ್ಯಾಗಳಿಗಿಂತ ಚುರುಕು ಎನಿಸುತ್ತದೆ. ಏಕೆಂದರೆ ತಮ್ಮ ರಾಷ್ಟ್ರದಲ್ಲಿ ಭಾರತ ಉತ್ಸವವು ನಡೆವ ಮೊದಲೇ, ತಾನೂ ಭಾರತದಲ್ಲಿ ಜಪಾನ್ ಸಾಂಸ್ಕೃತಿಕ ಉತ್ಸವವನ್ನು ಪ್ರಾರಂಭಿಸಿದ್ದಾರೆ.

ಮರೆಯದ ಪ್ರವಾಸ

ಈ ಜಪಾನ್ ಪ್ರವಾಸದಲ್ಲಿ ಭಾರತದ ನಾಲ್ಕು ಪ್ರಮುಖ ನಗರಗಳಾದ ದೆಹಲಿ, ಕಲ್ಕತ್ತಾ, ಮದರಾಸು ಮತ್ತು ಬೊಂಬಾಯಿಗಳಲ್ಲಿ ಜಪಾನಿನ ಸಾಂಸ್ಕೃತಿಕ ಪರಂಪರೆಯ ಪರಿಚಯವಾಗುವುದು. ಹಳೆಯ ಕಲಾ ಪ್ರಕಾರಗಳಿಗೆ ಹೆಚ್ಚು ಗಮನವಿತ್ತರೂ ಸಮಕಾಲೀನ ಪ್ರಕಾರಗಳನ್ನೂ ಮರೆತಿಲ್ಲ.

ಹಳೆ ನೃತ್ಯ ನಾಟಕ

ಈಗ ಭಾರತದಲ್ಲಿ ಜಪಾನ್ ರಾಷ್ಟ್ರವು ಪ್ರದರ್ಶನಕ್ಕೆ ಆರಿಸಿ ತಂದ ಕಲಾಪ್ರಕಾರಗಳಲ್ಲಿ ಅತೀ ಹಳೆಯದೆಂದರೆ ಬುಗಾಕು. ಒಂದು ರೀತಿಯ ನೃತ್ಯನಾಟಕ 8-9ನೇ ಶತಮಾನಕ್ಕೆ ಸೇರಿದುದು. ಅದೇ ಜಾಸ್ ಮತ್ತು ಫಿಲಂ ಉತ್ಸವಗಳು ಈ ಶತಮಾನಕ್ಕೆ ಸೇರಿದವು. ಈ ಎರಡರ ಮಧ್ಯೆ ಜಪಾನಿನ ಜನಜೀವನಕ್ಕೇ ವಿಶಿಷ್ಟವಾದ ವಿವಿಧ ಕಲಾ ಪ್ರಕಾರಗಳನೇಕವು. ಆ ರಾಷ್ಟ್ರಕ್ಕೆ ವಿಶಿಷ್ಟವಾದ ಸೇವಾ ನೃತ್ಯ ನಾಟಕಗಳು. ಟೀ ಸಂಪ್ರದಾಯ, ಕಿಮೋನೋ ಪ್ರದರ್ಶನ, ಜಾನಪದ ಕಲಾಪ್ರಕಾರಗಳು ಕೊಸರಿಗಾಗಿ ಒಂದು ವಿಚಾರ ಸಂಕಿರಣ.

ಇವುಗಳಲ್ಲಿ ಅತಿ ಪ್ರಾಚೀನವಾದ ಬುಗಾಕು ಪ್ರದರ್ಶನವೊಂದನ್ನು ಈಚೆಗೆ ದೆಹಲಿಯಲ್ಲಿ ನೋಡುವ ಅವಕಾಶ ಲಭಿಸಿತು. ಈ ಕಲಾಪ್ರಕಾರವು ಸಂಗೀತದ ತಳಹದಿಯ ಮೇಲೆ ನಿಂತಿದೆ ಎನ್ನಬಹುದು.

ದೇವಾಲಯದ ನಂಟು

ಭಾರತದ ಯಕ್ಷಗಾನ, ಕಥಕ್ಕಳಿ ಮುಂತಾದ ನೃತ್ಯನಾಟಕಗಳು ದೇವಾಲಯಗಳ ಆಸರೆಯಲ್ಲಿ ಬೆಳೆದು ಬಂದ ರೀತಿಯಲ್ಲಿಯೇ ಜಪಾನಿನ ಬುಗಾಕು ನೃತ್ಯ ಪ್ರಕಾರವೂ ಸಹ. ಅಲ್ಲಿ ಪುರಾತನ ನಾರ ನಗರದ ಷಿಂಟೋ ಧರ್ಮದ ಕನುಗಾ ದೇವಾಲಯವು ಜಪಾನಿನ ಪುರಾತನ ಕಲೆಗಳ ಬೀಡು ಎಂದು ಪ್ರಸಿದ್ಧವಾಗಿದೆ. ಶತಮಾನಗಳಿಂದಲೂ ಈ ದೇವಾಲಯವು ಬುಗಾಕು ಕಲೆಗೆ ಆಸರೆಯಾಗಿದೆ. ಪ್ರೋತ್ಸಾಹಿಸುತ್ತಿದೆ. ಅದಕ್ಕೆ ಸಂಬಂಧಪಟ್ಟು ನೂರಾರು ವರುಷಗಳಿಂದ ಬಳಕೆಯಲ್ಲಿರುವ ವೇಷಭೂಷಣ, ಮುಖವಾಡ ಮುಂತಾದವುಗಳ ನಿಧಿಯೇ

ಇದೆ ಆ ದೇವಾಲಯದಲ್ಲಿ. ಇಲ್ಲಿ ಭಾರತೀಯ ಮತ್ತು ಜಪಾನ್ ಕಲೆಗಳಲ್ಲಿನ ಸಾಮ್ಯ ಗಮನಾರ್ಹ. ಬುಗಾಕು, ಗಗಾಕು ಕಲೆಯ ಒಂದು ಅಂಶ. ಗಗಾಕು ಸಂಗೀತ ಪದ್ಧತಿಯ ಹೆಸರು. ನಮ್ಮ ಗೀತ ವಾದ್ಯಂಚ ನೃತ್ಯಂಚ ಎಂಬ ಉಕ್ತಿಯಂತೆಯೇ. ಗಗಾಕುವಿನಲ್ಲಿಯೇ ಹಾಡುಗಾರಿಕೆ ವಾದ್ಯವಾದನ ಮತ್ತು ನೃತ್ಯ ಮೂರೂ ಅಡಕವಾಗಿವೆ. ನೃತ್ಯವೇ ಬುಗಾಕು.

ದಕ್ಷಿಣ ಭಾರತದ ಮೂಲ

ಇಲ್ಲಿ ಇನ್ನೊಂದು ವಿಶೇಷವೆಂದರೆ ಈ ಗಗಾಕು ಸಂಗೀತದ ಮೂಲ ಪುರುಷ ದಕ್ಷಿಣ ಭಾರತದಿಂದ ಬಂದವನು ಎಂಬ ನಂಬಿಕೆ. ಮುಂದೆ ಈ ಅನ್ಯದೇಶೀಯ ಮತ್ತು ದೇಶೀಯ ಎರಡೂ ಶೈಲಿಗಳೂ ಬೆರೆತು ಜಪಾನಿನದೇ ಒಂದು ವಿಶಿಷ್ಟ ಶೈಲಿಯಾಗಿ ರೂಪುಗೊಂಡಿತು. ಈ ಸಂಗೀತದ ದೃಶ್ಯರೂಪವೇ ಬುಗಾಕು. ದೆಹಲಿಯ ರವೀಂದ್ರ ಭವನದ ಆವರಣದಲ್ಲಿ ಪ್ರದರ್ಶಿಸಲಾದ ಈ ಬುಗಾಕು ಕಾರ್ಯಕ್ರಮವು ಒಂದು ವಿಶೇಷ ಅನುಭವ.

ಅಚ್ಚ ಕೆಂಪು ಕಟಕಟೆಯಿಂದ ಆವೃತವಾದ ವೇದಿಕೆ. ಅದರ ಮೇಲೆ ವಾದ್ಯಕಾರರು, ಒಬ್ಬೊಬ್ಬರಾಗಿ ಬಂದು ಕುಳಿತರು. ಧರಿಸಿದುದು ಪುರಾತನ ಉಡುಪು. ಬೂದು ಬಣ್ಣದ ಕಿಮೋನೋ, ಬಿಳಿಯ ನಡುಕಟ್ಟು, ಕರಿಯ ಎತ್ತರದ ಟೋಪಿ ಎಲ್ಲರೂ ನೆಲದ ಮೇಲೆ ಕುಳಿತು ವಾದ್ಯಗಳನ್ನು ನುಡಿಸುವರು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ಈ ವಾದ್ಯಕಾರರು, ಕುಳಿತ ರೀತಿ ಮುಂದೆ ವಾದ್ಯಗಳ ಸಿದ್ಧತೆಯ ವಿಧಾನ ಮುಂತಾದುವು ಭರತನ ನಾಟ್ಯಶಾಸ್ತ್ರದಲ್ಲಿ ಹೇಳಿದ ಪೂರ್ವ ರಂಗದ ಅಂತರ್ಯವನಿಕಾ ವಿಧಿಯ ಪ್ರತ್ಯಾಹಾರ ಅವತರಣ, ಆಶ್ರವಣ, ಸಂಘಟನ ಮುಂತಾದುವನ್ನು ನೆನಪಿಗೆ ತರುತ್ತವೆ. ಈ ಬುಗಾಕುವಿನಲ್ಲಿ ಎಡ, ಬಲ, ಸಂಪ್ರದಾಯಗಳು ಬೇರೆ ಇವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಮೊದಲು ಅರ್ಪಿಸಲಾದುದು ಕಾಂಗೆನ್. ಇದು ಹೊಸ ಸಂಗೀತ ಕಾರ್ಯಕ್ರಮ. ವಾದ್ಯಗೋಷ್ಠಿ, ಮೂರು ತಾಳ ವಾದ್ಯಗಳು – ಕಾಕೊ, ಟೈಕೊ, ಷೋಗೋ; ಎರಡು ತತ ವಾದ್ಯಗಳು – ಬಿವಾ ಮತ್ತು ಕೊಟ್ಟೋ; ಮೂರು ಬಗೆಯ ಕೊಳಲುಗಳು – ಷೇ, ಹಿಚಿರಿಕಿ ಮತ್ತು ರ್ಯೂಟೆಕಿ. ಈ ಗೋಷ್ಠಿಯಲ್ಲಿ ಒಟ್ಟು 19 ಮಂದಿ ವಾದಕರಿದ್ದರು. ಎರಡು ಪ್ರಬಂಧಗಳನ್ನು ನಿರೂಪಿಸಿದರು – ಗಾಕ್ಕೆನ್ ಮತ್ತು ಬಟೌ.

ಪ್ರಾಚೀನತೆ ನೆನಪು

ಈ ಪ್ರಬಂಧಗಳೂ ನೃತ್ಯಕ್ಕೆ ಸಂಬಂಧಪಟ್ಟವೇ. ನೃತ್ಯವಿದ್ದಾಗ ಬುಗಾಕು. ಇಲ್ಲದಿದ್ದಾಗ ಕಾಂಗೆನ್. ಈ ಪುರಾತನ ಜಪಾನ್ ಸಂಗೀತವನ್ನು ಇತರ ಸಂಗೀತ ಪದ್ಧತಿಗಳೊಡನೆ

ಹೋಲಿಸುವುದು ಸರಿಯಲ್ಲ. ಅದರ ಕಾಲ ಮತ್ತು ಷಿಂಟೋ ಅನುಭಾವದ ಒಸ್ನೆಲೆಯಲ್ಲಿ ಪರಿಶೀಲಿಸಬೇಕು. ಅವರು ನಿರೂಪಿಸಿದ ಮಟ್ಟುಗಳು ಔಡವ ಸ್ವರಶ್ರೇಣಿಯ ಮೇಲೆ ಆಧಾರಿತವಾದವು. ವಾದ್ಯಗಳಲ್ಲಿಯೂ ನಮ್ಮಂತೆ ಒಟ್ಟು ಮೇಳನಪಿಲ್ಲ. ವಾದ್ಯಗಳು ಕೆಲವು ವೇಳೆ ಜೊತೆಜೊತೆಯಾಗಿ ಅಥವಾ ಬಿಡಿಬಿಡಿಯಾಗಿಯೂ ನುಡಿಸಲಾಗುತ್ತಿತ್ತು. ಕೊಳಲು ವಾದನದಲ್ಲಿ ಹರ್ಷಕ್ಕಿಂತ ಶೋಕಛಾಯೆ ಹೆಚ್ಚು ಅನುಭವ. ಕೆಲವು ವೇಳೆ ವಿವಾದಿ ಛಾಯೆ ಕೂಡ. ಒಟ್ಟಿನಲ್ಲಿ ಆ ಸಂಗೀತವು ಬೇರೆ ಯುಗಕ್ಕೆ ಸೇರಿದುದು. ಮನರಂಜನೆಗಿಂತ, ಒಂದು ಧ್ಯಾನ ಅಥವಾ ಧಾರ್ಮಿಕ ವಿಧಿಯಂತೆ ಅಲೌಕಿಕ ಅನುಭವವಾಗುತ್ತಿತ್ತು. ಜಪಾನ್ ರಾಷ್ಟ್ರವು ಈಗ ಪಾಶ್ಚಾತ್ಯ ಸಂಗೀತವನ್ನು ತೆಗೆದುಕೊಂಡು ಅದರಲ್ಲಿಯೂ ಉನ್ನತ ಸ್ಥಾನ ಪಡೆದಿದೆ. ಆದರೆ ಈ ಪ್ರಾಚೀನ ಸಂಗೀತವನ್ನೂ ತ್ಯಜಿಸದೆ, ಹೆಮ್ಮೆಯಿಂದ ಅದರ ರಕ್ಷಣೆಗೆ ವ್ಯವಸ್ಥೆ ಮಾಡಿದೆ. ★

ಪ್ರಜಾವಾಣಿ, 1987

34. ಕುಂಭ ಕಲೆಯ ಉಗಮ ಮತ್ತು ವಿಕಾಸ

ಜಗತ್ತಿನಲ್ಲಿ ಪರಿಪೂರ್ಣವಾದ ಆಕೃತಿ ಯಾವುದು? ಗೋಳ. ಭೂಮಿಯ ಗುರುತ್ವಾಕರ್ಷಣೆಯ ಎಲ್ಲೆಯಿಂದ ಮುಂದೆ ಗಗನದಲ್ಲಿ ಯಾವ ದ್ರವ ಅಥವಾ ಮೆತು ರಾಸಾಯನಿಕ ವಸ್ತುಗಳನ್ನು ಚಲ್ಲಿದರೂ ಅವುಗಳು ಗೋಳಾಕೃತಿಯಾಗುತ್ತವೆ. ಇದು ಪ್ರಕೃತಿ ನಿಯಮ. ಈ ನಿಯಮವೇ ಮಡಕೆ-ಕುಡಿಕೆಗಳ, ಅಥವಾ ಸಂಸ್ಕೃತದಲ್ಲಿ ಹೇಳಬೇಕಾದರೆ ಕುಂಭಕಲೆಯ ವಿಕಾಸಕ್ಕೆ ಮೂಲಸ್ಫೂರ್ತಿ ಎಂದು ಕೆಲವು ಮನಶ್ಶಾಸ್ತ್ರಜ್ಞರ ಮತ.

ಪ್ರಾಚ್ಯ ಮಾನವನ ಮುಖ್ಯ ಆಸ್ತಿಗಳಲ್ಲಿ ಒಂದು, ಮಡಕೆ; ಅವನ ಸರ್ವಸ್ವವನ್ನೂ ಕಾಪಾಡುತ್ತಿದ್ದ ಒಂದು ಸಂದೂಕವಿದ್ದಂತೆ. ಬೆಂಕಿಯ ಉಪಯೋಗವನ್ನು ಕಂಡುಕೊಂಡಮೇಲೆ ಆಹಾರವನ್ನು ಬಿಸಿಯಾಗಿ ಕಾಯಿಸುವ ಮತ್ತು ಬೇಯಿಸುವ ಸಾಧನವಾದುದೇ ಅಲ್ಲದೆ ಅಂದು ಅವನಿಗೆ ಅಮೂಲ್ಯವೆನಿಸಿದ್ದ ಸಾಮಗ್ರಿಗಳನ್ನು ಕೂಡಿಡುವ ಸಾಧನವೂ ಆಗಿದ್ದಿತು ಮಡಕೆ; ಆ ಯುಗದ ಒಂದು ಸಂದೂಕ ಇದ್ದಂತೆ. ಅಂತಹ ಬೆಲೆಬಾಳುವ ಪದಾರ್ಥವೆನಿಸಿಕೊಂಡುದರ ಫಲವಾಗಿ ಬದುಕಿದ್ದಾಗಿರಲಿ, ಸತ್ತಮೇಲೂ ಈ ಅಮೂಲ್ಯ ತಿಜೋರಿಯನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಲು ಆ ಯುಗದ ಮಾನವನು ಆಸೆಪಡುತ್ತಿದ್ದ. ಎಂಟುಹತ್ತು ಸಾವಿರ ವರ್ಷಗಳ ಹಿಂದಿನ ಗೋರಿಗಳನ್ನು ಅಗೆದಾಗ ಇದು ಅನುಭವವಾಗುತ್ತದೆ. ಆ ಅಸ್ಥಿಪಂಜರಗಳ ಜೊತೆಯಲ್ಲಿ ಸತ್ತವನು ಪರಲೋಕಕ್ಕೆ ತೆಗೆದುಕೊಂಡು ಹೋಗಲಿದ್ದ ವಸ್ತುಗಳಿಂದ ಕೂಡಿದ ಮಡಕೆಗಳು ಅಥವಾ ಅವುಗಳ ಚೂರುಗಳೂ ದೊರೆತೇ ದೊರೆಯುತ್ತವೆ.

ಕುಂಭಕಲೆಯ ವಿಕಾಸ

ಲೋಹದ ಉಪಯೋಗವು ಪ್ರಾರಂಭವಾದ ಮೇಲೆ ಮಣ್ಣಿನ ಬಳಕೆ ಸ್ವಲ್ಪ ಕಡಿಮೆ ಆಯಿತೆನಿಸಿದರೂ ಮನುಷ್ಯ ಜೀವನದಲ್ಲಿ ಮಡಕೆಯ ಸ್ಥಾನವೇನೂ ಕಡಿಮೆಯಾಗಿಲ್ಲ. ಅನುಭವದಿಂದ ಅದನ್ನು ಉತ್ತಮಗೊಳಿಸಿಕೊಂಡು ಬಂದಿದ್ದಾನೆ. ಮಣ್ಣಿನ ಮುದ್ದೆಯನ್ನು ತಟ್ಟಿ ಗುಂಡಾಗಿ ಮಾಡಿ, ಬಗೆದು ತೆಳು ಸಿಪ್ಪೆಯಾಕೃತಿಯಂತೆ ರಚಿಸಲ್ಪಟ್ಟ ಮೊದಮೊದಲ ಮಡಕೆಗಳು ಗಟ್ಟಿಯಾಗಿರುವಂತೆ ಕ್ರಮೇಣ ಬೆಂಕಿಯಲ್ಲಿ ಕಾಯಿಸಲ್ಪಡುವುದು, ಕೈ ಮತ್ತು ಕಣ್ಣಿ ಅಂದಾಜಿಗಿಂತ ಇನ್ನೂ ಪರಿಷ್ಕಾರವಾದ ಆಕಾರವಿರುವಂತೆ ಚಕ್ರದ ಮೇಲೆ ತಿರುಗಿಸಿ ರಚಿಸುವುದು – ಇವು ಕುಂಭಕಲೆಯ ವಿಕಾಸದ ಮುಖ್ಯ ಹಂತಗಳೆನ್ನಬಹುದು. ಮಡಕೆ ಅಥವಾ ಕುಂಭಗಳ ರಚನೆಯಲ್ಲಿ ಚಕ್ರದ ಪಾತ್ರ ಮುಖ್ಯವಾದರೂ ಅದರ ಸಹಾಯವಿಲ್ಲದೆ ಅಷ್ಟೇ ನಾಜೂಕಾದ ಮಣ್ಣಿನ ಪಾತ್ರೆಗಳನ್ನು ರಚಿಸಿದ ಜನಾಂಗಗಳೂ ಇವೆ. ನಿದರ್ಶನವಾಗಿ ಮೆಕ್ಸಿಕೋ ದೇಶದ ಮೂಲನಿವಾಸಿಗಳು ಯೂರೋಪಿನವರ ಸಂಪರ್ಕವಾಗುವವರೆಗೂ ಚಕ್ರವೆಂದರೆ ಏನೆಂಬುದನ್ನೇ ಕಾಣರು. ಇಷ್ಟಾದರೂ ಅವರು ರಚಿಸಿದ ಮಣ್ಣಿನ ಕರಂಡಕಗಳು ಮತ್ತು ವಿಧವಿಧ ಆಕಾರದ ಪಾತ್ರೆಗಳ ಮಾಟ, ಆಕಾರ, ಅಂದ ಅಚ್ಚರಿಗೊಳಿಸುವಂತಹವು. ಆದುದರಿಂದ ಈ ಕುಂಭರಚನೆ ಜೀವನಕ್ಕೆ ಅತ್ಯಾವಶ್ಯಕ ವ್ಯಾಪಾರವೆನಿಸಿದರೂ ಅದೂ ಕ್ರಮೇಣ ಒಂದು ಕಲೆಯಾಗಿಯೇ ಬೆಳೆದುಬಂದಿತು. ನಮ್ಮ ಪುರಾತನ ಕಲೆಗಳಲ್ಲಿ 'ಘಟಕಬಂಧ'ವೂ ಒಂದಾಗಿದ್ದಿತೆಂಬುದನ್ನು ಇಲ್ಲಿ ನೆನೆಯಬಹುದು.

ಆಕೃತಿಯ ಪರಿಷ್ಕರಣ

ವಸ್ತುಗಳನ್ನು ಕಾಪಾಡಲು ಪ್ರಾರಂಭವಾದ ಮಣ್ಣಿನ ಈ ಟೊಳ್ಳು ಕುಂಭಗಳು ಮಾನವನ ಕಲಾಭಿರುಚಿ ಬೆಳೆದುಬಂದಂತೆಲ್ಲಾ ಆಕಾರದಲ್ಲಿಯೂ ಅವುಗಳ ಪರಿಷ್ಕಾರವಾಗಲಾರಂಭವಾಯಿತು. ದೊಡ್ಡ ಮೈಯ ಮೇಲೆ ಇದ್ದ ಕಿರಿದಾದ ಬಾಯಿಗೆ ಒಂದು ಕಂಠ, ಆಕಾರದಲ್ಲಿಯೂ ವಿಧವಿಧ; ಲಂಬು, ಗುಜ್ಜು, ಮೊಗ್ಗಿನಾಕಾರದವು, ದ್ರವಗಳನ್ನು ಸುರಿದುಕೊಳ್ಳಲು ಸಹಾಯವಾಗಿ ಪಕ್ಕದಲ್ಲಿ ತೂತು ಮತ್ತು ಮೂತಿ ಇಟ್ಟಂತಹವು, ಎತ್ತಿ ಹಿಡಿಯಲು ಅನುಕೂಲವಾಗಿ ಹಿಡಿಯುಳ್ಳಂತಹವು, ಪೀಠವುಳ್ಳಂತಹವು ಹೀಗೆ. ಈ ಕುಂಭಗಳ ಅಂದವು ಇನ್ನೂ ಹೆಚ್ಚುವಂತೆ ಅವುಗಳ ಮೇಲ್ಮೈಯ ಮೇಲೆ ಗೆರೆಗಳೂ ಚಿತ್ರಗಳೂ ರಚಿಸಲಾರಂಭವಾಯಿತು. ಕೆಲವು ವೇಳೆ ಕಂಠ, ಮೂತಿ, ಹಿಡಿ ಮುಂತಾದುವುಗಳಲ್ಲೆಲ್ಲಾ ಮನುಷ್ಯ, ಪ್ರಾಣಿ ಮುಂತಾದ ಆಕೃತಿಗಳ ರಚನೆ, ಕುಂಭಗಳ ರಚನೆಯ ವಿಧಾನವನ್ನೇ ಅನುಸರಿಸಿ ಬೊಂಬೆಗಳ ರಚನೆ – ಇವುಗಳನ್ನು ಟೆರ್ರಾಕೊಟ್ಟಾ ಎನ್ನುತ್ತಾರೆ. ಮುಂದೆ ವಿಶೇಷ ಜಾತಿಯ ಮಣ್ಣನ್ನು ಉಪಯೋಗಿಸಿ ಅದರಲ್ಲಿ ಕುಂಭಗಳನ್ನು ರಚಿಸಿ ಅವು ಲೋಹಗಳಂತೆಯೇ ಗಟ್ಟಿಯಾಗಿ, ಮಿರುಗುತ್ತಿರುವಂತಹ ವಸ್ತುಗಳನ್ನು ರಚಿಸಲಾರಂಭ. ಇದನ್ನು ಪಿಂಗಾಣಿ ಸಾಮಾನೆನ್ನುತ್ತಾರೆ. ಹೀಗೆ ಬೆಳೆದುಬಂದಿತು ಈ ಕುಂಭಕಲೆ.

ನಿತ್ಯೋಪಯೋಗಿ ಪಾತ್ರೆ ಉಪಕರಣಗಳು

ಭಾರತದಲ್ಲಿ ಈ ಕುಂಭಕಲೆಯು ಉತ್ತಮ ರೀತಿಯಲ್ಲಿ ಬೆಳೆದುಬಂದುದಕ್ಕೆ ನಿದರ್ಶನಗಳು ನಮ್ಮ ಪ್ರಸಿದ್ಧ ವಸ್ತುಸಂಗ್ರಹಾಲಯಗಳಲ್ಲೆಲ್ಲಾ ದೊರೆಯುತ್ತವೆ. ಹರಪ್ಪ, ಲೋಥಾಲ್ ಮುಂತಾದ ಸ್ಥಳಗಳಲ್ಲಿ ಭೂಗತವಾಗಿದ್ದ ಈ ಗಡಿಗೆಗಳನ್ನು ಪರಿಶೀಲಿಸಿದಾಗ ಅವುಗಳನ್ನು ತಮ್ಮ ವಿಧವಿಧ ಉಪಯೋಗಕ್ಕಾಗಿ ಜಾಣ್ಮೆಯಿಂದ ಹೇಗೆ ಅಳವಡಿಸಿಕೊಂಡಿದ್ದರೆಂಬ ಅಂಶ ಸ್ಪಷ್ಟವಾಗದಿರದು.

ನಮ್ಮಲ್ಲಿ ಇಂದು ಬಳಕೆಯಲ್ಲಿರುವ ತಪ್ಪಲೆ, ಕೊಳತಪ್ಪಲೆ, ಬೋಗಣಿ, ಡಬರಿ, ಬೋಸಿ, ಗಿಂಡಿ, ಗೋಮುಖ, ಲೋಟ, ಕಟೋರ, ಅರಕಂಚಟ್ಟಿ ಮುಂತಾದ ಪಾತ್ರೆಗಳ ಮಣ್ಣಿನ ಮೂಲಕೃತಿಗಳೆಲ್ಲಾ ನಾಲ್ಕೈದು ಸಾವಿರ ವರುಷಗಳ ಹಿಂದೆಯೇ ಉಪಯೋಗದಲ್ಲಿದ್ದ ಅಂಶ ಈ ಸಂಗ್ರಹಾಲಯಗಳಿಗೆ ಹೋಗಿ ನೋಡಿದರೆ ತಿಳಿದುಬರುತ್ತದೆ. ಈಗ ಅಂತಹ ವಸ್ತುಗಳನ್ನು ಲೋಹದಲ್ಲಿ ರಚಿಸಿದ್ದರೂ ಮೂಲ ಮಣ್ಣಿನ ವಸ್ತುಗಳಿಗಿಂತ ವಿಶೇಷ ಮಾರ್ಪಾಡೇನೂ ಕಾಣಬರುವುದಿಲ್ಲ. ಆ ಸರಳವಾದ ಕುಂಭಗಳ ಅಂದವನ್ನು ಹೆಚ್ಚಿಸಲು ಮೇಲೆ ಚಿತ್ರಾಲಂಕಾರ ಮಾಡುತ್ತಿದ್ದರು. ಈಗ ನಮ್ಮ ಲೋಹಪಾತ್ರೆಗಳಲ್ಲಿಯೂ ಅಂತಹ ಚಿತ್ರಗಳು ಕೊರೆಯಲ್ಪಟ್ಟಿದ್ದರೂ ಹಿಂದಿನವುಗಳಿಗೆ ಮೀರಿದ ವೈವಿಧ್ಯವೇನೂ ಇಂದು ಕಂಡುಬರುವುದಿಲ್ಲ.

ಉಪಯೋಗ ಮಿತ; ಕಲೆ ಸ್ಥಗಿತ

ಇದರಿಂದ ಒಂದು ಅಂಶವು ಸ್ಪಷ್ಟಪಡುತ್ತದೆ. ಭಾರತದ ಕುಂಭಕಲೆಯಲ್ಲಿ ಏನೂ ಬೆಳವಣಿಗೆ ಕಾಣಬರುತ್ತಿಲ್ಲ ಅನ್ನಿಸುತ್ತದೆ. ಇಂದು ಬಳಕೆಯಲ್ಲಿರುವ ಕುಂಭಜಾತಿಯ ವಸ್ತುಗಳ ರೂಪರೇಷೆಗಳು ಸಾವಿರಾರು ವರ್ಷಗಳ ಹಿಂದೆ ಮೂಡಿಬಂದು ಪರಿಷ್ಕರಿಸಲ್ಪಟ್ಟಂತಹವು. ಇತರ ಚೀಣಾ, ಇರಾನ್ ದೇಶಗಳಂತೆ ಭಾರತದ ಕುಂಭಕಲೆಯಲ್ಲಿ ಏರಿಳಿತಗಳಾಗಲಿ ವ್ಯತ್ಯಾಸಗಳಾಗಲಿ ಕಂಡುಬರುವುದಿಲ್ಲ. ಇದಕ್ಕೆ ಕಾರಣವೇನಿರಬಹುದು? ಮೊದಲನೆಯದಾಗಿ ಈ ವಸ್ತುಗಳ ಬಳಕೆ ಸಾಮಾನ್ಯ ಜನರಿಗೇ ಮಿತಿಗೊಂಡುದು. ಇಂದೂ ಅದೇ ಸ್ಥಿತಿ. ಈ ವಸ್ತುಗಳನ್ನು ಉಪಯೋಗಿಸುತ್ತಿರುವವರು ಗ್ರಾಮಾಂತರದವರು, ಲೋಹದ ವಸ್ತುಗಳನ್ನು ಕೊಳ್ಳಲು ಶಕ್ತಿಯಿಲ್ಲದ ಬಡಜನಗಳು. ಅವರ ಅವಶ್ಯಕತೆಗಳೂ ಮಿತ. ಅದಕ್ಕನುಗುಣವಾಗಿ ಈ ಪಾತ್ರೆಗಳು ರಚಿತವಾಗುತ್ತಿವೆ. ಬೇಯಿಸಲು ದೊಡ್ಡ ಮಡಕೆ ಅಥವಾ ಅಗಲಬಾಯಿನ ಮಣ್ಣಿನ ಡಬರಿ. ನೀರು ತುಂಬಿಡಲು ದೊಡ್ಡ ಮಡಕೆ; ನೀರು ಕುಡಿಯಲು ಅಥವಾ ಎಣ್ಣೆ ಮುಂತಾದುವನ್ನು ತುಂಬಿಡಲು ಕುಡಿಕೆಗಳು; ದೀಪ ಹಚ್ಚಲು ಹಣತೆ – ಹೀಗೆ.

ಜೊತೆಗೆ ಮೈಲಿಗೆಯ ಮನೋಭಾವ ಬೇರೆ. ಈ ಮಡಕೆ-ಕುಡಿಕೆಗಳನ್ನು ಬೇರೆ ಜಾತಿಯವರು ಮುಟ್ಟಿದಾಗ ಅಥವಾ ಅಶೌಚ ಬಂದಾಗ, ಈ ಮಡಕೆ-ಕುಡಿಕೆಗಳನ್ನು ಒಡೆದು ಹೊಸದನ್ನು ತರುವ ಸಂಪ್ರದಾಯ.

ಸಮಾಜದ ಅನುಕೂಲವಂತರಲ್ಲಿ ಈ ಮಡಕೆಗಳ ಬಳಕೆ ಇಲ್ಲದೆ ಇಲ್ಲ. ಅದು ಪ್ರಾಯಶಃ ಯಾರಾದರೂ ಸತ್ತಾಗ. ಲೋಹಯುಗಕ್ಕೂ ಪೂರ್ವದ ಸಂಬಂಧ ಇಲ್ಲಿ ಕಾಣಬರುತ್ತದೆ. ಮನುಷ್ಯನಿಗೂ ಮಣ್ಣಿಗೂ ಇರುವ ನಿಕಟ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಆದುದರಿಂದ ಈ ಕುಂಭಜಾತಿಯ ವಸ್ತುಗಳು ಕಲಾತ್ಮಕ ವಸ್ತುಗಳೂ ಆಗುವ ಬದಲು ಕೇವಲ ನಿತ್ಯೋಪಯುಕ್ತ ಸಾಮಗ್ರಿಗಳಂತೆಯೇ ನಿಂತುಹೋದವು.

ಜೊತೆಗೆ, ಅವುಗಳಲ್ಲಿ ಬೆಳವಣಿಗೆಯು ಉಂಟಾಗಬೇಕಾದಲ್ಲಿ ಹೊಸ ಸಂಸ್ಕೃತಿಗಳ ಸಂಪರ್ಕ, ಮತ್ತು ಹೊಸ ಹೊಸ ರೀತಿಯ ವಸ್ತುಗಳನ್ನು ರಚಿಸಲು ಪ್ರೋತ್ಸಾಹ – ಎರಡೂ ಅವಶ್ಯಕ. ಆದರೆ ಭಾರತದಲ್ಲಿ ಹೊರ ಸಂಸ್ಕೃತಿಗಳ ಸಂಪರ್ಕವುಂಟಾದರೂ ಅವುಗಳಿಂದ ಸ್ಫುರಿತವಾಗಿ ಈ ಕಲೆಯು ಹೊಸ ರೀತಿಯಲ್ಲಿ ಅರಳಲು ಅವಶ್ಯಕವಾದ ಶಾಂತಿಯಿರಲಿಲ್ಲ. ವಿದೇಶಿಯರ ಆಕ್ರಮಣ, ದೇಶಿಯರ ಅಂತರ್ಯುದ್ಧಗಳೇ ಮುಂತಾದವುಗಳ ಪರಿಣಾಮವಾಗಿ ಜನತೆಯಲ್ಲಿ ನೆಮ್ಮದಿಯಿರಲಿಲ್ಲ. ನೆಮ್ಮದಿಯಿಲ್ಲದೆ ಯಾವ ಕಲೆಯು ವಿಕಾಸವಾಗಲು ಸಾಧ್ಯ?

ರಾಜಾಶ್ರಯ

ಪ್ರೋತ್ಸಾಹದ ದೃಷ್ಟಿಯ ಬಗೆಗೂ ಇದನ್ನೇ ಹೇಳಬಹುದು. ನಿದರ್ಶನವಾಗಿ ಚೀಣಾ ದೇಶದಲ್ಲಿ ಈ ಕುಂಭಕಲೆಗೆ ಚಕ್ರವರ್ತಿಗಳೂ ಮತ್ತು ಶ್ರೀಮಂತರೂ ಇತ್ತ ಪ್ರೋತ್ಸಾಹದ ಫಲವಾಗಿ ಅದು ಬಹಳ ಪರಿಷ್ಕಾರಗೊಂಡು ಸಾವಿರಾರು ವರ್ಷಗಳ ಹಿಂದೆಯೇ ಅದ್ಭುತ ಪಿಂಗಾಣಿ ವಸ್ತುಗಳ ರಚನೆಗೆ ಮೂಲವಾಯಿತು. ಐನೂರು ವರ್ಷಗಳ ಹಿಂದೆ ಚೀಣಾ ಆಳಿದ ಮಿಂಗ್ ವಂಶದ ಚಕ್ರವರ್ತಿಗಳ ಕಾಲದ ಈ ಕುಂಭಕಲಾ ವಸ್ತುಗಳು ಜಗತ್ಪ್ರಸಿದ್ಧವಾಗಿವೆ. ಹಾಗೆಯೇ ಪಾರ್ಸೀ ದೇಶದ ಸುಲ್ತಾನರ ಪ್ರೋತ್ಸಾಹದ ಫಲವಾಗಿ ಮೆದುಬಣ್ಣದ, ಚಿತ್ರಖಚಿತ ಕುಂಭಕಲಾ ವಸ್ತುಗಳು ಬೆಳೆದುಬರಲು ಅಲ್ಲಿ ಆಸ್ಪದವಾಯಿತು.

ಅಭಿಮಾನಾರ್ಹ ಕಲೆ

ಈ ಹಿನ್ನೆಲೆಯಿಂದ ನೋಡಿದಲ್ಲಿ ಭಾರತದಲ್ಲಿ ಇಂದು ಕುಂಭಕಲೆ ತೀರ ಹಿಂದುಳಿದಿದೆ ಎನ್ನಿಸದಿರದು. ದೇಶಕ್ಕೆ ಸ್ವಾತಂತ್ರ್ಯ ಬಂದು 27 ವರ್ಷಗಳಾದರೂ ಇದೇ ಸ್ಥಿತಿ ಇರುವುದು ಇನ್ನೂ ಶೋಚನೀಯ. ಇದಕ್ಕೆ ಮುಖ್ಯ ಕಾರಣ ಈಗ ಬಳಕೆಯಲ್ಲಿರುವ ಕುಂಭಸಾಮಗ್ರಿ, ಉಪಯುಕ್ತವಾದ ವಸ್ತುವೇ ಅಲ್ಲದೆ, ಅದೂ ಒಂದು ರೀತಿಯ ಕಲಾಕೃತಿ ಎಂಬ ಪ್ರಜ್ಞೆ ಜನಗಳಲ್ಲಿ ಬೆಳೆಯದಿರುವುದೇ. ಕೈಗಾರಿಕೆಯ ಅಭಿವೃದ್ಧಿಯಾಗುತ್ತಾ ಈ ಮಣ್ಣಿನ ವಸ್ತುಗಳಿಗೆ ಸ್ಥಾನವಿಲ್ಲ, ಅವು ಮಣ್ಣುಪಾಲೇ ಎಂಬ ಭಾವನೆ ನಮ್ಮಲ್ಲಿರುವಂತಿದೆ. ಆದರೆ ಅದು ಅಷ್ಟು ವಿವೇಕದಿಂದ ಕೂಡಿದುದಲ್ಲ.

ಇದಕ್ಕೆ ನಿದರ್ಶನವಾಗಿ ಮೆಕ್ಸಿಕೋ ದೇಶ ನಮಗಿಂತ ಕೈಗಾರಿಕೆಯಲ್ಲಿ ಆರ್ಥಿಕವಾಗಿ ಎಷ್ಟೋ ಮುಂದುವರೆದಿದೆ. ಆದರೆ ಅಲ್ಲಿ ಈ ಮೃತ್ತಿಕಾ ವಸ್ತುಗಳಿಗೆ ಎಷ್ಟೋ ಮಾನ್ಯತೆಯಿದೆ. ಮೆಕ್ಸಿಕೋ ನಗರದ ಕೆಲವು ದೊಡ್ಡ ಹೋಟೆಲ್‌ಗಳಲ್ಲಿ ಪಲ್ಯಗಳನ್ನು, ಗೊಜ್ಜುಗಳನ್ನು, ಕೆಲವು ರಸಾಯನಗಳನ್ನು ಇಂದಿಗೂ ಮಣ್ಣಿನ ಪಾತ್ರೆಗಳಲ್ಲಿಯೇ ತಯಾರಿಸುತ್ತಾರೆ. ಲೋಹದ ಪಾತ್ರೆಗಳಲ್ಲಿ ತಯಾರಿಸಿದರೆ ಅವುಗಳ ನಿಜವಾದ ರುಚಿ ಬರುವುದಿಲ್ಲ ಎಂದು ಭಾವನೆ. ಅದಕ್ಕೆ ತಕ್ಕಂತೆ ಗಿರಾಕಿಗಳೂ ಆ ತಿಂಡಿಗಳು ತಯಾರಾದ ಪಾತ್ರೆ ಮಣ್ಣಿನದೆ ಲೋಹವೆ – ಎಂದು ರುಚಿಯಿಂದ ತಟ್ಟನೆ ಕಂಡುಹಿಡಿಯಬಲ್ಲರು. ಲೋಹದ ಪಾತ್ರೆಯಾದರೆ ಒಲ್ಲರು. ಹಾಗೆಯೇ ಮನೆಗಳಲ್ಲಿಯೂ ಒಳ್ಳೆಯ ಮೆರಗುಕೊಟ್ಟ ಅನೇಕ ಮಣ್ಣಿನ ಪಾತ್ರೆಗಳನ್ನು ಇಂದೂ ಉಪಯೋಗಿಸುತ್ತಿದ್ದಾರೆ. ಅದರ ಬಗೆಗೆ ಅವರಿಗೆ ಅಭಿಮಾನವಿದೆ.

ನಮ್ಮಲ್ಲಿರುವ ಈ ಕುಂಭಕಲೆಯನ್ನು ಪುನರುಜ್ಜೀವನಗೊಳಿಸುವುದರಲ್ಲಿ ಗುರುಚರಣ್‌ಸಿಂಗ್, ರತ್ನಘಾಬ್ರಿ ಮುಂತಾದವರು ಶ್ರಮಿಸಿದ್ದಾರೆ. ಆದರೆ ಈ ವೃತ್ತಿಯನ್ನು ವಂಶಪಾರಂಪರ್ಯವಾಗಿ ಬೆಳೆಸಿಕೊಂಡು ಬಂದವರು ಇದರಲ್ಲಿ ಹೆಚ್ಚು ಆಸಕ್ತಿ ಬೆಳೆಸಬೇಕು, ಹೀನಾಯಪಡಬೇಕಾಗಿಲ್ಲ. ಆಧುನಿಕ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಕುಂಭ ಕಾರ್ಮಿಕರು ಕಲಾವಿದರೂ ಆಗುವಂತೆ ಶ್ರಮಿಸಬೇಕು. ಅದಕ್ಕೆ ಒಂದು ಹೊಸ ವರ್ಚಸ್ಸನ್ನೂ ಸ್ಥಾನವನ್ನೂ ಕೊಡಲು ಶ್ರಮಿಸಬೇಕು. ★★★★★★★★★★★★★★

ಸ್ಮರಣಸಂಚಿಕೆ, ಕುಂಬಾರರ ಸಂಘ, 1974

35. ವಿಶಿಷ್ಟ ಶೈಲಿಯ ‘ನಾವು ನಾಲ್ವರು’

ರವೀಂದ್ರ ಕಲಾಕ್ಷೇತ್ರದ ದಿವಾನಖಾನೆಗೆ ಏನೋ ಒಂದು ದೆಸೆ ಬಂದಂತಿದೆ. ಸಭಾಂಗಣದಲ್ಲಿ ನಡೆವ ಕಾರ್ಯಕ್ರಮಗಳನ್ನು ನೋಡಲು ಬರುವ ಪ್ರೇಕ್ಷಕರು ವಿಶ್ರಮಿಸಿಕೊಳ್ಳಲು ನಿರ್ಮಿತವಾಗಿರುವ ಈ ದೊಡ್ಡ ಅಂಕಣದಲ್ಲಿ ಚಿತ್ರಕಲಾ ಪ್ರದರ್ಶನಗಳು ನಡೆವುದು ವಿಸ್ಮಯವನ್ನುಂಟುಮಾಡಿದರೂ, ಈಗ ಕೆಲವು ತಿಂಗಳುಗಳಿಂದ ಈ ಪ್ರದರ್ಶನಗಳು ಅಲ್ಲಿ ನಡೆಯುತ್ತಿರುವುದು ಗಮನಾರ್ಹ. ಅಂಕಣವು ಈ ರೀತಿಯ ಪ್ರದರ್ಶನಕ್ಕೋಸ್ಕರ ನಿರ್ಮಿತವಾಗದಿದ್ದರೂ ಮತ್ತು ಅದಕ್ಕೆ ಉಚಿತವಾದ ಸೌಲಭ್ಯಗಳಿಲ್ಲದಿದ್ದರೂ, ಇಷ್ಟು ಸೌಕರ್ಯವೂ ನಗರದಲ್ಲಿ ಬೇರೆಲ್ಲೂ ದೊರೆಯದಿರುವ ಪ್ರಯುಕ್ತ ಸಣ್ಣ ಪ್ರಮಾಣದ ಕಲಾಪ್ರದರ್ಶನ ನಡೆಸುವವರು ಈ ಅಂಕಣವನ್ನೇ ಆಶ್ರಯಿಸುವಂತಿದೆ. ಈಗ ನಡೆಯುತ್ತಿರುವ ಕಲಾ ಪ್ರದರ್ಶನವು ನಗರದ ‘ನಾವು ನಾಲ್ವರು’ ತರುಣ ಕಲಾವಿದರ ಇಪ್ಪತ್ತಮೂರು ಕೃತಿಗಳಿಂದ

ಕೂಡಿವೆ. ಈ ನಾಲ್ವರು: ಠಾಕೂರ್ ಕೆ. ಪಟೇಲ್, ಎಸ್.ಎಸ್. ಮುನೋಳಿ, ಜಿ.ವೈ. ಹುಬ್ಳೀಕರ್ ಮತ್ತು ಆರ್.ಎಂ. ಹಡಪದ್. ಇದರಲ್ಲಿ ಮೊದಲನೆಯವರು ಮತ್ತು ನಾಲ್ಕನೆಯವರು ಮುಂಬೈ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಪದವೀಧರರು. ಎರಡನೆಯವರು ಬರೋಡಾ ವಿಶ್ವವಿದ್ಯಾನಿಲಯದ ಪದವೀಧರರು. ಮೂರನೆಯವರು ಡೆಕ್ಕನ್‌ಹೆರಾಲ್ಡ್, ಪ್ರಜಾವಾಣಿ, ಸುಧಾ ಪತ್ರಿಕೆಗಳ ಚಿತ್ರಗಾರರು.

ಪ್ರದರ್ಶನವನ್ನು ಒಂದು ಸಾರಿ ವೀಕ್ಷಿಸಿದಲ್ಲಿ ಸ್ಪಷ್ಟವಾಗುವ ಒಂದು ಅಂಶವೆಂದರೆ ಒಬ್ಬೊಬ್ಬರೂ ಒಂದು ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದಾರೆ. ಹುಬ್ಳೀಕರ್‌ರವರ ಕೃತಿಗಳು ಸಾಕಾರಯುತವಾಗಿದ್ದಲ್ಲಿ, ಮಿಕ್ಕವರದು ನಿರಾಕಾರದಿಂದ ಪ್ರೇರಿತವಾಗಿದೆ ಎನ್ನಬಹುದು. ನಾಲ್ವರೂ ಜಲವರ್ಣಗಳನ್ನೇ ಬಳಸಿರುವುದರಿಂದ ಚಿತ್ರಗಳಲ್ಲಿ ಒಂದು ಸ್ವಚ್ಛತೆ ಕಂಡುಬರುತ್ತದೆ. ನವ್ಯಕಲಾಕೃತಿಗಳನ್ನು ವೀಕ್ಷಿಸುವಾಗ ನೆನಪಿನಲ್ಲಿಡಬೇಕಾದ ಅಂಶವೆಂದರೆ ಅವುಗಳಲ್ಲಿ ನಮಗೆ ಪರಿಚಿತವಾದ ಆಕಾರಗಳನ್ನೇನೂ ನಾವು ನಿರೀಕ್ಷಿಸುವಂತಿಲ್ಲ. ಆ ಚಿತ್ರಗಳೆಲ್ಲಾ ಪ್ರಾಯಶಃ ನಿಸರ್ಗದಿಂದ ಆರಿಸಿದ ಆಕೃತಿಗಳ ಚಿತ್ರಣಕ್ಕಿಂತ ಮನಸ್ಸಿನ ಭಾವೋದ್ವೇಗಗಳಿಂದ ಪ್ರೇರಿತವಾಗಿ ನಿರ್ಮಿತವಾದವು. ಆದುದರಿಂದ ನಾವು ಅದರಲ್ಲಿ ನೋಡಬೇಕಾದ ಅಂಶವೆಂದರೆ, ಆಯಾ ಕಲಾವಿದನ ವೈಶಿಷ್ಟ್ಯ – ವರ್ಣಸಂಯೋಜನೆಯಲ್ಲಿ ಆಕೃತಿಗಳ ಮತ್ತು ವರ್ಣಗಳ ಸಮತೋಲನದಲ್ಲಿ. ಈ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ನಮ್ಮನ್ನು ಮೊದಲು ಆಕರ್ಷಿಸುವ ಕೃತಿಗಳು ಮುನೋಳಿಯವರವು. ಗಾಢವಾದ ನೀಲ ಅಥವಾ ರಕ್ತ ವರ್ಣಗಳ ಹಿನ್ನೆಲೆಯಲ್ಲಿ ಅವರು ನಿರ್ಮಿಸಿರುವ ಆಕೃತಿಗಳು ಒಂದು ವಿಶೇಷವಾದ ಸೊಗಸಿನಿಂದ ಕೂಡಿದೆ. ಪಟೇಲ್‌ರವರ ಕೃತಿಗಳು ಪ್ರಾಯಶಃ ಅಂಡಾಕಾರದಲ್ಲಿಯೇ ಇವೆ. ಅದರಲ್ಲಿರುವ ವರ್ಣಸಂಯೋಜನೆಯು ವಿಧವಿಧವಾದ ಹರಳುಗಳನ್ನು ಮತ್ತು ಶಿಲಾಪದರುಗಳನ್ನು ಸ್ಮೃತಿಗೆ ತರುತ್ತವೆ. ಹಡಪದ್‌ರವರ ಚಿತ್ರಗಳ ಶೈಲಿಯೇ ಬೇರೆ. ವರ್ಣಗಳ ಚೌಕಳಿಯಿಂದಕೂಡಿ ಒಂದು ಘನಾಕೃತಿಯನ್ನು ಬಿಂಬಿಸುವಂತಿವೆ. ಹುಬ್ಳೀಕರ್‌ರವರ ಚಿತ್ರಗಳಲ್ಲಿ ವರ್ಣಸಂಯೋಜನೆಯು ನವ್ಯರೀತಿಯಲ್ಲಿದ್ದರೂ ಅರ್ಥವಾಗುವಂತಹ ಆಕೃತಿಗಳಿಂದ ಕೂಡಿವೆ.

ನಗರದಲ್ಲಿ ಕಲೆಯ ಬಗೆಗೆ ಸಾಕಷ್ಟು ಆಸಕ್ತಿಯಿದ್ದರೂ ಅದರ ಅಭಿರುಚಿಯನ್ನು ವೃದ್ಧಿಮಾಡುವ ಕ್ರಮಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಹಿಂದುಳಿದಿದ್ದೇವೆ. ಈ ದೃಷ್ಟಿಯಿಂದ ಈ ನಾಲ್ಕು ಕಲಾವಿದರೇ ಒಟ್ಟುಗೂಡಿ ಈ ಭಾಗದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಲು ಕಾರ್ಯೋನ್ಮುಖರಾಗಿರುವುದೂ ಮತ್ತು ಕಲಾಭಿಮಾನಿಗಳಿಗೆ ಅವರ ಕರ್ತವ್ಯವನ್ನು ನೆನಹು ಮಾಡಿಕೊಡುವಂತಹ ಈ ಪ್ರದರ್ಶನವನ್ನು ಏರ್ಪಡಿಸಿರುವುದೂ ಸ್ತುತ್ಯರ್ಹವಾದುದು. ★

ಪ್ರಜಾವಾಣಿ, 1966

36. ಲೋಹ ಶಿಲ್ಪದ ಗಾರುಡಿಗ ಎಲ್. ಪಿ. ಅಂಚನ್

ಹದಿನಾರು ವರುಷಗಳ ಹಿಂದೆ, ಬೆಂಗಳೂರು ಕಸ್ತೂರ್ ಬಾ ರಸ್ತೆಯಲ್ಲಿರುವ 'ವಿಶ್ವೇಶ್ವರಯ್ಯ ತಾಂತ್ರಿಕ ವಸ್ತು ಸಂಗ್ರಹಾಲಯ'ದವರು ಒಂದು ವಿಶೇಷ ಕಲಾಶಿಬಿರವನ್ನು ಏರ್ಪಡಿಸಿದ್ದರು. ಅದರ ಹೆಸರು 'ಟೆಕ್ನೋ ಆರ್ಟ್-82'. ಅದರ ಉದ್ದಿಶ್ಯ : ಈ ತಾಂತ್ರಿಕ ಯುಗದ ಬಗೆಗೆ ಕಲಾವಿದರ ಪ್ರತಿಕ್ರಿಯೆ. ಶಿಲ್ಪದ ಮೂಲಕ ಅದರ ಅಭಿವ್ಯಕ್ತಿ. ಕೆ.ಕೆ. ಹೆಬ್ಬಾರರ ನೇತೃತ್ವದಲ್ಲಿ ನಡೆದ ಈ ಶಿಬಿರವನ್ನು ಪ್ರಸಿದ್ಧ ಕಲಾವಿದ ಚಿಂತಾಮಣಿ ಕಾರ್ ಅವರು ಉದ್ಘಾಟಿಸಿದರು. ಸುಮಾರು ಒಂದು ವಾರ ಕಾಲ ನಡೆದ ಆ ಶಿಬಿರದಲ್ಲಿ ಭಾರತದ ವಿವಿಧ ಭಾಗಗಳಿಂದ ಬಂದ, ಪಂಜಾಬಿನ ಶಿವ್‌ಸಿಂಗ್, ಬರೋಡದ ರಾಘವ ಕನೇರಿಯ ಶಾಂತಿನಿಕೇತನದಿಂದ ಅಜಿತ್ ಚಕ್ರವರ್ತಿ ಮತ್ತು ಶರ್ಬರಿರಾಯ್ ಚೌಧುರಿ, ತಮಿಳು ನಾಡಿನ ವಿದ್ಯಾಶಂಕರ ಸ್ಥಪತಿ, ಕೇರಳದ ಕನ್ಹೆಯ್ಯಾ ಕುನ್ಹಿರಾಮನ್, ಕರ್ನಾಟಕದ ಎಸ್.ಜಿ. ವಾಸುದೇವ್, ಜಿ.ಎಸ್. ಶೆಣೈ ಭಾಸ್ಕರರಾವ್ ಮುಂತಾದವರು ಭಾಗವಹಿಸಿದ್ದರು ಮತ್ತು ಅವರವರ ಕಲ್ಪನೆಗಳಿಗನುಸಾರ ಕೃತಿಗಳನ್ನು ನಿರೂಪಿಸಿದರು.

ಶಿವಸಿಂಗ್‌ರವರದು ಕಬ್ಬಿಣದ ತಾಳೆಮರ ರೀತಿಯ ಶಿಲ್ಪ. ತಲೆ ಕೆಳಗಾದ ಪ್ರಶ್ನೆ ಸೂಚನೆ ಚಿಹ್ನೆಯಂತಿದ್ದದು ರಾಘವ ಕನೇರಿಯಾರವರ ಶಿಲ್ಪ, ಸೆಟೆದು ನಿಂತು ಘನೀಭೂತ ಸರಪಳಿಯಂತಿದ್ದ ಕುನ್ಹಿ ರಾಮನ್‌ರವರ ಶಿಲ್ಪ; ಮುಂತಾದವುಗಳು ನಿರ್ಮಿತವಾದವು. ಇವುಗಳೆಲ್ಲಾ ಚಮತ್ಕಾರಪೂರಿತವಾದುವೇನೋ ಸರಿ, ಆದರೆ ಈ ತಾಂತ್ರಿಕ ಯುಗದ ಒಂದು ಮುಖ್ಯ ಪದಾರ್ಥ, ವಿದ್ಯುಚ್ಛಕ್ತಿಯ ಪ್ರಭಾವವೂ ಈ ಶಿಲ್ಪಗಳಲ್ಲಿ ಅನುಭವವಾಗಬೇಡವೇ? ಅಂತಹವೂ ಕೆಲವು ಶಿಲ್ಪಗಳಿದ್ದವು. ಇದರಲ್ಲಿ ಅಜಿತ್ ಚಕ್ರವರ್ತಿಯವರ ಮುಖವಾಡ ನೆನಹಿಗೆ ಬರುತ್ತದೆ. ಅದರ ಎರಡೂ ಕಣ್ಣುಗಳೂ ಜ್ವಲಿಸುತ್ತಿದ್ದುವು - ಹಿಂದುಗಡೆ ವಿದ್ಯುಚ್ಛಕ್ತಿ ದೀಪಗಳನ್ನು ಹುದುಗಿಸಿದ್ದುದರಿಂದ. ಹಾಗೆಯೇ ವಾಸುದೇವ್ ಅವರ ಶಿಲ್ಪವೂ ಸಹ. ಬೋರಲು ಹಾಕಿದ ಕೊಳದಪ್ಪಲೆಯನ್ನು ಹೋಲುತ್ತಿದ್ದ ಈ ಶಿಲ್ಪದ ವಿಶೇಷವೆಂದರೆ, ಭೂಮಿಯಂತೆ ನಿಧಾನವಾಗಿ ತಿರುಗುತ್ತಿದ್ದು, ಬೆಳಕು ಚೆಲ್ಲುವ ಕಿಂಡಿಗಳಿಂದ ಕೂಡಿತ್ತು. ಕಾರಣ ಒಳಗಡೆ ವಿದ್ಯುಚ್ಛಕ್ತಿ ದೀಪಗಳನ್ನು ಸ್ಥಾಪಿಸಲಾಗಿತ್ತು. ಹಾಗೆಯೇ ಹೂವಿನ ಗಿಡಗಳ ಪೊದೆಯ ನೆನಪುಂಟು ಮಾಡುತ್ತಿದ್ದ ಇನ್ನೊಂದು ಶಿಲ್ಪ - ಹತ್ತಿರದಿಂದ ನೋಡಿದರೆ ಹೂಗಳ ಬದಲು ಬೆಳಕು ಮಿನುಗುತ್ತಿತ್ತು - ಸಣ್ಣ ವಿದ್ಯುದ್ದೀಪಗಳನ್ನು ಒಳಗೆ ಅಡಕ ಮಾಡಿದ್ದರಿಂದ ದೂರದಿಂದ ಒಟ್ಟು ಶಿಲ್ಪವನ್ನು ನೋಡಿದರೆ ಸ್ಕಲ್ ಅಥವಾ ತಲೆ ಬುರುಡೆಯಂತೆ, ಭ್ರಮೆ ಬರಿಸುತ್ತಿತ್ತು. ಇದನ್ನು ರಚಿಸಿದವರು - ಎಲ್. ಪಿ. ಅಂಚನ್. ನನಗೆ ಅವರ ಪರಿಚಯವಾದುದೂ ಆ ಸಂದರ್ಭದಲ್ಲಿಯೇ.

ಎಲೆಮರೆಯ ಕಾಯಿ

ಅದಕ್ಕೂ ಮೊದಲು ಅಂಚನ್‌ರವರು ಅವರ ಕೃತಿಗಳಿಂದ ಪರಿಚಿತರಾಗಿದ್ದರು. ಆದರೆ ಈ ಶಿಬಿರದಲ್ಲಿ ನಾನೂ ಒಂದು ರೀತಿಯಲ್ಲಿ ಭಾಗಿಯಾಗಿದ್ದುದರಿಂದ, ಅವರು ಮುಖತಃ ಪರಿಚಯವಾಗಿ ಅವರೊಂದಿಗೆ ಸ್ವಲ್ಪ ಕಾಲ ಕಳೆವ ಅವಕಾಶವೂ ದೊರೆಯಿತು. ಪರಿಚಯವಾದ ನಂತರ, ಅವರನ್ನು ಈ ಹಿಂದೆ ಕಲಾಪ್ರದರ್ಶನಗಳಲ್ಲಿ ನೋಡಿದ್ದ ನೆನಪೂ ಬಂದಿತು. ಆದರೆ ಆಗ ಆ ವ್ಯಕ್ತಿ ಯಾರು ಎಂಬುದು ತಿಳಿದಿರಲಿಲ್ಲ. ಅಲ್ಲದೆ ಅಂಚನ್‌ರವರೂ ಮುಂದೆ ನುಗ್ಗಿ ಯಾರನ್ನಾದರೂ ಪರಿಚಯ ಮಾಡಿಕೊಳ್ಳುವ ಅಥವಾ ತಮ್ಮನ್ನೇ ಪರಿಚಯಿಸಿಕೊಳ್ಳುವ ಸ್ವಭಾವದವರೂ ಅಲ್ಲ. ಒಂದು ರೀತಿ ಎಲೆ ಮರೆಯ ಕಾಯಿಯಂತಹ ಜೀವನ ಅವರದು ಅಥವಾ ಎಲೆಯನ್ನೇ ಎಳೆದುಕೊಂಡು ಅದರ ಹಿಂದೆ ಮರೆಯಾಗಿಕೊಳ್ಳುವಂತಹ ಸ್ವಭಾವ ಅಂಚನ್‌ರವರದು ಎಂದರೂ ತಪ್ಪಾಗಲಾರದು.

ಈ ಶಿಬಿರದ ಸಂದರ್ಭದಲ್ಲಿ ಅಂಚನ್‌ರವರೊಡನೆ ಕಳೆದ ಕಾಲ ಸ್ವಾರಸ್ಯವಾದುದು. ಅವರ ವಿಧವಿಧ ಕಲ್ಪನೆಗಳು, ಅದಕ್ಕೆ ರೂಪುಕೊಡಲು ಅನುಸರಿಸುವಂತಹ ತಂತ್ರ ವಿಧಾನಗಳು, ಮಾಧ್ಯಮಗಳು ಮುಂತಾದವುಗಳ ಬಗೆಗೆ ನಮ್ಮ ಮಾತು ಕತೆಗಳು ನಡೆಯುತ್ತಿದ್ದುವು. ಅದರಲ್ಲಿ ಕೆಲವು ವಿಧಾನಗಳು ಹಿಂದಿನಿಂದಲೂ ಬಂದಂತಹವು. ಕೆಲವು ಹಿಂದಿನಿಂದಲೂ ಬಂದವುಗಳಿಗೆ ವಿಶೇಷ ತಿರುವು ಪಡೆದಂತಹವು. ಇನ್ನು ಕೆಲವದರಲ್ಲಿ ಸ್ವಂತಿಕೆ ಅನುಭವವಾಗುತ್ತಿತ್ತು. ಕೆಲವು ಕನಸಿನ ಪ್ರಾಕಾರಕ್ಕೂ ಸೇರಿದಂತಿದ್ದವು. ಈ ಹೊಸ ಕಲ್ಪನೆ ಮತ್ತು ವಿಧಾನಗಳನ್ನು ಪ್ರಚಾರಗೊಳಿಸುವ ಒಂದು ಹಂಬಲವೂ ಕಾಣಬರುತ್ತಿತ್ತು.

ಮಂಗಳೂರಿನಲ್ಲಿ ಜನಿಸಿದ (27-8-1927) ಲಿಂಗಪ್ಪ ಪೂವಪ್ಪ ಅಂಚನ್‌ರವರ ಜೀವನದ ಪೂರ್ವಭಾಗವೆಲ್ಲಾ ಕಷ್ಟಮಯ. ಬದುಕಿನ ಹೋರಾಟ. ಹುಟ್ಟಿದುದು ಕಡುಬಡವರ ಕುಟುಂಬದಲ್ಲಿ. ಕಷ್ಟದಿಂದ ಮತ್ತು ಹಠದಿಂದ ವಿದ್ಯಾಭ್ಯಾಸ ಮಾಡಿದವರು ಅಂಚನ್. ಮಂಗಳೂರಿನ ಸರಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿ ಎಸ್.ಎಸ್.ಎಲ್.ಸಿ. ಯಲ್ಲಿ ಪಾಸಾದರು. ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೂ ಕಲಾವಿದನಾಗಬೇಕೆಂಬ ಕನಸು. ಆದರೆ ಮನೆಯವರಿಂದ ಪ್ರೋತ್ಸಾಹವಂತಿರಲಿ, ವಿರೋಧ. ಕೊನೆಗೆ ಯಾರಾರದೋ ಸಹಾಯ ಪಡೆದು, ಮುಂಬೈಗೆ ಪ್ರಯಾಣ. ಅಂದು ಎಲ್ಲರ ಗುರಿಯೂ ಬೊಂಬಾಯಿಯೇ. ಅಲ್ಲಿ ಜಿ.ಎಸ್. ದಂಡಾವತಿ ಮಠ ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ನೂತನ ಕಲಾಮಂದಿರಕ್ಕೆ ಸೇರಿದರು. ಅಲ್ಲಿ 1957ರವರೆಗೂ ಕಲಾ ವ್ಯಾಸಂಗ ಮಾಡಿ ಆ ವರುಷ ಸರ್ ಜೆ.ಜೆ. ಕಲಾಶಾಲೆಯ ಡಿಪ್ಲೋಮಾವನ್ನೂ ಪಡೆದರು. ಮುಂದೆ ಎರಡು ಮೂರು ವರುಷ ಕಾಲ ಅಲ್ಲಿಯೇ ಅಧ್ಯಾಪಕ ವೃತ್ತಿ. ಇದು ಒಂದು ರೀತಿಯಲ್ಲಿ ಕಲಾತ್ಮಕವಾಗಿ ತೃಪ್ತಿಕೊಟ್ಟರೂ, ಆರ್ಥಿಕವಾಗಿ ಕಠಿಣ ಸ್ಥಿತಿಯನ್ನೆದುರಿಸಬೇಕಾಯಿತು.

ಜೀವನ ಸುಗಮವಾಗುವ ದೃಷ್ಟಿಯಿಂದ ಬೆಂಗಳೂರಿಗೆ ಬಂದು ರಾಜ್ಯದ ವಾರ್ತಾ ಹಾಗೂ ಪ್ರಚಾರ ಇಲಾಖೆಯಲ್ಲಿ ಉದ್ಯೋಗ ಹಿಡಿದ ಅಂಚನ್ ಅವರಿಗೆ ಆರ್ಥಿಕ ಆಸರೆ ದೊರೆತರೂ ತೃಪ್ತಿಯಿಲ್ಲ. ಒಳಗಿನ ತಳಮಳ. ಮೂರು ನಾಲ್ಕು ವರುಷಗಳ ನಂತರ ಆ ಇಲಾಖೆ ಬಿಟ್ಟು ವಿಶ್ವೇಶ್ವರಯ್ಯ ತಾಂತ್ರಿಕ ಸಂಗ್ರಹಾಲಯದಲ್ಲಿ ಒಂದು ಜವಾಬ್ದಾರಿಯುತ ಸ್ಥಾನಕ್ಕೆ ನೇಮಕರಾದರು. ಯಾವ ಅವಾಂತರ, ಆಡಂಬರಗಳಿಲ್ಲದೆ ಅಲ್ಲಿಯೇ ತಮ್ಮ ಆಸೆಗಳಿಗೆ ಅನುಗುಣವಾಗಿ, ಸ್ವಂತ ಕಲ್ಪನೆಗಳಿಗೆ ರೂಪುಗೊಟ್ಟು ಜೀವನ ರಥವನ್ನು ನಡೆಯಿಸಿ 1985ರಲ್ಲಿ, ವೃತ್ತಿಯಿಂದ ನಿವೃತ್ತರಾದರು. ಎಂತಹ ಏರುಪೇರುಗಳಿಲ್ಲದೆ ಶಾಂತವಾಗಿದ್ದ ಈ ಜೀವನದಲ್ಲಿಯೂ ಯಾವಾಗಲಾದರೂ ಸುಳಿಗಳು ಏಳುವ ಅಪರೂಪ ಸಂದರ್ಭಗಳು ಬರುವುದೂ ಉಂಟು. ಅಂಚನ್‌ರವರು ಜೀವನದಲ್ಲಿ ಅಂತಹದೊಂದು ಸಂದರ್ಭವು ನಿವೃತ್ತರಾಗುವ ಒಂದೆರಡು ವರುಷಗಳ ಮುಂಚೆ ನಡೆಯಿತು.

ವಿಶೇಷ ಘಟನೆ

ಕರ್ನಾಟಕ ರಾಜ್ಯದಲ್ಲಿಯೂ ಮತ್ತು ಹೊರಗಡೆಯೂ ನಡೆಯುತ್ತಿದ್ದ ಕಲಾ ಪ್ರದರ್ಶನಗಳಿಗೆ ಆಗಾಗ ತಮ್ಮ ಕೃತಿಗಳನ್ನು ಕಳುಹಿಸುತ್ತಿದ್ದರು ಅಂಚನ್. ಹಾಗೆಯೇ ರಾಜ್ಯ ಲಲಿತ ಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಗಳಿಗೂ ತಮ್ಮ ಶಿಲ್ಪಗಳನ್ನು ಕಳುಹಿಸುತ್ತಿದ್ದರು. 1969ರಲ್ಲಿ ಬಹುಮಾನವನ್ನೂ ಪಡೆದರು. ಅನಂತರ ಪುನಃ 12 ವರುಷಗಳ ನಂತರ ಇನ್ನೊಂದು ಶಿಲ್ಪವನ್ನು ಕಳುಹಿಸಿದರು. ಅದೊಂದು ವಿಶೇಷ ರೀತಿಯ ಶಿಲ್ಪ. ಘನಾಕೃತಿಯಂತಹುದಲ್ಲ. ಟೊಳ್ಳಾದುದು. ಲೋಹದ ಹಾಳೆಗಳಿಂದ ಮಾಡಿದಂತಹುದು. ಅದರ ಶೀರ್ಷಿಕೆ - 'ಟ್ರೈಬಲ್‌ಗರ್ಲ್' ಅಥವಾ 'ಅರಣ್ಯ ಕನ್ಯೆ' ಎನ್ನೋಣ. ಪೀಠದ ಮೇಲೆ ಕುಳಿತು ಡೋಲನ್ನು ಬಾರಿಸುತ್ತಿರುವ ಬಾಲೆಯ ಶಿಲ್ಪ. ಇದಕ್ಕೆ ಬಹುಮಾನ ದೊರೆಯಲಿಲ್ಲ ತಿರಸ್ಕೃತವಾಯಿತು. ಆದರೆ ಇದು ಅಂಚನ್‌ರವರ ಆತ್ಮವಿಶ್ವಾಸಕ್ಕೆ ಒಂದು ಸವಾಲಿನಂತೆ ಪರಿಣಮಿಸಿತು. 'ಮರಳಿ ಯತ್ನವ ಮಾಡು' ಪದ್ಯದಂತೆ ಮುಂದಿನ ವರುಷದ ಪ್ರದರ್ಶನಕ್ಕೆ ಪುನಃ ಕಳುಹಿಸಿದರು. ಆಗಲೂ ತಿರಸ್ಕೃತವಾಯಿತು. ಹೀಗೆಯೇ ಸಾಲಾಗಿ ಮೂರು ವರುಷಗಳು ಅಂದರೆ 1984ರವರೆಗೂ ತಿರಸ್ಕೃತವಾಗುತ್ತಾ ಬಂದಿತು. ಆದರೆ ಆ ವರುಷ ಇನ್ನೊಂದು ವಿಶೇಷ ನಡೆಯಿತು.

ರಾಜ್ಯಮಟ್ಟದಲ್ಲಿ ಸಾಲಾಗಿ ಮೂರು ಸಲ ತಿರಸ್ಕರಿಸಲಾದ ಈ ಬಾಲೆಯ ಶಿಲ್ಪಕ್ಕೆ ರಾಷ್ಟ್ರಮಟ್ಟದ ಮನ್ನಣೆ ದೊರೆಯಿತು. ಕೇಂದ್ರ ಲಲಿತ ಕಲಾ ಅಕಾಡೆಮಿ ದೆಹಲಿಯಲ್ಲಿ ಏರ್ಪಡಿಸಿದ್ದ 27ನೇ ರಾಷ್ಟ್ರೀಯ ಕಲಾ ಪ್ರದರ್ಶನದಲ್ಲಿ ಈ ಕೃತಿಗೆ ಪ್ರಶಸ್ತಿ ನೀಡಲಾಯಿತು.

ನಮ್ಮಲ್ಲಿ ಇಂತಹ ಆಭಾಸಗಳಾಗುವುದು ಹೊಸದೇನಲ್ಲ. ಶಿಲ್ಪಿ ಶ್ರೀನಿವಾಸಾಚಾರ್ಯರ ನಿದರ್ಶನವೇ ಇದೆಯಲ್ಲ. ಅವರು ಬಹು ಜಾಣ್ಮೆಯಿಂದ, ಎರಡು ಲೋಹಗಳನ್ನು ಕೂಡಿಸಿ

ರಚಿಸಿದ ಶಿಲ್ಪ - ಅರ್ಧನಾರೀಶ್ವರ - ಬಹುಮಾನಕ್ಕೆ ಯೋಗ್ಯವಲ್ಲವೆಂದು ರಾಜ್ಯಮಟ್ಟದಲ್ಲಿ ತಿರಸ್ಕೃತವಾಯಿತು. ಅದನ್ನು ರಾಷ್ಟ್ರೀಯ ಪ್ರದರ್ಶನಕ್ಕೆ ಕಳುಹಿಸಿದರು. ಅಲ್ಲಿ ಅದಕ್ಕೆ ರಾಷ್ಟ್ರಮಟ್ಟದ ಪ್ರಶಸ್ತಿ ದೊರೆಯಿತು, ಅಲ್ಲದೆ ಪ್ರಧಾನಿ ಇಂದಿರಾ ಗಾಂಧಿಯವರು, ಅದನ್ನು ತಮ್ಮ ಕಲಾಸಂಗ್ರಹಾಲಯಕ್ಕೆ ಆರಿಸಿಕೊಂಡರು. ಅವಿವೇಕ ಎನಿಸಿದರೂ, ಇಂತಹ ಅಪರೂಪದ ಘಟನೆಗಳು ನಮ್ಮಲ್ಲಿ ನಡೆದಿವೆ.

ಅಂಚನ್‌ರವರ ಶಿಲ್ಪಗಳೆಲ್ಲಾ ವಿಶೇಷ ರೀತಿಯವು. ಲೋಹ ಶಿಲ್ಪಗಳಾದರೂ, ಎರಕ ಹುಯ್ದು ಘನೀಭೂತವಾದ ಆಕೃತಿಗಳಲ್ಲ. ಲೋಹದ ತಗಡುಗಳಿಂದ ಅಥವಾ ಹಾಳೆಗಳಿಂದ ಮಾಡಿದಂತಹವು. ಲೋಹದ ತಗಡುಗಳಿಂದ ಶಿಲ್ಪ ರಚನೆ ಮಾಡುವುದು ಹೊಸ ಪ್ರಯತ್ನವೇನಲ್ಲ. ಹಿಂದಿನಿಂದಲೂ ವ್ಯವಹಾರದಲ್ಲಿದೆ. ನಮ್ಮಲ್ಲಿ ಆಭರಣಗಳ ರಚನೆಯಲ್ಲಿ ಈ ಲೋಹ ಹಾಳೆಯ ವಿಧಾನ ಹಿಂದಿನಿಂದಲೂ ಉಪಯೋಗದಲ್ಲಿ ಇದೆ. ಹಾಗೆಯೇ ತಗಡುಗಳೂ ಸಹ. ಅವುಗಳಿಂದ ಟೊಳ್ಳಾದ ಮೂರ್ತಿ ಶಿಲ್ಪಗಳ ರಚನೆಯಾಗಿದೆ. ಈ ರೀತಿ ತಗಡು, ತೊಗಟೆ, ಎಲೆ ಮುಂತಾದುವುಗಳನ್ನು ಕಲ್ಪನೆಗನುಸಾರ ಕತ್ತರಿಸಿ ಆಕೃತಿಗಳನ್ನು ರಚಿಸುವ ಪದ್ಧತಿ ವಿಶೇಷಕಭೇದ್ಯ, ಪತ್ರಚ್ಛೇದ ಮುಂತಾದ ಹೆಸರುಗಳಿಂದ ನಮ್ಮಲ್ಲಿ ಬಹು ಹಿಂದಿನಿಂದಲೂ ಬಳಕೆಯಲ್ಲಿ ಇದೆ. ನಮ್ಮಲ್ಲಿ ಮಾತ್ರ ಅಲ್ಲದೆ ಬೇರೆಯ ಜನಾಂಗಗಳಲ್ಲಿಯೂ ಬಳಕೆಯಲ್ಲಿದೆ. ಆಧುನಿಕರಲ್ಲಿಯೂ ಪೆವ್‌ಸ್ನಾ ನಾವುವ್‌ಗಾಬೋ, ಜ್ಯಾಕೊಮೆಟ್ಟಿ, ಅಲೆಕ್ಸಾಂಡರ್ ಕಾಲ್ಡರ್ - ಮುಂತಾದವರನೇಕರು ಈ ಮಾಧ್ಯಮವನ್ನು ಉಪಯೋಗಿಸಿದ್ದಾರೆ. ನಮ್ಮಲ್ಲಿಯೂ ಅಂತಹ ಶಿಲ್ಪಿಗಳಿದ್ದಾರೆ. ಶೊಂಕೋ ಚೌಧುರಿಯವರನ್ನು ನೆನೆಯಬಹುದು. ಅಂಚನ್‌ರವರು ಬಳಸಿರುವುದು ಲೋಹದ ತೆಳು ಹಾಳೆಗಳನ್ನು, ಕಾಗದದಿಂದಲೂ ಇಂತಹ ಶಿಲ್ಪ ರಚನೆ ಮಾಡಿದ್ದರು.

ಅಂಚನ್‌ರವರ ಈ ಶಿಲ್ಪಗಳು ಬಹುತೇಕ ಮೂರ್ತ ಶಿಲ್ಪಗಳೇ. ಅವುಗಳಲ್ಲಿ ಬಹು ಪಾಲು ಕ್ಯೂಬಿಸಂನಿಂದ ಪ್ರೇರಿತವಾದಂತೆ ಅನುಭವವಾಗುತ್ತವೆ. ಇವುಗಳಲ್ಲಿ ಪ್ರಾಯಶಃ ಕಲ್ಪನೆಯ ಒಂದು ಭಾಗವಿದ್ದಲ್ಲಿ, ಮಾಧ್ಯಮದ ಗುಣ ಮತ್ತು ಧರ್ಮವೂ ಸೇರಿ ಈ ರೀತಿಯ ಆಕೃತಿಗಳು ನಿರ್ಮಿತವಾಗಿವೆ ಎನ್ನಬಹುದು. ಅವುಗಳಲ್ಲಿ ಮುಖವಾಡಗಳದೇ ಒಂದು ವರ್ಗವಿದೆ. ಇವುಗಳನ್ನು ನೋಡುವಾಗ, ನಮಗೆ ಕರಾವಳಿ ಪ್ರದೇಶದ ನೆನಪಾಗುವುದು ಸಹಜ. ಅವರು ಹುಟ್ಟಿ ಬೆಳೆದ ಪರಿಸರ, ಅಲ್ಲಿನ ವರ್ಣಮಯ ಸಂಸ್ಕೃತಿ, ಸಾಮಾಜಿಕ ಮತ್ತು ಧಾರ್ಮಿಕ ವಿಧಿಗಳ ಸಂದರ್ಭದಲ್ಲಿ ಧರಿಸುತ್ತಿದ್ದ ಬಗೆ ಬಗೆ ಆಕಾರದ ವಸ್ತುಗಳು ಮುಂತಾದವುಗಳು ಪ್ರಭಾವ ಅವರಲ್ಲಿ ಎಷ್ಟು ವ್ಯಾಪಕವಾಗಿತ್ತು, ಕಾರ್ಯ ಪ್ರಚೋದಕವಾಗಿತ್ತು ಎನಿಸದಿರದು. ಅಂಚನ್‌ರವರು ಕಳೆದ ವರುಷ ತಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ನಿಧನರಾದರು. ★ ★ ★ ★

ಸುಧಾ, 1998

37. ಸ್ವಂತಿಕೆ ಮೆರೆದ ಕಲಾವಿದ ಸುಲ್ತಾನ್ ಅಲಿ

ಚಿತ್ರರಚನೆ ಎಂದರೆ ಕೇವಲ ಕಾಗದದ ಮೇಲೆಯೋ ಅಥವಾ ಕ್ಯಾನ್‌ವಾಸ್ ಮೇಲೆಯೋ ಬಣ್ಣಹಚ್ಚುವುದಷ್ಟೇ ಅಲ್ಲ, ಅದು ಅಪೂರ್ವ ಅನುಭವಗಳಿಂದ ಕೂಡಿರುತ್ತದೆ. ಬಣ್ಣ ಹಚ್ಚಿ ಚಿತ್ರವು ಪೂರ್ಣವಾದ ಮೇಲೆ ನೋಡಿದಾಗ ಆಗುವ ಅನುಭವ ಒಂದು. ಚಿತ್ರರಚನೆ ಮಾಡುವಾಗ, ಬಣ್ಣ ಹಚ್ಚುವಾಗ, ಮೂಡಿಬರುವ ಅನಿರೀಕ್ಷಿತ ಛಾಯೆಗಳು, ಆಕೃತಿಗಳು, ಅವು ಒಂದರೊಡನೆ ಒಂದು ಬೆರೆತು ಹುಟ್ಟಿಬರುವ, ಊಹೆಗೂ ನಿಲುಕದ ರಚನೆಗಳು, ಅವುಗಳ ಲಯ, ಸಾಮರಸ್ಯ. ಅನಂತರ ಒಟ್ಟು ಚಿತ್ರದ ಕಲ್ಪನೆಯಲ್ಲಿ ಐಕ್ಯವಾಗಿ, ಅದಕ್ಕೆ ವರ್ಚಸ್ಸು ಚೈತನ್ಯ ಕೊಡುವ ಪರ್ಯಾಯ. ಇವುಗಳದೇ ವಿಶೇಷ ಅನುಭವ. ಹೀಗೆ ಚಿತ್ರದ ರಚನೆ ಮಾಡುವಾಗ ಚಿತ್ರಕಾರನ ಮನಸ್ಸು ಏಕಾಗ್ರತೆಯಿಂದ ಇರುತ್ತದೆ. ಈ ಚಿತ್ರದಲ್ಲಿಯೇ ಮನಸ್ಸು ಲೀನವಾಗಿರುತ್ತದೆ. ಅದರ ಫಲವಾಗಿ ಉಂಟಾಗುವ ಹರ್ಷದಲ್ಲಿ ಚಿತ್ರಕಾರನು ಹೊರಗಿನ ಪ್ರಪಂಚದ ಅರಿವೇ ಇಲ್ಲದೆ ಮೈಮರೆಯುತ್ತಾನೆ. ಕರಗಿಹೋಗುತ್ತಾನೆ. ಚಿತ್ರರಚನೆಯೇ ಒಂದು ಯೋಗ.

ರಚನೆ ಮಾಡುತ್ತಾ ಇರುವಾಗ ಬರುವ ಮನಸ್ಥಿತಿ ಧ್ಯಾನ. ಅದರಲ್ಲಿಯೇ ಮೈಮರೆತಾಗ ಸಮಾಧಿ - ಇದನ್ನು ಹೇಳಿದವರು - ಗುರುಕುಲವಾಸದಲ್ಲಿರುವ ಶಿಷ್ಯರಿಗೆ ಪಾಠ ಹೇಳುತ್ತಿದ್ದ ಋಷಿಯಲ್ಲ. ಕಲಾವಿದ - ಸುಲ್ತಾನ್ ಅಲಿ. ಸಮಕಾಲೀನ ಕಲಾ ಕ್ಷೇತ್ರದ ಒಬ್ಬ ಹಿರಿಯ ವ್ಯಕ್ತಿ. ಮದರಾಸಿನ ಚೋಳಮಂಡಲ ಕಲಾಗ್ರಾಮದಲ್ಲಿ ಪರ್ಣಶಾಲೆಯಂತೆ ಕಟ್ಟಿಕೊಂಡು ಅವರು ಕಲಾ ವ್ಯವಸಾಯ ಮಾಡುತ್ತಿದ್ದ ಮನೆಯಲ್ಲಿ.

ಸುಲ್ತಾನ್ ಅಲಿಯವರನ್ನು ನಾನು ಮೊದಲ ಬಾರಿ ನೋಡಿದ್ದು ಮತ್ತು ಅವರ ಪರಿಚಯವಾದುದು ಮೂವತ್ತು ವರುಷಗಳ ಹಿಂದೆ. ಬೆಂಗಳೂರಿನಲ್ಲಿ ಮೊಟ್ಟಮೊದಲು ಕೇಂದ್ರ ಲಲಿತ ಕಲಾ ಅಕಾಡೆಮಿಯ ರಾಷ್ಟ್ರೀಯ ಕಲಾ ಪ್ರದರ್ಶನವಾದಾಗ. ಆಗ ಆ ಅಕಾಡೆಮಿ ಕಲಾ ಪ್ರದರ್ಶನ ಅಧಿಕಾರಿಯಾಗಿದ್ದರು ಸುಲ್ತಾನ್‌ಅಲಿ. ಬೆಂಗಳೂರಿನಲ್ಲಿ ಈ ಪ್ರಮಾಣದ ಕಲಾಪ್ರದರ್ಶನವು ನಡೆದುದು ಇದೇ ಮೊದಲು. ಆದುದರಿಂದ ಸಂಬಂಧಪಟ್ಟವರಿಗೆಲ್ಲಾ ಒಂದು ಆತಂಕ, ತಳಮಳ. ಆದರೆ ಸುಲ್ತಾನ್‌ಅಲಿ ಯಾವ ರೀತಿಯಲ್ಲೂ ವಿಚಲಿತರಾಗಲಿಲ್ಲ. ಅವರ ಮಾತಿನಲ್ಲಿ ಎಲ್ಲವೂ ಸರಿಹೋಗುತ್ತದೆ ಎಂಬ ಭಾವನೆ ಇತ್ತು. ಒಂದು ರೀತಿಯ ನಿರ್ಲಿಪ್ತ. ಪ್ರದರ್ಶನವೂ ಚೆನ್ನಾಗಿ ನಡೆದುಹೋಯಿತು. ಸುಲ್ತಾನ್ ಅಲಿ ತಮ್ಮ ಜೀವಮಾನದಲ್ಲಿ ಇದೊಂದೇ ಉದ್ಯೋಗಕ್ಕೆ ಹೆಚ್ಚು ಕಾಲ ಅಂದರೆ 15 ವರುಷಗಳು ಅಂಟಿಕೊಂಡಿದ್ದುದು. ಆ ಉದ್ಯೋಗದಿಂದ ಅವರಿಗೆ ಆದ ಲಾಭವೆಂದರೆ ಭಾರತದ ಕಲೆಯಲ್ಲಿ ಆಗುತ್ತಿದ್ದ ನಾನಾ ಬದಲಾವಣೆಗಳು, ಅವುಗಳ ರೀತಿ ನೀತಿಗಳು, ಅದರ ಅಧ್ವರ್ಯುಗಳು ಇವೆಲ್ಲದರ ಪರಿಚಯ

ಮತ್ತು ಪ್ರತ್ಯಕ್ಷ ಅನುಭವ ಆದುದು. ಅದರ ಪರಿಣಾಮ - ಜೀವನಸವನ್ನು ಪೂರ್ಣವಾಗಿ ಕಲಾ ವ್ಯವಸಾಯಕ್ಕೆ ಮುಡುಪಿಡುವ ನಿರ್ಧಾರ. ಉದ್ಯೋಗಕ್ಕೆ ನಮಸ್ಕಾರ.

ಸುಲ್ತಾನ್ ಅಲಿ ಹುಟ್ಟಿದುದು ಮುಂಬಯಿಯಲ್ಲಿ. ಆದರೆ ಕಲಾ ವ್ಯಾಸಂಗವೆಲ್ಲಾ ಮದರಾಸಿನಲ್ಲಿ. ಅದೂ ತಂದೆಯವರ ಆಶಯಕ್ಕೆ ವಿರುದ್ಧವಾಗಿ. ತಂದೆ ವ್ಯಾಪಾರಿ. ಬೊಂಬಾಯಿಯಿಂದ ಮದರಾಸಿಗೆ ಬಂದು ನೆಲೆಸಿದರು. ಎಲ್ಲ ತಂದೆಯರಂತೆ ಜೀವನ ಯಾತ್ರೆಯಲ್ಲಿ ತಾವು ಕಂಡ ನೆಲೆಯನ್ನೇ ಮಗನೂ ಅನುಸರಿಸಬೇಕೆಂಬ ಆಸೆ. ಆದರೆ ಮಗನು ಕಲೆಯ ಅಧ್ಯಯನ ಮಾಡಬೇಕೆಂದು ಹಟ. ಅದು ಸುಪ್ತವಾಗಿದ್ದ ಬಯಕೆ. ಮನೆ ಬಿಟ್ಟು ಓಡಿಹೋಗುವಂತೆ ಮಾಡಿತು. ಓಡಿಹೋಗಿ ಪ್ರಸಿದ್ಧ ಕಲಾವಿದ ದೇವಿಪ್ರಸಾದ್ ರಾಯ್ ಚೌಧುರಿಯವರ ಆಸರೆ ಹೊಕ್ಕನು. ಮೊದಲು ಇದೊಂದು ಹುಚ್ಚು ಎಂದು ತಿರಸ್ಕಾರದಿಂದ ನೋಡಿದ ರಾಯ್ ಚೌಧುರಿ ಕೊನೆಗೆ ತರುಣನ ತೀವ್ರ ಆಕಾಂಕ್ಷೆಯನ್ನು ಗಮನಿಸಿ ಶಾಲೆಯಲ್ಲಿ ಆಶ್ರಯವಿತ್ತರು. ಅಲ್ಲಿ ಸುಲ್ತಾನ್ ಅಲಿಯ ವ್ಯಾಸಂಗ ಸಾಗಿತು. ಮುಗಿಯಿತು. ಡಿಪ್ಲೊಮಾ ದೊರಕಿತು. ಮುಂದೆ ಅಲ್ಲಿಯೇ ಅಧ್ಯಾಪಕನಾಗಿ ಉದ್ಯೋಗ. ಇದ್ದುದು ಒಂದು ವರುಷ. ಅನಂತರ ಮದನಪಲ್ಲಿಯ ಬಳಿಯ ಋಷಿವ್ಯಾಲಿ ಶಾಲೆಯಲ್ಲಿ ಅಧ್ಯಾಪಕ ವೃತ್ತಿ. ಇದ್ದುದು ಮೂರು ವರ್ಷ. ಮುಂದೆ ಕೇಂದ್ರ ಲಲಿತಕಲಾ ಅಕಾಡೆಮಿಯಲ್ಲಿ ಪ್ರದರ್ಶನಾಧಿಕಾರಿಯಾಗಿ ಉದ್ಯೋಗ. ಹದಿನೈದು ವರುಷ ಕಾಲ. ರಾಜಿನಾಮೆ. ಮದರಾಸಿಗೆ ಹಿಂದಿರುಗಿ ಚೋಳಮಂಡಲ ಕಲಾಗ್ರಾಮದಲ್ಲಿ ವಾಸ. ತಮ್ಮ ಚಿತ್ತಾನುಸಾರವಾಗಿ ಕಲಾವ್ಯವಸಾಯ - ಇದು ಸುಲ್ತಾನ್ ಅಲಿಯವರ ಜೀವನದ ಮುಖ್ಯ ಘಟ್ಟಗಳು.

ಮುಂಬೈನಲ್ಲಿ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಅಂಕುರಿಸಿದ ಕಲಾಕಾಂಕ್ಷೆ ಒಳಗೇ ಮಿಡಿಯುತ್ತಿದ್ದು ಮುಂದೆ ತಂದೆಯವರ ಮಾತು ಮೀರಿ ಕಲಾ ವ್ಯಾಸಂಗ ಮಾಡುವಂತೆ ಮಾಡಿತು. ಉದ್ಯೋಗಗಳನ್ನು ಹಿಡಿದರೂ ಅಂತರ್ವಾಣಿಯ ಕರೆಯೇನೂ ಕಡಿಮೆಯಾಗಿಲಿಲ್ಲ. ಆತ್ಮಶೋಧನೆಗೆ ಪ್ರಚೋದಿಸುತ್ತಿತ್ತು. ಕಲೆಯಲ್ಲಿ ತಾನು ಹಿಡಿದಿರುವ ದಾರಿ ನಿರರ್ಥಕವೆನಿಸುತ್ತಿತ್ತು. ಸ್ವಂತಿಕೆಯ ಬೆಳಕು ಕಾಣಬೇಕೆನ್ನುವ ಹಂಬಲಕ್ಕೆ ಇಂಬು ಕೊಡುತ್ತಿತ್ತು. ಅವರ ಕಲೆಯಲ್ಲಿಯೂ ಆಗಾಗ ಆಗುತ್ತಿದ್ದ ಬದಲಾವಣೆಗೂ ಕಾರಣವಾಗಿತ್ತು.

ಕಲಾ ಜೀವನದ ಪೂರ್ಣ ಭಾಗದ ಕೃತಿಗಳಲ್ಲಿ ಈ ಅಂಶವು ಸ್ಪಷ್ಟಪಡುತ್ತದೆ. ಕೋಣಾಕೃತಿಯ ಕನ್ಯೆಯರು - ಚಪ್ಪಟೆ ವರ್ಣ ವಿನ್ಯಾಸ. ಗ್ರಾಮೀಣ ಜೀವನ ಅದರಲ್ಲಿಯೂ ಜನತೆಯ ವಿವಿಧ ಭಾವಭಂಗಿಗಳು ಇತ್ಯಾದಿ. ಅಂದಿನ ಇತರ ಅನೇಕ ಕಲಾವಿದರಂತೆಯೇ. ಆದರೆ ನೋಡುವವರಿಗೆ ಅಂದವೆನಿಸಿದರೂ ಆಲಿಯವರಿಗೆ ಅತೃಪ್ತಿ. ಈ ಸಂದರ್ಭದಲ್ಲಿಯೇ ಅವರಿಗೆ ವೆರಿಯರ್ ಎಲ್ವಿನ್ ಅವರ ಪುಸ್ತಕಗಳು ದೊರಕಿದುದು. ಅವುಗಳ ಅಧ್ಯಯನ ಅವರ ಮನಸ್ಸಿನ ಮೇಲೆ ತೀವ್ರ ಪರಿಣಾಮ ಉಂಟುಮಾಡಿತು. ನೇರವಾಗಿ ಬಸ್ತ್‌ರ್‌ಗೆ ಹೋಗಿ ಅಲ್ಲಿನ ಅರಣ್ಯ ವಾಸಿಗಳ ಜೀವನವನ್ನು ಅಧ್ಯಯನ ಮಾಡಿದರು. ಸ್ವಾನುಭವದಿಂದ ರೂಪಿತವಾದ ಜನರ

ಕಲಾಕೃತಿಗಳನ್ನು ನೋಡಿ ಮೋಹಿತರಾದರು. ಅವುಗಳ ಆಕಾರ, ಸಂಕೇತ ಮುಂತಾದುವುಗಳನ್ನು ನೋಡಿ ಭ್ರಮಿತರಾದರು.

ಇದರಿಂದ ಅವರ ಕಲೆಯೂ ಪ್ರಭಾವಿತವಾಯಿತು. ಒಂದ್ಯೆದಾರು ವರುಷ ಕಾಲ ಅವರು ರಚಿಸಿದ ಚಿತ್ರಗಳಲ್ಲಿ ಈ ರೀತಿಯ ವಿಚಿತ್ರ ಆಕೃತಿಗಳು ಕಂಡುಬರುತ್ತವೆ - ಮನುಷ್ಯರು, ಹುಲಿ, ಸಿಂಹ ಮುಂತಾದ ಮೃಗಗಳು, ಹಾವುಗಳು ... ಹೀಗೆ. ಅನೇಕ ಭಾಗಗಳಲ್ಲಿ ಆ ಅರಣ್ಯ ವಾಸಿಗಳ ಗ್ರಾಮದೇವತೆಗಳನ್ನು ನೆನಪಿಗೆ ತರುವವಾದರೂ, ವಿನ್ಯಾಸದಲ್ಲಿ ಸುಲ್ತಾನ್ ಅಲಿಯವರದೇ ಸ್ವಂತಿಕೆ. ಆದರೆ ಈ ಪರಿವರ್ತನೆಯಲ್ಲಿಯೂ ತೃಪ್ತಿಯಿಲ್ಲ. ಹೊಸದನ್ನು ಅರಸುವ ಹಂಬಲ - ಕಲಾ ಯಾತ್ರಿಕನಂತೆ. ಅದರ ಪರಿಣಾಮ ಅವರ ಈ ಕೃತಿಗಳು - ಎನರ್ಜಿ ಅಥವಾ ಶಕ್ತಿ ಪ್ರಧಾನ ವಸ್ತು ಉಳ್ಳವು. ಸಾಂಕೇತಿಕವಾದುವು. ಮೃದು ಮತ್ತು ತೆಳು ವರ್ಣ ಛಾಯೆಯಿಂದ ಕೂಡಿದಂತಹವು. ಅವರ ನಿರಂತರ, ಓಂ ಶಿವ ಮುಂತಾದ ಕೃತಿಗಳು ಈ ವರ್ಗಕ್ಕೆ ಸೇರಿದಂತಹವು. ಚೋಳಮಂಡಲದ ಶಾಂತಮಯ, ನಿರಾತಂಕವಾದ ವಾತಾವರಣದಲ್ಲಿ ರೂಪಿತವಾದವು.

ಸುಲ್ತಾನ್ ಅಲಿಯವರನ್ನು ನೋಡಿದವರಾರೂ ಅವರನ್ನು ಕಲಾವಿದರೆಂದು ಗುರುತಿಸಲಾಗುತ್ತಿರಲಿಲ್ಲ. ಇಂದಿನ ಕಲಾವಿದರ ಲಾಂಛನಗಳೆನಿಸಿದ ತಲೆ ಮತ್ತು ಮುಖದ ಮೇಲಿನ ಪೊದೆ, ಇರಲಿಲ್ಲ.

ಆ ಛಾಯೆ ಸೂಸುವ ಉಡುಪು ಮುಂತಾದವುಗಳು ಇರಲಿಲ್ಲ. ನೋಟಕ್ಕೆ ಕಾಲೇಜಿನ ಅಧ್ಯಾಪಕರಂತೆ ಕಾಣಬರುತ್ತಿದ್ದರು. ಜೊತೆಗೆ ಪ್ರಚಾರದ ಆಸೆಯೂ ಇರಲಿಲ್ಲ. ತಮ್ಮ ಕೆಲಸಕ್ಕೆ ಆದ್ಯತೆ. ವಿಶಾಲ ಮನೋಭಾವ, ಸರಸಿ ಮೃದುಭಾಷಿ - "ಮುಸಲ್ಮಾನನಾಗಿ ಈ ಹಿಂದೂ ದೇವತೆಗಳ ಚಿತ್ರಗಳನ್ನು ಹೇಗೆ ಬರೆಯುತ್ತೀರಿ?" ಎಂದು ಯಾರೋ ಕೇಳಿದುದಕ್ಕೆ "ನನ್ನ ಧರ್ಮ ಇಸ್ಲಾಂ. ಆದರೆ ಸಂಸ್ಕೃತಿ ಹಿಂದೂ" ಎಂದರಂತೆ - ಸುಲ್ತಾನ್ ಅಲಿ. ಸ್ವಭಾವದಲ್ಲಿ ಸಂಭಾವಿತ. ನಿಷ್ಠಾವಂತ ಕಲಾವಿದ. ಒಂದು ರೀತಿಯ ಎಲೆಮರೆಯ ಕಾಯಿ. ಅವರು ಅರಸುತ್ತಿದ್ದ ಬೆಳಕನ್ನು ಕಂಡರೋ ಇಲ್ಲವೋ ತಿಳಿಯದು. ಆದರೆ ಈಚಿನ ಚಿತ್ರಗಳಲ್ಲಿ ಅಂತರ್ಮುಖಿ ಆದ ಭಾವನೆ ಕಂಡುಬರುತ್ತಿತ್ತು. ಸುಲ್ತಾನ್ ಅಲಿ ಹುಟ್ಟಿದುದು ಸೆಪ್ಟೆಂಬರ್ ತಿಂಗಳಿನಲ್ಲಿ. ನಿಧನರಾದುದೂ ಈ ಸೆಪ್ಟೆಂಬರ್ ಮಾಸದಲ್ಲಿಯೇ 70 ವರುಷಗಳ ನಂತರ - ಒಂದು ವಿಚಿತ್ರ.

1990

38. ದಕ್ಷಿಣ ಭಾರತೀಯ ಚಿತ್ರಕಲೆಯ ಭವ್ಯ ಪರಂಪರೆ ಬಗ್ಗೆ ಬೆಳಕು ಚೆಲ್ಲಿದ ಶಿವರಾಮಮೂರ್ತಿ

1976ನೆಯ ಮಾರ್ಚಿ 31 ರಂದು ಕೇಂದ್ರ ಲಲಿತ ಕಲಾ ಅಕಾಡೆಮಿಯು ಸಿ. ಶಿವರಾಮ ಮೂರ್ತಿಯವರಿಗೆ ಫೆಲೋಷಿಪ್ ಪ್ರಶಸ್ತಿ ನೀಡಿದಾಗ ಪ್ರಶಸ್ತಿ ಪತ್ರದಲ್ಲಿ "ಭಾರತೀಯ ಕಲಾ

ಇತಿಹಾಸ ಮತ್ತು ಪ್ರಾಚ್ಯ ಸಂಶೋಧನೆಗಳಲ್ಲಿ ತಾವು ನಡೆಸಿರುವ ಸಂಶೋಧನಾ ಕಾರ್ಯವು ನೂತನ ಮಾರ್ಗದರ್ಶನವೇ ಅಲ್ಲದೆ ದೇಶಕ್ಕೆ ವಿಶೇಷ ಗೌರವವನ್ನು ತಂದಿದೆ. ದಾಕ್ಷಿಣಾತ್ಯ ಕಾಸ್ಯ ಶಿಲ್ಪ, ಚಿತ್ರಕಲೆ, ಅದಕ್ಕಿಂತ ಮಿಗಿಲಾಗಿ ನಟರಾಜನ ವಿಷಯವಾಗಿ ತಾವು ಮಾಡಿರುವ ಅಗಾಧ ಪರಿಶೋಧನಾ ಕಾರ್ಯ, ಭಾರತೀಯರ ಪಾಂಡಿತ್ಯಕ್ಕೆ ಹೊಸ ಕಳಸವಿಟ್ಟಂತೆ ಇವೆ. ಕಲಾಪ್ರಪಂಚಕ್ಕೆ ತಾವು ಮಾಡಿರುವ ಈ ಅಮೂಲ್ಯ ಹಾಗೂ ಅಗಾಧ ಸೇವೆಯನ್ನು ಮನ್ನಿಸಿ ತಮ್ಮನ್ನು ಲಲಿತಕಲಾ ಅಕಾಡೆಮಿಯ ಫೆಲೋ ಆಗಿ ಆರಿಸಲು ಬಹು ಹೆಮ್ಮೆ ಪಡುತ್ತದೆ. ತಮ್ಮ ಈ ಅಮೂಲ್ಯ ಸೇವೆಗೆ ನಾವು ಪಡುವ ಸಂತೋಷ ಮತ್ತು ಗೌರವದ ಸೂಚಕವಾಗಿ ಈ ತಾಮ್ರ ಫಲಕವನ್ನು ತಮಗೆ ಅರ್ಪಿಸುತ್ತದೆ'' ಎಂದು ಹೇಳಿದೆ.

ಈ ವಾಕ್ಯಗಳು ಔಪಚಾರಿಕವಲ್ಲ. ಅಕ್ಷರಶಃ ಸತ್ಯ. ಇದು ಶಿವರಾಮ ಮೂರ್ತಿಯವರು ಬರೆದ ಮೇಲಿನ ಪುಸ್ತಕಗಳನ್ನು ನೋಡಿದವರಿಗೆ ಅನುಭವವಾಗುವುದು. ಒಂದೊಂದು ವಾಕ್ಯದಲ್ಲಿಯೂ ಅವರ ಪ್ರಗಲ್ಭ ಪಾಂಡಿತ್ಯದ ಅರಿವಾಗುವುದು.

ಯಾವ ವಿಷಯವನ್ನೂ ತೇಲಿಸಿ ಬಿಡುವಂತಹವರಲ್ಲ. ಅದರದರ ಅರ್ಥ, ಮೂಲ, ಸೂಕ್ಷ್ಮ ಅರ್ಥ, ತತ್ವ, ಸಂಕೇತ ಮುಂತಾದುವುಗಳನ್ನೂ ತಂದು ಆ ಹಿನ್ನೆಲೆಯಲ್ಲಿ ವಿಷಯದ ಪೂರ್ಣ ಪರಿಚಯ ಮಾಡಿಸುವವರು. ಭಾರತೀಯ ಸಂಪ್ರದಾಯ ಮತ್ತು ಶಾಸ್ತ್ರಗ್ರಂಥಗಳಿಂದ ಉದ್ಧರಿಸಿ, ಪಾಶ್ಚಾತ್ಯ ವಿಚಾರಧಾರೆಯಿಂದ ಒರೆ ಹಚ್ಚಿ ವಿಷಯ ವಿವರಿಸುವರು.

ಅಧ್ಯಯನ

ಇದಕ್ಕೆ ಅವರ ಅನುಭವದಷ್ಟೇ ಅಧ್ಯಯನವೂ ಮುಖ್ಯ. ಮದರಾಸು ವಿಶ್ವವಿದ್ಯಾಲಯವು ಭಾರತೀಯ ಕಲೆಗೆ ಸಂಬಂಧಪಟ್ಟಂತೆ ಇಬ್ಬರು ಮಹಾಮೇಧಾವಿಗಳನ್ನು ಕಾಣಿಕೆ ನೀಡಿತು. ಅವರಲ್ಲಿ ಒಬ್ಬರು ಡಾ|| ವಿ. ರಾಘವನ್. ಇನ್ನೊಬ್ಬರು ಶಿವರಾಮ ಮೂರ್ತಿ, ಮೊದಲನೆಯವರು ಅಲಂಕಾರ ಸಂಗೀತ ಮತ್ತು ಭರತಶಾಸ್ತ್ರಗಳಲ್ಲಿ ಪಂಡಿತರು. ಒಂದು ವರುಷ ಕಿರಿಯರಾದ ಶಿವರಾಮಮೂರ್ತಿಗಳು ಪ್ರಾಚ್ಯ ಸಂಶೋಧನೆ, ಶಿಲ್ಪ, ಚಿತ್ರ ಮುಂತಾದ ಪ್ರಕಾರಗಳಲ್ಲಿ ಪಂಡಿತರು. ಇಬ್ಬರೂ ಕುಪ್ಪಸ್ವಾಮಿ ಶಾಸ್ತ್ರಿಗಳ ಶಿಷ್ಯರು. ಹಳೆಯ ಪದ್ಧತಿಯಂತೆ ಸಂಸ್ಕೃತ ಕಾವ್ಯ, ನಾಟಕಾದಿಗಳನ್ನು ಹೃದ್ಗತ ಮಾಡಿಕೊಂಡವರು. ಪಾಶ್ಚಾತ್ಯ ಪದ್ಧತಿಯಂತೆ ತತ್ವ ಇತಿಹಾಸಗಳನ್ನು ಅಧ್ಯಯನ ಮಾಡಿದವರು. ಪ್ರಾಚೀನ ಕಲ್ಪನೆಗಳನ್ನೂ ತತ್ವಗಳನ್ನೂ ಆಧುನಿಕ ರೀತಿಯಲ್ಲಿ ತುಲನ ಮಾಡಿ ತೀರ್ಮಾನಕ್ಕೆ ಬರುವಂತಹವರು. ಇಬ್ಬರೂ ಬರೆದ ಸಂಶೋಧನಾತ್ಮಕ ಲೇಖನಗಳಿಗೆ ಲೆಕ್ಕವಿಲ್ಲ. ಗ್ರಂಥಗಳು ಗಟ್ಟಿ ಪದಾರ್ಥಗಳು.

ನಿದರ್ಶನವಾಗಿ ಶಿವರಾಮಮೂರ್ತಿಯವರ ''ಸೌತ್ ಇಂಡಿಯನ್ ಪೇಯಿಂಟಿಂಗ್''. ಭಾರತೀಯ ಚಿತ್ರಕಲೆಯ ಬಗೆಗೆ ಅನೇಕ ಗ್ರಂಥಗಳು ಪ್ರಕಟವಾಗಿವೆ. ಆನಂದಕುಮಾರಸ್ವಾಮಿ, ಪರ್ಸಿಬ್ರೌನ್, ಮೆಹ್ತಾ, ಮುಂತಾದವರನೇಕರು ಬರೆದ ಗ್ರಂಥಗಳು ಬಹು ಆಧಾರಪೂರಿತವೆಂದು ಪ್ರಪಂಚದಲ್ಲೆಲ್ಲಾ ಮಾನಿತವಾಗಿದೆ. ಆದರೆ ಇವುಗಳಲ್ಲಿ ಒಂದು ಕೊರತೆ

ಎಂದರೆ ಭಾರತೀಯ ಚಿತ್ರಕಲೆಯ ಭಾರತದ ಎಲ್ಲೆ ಅವರ ದೃಷ್ಟಿಯಲ್ಲಿ ಗೋದಾವರಿ ನದಿಯಿಂದ ಉತ್ತರಕ್ಕೆ ಮಾತ್ರ ಅಲ್ಲಿಂದ ದಕ್ಷಿಣಕ್ಕೆ ಚಿತ್ರಕಲೆ ಇದೆ ಎಂಬುದೇ ಅವರಿಗೆ ತಿಳಿಯದೋ ಅಥವಾ ಆ ಕಲೆ ಅವರ ಅಭಿರುಚಿಗೆ ಬೇರೆಯಾದುದೋ ತಿಳಿಯದು. ದಕ್ಷಿಣ ಭಾರತ ಚಿತ್ರಕಲೆಯ ಭವ್ಯ ಪರಂಪರೆಯ ಬಗೆಗೆ ಬೆಳಕು ಚೆಲ್ಲಲು ಪ್ರಾರಂಭಿಸಿದ ಸ್ವಪ್ರಯತ್ನ - ಶಿವರಾಮಮೂರ್ತಿಯವರದು. ದಶಕಗಳ ಹಿಂದೆಯೇ ಇದರ ಬಗೆಗೆ ಬಿಡಿ ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ಒಂದೊಂದೂ ಅಧಿಕಾರವಾಣಿಯಿಂದ ವಿಷಯವನ್ನು ಪ್ರತಿಪಾದಿಸತಕ್ಕಂತಹವು.

ಈ ಅನುಭವ ಹಾಗೂ ಪ್ರಯತ್ನಗಳೆಲ್ಲಾ ಕ್ರೋಢೀಕರಿಸಿ ಹುಟ್ಟಿ ಬಂದ ಮೇರುಕೃತಿ - ಸೌತ್ ಇಂಡಿಯನ್ ಪೇಯಿಂಟಿಂಗ್. ಗ್ರಂಥ ಕೇವಲ ಇತಿಹಾಸವಲ್ಲ. ಈ ಚಿತ್ರಕಲೆ ಹಂತ ಹಂತವಾಗಿ ಬೆಳೆದು ಬಂದುದನ್ನು ಆಧಾರ ಸಹಿತ ತಿಳಿಯಪಡಿಸಲಾಗಿದೆ. ಒಂದೊಂದು ಅಂಶಕ್ಕೂ ಅವರೇ ಉದಾಹರಣಾ ರೂಪವಾಗಿ ಬರೆದ ಚಿತ್ರಗಳು. ಅಲ್ಲದೆ ದಕ್ಷಿಣ ಭಾರತದ ನಾನಾ ಭಾಗಗಳಿಂದ ಆರಿಸಿದ ಭಿತ್ತಿಚಿತ್ರ, ಪಟಗಳ ಪ್ರತಿಗಳ ನಿದರ್ಶನಗಳು.

ಕಾವ್ಯ ವರ್ಣನೆಗಳು

ನಾನೂ ಎಸ್.ಆರ್. ರಾಯರೂ ಕೂಡಿ ಬರೆದ 'ಟ್ರೆಡಿಷನಲ್ ಪೇಯಿಂಟಿಂಗ್ಸ್ ಆಫ್ ಕರ್ನಾಟಕ' ಪುಸ್ತಕಕ್ಕೆ ಶಿವರಾಮಮೂರ್ತಿಯವರು ಮುನ್ನುಡಿ ಬರೆದಿದ್ದಾರೆ. ಇದು ಕರ್ನಾಟಕ ಚಿತ್ರ ಕಲಾ ಪರಿಷತ್ತಿನಿಂದ ಪ್ರಕಟವಾಗಿದೆ. ಈಗ ಇದರ ಕನ್ನಡದ ಅನುವಾದವೂ ಪ್ರಕಟವಾಗುವುದರಲ್ಲಿದೆ. ಈ ಮುನ್ನುಡಿಯನ್ನು ಓದಿದಾಗ ಅದನ್ನು ಬರೆದ ಶಿವರಾಮಮೂರ್ತಿಯವರಿಗೆ ಎಂತಹ ಸಂತೋಷ ಮತ್ತು ಸಂಭ್ರಮ ಎಂಬ ಸಂಗತಿ ಅರಿವಾಗದಿರದು. ಇದಕ್ಕೆ ಕಾರಣ ನಾನು ಕನ್ನಡ ಕಾವ್ಯಗಳಿಂದ ಉದ್ಧರಿಸಿದ ಚಿತ್ರಕಲೆಯ ವರ್ಣನೆಗಳು. ಇದರಲ್ಲಿ ಕೆಲವು ಅಂಶಗಳನ್ನು ತಮ್ಮ ಮುನ್ನುಡಿಯಲ್ಲಿಯೂ ಸೇರಿಸಿಕೊಂಡುದೇ ಅಲ್ಲದೆ, ಸಂಸ್ಕೃತ ಹಾಗೂ ಭಾರತದ ಇತರ ಭಾಷೆಗಳ ಕಾವ್ಯಗಳಿಂದ ಉದಾಹರಣೆಗಳನ್ನೂ ತೆಗೆದುಕೊಂಡು, ದೇಶೀಯವಾಗಿ ಕಲೆ ಕೆಲವು ಅಂಶಗಳನ್ನು ರೂಢಿಸಿಕೊಂಡರೂ, ಅವೆಲ್ಲಾ ಹೇಗೆ ಭಾರತದ ಒಟ್ಟು ಸಂಪ್ರದಾಯದ ಅವಿಭಾಜ್ಯ ಭಾಗವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಒಂದು ಸಲ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದಾಗ ಅವರ ಉತ್ಸಾಹವೇ ಉತ್ಸಾಹ. ನಾನು ಮಲ್ಲಿನಾಥಪುರಾಣದಿಂದ ಉದಹರಿಸಿದಲ್ಲಿ ಶಿವರಾಮ ಮೂರ್ತಿಯವರು ನನ್ನೆ ಚೋಡನ ಕುಮಾರ ಸಂಭವದಿಂದ ಉದಹರಿಸುವರು. ಇವೆಲ್ಲಾ ಹೇಗೆ ಸೋಮೇಶ್ವರನ ಮಾನಸೋಲ್ಲಾಸದಲ್ಲಿರುವ ವಿವರಗಳಿಗನುಸಾರವಿದೆ ಎಂದು ಹೇಳಿ ದಕ್ಷಿಣ ಪಥದ ಸಂಪ್ರದಾಯ ಈ ನಾಲ್ಕೂ ಭಾಷಾ ಪ್ರದೇಶಗಳಲ್ಲಿಯೂ ಹೇಗೆ ಒಂದೇ ಎಂಬುದನ್ನು ಸ್ಪಷ್ಟ ಪಡಿಸಿದರು. ಹೀಗೆಯೇ ಮೂರ್ತಿಶಿಲ್ಪ, ಅದರ ತಂತ್ರ, ವಿಧಾನ ಇವೆಲ್ಲಾ ಅವರಿಗೆ ಹಸ್ತಗತ, ಅದನ್ನು ಅವರ ಸೌತ್ ಇಂಡಿಯನ್ ಬ್ರಾಂಜಸ್ ಗ್ರಂಥದಲ್ಲಿ ನೋಡಬಹುದು. ಕಲಾ ಇತಿಹಾಸ, ಶಿಲ್ಪ, ಚಿತ್ರಗಳ ಬಗೆಗೆ ಬಹು ಪ್ರಮಾಣಭೂತ ಗ್ರಂಥಗಳನ್ನು ಬರೆದಿದ್ದಾರೆ. ಆದರೆ ಇವೆಲ್ಲವನ್ನೂ

ಮೀರಿಸಿದ ಅವರ ಮೇರು ಕೃತಿ-ನಟರಾಜ. ಪ್ರಾಚೀನ ನಟರಾಜ ಕಲ್ಪನೆಯಿಂದ ಪ್ರಾರಂಭಿಸಿ, ಶಿಲ್ಪ ಹಾಗೂ ನೃತ್ಯ ಕಲೆಗಳ ವಿಶ್ವರೂಪದರ್ಶನ ಮಾಡಿಸಿದ್ದಾರೆ. ಇದು ಗ್ರಂಥವನ್ನು ಓದಿದಾಗಲೇ ಅನುಭವವಾಗುವ ಅಂಶ.

ಮನ್ನಣೆ

1909ರಲ್ಲಿ ಹುಟ್ಟಿದ ಚಲಂಬೂರ್ ಶಿವರಾಮಮೂರ್ತಿಯವರು ಪ್ರಾಚ್ಯ ಸಂಶೋಧನೆ ಹಾಗೂ ವಸ್ತು ಸಂಗ್ರಹಾಲಯದ ಇಲಾಖೆಗಳಲ್ಲಿ ದೊಡ್ಡ ದೊಡ್ಡ ಹುದ್ದೆಯಲ್ಲಿದ್ದು ಅಂತರರಾಷ್ಟ್ರೀಯ ಮಾನ್ಯತೆ ಪಡೆದಿದ್ದವರು. ಕಾಮಕೋಟಿ ಪೀಠದವರು ಅವರಿಗೆ 'ವಿಚಿತ್ರ ಚಿತ್ರ' ಎಂಬ ಬಿರುದನ್ನು ಕೊಟ್ಟಿದ್ದರು. ಅದು ಒಂದು ಭಾಗಕ್ಕೆ ಒಪ್ಪುವಂತಹದೇ. ಶಿವ ರಾಮಮೂರ್ತಿಯವರ ಗ್ರಂಥಗಳನ್ನು ಓದಿದವರಿಗೆ ಅವರ ಚಿತ್ತದಲ್ಲಿ ಎಂತಹ ಕಲಾಬ್ರಹ್ಮಾಂಡವಡಗಿತ್ತೆಂಬುದು ಮನವರಿಕೆಯಾಗದಿರದು. ನಮಗೆ ಭಾರತೀಯ ಕಲಾ ಇತಿಹಾಸಕ್ಕೆ ಬಹುತೇಕ ಹ್ಯಾವೆಲ್, ಆನಂದಕುಮಾರಸ್ವಾಮಿ, ಸ್ಮಿತ್, ಪರ್ಸಿಬ್ರೌನ್ ಮುಂತಾದವರೇ ಆಧಾರಪುರುಷರು. ಆದರೆ ಶಿವರಾಮಮೂರ್ತಿಯವರ ಗ್ರಂಥಗಳನ್ನು ಓದಿದವರಿಗೆ ಅದು ಇನ್ನೂ ಹೆಚ್ಚು ಪ್ರಮಾಣಭೂತವೆನ್ನಿಸದೇ ಇರದು. ಪ್ರಾಚೀನ ಮತ್ತು ಆಧುನಿಕ ಎರಡೂ ಬೆಸೆದ ವ್ಯಕ್ತಿತ್ವ ಅವರದು. ಅಂತಹ ಪಾಂಡಿತ್ಯ ಪೂರ್ಣ ವ್ಯಕ್ತಿಗಳು ಬಹು ಅಪರೂಪ. ಶಿವರಾಮ ಮೂರ್ತಿಗಳ ನಂತರ ನಮಗೆ ಅಂತಹ ಇನ್ನೊಬ್ಬರು ಸದ್ಯದಲ್ಲಿ ಕಾಣಿಸುತ್ತಿಲ್ಲ. ★

ಪ್ರಜಾವಾಣಿ, 1980

39. ಸಾಂಪ್ರದಾಯಿಕ ಚಿತ್ರಕಲೆಗೆ ಪುನರುಜ್ಜೀವನ ನೀಡಿದ ವೈ. ಸುಬ್ರಹ್ಮಣ್ಯರಾಜು

ಸುಮಾರು 60-65 ವರುಷಗಳ ಹಿಂದೆ ನಾನು ವಿದ್ಯಾರ್ಥಿಯಾಗಿದ್ದ ದಿನಗಳು. ಪ್ರತಿ ಸಂಜೆ ನಮಗೆ ಮೈಸೂರಿನ ಸಯಾಜಿರಾವ್ ರಸ್ತೆಯಲ್ಲಿ ಕಾಣಬರುತ್ತಿದ್ದ ಒಂದು ದೃಶ್ಯ: ಜರಿ ಪೇಟ, ಸರ್ಜ್ ಸೂಟು ಧಾರಿಗಳಿಬ್ಬರು ಗಾಳಿ ಸಂಚಾರ ಹೋಗುತ್ತಿದ್ದುದು. ಇಬ್ಬರೂ ಒಂದೇ ಎತ್ತರ, ಹೆಚ್ಚು ಕಡಿಮೆ ಒಂದೇ ಆಕಾರ, ನಡಿಗೆಯೂ ಒಂದೇ ರೀತಿ. ಅವಳಿ ಜವಳಿಗಳಂತೆ ಕಾಣಬರುತ್ತಿತ್ತು. ಅವರಾರೆಂದು ಕುತೂಹಲದಿಂದ ವಿಚಾರಿಸಿದಾಗ - ಪ್ಯಾಲೆಸ್ ಆರ್ಟಿಸ್ಟ್ಸ್ ಅಂದರೆ ಅರಮನೆ ಕಲಾವಿದರು ಎಂದು ಹೇಳಲಾಗುತ್ತಿತ್ತು. ನೋಡಿದರೆ ಹೌದು ಎನಿಸುವಂತಲೂ ಇತ್ತು. ಒಂದು ರೀತಿಯ ದರ್ಬಾರಿ ಕಳೆ ಎದ್ದು ಕಾಣುತ್ತಿತ್ತು. ಹಲವು ವರುಷಗಳ ನಂತರ ಅವರಲ್ಲಿ ಒಬ್ಬರು ನನ್ನ ಉಪಾಧ್ಯಾಯರಾಗುತ್ತಾರೆ ಎಂದು ನಾನು

ಕನಸಿನಲ್ಲಿಯೂ ನಿರೀಕ್ಷಿಸಿರಲಿಲ್ಲ. ಹೀಗೆ ನನಗೆ ವೈ. ಸುಬ್ರಹ್ಮಣ್ಯ ರಾಜು ಅವರ ಮೊದಲ ಪರಿಚಯ ಆದದ್ದು.

ರಾಜು ಅವರು ನನಗೆ ಉಪಾಧ್ಯಾಯರಾದಾಗ, ನಾನು ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣಾಲಯದಲ್ಲಿ ವಿದ್ಯಾರ್ಥಿ - ಚಿತ್ರಕಲಾ ವಿಭಾಗದಲ್ಲಿ ಆಗಲೇ ಮೂರು ವರುಷ ದಾಟಿದ್ದೆ. ಹೊಸದಾಗಿ ಬಂದ ಈ ಅರಮನೆ ಆರ್ಟಿಸ್ಟ್ ಉಪಾಧ್ಯಾಯರು ಯಾವ ರೀತಿ ಮಾರ್ಗದರ್ಶನ ಮಾಡುವರೋ ಜಬರ್ದಸ್ತಿಯೋ ಅಥವಾ ವಿಶ್ವಾಸದಿಂದಲೋ ಎಂಬ ಕುತೂಹಲ. ಆದರೆ ಆತಂಕಕ್ಕೆ ಕಾರಣವೇನೂ ಇರಲಿಲ್ಲ. ಎಲ್ಲರೊಂದಿಗೆ ಸೌಹಾರ್ದದಿಂದ ಬೆರೆತು ಕರ್ತವ್ಯ ನಿರ್ವಹಿಸುತ್ತಿದ್ದರು. ಕಲಾ ಶಿಕ್ಷಣದಲ್ಲಿ ಅವರು ಅನುಸರಿಸುತ್ತಿದ್ದುದು ಅಕಾಡೆಮಿಕ್ ಎಂದು ಕರೆಯಲಾಗುವ ನೈಜ ಶೈಲಿ. ತೈಲ ವರ್ಣಗಳು. ಅವರು ಸಾಂಪ್ರದಾಯಿಕ ಚಿತ್ರಗಾರ ಮನೆತನದವರು. ಆದರೆ ಆ ಸಂಪ್ರದಾಯದಿಂದ ಹೊರ ಬಂದಿದ್ದವರು. ಅಂದಿನ ವಾತಾವರಣಕ್ಕೆ ಅನುಗುಣವಾಗಿ ವೈದಿಕ ಕುಟುಂಬದವರನೇಕರು ವೇದಾಧ್ಯಯನದಿಂದ ಇಂಗ್ಲೀಷ್ ಸಾಹಿತ್ಯದ ಕಡೆಗೆ ಹೊರಳಿದಂತೆ. ಸುಬ್ರಹ್ಮಣ್ಯ ರಾಜು ಅವರೊಬ್ಬರೇ ಅಲ್ಲ, ಆ ಸಂಪ್ರದಾಯದ ಮನೆತನಗಳವರನೇಕರು ಹೀಗೆ ಹಿಂದಿನದನ್ನು ತೊರೆದು ಹೊಸದಕ್ಕೆ ಹೊರಳಿದ್ದರು. ಅನೇಕರು ಪಾಶ್ಚಾತ್ಯ ನೈಜ ಶೈಲಿ ಅನುಸರಿಸಿದರು. ಅದರಲ್ಲಿ ಕೌಶಲ್ಯ ಪಡೆದರು. ನಿದರ್ಶನವಾಗಿ ರಾಜು ಅವರಿಗೆ ಗುರುಗಳಾಗಿದ್ದ ಕೇಶವಯ್ಯನವರನ್ನೇ ಹೇಳಬಹುದು. ಅವರದೇ ಸಾಂಪ್ರದಾಯಿಕ ಚಿತ್ರಗಾರ ಮನೆತನ. ಆದರೆ ಅವರು ಕರಗತ ಮಾಡಿಕೊಂಡುದು ನೈಜ ಶೈಲಿಯನ್ನು. ಹಾಗೆಯೇ ವೆಂಕಟಪ್ಪನವರನ್ನು ಹೇಳಬಹುದು. ಅವರೂ ಚಿತ್ರಗಾರ ಮನೆತನ ಆದರೆ ಅವರು ಪರಂಪರೆಯದನ್ನು ಬಿಟ್ಟು ಅಂದಿಗೆ ನವ್ಯವೆನಿಸಿದ ಒಂದು ಶೈಲಿಯನ್ನು ರೂಢಿಸಿಕೊಂಡರು. ನಾಗರಿಕರೆಂದು ಭಾವಿಸಿಕೊಂಡವರೂ ಅಲ್ಲದೆ ರಾಜಾ ರವಿವರ್ಮರ ಚಿತ್ರಗಳನ್ನು ನೋಡಿದವರಿಗೆ ಈ ಸಾಂಪ್ರದಾಯಿಕ ಶೈಲಿಯ ಚಿತ್ರಗಳು, ಸ್ವಲ್ಪ ಹಳಸಲು ಎನ್ನದಿದ್ದರೂ ಹಳತು ಎಂಬ ಭಾವನೆ ಬಂದಿದ್ದ ಯುಗವದು. ಆದುದರಿಂದ ಸಾಂಪ್ರದಾಯಿಕ ಕುಟುಂಬದವರಲ್ಲಿಯೂ ಈ ಭಾವನೆ ಬಂದಿದ್ದರೆ ಅತಿಶಯವಿಲ್ಲ.

ಸುಬ್ರಹ್ಮಣ್ಯ ರಾಜು ಅವರದು ಬಹು ಹಳೆಯ ಚಿತ್ರಗಾರ ಮನೆತನ. ಅವರ ತಂದೆ ಎಲ್ಲಯ್ಯ, ತಾತ ಸುಂದರಯ್ಯ, ಚಿಕ್ಕಪ್ಪ ಶಂಕರರಾಜು ಎಲ್ಲರೂ ಚಿತ್ರಕರೇ. ಹೀಗೆಯೇ ಆರು ಏಳು ಹಿಂದಿನ ತಲೆಮಾರಿನವರ ದಾಖಲೆಗಳಿವೆ, ಅವರ ಕುಟುಂಬದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅರಮನೆಯ ಆಶ್ರಯದಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 20-25 ಚಿತ್ರಗಾರರ ಭಾವಚಿತ್ರಗಳನ್ನು ಬರೆಯಿಸಿದ್ದರು. ಅದರಲ್ಲಿ ರಾಜು ಅವರ ಪೂರ್ವಿಕ ಚಿತ್ರಗಾರ ವೀರಣ್ಣನವರ ಚಿತ್ರವೂ ಇದೆ. ಅದಕ್ಕೂ ಹಿಂದಿನ ಮೂರು ತಲೆಮಾರು ಹಿಂದಿನವರೆಗೆ ದಾಖಲೆಗಳಿವೆ. ಅಂದರೆ ನವಾಬರು, ಹೈದರಾಲಿ, ಟಿಪ್ಪುಸುಲ್ತಾನ್ ಕಾಲಕ್ಕೂ ಹಿಂದೆ ಅಥವಾ ಇನ್ನೂ ಹಿಂದಿನಿಂದಲೂ ಈ ಕುಟುಂಬವು ಚಿತ್ರಕಲೆಗೆ ಹೆಸರಾಗಿತ್ತೆನ್ನಬಹುದು. ಸುಬ್ರಹ್ಮಣ್ಯ

ರಾಜು ಅವರು ಹೇಳುತ್ತಿದ್ದಂತೆ ಈ ಕುಟುಂಬದವರೂ ಅನೇಕ ಚಿತ್ರಗಾರ ಕುಟುಂಬದವರಂತೆ ವಿಜಯನಗರದ ಪತನಾನಂತರ ದಕ್ಷಿಣಕ್ಕೆ ಬಂದರು. ಬಂದು ತುರುವೆಕೆರೆಯಲ್ಲಿ ನೆಲೆಸಿದ್ದರು. ಶ್ರೀರಂಗಪಟ್ಟಣದಲ್ಲಿ ದರಿಯಾದೌಲತ್ ಕಟ್ಟಿದಾಗ ಅದರಲ್ಲಿ ಭಿತ್ತಿ ಚಿತ್ರರಚನೆ ಮಾಡುವಾಗ ದಿವಾನ್ ಪೂರ್ಣಯ್ಯನವರು ಈ ಕುಟುಂಬದವರನ್ನು ಕರೆಸಿಕೊಂಡರಂತೆ. ಅಲ್ಲಿಯೇ ನಿಂತವರು ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರು ಸಿಂಹಾಸನಕ್ಕೆ ಬಂದನಂತರ ಮೈಸೂರಿಗೆ ಬಂದು ನೆಲೆಸಿದರು. ಅಲ್ಲಿ ಸಾಕಷ್ಟು ಕೆಲಸವೂ ಇತ್ತು. ಒಡೆಯರು ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದಾಗ ಭಿತ್ತಚಿತ್ರ ರಚನೆ ಮಾಡಿಸಿದರು. ಆಗ ಈ ಕುಟುಂಬಗಳವರಿಗೆಲ್ಲಾ ಪುರಸತ್ತು ಇಲ್ಲದಷ್ಟು ಕೆಲಸ. ಅಲ್ಲದೆ ಸಚಿತ್ರ ರಾಮಾಯಣ, ಶ್ರೀತತ್ವನಿಧಿ ಮುಂತಾದ ಚಿತ್ರಮಯ ಕಾವ್ಯಗಳು, ಹೀಗೆ ಕುಂಚ, ಬಣ್ಣದ ವಾತಾವರಣದ ಮಧ್ಯೆ ಹುಟ್ಟಿ ಬೆಳೆದವರು- ಸುಬ್ರಹ್ಮಣ್ಯ ರಾಜು. ಚಿತ್ರಕಲೆ ಅವರಿಗೆ ರಕ್ತಗತವಾದುದು.

ಸುಬ್ರಹ್ಮಣ್ಯ ರಾಜು ಹುಟ್ಟಿದುದು, ಮೈಸೂರಿನಲ್ಲಿ 3-12-1907 ರಂದು. ವಿದ್ಯಾಭ್ಯಾಸ ಲೋಯರ್ ಸೆಕೆಂಡರಿವರೆಗೆ. ಆದರೆ ಕೈಯಿಗೆ ಚಿತ್ರ ಬರೆಯುವ ಗೀಳು. ಹತ್ತನೆಯ ವಯಸ್ಸಿಗೆ ಕ್ರಮಬದ್ಧವಾಗಿ ಕಲಿಯಲು ಚಾಮರಾಜೇಂದ್ರ ತಾಂತ್ರಿಕ ಶಾಲೆಗೆ ಸೇರಿಸಿದರು. ಅಲ್ಪಾವಧಿ ಪ್ರಾತಃಕಾಲದ ವಿದ್ಯಾರ್ಥಿಯಾಗಿ. ಅಲ್ಲಿ ರೇಖಾ ಚಿತ್ರದಲ್ಲಿ ಶಿಕ್ಷಣ ಬಾಲಸುಬ್ರಹ್ಮಣ್ಯಾಚಾರ್ ಮತ್ತು ಎಂ. ಗೋಪಾಲ ರಾಯರಿಂದ. ಮಾಡೆಲಿಂಗ್ ಅಥವಾ ಮೃತ್ತಿಕಾ ಶಿಲ್ಪದಲ್ಲಿ ಗೋವಿಂದ ಪಿಳ್ಳೆಯವರಿಂದ ಅಲ್ಲದೆ ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿಯೂ ಶಿಕ್ಷಣ. ಎಂಟು ವರುಷ ಈ ರೀತಿ ಶಿಕ್ಷಣ ಪಡೆದನಂತರ 1925ರಲ್ಲಿ ಪೂರ್ಣಾವಧಿ ವಿದ್ಯಾರ್ಥಿಯಾಗಿ ಸೇರಿಸಿಕೊಳ್ಳಲಾಯಿತು. ಅದೂ ನೇರವಾಗಿ ಮೂರನೆಯ ತರಗತಿಗೆ. ಅಲ್ಲಿ ಚಿತ್ರಕಲಾ ಶಿಕ್ಷಕರು- ಕೇಶವಯ್ಯ. 1926ರಲ್ಲಿ ಶಿಕ್ಷಣ ಮುಕ್ತಾಯ, ಮದರಾಸು ಸರ್ಕಾರದ ತಾಂತ್ರಿಕ ಪರೀಕ್ಷೆಯಲ್ಲಿ ರೇಖಾಚಿತ್ರ, ವರ್ಣಚಿತ್ರ ಮುಂತಾದವುಗಳಲ್ಲಿ ಮೊದಲು ವರ್ಣದಲ್ಲಿ ತೇರ್ಗಡೆ. ಅನಂತರ ಚಾಮರಾಜೇಂದ್ರ ಶಾಲೆಯಲ್ಲಿಯೇ ಉದ್ಯೋಗ. ಆಲಂಕಾರಿಕ ವಸ್ತು ರಚನೆಗಳಲ್ಲಿ ಬಹುತೇಕ ಪೇಪಿಯರ್ ಮ್ಯಾಚ್ ಅಥವಾ ಕಾಗದದ ಹಿಟ್ಟಿನಲ್ಲಿ ರಚನೆ. ಮುಖ್ಯಾಧಿಕಾರಿ ಎಚ್. ಜಿ. ಆಲ್ಪಿಂಗ್ ಟನ್ ಅವರ ನೇತೃತ್ವದಲ್ಲಿ ಅಲ್ಲದೆ ಅರಮನೆಗೆ ಮಹಾರಾಜರಿಗೆ ಆಲಂಕಾರಿಕ ವಸ್ತುಗಳ ರಚನೆ. 1928ರಲ್ಲಿ ವಿದ್ಯಾರ್ಥಿ ವೇತನ ಪಡೆದು ಜೆ.ಜೆ. ಕಲಾ ಶಾಲೆಯಲ್ಲಿ ಉಚ್ಚಶಿಕ್ಷಣ ಪಡೆಯಲು ಬೊಂಬಾಯಿಗೆ ಪ್ರಯಾಣ. ಅಲ್ಲಿ ಗ್ಲಾಡ್‌ಸ್ಟನ್ ಸಾಲೊಮನ್ ದುರಾಧರ್, ಟಾಸ್ಕರ್, ಜೊರ್ಡ್ಕಾರ್ ಅವರಿಂದ ಮಾರ್ಗದರ್ಶನ 1930ರಲ್ಲಿ ಶಿಕ್ಷಣ ಮುಗಿಸಿ ಊರಿಗೆ ವಾಪಸ್.

ಊರಿಗೆ ಹಿಂತಿರುಗಿದೊಡನೆಯೇ ಮದುವೆ. ಅರಮನೆಯ ಚಿತ್ರಾಲಂಕಾರದ ಕೆಲಸ. ಕಲ್ಯಾಣ ಮಂಟಪದ ಗೋಡೆಗಳನ್ನು ಅಲಂಕರಿಸಲು ವಿಜಯ ದಶಮಿ ಜಂಬೂಸವಾರಿಯ ದೃಶ್ಯಗಳು- ದೊಡ್ಡ ಪ್ರಮಾಣದ 28 ನಕ್ಷೆಗಳನ್ನು ರಚಿಸಿಕೊಟ್ಟು ತಾವೇ 6 ಫಲಕಗಳನ್ನು ಪೂರೈಸಿದರು. ಮಹಾರಾಜರ ಅಪೇಕ್ಷೆಯಂತೆ ಇವುಗಳನ್ನು ನೈಜ ಶೈಲಿಯಲ್ಲಿ ತೈಲ ವರ್ಣಗಳಲ್ಲಿ ರಚಿಸಿ- 1936ರಲ್ಲಿ ತಾವೇ ಕಲಿತ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಶಾಲೆಯಲ್ಲಿ

ಕಲಾಧ್ಯಾಪಕರಾಗಿ ನೇಮಕ. 1962ರಲ್ಲಿ ನಿವೃತ್ತಿ. ದಾವಣಗೆರೆ ಕಲಾ ಶಾಲೆಗೆ ಪುನರ್ ನೇಮಕ....... ಹೀಗೆ ಸುಬ್ರಹ್ಮಣ್ಯ ರಾಜು ಅವರ ಜೀವನ ಯಾತ್ರೆ ಸಾಗಿತು.

1970ರಲ್ಲಿ ರಾಜು ಅವರ ಜೀವನದಲ್ಲಿ ಒಂದು ಹೊಸ ತಿರುವು. ನಿವೃತ್ತರಾದ ಮೇಲೆ ವಿಶ್ರಾಂತಿ ಜೀವನವನ್ನು ಅನುಭವಿಸುತ್ತಿದ್ದಾಗ ಒಂದು ದಿನ ಮೈಸೂರು ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಆರ್ಯಮೂರ್ತಿಗಳು, ಕಾರ್ಯದರ್ಶಿ ನಂಜುಂಡ ರಾಯರು ಬಂದು ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯ ಪುನರುಜ್ಜೀವನ ನಡೆಯಬೇಕಾದ ಅವಶ್ಯಕತೆಯನ್ನು ವಿವರಿಸಿ ಈ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಲು ಕೋರಿದರು. ಆ ವೇಳೆಗೆ ಸಾಂಪ್ರದಾಯಿಕ ಚಿತ್ರಕಲೆಯನ್ನು ನಡೆಸಿಕೊಂಡು ಹೋಗುತ್ತಿದ್ದ ಚಿತ್ರಗಾರರ ಸಂಖ್ಯೆ ಇಳಿಮುಖವಾಗಿತ್ತು. ಅಧಿಕಾರಯುತವಾಗಿ ಮಾತಾಡಬಲ್ಲ ಮತ್ತು ಮಾರ್ಗದರ್ಶನ ನೀಡಬಲ್ಲವರೂ ಅಪರೂಪವಾಗಿದ್ದರು. ಈ ಹಿನ್ನೆಲೆಯಲ್ಲಿ ಸುಬ್ರಹ್ಮಣ್ಯರಾಜುರವರು ತಾವು ಹಿಂದೆ ಬದಿಗಿಟ್ಟಿದ್ದ ಕಲಾಸಂಪ್ರದಾಯಕ್ಕೆ ಹೊಸದಾಗಿ ಜೀವಕಳೆ ತುಂಬುವ ಕೆಲಸವನ್ನು ಕೈಗೆ ತೆಗೆದುಕೊಳ್ಳಬೇಕಾಯಿತು. ಆದರೆ ಅವರು ಬಾಲ್ಯಕಾಲದಲ್ಲಿ ಆಸಕ್ತಿಯಿಂದ ನೋಡಿದ್ದು ಹಾಗೂ ಕಲಿತಿದ್ದುದು ಇದಕ್ಕೆ ಬೆಂಬಲವಾಯಿತು. ಅಲ್ಲದೆ ಹತ್ತಾರು ತಲೆಮಾರುಗಳಿಂದ ಒಂದೇ ಸಮನಾಗಿ ಇದೇ ವೃತ್ತಿಯಲ್ಲಿದ್ದ ಕುಟುಂಬವಾದುದರಿಂದ ಅಮೂಲ್ಯವಾದ ದಾಖಲೆಗಳ ಸಂಗ್ರಹವಿದ್ದಿತು. ನಿದರ್ಶನವಾಗಿ ಶ್ರೀತತ್ವನಿಧಿಯಲ್ಲಿರುವ ಸಾವಿರಾರು ದೇವದೇವತಾ ಚಿತ್ರಗಳ ಮೂಲರೇಖಾ ಚಿತ್ರಗಳೂ ಅವುಗಳ ಲಕ್ಷಣಗಳೇ ಮುಂತಾದವು ಲಿಖಿತವಾದ ಮೂಲ ಕಾಗದ ಸುರುಳಿಗಳು ಈ ಕುಟುಂಬದಲ್ಲಿವೆ. ಅವುಗಳ ರಚನಾ ವಿಧಾನದ ವಿವರಗಳೂ ಅಷ್ಟೇ. ಆದುದರಿಂದ ಸಾಂಪ್ರದಾಯಿಕ ಚಿತ್ರಕಲೆಯ ಪುನರುಜ್ಜೀವನದ ನೇತೃತ್ವ ವಹಿಸಿಕೊಳ್ಳಲು ಬಹು ಅರ್ಹರಾಗಿದ್ದವರು- ಸುಬ್ರಹ್ಮಣ್ಯರಾಜು.

ಚಿತ್ರ ಕಲಾಪರಿಷತ್ತಿನಲ್ಲಿ ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯ ಶಿಕ್ಷಣ ವಿಭಾಗದ ಮುಖ್ಯಸ್ಥರಾಗಿ ಬಹು ಶ್ರದ್ಧೆ ಮತ್ತು ಅಭಿಮಾನದಿಂದ ದುಡಿದರು - ರಾಜು ಅವರು ಅನೇಕರನ್ನು ತಯಾರು ಮಾಡಿದರು. ಪರಿಷತ್ತಿನಿಂದ ಪ್ರಕಟವಾದ 'ಕರ್ನಾಟಕ ಸಾಂಪ್ರದಾಯಿಕ ಚಿತ್ರ ಕಲೆ' ಎಂಬ ಈ ಲೇಖನ ಪುಸ್ತಕಕ್ಕೆ ತಾಂತ್ರಿಕ ಮಾಹಿತಿಯನ್ನೆಲ್ಲಾ ಒದಗಿಸಿದವರು ಸುಬ್ರಹ್ಮಣ್ಯ ರಾಜು. ವಿದ್ಯಾರ್ಥಿಗಳೊಂದಿಗೆ ತಾವೂ ಕೆಲಸ ಮಾಡುತ್ತಿದ್ದರು. ಅನೇಕ ವೇಳೆ ರಾತ್ರಿಯವರೆಗೂ ಚಿತ್ರ ಬಿಡಿಸುವುದರಲ್ಲಿ ತಲ್ಲೀನರಾಗಿದ್ದ ರಾಜು ಅವರನ್ನು ಅನೇಕರು ನೋಡಿದ್ದಾರೆ. ಅಲ್ಲದೆ ಚಿತ್ರಕಲಾ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಪಾತ್ರವಹಿಸುತ್ತಿದ್ದರು. ಅದರ ಅಧ್ಯಕ್ಷರೂ ಆಗಿದ್ದರು.

ಅರಸೊತ್ತಿಗೆ ಹೋದರೂ ರಾಜು ಅವರಲ್ಲಿ ರಾಜಭಕ್ತಿ ಕುಂದಿರಲಿಲ್ಲ. ಕಲೆಯ ವಿವಿಧ ವಿಷಯಗಳ ಬಗೆಗೆ ಅನುಭವಪೂರಿತವಾದ ಮಾತುಗಳನ್ನು ಆಡುತ್ತಿದ್ದಾಗಲೂ, ಕೊನೆಗೆ ಅರಮನೆ, ಅರಸರು, ಜಂಬೂಸವಾರಿ ಇವುಗಳ ಪ್ರಸ್ತಾಪ ಬಂದೇ ಬರುತ್ತಿತ್ತು. ಜಂಬೂಸವಾರಿ

ದೃಶ್ಯಗಳನ್ನು ಪಿಥಪಿಥವಾಗಿ ರಚಿಸಿದ್ದಾರೆ. ಇದರ ಜೊತೆಗೆ ಈಗ ಒಂದು ದಶಕದಿಂದ ಚಾಕೊಲೇಟ್ ವಿನಿಯೋಗ, ಯಾವ ಪರಿಚಯಸ್ಥರನ್ನು ನೋಡಲೀ ಒಂದು ಚಾಕೊಲೇಟ್ ಕೊಡುವುದು. ಜೇಬಿನಲ್ಲಿ ಸದಾ ಚಾಕೊಲೆಟ್ ಸರಕಿರುತ್ತಿತ್ತು.

ಅವರ ಅರವತ್ತು ವರುಷದ ಕಲಾ ಜೀವನದಲ್ಲಿ ಪದಕಗಳು, ಪ್ರಶಸ್ತಿಗಳೂ ಗಣನೀಯ ಪ್ರಮಾಣದಲ್ಲಿ ಬಂದಿದ್ದುವು. ಅವುಗಳಲ್ಲಿ ಗಮನಾರ್ಹವಾದುದು- 1987ರಲ್ಲಿ ನೀಡಲಾದ ರಾಷ್ಟ್ರೀಯ ಪ್ರಶಸ್ತಿ, ಕೇಂದ್ರ ಕರಕುಶಲ ಮಂಡಳಿಯಿಂದ 1972ರಲ್ಲಿ ನೀಡಲಾದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ. 1977ರಲ್ಲಿ ನೀಡಲಾದ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿಗಳನ್ನು ಹೇಳಬಹುದು. ಇಳಿ ವಯಸ್ಸಿನಲ್ಲಿಯೂ ಉತ್ಸಾಹದಿಂದ ಕೆಲಸ ಕಾರ್ಯ ಮಾಡಿಕೊಂಡು ಹೋಗುತ್ತಿದ್ದರೂ ಈಚೆಗೆ ಅವರ ಸಂಸಾರಕ್ಕೆ ಸಂಬಂಧಿಸಿದಂತೆ ಆದ ಕೆಲವು ಆಘಾತಗಳಿಂದ, ಸ್ವಲ್ಪ ಕುಗ್ಗಿದ್ದರು, ನಿಶ್ಶಕ್ತರಾಗಿದ್ದರು. 24-9-95ರ ಭಾನುವಾರ ಸಂಜೆ ಸುಬ್ರಹ್ಮಣ್ಯ ರಾಜು ನಿಧನರಾದಾಗ ಎರಡು ಸಂಗತಿ ನೆನಪಿಗೆ ಬರುತ್ತಿತ್ತು; ಮೊದಲನೆಯದು ಒಂದು ಅಧ್ಯಾಯದ ಅಂದರೆ ಅರಮನೆ ಚಿತ್ರಗಾರ ಪರಂಪರೆಯ ಅಧ್ಯಾಯದ ಅಂತ್ಯ. ರಾಜು ಅವರೇ ಆ ಪರಂಪರೆಯಲ್ಲಿ ಕಡೆಯವರು. ಎರಡನೆಯದು ಮನೆತನದ ಕಲಾ ಪರಂಪರೆಯ ಪುನರುದ್ಧಾರ. ಅವರ ಸಕ್ರಿಯ ಪಾತ್ರದಿಂದ ಅದಕ್ಕೆ ಜೀವಕಳೆ ಬಂದು ಅವರು ಬದುಕಿದ್ದಾಗಲೇ ಅದಕ್ಕೆ ಹಿಂದಿನ ಪ್ರಾಶಸ್ತ್ಯ ಬಂದುದು ನೋಡಿ ಅವರಿಗೆ ಸಮಾಧಾನವಾದುದು. ★ ★ ★ ★ ★ ★ ★ ★

ಪ್ರಜಾವಾಣಿ, 1995

40. ಕಲಾವಿದರನ್ನು ಕಾಡುವ 'ಕೃಷ್ಣ' ವ್ಯಾಮೋಹ

ಏಳೆಂಟು ವರುಷಗಳ ಹಿಂದೆ ದೆಹಲಿಯಲ್ಲಿ ಒಂದು ಕಾಂಟೆಂಪೊರೆರಿ ಬ್ಯಾಲೆ ಅಥವಾ ಸಮಕಾಲೀನ ನೃತ್ಯ ನಾಟಕಗಳ ಉತ್ಸವ ನಡೆಯಿತು. ಇಂದು ಈ ಪ್ರಕಾರದಲ್ಲಿ ಭಾರತದಲ್ಲಿ ಹೆಸರಾಂತ ಲಿಟ್ಲ್ ಬ್ಯಾಲೇ ಟ್ರೂಪ್ ಮುಂತಾದುವೂ ನಿರ್ದೇಶಕರಾದ ನರೇಂದ್ರ ಶರ್ಮ, ಸಚಿನ್ ಶಂಕರ್, ಮಾಯಾರಾವ್ ಅವರುಗಳ ನಾಟ್ಯವೃಂದಗಳ ಉತ್ಸವದಲ್ಲಿ ಭಾಗವಹಿಸಿದ್ದುವು. ಎಂದಿನಂತೆ ಇಂತಹ ಕಾರ್ಯಕ್ರಮಗಳಿಗೆ ಬರುವುದೇ ಒಂದು ಫ್ಯಾಷನ್ ಎಂದು ಭಾವಿಸಿದವರೂ, ಕುತೂಹಲರಾದ ಕಲಾವಿದರೂ ಕಲಾವಿಲಾಸಿಗಳೂ ಮುಂತಾದವರೂ ಬಂದಿದ್ದರು. ಇಷ್ಟಾದರೂ ಸಭಾಂಗಣದ ಮೂರನೆಯ ಒಂದು ಭಾಗದಷ್ಟೂ ತುಂಬಿರಲಿಲ್ಲ. ಇಲ್ಲಿ ಪ್ರದರ್ಶಿತವಾದ ನೃತ್ಯ ನಾಟಕಗಳೂ ಪ್ರಾಯಶಃ ಪ್ರಾಯೋಗಿಕವಾದವು. ಒಂದು ಸಲ ಬೆಳಕು ಕಂಡವು ಇನ್ನೊಂದು ಸಲ ಪ್ರದರ್ಶಿತವಾಗಬೇಕಾದರೆ ಅವಕಾಶ ಕಡಿಮೆ.

ಇದಾದ ಒಂದೆರಡು ತಿಂಗಳ ನಂತರ ಕೃಷ್ಣಜಯಂತಿ ಬಂದಿತು. ಆಗ ದೆಹಲಿಯ ಒಂದು ಪ್ರಸಿದ್ಧ ಕಲಾಸಂಸ್ಥೆ ಕೃಷ್ಣಲೀಲಾ ನೃತ್ಯ ನಾಟಕವನ್ನು ಪ್ರದರ್ಶಿಸಲಾರಂಭಿಸಿತು. ಅದನ್ನೂ

ನಿರ್ದೇಶಿಸಿದವರು ಮಾಯಾರಾವ್, ಸಂಗೀತ ಅನಿಲ್ ಬಿಶ್ವಾಸ್‌ರವರದು. ಮೂರುವಾರ ಪಕ ಪ್ರಕಾರವಾಗಿ ನಡೆಯಿತು. ಕಡೆಯ ಪ್ರದರ್ಶನದವರೆಗೂ ಹಾಲ್‌ಭರ್ತಿ. ಇದು ನನಗೆ ಆಶ್ಚರ್ಯವೆನಿಸಿತು. ಇಲ್ಲಿ ಇನ್ನೂ ಆಶ್ಚರ್ಯವೆಂದರೆ ಕಳೆದ ವರುಷ ದೆಹಲಿಯಲ್ಲಿ ನೋಡಿದಾಗಲೂ ಇದೇ ರೀತಿ. ಈಗ ಬದಲಾವಣೆ ಎಂದರೆ ಮುಂಚೆಯೇ ರಿಸರ್ವ್ ಮಾಡಿಸದಿದ್ದರೆ ಸ್ಥಳ ಸಿಗುತ್ತಿರಲಿಲ್ಲ. ಈಗ ಒಂದಲ್ಲದೆ ಎರಡು ಮೂರು ಸಂಸ್ಥೆಗಳು ಕೃಷ್ಣಲೀಲಾ ನೃತ್ಯ ನಾಟಕಗಳನ್ನು ಪ್ರದರ್ಶಿಸುತ್ತವೆ. ಎಲ್ಲ ಕಡೆಯೂ ಜನಭರ್ತಿ. ಅವರಲ್ಲಿ ಕಾಂಟೆಂಪೊರರಿ ಬ್ಯಾಲೆಗೆ ಬಂದ ನವ್ಯದವರೂ ಇದ್ದರು. ವಿಶೇಷವೆಂದರೆ ಪದೇ ಪದೇ ಬರುತ್ತಿದ್ದರು.

ಇದರಲ್ಲೇನು ಆಕರ್ಷಣೆ? ಇದೇ ಪ್ರಶ್ನೆ ಆಗಾಗ ಮನಸ್ಸಿನಲ್ಲಿ ಮೂಡಿದೆ. ಕೃಷ್ಣನ ಕತೆ, ಒಂದು ಓಬಿರಾಯನ ಕಾಲದ ಕಲ್ಪನೆ ಎನಿಸಬಹುದು. ಇಂದಿನ ಪೀಳಿಗೆಯಲ್ಲಿ ಬಹುಮಂದಿಗೆ ಕೃಷ್ಣ ಎಂಬ ಹೆಸರು ಮಸುಕು ಮಸುಕಾಗಿ ತಿಳಿದಿರಬಹುದು. ಅಮರ ಚಿತ್ರಕಥೆಯನ್ನು ಓದುವ ಬಾಲಕರಿಗೆ ಇನ್ನೂ ಸ್ವಲ್ಪ ಹೆಚ್ಚು ತಿಳಿದಿರಬಹುದು. ಆದರೂ ಆತನ ಜನಪ್ರಿಯತೆಯೇನೂ ಕುಗ್ಗಿದಂತಿಲ್ಲ. ಬಹುಕಾಲದಿಂದಲೂ ಸಾಹಿತ್ಯದಲ್ಲಿ ಆತನು ಬಹುಪ್ರಿಯವಸ್ತು. ಗೀತಗೋವಿಂದ, ಮುಕುಂದಮಾಲ, ಕೃಷ್ಣಕರ್ಣಾಮೃತ ಮುಂತಾದ ಬಹು ಸುಂದರ ಕಾವ್ಯಗಳಿಗೆ ಕಾರಣನಾಗಿದ್ದಾನೆ. ಸಾಹಿತ್ಯದಂತೆಯೇ ಕಲೆಯಲ್ಲಿಯೂ ಸಹ ದಕ್ಷಿಣದ ತುದಿಯ ಕಣ್ಣಿನಿಂದ ಹಿಡಿದು ಉತ್ತರದ ಕನ್ಹೈಯ್ಯನವರೆಗೆ ಸಂಗೀತದಲ್ಲಿ ಅವನ ವ್ಯಾಪ್ತಿ. ನೃತ್ಯ ಮತ್ತು ನಾಟಕದಲ್ಲಿಯೂ ಹೇಳಲೇಬೇಕಾಗಿಲ್ಲ. ಚಿತ್ರ ಮತ್ತು ಶಿಲ್ಪಗಳಲ್ಲಿಯೂ ಅಷ್ಟೇ. ಈಚೆಗೆ ಅವನ ವ್ಯಾಪ್ತಿ ಪಾಶ್ಚಾತ್ಯ ರಾಷ್ಟ್ರಗಳಿಗೂ ಹಬ್ಬಿದೆ. ಹರೇ ಕೃಷ್ಣ !

ಈ ದೃಷ್ಟಿಯಿಂದ ಕೃಷ್ಣನನ್ನು ಒಬ್ಬ ಜನತಾ ದೇವತೆ ಎಂದು ಹೇಳಬಹುದು. ಹಿಂದೂ ದೇವತಾ ಸಮೂಹದಲ್ಲಿ ಅನೇಕರಿದ್ದಾರೆ. ಕೆಲವು ದೇವತೆಗಳನ್ನು ಕಂಡರೆ ಬೆಚ್ಚಿ ಬೀಳುವಂತಾಗುತ್ತದೆ. ಭಯವುಂಟಾಗುತ್ತದೆ. ಆದರೆ ಕೃಷ್ಣನನ್ನು ಕಂಡರೆ ಭಕ್ತಿಯುಂಟಾಗುತ್ತದೆ ನಿಜ. ಜೊತೆಗೆ ಮಮತೆಯೂ ಉಕ್ಕುತ್ತದೆ. ಆತ್ಮೀಯತೆಯು ಮೂಡುತ್ತದೆ.

ಇದಕ್ಕೇನು ಕಾರಣ? ಇದೇ ಪ್ರಶ್ನೆಯನ್ನು 50 ವರುಷದ ಹಿಂದೆ ಒಬ್ಬ ಬಡ ಪುರಾಣಿಕರನ್ನು ಕೇಳಿದ್ದೆ. ಅವರಿತ್ತ ಉತ್ತರ ಇನ್ನೂ ನೆನಪಿಗೆ ಬರುತ್ತದೆ.

ಕೃಷ್ಣನು ನಮ್ಮ ಅಂದರೆ ಮನುಷ್ಯರಿಗೆ ಸಹಜವಾದ ಭಾವ, ಆಸೆ, ಆದರ್ಶ, ಉದಾತ್ತತೆ ಎಲ್ಲವೂ ಮೂರ್ತೀಭಾವಿಸಿದಂತಹ ವ್ಯಕ್ತಿ. ಬೆಣ್ಣೆ ಕದಿವ ಬಾಲಕನಿಂದ ವಿಶ್ವರೂಪ ತೋರಿದ ಮಹಾನ್ ಶಕ್ತಿಯವರೆಗೂ ಆ ವ್ಯಕ್ತಿತ್ವ ವ್ಯಾಪಿಸಿದೆ. ಆತನಲ್ಲಿ ನಮ್ಮಲ್ಲಿ ಇಲ್ಲದ ನಮಗೆ ಲಭಿಸದ ಎಲ್ಲ ಗುಣಗಳನ್ನೂ ಕಾಣುತ್ತೇವೆ. ಈ ಭಾಗದಲ್ಲಿ ನಮ್ಮ ಮನ ದೇಹ ಅವನಲ್ಲಿ ಬೆರೆಯುತ್ತದೆ. ಮನಸ್ಸಿಗೆ ನೆಮ್ಮದಿ ಬರುತ್ತದೆ. ಕೃಷ್ಣನದು ಮಾನವ ಸಹಜಗುಣಗಳಿರಬಹುದು. ಆದರೆ ಆತನು ಮಾನವನಿಗೆ ಅತೀತನಾದ ವ್ಯಕ್ತಿ. ಎಲ್ಲರ ಭಕ್ತಿ ಮತ್ತು ಪೂಜೆಗೆ ಪಾತ್ರನಾದ ಮಹನೀಯ. ಮನುಷ್ಯರಲ್ಲಿ ಇದೇ ಕೆಲವು ಗುಣಗಳನ್ನು ಕಾಣಬಹುದು ನಿಜ. ಆದರೆ ಇಲ್ಲಿ ಭೇದ

ವಿವಾದಗಳಿಗೆ ಆಸ್ಪದವಿದೆ. ಎಲ್ಲರಿಗೂ ಅತೀತನಾದ ಕೃಷ್ಣನ ವಿಷಯದಲ್ಲಿ ನಮ್ಮ ಭಾವನೆ ಆ ರೀತಿ ಇಲ್ಲ. ಉದಾತ್ತವಾಗಿಯೇ ಇರುತ್ತದೆ. ಅದಕ್ಕೆ ಆತನ ಬಗೆಗೆ ಭಕ್ತಿಯಷ್ಟೇ ಮಮತೆಯೂ ಉಕ್ಕುತ್ತದೆ. ಇದನ್ನೇ ಕೃಷ್ಣಲೀಲಾ ವರ್ಣನೆಯ ದಾಸರಪದಗಳನ್ನು ಹಾಡಿ ಮಕ್ಕಳನ್ನು ಮುದ್ದಿಸುವ, ಮಲಗಿಸುವ, ಬೆಚ್ಚಿಸುವ ತಾಯಂದಿರಲ್ಲಿಯೂ ಕಾಣಬಹುದು.

ಕೃಷ್ಣ ಕಲ್ಪನೆ ಹಳೆಯದಾದರೂ ಶಿಲ್ಪ ಮತ್ತು ಚಿತ್ರಗಳಲ್ಲಿ ಅದು ಮೂರ್ತೀ ಭವಿಸಿದುದು ಸ್ವಲ್ಪ ನಿಧಾನವಾಗಿಯೇ ಎನ್ನಬಹುದು. ಕುಶಾನರ ಮತ್ತು ಗುಪ್ತರ ಕಾಲದ ಶಿಲ್ಪಗಳಲ್ಲಿ ಕಾಣಬಂದರೂ ಅದು ಅಂದವಾಗಿ ಮೂರ್ತೀ ಭವಿಸಿದುದು ಹೊಯ್ಸಳ ಶಿಲ್ಪಗಳಲ್ಲಿ. ಕಲೆಗೆ ಭಾಗವತದ ಅನೇಕ ಕಥಾ ಸಂದರ್ಭಗಳು ವಸ್ತುವಾಗಿವೆ. ಆದರೆ ಸಂಖ್ಯೆಯನ್ನು ಗಮನಿಸಿದರೆ - ಅಂಬೆಗಾಲು ಕೃಷ್ಣ, ಬೆಣ್ಣೆ ಕೃಷ್ಣ, ಕೊಳಲು ಕೃಷ್ಣ, ಗೋವರ್ಧನಗಿರಿಧಾರಿ, ಗೋಪಿಕಾ ವಸ್ತ್ರಾಪಹರಣ, ರಾಸಕ್ರೀಡೆ, ಗೀತೋಪದೇಶ ಮುಂತಾದುವು ಭಾರತದ ಎಲ್ಲ ಭಾಗದಲ್ಲಿಯೂ ಕಲಾ ನಿರೂಪಣೆಯಲ್ಲಿ ಜನಪ್ರಿಯವಾದಂತಿವೆ.

ಈ ದೃಷ್ಟಿಯಿಂದ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಕೃಷ್ಣ ಕಥಾಶಿಲ್ಪಗಳು ಸುಂದರವಾದವು, ಬಹು ಅಲಂಕಾರಪೂರಿತವಾದವು, ಜಾಣ್ಮೆಯಿಂದ ಕೂಡಿದಂತಹವು. ಹಳೇಬೀಡಿನ ''ಗೋವರ್ಧನ ಗಿರಿಧಾರಿ'' ಯಾಗಲೀ, ಅಥವಾ ವೇಣುಗೋಪಾಲ ಶಿಲ್ಪವಾಗಲೀ, ರೂವಾರಿಗಳು ಸಾಧ್ಯವಾದಷ್ಟು ವಿವರಗಳನ್ನು ತುಂಬಲೆತ್ನಿಸಿದಾರೆ. ಎರಡರಲ್ಲಿಯೂ ಪ್ರಾಯಶಃ ಅಂಡಾಕಾರವಾದ ಆವರಣ, ಅದರ ಮಧ್ಯೆ ಪ್ರಧಾನವಾಗಿ ಒಂದರಲ್ಲಿ ಎಡಗೈಯಿಂದ ಬೆಟ್ಟ ಎತ್ತಿ ನಿಂತ ಕೃಷ್ಣ ಸುತ್ತಲೂ ಹಂತ ಹಂತವಾಗಿ ಮಳೆಯಿಂದ ಆಶ್ರಯ ಪಡೆದ ಗೋಪಾಲಕರು, ಹಸುಗಳು. ಪ್ರಧಾನ ವ್ಯಕ್ತಿ ಕೃಷ್ಣನಾದುದರಿಂದ ಆತನದು ಎಲ್ಲರಿಗಿಂತ ದೊಡ್ಡದಾದ ಮತ್ತು ಎತ್ತರವಾದ ಆಕಾರ. ಎರಡೂ ಪಾರ್ಶ್ವಗಳಲ್ಲಿಯೂ ಕಿರಿದಾದ ಆಕೃತಿಗಳು, ಒಳ್ಳೆಯ ಗ್ರಾಮ್ಯ ಕಳೆಯಿರುವ ಗೋಪಾಲಕರು, ನಾನಾ ಮುಖಭಂಗಿ ತೋರುವ ಗೋವುಗಳು, ಸಾಂಪ್ರದಾಯಿಕ ರೂಪ ತಳೆದ ಮರ, ಗಿಡ, ಬಳ್ಳಿಗಳು. ಉಳಿಯು ಇಲ್ಲಿ ಕುಂಚದಂತೆ ಕೆಲಸ ಮಾಡಿದೆ. ವೇಣುಗೋಪಾಲ ಶಿಲ್ಪವೂ ಅಷ್ಟೇ. ಸ್ವಸ್ತಿಕ ಪಾದದಲ್ಲಿ ನಿಂತು ಕೊಳಲು ಹಿಡಿದ ವೈಖರಿ ವ್ಯಾಸರಾಜರ ಕೊಳಲನೂದುವ ಚದುರ ಎಂಬ ಪದದಲ್ಲಿ ಬರುವ ವರ್ಣನೆಯನ್ನು ಕಲ್ಲಿನಲ್ಲಿ ಹೆಪ್ಪುಗಟ್ಟಿಸಿದಂತಿದೆ. ಎರಡೂ ಶಿಲ್ಪಗಳಲ್ಲಿಯೂ ಆದಷ್ಟು ವಸ್ತು ಅಡಕ ಮಾಡಲು ವಿಷಮ ಪ್ರಮಾಣದ ಬಳಕೆಯಾಗಿದೆ.

ಶಿಲಾಶಿಲ್ಪದಲ್ಲಿ ಇನ್ನೊಂದು ಮಾದರಿ ಚೋಳರದು ಹಾಗೂ ವಿಜಯನಗರದ ಕಾಲದವು. ಆಕಾರ ಇನ್ನೂ ಸ್ವಲ್ಪ ಸರಳ. ಅವಯವಗಳು ಮಾಟವಾಗಿರುತ್ತವೆ. ಚಿತ್ರದಲ್ಲಿರುವ ಶಿಲ್ಪವೂ ಪುರಂದರ ದಾಸರ ''ಆಡಿದನೋ ರಂಗ'' ಎಂಬ ಪದವು ನೆನಪಿಗೆ ಬರುತ್ತದೆ. ವಿಜಯನಗರದ ಕಾಲದ್ದು. ಹಂಪೆಯ ಹಜಾರರಾಮಸ್ವಾಮಿ ದೇವಸ್ಥಾನದಲ್ಲಿದೆ. ಇಲ್ಲಿ ಕೃಷ್ಣನ ಎರಡೂ ಪ್ರಕಾರಗಳಲ್ಲಿಯೂ ವೈವಿಧ್ಯತೆ ಇದೆ. ಮಗುವಿನ ಸರಳತೆ ಮತ್ತು ಮುಗ್ಧತೆ

ಅನುಭವವಾಗುವುದು. ಕಾಳೀಯ ಮರ್ದನದ ತಿರುವು ಮತ್ತು ಅಂಗವಿನ್ಯಾಸ ಆಕರ್ಷಣೀಯವಾಗಿದೆ. ಈ ರೀತಿಯ ಲೋಹ ಶಿಲ್ಪಗಳು ಅನೇಕ ಮನೆಗಳಲ್ಲಿ ಪೂಜಿಸಲ್ಪಡುತ್ತಿವೆ. ಕೆಲವು ಲೋಹಶಿಲ್ಪಗಳು ಅಪೂರ್ವ ಕೌಶಲ್ಯದಿಂದ ಕೂಡಿವೆ. ಕಾಳಿಂಗನ ಎತ್ತಿದ ಬಾಲವನ್ನು ಎಡಗೈಯ್ಯಲ್ಲಿ ಹಿಡಿದು ಹೆಡೆಗೂ ಪಾದಕ್ಕೂ ಸ್ವಲ್ಪ ಸ್ಥಳಬಿಟ್ಟ ಶಿಲ್ಪಗಳನ್ನು ನೋಡಿದ್ದೇವೆ.

ಚಿತ್ರಕಲೆಯಲ್ಲಿ ಕೃಷ್ಣ ಕಥೆ ಇನ್ನೂ ವರ್ಣಮಯ ಹಾಗೂ ರಸಮಯವಾಗಿ ನಿರೂಪಿತವಾಗಿದೆ. ಬಾಲಲೀಲೆಗಳು ವೈವಿಧ್ಯಮಯವಾಗಿ ಅನೇಕ ಚಿತ್ರಗಳಲ್ಲಿ ನಿರೂಪಿತವಾಗಿವೆ. ಭಾರತದ ವಿವಿಧ ಭಾಗಗಳಲ್ಲಿ ರಚಿತವಾದ ಚಿತ್ರಗಳಲ್ಲಿ ವಸ್ತು ಒಂದೇ ಆದರೂ ನಿರೂಪಣೆಯ ಶೈಲಿಗಳಲ್ಲಿ ಕೆಲವು ವೇಳೆ ಸಂಪ್ರದಾಯದಲ್ಲಿಯೂ ಸಹ ಭಿನ್ನತೆ ಅನುಭವವಾಗುತ್ತದೆ. ಉತ್ತರ ಭಾರತದಲ್ಲಿ ರಚಿತವಾದ ಚಿತ್ರಗಳಲ್ಲಿ ಅಂದರೆ ಮಾಳವ, ರಾಜಾಸ್ತಾನ, ಪಹಾಡಿ ಮುಂತಾದ ಶೈಲಿಗಳಲ್ಲಿ ವ್ಯಕ್ತಿಗಳ ಆಕೃತಿಗಳು ಅಂದಿನ ನಿತ್ಯ ಜೀವನದಲ್ಲಿದ್ದ ರೀತಿ ಚಿತ್ರಿತವಾಗಿರುತ್ತವೆ. ಹಿನ್ನೆಲೆಯ ಭವನಗಳು, ಉಡಿಗೆ ತೊಡಿಗೆಗಳು ಮುಂತಾದುವುಗಳು ಅಂದು ಉಪಯೋಗದಲ್ಲಿದ್ದ ರೀತಿಯಲ್ಲಿ ಚಿತ್ರಿತವಾಗಿರುತ್ತವೆ. ಕೃಷ್ಣನಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸ. ಪುರಾಣ ವರ್ಣನೆಗೆ ಅನುಸಾರ ಕಪ್ಪು ಬಣ್ಣದಿಂದ ಕೂಡಿ ಪೀತಾಂಬರವನ್ನುಟ್ಟು ನವಿಲು ಗರಿಗಳಿಂದ ಅಲಂಕೃತವಾದ ಕಿರೀಟವನ್ನಿಟ್ಟು ಕೊಳಲನ್ನು ಹಿಡಿದಿರುತ್ತಾನೆ.

ರಾಗಮಾಲಾ ನಾಯಕ

ಮಾಳವ ಶೈಲಿಗಳ ಚಿತ್ರಗಳಲ್ಲಿ ಆಕೃತಿಗಳು ಸರಳ ಸ್ವಲ್ಪ ಒರಟು. ರಾಜಾಸ್ತಾನ ಶೈಲಿಯದು ಇನ್ನೂ ಸ್ವಲ್ಪ ಪರಿಷ್ಕಾರ. ಆದರೆ ಪಹಾಡಿ ಶೈಲಿಯ ಚಿತ್ರಗಳಲ್ಲಿ ಬಹು ಸೊಗಸಾಗಿ ನಿರೂಪಿತವಾಗಿದೆ. ಕೃಷ್ಣ, ಗೋಪಿಯರು, ಗೋವುಗಳು, ಹಿನ್ನೆಲೆ ಎಲ್ಲವೂ ಸೂಕ್ಷ್ಮವಾಗಿ, ವರ್ಣಶೋಭೆಯಿಂದ, ನಿರ್ಣಯದಿಂದ ಕೂಡಿರುತ್ತವೆ. ಇವುಗಳಲ್ಲಿ ಗೋವರ್ಧನೋದ್ಧಾರ ರಾಸಮಂಡಲ, ವಸ್ತ್ರಾಪಹರಣ ಮುಂತಾದ ವಸ್ತು ನಿರೂಪಣೆ ಬಹು ಸುಂದರ. ಆವರಣವೆಲ್ಲಾ ಬಣ್ಣ ಬಣ್ಣದ ಮಾಟವಾದ ಆಕೃತಿಗಳಿಂದ ತುಂಬಿರುತ್ತದೆ ಮತ್ತು ಒಳ್ಳೆಯ ವ್ಯಾಪಕ ಗುಣದಿಂದ ಕೂಡಿರುತ್ತವೆ. ವಸಂತ, ಮೇಘ, ಹಿಂದೋಳ ಮುಂತಾದ ರಾಗಮಾಲಾ ಚಿತ್ರಗಳ ನಾಯಕ - ಕೃಷ್ಣನೇ, ಆದರೆ ಗೀತ ಗೋವಿಂದದ ಚಿತ್ರಗಳು ಇವೆಲ್ಲವನ್ನೂ ಮೀರಿಸುತ್ತವೆ.

ತಲಾತಲಾಂತರದಿಂದ ಬಂದ ಈ ಕೃಷ್ಣವ್ಯಾಮೋಹ ಇಂದಿನ ಕಲೆಗಾರರನ್ನೂ ಬಿಟ್ಟಿಲ್ಲ. ನಿದರ್ಶನವಾಗಿ ನಂದಲಾಲವಸುರವರು ರಚಿಸಿದ ಯಶೋದಾಕೃಷ್ಣಾ ದಾಕ್ಷಿಣಾತ್ಯ ಮಾದರಿಯನ್ನು ನೆನಪಿಗೆ ತರುತ್ತದೆ. ಆದರೆ ಅಲ್ಪೋನ ಅಥವಾ ರಂಗೋಲಿ ರೀತಿಯ ರೇಖೆಗಳು. ಅದೇ ಜಾಮಿನಿರಾಯ್‌ರವರ ನಿರೂಪಣೆ ಬೇರೆ ರೀತಿಯದು. ದಪ್ಪ ಮತ್ತು ದೃಢವಾದ ರೇಖೆಗಳು. ಒಂದೇ ಮಟ್ಟದ ಮಂದಾದ ಬಣ್ಣಗಳ ಹಚ್ಚುವಿಕೆ ಆಕೃತಿಗಳು ಅನೇಕ ವೇಳೆ ಬಂಕುರಾದ ಹೆಂಚು ಶಿಲ್ಪಗಳ ಸ್ಮೃತಿ ತರುವಂತಿದೆ. ಈ ಕೃಷ್ಣವ್ಯಾಪ್ತಿ ಭಾರತಕ್ಕೇ ಸೀಮಿತವಾಗಿಲ್ಲ.

ಸಮುದ್ರದಾಚೆ ಶ್ರೀಲಂಕೆಯ ಜಾರ್ಜ್‌ಕೀಟ್‌ರವರು ಭ್ರಮಿತರಾಗಿದ್ದಾರೆ. ಅವರ ಗೀತ ಗೋವಿಂದ ಚಿತ್ರಗಳಲ್ಲಿ ದಟ್ಟವಾದ ಸುಲಿವ ರೇಖೆಗಳಿಂದ ದುಂಡು ದುಂಡಾಕೃತಿಯ ಕೃಷ್ಣನು ಮೂಡಿ ಬಂದಿದಾನೆ. ಅವರ ಕಲ್ಪನೆಯಲ್ಲಿ ಕೃಷ್ಣನು ಒಳ್ಳೆಯ ಶೃಂಗಾರ ಪುರುಷ, ಪ್ರೇಮಿ, ಹಾಗೆಯೇ ಧಡೂತಿ ಆಸಾಮಿ. ಹಾಗೆಯೇ ಈಚಿನ ಪೀಳಿಗೆಯ ನಮ್ಮ ಚಿತ್ರಕಾರರಲ್ಲಿಯೂ ಕೃಷ್ಣ ವ್ಯಾಮೋಹಪಿದ್ದವರಿದ್ದಾರೆ. ನಿದರ್ಶನವಾಗಿ ಮಂಜಿತ್‌ಬಾವ 1982ರ ಐದನೆಯ ಟ್ರಿನಾಲೆಯಲ್ಲಿ ಅವರ ಕೃಷ್ಣ ಮತ್ತು ಗೋವುಗಳ ದೊಡ್ಡ ಚಿತ್ರ ಪ್ರದರ್ಶಿತವಾಗಿತ್ತು. ಇಲ್ಲಿನ ಕೊಳಲನೂದುವ ಕೃಷ್ಣ ಸಾಂಪ್ರದಾಯಿಕ ಲಕ್ಷಣಗಳಿಂದ ಕೂಡಿಲ್ಲ. ನಿಜವಾದ ಒಬ್ಬ ಗ್ರಾಮೀಣ ಗೋಪಾಲಕನಂತೆಯೇ ಇದ್ದಾನೆ. ಆದರೆ ಹಸುಗಳದು ಪ್ರಕೃತಿಗೆ ವಿರುದ್ಧವಾದ ಆಕಾರ ಮತ್ತು ನಡವಳಿಕೆ ಇನ್ನೂ ಬಲಿಯದ ಭ್ರೂಣಗಳಂತಿವೆ. ಅಥವಾ ಸ್ವಲ್ಪ ಎಲ್.ಎಸ್.ಡಿ. ಸೇವಿಸಿದಾಗ ಈ ರೀತಿ ಕಾಣಬರಬಹುದು.

ಇಷ್ಟೂ ನಿಯಮಬದ್ಧ ಚಿತ್ರಕಲೆಯಾದರೆ ಜಾನಪದ ಚಿತ್ರಕರಿಗೂ ಕೃಷ್ಣನು ಬಹುಪ್ರಿಯ ಅದರಲ್ಲಿಯೂ ಗೋಪಿಕಾ ವಸ್ತ್ರಾಪಹರಣ ಸಂದರ್ಭ ಬಗೆಬಗೆಯಲ್ಲಿ ನಿರೂಪಿತವಾಗಿದೆ. ಆದರೆ ಕಲ್ಪನೆ ಹಾಗೂ ತಾಂತ್ರಿಕ ವಿಧಾನದಲ್ಲಿ ತೊಗಲುಗೊಂಬೆಯ ವಸ್ತ್ರಾಪಹರಣ ದೃಶ್ಯ ಅದ್ವಿತೀಯವಾದುದು. ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★

ಪ್ರಜಾವಾಣಿ, 1983

41. ಅಸಾಧಾರಣ ಕೌಶಲ್ಯದ ಕಲಂಕಾರಿ

ಆಂಧ್ರ ಪ್ರದೇಶಕ್ಕೆ ವಿಶಿಷ್ಟವೆನಿಸಿದ ಪದಾರ್ಥಗಳಲ್ಲಿ ಮೊದಲು ನೆನಪಿಗೆ ಬರುವುದು ಗುಂಗುರ ಚಟ್ನಿ ಮತ್ತು ಆವಕಾಯಿ ಹಾಗೆಯೇ ಪೊಂಡೂರು ಪಂಚೆಗಳು, ಕೊಂಡಪಲ್ಲಿ ಬೊಂಬೆ ಇತ್ಯಾದಿ. ಈ ವರ್ಗದಲ್ಲಿಯೇ ಬರುವುದು- ಕಲಂಕಾರಿ. ಈ ವಿಧಾನದಲ್ಲಿ ರಚಿತವಾದ ತೂಗುಚಿತ್ರ ಪರದೆಗಳು ತೆಲುಗು ಸೀಮೆಯ ಪುರಾತನ ದೇವಾಲಯಗಳಲ್ಲೆಲ್ಲಾ ಕಾಣಬರುತ್ತವೆ. ಅಲ್ಲದೆ ಅರಮನೆಗಳೂ ಹಾಗೂ ಶ್ರೀಮಂತರ ಸೌಧಗಳಲ್ಲಿಯೂ ಇತ್ತೀಚಿನವರೆಗೂ ಕಾಣಬರುತ್ತಿದ್ದವು. ಆರ್ಥಿಕ ಜೀವನದಲ್ಲಿ ಆದ ಮಹತ್ತರ ಬದಲಾವಣೆಗಳ ಫಲವಾಗಿ ಈ ಪರದೆಗಳು ಆ ಆವರಣಗಳಿಂದ ಹೊರಬಂದು ನಾನಾ ದಿಕ್ಕುಗಳಲ್ಲಿ ಹರಡಲಾರಂಭವಾಗಿ ದೇಶ ವಿದೇಶಗಳಲ್ಲಿ ಜನಪ್ರಿಯವಾಗುತ್ತಿವೆ.

ಕಲಂಕಾರಿ ತೂಗು ಪರದೆಗಳು ಚಿತ್ರಮಯ ಬಟ್ಟೆ, ಗೋಡೆಗಳ ಮೇಲೆ ಪರದೆಗಳ ಹಾಗೆ ತೂಗು ಹಾಕಲಾಗುತ್ತದೆ. ಕೆಲವು ವೇಳೆ ರಥಗಳ ಮೇಲೆಯೂ ಆಲಂಕಾರಿಕವಾಗಿ ತೂಗುಹಾಕುವುದುಂಟು. ಸಂದರ್ಭಕ್ಕೆ ಮತ್ತು ಅವಶ್ಯಕತೆಗೆ ತಕ್ಕಂತೆ ನಾನಾ ಅಳತೆಯಲ್ಲಿ ಈ

ಚಿತ್ರಗಳು ರಚಿತವಾಗಿರುತ್ತವೆ. ಎರಡು ಅಡಿ ಚೌಕದಿಂದ ಹಿಡಿದು ಹತ್ತು ಇಪ್ಪತ್ತು ಅಡಿ ವಿಸ್ತಾರದ ಆವರಣ ಪಟಗಳವರೆಗೂ ಇರುವುದುಂಟು.

ಪಟಗಳ ತುಂಬಾ ದೇವ ದೇವತಾ ಮೂರ್ತಿಗಳು ಚಿತ್ರಿತವಾಗಿರುತ್ತವೆ. ಅಂಚುಗಳಲ್ಲಿಯೂ ಸಾಂಪ್ರದಾಯಿಕ ರೀತಿಯ ಬಳ್ಳಿಗಳು. ಮಧ್ಯೆ ಮಧ್ಯೆ ಕಿರು ದೇವತಾ ಮೂರ್ತಿಗಳು. ಒಂದೊಂದು ವೇಳೆ ರಾಮಾಯಣ, ಭಾರತದ ವಿವಿಧ ಕಥಾಪ್ರಸಂಗಗಳು ಹೀಗೆ ಚಿತ್ರಿತವಾಗಿರುತ್ತವೆ. ಈ ಚಿತ್ರಗಳನ್ನು ನೋಡಿದಾಕ್ಷಣ ನಮಗೆ ಪುರಾತನ ಭಿತ್ತಿಚಿತ್ರಗಳ ನೆನಪು ಬರುತ್ತದೆ. ಅದಕ್ಕೆ ಕಾರಣವೂ ಇದೆ. ಈ ಕಲಂಕಾರಿ ಕಲೆ ವಿಜಯನಗರ ಕಾಲದ ಭಿತ್ತಿಚಿತ್ರಗಳಿಂದ ಪ್ರಭಾವಿತವಾದುದು ಸ್ಪಷ್ಟವಾಗಿ ಕಾಣಬರುತ್ತದೆ. ವಿವಿಧ ಮೂರ್ತಿಗಳ ಭಾವ ಭಂಗಿಗಳು, ವಿನ್ಯಾಸ, ಹಿನ್ನೆಲೆಯ ವಸ್ತುಗಳು ಮುಂತಾದವುಗಳನ್ನು ಗಮನಿಸಿದಾಗ ನಮಗೆ ಹಂಪೆಯ ವಿರೂಪಾಕ್ಷ ದೇವಾಲಯ ಅಥವಾ ಲೇಪಾಕ್ಷಿ ದೇವಾಲಯಗಳ ಭಿತ್ತಿಚಿತ್ರಗಳಂತೆಯೇ ಅನುಭವವಾಗುವುದು. ಅಲ್ಲಿ ಚಿತ್ರ ರಚನಾ ಕ್ಷೇತ್ರ- ಗೋಡೆ. ಇಲ್ಲಿ ಬಟ್ಟೆ.

ಆದರೆ ಕಲಂಕಾರಿ ಚಿತ್ರಗಳಲ್ಲಿ ಕಾಣುವ ವಿಶೇಷವೆಂದರೆ ರೇಖಾ ಪ್ರಾಬಲ್ಯ. ಪ್ರತಿಯೊಂದೂ ವಸ್ತುವಿನ ರೇಖೆಯೂ ಸ್ಪಷ್ಟವಾಗಿ ಕಾಣುತ್ತದೆ. ಚಿತ್ರದ ಮೌಲ್ಯ ಮತ್ತು ಚಿತ್ರಕನ ಕೌಶಲ್ಯವನ್ನು ಅನುಸರಿಸಿರುತ್ತದೆ– ರೇಖಾ ಪ್ರಮಾಣ. ಜೇಡನ ಬಲೆಯ ತಂತಿಯಷ್ಟು ನವಿರಾದ ಪ್ರಮಾಣದಿಂದ ಹಿಡಿದು ದಪ್ಪ ದಾರದ ಅಗಲದವರೆಗೂ ರೇಖಾ ಪ್ರಮಾಣ ಕಂಡುಬರುತ್ತದೆ. ಸಾಧಾರಣ ಬೆಲೆಯ ಪಟಗಳಲ್ಲಿ ರೇಖೆ ದೃಢ ಮತ್ತು ದಪ್ಪ. ಹೆಚ್ಚು ಬೆಲೆಯು ಸೂಕ್ಷ್ಮ ರಚನೆಗಳಿಂದ ಅಲಂಕೃತವಾದ ಪಟಗಳಲ್ಲಿ ರೇಖೆ ನವಿರು. ಚಿತ್ರಕನ ಸಿದ್ಧಿ ಮತ್ತು ಕೌಶಲ್ಯವನ್ನು ಎತ್ತಿ ಸಾರುತ್ತದೆ. ಅದು ಯಾವ ಬೆಲೆಯ ಪಟವೇ ಆಗಲಿ, ಕಲಂಕಾರಿ ವಸ್ತ್ರಗಳಲ್ಲಿ ಮತ್ತು ಪಟಗಳಲ್ಲಿ ರೇಖಾ ಪ್ರಾಧಾನ್ಯ ಸ್ಪಷ್ಟವಾಗಿ ಅನುಭವವಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಅದರ ರಚನಾ ವಿಧಾನ.

ಹೆಸರೇ ಸ್ಪಷ್ಟಪಡಿಸುವಂತೆ ಕಲಂಕಾರಿ ಚಿತ್ರ ರಚನೆಯ ಮುಖ್ಯ ಉಪಕರಣ- ಕಲಂ. ಅಂದರೆ ಪೇನಾ. ಅದರಿಂದ ಚಿತ್ರರಚನೆ ಪ್ರಾರಂಭವಾಗುತ್ತದೆ. ಕಲಂ ಅಥವಾ ಲೇಖಣಿ ವಸ್ತುಗಳ ಬಾಹ್ಯರೇಖೆಯನ್ನು ಎಳೆದು ರೂಪಿಸುತ್ತದೆ. ಇವುಗಳ ಅಂತರದಲ್ಲಿ ಬಣ್ಣಗಳನ್ನು ಆಯಾ ವಸ್ತು ಹಾಗೂ ಸಂದರ್ಭಕ್ಕನುಸಾರವಾಗಿ ಹಚ್ಚಲಾಗುತ್ತದೆ. ಈ ಚಿತ್ರಗಳನ್ನು ರಚಿಸುವುದು ಹತ್ತಿಯ ಬಟ್ಟೆಯ ಮೇಲೆ. ಇದರದೇ ಒಂದು ಪ್ರತ್ಯೇಕ ವಿಧಾನವಿದೆ. ಕಲಂಕಾರಿ ಚಿತ್ರಕನು ಮೊದಲು ತಾನು ರಚಿಸಬೇಕೆಂದಿರುವ ಪಟದ ಅಳತೆಗನುಸಾರ ಕೋರಾ ಬಟ್ಟೆಯನ್ನು ಸಿದ್ಧಪಡಿಸಿಕೊಳ್ಳುವನು. ಅನಂತರ ಅದಕ್ಕೆ ಒಂದು ಲೇಪನ. ಈ ಲೇಪನ ಸಾಮಗ್ರಿ ಹಾಲು ಮತ್ತು ಅಳಲೆಕಾಯಿಯ ರಸ ಬೆರೆಸಿ ಸಿದ್ಧವಾಗುತ್ತದೆ. ಅನಂತರ ಅದನ್ನು ಬಟ್ಟೆಯ ಮೇಲೆ ಬಳಿದು ಒಣಗಿಸಲಾಗುತ್ತದೆ. ಒಣಗಿದ ಬಟ್ಟೆಯನ್ನು ಹರವಿ ತಾನು ರಚಿಸಬೇಕೆಂದಿರುವ ವಸ್ತುವಿನ ಬಾಹ್ಯ ರೇಖೆಯನ್ನು ಎಳೆಯಲು ಪ್ರಾರಂಭಿಸುತ್ತಾನೆ. ಈ ರೇಖೆಯನ್ನು ಎಳೆಯಲು ಉಪಯೋಗಿಸುವ ಉಪಕರಣವೇ ಕಲಂ, ಲೇಖಣಿ. ಮೊನಚಾದ ಈ ಲೇಖಣಿಯನ್ನು ಬೆಲ್ಲದ

ನೀರಿನಲ್ಲಿ ಅದ್ದಿ ರೇಖೆ ಎಳೆಯಲು ಪ್ರಾರಂಭ. ದ್ರವ್ಯದ ಪ್ರವಾಹದ ಹತೋಟಿಗೆ ಲೇಖನಿಯಲ್ಲಿಯೇ ವಿಶೇಷ ವ್ಯವಸ್ಥೆ ಇರುವುದು. ಈ ರೇಖೆಗಳನ್ನು ಎಳೆದ ಸ್ವಲ್ಪ ಹೊತ್ತಿಗೆ ಯಾವುದೋ ರಾಸಾಯನಿಕ ಕ್ರಿಯೆಯಿಂದ ಅಚ್ಚ ಕಪ್ಪು ಬಣ್ಣಕ್ಕೆ ತಿರುಗುವುದು. ಇದರ ನಂತರ ರೇಖೆಗಳ ಅಂತರದಲ್ಲಿರುವ ಸ್ಥಳಕ್ಕೆ ಬಣ್ಣಗಳನ್ನು ಹಚ್ಚಲು ಪ್ರಾರಂಭ.

ಅವು ರಾಸಾಯನಿಕ ಬಣ್ಣಗಳಲ್ಲ, ಸಸ್ಯ ಮತ್ತು ಖನಿಜ ಮೂಲದಿಂದ ಬಂದವು. ಬೆಳಕು ನೆರಳು ವಿನ್ಯಾಸವಿಲ್ಲದೆ ಚಪ್ಪಟೆಯಾಗಿ ಲೇಪಿಸಲಾಗುವುದು. ದಟ್ಟವಾಗಿ ಸ್ವಚ್ಛವಾಗಿರುತ್ತವೆ. ಈ ಚಿತ್ರಗಳಲ್ಲಿ ಕೆಂಪು, ಹಳದಿ, ನೀಲಿ, ಹಸಿರು ಪ್ರಧಾನ. ಕೆಲವು ವೇಳೆ ಕಪ್ಪೂ ಉಂಟು. ವರ್ಣಲೇಪನದ ನಂತರ ಇಡೀ ಬಟ್ಟೆಯನ್ನು ಹರಿಯುವ ನೀರಿನಲ್ಲಿ ತೊಳೆಯುವರು. ಅದರ ಮೇಲೆ ಪಟಿಕವನ್ನು ಕರಗಿಸಿದ ನೀರನ್ನೂ ಹರಿಸುವರು. ಇದರ ಪರಿಣಾಮ ಹೆಚ್ಚಿನ ಬಣ್ಣ ಹಾಗೂ ಲೇಪವೆಲ್ಲಾ ತೊಳೆದು ಹೋಗಿ ಚಿತ್ರಕ್ಕೆ ಒಂದು ರೀತಿಯ ಮೃದು ಕಾಂತಿ ಬರುತ್ತದೆ. ಬಹುತೇಕ ಕಾವಿ ಛಾಯೆ ಆವರಿಸಿದಂತಿರುತ್ತದೆ. ಚಿತ್ರಗಳ ರೇಖೆಗಳೂ ಸ್ಪಷ್ಟಗೊಂಡು ವಸ್ತುವೂ ಕಣ್ಣಿಗೆ ಕಟ್ಟುವಂತೆ ರೂಪುಗೊಳ್ಳುತ್ತದೆ.

ಭಾರತದ ಕೆಲವು ಭಾಗಗಳಲ್ಲಿಯೂ ಕಲಂಕಾರಿ ಪ್ರಚಲಿತವಿದೆ. ಆದರೆ ಅದು ವಿಶೇಷವಾಗಿ ಕೇಂದ್ರೀಕೃತವಾಗಿರುವುದು ಆಂಧ್ರ ದೇಶದಲ್ಲಿ. ಅದರಲ್ಲಿಯೂ ಪುರಾತನ ಪುಣ್ಯಕ್ಷೇತ್ರವಾದ ಕಾಳಹಸ್ತಿಯಲ್ಲಿ. ಅಲ್ಲಿಹಲವಾರು ಕುಟುಂಬಗಳು ತಲತಲಾಂತರದಿಂದ ಈ ಕಲೆಯನ್ನು ಕೃಷಿಮಾಡಿಕೊಂಡು ಬಂದಿವೆ. ಅಂತಹದೊಂದು ಜೊನ್ನಲಗಡ್ಡ ಮನೆತನ. ಈ ಮನೆತನದಲ್ಲಿ ಬಂದ ಗುರಪ್ಪನವರು ಅಸಾಧಾರಣ ಪ್ರತಿಭಾಶಾಲಿಯೆಂದು ರಾಷ್ಟ್ರ, ಅಂತರರಾಷ್ಟ್ರ ಮಟ್ಟದಲ್ಲಿ ಮಾನಿತರಾಗಿದ್ದಾರೆ. ಕರ್ನಾಟಕ ಕ್ರಾಫ್ಟ್ ಕೌನ್ಸಿಲ್‌ನವರು ಈಚೆಗೆ ಈ ಪುರಾತನ ಕಲಂಕಾರಿ ಕಲೆಯ ರಚನಾ ವಿಧಾನದ ಪ್ರದರ್ಶನ ಏರ್ಪಡಿಸಿದ್ದರು. ಸ್ಥಳ : ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು. ಈ ಕಾರ್ಯಕ್ರಮದಲ್ಲಿ ಜೊತೆಗೂಡಿದುದು ಕೇಂದ್ರ ಹಸ್ತ ಶಿಲ್ಪ ಮಂಡಳಿಯ ಬೆಂಗಳೂರು ಪ್ರಾದೇಶಿಕ ರಚನಾ ಮತ್ತು ತಾಂತ್ರಿಕ ಅಭಿವೃದ್ಧಿ ಕೇಂದ್ರ.

ಪ್ರದರ್ಶನ ನೀಡಿದವರು- ಜೆ.ವೇಣುಗೋಪಾಲ್. ಮೇಲೆ ಹೇಳಿದ ಪ್ರತಿಭಾವಂತ ಗುರಪ್ಪನವರ ತಮ್ಮ. ಈ ಅಭಿವೃದ್ಧಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಮನೆತನ ಕಲಂಕಾರಿಯಲ್ಲಿ ಒಳ್ಳೆಯ ಸಿದ್ಧಿ, ನಿಯುಕ್ತ ವಿಧಾನದಂತೆ ಸಿದ್ಧಪಡಿಸಿದ ಅರಿವೆಯನ್ನು ಹರಡಿ ಕಲಂನಿಂದ ರೇಖಾಚಿತ್ರ ರಚನೆ ಪ್ರಾರಂಭಿಸಿದರು. ಅಂದಿಗೆ ಅಷ್ಟಕ್ಕೇ ಮುಕ್ತಾಯ. ಈ ಕಲಂಕಾರಿ ಪ್ರದರ್ಶನಕ್ಕೆ ಒಂದೆರಡು ಇಡೀ ದಿನ ಅವಶ್ಯಕ. ಅದನ್ನು ಎರಡು ಗಂಟೆಗಳಲ್ಲಿ ಮಾಡಲು ಸಾಧ್ಯವಿಲ್ಲ.

ಆದರೆ ಈ ಮೊದಲೇ ರಚಿತವಾಗಿದ್ದ ವೇಣುಗೋಪಾಲ್‌ರವರ ಕಲಂಕಾರಿ ಪಟಗಳನ್ನು ಪ್ರದರ್ಶಿಸಲಾಗಿತ್ತು. ಒಂದು ಗೋಡೆಯನ್ನೆಲ್ಲಾ ಆವರಿಸಿದ, ಬಹುಶಃ ಹದಿನೈದು ಚದುರ ಅಡಿಯ ಚಿತ್ರ- ಕರ್ಣಾರ್ಜುನರ ಕಾಳಗ. ಇದಿರು ಬದಿರು ರಥಗಳಲ್ಲಿ ಕುಳಿತ ಕರ್ಣಾರ್ಜುನರ ಬಾಣಗಳು ಹಾರಾಡುತ್ತಿವೆ. ಬಿಲ್ಲು ಎಳೆಯಲಾಗಿದೆ. ಒಬ್ಬೊಬ್ಬರ ಮೈಬಣ್ಣ ಬೇರೆ ಬೇರೆ.

ಇನ್ನೊಂದು ರಾಮ ಪಟ್ಟಾಭಿಷೇಕ. ಇಲ್ಲಿಯೂ ಹೀಗೆಯೇ. ದೇವತಾ ಮೂರ್ತಿಗಳೆಲ್ಲಾ ಶಿಲ್ಪಶಾಸ್ತ್ರ ಸಂಪ್ರದಾಯಕ್ಕನುಸಾರವಾಗಿ ನಿಯುಕ್ತ ಭಾವ ಭಂಗಿಗಳಿಂದ ಕೂಡಿದ್ದುವು. ಎಲ್ಲದರಲ್ಲಿಯೂ ಸೂಕ್ಷ್ಮ ರೇಖಾ ವಿನ್ಯಾಸ ಶ್ಲಾಘನೀಯ. ಆದರೆ ಇದರ ವೈಖರಿ ನೋಡಬೇಕಾದರೆ ನವಗ್ರಹ ಮತ್ತು ದ್ವಾದಶ ರಾಶಿಯ ಪಟಗಮನಿಸಬೇಕು. ಮಧ್ಯದಲ್ಲಿ ಸೂರ್ಯ. ಮೊದಲ ವರ್ತುಳದಲ್ಲಿ ಇತರ ಎಂಟು ಗ್ರಹಗಳು. ಹೊರವರ್ತುಳದಲ್ಲಿ ದ್ವಾದಶಿ ರಾಶಿ. ಇಲ್ಲಿಯ ಮೂರ್ತಿ ರಚನೆಯಲ್ಲಿ ವೇಣುಗೋಪಾಲ್‌ರವರ ಅಸಾಧಾರಣ ಕೌಶಲ್ಯ ಅನುಭವವಾಗುತ್ತಿತ್ತು.

ವೇಣುಗೋಪಾಲ್ ಅನುಸರಿಸುವುದು ತಮ್ಮ ಸಾಂಪ್ರದಾಯಿಕ ಕ್ರಮವನ್ನೇ. ಆದರೆ ಹೊಸ ಪ್ರಯೋಗ ಮಾಡುವ ಹುರುಪೂ ಇದೆ. ಇದಕ್ಕೆ ನಿದರ್ಶನ ಅಲ್ಲಿ ಪ್ರದರ್ಶಿಸಲಾಗಿದ್ದ ಕಲಂಕಾರಿ ಸೀರೆಗಳು. ಕಲಂಕಾರಿಗೆ ಪರಂಪರಾನುಗತವಾಗಿ ಬಂದ ಕ್ಷೇತ್ರ- ಬಟ್ಟೆ. ಆದರೆ ಇಲ್ಲಿ ವೇಣುಗೋಪಾಲ್ ರೇಷ್ಮೆಯನ್ನು ಬಳಸಿದ್ದಾರೆ. ಅದಕ್ಕಾಗಿ ಕ್ಷೇತ್ರ ಪರಿಷ್ಕರಣಕ್ಕೆ ಹೊಸ ವಿಧಾನವನ್ನೂ ಹುಡುಕಬೇಕಾಯಿತು. ರಚನೆಯಲ್ಲಿ ಸ್ವಲ್ಪ ತೊಡಕಾದುದೇ. ಆದರೆ ಫಲಿತಾಂಶ-ಮನಮೋಹಕವಾದುದು. ಸೆರಗಿನ ತುಂಬ ಆಕರ್ಷಣೀಯ ಕುಸುರಿ ಕೆಲಸ ಸಾಂಪ್ರದಾಯಿಕ ಪಕ್ಷಿ ಮತ್ತು ಇತರ ರಚನೆಗಳು. ಅಂಚುಗಳೂ ಹೀಗೆಯೇ. ಅದೆಂತಹ ಕಷ್ಟಸಾಧ್ಯ ಸಾಧನೆ ಎನಿಸದಿರದು. ವೇಣುಗೋಪಾಲ್‌ರವರ ಕಲ್ಪನೆಯ ಪ್ರತೀಕದಂತಿತ್ತು. ಅದಕ್ಕನುಗುಣವಾದ ಬೆಲೆ. ಈ ಕಲಂಕಾರಿ ರೇಷ್ಮೆ ಸೀರೆಗೆ- ಐದು ಸಾವಿರ ರೂ. ಆದರೆ ಒಂದೊಂದು ಅಂಗುಲವೂ ಕಲಂನಿಂದ ರಚಿತವಾದುದೆಂಬುದನ್ನು ಮರೆಯಬಾರದು. ಈ ಕಲಂಕಾರಿ ರಚನಾ ಪ್ರದರ್ಶನ ಒಂದು ಅಪೂರ್ವ ಅನುಭವ. ★ ★ ★ ★ ★ ★ ★ ★ ★

ಪ್ರಜಾವಾಣಿ, 1989

42. ಅವನತಿಯ ಹಾದಿಯಲ್ಲಿ ಬೊಂಬೆಯಾಟ

ಬೊಂಬೆ ಅಥವಾ ಗೊಂಬೆಯ ಹಿನ್ನೆಲೆ ಮಾನವ ಇತಿಹಾಸದಷ್ಟೇ ಪ್ರಾಚೀನವಾದುದು. ಗುಹೆಗಳ ಸೂರು ಅಥವಾ ಗೋಡೆಗಳ ಮೇಲೆ ತನ್ನ ಕಲ್ಪನೆ ಮತ್ತು ಸಾಮರ್ಥ್ಯಕ್ಕನುಸಾರವಾಗಿ ಮಾನವ ಮತ್ತು ಮೃಗಗಳ ಚಿತ್ರಗಳನ್ನು ಬರೆದ ಪ್ರಾಚೀನ ಮಾನವ, ಅದೇ ವಿಧದ ಪ್ರತಿಮೆಗಳೂ ರಚನೆಯನ್ನೂ ಮಾಡಲು ಯತ್ನಿಸಿದುದು ಸಹಜವೇ. ಅಂತಹ ಪ್ರಾಚೀನ ಪ್ರತಿಮೆಗಳೂ ದೊರೆತಿವೆ. ಇವುಗಳ ನಿರ್ಮಾಣದ ಉದ್ದಿಷ್ಯ ವಿಧವಿಧವಾಗಿರಬಹುದು. ಕೇವಲ ಸಂತೋಷಕ್ಕಾಗಿ ತನ್ನ ಪ್ರತಿಕೃತಿಯನ್ನು ರಚಿಸಿರಬಹುದು. ಮಾಟಮಂತ್ರಕ್ಕಾಗಿ ರಚಿತವಾಗಿರಬಹುದು. ಆಟಪಾಟಗಳಿಗೋಸ್ಕರವೂ ರಚಿಸಿರಬಹುದು ಹೇಗೆ ಎಂದು ಹೇಳುವುದು ಕಷ್ಟ. ಇದರಲ್ಲಿ ಬಹುತೇಕ ಪ್ರತಿಮೆಗಳು ಅಖಂಡವಾದುವು. ಕೆಲವೊಂದರ ಅಂಗಗಳು ಬೇರೆ ಬೇರೆ ರಚಿತವಾಗಿದ್ದುದರಿಂದ ಚಲಿಸುವ ಬೊಂಬೆಗಳೂ ರಚಿತವಾಗುತ್ತಿದ್ದುವೋ ಎಂಬ ಸಂಶಯವೂ

ಬರುವುದುಂಟು. ಅದೇನೇ ಇರಲಿ. ತನ್ನ ಜೀವನ ವ್ಯಾಪಾರವನ್ನು ಈ ಕಿರುಕೃತಿಗಳಲ್ಲಿ ಆಡಿಸಿ ಸಂತೋಷಪಡುವ ಮನುಷ್ಯ ಸ್ವಭಾವ ಬಹು ಹಳೆಯದು ಎಂದು ಹೇಳಬಹುದು.

ಬೊಂಬೆಗಳಲ್ಲಿ ಎರಡು ವಿಧ - ಅಚಲವಾದುದು. ಚಲಿಸುವಂತಹುದು. ಎರಡನೆಯದರ ಚಲನೆ ಹಿಡಿದು ಮಾಡುವುದು ಮತ್ತು ದೂರದಿಂದ ನಿಯುಕ್ತ ಮಾಧ್ಯಮದ ಮೂಲಕ ಮಾಡಿಸುವುದು – ಎರಡು ವಿಧ. ಈ ಮಾಧ್ಯಮಗಳೂ ವಿವಿಧ ರೀತಿಯವು. ಸೂತ್ರ, ಸಲಾಕಿ ಮತ್ತು ಕಡ್ಡಿ. ಹೀಗೆ ದೂರ ನಿರ್ದೇಶನದಿಂದ ಚಲಿಸುತ್ತಾ ಮಾನವ ರೀತಿನೀತಿಗಳನ್ನು ನಿರೂಪಿಸುತ್ತಿದ್ದ ಬೊಂಬೆಯಾಟಗಳೂ ಬಹು ಪ್ರಾಚೀನವಾದವು. ಹಳೆಯ ಸಾಹಿತ್ಯದಲ್ಲಿ ಇವುಗಳ ಪ್ರಸ್ತಾಪ ಬರುತ್ತದೆ – ಬಹುತೇಕ ಉಪಮೆಯ ರೂಪದಲ್ಲಿ. ಅಪರೂಪವಾಗಿ ನೇರ ವರ್ಣನೆಯೂ ಉಂಟು.

ನಿದರ್ಶನವಾಗಿ – ಬಿತ್ತರದಿಂ ಜಳಯಂತ್ರಮನೊತ್ತುವ ಕಾಂತಾಳಿ ಪುತ್ರಿಕಾ ಸಂತತಿಯುಂ ಎಂದು ಬರೆಯುತ್ತಾನೆ ಅಗ್ಗಳದೇವ ತನ್ನ ಚಂದ್ರಪ್ರಭ ಪುರಾಣದಲ್ಲಿ. ಇದೊಂದು ವಿಶೇಷ ದೃಶ್ಯ. ಇಲ್ಲಿ ಪುತ್ರಿಕಾ ಸಂತತಿಯೆಂದರೆ ಗೊಂಬೆಗಳ ಗುಂಪು. ಜಲಯಂತ್ರವನ್ನು ನಡೆಸುವ ಸಂದರ್ಭ. ನೀರನ್ನೆತ್ತಿ ಹಾಯಿಸುತ್ತಿರಬಹುದು ಅಥವಾ ಕಾರಂಜಿಗೆ ನೀರನ್ನೊದಗಿಸುತ್ತಿರಬಹುದು. ಇದರಿಂದ ಗೊಂಬೆಗಳನ್ನು ಕೇವಲ ಮನರಂಜನೆಗೆ ಆಟವಾಡಿಸುವುದೊಂದೇ ಅಲ್ಲದೆ ಬೇರೆ ಕೆಲಸಗಳಿಗೂ ಉಪಯೋಗಿಸುತ್ತಿದ್ದರೆನಿಸುತ್ತದೆ. ಈ ರೀತಿಯದೇ ಇನ್ನೊಂದು ವರ್ಣನೆ – ಮಂಚದೊಳು ನಿಂದು ನೃಪಗೆ ಸೇವೆ ಮಾಳ್ಪ ಬೊಂಬೆಗಳು, ಪಾಂಚಾಲಿಕೆಗಳು, ಪುತ್ರಿಕೆಗಳಕ್ಕುಂ. ಅಂದರೆ ಗೊಂಬೆಗಳು ಇಲ್ಲಿ ಇನ್ನೊಂದು ರೀತಿಯ ಕೆಲಸ ಮಾಡುತ್ತಿವೆ. ಶಯನಗೃಹದಲ್ಲಿ ಮಂಚದ ಬಳಿ ನಿಂತುಕೊಂಡು ರಾಜನ ಸೇವೆ ಮಾಡುತ್ತಿವೆ. ಇದನ್ನು ನೋಡಿದರೆ ಇವು ಚಲಿಸುವ ಗೊಂಬೆಗಳೆನ್ನಬಹುದು. ಇವುಗಳನ್ನು ಪಾಂಚಾಲಿಕೆ, ಪುತ್ರಿಕೆ ಎಂದು ಕರೆಯಲಾಗುವುದು ಎಂದಿದಾನೆ – ಮಂಗರಸ ತನ್ನ ನಿಘಂಟಿನಲ್ಲಿ.

ಹೀಗೆಯೇ ಹುಡುಕಿದರೆ ಹಳೆಯ ಕಾವ್ಯಗಳಲ್ಲಿ ಗೊಂಬೆಯ ಬಗೆಗೆ ಅನೇಕ ಕಡೆ ಪ್ರಸ್ತಾಪಿಸಿರುವುದು ಕಾಣಬರುತ್ತದೆ. ಕನಕದಾಸರ ಬೊಂಬೆಯಾಟವನಾಡಿಸಿದೆ – ಮಹಾಭಾರತದ ಎಂಬ ಪದದಲ್ಲಿ ಉಪಮೆಯ ರೂಪದಲ್ಲಿದ್ದರೂ ಸೂತ್ರದ ಬೊಂಬೆಯಾಟದ ಲಕ್ಷಣಗಳು ಕಂಡುಬರುತ್ತವೆ.

ಪುತ್ಥಳಿ ಉತ್ಸವ

ಇಂತಹ ಪುರಾತನ ಕಲೆ ಮತ್ತು ಅದರ ನಿರ್ವಾಹಕರ ಇಂದಿನ ಸ್ಥಿತಿ ಏನು? ಇಂದು ಭಾರತದ ಎಲ್ಲ ಭಾಗಗಳಲ್ಲಿಯೂ ಒಂದಲ್ಲ ಒಂದು ರೀತಿಯ ಗೊಂಬೆಯಾಟವು ಪ್ರಚಾರದಲ್ಲಿದೆ. ಕೆಲವು ರಾಜ್ಯಗಳಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿದ್ದರೆ ಇನ್ನು ಕೆಲವದರಲ್ಲಿ

ಕ್ರಮೇಣ ಅವನತಿ ಹೊಂದುವ ಸ್ಥಿತಿಯಲ್ಲಿದೆ. ತಾಂತ್ರಿಕ ವಿಧಾನವನ್ನನುಸರಿಸಿ ಈ ಗೊಂಬೆಗಳು ನಾಲ್ಕು ವರ್ಗಕ್ಕೆ ಸೇರುತ್ತವೆ. ಸೂತ್ರ, ಸಲಾಕಿ, ತೊಗಲು ಗೊಂಬೆ, ಕೈಗೊಂಬೆ. ಬೆಂಗಳೂರಿನಲ್ಲಿ ಈಚೆಗೆ ನಡೆದ ಗೊಂಬೆ ಆಟದ ಉತ್ಸವದಲ್ಲಿ ಈ ನಾಲ್ಕೂ ಪ್ರಕಾರಗಳ ಗೊಂಬೆಗಳ ಪ್ರದರ್ಶನವಾಯಿತು. ಉತ್ಸವದ ಶೀರ್ಷಿಕೆ ಪುತ್ಥಳಿ 91 ಏರ್ಪಡಿಸಿದವರು – ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕ ಅಥವಾ ಕರ್ನಾಟಕದ ಹಸ್ತಶಿಲ್ಪ ಆಲೋಚನಾ ಮಂಡಳಿ. ಇವರಿಗೆ ನೆರವು ಕೇಂದ್ರ ಸರಕಾರದ ಹಸ್ತಶಿಲ್ಪ ಅಭಿವೃದ್ಧಿ ಕಮೀಷನರ್, ಕರ್ನಾಟಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಗೂ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ. ಈ ಉತ್ಸವ ನಡೆದುದು ರಾಜ್ಯ ಯುವಜನ ಸೇವಾ ಕೇಂದ್ರ. ಉತ್ಸವದ ವ್ಯಾಪ್ತಿ ದಕ್ಷಿಣಭಾರತ. ಆದುದರಿಂದ ಇದರಲ್ಲಿ ಆಂಧ್ರ, ಕರ್ನಾಟಕ, ಕೇರಳ ಮತ್ತು ತಮಿಳು ನಾಡುಗಳಿಂದ ಪುತ್ಥಳಿ ವೃಂದಗಳು ಭಾಗವಹಿಸಿದ್ದುವು.

ಐದೂ ದಿನದ ಈ ಉತ್ಸವದ ಕಾರ್ಯಕಲಾಪಗಳನ್ನು ಮೂರು ಭಾಗವಾಗಿ ವಿಂಗಡಿಸಲಾಗಿತ್ತು : (1) ಪಪೆಟ್ ಪ್ಯಾರ್ ಲರ್ – ಪುತ್ಥಳಿ ಸಂಕಥಾ ಸ್ಥಾನ. ಇದು ದಿನದ ಮೊದಲ ಕಾರ್ಯಕ್ರಮ – ವಿದ್ವತ್ ಮತ್ತು ತಾಂತ್ರಿಕ ವಿಧಾನಗಳ ಗೋಷ್ಠಿ. ಭಾಷಣ, ಪ್ರದರ್ಶನ ಇತ್ಯಾದಿ. (2) ಪಪೆಟ್ ಪಾರ್ಕ್ – ಪುತ್ಥಳಿ ಉಪವನ. ಇದು ಮಧ್ಯಾಹ್ನದ ಕಾರ್ಯಕ್ರಮ. ಎಲ್ಲರೂ ಕಲೆತು ತಮ್ಮ ತಮ್ಮ ಕಲೆಗಳ ಬಗೆಗೆ ಚರ್ಚೆ ತಾಂತ್ರಿಕ ವಿಧಾನದ ಬಗೆಗೆ ವಿಚಾರ ವಿನಿಮಯ ಇತ್ಯಾದಿ. ರಖಂವಾರಿ ಪುತ್ಥಳಿಗಳ ಪ್ರದರ್ಶನ. (3) ಪಪೆಟ್ ಪೆರೇಡ್ ಅಥವಾ ಪುತ್ಥಳಿ ಮೆರವಣಿಗೆ. ಸಾಯಂಕಾಲದ ಗೊಂಬೆಯಾಟ.... ಹೀಗೆ. ಈ ಕಾರ್ಯಕ್ರಮಗಳಲ್ಲಿ ಪುತ್ಥಳಿ ವೃಂದದವರೇ ಅಲ್ಲದೆ ಇತರ ಆಸಕ್ತರನೇಕರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು.

ಮೊದಲ ಭಾಗ ಸಾಂಪ್ರದಾಯಿಕ ರೀತಿಯಲ್ಲಿ ನಡೆದುಹೋಯಿತು. ಗೊಂಬೆಗಳ ಇತಿಹಾಸ, ಬೆಳವಣಿಗೆ, ಅವುಗಳ ಶಿಲ್ಪ, ತಾಂತ್ರಿಕ ವಿಧಾನ, ಪ್ರದರ್ಶನದ ರೀತಿನೀತಿ, ಕಥಾವಸ್ತು, ಈ ಕಲೆ ಮತ್ತು ಕಲಾವಿದರ ಆರ್ಥಿಕ ಸ್ಥಿತಿ, ಸಾರ್ವಜನಿಕ ಪ್ರೋತ್ಸಾಹದ ಏರಿಳಿತಗಳು ಇತ್ಯಾದಿ ವಿಷಯಗಳ ಬಗೆಗೆ ಭಾಷಣ. ಸೋದಾಹರಣ ಪ್ರದರ್ಶನ ಮುಂತಾದವು ನಡೆದುವು. ಇದರಲ್ಲಿ ಸಾಂಪ್ರದಾಯಿಕ ಭಾಗವೇ ಹೆಚ್ಚಾಗಿದ್ದರೂ ಆಧುನಿಕ ರೀತಿಯ ಬಗೆಗೂ ಭಾಷಣ ಹಾಗೂ ಉದಾಹರಣ ಪ್ರದರ್ಶನಗಳೂ ನಡೆದವು.

ಇನ್ನು ಉಪವನ, ಮಧ್ಯಾಹ್ನ ನಡೆದುದು. ಅದೊಂದು ಸೌಹಾರ್ದ ದೃಶ್ಯ. ನಾಲ್ಕು ರಾಜ್ಯಗಳಿಂದ ಬಂದ ಈ ಪುತ್ಥಳಿ ಕಲಾವಿದರು ಆ ಶಿಲ್ಪ ರಚನೆ ಅದಕ್ಕೆ ಜೀವಕಳೆ ತುಂಬುವುದರಲ್ಲಿ ತಮ್ಮಲ್ಲಿ ಬಂದ ಸಂಪ್ರದಾಯ ಸದ್ಯದ ಸ್ಥಿತಿ ಮುಂತಾದವುಗಳ ಬಗೆಗೆ ವಿಚಾರ ಹಾಗೂ ತಂತ್ರ ವಿನಿಮಯ ಮಾಡಿಕೊಂಡರು. ಜೊತೆಗೆ ಕಸದಿಂದ ರಸ ಮಾಡುವಂತೆ ವಿಧವಿಧ ರೀತಿಯ ಗೊಂಬೆಗಳ ನಿರ್ಮಾಣವೂ ನಡೆಯಿತು – ಕೊನೆಯ ದಿನ ಅವುಗಳ ಆಟವೂ ನಡೆಯಿತು. ಪುತ್ಥಳಿ ಮೆರವಣಿಗೆ, ಈ ಐದೂ ಸಂಜೆಗಳಲ್ಲಿ ಹತ್ತು ಆಟಗಳು ಭಾಗವಹಿಸಿದ ವೃಂದದವರಿಂದ.

ವಾಸ್ತವವಾಗಿ ಹನ್ನೊಂದು. ಕಾಸರಗೋಡಿನ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟದ ವೃಂದವೂ ಪ್ರಾರಂಭ ದಿನದ ಅನಂತರ ಬಂದು ಸೇರಿಕೊಂಡಿತು.

ಸಾಂಪ್ರದಾಯಿಕ ರೀತಿಯ ಆಟಗಳಲ್ಲಿ ಮೊದಲನೆಯದು ಕೃಷ್ಣಪಾರಿಜಾತ. ಬೆಂಗಳೂರಿನ ರಂಗಪುತ್ಥಳಿ ವೃಂದದವರಿಂದ. ಗೊಂಬೆಯಾಟದ ಪರಂಪರೆಯ ಮನೆತನ. ಸಲಾಕಿ ಪುತ್ಥಳಿಗಳು. ಹೊಸದಾಗಿ ತಯಾರಾದ ತೂಕವಾದ ವರ್ಣಮಯ ಗೊಂಬೆಗಳು. ಆ ಶಿಲ್ಪ, ಅದರ ತೂಕ, ವಿನ್ಯಾಸದ ಮಿತಿ ಈ ಚೌಕಟ್ಟಿನಲ್ಲಿ ಕಥಾ ನಿರೂಪಣೆ, ಸಾಂಪ್ರದಾಯಿಕ ಹಾಡುಗಳಿಂದ ಕೂಡಿದ ಸುಶ್ರಾವ್ಯ ಸಂಗೀತ ಹಿನ್ನೆಲೆ, ಇದೇ ಬಗೆಯ ಇನ್ನೆರಡು ಆಟಗಳು ಮುಂದಿನ ದಿನಗಳಲ್ಲಿ ಪ್ರದರ್ಶಿಸಲಾದವು. ಸೂತ್ರಮೇಳ ಮತ್ತು ಪುತ್ಥಳಿ ಕಲಾರಂಗದವರಿಂದ ಒಂದೇ ರೀತಿಯ ಕಥೆ. ಒಂದೇ ರೀತಿಯ ಗೊಂಬೆಗಳು ಹಾಗೂ ತಾಂತ್ರಿಕ ವಿಧಾನ. ಅದು ಸಹಜವೇ. ಎಷ್ಟೇ ಆದರೂ ರಂಗಪುತ್ಥಳಿ ವೃಂದದ ಮರಿಗಳು. ಒಂದೇ ರೀತಿಯ ಮೂರು ವೃಂದಗಳ ಬದಲು ಕರ್ನಾಟಕದಿಂದ ಒಂದೆರಡು ಸೂತ್ರ ಮತ್ತು ತೊಗಲುಬೊಂಬೆ ಆಟಗಳನ್ನೂ ಸೇರಿಸಬಹುದಾಗಿತ್ತು.

ಇದೇ ಸಾಂಪ್ರದಾಯಿಕ ರೀತಿಯವು ಕೇರಳದ ಎರಡು ವೃಂದಗಳು. ಒಂದು ತೊಗಲು ಬೊಂಬೆ. ಇನ್ನೊಂದು ಕೈಗೊಂಬೆ. ಇದರಲ್ಲಿ ತೊಗಲುಗೊಂಬೆ ಆಟ ಬಹುತೇಕ ಕೇರಳ ದೇವಾಲಯಗಳ ಪ್ರಾಕಾರಕ್ಕೆ ಸೇರಿದುದು. ಆದುದರಿಂದ ಹೆಚ್ಚು ಸಾಂಪ್ರದಾಯಿಕ. ವಿಶಾಲ ವಾದ ತೆರೆ. ಹಿಂದೆ 21 ಕೊಬರಿ ಎಣ್ಣೆದೀಪಗಳು. ಆ ಬೆಳಕಿನಿಂದ ಬೀಳುವ ತೊಗಲುಗೊಂಬೆ ನೆರಳು. ವಾಲಿ ಸಂಹಾರವನ್ನು ರಸವತ್ತಾಗಿ ನಿರೂಪಿಸಿದುವು. ಗೊಂಬೆಗಳ ಕಲಾತ್ಮಿಕೆಯನ್ನೂ ಸೂಸುತ್ತಿದ್ದುವು. ಹಿನ್ನೆಲೆ ಸಂಗೀತ ರಾಗಭಾವಕ್ಕಿಂತ ಯಾವುದೋ ವ್ರತ ಮಂತ್ರೋಚ್ಚಾರಣೆ ಯಂತೆ ಕೇಳಿಬರುತ್ತಿತ್ತು. ಈ ತೋಲ್ ಪಾವಕೂತು (ತೊಗಲು ಬೊಂಬೆಯಾಟ) ಒಂದು ಅಪೂರ್ವ ಅನುಭವ. ಇನ್ನು ಕೈಗೊಂಬೆ ಆಟ (ಪಾವ ಕಥಕ್ಕಳಿ). ಒಂದು ಕಿರು ಕಥಕ್ಕಳಿ. ಕೈಚೀಲದಂತೆ ರಚಿತವಾದ ಈ ಬೊಂಬೆಗಳನ್ನು ಕೈಯಲ್ಲಿ ಹಿಡಿದು ಪ್ರೇಕ್ಷಕರ ಎದುರಿನಲ್ಲಿ ಆಡಿಸುತ್ತಿದ್ದು ಈ ಆಟದಲ್ಲಿ ಬರಬೇಕಾದ ನಿಗೂಢತೆ, ಆಶ್ಚರ್ಯ ಮುಂತಾದುವು ಕಾಣಬರಲಿಲ್ಲ.

ಇನ್ನು ತಮಿಳು ನಾಡಿನ ಬೊಮ್ಮೈಯಾಟ. ಇಲ್ಲಿ ಸೂತ್ರ ಸಲಾಕಿ ಎರಡೂ ವಿಧದ ಗೊಂಬೆಗಳಿದ್ದುವು. ಅಲಂಕಾರ ಕರ್ನಾಟಕದ ಪುತ್ಥಳಿಗಳಂತಯೇ. ತಳತಳಿಸುವ ವಸ್ತ್ರ ಆಭರಣ ಗಳು. ಆದರೆ ಅಂಗ ಚಲನೆ ವೈವಿಧ್ಯ. ಮಾನವ ಚಲನೆಗಳಿಗೆ ಹತ್ತಿರ. ನರ್ತಕಿ ಪಾತ್ರದ ಅಭಿನಯ ಇದರ ಉತ್ತಮ ನಿದರ್ಶನ. ಉತ್ಸವದಲ್ಲಿ ಬಂದ ಪುತ್ಥಳಿ ವೃಂದಗಳಲ್ಲಿ ತಮಿಳುನಾಡಿನ ಈ ಗಣನಾಥ ಬೊಮ್ಮೈಯಾಟ ವೃಂದದ ಪಾರ್ವತಿ ಕಲ್ಯಾಣ ಕಥಾ ನಿರೂಪಣೆ ಬಹು ಆಕರ್ಷಣೀಯವಾಗಿತ್ತು. ಇನ್ನು ಆಂಧ್ರ ಪ್ರದೇಶದ ಎರಡು ವೃಂದಗಳಲ್ಲಿ ನಿಮ್ಮಲಕುಂಟ

ಗೊಂಬೆ ವೃಂದದವರದು ತೊಗಲು ಬೊಂಬೆ ಆಟ. ಸಾಂಪ್ರದಾಯಿಕ ಹೈದರಾಬಾದ್ ಗೊಂಬೆ ವೃಂದದವರದು - ಆಧುನಿಕ. ನಿಮ್ಮಲ ಕುಟುಂಬದವರು ಪ್ರದರ್ಶಿಸಿದುದು - ಲಂಕಾದಹನ. ಸ್ವಾರಸ್ಯವಾದ ಕತೆ. ಆದರೆ ತೆರೆಯ ಮೇಲೆ ಬಂದುದು ನೀರಸದೃಶ್ಯ. ಹೈದರಾಬಾದ್ ವೃಂದದವರದು - ಅಲ್ಲೂರಿ ಸೀತಾರಾಮರಾಜು. ಆಂಧ್ರದ ಮನೆಮಾತಾದ ಸ್ವಾತಂತ್ರ್ಯ ಯೋಧ. ಆತನ ಹೋರಾಟ ಮತ್ತು ಕೊಲೆಯ ದೃಶ್ಯ. ನಾಟಕೀಯವಾಗಿತ್ತು. ಆದರೆ ಗೊಂಬೆಗಳ ರಚನೆ ಗಮನಾರ್ಹ. ಸಂಪ್ರದಾಯಕ್ಕಿಂತ ಸಹಜ ರೀತಿಯವು.

ಸ್ವಲ್ಪ ವಿಡಂಬನಾತ್ಮಕವಾಗಿಯೇ ಇದ್ದುವು. ಇಲ್ಲಿ ಕೈ ಮತ್ತು ಸಲಾಕಿ ಎರಡೂ ತಂತ್ರ ವಿಧಾನ. ಇದೊಂದು ವಿಶೇಷ ಅನುಭವ. ಬೆಂಗಳೂರಿನ ಪಪೇಟ್ ಲ್ಯಾಂಡ್ ವೃಂದದವರ ಆಟವೂ ಆಧುನಿಕ ರೀತಿಯದು. ಕೆಲವು ಗೊಂಬೆಗಳು ಸಾಂಪ್ರದಾಯಿಕ. ಮಿಕ್ಕವು ಆಧುನಿಕ ಮತ್ತು ವಿಚಿತ್ರ ಎರಡೂ ಕಲ್ಪನೆಗಳಿಂದ ಕೂಡಿದ್ದವು. ಕತೆಗಳು ವಿನೋದಕರವಾಗಿದ್ದರೂ ಗೊಂಬೆಗಳನ್ನು ಆಡಿಸುವ ತಂತ್ರ ಹಾಗೂ ವಾಕ್ ನಿರೂಪಣೆ ಎರಡರಲ್ಲಿಯೂ ಪರಿಷ್ಕಾರದ ಅವಶ್ಯಕತೆ ಅನುಭವವಾಗುತ್ತಿತ್ತು. ಎ. ಎಸ್. ಮೂರ್ತಿಯವರ ಸಮಯಸ್ಫೂರ್ತಿ ವಾಕ್ ಪ್ರವಾಹ ಗೊಂಬೆಗಳ ಪಾತ್ರ ಮರೆಮಾಡುವಂತಿತ್ತು. ಎರಡೂ ಸಮತೂಕವಿರಬೇಕು. ಕಾಸರಗೋಡಿನ ಕೈಗೊಂಬೆಗಳು ವರ್ಣಮಯ. ನಿರ್ವಾಹಕರು ಎದುರಿಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ತೆಂಕುತಿಟ್ಟಿನ ರೀತಿಯ ಅಲಂಕಾರ, ಸಂಗೀತ.

ಪುರಾತನ ಕಲೆ

ಪುತ್ಥಳಿ 91ರ ಐದೂ ದಿನಗಳ ಕಾರ್ಯಕಲಾಪಗಳನ್ನು ಒಟ್ಟು ಪರಿಶೀಲಿಸಿದಾಗ ಆದ ಅನೇಕ ಅನುಭವಗಳಲ್ಲಿ ಮೊದಲನೆಯದು ಈ ಪುರಾತನ ಕಲೆ ಇಂದು ಎದುರಿಸುತ್ತಿರುವ ಸಂದಿಗ್ಧ ಸ್ಥಿತಿ. ಇದರಲ್ಲಿ ಮುಖ್ಯವಾದವು ಈ ಬಗೆಗೆ ಕುಂದುತ್ತಿರುವ ಜನಪ್ರಿಯತೆ ಮತ್ತು ಈ ಕಲಾವಿದರಿಗೆ ಒದಗಿಬರುತ್ತಿರುವ ಆರ್ಥಿಕ ಅಭದ್ರತೆ. ಈ ಕಲೆಯ ಆಸರೆ ಆದ ಗ್ರಾಮಾಂತರಗಳಲ್ಲಿಯೂ ಇದೇ ಪರಿಸ್ಥಿತಿ. ಮನರಂಜನೆ ದೃಷ್ಟಿಯಿಂದ ಚಲನಚಿತ್ರ ಈ ಕಲೆಯನ್ನು ಹಿಂದಕ್ಕೆ ತಳ್ಳಿಬಿಟ್ಟಿದೆ. ಈ ಕಲೆ ಇನ್ನೂ ಧಾರ್ಮಿಕ ಜೀವನದ ಅಂಗವಾಗಿ ಭಾವಿಸಲಾದುದರಿಂದ ಗ್ರಾಮಾಂತರಗಳಲ್ಲಿ ಬದುಕಿಕೊಂಡಿದೆ. ಹುಟ್ಟಿನಿಂದ ಸಾವಿನವರೆಗಿನ ಜೀವನದ ಕೆಲವು ಸಮಾರಂಭಗಳಲ್ಲಿ ಗೊಂಬೆಯಾಟವನ್ನು ಒಂದು ವಿಧಿಯಂತೆ ಬಳಸಲಾಗುತ್ತಿದೆ. ಅನೇಕ ಕುಟುಂಬಗಳು ಈ ಕಲೆಯನ್ನು ಬಿಟ್ಟಿದ್ದಾರೆ. ಕಲೆ ಶಿಥಿಲವಾಗುತ್ತಿರುವ ಈ ಸ್ಥಿತಿಯನ್ನು ತಡೆಗಟ್ಟಿ ಪುತ್ಥಳಿ ಕಲೆಯು ಸಮಾಜದ ಒಂದು ಅಂಗವಾಗಿ ಬದುಕಿ ಬಾಳಲು ಸಾಧ್ಯವಿಲ್ಲವೇ?

ಇದಾಗಿ ಆ ಕಲಾವಿದರೂ ಸಮಾಜದಲ್ಲಿ ಮರ್ಯಾದೆಯಿಂದ, ನೆಮ್ಮದಿಯಾಗಿ ಬಾಳಿ ಬದುಕಲು ಅನೇಕ ಬದಲಾವಣೆಗಳು ಅಗತ್ಯ. ಇವು ಮಾನಸಿಕ, ತಾಂತ್ರಿಕ ಮುಂತಾದ ಭಾಗಗಳಲ್ಲಿ

ಎಲ್ಲಾ ಆಗಬೇಕು. ಸಂಪ್ರದಾಯ ಚೌಕಟ್ಟಿನಲ್ಲಿಯೇ ಎಷ್ಟೋ ಬದಲಾವಣೆಗಳನ್ನು ಮಾಡಬಹುದು. ಅದರಿಂದ ಹೊರಗೆ ಈ ಕಲಾವಿದರಿಗೆ ಹೊಸ ದಿಕ್ಕನ್ನು ಸೂಚಿಸಬಹುದು. ಮುಂದಿನ ಪುತ್ತಳಿ ಉತ್ಸವಗಳು ಬರೀ ಇತಿಹಾಸ, ತಂತ್ರ ಮುಂತಾದುವುಗಳ ಗಾಳಿಪಟವನ್ನೇ ಆಡಿಸದೆ ಈ ಕಲೆಯನ್ನು ಪರಿಷ್ಕರಿಸಿ ಕಾಲಾನುಗುಣ್ಯವಾದ ಬದಲಾವಣೆಗಳನ್ನು ಮಾಡಿ ಹೆಚ್ಚು ಆಕರ್ಷಣೀಯವಾಗುವಂತೆ ಮಾಡಬಹುದಾದ ಕಾರ್ಯಕ್ರಮಗಳನ್ನು ಪರಿಶೀಲಿಸಬೇಕು. ಈ ಕಲೆಯ ನೂತನ ಸಾಧ್ಯಾಸಾಧ್ಯತೆಗಳನ್ನೂ ಪರಿಶೀಲಿಸಬೇಕು. ಈ ಬಗೆಗೆ ವಿಶೇಷ ಕಾರ್ಯಾಗಾರ, ಶಿಬಿರಗಳನ್ನು ಏರ್ಪಡಿಸಿ ಈ ಕಲಾವಿದರ ನೈಪುಣ್ಯತೆಯನ್ನು ವೃದ್ಧಿಗೊಳಿಸಬೇಕು. ಕಲೆಗೆ ಒಂದು ಹೊಸ ತಿರುವು ಕೊಡಲು ಅವರಿಗೆ ಒಂದು ಜಾಣ್ಮೆ ಮತ್ತು ಸಾಮರ್ಥ್ಯ ಬರುವಂತೆ ಮಾಡಬೇಕು. ಇದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮಗೊಂಡು ಅವರು ಕಲೆಯನ್ನು ಕೈಬಿಡದಂತೆ ಆಗಬೇಕು. ಚಲನಚಿತ್ರ ಅಭಿವೃದ್ಧಿಗೆ ಸರಕಾರವು ಲಕ್ಷಾಂತರ ರೂ.ಗಳನ್ನು ವೆಚ್ಚ ಮಾಡುತ್ತಿದೆ. ಅದರಲ್ಲಿ ಒಂದು ಹಿಡಿಯಷ್ಟಾದರೂ ಈ ಕಲೆಯ ಅಭಿವೃದ್ಧಿಗೆ ಕೊಟ್ಟಲ್ಲಿ ಅದು ಚೈತನ್ಯಯುತವಾಗಿ ಬಾಳಲು ಸಾಧ್ಯ. ತೊಗಲುಗೊಂಬೆಗಳೂ ಚಲನಚಿತ್ರಗಳೇ. ಇಂದಿನ ಚಲನಚಿತ್ರಗಳಿಗಿಂತ ಪ್ರಾಚೀನವಾದವು ಎಂಬ ಅಂಶವನ್ನೂ ಮರೆಯಬಾರದು. ★ ★ ★ ★ ★ ★ ★ ★ ★ ★ ★ ★

ಪ್ರಜಾವಾಣಿ, 1991.

43. ಜಲಪುತ್ಥಳಿ-ಅಪೂರ್ವ ಕಲೆ

ಗೊಂಬೆಯಾಟ ಪ್ರಾಚೀನವಾದ ಕಲೆ. ತನ್ನ ಕಿರು ಆಕೃತಿಯನ್ನು ಮಾಡಿ, ತಾನು ಮಾಡುವ ಕಾರ್ಯಕಲಾಪಗಳನ್ನೆಲ್ಲಾ ಅದರಿಂದ ಮಾಡಿಸಿ ಸಂತೋಷಪಟ್ಟಿದ್ದಾನೆ ಮಾನವ. ಈ ಪುತ್ಥಳಿ ಅಥವಾ ಗೊಂಬೆಗಳ ಚಲನವಲನಗಳನ್ನು ನಾನಾ ಮಾಧ್ಯಮಗಳ ಮೂಲಕ ಮಾಡಲಾಗುತ್ತಿದೆ. ಸೂತ್ರ ಸಲಾಕಿ, ಕೈಬೆರಳು ಇತ್ಯಾದಿ. ತೆಳು ಚರ್ಮದಿಂದ ವರ್ಣಮಯ ಆಕೃತಿಗಳನ್ನು ನಿರ್ಮಿಸಿ ಪರದೆಯ ಮೇಲೆ ಆ ನೆರಳು ಬಿದ್ದು ಚಲಿಸುವ ತೊಗಲು ಗೊಂಬೆಗಳು ಒಂದು ರೀತಿ ಭ್ರಮೆಯುಂಟುಮಾಡುವುವು. ಇವುಗಳನ್ನು ಪುರಾತನ ಸಿನಿಮಾ ಎಂದೂ ಭಾವಿಸಬಹುದು. ಈ ಗೊಂಬೆಗಳ ಚಲನೆಯನ್ನು ಕಡ್ಡಿಯ ಮೂಲಕ ನಡೆಸಲಾಗುತ್ತದೆ.

ಪ್ರಪಂಚದ ವಿವಿಧ ಭಾಗಗಳಲ್ಲಿರುವ ಗೊಂಬೆಗಳ ಚಲನೆ ಈ ರೀತಿಯಲ್ಲಿಯೇ ಇರುತ್ತದೆ. ಅಂದರೆ ಸೂತ್ರ, ಸಲಾಕಿ, ಕಡ್ಡಿ ಕೈಬೆರಳುಗಳ ಮೂಲಕ ಈ ಗೊಂಬೆಗಳು ಪುರಾತನ ಪುರಾಣಗಳಿಂದ ಹಿಡಿದು ಇತಿಹಾಸ ಮತ್ತು ಸಮಕಾಲೀನ ಜೀವನದಿಂದ ಘಟನೆಗಳನ್ನು ಆಯ್ದು ನಿರೂಪಿಸುವುದು ಪದ್ಧತಿ. ಈ ಗೊಂಬೆಯಾಟ ಬಹುತೇಕ ಬಯಲು ರಂಗಕ್ಕೆ ಸೇರಿದುದು. ವಿಸ್ತಾರವಾದ ಬಯಲಿನ ಒಂದು ಭಾಗದಲ್ಲಿ ಪ್ರತ್ಯೇಕವಾದ ಚಪ್ಪರ ಹಾಕಿ ಅದರಲ್ಲಿ ಗೊಂಬೆಗಳ

ಪ್ರಮಾಣಕ್ಕನುಸಾರವಾದ ವೇದಿಕೆ ಹಾಗೂ ರಂಗಮಂಟಪ ನಿರ್ಮಿಸುವರು. ಪ್ರೇಕ್ಷಕರಿಗೆ ಕಾಣದ ರೀತಿಯಲ್ಲಿ ಮರೆಯಲ್ಲಿ ನಿಂತು ಸೂತ್ರಧಾರರು, ಬೊಂಬೆಗಳನ್ನು ಆಡಿಸಿ ನಿಜ ಸನ್ನಿವೇಶದ ಭ್ರಮೆಯನ್ನು ಉಂಟುಮಾಡುತ್ತಾರೆ. ಸಾಮಾನ್ಯವಾಗಿ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಗೊಂಬೆಯಾಟ ನಡೆಸುವುದು ಇದೇ ರೀತಿಯಲ್ಲಿ. ಆದರೆ ಇದರಿಂದ ಭಿನ್ನವಾದ ರೀತಿಯೂ ಇದೆ. ಅದು ಪ್ರಚಲಿತವಿರುವುದು-ವಿಯತ್ನಾಂ ದೇಶದಲ್ಲಿ.

ಆಗ್ನೇಯ ಏಷಿಯಾದಲ್ಲಿ ಕಾಂಭೋಜ ರಾಜ್ಯದ ಪೂರ್ವಕ್ಕೆ ಇದೆ - ವಿಯತ್ನಾಂ. ಹಿಂದಿನ ಕೊಚಿನ್ ಚೈನಾ ಮತ್ತು ಆನಾಂ ಎರಡೂ ರಾಜ್ಯಗಳೂ ಕೂಡಿ ಹೊಸದಾಗಿ ಹುಟ್ಟಿಬಂದ ದೇಶ-ವಿಯತ್ನಾಂ. ಸ್ಥಳೀಯ ಸಂಸ್ಕೃತಿಯ ಮೇಲೆ ಚೀಣಾ ಸಂಸ್ಕೃತಿಯ ಪ್ರಭಾವವೂ ಹೆಚ್ಚಾಗಿದೆ. ಇದು ಅಲ್ಲಿನ ಜನಜೀವನದಲ್ಲಿ ಕಾಣಬಹುದು.

ವಿಯತ್ನಾಂ ಅಕ್ಕಿಗೆ ಪ್ರಸಿದ್ಧವಾದ ದೇಶ. ಆದುದರಿಂದ ಅಲ್ಲಿ ಜಲಸಮೃದ್ಧಿ ಹೆಚ್ಚು ಎಂದು ಹೇಳಲೇಬೇಕಾಗಿಲ್ಲ. ಹೀಗೆ ನೀರಾವರಿ ಹೆಚ್ಚಾಗಿರುವ ದೇಶದಲ್ಲಿ ಜಲಸಂಬಂಧವಾದ ಕಲೆಗಳೂ ರೂಪಗೊಂಡಿವೆ. ಅವುಗಳಲ್ಲಿ ಜಲಪುತ್ಥಳಿ ಆಟ ಪ್ರಸಿದ್ಧವಾದುದು. ಸ್ವಲ್ಪ ಸಮಯದ ಹಿಂದೆ ದೆಹಲಿಯಲ್ಲಿ ನಡೆದ ಪುತ್ಥಳಿ ಮಹೋತ್ಸವದಲ್ಲಿ ವಿಯತ್ನಾಂ ದೇಶದಿಂದ ಬಂದ ಈ ಜಲಪುತ್ಥಳಿ ಆಟ ಪ್ರೇಕ್ಷಕರನ್ನು ದಿಗ್ಭ್ರಮೆಗೊಳಿಸಿತು. ಈ ಕಲಾಪ್ರದರ್ಶನದ ವಿಧಾನ ಈ ರೀತಿ ಇದೆ.

ಈ ಪ್ರದರ್ಶನದ ಕ್ಷೇತ್ರ-ಕೆರೆ ಅಥವಾ ಕೊಳ. ಒಂದು ಭಾಗದಲ್ಲಿ ನೀರಿನೊಳಕ್ಕೆ ಬಂದ ರೀತಿಯಲ್ಲಿ ವರ್ಣಮಯ ಚಪ್ಪರ ನಿರ್ಮಾಣ. ಚಪ್ಪರದ ಮುಂಭಾಗವನ್ನು ಒಂದು ತೆಳುವಾದ ಪರದೆ ಮುಚ್ಚಿರುತ್ತದೆ. ಹಿನ್ನೆಲೆಯಲ್ಲಿ ಗಟ್ಟಿನೆಲದ ಮೇಲೆ ವಾದ್ಯವೃಂದ. ತೆರೆಯ ಹಿಂದೆ ನಿಂತ ಸೂತ್ರಧಾರರು ಪುತ್ಥಳಿಗಳನ್ನು ನೀರೊಳಕ್ಕೆ ಬಿಟ್ಟು ತೆರೆಯ ಮುಂದೆ ಸ್ವಲ್ಪ ದೂರದಲ್ಲಿ ಪುತ್ಥಳಿಯು ಬುಳಕ್ಕನೆ ಎದ್ದು ಸಂದರ್ಭದ ನಟನೆ ಮಾಡುವಂತೆ ನಿರ್ವಹಿಸುವರು. ಕೆಲವು ವೇಳೆ ತಾವೂ ನೀರಿನೊಳಗೆ ಸ್ವಲ್ಪ ದೂರಬಂದು ಪುತ್ಥಳಿ ಮಾತ್ರ ಮೇಲೆ ಅಭಿನಯಿಸುವಂತೆ ನಿರ್ವಹಿಸುವರು. ಬೊಂಬೆಗಳೂ ಅಂತಹ ದೊಡ್ಡವೇನಲ್ಲ. ಒಂದುಒಂದೂವರೆ ಅಡಿ ವರ್ಣಮಯ ನೀರಿನಲ್ಲಿಯ ಕೆಂಡದಂತಾಗುವುದು. ಪ್ರೇಕ್ಷಕರು ಎದುರು ಮತ್ತು ಅಕ್ಕಪಕ್ಕದ ದಂಡೆಗಳ ಮೇಲೆ ಕುಳಿತು ನೋಡುವರು.

ಅವರಲ್ಲಿಯೂ ಮೊದಲು ವಾದ್ಯಘೋಷವಾದ ನಂತರ ಸೂತ್ರಧಾರನ ರೀತಿಯಲ್ಲಿ ಗೊಂಬೆಯೊಂದು ಬಂದು ಸಭೆಗೆ ನಮಿಸಿ ಪ್ರಸ್ತಾವನೆ ಮಾಡುವುದು. ಅನಂತರ ವಿವಿಧ ಸಂದರ್ಭ ಮತ್ತು ಕಥಾ ಪ್ರಸಂಗಗಳ ನಿರೂಪಣೆ. ವಸ್ತು ನಿಜ ಜೀವನದಿಂದ ಹಾಗೂ ಜಾನಪದ ಕಥೆಗಳಿಂದ ಆಯ್ದುದು. ಕೆರೆಯಲ್ಲಿ ಬಾತುಕೋಳಿಗಳ ಕಾಳಗ, ಮೀನಿನೊಡನೆ ಸೆಣೆಸಾಡುವ ಜಲಗಾರ, ಎತ್ತು-ಕೋಣದ ಕಾಳಗ, ಅಂಬಿಗ ಮತ್ತು ದೊಡ್ಡ ಮೀನಿನ ಜಂಜಾಟ... ಹೀಗೆ. ಜಾನಪದ ಮೂಲಗಳಿಂದ ಬರುವ ಕಥೆಗಳಲ್ಲಿ ಮೀನಿನ ಆಕಾರದ ಪೆಡಂಭೂತಗಳ ಅವಾಂತರ,

ನೀರಿನಲ್ಲಿ ನುಲಿನುಲಿದಾಡುವ ಈ ಪ್ರಾಣಿಗಳು, ಕಿಡಿ, ಹೊಗೆಗಳನ್ನು ಉಗುಳುತ್ತಾ ಇತರ ಪಾತ್ರಗಳನ್ನು ಚೆಲ್ಲಾಪಿಲ್ಲಿ ಮಾಡುವುದೇ ಒಂದು ಮೋಜು.

ಆದರೆ ಅವರ ಜಲಕನ್ನಿಕಾ ನೃತ್ಯ ಆಶ್ಚರ್ಯ ಉಂಟುಮಾಡುವುದು. ನಡು ನೀರಿನಲ್ಲಿ ನಿಂತು ಲಯಕ್ಕನುಗುಣವಾಗಿ ಸೆರಗನ್ನು ಹಿಡಿದೆತ್ತಿ ನಲಿದಾಡುವ ಈ ಜಲಪುತ್ಥಳಿಗಳ ಆಟ ಅದ್ಭುತವಾದದ್ದು. ಒಂದು ಸ್ವಪ್ನಲೋಕದಲ್ಲಿದ್ದಂತೆ ಅನುಭವವಾಗುವುದು. ವಿಯತ್ನಾಂ ದೇಶದ ಈ ಜಲಪುತ್ಥಳಿ ಆಟ ಅಪೂರ್ವವಾದುದು. ಬಹುಶಃ ಅದೊಂದೇ ದೇಶದಲ್ಲಿ ಪ್ರಚಲಿತವಿರಬಹುದು. ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★

ಪ್ರಜಾವಾಣಿ, 1991

44. ಮೊಘಲ್ ದರ್ಬಾರಿನ ಒಂದು ಅಧ್ಯಾಯ
ಅವಿವೇಕ ಅಭಿಷಿಕ್ತವಾದಾಗ

ದಕ್ಷಿಣಭಾರತದಿಂದ ದೆಹಲಿಗೆ ಹೋದವರಿಗೆ ಅಲ್ಲಿನ ಕಟ್ಟಡಗಳದೇ ಒಂದು ವಿಶೇಷ ಅನುಭವ. ಒಂದು ಕಡೆ ಅಂತರಿಕ್ಷಕ್ಕೇರುತ್ತಿರುವ ಕಾಂಕ್ರೀಟ್ ಕಟ್ಟಡಗಳು; ಈ ಯುಗದವು, ಸಜೀವವಾದವು. ಇನ್ನೊಂದು ಕಡೆ ಗುಮಟಗಳಿಂದ ಅಲಂಕೃತವಾದ ಗೋರಿಗಳು; ನಿರ್ಜೀವವಾದವು – ಕಳೆದುಹೋದ ಒಂದು ಯುಗದವು. ಯಾರ ಯಾರ ಸ್ಥಾನಕ್ಕೆ ಅನುಗುಣವಾಗಿಯೋ ಅಥವಾ ಹೆಗ್ಗಳಿಕೆಗೋಸ್ಕರವೋ ಕಟ್ಟಲಾದ ಈ ಗೋರಿಗಳು ಮೃತರು ಮಣ್ಣಿನೊಡನೆ ಬೆರೆತು ಹೋದರೂ ಅವರ ನೆನಪನ್ನು ಉಂಟುಮಾಡುತ್ತವೆ. ಇದು ಬಹುತೇಕ ದೆಹಲಿಯನ್ನಾಳಿದ ನಾನಾ ಸಂತತಿಯ ಮುಸಲ್ಮಾನ್ ಚಕ್ರವರ್ತಿಗಳಿಗೆ, ಸುಲ್ತಾನರಿಗೆ ಅನ್ವಯಿಸುತ್ತದೆ. ಆದರೆ ಇತರ ಅಪ್ರಸಿದ್ಧರ ಗೋರಿಗಳ ಹಿನ್ನೆಲೆಯನ್ನು ಪರಿಶೀಲಿಸಿದಲ್ಲಿ ಸ್ವಾರಸ್ಯವಾದ ವಿಷಯಗಳೂ ತಿಳಿದುಬರುತ್ತವೆ.

ನಿದರ್ಶನವಾಗಿ – ಲಾಲ್‌ಬಂಗ್ಲಾ. ದೆಹಲಿಯಲ್ಲಿ ಒಳ್ಳೆಯ ಮೈಸೂರು ಅಥವಾ ಮದರಾಸು ಊಟವನ್ನು ಅಪೇಕ್ಷಿಸುವವರು ಪ್ರಾಯಶಃ ಹೋಗುವ ಸ್ಥಳ – ಲೋಧಿ ವುಡ್‌ಲೆಂಡ್ಸ್ ಹೋಟಲ್. ಇಂಡಿಯಾ ಗೇಟ್‌ನಿಂದ ಈ ಭೋಜನಸ್ಥಾನಕ್ಕೆ ಹೋಗುವ ರಸ್ತೆಯ ಹೆಸರು – ಜಾಕೀರ್ ಹುಸೇನ್ ಮಾರ್ಗ್. ಅರ್ಧಹಾದಿ ಹೋಗುವ ವೇಳೆಗೆ ಬಲಗಡೆಗೆ ಗಾಲ್ಫ್‌ಕ್ಲಬ್ ಬರುತ್ತದೆ. ಅದರ ಪ್ರಾಕಾರದಲ್ಲಿ ರಸ್ತೆಯ ಬದಿಗೆ ಎರಡು ಕೆಂಬಣ್ಣದ ಕಟ್ಟಡಗಳಿವೆ. ಅವನ್ನು ಲಾಲ್‌ಬಂಗ್ಲಾ ಎಂದು ಕರೆಯುತ್ತಾರೆ. ಈ ಹೆಸರು ಕಟ್ಟಡದ ಬಣ್ಣದಿಂದ

ಬಂದಿರಬಹುದು. ಆದರೆ ಅದರಲ್ಲಿ ಸಮಾಧಿಯಾದ ಮಹಿಳೆಯ ಹೆಸರಿನಿಂದ ಬಂದಿರುವುದೇ ಹೆಚ್ಚು ಸಾಧ್ಯವಿದೆ. ಅವಳ ಹೆಸರು ಲಾಲ್‌ಕುವರ್.

ಮೊಘಲ್ ಸಾಮ್ರಾಜ್ಯದ ಇತಿಹಾಸವನ್ನು ಓದಿದವರಿಗೆ ಲಾಲ್‌ಕುವರಳ ಹೆಸರು ತಿಳಿದಿರುತ್ತದೆ. ಅವಳು ಚಕ್ರವರ್ತಿ ಜಹಂದರ್‌ಷಹನ ಪತ್ನಿ. ಮೊದಲು ಪ್ರೇಯಸಿಯಾಗಿದ್ದು ಅನಂತರ ಪತ್ನಿಯಾದವಳು. ಜಹಂದರನ ಕಾಲದಲ್ಲಿ ಮೊಘಲ್ ಸಾಮ್ರಾಜ್ಯದ ಪತನಕ್ಕೆ ಪ್ರಾರಂಭವಾಯಿತು. ಅದರಲ್ಲಿ ಲಾಲ್‌ಕುವರಳೂ ಸ್ವಲ್ಪ ಸಹಾಯ ಮಾಡಿದಳೆನ್ನಬಹುದು. ಜಹಂದರ್‌ಷಹ ಮೊದಲನೆಯ ಆಲಂಘೀರ್ ಎನ್ನಿಸಿಕೊಂಡ ಔರಂಗಜೇಬನ ಮೊಮ್ಮಗ – ಕ್ರಿ.ಶ. 1712-13ರಲ್ಲಿ ರಾಜ್ಯವಾಳಿದವ. ಅವಿವೇಕಿ ಅರಸನೆಂದು ಪ್ರಸಿದ್ಧನಾದವ. ಅವ್ಯವಸ್ಥೆಯೇ ಅವನ ರಾಜನೀತಿ ಎನ್ನುವಂತಿತ್ತು. ಆ ಒಂದು ವರುಷದಲ್ಲಿ ಮೂರು ಶತಮಾನಗಳಿಂದ ಭದ್ರವಾಗಿ ಕಟ್ಟಿದ್ದ ಮೊಘಲ್ ಸಾಮ್ರಾಜ್ಯದ ತಳಪಾಯ ಶಿಥಿಲವಾಯಿತು. ಕೂಡಿಟ್ಟ ಐಶ್ವರ್ಯವೆಲ್ಲಾ ಪೋಲಾಗಲು ಆರಂಭವಾಗಿ ಮುಂದಿನ ನೂರು ವರುಷಗಳಲ್ಲಿ ಸಾಮ್ರಾಜ್ಯವೇ ನಾಶವಾಯಿತು. ಈ ಅವಿವೇಕ ಮತ್ತು ಅವ್ಯವಸ್ಥೆಗಳಲ್ಲಿ ಲಾಲ್‌ಕುವರಳೂ ಸಹಭಾಗಿನಿ.

ಮೋಹಾಂಧ

ಅವಳು ಕಲಾವಿದರ ವಂಶಕ್ಕೆ ಸೇರಿದವಳು. ಅವಳ ತಂದೆ ಖಸುಸಿಯತ್‌ಖಾನ್, ತಾನ್‌ಸೇನನ ವಂಶಕ್ಕೆ ಸೇರಿದವನು. ತಮ್ಮ, ಮುಂದೆ ಸದಾರಂಗ್ ಎಂದು ಪ್ರಸಿದ್ಧನಾದ ನಿಯಾಮತ್ ಷಾ ಕಲಾವಂತ್, ಸಿಂಹಾಸನವನ್ನು ಏರಲು ಲಾಹೋರಿನಿಂದ ದೆಹಲಿಗೆ ಜಹಂದರ್‌ಷಹನು ಬರುತ್ತಿದ್ದಾಗ ಎಲ್ಲೋ ಇವಳ ಪರಿಚಯವಾಯಿತು. ಗಂಟುಬಿದ್ದಳು. ಇಬ್ಬರ ಸ್ನೇಹವೂ ಮರವಜ್ರ ಹಾಕಿ ಸೇರಿಸಿದಂತೆ ಗಾಢವಾಯಿತು. ಲಾಲ್‌ಕುವರಳ ಮೇಲಿನ ಮೋಹದಿಂದ ಇದ್ದ ಅಲ್ಪ ಸ್ವಲ್ಪ ವಿವೇಕವನ್ನೂ ಕಳೆದುಕೊಂಡ – ಜಹಂದರ್. ರಾಜಕಾರಣವೇನೆಂಬುದೇ ಅರಿಯದ ಲಾಲ್‌ಕುವರಳಿಗೆ ತಾನು ಮಾಡುವುದು ಅವಿವೇಕವೆಂಬುದು ತಿಳಿಯದು. ಇಂತಹ ಆದರ್ಶ ಸಂಸಾರ, ಸದಾ ಮೋಜು, ಮನರಂಜನೆ, ಕುಡಿತ, ಕುಣಿತ ಹೀಗೆ ಕಳೆಯಿತು. ಆಸ್ಥಾನದಲ್ಲಿ ಸರದಾರ, ಸೇನಾಪತಿ, ಉಮ್ರಾ, ವಜೀರ ಮುಂತಾದ ಮುಖ್ಯ ಅಧಿಕಾರಿಗಳು ಹಿಂದೆ ಬಿದ್ದರು. ಬೀನ್ ಬಾಜಿಸುವವರು, ಸಾರಂಗಿಯವರು, ನಾಚ್ ಮಾಡುವವರೇ ಮುಂತಾದ ಸಂಗೀತ ಹಾಗೂ ನೃತ್ಯಗಾರರ ಪ್ರಾಬಲ್ಯ ಹೆಚ್ಚಿತು. ಅವರ ಠೀವಿಯೇನು, ಅವರ ಗರ್ವವೇನು, ಹದ್ದು ಮೀರಿದ ನಡೆವಳಿಕೆಗಳೇನು! ಯಾರೂ ಏನೂ ಮಾಡುವಂತಿಲ್ಲ. ಅವರಿಗೆಲ್ಲಾ ಲಾಲ್‌ಕುವರಳ ಪ್ರೋತ್ಸಾಹ ಮತ್ತು ರಕ್ಷಣೆ. ಮೋಹಾಂಧನಾದ ಚಕ್ರವರ್ತಿ ಪ್ರೀತಿಯ ಪತ್ನಿಗೆ ಇಮ್‌ತಿಯಾಜ್ ಮಹಲ್ ಎಂಬ ಬಿರುದು ಕೊಟ್ಟ. ಖರ್ಚಿಗೆ ವರುಷಕ್ಕೆ ಎರಡು ಕೋಟಿ ರೂಪಾಯಿ. ಅಲ್ಲದೆ ಹೇರಿಕೊಳ್ಳಲು ಶಕ್ತಿ ಇದ್ದಷ್ಟೂ ಜವಾಹಿರಿ,

ಇತರ ಅಲಂಕಾರ ಸಾಮಗ್ರಿ. ಸರಿ, ಯಾವ ಕಟ್ಟುಪಾಡೂ ಇಲ್ಲದ ಸ್ವೇಚ್ಛೆಯಾದ ಜೀವನವೆಂದು ಹೇಳಲೇಬೇಕಾಗಿಲ್ಲ.

ದೀಪೋತ್ಸವ

ಚಕ್ರವರ್ತಿ ಸಿಂಹಾಸನವನ್ನೇರಿದ ದಿನ ನಗರದಲ್ಲಿ ದೀಪೋತ್ಸವವಾಗಬೇಕಾದುದು ಸಹಜವೇ ತಾನೆ? ಆದರೇ ನಿತ್ಯವೂ ಹೀಗೆಯೇ ದೀಪಗಳ ಸಾಲು ಹಚ್ಚಿ ಬೆಳಗಿದರೆ ದೆಹಲಿ ಎಷ್ಟು ಚೆನ್ನಾಗಿ ಕಾಣುತ್ತೆ? - ಎಂಬ ಯೋಚನೆ ಬಂದಿತು - ಲಾಲ್‌ಕುವರಳಿಗೆ. ಜಹಂದರನಿಗೆ ಹೇಳಿಕೊಂಡಳು. ಸರಿ, ರಾಜಾಜ್ಞೆ ಹೊರಟಿತು - ದೆಹಲಿಯಲ್ಲಿ ವಾರದಲ್ಲಿ ಕನಿಷ್ಠ ಪಕ್ಷ ಮೂರು ದಿನವಾದರೂ ದೀಪೋತ್ಸವವಾಗಬೇಕೆಂದು. ಇದರಿಂದ ವಾರದಲ್ಲಿ ಮೂರು ರಾತ್ರಿಯಾದರೂ ರಾಜಧಾನಿಯಲ್ಲಿ ಜನರು ಧೈರ್ಯವಾಗಿ ಓಡಾಡುವ ಹಾಗಾಯಿತು. ಕಳ್ಳಕಾಕರ ಹಾವಳಿ ಸ್ವಲ್ಪ ಕಡಮೆಯಾಯಿತು. ಆದರೆ ಇನ್ನೊಂದು ಸಮಸ್ಯೆ ಪ್ರಾರಂಭವಾಯಿತು. ಅದು ಎಣ್ಣೆಗೆ ಸಂಬಂಧಿಸಿದುದು. ಸರಬರಾಜು ಸಾಲದು. ಬೆಲೆ ಗಗನಕ್ಕೇರಿತು. ಫಲ - ದೀಪೋತ್ಸವ ನಿಂತಿತು.

ಒಂದು ದಿನ ಕೆಂಪುಕೋಟೆಯ ಬುರುಜಿನ ಮೇಲೆ ಚಕ್ರವರ್ತಿ ಮತ್ತು ಲಾಲ್‌ಕುವರ್ ಇಬ್ಬರೂ ಕುಳಿತು ಹಾಯಾಗಿ ಮಾತನಾಡುತ್ತಾ ಕಾಲಕಳೆಯುತ್ತಿದ್ದರು. ಕೆಳಗೆ ಯಮುನಾನದಿ. ಅದರಲ್ಲಿ ಒಂದು ದೋಣಿಯ ತುಂಬ ಜನಗಳು ಕುಳಿತು ಪ್ರಯಾಣ ಮಾಡುತ್ತಿದ್ದರು. ಇದ್ದಕ್ಕಿದ್ದ ಹಾಗೆ ಲಾಲ್‌ಕುವರಳಿಗೆ ಒಂದು ಯೋಚನೆ. ದೋಣಿ ಒಡೆದರೆ ಪ್ರಯಾಣಿಕರು ಹೇಗೆ ಮುಳುಗಿ ಸಾಯುವರು? ಅದನ್ನು ನೋಡಬೇಕೆಂಬ ಆಸೆ ಬಲವಾಯಿತು. ಅದನ್ನು ಚಕ್ರವರ್ತಿಗೆ ಹೇಳಿಕೊಂಡಳು. ಸರಿ, ಸ್ವಲ್ಪ ಸಮಯದಲ್ಲಿಯೇ ನದಿಯಲ್ಲಿ ತೇಲಿ ಬಂದಿತು ಜನ ತುಂಬಿದ ದೋಣಿ. ಚಕ್ರವರ್ತಿಯ ಎದುರಿನಲ್ಲಿ ಒಡೆಯಿತು. ಅದರಲ್ಲಿದ್ದ ಜನ ಒದ್ದಾಡುತ್ತಾ ನೀರುಪಾಲಾದರು. ಲಾಲ್‌ಕುವರಳ ಬಯಕೆ ತೀರಿತು.

ಸುಬೇದಾರಿಕೆ

ತನ್ನ ಎಣಿಕೆಯಂತೆ ಸಫಲವಾಗದಿದ್ದ ಲಾಲ್‌ಕುವರಳ ಆಸೆ ಒಂದು ಅವಳ ತಮ್ಮನಿಗೆ ಸಂಬಂಧಿಸಿದುದು. ಅವಳ ಕೋರಿಕೆಯಂತೆ ನಿಯಾಮತ್ ಷಾ ಕಲಾವಂತನನ್ನು ಮುಲ್ತಾನಿನ ಸುಬೇದಾರನಾಗಿ ನೇಮಿಸಿದ - ಜಹಂದರ್. ಪದ್ಧತಿಯಂತೆ ಅಧಿಕಾರದ ಸನ್ನದನ್ನು ಪಡೆಯಲು ಪ್ರಧಾನ ವಜೀರನ ಬಳಿಗೆ ಬಂದು ನಜರನ್ನು ಒಪ್ಪಿಸಿದ, ನಿಯಾಮತ್ ಷಾ. ಆದರೆ ವಜೀರನು ಹಣ ಹಾಗೂ ಜವಾಹಿರಿಯಿಂದ ಕೂಡಿದ ಈ ನಜರನ್ನು ಸ್ವೀಕರಿಸಲು ಒಪ್ಪಲಿಲ್ಲ. ಅದರ ಬದಲು ಒಂದು ಸಾವಿರ ವೀಣೆಗಳನ್ನು ತಂದುಕೊಟ್ಟಲ್ಲಿ ಸನ್ನದನ್ನು ಕೊಡುತ್ತೇನೆ ಎಂದು ಹೇಳಿದ.

ಪಾಪ, ಆ ಪ್ರಾಣಿ ನಿಯಾಮತ್ ಡಿಲ್ಲಿಯ ಸಂದುಗೊಂದುಗಳನ್ನೆಲ್ಲಾ ಸುತ್ತಿ ಹುಡುಕಿ ಇನ್ನೂರು ವೀಣೆಗಳನ್ನು ಸಂಪಾದಿಸಿ ವಜೀರನ ಬಳಿಗೆ ತಂದ. ಆದರೆ ವಜೀರನು ಒಪ್ಪಲಿಲ್ಲ.

ಸಾವಿರಕ್ಕೆ ಒಂದು ವೀಣೆ ಕಡಮೆಯಾದರೂ ಸನ್ನದನ್ನು ಕೊಡಲಾಗವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದ. ಏನೂ ತೋರದೆ ತನ್ನ ಅಕ್ಕನ ಮೊರೆ ಹೊಕ್ಕ - ನಿಯಾಮತ್ ಷಾ. ಅವಳು ಚಕ್ರವರ್ತಿಗೆ ದೂರಿತ್ತಳು. ವಜೀರನನ್ನು ಬರಮಾಡಲಾಯಿತು. ಇದೇತಕ್ಕೆ ಇಂತಹ ವಿಚಿತ್ರ ಕೋರಿಕೆ ಎಂದು ಕೇಳಿದ - ಜಹಂದರ್. ಅದಕ್ಕೆ "ಜಹಾಪನಾ, ಇದುವರೆಗೂ ರಾಜ್ಯಕಟ್ಟಲೂ ಮತ್ತು ಅದನ್ನು ಆಳಲೂ ಹಾಗೂ ಕಾಪಾಡಲೂ ಕೈಯಲ್ಲಿ ಕತ್ತಿ ಗುರಾಣಿಯನ್ನು ಹಿಡಿಯಬೇಕಾದ್ದು ಅವಶ್ಯಕ ಎಂದುಕೊಂಡಿದ್ದೆವು. ಆದರೆ ಈಗ ಕೇವಲ ವೀಣೆಬಾರಿಸಿಕೊಂಡಿದ್ದರೆ ಸಾಕೆಂಬ ತೀರ್ಮಾನಕ್ಕೆ ಬಂದಂತಿದೆ. ಆದ್ದರಿಂದ ಈ ಹೊಸಕಾಲಕ್ಕೆ ತಕ್ಕಂತೆ ನಾವೂ ಬದಲಾಯಿಸಿಕೊಳ್ಳಬೇಡವೆ? ಸರದಾರರೂ, ಸೈನಿಕರೂ, ಅಧಿಕಾರಿಗಳೂ ಕತ್ತಿಯನ್ನು ಬಿಸಾಡಿ ಬೀನ್ ನುಡಿಸುವುದನ್ನು ಕಲಿಯಲೋಸುಗ ಅವರುಗಳಿಗೆ ಹಂಚಬೇಕೆಂದೇ ಈ ಸಾವಿರ ವೀಣೆಗಳ ನಜರಿಗೆ ಒತ್ತಾಯ ಮಾಡಿದೆ" - ಎಂದು ಉತ್ತರಕೊಟ್ಟ ವಜೀರ್ ಜುಲ್‌ಫಿಕರ್ ಆಲಿಖಾನ್. ಚಕ್ರವರ್ತಿಗೆ ಏನು ಹೇಳಲೂ ತೋರಲಿಲ್ಲ. ನಿಯಾಮತ್ ಷಾನ ಸುಬೇದಾರಿ ನೇಮಕವನ್ನು ರದ್ದು ಮಾಡಿದ. ಲಾಲ್‌ಕುವರಳು ಕೋಪದಿಂದ ಕೆಂಪಾದಳು, ನುಂಗಿಕೊಂಡಳು.

ಔತಣ

ಈ ಆದರ್ಶ ದಂಪತಿಗಳ ಇನ್ನೊಂದು ಅವಿವೇಕ ಜಹಂದರನ ಜೀವಕ್ಕೇ ಸಂಚಕಾರ ತಂದಿತು. ಔತಣಗಳೇ ದಿನಚರಿಯಾಗಿದ್ದ ಈ ದಂಪತಿಗಳು ಆಪ್ತರನ್ನು ಅರಮನೆಗೆ ಬರಮಾಡಿಕೊಳ್ಳುತ್ತಿದ್ದರು. ತಾವೂ ಆಪ್ತರ ಮನೆಗಳಿಗೆ ಹೋಗುತ್ತಿದ್ದರು. ಒಂದು ದಿನ ಇಂತಹ ಔತಣಕ್ಕೆ ಹೋದಾಗ ಮದ್ಯವು ಬಹುರುಚಿಯಾಗಿತ್ತು. ಚೆನ್ನಾಗಿ ಕುಡಿದು ಮೈ ಮರೆತರು. ಇಂತಹುದನ್ನು ನೋಡಿ ಅಭ್ಯಾಸವಾಗಿದ್ದ ಸಾರಥಿ ಇಬ್ಬರನ್ನೂ ಗಾಡಿಯಲ್ಲಿ ಹಾಕಿಕೊಂಡು ಅರಮನೆಯೊಳಕ್ಕೆ ತಂದ. ನಡುರಾತ್ರಿಯಲ್ಲಿ ಅಂಗರಕ್ಷಕರು ಚಕ್ರವರ್ತಿಯ ಮಲಗುವ ಮನೆಯಲ್ಲಿ ಇಣಿಕಿ ನೋಡಿದರು. ಹಾಸಿಗೆ ಖಾಲಿ. ಗಾಬರಿಗೊಂಡು ಅರಮನೆಯಲ್ಲೆಲ್ಲಾ ಹುಡುಕಲಾರಂಭ. ಕೊನೆಗೆ ಲಾಲ್‌ಕುವರಳ ಕೊಠಡಿಯ ಬಳಿ ಬಂದು ಕೇಳಿದರು. ಅಲ್ಲಿಯೂ ಇಲ್ಲ. ಅರೆಗಣ್ಣು ಬಿಟ್ಟು ಅರಳು ಮರಳಾಗಿ ಮಾತಾಡುತ್ತಿದ್ದ ಲಾಲ್‌ಕುವರಳಿಗೆ ತಾನು ಅರಮನೆಗೆ ಹೇಗೆ ತಲಪಿದೆ ಎಂಬುದೇ ನೆನಪಿಲ್ಲ. ಕೊನೆಗೆ ಗಾಡಿಯವನನ್ನು ಹುಡುಕಿದ್ದಾಯಿತು. ಆ ವೇಳೆಗೆ ಅವನು ಗಾಡಿಯನ್ನು ಕೋಟೆಯ ಹೊರಗೆ ಲಾಯದಲ್ಲಿ ಬಿಟ್ಟು ಮನೆಗೆ ಹೋಗಿ ಮಲಗಿದ್ದ. ನಿಷಾದಲ್ಲಿದ್ದ ಜಹಂದರನ ಸೇವಕನಲ್ಲವೆ? ಅವನನ್ನು ಎಬ್ಬಿಸಿ ಹೆದರಿಸಿ ಗಾಡಿಯನ್ನು ಕಟ್ಟಲು ಲಾಯಕ್ಕೆ ಕರೆದುಕೊಂಡು ಬಂದರು. ಕುದುರೆಯನ್ನು ಕಟ್ಟಲು ಗಾಡಿಯನ್ನು ಹೊರಕ್ಕೆ ತಂದಾಗ ಒಳಗೆ ಗೊರಕೆಯ ಶಬ್ದ. ಪಂಜುಬೆಳಕಿನಲ್ಲಿ ನೋಡಿದರೆ - ಚಕ್ರವರ್ತಿ ಹಾಯಾಗಿ ಮಲಗಿದ್ದಾನೆ. ಅರಮನೆಗೆ ಬಂದಾಗ ಅವನು ಇಳಿಯುವ ಸ್ಥಿತಿಯಲ್ಲಿರಲಿಲ್ಲ, ಯಾರೂ ನೋಡಿ ಒಳಕ್ಕೆ

ಎತ್ತಿಕೊಂಡು ಹೋಗಿರಲಿಲ್ಲ. ಮೃದುವಾಗಿ ಕದಲಿಸಿದ ಮೇಲೆ ಕಣ್ಣು ಬಿಟ್ಟು "ನಾನು ಯಾರು? ಎಲ್ಲಿದ್ದೇನೆ?" ಅಂದ.

ಅವರೋಹಣ

ಈ ಸುದ್ದಿ ಊರಿನಲ್ಲೆಲ್ಲಾ ಹರಡಿತು. ಮೊದಲೇ ಜುಗುಪ್ಸೆಗೊಂಡಿದ್ದ ಅಧಿಕಾರಿ ಹಾಗೂ ಸೇನಾನಿಗಳಿಗೆ ಕೋಪದಿಂದ ತಾಳ್ಮೆಕೆಟ್ಟಿತು - ಇಂತಹ ಅವಿವೇಕಿಯ ಸೇವೆ ಮಾಡುತ್ತಿದ್ದುದಕ್ಕಾಗಿ. ಇದರ ಫಲ - ಅಬ್ದುಲ್ಲಾ - ಹುಸೇನಾಲಿಗಳಂತಹ ರಾಜ ನಿರ್ಮಾಪಕರು ಪ್ರಬಲರಾದುದು. ಜಹಂದರ್‌ಷಹನ ತಮ್ಮನ ಮಗ ಫರುಕ್ಸೀಯರನನ್ನು ಮುಂದಕ್ಕೆ ತಂದು ಪಟ್ಟಕಟ್ಟಿದುದೂ, ಜಹಂದರನ ವಧೆಯಾದುದೂ ಇತಿಹಾಸ ಓದಿದವರು ಬಲ್ಲ ವಿಷಯ.

ಕೆಂಪುಕೋಟೆಯ ಒಳಗೆ ಸ್ವಲ್ಪ ದೂರ ಹೋದನಂತರ ನಗಾರ್‌ಖಾನೆ ಕಾಣಬರುತ್ತದೆ. ಇಲ್ಲಿ ಅವಿತುಕೊಂಡಿದ್ದ ಜಹಂದರ್ ಷಹನನ್ನು ಸೈನಿಕರು ಕೊಂದರೆಂದು ತಿಳಿದುಬರುತ್ತದೆ. ಅವನ ಜೊತೆಯಲ್ಲಿ ಲಾಲ್‌ಕುವರಳೂ ಇದ್ದಳು. ಸೈನಿಕರು ಬಂದಾಗ ಜಹಂದರನನ್ನು ಬಿಗಿಯಾಗಿ ಅಪ್ಪಿಕೊಂಡು ತನ್ನನ್ನು ಕೊಂದನಂತರವೇ ಚಕ್ರವರ್ತಿಯನ್ನು ಕೊಲ್ಲಬೇಕೆಂದು ಕೂಗಿದಳಂತೆ - ಲಾಲ್‌ಕುವರ್. ಆದರೆ ಸೈನಿಕರು ಅವಳನ್ನು ಹಿಡಿದು ಎಳೆದು ಆಚೆಗೆ ಹಾಕಿ ಆ ನಂತರ ಜಹಂದರನ ವಧೆ ಮಾಡಿದರಂತೆ.

ಹೀಗೆ ಜೀವನದಲ್ಲಿ ಸುಖಾಪೇಕ್ಷಿಯಾಗಿದ್ದ ಲಾಲ್‌ಕುವರಳ ಅವಿವೇಕ ಜೀವನ ಮತ್ತು ನಡೆವಳಿಕೆಯ ಫಲವಾಗಿ ಮೊಘಲ್ ಸಾಮ್ರಾಜ್ಯದ ತಳಪಾಯ ಶಿಥಿಲವಾಯಿತು. ಈಗ ಲಾಲ್‌ಕುವರ್ ಲಾಲ್ ಬಂಗ್ಲೆಯಲ್ಲಿ ದೀರ್ಘನಿದ್ರೆ ಮಾಡುತ್ತಿದ್ದಾಳೆ. ಪಕ್ಕದಲ್ಲಿ ಅವಳ ಮೊಮ್ಮಗಳು ಬೇಗಮ್‌ಜಾನಳ ಸಮಾಧಿ ಇದೆ. ★ ★ ★ ★ ★ ★ ★ ★ ★ ★ ★ ★

ಸುಧಾ, 1976

45. Music – Karnataka? Or South Indian?

On the Republic Day of 1986, Kona Prabhakar Rao, the Governor of Maharashtra, organised an interesting music event. Its object was perhaps to highlight the unified character of Indian music, despite a duality in styles. It comprised of a series of Jugalbandhis – Amjad Ali Khan and Lalgudi Jayaraman; Bhimsen Joshi and Balamuralikrishna and so on. After the recital Amjad Ali Khan mooted his pet proposal. It was a suggestion to alter the nomenclatures of the two styles i.e., Hindustani and Karnatak into North and South Indian styles of music. A resolution to that effect was also signed by the musicians who participated. Amjad was advocating this change from a few years. It was put in writing now.

But as it usually happens with resolutions related to music, nobody seems to have taken any serious notice of it. But a few days later, a senior Vidwan came to me and expressed his deep concern at this resolution. "It has been an insult to Karnataka and I am surprised none of you who are professed lovers of music reacted sharply" he said. Then I asked him what was the insult to Karnataka in advocating this change. He retorted "when the name Karnataka is in use from a long time and accepted by the music fraternity in the country why change it now for a purpose that is not clear? Is it not an insult to Karnataka?" he said. Then I requested him to calm down and referred to the preamble of the resolution where it is mentioned that because these two styles are functioning in various areas not exclusively covered by the languages indicated in their nomenclature i.e. Hindustani language and similarly Karnatak Music flourishing in the entire South India comprising of the four linguistic regions, it was felt that it was incongruous to carry the present designations as such indicated particular languages. Consequently a more rational change has been suggested. Then the musician retorted "because Karnataka has made such valuable contribution to music its name has been appended to the music of South India. And it is wrong to repeal the nomenclature. This act indicates the denial of the credit." My next question was "would you please enlighten me as to what exactly is the Karnataka element in the music of South India that is in practise now. Ninety per cent of it has originated in Tamil Nadu. Is it not natural they resent the designation of Karnataka which denies due credit to them?" The musician did not like

to change his stand. "You ask what exactly is the Karnataka element in the present music. You must remember that it originated in Karnataka". I draw attention to the fact that Purandaradasa is reverred as the KARNATAKA SANGITHA PITAMAHA. He gave us the seven Swaras, the Sarale, Janti varase, Alankara etc. which is the very foundation of the music of the south. Thus is it not the privilege of Karnataka to give its name to the music of South India? he countered. Then I told him that he was wrong with his facts and not studied the history of music properly. The seven Swaras, the Sarale based on some portions of the Alankaras were already in use centuries before Purandaradasa was born. Thus the arguments and facts he advanced had no substance. He went away though I could see he was not convinced.

And after the formation of the linguistic states each region started to find its own distinct cultural identity. The resolution at Bombay was one such manifestation. I also told the Vidwan not to be bothered by such resolutions because notwithstanding the opinions expressed therein, Indian musicians were always conservative and would not like to alter long established traditions. This has been proved in the numerous discussions about the Ragaswaroopa in the experts sessions of the Madras Music Academy's conferences. While all the Vidwans aired their opinions and also passed resolutions carrying the sum total of the various shades of opinions expressed, they stuck to their own versions in performances and which they received from their gurus. Thus there was always a gap between the resolution and actual practice. This is apparent even now in many of the musical events organised by some of the signatories to the Bombay resolution itself. They had freely used the terms. – Karnatic, Carnatic, Karnatak etc. for these events. Though musicians themselves were not concerned much about the designation of the two styles, they had to respond to the surfacing regional urges in the post independence period. In fact while inaugurating a music conference, at Madras C. Rajagopalachari stated "it would be proper to designate our music in the southern region as 'Tennattu' Sangitham instead of the one being in use now". Notwithstanding the fact that a majority of the music fraternity was unconcerned about the nomenclature of South Indian music as Karnatak music, there were also some sections which felt it was incongruous in the face of realities.

But interestingly enough nowhere in any of the ancient texts do we come across the words HINDUSTANI and KARNATAKA designating these two styles. They are only in popular usage. We do not know since when they came into use. Of course the word Karnata or Karnataka

occurs in some of these texts, but not in the context they are being applied now. Even in BRIHADDESI the word Karnata occurs in respect of compositional forms. And it is found in the same context in some other works too. It also occurs in the Bharatabhashya of Nanyadeva when one of his titles are 'Karnatakulabhooshana', when Govinda Deekshita refers toVidyaranya as 'Karnataka Simhasana Bhagya Vidhata' and when Pundarika Vithala refers to his birthplace Satanur as 'Karnate' Saivagangabhidana nikate etc. But nowhere we come across as 'Karnataka' denoting a Sangitha Paddhati. The ancient texts referred to the art of music only as SANGITHA not with two different nomenclatures.

In view of this and apart from the oral tradition, how did these two names figure in atleast some books written in the 20th century? The source may be the late Prof. P. Sambamurthy who published a series of books on music. They are serving both as textbooks and also general reading to understand music. His books have a stamp of authority. And noteworthy is the fact that these books are titled – South Indian music and not Karnatak music. While preparing them, the Professor perhaps felt it difficult to reconcile the long used word Karnataka music, functioning in South India in the absence of any written authority. And he accidently came across a quotation that suited this need and cleared doubts. It was a verse from a work titled SANGITHA SUDHAKARA, wherein these lines occur.

Tadapi dvividham jneyam Dakshinottara bedhataha

Karnatakam daakshinesyat Hindustani tathottare

Satisfied that it served his purpose, the Professor reproduced this verse in his 'History of music' without verifying either the source or accuracy. Possibly he extracted it from the detailed foreword of M.S. Ramaswamy Iyer to Swaramelakalanidhi where the verse is quoted. Though this verse is supposed to be from 'Sangitha Sudhakara' it was not from the famous work of the same name by Haripala of 14-15th century, as presumed. But it was from another work of identical name of comparatively recent origin. It was an extract from Sangitha Sudhakara whose author was Kasinath Appa Tulsi of Hyderabad. This book was published in 1911, a period when the two nomenclatures were in use from a long time. Later, though this error was pointed out in the deliberations of the Conferences of the Madras Music Academy and similar institutions, it is still being repeated in most books on music who faithfully lift entire material from Prof. Sambamurthy's books and have not bothered to make any alterations in the light of this new information forthcoming.

If ancient authoritative texts on Indian classical music do not mention these two styles let alone the nomenclatures, i.e., Hindustani and Karnatak how did they came in and established themselves? Of course one has to speculate then being specific. The source of the nomenclature of Hindustani, for instance may be traced to the Islamic conquerors. In their references to the music of this country they have invariably mentioned it as the music of Hindustan, even from the days of Amir Khusro. Subsequent historians have always referred to the music of India as the music of Hindustan. It was not long before it was turned into Hindustani music. It is possible that even during that period there was a difference between the music of north and South India. The music of the north further enriched due to the cross fertilisation with the Arabian and Persian musical ideas and elements resulted in the present form of Hindustani music.

Now about the Karnataka nomenclature in the music of South India. When the music of south is viewed in its historical perspective, we find that each of its linguistic regions has been in the forefront of its development at sometime or the other. Karnataka has also played an important role considering the number of authoratitive works on music produced either on the soil of Karnataka or by scholars of Karnataka origin. But this is insufficient by itself to invest the southern style of music with the designation of Karnataka Sangitham. This source may be traced to the Vijayanagar empire, i.e., Karnataka Simhasana. The earlier rulers here were no doubt of Kannada origin. But the later rulers came from different linguistic families. Nevertheless all sported the appellative Karnataka Simhasanadheeswara. And the empire also embraced the entire south from the Krishna river leaving a deep imprint of its culture. We may recall that Vidyaranya is hailed as the `Karnataka Simhasana Bhagyavidhata'. Here the word Simhasana does not merely denote a throne, but connotes the state itself. Vijayanagar was known as the Karnataka Samrajya or state and all things originated or cultivated under its umbrella had that Karnataka tag. Long after the fall of Vijayanagar, the descendent of that Royal dynasty, Veera Venkatapatiraya who had settled and ruled from Penukonda was hailed as the KARNATAKA SIMHASANADHEESWARA. Thus the Karnataka tag must have started later than 'Hindustani' after the establishment of the Vijayanagar empire. And we must also remember notwithstanding its ancient origins the present performing arts like music and dance in the south carry a heavy imprint of Vijayanagar. And this word Karnataka has cultural connotation than mere linguistic area signifies forms and traditions cultivated and prospered fostered it at Vijayanagar and later spread throughout south. The word has no doubt different meanings at the popular level. But in the musical context

the Karnataka Sangitha Paddhati indicates the style of music that is flourishing in the entire area south of Vindhyas.

Now coming to how this word has been corrupted into Karnatic or Carnatic. This is mainly due to foreigners or *Firangis* as the Englishmen were known. I should quote the words of Bishop Caldwell in this context:

. . "Mahomedans at first used Mysore and part of Telengana as Carnatic and extended it to places below Ghats. The English carried the missapplication further and restricted the name to country below the Ghats which never had any right to it whatsoever. Hence the Mysore country which is probably the true Carnatic is no longer called by that name and what is now geographically termed Carnatic is exclusively the Ghats on the Coromondel coasts (Bishop Caldwell – Grammar of Dravidian Languages)

As they designated the area to the north of Nellor as 'Circars' the English called all the area to its south as Carnatic and referred to the music of practised there as 'Carnatic music'. All the old English writers on Indian music continued this and called the music of south as Carnatic music, whereas the place that had a claim i.e., Cholamandalam was not given that credit but got the misapplication in the name of Coromondel. Therefore this word Carnatic is absurd and meaningless. It is a gift of the English like Trichinopoly, Trivandrum, Seringapatam, Tinnevelly etc. their own versions of these south Indian cities. Thus Karnataka tag to music may be of fairly later origin than Hindustani.

But the people at large, except some ultra sensitive ones, continue to use the nomenclature Karnataka during the post independence period, when each linguistic region started to find and project its distinct identity the clash of words also started. However notwithstanding any change in the nomenclature, the spirit and form remain unchanged as before except satisfying the ego of some proponents. And the possibility of acrimony is more about the change in Hindustani music.

Perhaps Amjad Ali Khan did not realise this when he advocated the alteration of Hindustani into north Indian music. In this highly politicised atmosphere, it could provide ammunition for politicians to target Amjad Ali Khan as anti Hindu. Therefore it is advisible that musicians, instead of engaging themselves in polemics which in no way help a positive development of art should direct their energies towards qualitative improvement of music and welfare of the music fraternity. ★ ★ ★ ★ ★

1986

46. Was Purandaradasa the precursor of Karnataka music

ಬಿ.ವಿ.ಕೆ ಶಾಸ್ತ್ರಿಗಳು (ಅಥವಾ ಬಿ.ವಿ. ಕೃಷ್ಣಶಾಸ್ತ್ರಿಗಳು) ವಯಸ್ಸಿನಲ್ಲಿ ನನಗಿಂತ ಎರಡು ಮೂರು ವರ್ಷ ಹಿರಿಯರು. ನಾವಿಬ್ಬರೂ ಜನಿಸಿದುದು ನಂಜನಗೂಡಿನಲ್ಲಿ. ಅಂತೂ ನಮ್ಮಿಬ್ಬರ ಒಡನಾಟ, ನಂಟು ಏಳು ದಶಕಗಳಿಗೂ ಮೀರಿದುದು. ತುಂಬಿ ಹರಿಯುವ ನದಿಯಲ್ಲಿ ಎಂದೂ ಭರದಿಂದ ಮುಂದೆ ಸಾಗುವ ಪ್ರವಾಹದಂತೆ ಹರಿದಿದೆ ನಮ್ಮಿಬ್ಬರ ಮೈತ್ರಿ.

ಎಳೆಯ ವಯಸ್ಸಿನಲ್ಲಿ ನಾವಿಬ್ಬರೂ ನಮ್ಮ ಮನೆಯ ಪಕ್ಕದಲ್ಲಿರುವ ಸಂಸ್ಕೃತ ಪಾಠಶಾಲೆಯಲ್ಲಿ ನಡೆಯುತ್ತಿದ್ದ ಗಣಪತಿ ವಾರ್ಷಿಕ ಉತ್ಸವ ಸಂದರ್ಭದಲ್ಲಿ ಜರಗುತ್ತಿದ್ದ ಸಭೆ -ಮಂಗಳಾರತಿಗಳಲ್ಲಿ ಅಂತ್ಯಾಕ್ಷರೀ ಶ್ಲೋಕ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದ ಸ್ಮರಣೆ ಇದೆ. ಇಂದಿನ ಖ್ಯಾತ ಪಿಟೀಲು ವಿದ್ವಾನ್ ಆರ್. ಆರ್. ಕೇಶವಮೂರ್ತಿಗಳು ಅಲ್ಲಿ ಪಿಟೀಲು ಬಾರಿಸುತ್ತಿದ್ದ ನೆನಪಿದೆ. ಅವರ ತಂದೆ ಆ ಊರಿನಲ್ಲಿ ಬಾಲಿಕಾ ಪಾಠಶಾಲೆಯಲ್ಲಿ ಸಂಗೀತದ ಉಪಾಧ್ಯಾಯರಾಗಿದ್ದರು.

ಗ್ರಂಥಾಲಯದ ನೆರಳಿನಲ್ಲಿ

ಊರಿನ ಪ್ರಮುಖ ಚೌಕದಲ್ಲಿ ಕೃಷ್ಣರಾಜೇಂದ್ರ ಸಾರ್ವಜನಿಕ ಗ್ರಂಥಾಲಯ ಇತ್ತು (ಈಗ ಆ ಕಟ್ಟಡ ನಿರ್ನಾಮವಾಗಿದೆ). ಬಾಲ್ಯದಲ್ಲಿ ಹಲವು ವರ್ಷಗಳು ನಾನೂ, ಶಾಸ್ತ್ರಿಗಳು, ನನ್ನ ತಮ್ಮ ಶ್ರೀಕಂಠಯ್ಯ ಈ ಗ್ರಂಥಾಲಯದಲ್ಲಿದ್ದ ಸಾರಾಸಗಟು ಗ್ರಂಥಗಳನ್ನೆಲ್ಲಾ ತಿರುವು ಹಾಕಿದ್ದೇವೆಂದು ಹೇಳಲು ಹೆಮ್ಮೆ! ನಮ್ಮ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತುಕೊಟ್ಟು ನಮ್ಮ ಜ್ಞಾನ ಇಮ್ಮಡಿಸಲು ಇದೊಂದು ಕೇಂದ್ರವಾಯಿತು. ಶಾಸ್ತ್ರಿಗಳು ಮತ್ತು ನಾವು ಎಂದೂ ಪುಸ್ತಕಗಳಿಗೆ ಅಂಟಿದ ಪ್ರಾಣಿಗಳೇ! Bookworms ಎಂದರೂ ನಮಗೆ ನಾಚಿಕೆ ಇಲ್ಲ. ಅಲ್ಲಿದ್ದ ಕಾವ್ಯ, ಕಾದಂಬರಿ ಮುಂತಾದ ಗ್ರಂಥಗಳಿಂದ ಹಿಡಿದು ನಿತ್ಯಪತ್ರಿಕೆ ಮತ್ತು ವಾರಪತ್ರಿಕೆಗಳನ್ನು ತಪ್ಪದೆ ತಿರುವಿಹಾಕುವ ನಮ್ಮಲ್ಲಿ ಬೇರೂರಿರುವ ಚಟದ ಮೂಲ ಈ ಲೈಬ್ರರಿಗೆ ಸಲ್ಲಬೇಕು. ನಾಕಷ್ಟು ಇಂಗ್ಲೀಷ್ ಸಾಹಿತ್ಯ, ಕನ್ನಡ ಚರಿತ್ರೆ, ಸ್ವಲ್ಪಮಟ್ಟಿಗೆ ಶಿಲ್ಪ, ಚಿತ್ರ ಇವೆಲ್ಲದರ ಬಗ್ಗೆ ಲಕ್ಷ್ಯ ಸೆಳೆದಂತಾಯಿತು.

ಅಂದು ಊರಿನಲ್ಲಿ ಜರಗುತ್ತಿದ್ದ ಸಂಗೀತ ಕಚೇರಿಗಳು, ಸಾಹಿತ್ಯ ಕೂಟಗಳು, ರಾಜಕೀಯ ಸಭೆ, ಮೆರವಣಿಗೆಗಳು, ಕಂಪೆನಿ ನಾಟಕ ಪ್ರದರ್ಶನಗಳು ಇವೆಲ್ಲಾದರೂ ನಮ್ಮ ಗುಂಪು ತಪ್ಪದೆ

ಹಾಜರಾಗುತ್ತಿತ್ತು. ಈ ಗುಂಪು ಎಂದರೆ ನಾನು (ಅಪ್ಪಯ್ಯ), ಜಿ.ವಿ. ಅಯ್ಯರ್ 'ಪಯ್ಯ' - ಇಂದಿನ ಖ್ಯಾತ ಸಿನಿಮಾ ತಯಾರಕರು), ಎನ್. ಶ್ರೀಕಂಠಯ್ಯ 'ಅಯ್ಯ' - ಪ್ರಜಾವಾಣಿ ಬಳಗದಲ್ಲಿದ್ದು ಈಚೆಗೆ ಕಾಲವಾದರು), ನನ್ನ ತಮ್ಮ ಶ್ರೀಕಂಠಯ್ಯ ಮತ್ತು ಬಿ.ವಿ.ಕೆ. ಶಾಸ್ತ್ರಿಗಳು. ಈ ಪಂಚ ಪ್ರಚಂಡರ ಕೂಟದಲ್ಲಿ ಎನ್. ಶ್ರೀಕಂಠಯ್ಯ ಒಬ್ಬರು ಮಾತ್ರ ಕಣ್ಮರೆ. ಮಿಕ್ಕೆಲ್ಲರೂ ಇಂದೂ ಒಡನಾಡಿಗಳಾಗಿ ಮುಂದುವರಿದಿದ್ದೇವೆ.

ಸಂಗೀತದ ನಂಟು:

ನಂಜನಗೂಡಿನಲ್ಲಿ ಮುಖ್ಯ ರಾಮ ಮಂದಿರದಲ್ಲಿ ವರ್ಷಂಪ್ರತಿ ಭಾರೀ ರಾಮೋತ್ಸವದ ಸಂಭ್ರಮ. ನಮ್ಮ ಅಣ್ಣ ಆರ್. ಸೀತಾರಾಂ (ಮುಖ್ಯ ಕಾರ್ಯದರ್ಶಿ) ಮತ್ತು ಪಿಟೀಲು ವಿದ್ವಾನ್ ಚೌಡಯ್ಯನವರೂ ಆಪ್ತ ಮಿತ್ರರು. ಆಗಿನ ಮೈಸೂರು ಬಿಡಾರಂ ರಾಮ ಮಂದಿರದಲ್ಲಿ ಹಾಡಲು ಬರುತ್ತಿದ್ದ ಘಟಾನುಘಟಿ ವಿದ್ವಾಂಸರನ್ನು ಅನೇಕ ಬಾರಿ ಅಲ್ಲಿ ಕಚೇರಿಯ ನಂತರ, ವಿದ್ವಾನ್ ಚೌಡಯ್ಯನವರು ಸ್ವತಃ ತಮ್ಮ ಕಾರಿನಲ್ಲಿ ಕರೆತಂದು ಬಿಟ್ಟು, ಸುಮಾರು ರಾತ್ರಿ 10 ಗಂಟೆ ನಂತರ, ಇಲ್ಲಿ ಭರ್ಜರಿ ಕಚೇರಿಗಳು. ಆ ಮಹಾನ್ ಕಲಾವಿದರೆಲ್ಲ ನಮ್ಮ ಮನೆಯಲ್ಲೇ ಬಿಡಾರ ಮಾಡುತ್ತಿದ್ದರಿಂದ, ಬಿಡಾರಂ ಕೃಷ್ಣಪ್ಪನವರಿಂದ ಹಿಡಿದು, ಪಾಲ್ಘಾಟ್ ಮಣಿ ಅಯ್ಯರ್‌ವರೆಗೆ ಗಾಯನ ಲೋಕದ ದಿಗ್ಗಜಗಳೇ ನಮಗೆ ಹತ್ತಿರದವರಾದರು. ಇದರ ನಿಮಿತ್ತ ಎಳೆತನದಲ್ಲೇ ನಮ್ಮೆಲ್ಲರಿಗೂ ಸಂಗೀತದಲ್ಲಿ ಅಪಾರ ಆಸಕ್ತಿ ಮೊಳೆಯಿತು. ರಾಗ, ತಾಳ, ಪಲ್ಲವಿ, ಮಟ್ಟು, ಸ್ವರ, ಸಾಹಿತ್ಯ, ಕೀರ್ತನೆ, ಜಾವಳಿ, ವರ್ಣ, ಚಿಟ್ಟೆಸ್ವರ ಇತ್ಯಾದಿ ವಿಭಾಗಗಳ ಸ್ಥೂಲ ಪರಿಚಯ ಆರಂಭವಾಯಿತು. ಕಲೆಗಳಲ್ಲಿ ಅಪಾರ ಆಸಕ್ತಿಯ ಬೀಜಗಳನ್ನು ಈ ಪರಿಸರ ಬಿತ್ತಿತು ಎನ್ನಬಹುದು.

ಇದಲ್ಲದೆ ಅಂದು ಪ್ರಚಲಿತವಾಗಿದ್ದ ವರದಾಚಾರ್ಯರ ನಾಟಕದ ಹಾಡುಗಳು ಗುಬ್ಬಿ ವೀರಣ್ಣನವರ ನಾಟಕದ ದೃಶ್ಯಗಳು, ಪೀರ್ ಕಂಪೆನಿಯ ನವೀನ ವರ್ಚಸ್ವೀ ನಾಟಕಗಳು ನಮ್ಮ ಲಕ್ಷ್ಯವನ್ನು ಸೆರೆ ಹಿಡಿದಿತ್ತು. ಮತ್ತೊಂದೆಡೆ ಅಂದಿನ ರಾಜಕೀಯ ತಳಮಳ, ಸ್ವಾತಂತ್ರ್ಯ ಸಂಗ್ರಾಮದ ಬಿರುಗಾಳಿ, ಅಂದಿನ ನಾಯಕರ ನಿರ್ಭೀತ-ನಿಸ್ವಾರ್ಥ ಎದೆಗಾರಿಕೆ, ಭಾಷಣಗಳ ಬಿರುಸು ನಮ್ಮ ಮೇಲೆ ಬಹು ಪರಿಣಾಮ ಬೀರಿತ್ತು. ನಾನೂ, ಶಾಸ್ತ್ರಿಗಳೂ, ಎನ್. ಶ್ರೀಕಂಠಯ್ಯ ಅನೇಕ ಕಾಂಗ್ರೆಸ್ ಪ್ರತಿಭಟನಾ ಸಭೆಗಳಲ್ಲಿ ಭಾಗವಹಿಸಿ ಭಾಷಣಗಳನ್ನು ಬಿಗಿದಿದ್ದೇವೆ. ಶಿವಪುರ ಕಾಂಗ್ರೆಸ್ ಅಧಿವೇಶನದ ಕಾಲದಲ್ಲಿ ನಾನು ಸಬ್ಜೆಕ್ಟ್ ಕಮಿಟಿ ಮೆಂಬರು ಕೂಡ. ನಾನು, ಶ್ರೀಕಂಠಯ್ಯ, ಶಾಸ್ತ್ರಿಗಳು ಈ ಹೋರಾಟದಲ್ಲಿ ಸಾಕಷ್ಟು ಪ್ರಮುಖ ಪಾತ್ರ ವಹಿಸಿದ್ದೆವು. ವಿವರಣೆಗಳನ್ನು ಬೆಳೆಸಿಕೊಂಡು ಹೋಗುವ ಸಂದರ್ಭವಿದಲ್ಲ. ಶಾಸ್ತ್ರಿಗಳೂ ನಾವೂ ಇಪ್ಪತ್ತರ ಪ್ರಾಯದಲ್ಲಿ ಬೆಳೆದ ಪರಿಸರದ ಪರಿಚಯ ನೀಡುವ ಉದ್ದೇಶದಿಂದ ಮೇಲಿನ ವಿವರಗಳನ್ನು ಸ್ಮರಿಸಿದ್ದೇನೆ.

NOOK ವಾಸ:

1933-34ರಲ್ಲಿ ಚಿತ್ರಕಲೆ ಮತ್ತು ಸಂಗೀತಾಭ್ಯಾಸ ಕೈಗೊಳ್ಳುವ ಉದ್ದಿಶ್ಯವಿಟ್ಟು ಶಾಸ್ತ್ರಿಗಳು ಮೈಸೂರು ಸೇರಿ, ಕಡೆಗೆ 1959ರ ವರೆಗೆ ಮೈಸೂರಿನಲ್ಲಿದ್ದರು. ಆದರೂ ವಾರ ವಾರವೂ ನಂಜನಗೂಡಿಗೆ ಭೇಟಿ ಕೊಡುತ್ತಾ ಇದ್ದರು. ಇತ್ತ ನಾನೂ ಮತ್ತು ನನ್ನ ತಮ್ಮ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ರೈಲ್ವೆ ಸೀಸನ್ ಟಿಕೆಟ್ ಪಡೆದುಕೊಂಡು ವಿದ್ಯಾಭ್ಯಾಸ ಮುಂದುವರಿಸಿದ್ದೆವು. ಡಿ. ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವೀ' - ಆಫೀಸಿನ ಮಹಡಿ ಮೇಲೆ ಸಂಪಾದಕ ಅಗರಂ ರಂಗಯ್ಯನವರು ಇತ್ತಿದ್ದ ಕೋಣೆಯಲ್ಲೇ ಶಾಸ್ತ್ರಿಗಳ ಇಡೀ ಮೈಸೂರು ವಾಸ ಪೂರೈಸಿತು. ನಾವು ಮೈಸೂರಿನಲ್ಲಿ ಯಾವಾಗ ಉಳಿದರೂ ಇದೇ ನಮ್ಮ ಆವಾಸಸ್ಥಾನವಾಗಿತ್ತು. 1943-44ರಲ್ಲಿ ಖ್ಯಾತ ನಾಟಕಕಾರ ಶ್ರೀ ಟಿ. ಪಿ. ಕೈಲಾಸಂ ಸಹ ಕೆಲವು ತಿಂಗಳ ಕಾಲ ಈ ಕೋಣೆಯಲ್ಲಿ ಬಿಡಾರ ಹೂಡಿದ್ದರು. ಇಡೀ ಕೈಲಾಸಂ ಅಭಿಮಾನಿ ಶಿಷ್ಯವರ್ಗ ಕೈ ದರ್ಶನಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಈ ಕೋಣೆಗೆ ಕೈಲಾಸಂ 'THE NOOK' (ನೂಕ್) - ಎಂದು ಸ್ವಾರಸ್ಯವಾದ ಹೆಸರಿಟ್ಟಿದ್ದರು.

ಶಾಸ್ತ್ರಿಗಳು ಚಾಮರಾಜೇಂದ್ರ ಕಲಾಶಾಲೆಯಲ್ಲಿ ಚಿತ್ರಕಲಾ ವಿದ್ಯಾರ್ಥಿಯಾಗಿ ಹಲವು ವರ್ಷ ಅಭ್ಯಾಸ ಮಾಡಿ ಪದವೀಧರರಾದುದೇ ಅಲ್ಲದೆ, ಅಂದಿನ ಖ್ಯಾತ ಸಂಗೀತ ವಿದ್ವಾನ್ ಚಿಕ್ಕರಾಮರಾಯರ ಶಿಷ್ಯರಾಗಿ ಸೇರಿ ದೀರ್ಘಕಾಲ ಸಂಗೀತಾಭ್ಯಾಸಕ್ಕೆ ನಿಂತರು. ಬಾಲ್ಯದಿಂದಲೂ ಯಾವ ವಿಷಯವನ್ನೇ ಆಗಲಿ ಆಮೂಲಾಗ್ರವಾಗಿ ಶೋಧಿಸಿ, ಅಪಾರ ಮಾಹಿತಿ ಸಂಗ್ರಹಿಸಿ, ಆ ಬಗ್ಗೆ ಅಸಾಧಾರಣ ಪ್ರಭುತ್ವ ಪಡೆಯುವ ಜಾಯಮಾನ ಶಾಸ್ತ್ರಿಗಳದು. ಇವರ ಅದ್ಭುತ ಸ್ಮರಣ ಶಕ್ತಿಯನ್ನು ನಿಜಕ್ಕೂ ಒಂದು ಕಂಪ್ಯೂಟರಿಗೆ ಹೋಲಿಸಬಹುದು. ಇವರು ರಚಿಸಿದ ವರ್ಣರಂಜಿತ ಚಿತ್ರ 'ಮಸೀದಿಯಲ್ಲಿ ಪ್ರಾರ್ಥನೆ' ಗೆ 1941-42ರಲ್ಲಿ ಮದರಾಸು ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಸ್ಪರ್ಧೆಯಲ್ಲಿ ಸ್ವರ್ಣ ಪದಕ ದೊರಕಿದುದು ನನ್ನ ನೆನಪಿನಲ್ಲಿದೆ. ಅಂತೆಯೇ ವಾರವಾರ ಇವರು ನಂಜನಗೂಡಿನ ಸುತ್ತಮುತ್ತಣ 3-4 ಮೈಲಿ ಆವರಣಕ್ಕೆ ಸಾಗಿಹೋಗಿ ಸ್ಥಳದಲ್ಲೇ ನಿಂತು ರಚಿಸಿದ ರಮಣೀಯವಾದ ಚಿತ್ರಗಳು ಹಲವಾರು ನನ್ನ ನೆನಪಿನಲ್ಲಿವೆ. ನಮ್ಮೆಲ್ಲರ ಹತ್ತು ಹಲವಾರು ಭಾವಚಿತ್ರಗಳಲ್ಲದೆ, ಇತರ ಕೆಲವು ಭಿಕ್ಷುಕರ, ಸಾಧುಗಳನ್ನೊಳಗೊಂಡ ಚಿತ್ರಗಳು (Charcoal sketches) ಬಹುಕಾಲ ಇವರ 'ನೂಕ್' ಮೂಲೆ ಮೂಲೆಗಳಲ್ಲಿ ಪೇರಿಕೊಂಡಿದ್ದವು ಹಾಗೂ ಚಿತ್ರಕಲೆ ಬಗ್ಗೆ ದೊರಕಿದ ಎಲ್ಲ ಗ್ರಂಥಗಳನ್ನೂ ಜೀರ್ಣಿಸಿಕೊಂಡು ಶಾಸ್ತ್ರಿಗಳು ಪಾಶ್ಚಾತ್ಯ, ಪೌರ್ವಾತ್ಯ ಚಿತ್ರಕಲೆ ಬಗ್ಗೆ ಆಗಾಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಅವರ ಅವಿರತ ಹವ್ಯಾಸಗಳಲ್ಲಿ ಕುಂಚ ಹಿಡಿಯುವುದನ್ನು ಶಾಸ್ತ್ರಿಗಳು ಕೈಬಿಟ್ಟಿದ್ದಾರೆ ಎಂದು ಬಹುಮಂದಿಗೆ ತಿಳಿಯದು.

ಇನ್ನು ಸಂಗೀತ ಪ್ರಪಂಚದ ಎಲ್ಲ ಮುಖ್ಯ ವ್ಯಕ್ತಿಗಳೂ ಶಾಸ್ತ್ರಿಗಳಿಗೆ ಚಿರಪರಿಚಿತರು. ಕಚೇರಿಗಳೆಲ್ಲದರಲ್ಲೂ ಹಾಜರಾಗುವುದಲ್ಲದೆ, ಲಕ್ಷ್ಯ ಲಕ್ಷಣಗಳನ್ನು ಕುರಿತು ವಿಸ್ತೃತವಾದ ಪರಿಚಯವಿದ್ದುದರಿಂದ ವಿದ್ವಾಂಸರೊಡನೆ ದೀರ್ಘ ಚರ್ಚೆ, ಸಂವಾದಗಳಲ್ಲಿ ತೊಡಗಿ ಸರ್ವಸ್ವವನ್ನೂ ಕರತಲಾಮಲಕವಾಗಿ ಗ್ರಹಿಸುತ್ತಿದ್ದರು.

ಕಲಾತಪಸ್ಸು

ಮೈಸೂರಿನ ಅಂದಿನ ಕಾಲದಲ್ಲಿದ್ದ ಎಲ್ಲಾ ಸಂಗೀತ ಸಭೆಗಳು ಮತ್ತು ಎಲ್ಲ ವಿದ್ವಾಂಸರ ಗಾಢವಾದ ಸಂಪರ್ಕವನ್ನು ಶಾಸ್ತ್ರಿಗಳು ಗಳಿಸಿದ್ದರು. ಮೈಸೂರಿನಲ್ಲಿ ನಡೆಯುವ ದರ್ಬಾರಿಗೆ, ದಸರಾ ಉತ್ಸವಗಳಿಗೆ, ರಾಮಮಂದಿರ, ಸಭೆಗಳಿಗೆ ಭೇಟಿ ನೀಡುವ ತಮಿಳು, ಆಂಧ್ರ, ಕೇರಳ ಹಾಗೂ ಹಿಂದುಸ್ತಾನಿ ವಿದ್ವಾಂಸರೆಲ್ಲರೊಡನೆ ಇವರು ಆತ್ಮೀಯವಾಗಿ ವ್ಯವಹರಿಸುತ್ತಿದ್ದರು. ಅವರೊಡನೆ ದೀರ್ಘ ಪತ್ರವ್ಯವಹಾರವನ್ನೂ ನಡೆಸುತ್ತಿದ್ದರು. ಅಂದು ದಾಕ್ಷಿಣಾತ್ಯ ಸಂಗೀತದ ಮುಖ್ಯ ಕೇಂದ್ರವೆನಿಸಿದ್ದ ಮದ್ರಾಸಿನ ಸಂಗೀತ ಅಕಾಡೆಮಿ ಉತ್ಸವಕ್ಕೆ ಶಾಸ್ತ್ರಿಗಳು ತಪ್ಪದೆ ಭೇಟಿಕೊಟ್ಟು, ಸಂಗೀತ ಲೋಕದ ಎಲ್ಲ ಆಗುಹೋಗುಗಳ ಬಗ್ಗೆ ಒಂದು Walking Encyclopaedia ಎನ್ನುವಂತಾಗಿದ್ದರು. ಇದಲ್ಲದೆ ವಿಸ್ತಾರವಾದ ಗ್ರಂಥ ಪರಿಚಯ, ರೇಡಿಯೋ ಆಲಿಸುವಿಕೆ, ಗ್ರಾಮಾಫೋನ್ ತಟ್ಟೆಗಳ ಮುಖೇನ ಪಾಶ್ಚಾತ್ಯ ಸಂಗೀತದಿಂದ ಹಿಡಿದು ನಾನಾ ಪ್ರದೇಶಗಳ ಜಾನಪದ ಸಂಗೀತದ ಸ್ವರೂಪವನ್ನೂ ಕೂಡ ಅಧ್ಯಯನ ಮಾಡಿದ್ದರು. ಪ್ರತಿ ಕಲಾವಿದನ ಹುಟ್ಟು, ಅಭ್ಯಾಸ, ಸಾಧನೆ, ಅವರ ಕುಲ, ಗೋತ್ರ, ಜಾತಕ ಮತ್ತಿತರ ಸ್ವಾರಸ್ಯ ಸಂದರ್ಭಗಳ ಮಾಹಿತಿ ಇವರ ಬಳಿ ಅಪಾರವಾಗಿ ಸಂಗ್ರಹವಾಗಿತ್ತು.

ಲೇಖಕರ ನಂಟು

ಇದೆಲ್ಲವನ್ನೂ ಸ್ಮರಿಸಿದರೆ ಸಪ್ತಸಮುದ್ರಗಳನ್ನೂ ಆಪೋಶನ ತೆಗೆದುಕೊಂಡು ಜೀರ್ಣಿಸಿಕೊಂಡ ಅಗಸ್ತ್ಯ ಋಷಿಗಳ ಕಡೆ ಸ್ಮರಣೆಗೆ ಬರುತ್ತದೆ. ಇಷ್ಟಾಗಿ ಉದ್ಯೋಗ ದೊರಕಿಸಿಕೊಳ್ಳುವ ದಿಕ್ಕಿನಲ್ಲಿ ಇವೆಲ್ಲವೂ ಯಾವ ರೀತಿಯಲ್ಲೂ ಸಹಾಯಕವಾಗಲಿಲ್ಲ. ಕೆಲಕಾಲ ಯಾವುದೋ ಬಸ್ ಕಂಪೆನಿ ಉದ್ಯೋಗ, ಇತ್ಯಾದಿ ಸಣ್ಣಪುಟ್ಟ ಕೆಲಸಗಳೂ ದೊರಕಿ ಮಾಯವಾದವು. ಕಡೆಗೆ ಮಹಾರಾಜಾ ಕಾಲೇಜಿನ ಕೋಣೆಯೊಂದರಲ್ಲೇ ಇದ್ದ ಯೂನಿವರ್ಸಿಟಿ ಆಡಳಿತ ವಿಭಾಗದಲ್ಲಿ ದೊರೆತ ಒಂದು ಕೆಲಸ ಅತಿ ಸಮರ್ಪಕವೆನಿಸಿತು. ಏಕೆಂದರೆ ಸಂಬಳ ಹೆಚ್ಚಿಲ್ಲದಿದ್ದರೂ, ಶಾಸ್ತ್ರಿಗಳ ಮನೋವೃತ್ತಿಗೆ ಇದು ಸಮರ್ಪಕವಾದ ಉದ್ಯೋಗ. ಇದರಿಂದ ಮಹಾರಾಜಾ ಕಾಲೇಜಿನ ಪ್ರೊಫೆಸರರು, ವಿದ್ವನ್ಮಣಿಗಳು, ಶಾಸ್ತ್ರವೇತ್ತರ ಒಡನಾಟ ದೊರಕಿತು ಪ್ರೊ॥ ಜಿ. ಹನುಮಂತರಾಯರ ಯಾಜಮಾನ್ಯದಲ್ಲಿದ್ದ ಈ ಶಾಖೆ ವಿಶ್ವವಿದ್ಯಾನಿಲಯದ ಎಕ್ಸ್‌ಟೆನ್‌ಷನ್ ಭಾಷಣಗಳ ಗ್ರಂಥಮಾಲೆಯ ಪ್ರಕಟಣಾ ಹೊಣೆ ಹೊತ್ತಿತ್ತು. ಸುತ್ತ

ಸಮಾಜದ ಅರಿವಿನ ಮಟ್ಟ ಹೆಚ್ಚಿಸುವ ಗುರಿ ಉಳ್ಳ ಈ ಕಾರ್ಯಕ್ರಮದಲ್ಲಿ ವಿದ್ಯಾಲಯದ ವಿದ್ವಾಂಸರು, ಶಾಸ್ತ್ರವೇತ್ತರು ಹಲವು ಸ್ವಾರಸ್ಯ ವಿಷಯುಗಳನ್ನು ಕುರಿತು ಮಾಡುವ ಭಾಷಣಗಳನ್ನು ಕಿರುಹೊತ್ತಿಗೆ ರೂಪದಲ್ಲಿ ಪ್ರಕಟಿಸುವ ಹೊಣೆ ಹೊತ್ತ ಈ ಪಠಿಪಾಟು ಶಾಸ್ತ್ರಿಗಳಿಗೆ ಒದಗಿತು. ಲೈಬ್ರರಿಯಲ್ಲಿನ ನಾನಾ ಗ್ರಂಥಗಳ ಶೋಧನೆ, ವಿದ್ವಾಂಸರ ಒಡನಾಟ, ವಿದ್ವತ್ ವಿಷಯುಗಳ ಚರ್ವಿತ ಚರ್ವಣ ತುಂಬಿದ ವಾತಾವರಣ ದೊರಕಿತು. ಶಾಸ್ತ್ರಿಗಳನ್ನು ಲೇಖಕರನ್ನಾಗಿ ಮಾಡಲು ಈ ವಾತಾವರಣ ಪ್ರೇರೇಪಿಸಿತು. ಯಶಸ್ವೀ ಲೇಖಕನಾಗಲು ಈ ಹುದ್ದೆ ಸರ್ವರೀತಿಯ ಪ್ರೋತ್ಸಾಹ ದೊರಕಿಸಿತು. ಪ್ರಬುದ್ಧ ಕರ್ನಾಟಕದಂತ ಉತ್ಕೃಷ್ಟ ಪತ್ರಿಕೆಯ ಪುಟಗಳಲ್ಲಿ ಶಾಸ್ತ್ರಿಗಳ ಲೇಖನಗಳು ಇಣುಕಿದವು. ಶಾಸ್ತ್ರಿಗಳ ಬರವಣಿಗೆಗಳ ಅಧ್ಯಾಯದ ಅಂಕುರಾರ್ಪಣವಾಯಿತು.

ಸುಮಾರು 1943ರಲ್ಲಿ ಪಬ್ಲಿಕ್ ಸರ್ವಿಸ್ ಸ್ಪರ್ಧಾ ಪರೀಕ್ಷೆಯಲ್ಲಿ ಪಾಸಾದ ಶಾಸ್ತ್ರಿಗಳಿಗೆ ಮೈಸೂರು ಟ್ರೆಜರಿಯಲ್ಲಿ ಕಡೆಗೂ ಒಂದು ಸರ್ಕಾರಿ ಹುದ್ದೆ ದೊರಕಿತು. ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಕಚೇರಿ ಕೆಲಸ ಮಾಡಿದರು. ಆದರೂ ಸಂಗೀತ, ಚಿತ್ರ, ನೃತ್ಯ, ಶಿಲ್ಪ ಲೋಕದ ವ್ಯವಹಾರಗಳು, ಅಧ್ಯಯನ ಇತ್ಯಾದಿಗಳು ಮೊದಲಿನಂತೆ ಹುರುಪಿನಿಂದಲೇ ಮುಂದುವರಿದವು. ಕಡೆಯವರೆಗೆ ಈ ಹುದ್ದೆಯಲ್ಲೇ ಇದ್ದು ನಿವೃತ್ತರಾದ ಶಾಸ್ತ್ರಿಗಳು ಎರಡು ದಶಕಗಳ ಹಿಂದೆ ಪೆನ್ಷನ್ ಪಡೆದರೂ ನಮ್ಮ ಕಲಾಕ್ಷೇತ್ರದ ಶ್ರೇಷ್ಠ ವಿಮರ್ಶಕನ ಸ್ಥಾನವನ್ನು ಶಾಸ್ತ್ರಿಗಳು ಏಕಾಗ್ರಚಿತ್ತ ಹಾಗೂ ಅದ್ವಿತೀಯ ಸಮರ್ಪಣಾಭಾವದಿಂದ ಎಡೆಬಿಡದೆ ಸಾಧಿಸಿದುದು ಒಂದು ಅಪೂರ್ವ ಸಂಗತಿ.

ಕೈಲಾಸಂ ಒಡನಾಟ

1943ರಲ್ಲಿ ಕೈಲಾಸಂ ಮೈಸೂರಿನಲ್ಲಿ ಶಾಸ್ತ್ರಿಗಳ ಕೋಣೆಯಲ್ಲಿದ್ದರೆಂದು ಹೇಳಿದ್ದೇನೆ. ನಮ್ಮ ಗುಂಪಿಗೆ ಇದು ಕೈಲಾಸಂ ಅವರ ಎರಡನೇ ಭೇಟಿ. ಏಕೆಂದರೆ 1936ರಲ್ಲೇ ನಂಜನಗೂಡಿಗೆ ಭೇಟಿ ಇತ್ತು 6-8 ತಿಂಗಳ ಕಾಲ ನಾವೆಲ್ಲ ಒಂದು ಗುಂಪುಕಟ್ಟಿ ನಾಟಕಗಳನ್ನು ಅಭ್ಯಾಸಮಾಡಿ ಪ್ರದರ್ಶಿಸಿದೆವು. ಕೈಲಾಸಂ ಅವರೇ ಹೇಳುತ್ತಿದ್ದಂತೆ ಅವರು 'ಕೂತಲ್ಲಿ ಕಂಪೆನಿ - ನಿಂತಲ್ಲಿ ನಾಟಕ' ಕೈಲಾಸಂರವರ ಸುತ್ತುವರಿದು. ರಾತ್ರಿಯೆಲ್ಲಾ ನಿದ್ದೆಗೆಟ್ಟು ಕುಳಿತು, ನಾಟಕವಾಡುವ ಸಿದ್ಧತೆಗಳನ್ನು ಮಾಡುವುದರಲ್ಲಿ ನಮ್ಮ ಗುಂಪು ಎಲ್ಲ ಕಾರ್ಯಭಾರ ಹೊತ್ತಿತು. ಆ ತಂಡದ ಹೆಸರು 'Jolly Amateurs' - ಎಂದು. ನಮ್ಮ ಊರಿನಲ್ಲೇ ಅಲ್ಲದೆ ಚಾಮರಾಜನಗರ, ನರಸೀಪುರಗಳಲ್ಲೂ ನಾಟಕವಾಡಿ ಬಂದೆವು. ಅಂತೆಯೇ 'ಬಂಡ್ವಾಳ್ವಿಲ್ಲದ ಬಡಾಯಿ', 'ತಾವರೇಕೆರೆ', 'ಸೀಕರ್ಣೆ ಸಾವಿತ್ರಿ' ಇತ್ಯಾದಿ ನಾಟಕಗಳನ್ನು ಕೈಲಾಸಂರವರೇ ಹೇಳಿ ಬರೆಯಿಸಿದ್ದುಂಟು. ಹೇಗೋ ಕೆಲವು ನಾಟಕಗಳು ನುಸುಳಿ ಹೋಗಿ ಒಂದು ಪತ್ರಿಕೆಯಲ್ಲಿ

ಪ್ರಕಟವಾದುದೂ ಉಂಟು. ಮತ್ತೆ ಕೆಲವು ಹಸ್ತಪ್ರತಿಗಳ ನನ್ನ ಮತ್ತು ಶಾಸ್ತ್ರಿಗಳ ಬಳಿ ಬಹುಕಾಲ ಉಳಿದಿದ್ದುವು. ಅವುಗಳು 'ಪಾತುಶೇರ್ಮನೆ', 'ಸಾತು ಶೇರ್ಮನೆ' ಮತ್ತು 'ಯೋಂಘೂ ವಾಗೆ'ಗಳು. ಸುಮಾರು 1941ರಲ್ಲಿ ಶ್ರೀ ಟಿ.ಎಸ್. ರಾಮರಾವ್, ಜಿ.ಪಿ. ರಾಜರತ್ನಂ ನಡುವೆ ಈ ಹಸ್ತಪ್ರತಿಗಳು ವಿವಾದಕ್ಕೀಡಾಗಿ ನಂತರ ನಾನು - ರಾಮರಾಯರು ಇವನ್ನು ಪ್ರಕಟಣೆಗೆ ನೀಡಿದುದು ಒಂದು ಸ್ವಾರಸ್ಯಕರ ಪ್ರಸಂಗ.

ಹೀಗಾಗಿ 1943ರಲ್ಲಿ ಕೈಲಾಸಂ ಮೈಸೂರಿಗೆ ಮಹಾರಾಜಾ ಕಾಲೇಜಿನ ಯೂನಿಯನ್ ಸಮಾರೋಪ ಭಾಷಣಕ್ಕೆಂದು ಬಂದು ಕೆಲವಾರು ತಿಂಗಳು ಮತ್ತೆ ನಾವು ಅವರ ಶಿಷ್ಯರ ಗುಂಪನ್ನು ರಚಿಸಿದುದು ಎರಡನೇ ಬಾರಿ. ಮಹಾರಾಜಾ ಕಾಲೇಜಿನ ಕ್ವಾಡ್ರಾಂಗಲ್‌ನಲ್ಲಿ ಯೂನಿಯನ್ ಸಮಾರೋಪ ಸಂದರ್ಭದಲ್ಲಿ ಕೈಲಾಸಂ ಮಾಡಿದ ಪ್ರಶ್ನೋತ್ತರ ರೂಪದ ಭಾಷಣ ಹಾಸ್ಯದ ಹೊನಲನ್ನೆ ಹರಿಸಿ ಸಭಿಕರನ್ನು ನಗೆಯ ಸಾಗರದಲ್ಲಿ ಮುಳುಗಿಸಿದುದನ್ನು ಇಂದೂ ಅಂದು ಹಾಜರಿದ್ದ ಮಂದಿ ನೆನೆಸುತ್ತಾರೆ. ನಂತರ ಶಾಸ್ತ್ರಿಗಳು ನಾವು Self attempted, Salaryless Secretaries ನಂತೆ ಕೈಲಾಸಂರವರ ಗುಂಪಿನ ವಹಿವಾಟನ್ನು ವಹಿಸಿಕೊಂಡದ್ದಾಯಿತು. ಹಾಗೂ ಕೈಲಾಸಂ ಶಾಸ್ತ್ರಿಗಳ ಕೋಣೆ(Nook) ಯಲ್ಲೇ ಒಂದೆರಡು ತಿಂಗಳು ಠಿಕಾಣಿ. ನಂತರ ಅವರನ್ನು ಬೇರೆ ಬೇರೆ ಕೋಣೆಗಳಿಗೆ ವರ್ಗಾಯಿಸಿದೆವು.

ಹಸ್ತಪ್ರತಿಗಳ ತಯಾರಿಕೆ

ಕೈಲಾಸಂರೊಡನೆ ಇಡೀ ರಾತ್ರಿ ಕೂತು ನಮ್ಮ ಗುಂಪಿನವರು ಬಹು ಪ್ರಯಾಸಪಟ್ಟು ಅವರ ಕೆಲವು ನಾಟಕಗಳನ್ನು ಬರೆದುಕೊಂಡು ಅಚ್ಚಿಗೆ ಕೊಡುವುದರಲ್ಲಿ ಯಶಸ್ವಿಯಾದರು. ಅವುಗಳಲ್ಲಿ 'ನಮ್ಮ ಕಂಪ್ನಿ', 'ನಮ್ಮ ಕ್ಲಬ್ಬು', 'ಸೂಳೆ', 'ಅನುಕೂಲಕ್ಕೊಬ್ಬಣ್ಣ' ಇವುಗಳು ಸ್ಮರಣೆಯಲ್ಲಿವೆ. ಆದರೆ ಮತ್ತೆ ಕೆಲವು ಅರ್ಧಂಬರ್ಧವಾಗಿದ್ದ 'ದಿ ಹೌಸ್ ಆಫ್ ಒಡೆಯರ್' (ಇಂಗ್ಲೀಷ್), 'ಮೃಕಂಡು' (ಸಂಸ್ಕೃತ), 'ಚಾಮುಂಡಮ್ಮನ್ಸೈಕ್ಕ', 'ಕೇರಳ ಯಾತ್ರೆ', 'ಅಹೋಬ್ಲು-ಅಟೋಕಾರ್' ಇತ್ಯಾದಿಗಳು ಏನಾದವೋ ತಿಳಿಯದು. 1944ನೇ ಫೆಬ್ರವರಿ 13ರಂದು ರತ್ನಾವಳೀ ಥಿಯೇಟರ್‌ನಲ್ಲಿ ಕೈಲಾಸಂರವರ Soiree (ಸಂಜೆ ಪ್ರದರ್ಶನ) ಒಂದು ನಡೆಯಿತು. 'ಹೋಂ ರೂಲು', 'ಶಂಬರನ ಸಿಂಗಾರಿ', 'ಹಾಡುಗಳ ಹುಳಿಕರಣೆ', 'ವಿವಿಧ ವಿನೋದ ಥಾಳಿ', 'ತಿಪ್ಪಾರಳ್ಳಿ' ಇತ್ಯಾದಿಗಳೊಡನೆ ಠಾಕೂರರ 'ಮಾಲಿನಿ' ನಾಟಕವನ್ನು ಪ್ರದರ್ಶಿಸಲಾಯಿತು. ಆ ನಾಟಕಗಳಲ್ಲಿ ಕೈಲಾಸಂ ಅಸಾಧಾರಣ ವರ್ಚಸ್ಸಿನಿಂದ ಬೆಳಗಿದರು. ಆದರೆ ಶಿಷ್ಯವೃಂದಕ್ಕೆ ಶಹಭಾಸ್‌ಗಿರಿ ದೊರಕದಿದ್ದುದಕ್ಕೆ ರಿಹರ್ಸಲ್‌ಗಳ ಅಭಾವ, ಪಾತ್ರಗಳ ಧಿಢೀರ್ ಬದಲಾವಣೆ, ರಂಗಮಂದಿರದ ವ್ಯವಸ್ಥೆಗಳ ನಿರ್ವಹಣೆ ಲೋಪಗಳು ಕಾರಣ ಎನ್ನಿ. ಇಷ್ಟಾಗಿ ಜನ ಕೈಲಾಸಂ ಅವರ ಪ್ರತಿಭೆಯನ್ನು ಕಂಡು ಅವಾಕ್ಕಾದರು. ಅವರ ಮಟ್ಟಕ್ಕೆ ಶಿಷ್ಯರು ಏರಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿದರು.

ವಿಮರ್ಶೆಗಳ ಹೊಣೆ ಹೊತ್ತು

ಎಂತೂ ನಾನು 1944 ಏಪ್ರಿಲ್‌ನಲ್ಲಿ ಮುಂಬೈನ ವಿಜಯಾ ಪಬ್ಲಿಷರ್ಸ್ ಪ್ರಕಟಣಾ ಸಂಸ್ಥೆಯ ಸಂಪಾದಕನಾಗಿ ಮುಂಬೈಗೆ ಹೊರಟು ಹೋದೆ. ಇದಾದ ಹಲವು ತಿಂಗಳ ಮೇಲೆ ಕೈಲಾಸಂ ಮೈಸೂರಿನಿಂದ ಹೊರಟರು. 1945ರಲ್ಲಿ ಹಿಂತಿರುಗಿದ ನಾನು ಇತ್ತ ಜವಾಬ್ದಾರಿ ಸರ್ಕಾರದ ವಿರುದ್ಧ ನನ್ನ ಸಹೋದರ ಶೇಷಪ್ಪ ಸ್ಥಾಪಿಸಿದ 'ಕಿಡಿ' ಪತ್ರಿಕೆಯ ಸಮರದಲ್ಲಿ ಭಾಗವಹಿಸಿ ಭೂಗತನಾಗಿದ್ದ (underground), ಜವಾಬ್ದಾರಿ ಸರ್ಕಾರ ಸ್ಥಾಪಿತವಾದ ನಂತರ 1948ರಲ್ಲಿ ಆರಂಭದಲ್ಲೇ ಪ್ರಜಾವಾಣಿ ಪತ್ರಿಕೆ ಸೇರಿ ಅಲ್ಲಿ ಸುದ್ದಿ ಸಂಪಾದಕನಾಗಿ ಅದರ ಭವಿಷ್ಯರೂಪಿಸುವ ಹೊಣೆ ಹೊತ್ತು ಡೆಕ್ಕನ್ ಹೆರಾಲ್ಡ್ - ಪ್ರಜಾವಾಣಿಗಳ ಸರ್ವತೋಮುಖ ಬೆಳವಣಿಗೆಗಾಗಿ ಕಾರ್ಯನಿರತನಾದೆ. ಆಗ ಪತ್ರಿಕೆಗಳಲ್ಲಿ ಸಂಗೀತ, ಶಿಲ್ಪ, ನೃತ್ಯ ಇತ್ಯಾದಿ ಕಲಾ ವಿಭಾಗದ ವಿಮರ್ಶೆಗಳ ಅಭಾವ ಹೆಚ್ಚಾಗಿತ್ತು. ಬೆಂಗಳೂರಿನಲ್ಲಿನ ಸಂಗೀತ, ನೃತ್ಯ, ಕಲೆ ಬಗ್ಗೆ ಸ್ವತಃ ನಾನೇ ವಿಮರ್ಶಕನಾಗಿ ಸಾಕಷ್ಟು ಬರೆಯಲು ತೊಡಗಿದೆ. ಜೊತೆಗೆ ಮೈಸೂರಿನಿಂದ ಅಲ್ಲಿನ ಸಂಗೀತ ಮತ್ತಿತರ ಕಲೆಗಳ ವಿಮರ್ಶಕನಾಗಿ ಶಾಸ್ತ್ರಿಗಳನ್ನು ನೇಮಿಸಿ ಅವರನ್ನು ಒಪ್ಪಿಸಿದೆ. ಅಂದಿನಿಂದ ಇವರು ಮೈಸೂರಿನ ಸಂಗೀತ ಮತ್ತಿತರ ಕಾರ್ಯಕಲಾಪಗಳ ಬಗ್ಗೆ ವಾರವಾರ ಪೂಗದಸ್ತಾದ ವರದಿ ಕಳುಹಿಸುತ್ತಿದ್ದರು. ಇತ್ತ, ಬೆಂಗಳೂರಿನಿಂದ ನನ್ನ ಮತ್ತು ಮೈಸೂರಿನಿಂದ ಶಾಸ್ತ್ರಿಗಳ ವಿವರವಾದ, ಸ್ಫುಟವಾದ ಸ್ವಾರಸ್ಯವಾದ ವರದಿಗಳು, ಚಿತ್ರಗಳ ಸಹಿತ ಕಾಲಂ ಗಟ್ಟಲೆ ಓದಲು ಸಿಕ್ಕಾಗ, ಕಲಾಪ್ರೇಮಿ ಓದುಗರು ಸಂತಸದಿಂದ ಹಿಗ್ಗಿದರು. ಅಲ್ಲದೆ, ಶಾಸ್ತ್ರಿಗಳು ವಾಗ್ಗೇಯಕಾರರ, ಸಂಗೀತಗಾರರ, ಇತರ ಕಲಾವಿಶೇಷಗಳ ಬಗ್ಗೆ ದೀರ್ಘ ಲೇಖನಗಳನ್ನು ತಪ್ಪದೆ ಬರೆಯುತ್ತಿದ್ದರು. ಇದಲ್ಲದೆ 'ಜನಪ್ರಗತಿ' ವಾರಪತ್ರಿಕೆಗೂ ಶಾಸ್ತ್ರಿಗಳು ನಾನಾಲೇಖನಗಳನ್ನು ಬರೆಯುತ್ತಿದ್ದರು. ಡೆಕ್ಕನ್ ಹೆರಾಲ್ಡ್‌ನಲ್ಲಿ ಶಾಸ್ತ್ರಿಗಳ ಲೇಖನ ಮೊದಲು 'Murali's Musings on Music' ಶಿರೋನಾಮೆಯಲ್ಲಿ ವಾರ ವಾರ ಪ್ರಕಟವಾಗುತ್ತಿತ್ತು.

ಎರಡನೇ ಜನ್ಮ

ಶಾಸ್ತ್ರಿಗಳು ಖಾಯಂ ಆಗಿ ಬೆಂಗಳೂರಿಗೆ ಬಂದು ನಿಂತಾಗ ಅವರಿಗೆ ಎರಡನೇ ಜನ್ಮ ಬಂದಂತೆ ಎಂದು ಹೇಳಿದರೆ ಅಚ್ಚರಿಯಾಗಬಹುದು. ಆದರೆ ಆ ಮಾತು ಬಹಳ ನಿಜವಾದುದು. ಇದರೆ ಹಿನ್ನೆಲೆ ಸಂಕ್ಷಿಪ್ತ ಹೀಗೆ :

1956ರಲ್ಲಿ ಬೆಂಗಳೂರಿನ ಆಕಾಶವಾಣಿಗೆ ವಾಸುದೇವಾಚಾರ್ಯರ ಕೃತಿಗಳ ಬಗ್ಗೆ ಭಾಷಣ ನೀಡಲು ಬಂದ ಶಾಸ್ತ್ರಿಗಳು, ಕೇಂದ್ರಕ್ಕೆ ಹೋಗುವಾಗ ದಾರಿಯಲ್ಲಿ ಅವರ ಜಠರದ ಹುಣ್ಣು ಒಡೆದು (ulcer) ರಕ್ತಸ್ರಾವವಾಗಿ ಅವರು ದಾರಿಯಲ್ಲೇ ಕುಸಿದರು. ಅಲ್ಲಿ ಅವರ ಅಸಹಾಯಕ ಸ್ಥಿತಿ ನೋಡಿದ ಪುಣ್ಯಾತ್ಮರೊಬ್ಬರು ಅವರನ್ನು ವಿಚಾರಿಸಿ, ಜಟ್ಕ ಗಾಡಿಯಲ್ಲಿ

ಕೂರಿಸಿ ತಂದು ಅವರು ಹೊರಟು, ಹತ್ತಿರದಲ್ಲೇ ಇದ್ದ ನಮ್ಮ ಮನೆಗೆ ಅವರನ್ನು ತಂದು ಬಿಟ್ಟು ಹೋದರು. ಮನೆಯಲ್ಲಿ ನನ್ನ ನಾದಿನಿಯೊಬ್ಬಳೇ ಇದ್ದು ಏನೂ ತೋಚದೆ ಭಯಭೀತಳಾಗಿ ಪಕ್ಕದ ಡಾಕ್ಟರರನ್ನು ಕರೆತಂದರೆ ಅವರು ಇದು ಅತಿ ಸೀರಿಯಸ್ಸಾಗಿದೆ - ಮೊದಲು ಆಸ್ಪತ್ರೆಗೆ ಸಾಗಿಸಿ ಎಂದು ಹೇಳಿ ಹೊರಟರು. ಅದಾದ ಒಂದು ಗಂಟೆ ನಂತರ ನಾನು ಬಂದು ನೋಡಿ, ತಕ್ಷಣ ಆಂಬುಲೆನ್ಸ್ ತರಿಸಿ ವಿಕ್ಟೋರಿಯ ಸೇರುವ ವೇಳೆಗೆ ರಾತ್ರಿ 10 ಗಂಟೆ. ಅಲ್ಲಿ ವೈದ್ಯರು ಇದನ್ನು ಶಸ್ತ್ರ ಚಿಕಿತ್ಸೆ ಮಾಡಬಲ್ಲ ವೈದ್ಯರಿಲ್ಲವೆಂದೂ ಬೆಳಗಿನವರೆಗೆ ಉಳಿಯುವಂತಾದರೆ ಸಾಕು ಎಂದು ಹೇಳಲಾರಂಭಿಸಿದರು. ಹೇಗೂ ಬೆಳಿಗ್ಗೆವರೆಗೆ ನಿಂತಿದ್ದು 8 ಗಂಟೆಗೆ ಬಂದ ಡಾ|| ಸತ್ಯನಾರಾಯಣ ಶೆಟ್ಟರು ಕರುಳಿನಲ್ಲಿ ರಕ್ತಸ್ರಾವ ಬಹುಗಂಟೆಗಳಿಂದಾಗಿರುವುದಾಗಿ, ಈಗ ವಿಳಂಬವಾಗಿ ಶಸ್ತ್ರ ಚಿಕಿತ್ಸೆ ಬಹು ಅಪಾಯ. ಏನಿದ್ದರೂ ಔಷಧಿಗಳ ಮುಖೇನ (Chemotherapy) ಪ್ರಯತ್ನಿಸಬೇಕು. ಇನ್ನೇನೂ ಹೇಳಲು ಸಾಧ್ಯವಿಲ್ಲ ಎನ್ನುತ್ತಾ ಸೀಸೆಗಳ ರಕ್ತವನ್ನೂ, ಔಷಧಿಗಳನ್ನೂ ಒಂದೇ ಸಮನೆ ನೀಡುತ್ತಾ ದಿನ ಕಳೆಯಿತು. ಕಡೆಗೂ ಎರಡನೇ ರಾತ್ರಿ 4 ಗಂಟೆಗೆ ನನ್ನೊಡನೆ ಕಾದು ಕುಳಿತಿದ್ದ ವೈದ್ಯಮಿತ್ರರೊಬ್ಬರು "ನಿಮ್ಮ ಮಿತ್ರರು ಜೀಟ ತಿರುವಿಹಾಕಿದ್ದಂತಿದೆ. ನಾಡಿ ಬಡಿತ ಗೊತ್ತಾಗುತ್ತಿದೆ" - ಎಂದಾಗ ಅಲ್ಲೇ ಕಾದಿದ್ದ ನಮ್ಮ ಗೆಳೆಯರು ಟೀ ಕುಡಿಯಲು ಹೊರಟರು. ಎಂತೂ 3-4 ತಿಂಗಳು ಆಸ್ಪತ್ರೆಯಲ್ಲಿ ಅಜ್ಞಾತವಾಸ ಮಾಡಿದರೂ, ಶಾಸ್ತ್ರಿಗಳು ಒಂದು ದಿನವಾದರೂ ನರಳಾಟಕ್ಕೆ ತೊಡಗದೆ ನೋವು ನುಂಗಿಕೊಂಡು ಸ್ಥಿತಪ್ರಜ್ಞರಾಗಿಯೇ ಇದ್ದರು.

ವಿಸ್ತೃತ ಕಾರ್ಯವ್ಯಾಪ್ತಿ

ಪಿತಸ್ಪರ್ಧೆ 95 ವರ್ಷದ ಹಿಂದೆ ಸ್ಥಾಪಿತವಾದ ಬೆಂಗಳೂರಿನ ಗಾಯನ ಸಮಾಜ, ಹಾಗೂ ನೂತನವಾಗಿ 1969ರಲ್ಲಿ ಜನ್ಮವೆತ್ತ ಸಂಗೀತಗಾರರ ಕೇಂದ್ರ ಸಂಸ್ಥೆ ಕರ್ನಾಟಕ ಗಾನಕಲಾ ಪರಿಷತ್ತು 1969 ರಿಂದ ವಾರ್ಷಿಕ ಸಮ್ಮೇಳನಗಳನ್ನು ಹೊಸದಾಗಿ ಅತಿ ವಿಜೃಂಭಣೆಯಿಂದ ಜರುಗಿಸಲು ಆರಂಭಿಸಿದುದು ಸಂಗೀತ ಕ್ಷೇತ್ರದ ಕಾರ್ಯಕಲಾಪಗಳು ಹುರುಪಿನಿಂದ ಇಮ್ಮಡಿಸಿದಂತಾಯಿತು. ಅದರಲ್ಲೂ ಹೊಸದಾಗಿ ಜನಿಸಿದ ಕರ್ನಾಟಕ ಗಾನಕಲಾ ಪರಿಷತ್ತಿನ ಕಲಾಪಗಳ ರೂಪುರೇಷೆಗಳನ್ನೂ, ವಿಚಾರ ಗೋಷ್ಠಿಗಳ, ವಿವಾದ ಗೋಷ್ಠಿಗಳ, ಪ್ರದರ್ಶನಾ ಕಲಾಪಗಳನ್ನು ಪರಿಣಾಮಕಾರಿಯಾಗಿ ನಿಯೋಜಿಸುವ ವಿಷಯದಲ್ಲಿ ಶಾಸ್ತ್ರಿಗಳ ಮಾರ್ಗದರ್ಶನ ಅಮೂಲ್ಯವಾದುದಾಗಿದೆ. 1976ರಲ್ಲಿ ನನ್ನನ್ನು ಗಾನಕಲಾ ಪರಿಷತ್ತು ಅಧ್ಯಕ್ಷನನ್ನಾಗಿ ಆರಿಸಿದಾಗ, ನನಗಿದ್ದ ಕಲಾಭಿಮಾನ, ಕಾರ್ಯ ನಿರ್ವಹಣಾ ಸಾಮರ್ಥ್ಯ ಇವೆಲ್ಲಕ್ಕೂ ಶಾಸ್ತ್ರಿಗಳೇ ಊರುಗೋಲು ಎಂದರೆ ತಪ್ಪಾಗಲಾರದು. ನಾನು ಯಶಸ್ವಿಯಾಗಿ 7-8 ವರ್ಷ ಅಧ್ಯಕ್ಷ ಪೀಠದಲ್ಲಿದ್ದು, ಅಂದು ಹಲವು ವಿಧದಲ್ಲಿ ಪರಿಷತ್ತು ಮುನ್ನಡೆ ಸಾಧಿಸಿದ್ದರೆ, ಅದರ ಬಹ್ವಂಶದ ಕೀರ್ತಿ ನನ್ನ ಪರಮಮಿತ್ರ ಜಿ.ವಿ.ಕೆ. ಶಾಸ್ತ್ರಿಗಳಿಗೆ ಸೇರಬೇಕಾದುದು.

ಇದೇ ಅಲ್ಲದೆ ಬೆಂಗಳೂರಿಗೆ ಬರುತ್ತಿದ್ದ ಹಿಂದುಸ್ತಾನಿ ಸಂಗೀತಗಾರರು, ಬೆಂಗಳೂರು ಸಂಗೀತ ಸಭೆಯಲ್ಲಿ ಜರಗುತ್ತಿದ್ದ ಉತ್ತರದ ವಿದ್ವಾಂಸರ ಸಂಗೀತಗಳನ್ನು ಕೂಡ ನಾವಿಬ್ಬರೂ ಸವಿಸ್ತಾರವಾಗಿ ವರದಿ ಮಾಡಿದ್ದು, ಬೆಂಗಳೂರಿನಲ್ಲಿ ಹಿಂದುಸ್ತಾನಿ ಸಂಗೀತ ಕುರಿತಂತೆ ಅಖಂಡ ಉತ್ಸಾಹಿಗಳ ದಂಡೊಂದನ್ನೇ ನಿರ್ಮಿಸಿದಂತಾಗಿದೆ. ಇಲ್ಲಿಗೆ ಆಗಾಗ್ಗೆ ಬರುತ್ತಿದ್ದ ಬಡೇ ಗುಲಾಮಲ್ಲಿಖಾನ್, ಭೀಮಸೇನ ಜೋಷಿ, ಮನ್ಸೂರ್, ರಾಜಗುರು, ರವಿಶಂಕರ್, ಅಲಿ ಅಕ್ಬರ್, ವಿ. ಜಿ. ಜೋಗ್, ಹಲೀಂ ಜಾಫರ್ ಇತ್ಯಾದಿ ಹಿಂದುಸ್ತಾನಿ ಸಂಗೀತದ ದಿಗ್ಗಜಗಳ ಬಗ್ಗೆ ಸಾಕಷ್ಟು ದೀರ್ಘವಾದ ಪರಿಚಯ ಲೇಖನಗಳನ್ನು ಸಹ ಬರೆದು ಬೆಂಗಳೂರಿನ ಜನತೆಯಲ್ಲಿ ಉತ್ತರಾದಿ ಶೈಲಿಯ ಬಗ್ಗೆ ಜ್ಞಾನ ಪ್ರಸರಿಸಿದ್ದಾರೆ. ಇದಲ್ಲದೆ ಒಂದು ಸ್ವಾರಸ್ಯವೆಂದರೆ ಶಾಸ್ತ್ರಿಗಳನ್ನು ಒಮ್ಮೆ ಭೇಟಿ ಮಾಡಿ ಮಾತನಾಡಿತೆಂದರೆ ಆ ಸಂಗೀತ ಕಲಾವಿದರು ಇವರನ್ನು ಆಪ್ತರೆಂದು, ವಿದ್ವನ್ಮಣಿ ಎಂದೂ ಪರಿಗಣಿಸಿ ಮಿತ್ರರಾಗಿ ಪತ್ರವ್ಯವಹಾರದಲ್ಲಿ ತೊಡಗುತ್ತಾರೆ.

ಪ್ರಶಸ್ತಿಗಳ ಹೊರೆ

ಶಾಸ್ತ್ರಿಗಳೆಂದೂ ಕೀರ್ತಿ ಪ್ರಶಸ್ತಿಗಳ ಬೆನ್ನರಸಿ ಹೋಗುವವರಲ್ಲ. ಎಂತಹ ಸಂದರ್ಭದಲ್ಲೂ ಸ್ವಯಂ ತುತ್ತೂರಿ ಊದುವವರಲ್ಲ. ಕಚೇರಿಗಳಲ್ಲಿ ಕೂಡ ಸಭೆಯ ಅಂಚಿನಲ್ಲಿ ಕುಳಿತು ಸಂಗೀತವನ್ನು ಆಲಿಸುತ್ತಾ ಮನದಲ್ಲೇ ಗುರುತಿಸುವವರೇ ಹೊರತು ನೋಟ್ ಬುಕ್, ಪೆನ್ಸಿಲ್ ಬಳಸುವವರಲ್ಲ. ಇವರ ಸ್ಮರಣಶಕ್ತಿ ಅಪಾರ. ಇಷ್ಟಾದರೂ ಇವರ ಮೇಲೆ ಪ್ರಶಸ್ತಿ, ಬಿರುದಾವಳಿಗಳ ಹೊರೆಯನ್ನೇ ಹೊರಿಸಲಾಗಿದೆ. ಇವೆಲ್ಲವೂ ಯಾವ ರೀತಿಯಲ್ಲೂ ಶಾಸ್ತ್ರಿಗಳ ಸತ್ಯಾನ್ವೇಷಣ ಪ್ರವೃತ್ತಿಯನ್ನು, ವಿಮರ್ಶಾತ್ಮಕ ನಿಷ್ಠುರತೆಯನ್ನೂ ಕುಂದಿಸಿಲ್ಲ. ಎಂದೂ ಇವರು ದ್ರವ್ಯಕ್ಕಾಗಿ ಹಾತೊರೆದವರಲ್ಲ, ಕೀರ್ತಿಗಾಗಿ ಹಲುಬಿದವರಲ್ಲ. ಸ್ವಯಂ ಪ್ರತಿಷ್ಠೆಯ ಬಾವುಟವನ್ನು ಎಂದೂ ಇವರು ಕೈಹಿಡಿದವರಲ್ಲ.

ಇವರ ವಿಮರ್ಶಾ ಸಾಹಿತ್ಯ ನಮ್ಮ ನಾಡಿನ ಕಲಾವಹಿವಾಟಿನ ಐತಿಹ್ಯವನ್ನು ಸಾರುವ ಮುಂಬೆಳಕು. ನಮ್ಮ ಕಲಾ ಪ್ರಪಂಚದ ಸಾಧನೆಗಳನ್ನು ಅಳೆದು ತೂಗಿ ಹೇಳುವ ಅಂತಃಚಕ್ಷು. ಈ ಇಳಿವಯಸ್ಸಿನಲ್ಲೂ ಶಾಸ್ತ್ರಿಗಳ ಅವಿರತ ಶ್ರಮ ಒಂದೇ ಸಮನೆ ಮುನ್ನಡೆದಿರುವುದು ಸಂತಸದ ವಿಷಯ. ★

140. 'BVK' : As I know him

– Mohan Nadkarni

As I write these lines, my thoughts take me back in time to the fifties. I had been an avid reader of *The Times of India* and its sister publications since my student days – much before I began writing for that group of publications in 1954 as a regular writer, columnist and critic.

If I remember right, BVK's serialised writings on Carnatic musicians in *The Illustrated Weekly of India* endeared me to him basically as a fellow-writer, involved in traditional music. Although, frankly, I have no pretensions to any deep understanding of Carnatic music – my writings since 1948 are restricted to Hindustani music and regional musics of Maharashtra – what sustained my interest in BVK's writings was his simple, lucid style, yet incisive in his approach, his sense of history and often a streak of subtle humour! All these made his writings interesting and instructive too.

It was during one of my frequent visits to Bhopal, in Madhya Pradesh in early 1983, that bought me an opportunity to meet BVK. He also happened to be in Bhopal in connection with a lecture-cum-demonstration programme on the music of Indonesia, which was presented by the now Bangalore - based Anasuya Kulkarni. This was a chance encounter that was destined to be enduring. There seemed no need for self-introduction beyond telling each other our names! The reason, simply, is that we had become very familiar with each other through our musical writings in *The Weekly*. This element of common interest made us instant friends. In fact, during our brief stay in Bhopal, it was music, music all the way in our conversations.

What is more, a very heartening revelation that came to me was that our common ground was wider than our involvement in traditional music and writing on the subject in the same publication. First, writing on art and culture was both a joyous hobby and a serious pursuit in the case of both of us, in the sense that it was not a means of livelihood. I also found that like me, he was in Government service and even while in

service, he had the permission to do writing. There has been, besides, a very agreeable similarity between us in our views, outlook and approach on traditional art.

It was only during our Bhopal stay that I discovered that BVK's interest in art goes beyond traditional music – they embrace the plastic and visual arts, literature and many allied fields. I also found him to be a very sensitive lensman.

November 1986 brought me a cherishable opportunity to be with BVK, for almost a week, while in Bangalore. I was privileged with an invitation to the 'Dakshini' festival, which was oraganised to commemorate the historic SAARC meeting held in the garden city. The seven-day ***Sangeet Sammelan*** was truly an unforgettable event.

I was convinced that behind the success of the marathon soiree was BVK. He struck me to be among the few workers in the field whose involvement in the promotion of art and culture is total and complete and something more. His hand was seen unmistakably in the planning, organisation and actual execution of the show, not to speak other but equally vital aspects that go with such a daunting task, like arrangements for travel and stay of invitees who mostly comprised artistes and media persons! It was indeed a case of triumph of the spirit over the body that the aging BVK managed to overcome the challenge with such success.

The last opportunity of meeting BVK came my way in 1998 during my brief visit to Bangalore to receive the "Karnataka Kala Shree" Award conferred on me by the State Academy. Despite in none-too-good health, he was present at the auditorium to witness the investiture function. It was a brief meeting but I found BVK his usual self, conversing engagingly in his clipped style, subdued tone and with a glint in his eyes.

I end this personal tribute with prayers to God that He grant BVK many more years and enable him to render his signal service to the cause of art and culture. ★★★★★★★★★★★★★★★★★★★★★★

141. Helpful adviser

– Dr. Sheikh Chinna Moula

Sri B.V.K. Sastry has been my friend for several decades. I am delighted to learn that a grand function is envisaged to congratulate him and thank him for his services to Indian music during the last sixty years.

Memories swirl within me as I remember my friendship with Sastry during the last several years. We have travelled together to many places. We have also taken part together in many music festivals; among them, the Festival of India in the Soviet Union, the Festival of India in Germany and the SAARC Festival.

For a few years Sástry and myself worked together in the All-India Radio as members of the Audition Board. I have had an opportunity to watch Sastry from close quarters and have found that he has many charming facets. As a good friend, as my *rasika* who has enjoyed my music, as my critic: in every way he has always appeared to me as a Complete Man.

As a member of the audition board, he would always give helpful advice even to a novice-musician. For instance he would say: "Do not sing or play the instrument as if you are doing intense practice. Just be your natural self. You should, of course, practice well at home. But here, just be natural and do your job with humility. All would be well."

The world of music will never forget the immense help (much of it not known to the outside world) he has rendered to promote and popularise both Carnatic and Hindusthani music.

I offer my prayers to Lord Ranganatha to grant Sri Sastry long life and good health. I also send my good wishes to the organisers for the successful celebration of the function. ★ ★ ★ ★ ★ ★ ★ ★ ★ ★ ★ ★ ★ ★

142. Sri B.V.K. Sastry musicologist of multifarious activities

– Vellore Ramabhadran

My association with Sri B.V.K. Sastry is a longone. He is a versatile genius to be admired of. All the fine arts are rolled into one leaving his stamp on each individually. A good constructive critic that many of the artistes benefitted by it. A connoisseur of music he has an ear for all kinds of music - Karnatic, Hindustani, Western and Folk music, a rare trait for a critic. A lovable person to move with and I will always cherish my association with him. My sincere prayers to God to give him a good health and prosperity so that his service to the fine arts may continue for a long time. ★★★★★★★★★★★★★★★★★★★★★★★★★★

143. ಬಿ.ವಿ.ಕೆ. ಶಾಸ್ತ್ರೀ

– ಜಿ. ಎನ್. ರಂಗನಾಥ ರಾವ್

ಹತ್ತಿರ ಹತ್ತಿರ ಆರು ಅಡಿ. ಗೋಧಿ ಬಣ್ಣದ ಸಪೂರ ದೇಹ. ಪೈಲ್ವಾನ್ ಶರೀರವಲ್ಲವಾದರೂ ಶಾರೀರ ಪ್ರಧಾನವಾದ ವ್ಯಕ್ತಿತ್ವ. ತಲೆಯಲ್ಲಿ ಪುಡಿಗೂದಲು ಕ್ರಾಪು. ಅಗಲವಾದ ಹಣೆ. ಕೆಳಗೆ ಕನ್ನಡಕದೊಳಗಿಂದ ಇಣುಕುವ ಹೊಳಪು ಕಣ್ಣುಗಳು. ಕೊಂಚ ಗರುಡನ ಮೂಗು (ಜೊತೆಗೆ ವಿಮರ್ಶೆಯಲ್ಲಿ ಗರುಡ ದೃಷ್ಟಿಯೂ ಹೌದಂತೆ). ಇವರು ನಮ್ಮ – ಬಿ.ವಿ. ಕೃಷ್ಣಶಾಸ್ತ್ರಿಗಳು.

– ಇದು ಶಾಲಾ ಕಾಲೇಜುಗಳ ಸರ್ಟಿಫಿಕೇಟುಗಳ ಸೀಮೆಯಲ್ಲಷ್ಟೆ ಉಳಿದ ಹೆಸರು.

ಬಿ.ವಿ.ಕೆ. ಶಾಸ್ತ್ರೀ – ಎನ್ನಿ, ಅಥವಾ 'ಮುರಳಿ' ಎನ್ನಿ... ಶುದ್ಧ ಸಂಗೀತದ ಝೇಂಕಾರದಂತೆ, ಕರ್ನಾಟಕ-ಹಿಂದುಸ್ಥಾನಿ ಎಂಬ ಭೇದಭಾವವಿಲ್ಲದೆ ಎಲ್ಲೆಡೆ ಅನುರಣಿಸುತ್ತದೆ. ಚಿತ್ರಕಲೆಯಲ್ಲೂ ದಿಟ್ಟಗೆರೆ – ದಟ್ಟವರ್ಣ ಛಾಯೆಯ ವಿಮರ್ಶಕನ ಢಾಳವಾದ ಛಾಪು.

ಸಂಗೀತ, ಸಾಹಿತ್ಯ, ಚಿತ್ರಕಲೆ ಯಾವ ಸೀಮೆಯಲ್ಲಿ ಸುಳಿದಾಡಿದರೂ ಬಿ.ವಿ.ಕೆ. ಶಾಸ್ತ್ರೀ ಗಾಳಿ-ಬೆಳಕಿನಷ್ಟೇ ಸುಪರಿಚಿತವಾದ ಹೆಸರು.

ಹುಟ್ಟಿದ್ದು ನಂಜನಗೂಡು (30-7-1916); ಬೆಳೆದದ್ದು ವೀಣೆಯ ಬೆಡಗಿನ ಮೈಸೂರಿನಲ್ಲಿ. ಅದು ನಾಲ್ವಡಿ ಕೃಷ್ಣರಾಜರ ನಲ್ಮೆಯ ಆಡಳಿತದ ದಿನಗಳು. ಯಾವ ದಿಕ್ಕಿನಿಂದ ಗಾಳಿ ಬೀಸಿದರೂ ಅದರಲ್ಲಿ ಕೀರ್ತನೆಯದೋ, ಭಜನೆಯದೋ, ಗಮಕದ್ದೋ ಒಂದು ಪಲುಕು; ವೀಣೆಯ ಒಂದು ನಾದ ಸಂಚಾರ ಎಂಬಂಥ ದಿನಗಳು.

ಬಾಲಕ ಬಿ.ವಿ.ಕೆ.ಗೆ ಹಿರಿಯ ವಾಗ್ಗೇಯಕಾರ ವಾಸುದೇವಾಚಾರ್ಯರಲ್ಲಿ ಸಂಗೀತ ಕಲಿಯುವ ಆಸೆ, ನಂಜನಗೂಡಿನ ಶಾಲೆಯ ದಿನಗಳಲ್ಲೇ ಮೊಳೆತದ್ದು. ಆದರೆ ಸೇರಿದ್ದು ಚಿತ್ರಕಲೆಯ ಅಧ್ಯಯನಕ್ಕಾಗಿ ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್. ಸಂಗೀತ ಕಲಿಯುವ ಆಸೆ ಕಮರಲಿಲ್ಲ. ಲಭಿಸಿದ್ದು ಅರಮನೆಯ ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರಲ್ಲಿ ಶಿಷ್ಯತ್ವ. ಹೀಗೆ ವಿದ್ಯಾರ್ಥಿ ದಿನಗಳಿಂದಲೇ ಸಂಗೀತ, ಚಿತ್ರಕಲೆಯ ಜೋಡಿ ಕುದುರೆ ಸಹವಾಸ. ಅಭ್ಯಾಸಮಾಡಿ, ಹದವರಿತು, ಪಾಂಡಿತ್ಯ ಬೆಳೆಸಿಕೊಂಡು ಈ ಜೋಡಿ ಕುದುರೆ ಸವಾರಿ ಕರಗತಮಾಡಿಕೊಂಡ ಪ್ರತಿಭಾವಂತ. ಅಂದಿಗೂ, ಇಂದಿಗೂ, ಎಂದೆಂದಿಗೂ ಕಲೆ, ಸಂಗೀತಗಳೇ ಬಿ.ವಿ.ಕೆ. ಶಾಸ್ತ್ರಿಗಳ ಬಾಳಸಂಗಾತಿ.

ಚಾಮರಾಜೇಂದ್ರ ಇನ್‌ಸ್ಟಿಟ್ಯೂಟನಲ್ಲಿ ಕಲೆ ಕಲಿತದ್ದಾಯಿತು. ಆದರೆ ಬಾಳಬಟ್ಟೆಯಲ್ಲಿ ಉಡಲು ಉಣಲು ಬೇಕಲ್ಲ! ಆಗ ಆಶ್ರಯ ನೀಡಿದ್ದು ಅಗರಂ ರಂಗಯ್ಯನವರ 'ಸಾಧ್ವಿ' ಪತ್ರಿಕೆ. ಇಲ್ಲಿ ಬಿ.ವಿ.ಕೆ.ಯೊಳಗಿನ ಪತ್ರಕರ್ತ ಪ್ರಕಟ. 'ವಕ್ರದೃಷ್ಟಿ' - **ಶುಕ್ರಾಚಾರ್ಯ** ಅಂಕಿತದಲ್ಲಿ ಇವರು ಬರೆಯುತ್ತಿದ್ದ ಅಂಕಣ, ಬಲುಬೇಗ ಜನರ ಗಮನ ಸೆಳೆಯಿತು. ಅಷ್ಟರಲ್ಲಿ ಪಿತೃವಿಯೋಗದಿಂದ ಬದುಕು ಮೂರಾಬಟ್ಟೆ ಎನ್ನುವಂಥ ಸ್ಥಿತಿ. ಆದರೆ ಎಂಥ ಸ್ಥಿತಿಯಲ್ಲೂ ಮಾತುಗಾರ ಬಿ.ವಿ.ಕೆ. ಸುತ್ತ ಸದಾ ಸ್ನೇಹವಲಯ. ಜೊತೆಗೆ ಎ.ಆರ್. ಕೃಷ್ಣಶಾಸ್ತ್ರಿ, ತೀ.ನಂ.ಶ್ರೀ., ಡಿ.ಎಲ್.ಎನ್., ಕ.ವೆಂ. ರಾಘವಾಚಾರ್, ಡಾ. ಎಂ.ಎಚ್. ಕೃಷ್ಣ ಮೊದಲಾದವರ ರಸಿಕ ವಿದ್ವತ್‌ಗೋಷ್ಠಿಯಲ್ಲೂ ಕಿರಿಯನ ಒಡನಾಟ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉದರಂಭರಣಕ್ಕೊಂದು ಅರೆಕಾಲಿಕ ಉದ್ಯೋಗ.

ಉದ್ಯೋಗ ಅರೆಕಾಲಿಕವಾದರೂ ಬಿ.ವಿ.ಕೆ. ಪೂರ್ತಿಕಾಲ ಕಳೆಯುತ್ತಿದ್ದುದು ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರದಲ್ಲಿ. ಒಂದು ದಿನ ಲೈಬ್ರರಿಯಲ್ಲಿ ಎದುರಾದ ಎ.ಆರ್. ಕೃಷ್ಣಶಾಸ್ತ್ರಿಗಳು: "ಸುಮ್ಮನೆ ಓದಿ ಏನು ಪ್ರಯೋಜನ. ಬರೆಯಯ್ಯ, ಕಲೆ ಬಗ್ಗೆ ಪ್ರಬುದ್ಧ ಕರ್ನಾಟಕಕ್ಕೆ ಲೇಖನ ಬರೆದು ಕೊಡು."

ಸವಾಲೇ ಸರಿ. ಪರಿಣಾಮ ಪ್ರಬುದ್ಧ ಕರ್ನಾಟಕದಲ್ಲಿ 'ಪ್ರಾಚೀನ ಚಿತ್ರಕಲೆ' ಲೇಖನ ಮಾಲೆ.

1940ರ ದಿನಗಳಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಬೇಡಿಕೆ ಭುಗಿಲೆದ್ದು ಅಗರಂ ರಂಗಯ್ಯ ಜೈಲು ಸೇರಬೇಕಾಯಿತು. 'ಸಾಧ್ವಿ'ಯ ಹೊಣೆ ಯುವಕ ಬಿ.ವಿ.ಕೆ. ಹೆಗಲಿಗೆ. ಸ್ವಾತಂತ್ರ್ಯದ ಹುಮ್ಮಸ್ಸು. ಬಿ.ವಿ.ಕೆ. 'ಸಾಧ್ವಿ'ಯ ಭೂಗತ ಸಂಚಿಕೆ ಪ್ರಕಟಿಸಲಾರಂಭಿಸಿದರು. ಗುಟ್ಟಾಗಿ ಕೊಳ್ಳೇಗಾಲದಲ್ಲಿ ಅಚ್ಚಾಗಿ ವಿವಿಧೆಡೆಗಳಿಗೆ ರವಾನೆಯಾಗುತ್ತಿದ್ದ ಈ ಸಂಚಿಕೆಗೆ ಬಲು ಬೇಗ ಮುಟ್ಟುಗೋಲು. ಇದೇ ಕಾಲದಲ್ಲೇ ಕೈಲಾಸಂ ಜೊತೆ ಸಂಪರ್ಕ. 'ಸಾಧ್ವಿ' ಪ್ರೆಸ್‌ನಲ್ಲಿನ ಬಿ.ವಿ.ಕೆ. ಕೋಣೆಯಲ್ಲೇ ಕೈಲಾಸಂ ಠಿಕಾಣಿ. ನಾಟಕ ರಚನೆ, ರಂಗತಾಲೀಮು, ವಿವಿಧ ವಿನೋದಾವಳಿ ಪ್ರದರ್ಶನಗಳಲ್ಲಿ 'ಕೈ' ಜೊತೆ ಕೈ ಜೋಡಿಸಿದ ಅನುಭವ.

1942ರಲ್ಲಿ ಖಜಾನೆ ಇಲಾಖೆಯಲ್ಲಿ ನೌಕರಿ. ಬದುಕು ಒಂದು ತಹಬಂದಿಗೆ ಬಂದಂತೆ. ಸರ್ಕಾರಿ ಚಾಕರಿ ಎಂದಮೇಲೆ ಕಲೆ, ಸಂಸ್ಕೃತಿ ಎನ್ನಲು ಬಿಡುವಿಲ್ಲ! ಒಳಗಿನ ತುಡಿತ ನಿಲ್ಲಲಿಲ್ಲ.

ಚಡ್ಡಿ ಗೆಳೆಯ ಇ.ಆರ್. ಸೇತೂರಾಂ ಮೊದಲಾದವರಿಂದ ಕಲಾವಿಮರ್ಶೆ ಬರೆಯಲು ಪ್ರಚೋದನೆ. ಇದೇ ವೇಳೆಗೆ '**ಪ್ರಜಾವಾಣಿ**'ಯಿಂದ ಇಂಥ ಅವಕಾಶದ ಬಾಗಿಲು ತೆರೆಯಿತು. ಸರಿ ಸುಮಾರು 1953ರಿಂದ ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಿಗೆ ಸಂಗೀತ, ನೃತ್ಯ, ಚಿತ್ರಕಲೆ ಕುರಿತು ವಿಮರ್ಶೆ, ಲೇಖನಗಳು ಇಂದಿಗೂ ಮುಂದುವರಿದಿರುವ ಪ್ರತಿಭಾ ಕಾಯಕ. ಸೋದರಿ '**ಸುಧಾ**'ಳಲ್ಲೂ ಅದೇ ಅಭಿಮಾನ. ಜೊತೆಗೆ ಆಕಾಶವಾಣಿಗೆ ಸಂಗೀತ, ನೃತ್ಯ

ರೂಪಕಗಳ ರಚನೆ. ಕರ್ನಾಟಕ ಸಂಗೀತ ವಿದ್ವಾಂಸರ ಸಿದ್ಧಿ-ಸಾಧನೆ ಕುರಿತು ಇಲಸ್ಟ್ರೇಟೆಡ್ ವೀಕ್ಲಿಯಲ್ಲಿ ಲೇಖನಮಾಲೆ. ಇದರಿಂದಾಗಿ ಅಖಿಲ ಭಾರತ ರಂಗದಲ್ಲಿ ಕರ್ನಾಟಕ ಸಂಗೀತದ ಸಿದ್ಧಿ-ಸಾಧನೆ, ದಿವ್ಯತೆ-ಭವ್ಯತೆಗಳ ಅನಾವರಣ.

ಹಿರಿ ಕಿರಿಯ ಕಲಾವಿದರು, ಪತ್ರಕರ್ತರು, ಕಲಾಭಿಮಾನಿಗಳು – ಹೀಗೆ ಬಿ.ವಿ.ಕೆ. ಸ್ನೇಹವಲಯ ದೊಡ್ಡದು.

ರಂಗಪ್ರವೇಶ ಇರಲಿ, ಮೊದಲ ಕಚೇರಿ ಇರಲಿ, ಹಿರಿಯ ಸಾಧಕರ ಮಹತ್ವದ ಕಚೇರಿ ಇರಲಿ, ಯಾವುದೇ ಸಾಂಸ್ಕೃತಿಕ ಉತ್ಸವ ಇರಲಿ, ಬಿ.ವಿ.ಕೆ. ಬರೆಯಬೇಕು. ಟೀಕೆ, ಟಿಪ್ಪಣಿ ಏನೇ ಇರಲಿ, ಅದು ಆಶೀರ್ವಾದವೇ. ಅವರು ಬರೆದರೆ ಕಲಾಪ್ರಪಂಚದಲ್ಲಿ ಒಂದು ಮಾನ್ಯತೆ ದೊರೆತಂತೆ ಕಲಾವಿದರಿಗೆ ಧನ್ಯತೆ – ಇದು ಬಿ.ವಿ.ಕೆ.

ವಿಮರ್ಶೆ ಎನ್ನುವುದು – ಸಾಹಿತ್ಯ, ಸಂಗೀತ, ನೃತ್ಯ ಮೊದಲಾದ ಕಲೆಗಳಲ್ಲಿ ಶಾಸ್ತ್ರೀಯವಾದುದನ್ನು ಪೋಷಿಸಿ ಬೆಳೆಸುತ್ತಾ ಹೊಸ ಸಂವೇದನೆಗಳಿಗೂ ಸ್ಪಂದಿಸಿ ಹೊಸ ಅಭಿರುಚಿ ಬೆಳೆಸಬೇಕು. ಇದು ವಿಮರ್ಶೆಯ ಕೆಲಸ ಎನ್ನಲಾಗುತ್ತದೆ. ಬಿ.ವಿ.ಕೆ.ಯವರ ಕಲಾವಿಮರ್ಶೆ ಈ ಕೆಲಸ ಮಾಡಿದೆ, ಮಾಡುತ್ತಿದೆ. ಬಿ.ವಿ.ಕೆ.ಯವರ ವಿಮರ್ಶೆ ಕೊಬ್ಬಿದುತ್ಸಾಹದ ಧಾರ್ಷ್ಟ್ಯ, ಧಾವಂತಗಳಲ್ಲ; ಅವರ ಪೆನ್ನು ಕೊಚ್ಚಿ ಹಾಕುವ ಕೊಡಲಿಯ ಕಾವೂ ಅಲ್ಲ. ಅವರದು ಸಾವಧಾನದ, ಸಮಚಿತ್ತದ ಗುಣಗ್ರಾಹಿ ವಿಮರ್ಶೆ. ಬಿ.ವಿ.ಕೆ. ಅವರದು ಕೂಪಮಂಡೂಕ ದೃಷ್ಟಿಯಲ್ಲ, ಗರುಡ ದೃಷ್ಟಿ ಎನ್ನುತ್ತಾರೆ ಓರಿಗೆಯ ಲೇಖಕರು. ಕಲೆಯನ್ನು ಬೆಳೆಸುವ ವಿಮರ್ಶೆ ಎಂದೇ ಜಿ. ವೆಂಕಟಾಚಲಂ, ಡಿ.ವಿ.ಜಿ., ಮಾಸ್ತಿ, ರಾಳ್ಳಪಳ್ಳಿ, ಅನಂತಕೃಷ್ಣ ಶರ್ಮ ಮೊದಲಾದ ಹಿರಿಯರು ಬಿ.ವಿ.ಕೆ.ಯವರಿಗೆ ಶಹಭಾಸ್‌ಗಿರಿ ಕೊಟ್ಟಿರುವುದೂ ಉಂಟು.

ಬಿ.ವಿ.ಕೆ. ಮಾತಿನ ಗತ್ತನ್ನು ಟೆಲಿಫೋನಿನಲ್ಲೇ ಕೇಳಬೇಕು. ಶುರುವಿಗೆ 'ಯೇಸ್' ಎನ್ನುವ ಗತ್ತು, ಎಳೆಯುವ ರಾಗ, ಆ ಎರಡು ಅಕ್ಷರಗಳ ಮೇಲೆ ಬೀಳುವ ಒತ್ತು ಅದಕ್ಕೊಂದು ಅಧಿಕಾರವಾಣಿಯ ಮುದ್ರೆಯನ್ನೊತ್ತಿ ಬಿಡುತ್ತದೆ. "ಒಂದು ಲೇಖನ ಬೇಕಲ್ಲ" ಎಂದ ಕೂಡಲೇ "ಓಹೋ ಅದೋ" ಎಂದು ವಿಷಯದ ಆಜೂ ಬಾಜೂ ಸವರಿ, ಹೃದಯ ಮುಟ್ಟಿ, ಚಕ್ಕುಬಂದಿ ಹೇಳಿ, "ನಿಮಗೆ ನಾಳೆಯೇ ಬೇಕೇನೋ?" ಎಂದು ಪತ್ರಕರ್ತರ ಅವಸರದ ಹಣೆಬರಹವನ್ನೂ ತೂಗಿ ಬಿಡುತ್ತಾರೆ. ನಾವು ಅವಸರಮಾಡಿದರೂ ಶಾಸ್ತ್ರಿಗಳದು ಎಂದೂ ಅವಸರದ ಬರವಣಿಗೆಯಾಗುವುದಿಲ್ಲ. ಅವರದು ಮಾತ್ರ ಸಾವಧಾನ ಪ್ರವೃತ್ತಿ. ಅದು 'ಮುರಳಿ'ಯ ವಿಮರ್ಶೆಯ ಪರಿಯೂ ಹೌದು. (ಮುರುಳಿ – ಬಿ.ವಿ.ಕೆ. ಕಾವ್ಯನಾಮ).

ತಾರುಣ್ಯದ ದಿನಗಳಲ್ಲಿ ಗೆಳೆಯರು ಬಿ.ವಿ.ಕೆ. ಶಾಸ್ತ್ರಿ ಎಂದರೆ ಚಲಿಸುವ ವಿಶ್ವಕೋಶ ಎನ್ನುತ್ತಿದ್ದರಂತೆ.

ಈಗಲೂ ಬಿ.ವಿ.ಕೆ. ಶಾಸ್ತ್ರಿ ಎಂದರೆ – ಎಂ.ಎಸ್. ಸುಬ್ಬುಲಕ್ಷ್ಮಿ, ಟಿ. ಚೌಡಯ್ಯ, ವೀಣೆ ದೊರೆಸ್ವಾಮಿ ಅಯ್ಯಂಗಾರ್, ಮಾಲಿ, ಶೆಮ್ಮನಗುಡಿ, ಜಿ.ಎನ್.ಬಿ., ಎಸ್. ರಾಮನಾಥನ್, ಶ್ರೀಕಂಠನ್, ಭೀಮಸೇನ್ ಜೋಶಿ, ಗಂಗೂಬಾಯಿ ಹಾನಗಲ್, ಮನ್ಸೂರ್, ಸವಾಯಿ ಗಂಧರ್ವ, ಬಿಸ್ಮಿಲ್ಲಾಖಾನ್, ರವಿಶಂಕರ್, ಯೆಹೂದಿ ಮೆನುಹಿನ್ ಇತ್ಯಾದಿ ಹತ್ತು ಸಮಸ್ತ ಪ್ರತಿಭಾನ್ವಿತರನ್ನೊಳಗೊಂಡ ಸಂಚಾರಿ ಸಂಗೀತದ ಭಂಡಾರ – ಬಿ.ವಿ.ಕೆ. ಶಾಸ್ತ್ರಿ.

ವ್ಯಾನ್‌ಗೋ, ರೆಂಬ್ರಾಂಟ್, ಪಿಕಾಸೋ, ವೆಂಕಟಪ್ಪ, ರವಿವರ್ಮ, ಹುಸೇನ್, ಹೆಬ್ಬಾರ್ ಮೊದಲಾದ ಮಹಾ ಮಹಾ ಚಿತ್ರಕಾರರನ್ನೊಳಗೊಂಡ ಚಲಿಸುವ ಕಲಾಶಾಲೆ.

ತುಂಬಿದ ಕೊಡ, ವಿದ್ವತ್ತು ಮತ್ತು ಸಜ್ಜನಿಕೆಗಳ ಅಪರೂಪದ ಹೊಂದಾಣಿಕೆ, ಜೊತೆಗೆ ಸರಳತೆ. ಬಿ.ವಿ.ಕೆ. ಶಾಸ್ತ್ರಿಗಳು, ಹೈನೆಸ್ ರುಮಾಲಿನ ಮೈನಸ್‌ನಲ್ಲೂ ರಸಿಕಭಾವ, ವಿದ್ವತ್ತಿನ ಠೀವಿ ಮತ್ತು ಸಾವಧಾನಗಳು ಸಾಕಾರಗೊಂಡ ಹಳೆ ಮೈಸೂರಿನ ವಿಶಿಷ್ಟ ವ್ಯಕ್ತಿತ್ವದ ಒಂದು ಮಾದರಿ.

ಇಂಥ ಬಿ.ವಿ.ಕೆ. ಶಾಸ್ತ್ರಿಯವರಿಗೆ ಇದೀಗ ಎಂಬತ್ತೂರು ತುಂಬುತ್ತಿರುವ ಪ್ರಾಯ.

ಹಲವಾರು ಪ್ರಶಸ್ತಿಗಳು ಅರಸಿ ಬಂದಿರುವುದುಂಟು. ದೇಶವಿದೇಶ ಸುತ್ತಿರುವುದೂ ಉಂಟು. ಅವರಿಗೊಂದು ಸನ್ಮಾನದ ಮಾತು ಕಳೆದ ಒಂದೆರಡು ವರ್ಷಗಳಿಂದ ಕೇಳಿ ಬಂದದ್ದುಂಟು.

ಈಗ ಮುಹೂರ್ತ ಒದಗಿ ಬಂದಿದೆ. ಇದೇ ಜುಲೈ 11, 1999ರಂದು ಅಭಿಮಾನಿಗಳು ಬಿ.ವಿ.ಕೆ. ಶಾಸ್ತ್ರಿಗಳನ್ನು ಸನ್ಮಾನಿಸಿ, ಅಭಿನಂದನಾ ಗ್ರಂಥ ಅರ್ಪಿಸಲಿದ್ದಾರೆ.

ಸಂಗೀತ, ನೃತ್ಯ, ಕಲೆಗಳ **ವಿಮರ್ಶಕ ಪರಿಚಾರಕ** ಬಿ.ವಿ.ಕೆ. ಶಾಸ್ತ್ರಿಗಳು ಶತಾಯುಷಿಗಳಾಗಿ ರಸಿಕ ವಿಮರ್ಶೆ, ವಿನಯ, ವಿವೇಕಗಳ ಬೆಳಕು ಹರಿಸುತ್ತಾ ನೂರಕ್ಕೂ ಹೆಚ್ಚು ಹೆಚ್ಚು ವರ್ಷಗಳ ಕಾಲ ನಮ್ಮೊಡನೆ ಇರಲಿ.

ಸ್ವಸ್ತಿ, ಸ್ವಸ್ತಿ, ಸ್ವಸ್ತಿ.

ಸ್ವಸ್ತಿವಾಚನ ಗಾಯನ ಇರಲಿ ಸದಾ.

'ಪ್ರಜಾವಾಣಿ' ಕೃಪೆಯಿಂದ

144. ಬಿ.ವಿ.ಕೆ. ಶಾಸ್ತ್ರಿ

– ಶಶಾಂಕ

ಚಿತ್ರಕಲೆ, ಸಂಗೀತ, ನೃತ್ಯ, ನಾಟಕ – ಹೀಗೆ ಕಲಾ ಪ್ರಕಾರಗಳ ವಿವಿಧ ಮಾಧ್ಯಮಗಳನ್ನು ವಿಮರ್ಶಿಸುವ ಮೂಲಕ ಕನ್ನಡ ಸಾಹಿತ್ಯದಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಿದ ವಿಮರ್ಶಕರಲ್ಲಿ ಬಿ.ವಿ.ಕೆ. ಶಾಸ್ತ್ರಿ ಪ್ರಮುಖರು. ಕನ್ನಡದಲ್ಲಿ ಕೇವಲ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿದ್ದ ವಿಮರ್ಶಾ ವಲಯವನ್ನು ಕಲೆಯ ಇತರ ಕ್ಷೇತ್ರಗಳಿಗೂ ವಿಸ್ತರಿಸಿದ ಹಿರಿಮೆಗೆ ಪಾತ್ರರಾಗಿರುವ ಬೆಂಗಳೂರು ವೆಂಕಟಸುಬ್ಬಯ್ಯ ಕೃಷ್ಣಶಾಸ್ತ್ರಿಗಳು, ಮೈಸೂರು ಜಿಲ್ಲೆಯ ನಂಜನಗೂಡಿನವರು (ಜನನ : 1916). ಹುಟ್ಟಿದ ಮನೆಯಲ್ಲಿ ಸದಾ ಸಂಗೀತದ ವಾತಾವರಣ. ಊರ ಹೊರಗಿನ ಕೇರಿಯಲ್ಲಿ ಜಾತ್ರೆಗಳ ಸಂಭ್ರಮ ಜೊತೆಯಲ್ಲಿ ಜಾನಪದ ಗೀತೆಗಳ ಬೆಡಗು – ಹೀಗಾಗಿ ಬಾಲ್ಯದಿಂದಲೇ ಶಾಸ್ತ್ರಿಗಳಿಗೆ ಶಾಸ್ತ್ರೀಯ ಹಾಗೂ ಜನಪದ ಸಂಗೀತ ಎರಡರಲ್ಲೂ ಅಪಾರ ಆಸಕ್ತಿ.

ವೆಂಕಟಸುಬ್ಬಯ್ಯ - ಶಾಸ್ತ್ರಿಗಳ ತಂದೆ. ತಾಯಿ ಸುಬ್ಬಮ್ಮ. ಹುಟ್ಟಿದ ಊರಿನಲ್ಲೇ ವಿದ್ಯಾಭ್ಯಾಸ. ಮಾಧ್ಯಮಿಕ ಶಾಲೆ ಓದುತ್ತಿದ್ದಾಗಲೇ ಸಂಗೀತದ ಕಡೆ ಒಲವು. ಇದಕ್ಕೆ ಕಾರಣರಾದವರು ಉಪಾಧ್ಯಾಯರಾಗಿದ್ದ ಎನ್. ಸುಬ್ರಹ್ಮಣ್ಯಯ್ಯನವರು ಎಸ್.ಎಸ್.ಎಲ್.ಸಿ. ಮುಗಿಸಿದ ಬಳಿಕ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಪ್ರಯಾಣ (1932). ಕಲೆಯಲ್ಲಿ ವಿಶೇಷ ಆಸಕ್ತಿ. ಆದ್ದರಿಂದ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗೆ ಸೇರ್ಪಡೆ. ಎನ್.ಜಿ. ಪಾವಂಜೆ, ಕೆ. ಕೇಶವಯ್ಯ, ಎಸ್.ಜಿ. ಟಂಕಸಾಲೆ, ಎಂ. ವೀರಪ್ಪ, ವೈ. ಸುಬ್ರಹ್ಮಣ್ಯರಾಜು, ವೇಣುಗೋಪಾಲ ನಾಯ್ಡು – ಪ್ರಸಿದ್ಧ ಗುರುಗಳಲ್ಲಿ ಶಿಷ್ಯವೃತ್ತಿ. ಜಲವರ್ಣ ಚಿತ್ರ ರಚನೆಯಲ್ಲಿ ಖ್ಯಾತರಾಗಿದ್ದ ನಂಜನಗೂಡಿನ ಎನ್.ಎಸ್. ಸುಬ್ಬುಕೃಷ್ಣರ ಹಾದಿಯಲ್ಲಿ ಸಾಗಲು ಬಯಸಿದ ಶಾಸ್ತ್ರಿಗಳು ಚಿತ್ರಕಲೆಯಲ್ಲಿ ಗಳಿಸಿದ್ದು ಡಿಪ್ಲೋಮಾ (1938).

ಚಿತ್ರಕಲೆ ಅಭ್ಯಾಸದ ಜೊತೆ ಜೊತೆಗೆ ಸಂಗೀತದ ಸೆಳೆತಕ್ಕೊಳಗಾದ ಶಾಸ್ತ್ರಿಗಳು ಅರಮನೆಯ ಆಸ್ಥಾನ ವಿದ್ವಾನ್ (ಚಿಕ್ಕ) ರಾಮರಾವ್ ಅವರ ಶಿಷ್ಯರಾಗಿ ಐದು ವರ್ಷ ಕರ್ನಾಟಕ ಸಂಗೀತ ಕಲಿತರು.

ಚಿತ್ರಕಲೆಯಲ್ಲಿ ಡಿಪ್ಲೋಮಾ ಮುಗಿಸಿದ ಶಾಸ್ತ್ರಿಗಳು ಕೆಲವು ವರ್ಷ ಕಾಲ ನಿರುದ್ಯೋಗಿಯಾಗಿ ಕಾಲ ಕಳೆಯಬೇಕಾದಂತಹ ಅನಿವಾರ್ಯ ಸನ್ನಿವೇಶ. ಮುಂದೆ ಮೈಸೂರು ವಿಶ್ವವಿದ್ಯಾನಿಲಯದ 'ಸ್ಕೌಟ್ ಅಸೋಸಿಯೇಷನ್' ನಲ್ಲಿ ಸ್ವಲ್ಪ ಕಾಲ ಉದ್ಯೋಗಿಯಾಗಿ ಕಾರ್ಯನಿರ್ವಹಿಸಿದರು. ಆ ದಿನಗಳು ಅವರ ಬದುಕಿನಲ್ಲಿ ಬಹಳ ಮಹತ್ವದ ಕಾಲ.

ವಿದ್ಯಾರ್ಥಿಗಳೊಂದಿಗೆ ಹಾಗೂ ವಿಶ್ವವಿದ್ಯಾನಿಲಯದ ಪಂಡಿತರೊಂದಿಗೆ ಬೆರೆಯುವ ಸದವಕಾಶ ದೊರೆತದ್ದು ಈ ಸಂದರ್ಭದಲ್ಲೇ. ಅಲ್ಲದೆ ವಿಶ್ವವಿದ್ಯಾನಿಲಯದ ಮತ್ತು ಓರಿಯಂಟಲ್ ಗ್ರಂಥಾಲಯಗಳು ಶಾಸ್ತ್ರಿಗಳ ಬಾಳಿನಲ್ಲಿ ಹೊಸ ಲೋಕವನ್ನೇ ತೆರೆದವು. ಸಂಗೀತ, ಶಿಲ್ಪ, ಕಲೆಗೆ ಸಂಬಂಧಿಸಿದ ದೇಶ ವಿದೇಶದ ಅನೇಕ ಗ್ರಂಥಗಳನ್ನು ಅವರು ಅಧ್ಯಯನ ಮಾಡಿದರು. ಅಲ್ಲದೇ ಇದೇ ಸಮಯದಲ್ಲಿ ಅನೇಕ ಸಾಹಿತಿಗಳ ಪರಿಚಯವಾಯಿತು. ಟಿ.ಪಿ. ಕೈಲಾಸಂ ಜೊತೆ ಕೆಲವು ತಿಂಗಳು ಕಳೆದದ್ದು ಅವರ ಬದುಕಿನಲ್ಲೊಂದು ಅವಿಸ್ಮರಣೀಯ ಅಧ್ಯಾಯ.

ಪತ್ರಿಕೆಗಳಲ್ಲಿ ಶಾಸ್ತ್ರಿಗಳು ಬರೆಯಲಾರಂಭಿಸಿದ್ದು ಇದೇ ಅವಧಿಯಲ್ಲಿ. ಅವರ ಬರಹ ಮೊದಲು ಪ್ರಕಟವಾದದ್ದು ಮೈಸೂರಿನ 'ಸಾಧ್ವಿ'ಯಲ್ಲಿ. ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಅನಿರೀಕ್ಷಿತವಾಗಿ ಭೇಟಿಯಾದ ಡಾ. ಎ.ಆರ್. ಕೃಷ್ಣಶಾಸ್ತ್ರಿಗಳು, ಕಲೆಯ ಬಗ್ಗೆ ಲೇಖನ ಬರೆದು ಕೊಡುವಂತೆ ಬಲವಂತ ಮಾಡಿದ ಫಲವಾಗಿ ಶಾಸ್ತ್ರಿಗಳು 'ಪ್ರಬುದ್ಧ ಕರ್ನಾಟಕ'ದ ಲೇಖಕ ಬಳಗದಲ್ಲಿ ಸೇರ್ಪಡೆಯಾದರು. ಕಲೆ ಕುರಿತಂತೆ ಮೈಸೂರಿನ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದ ಕಾರ್ಯಕ್ರಮಗಳಲ್ಲೂ ಅವರು ಪಾಲ್ಗೊಳ್ಳ ತೊಡಗಿದರು.

1943ರಲ್ಲಿ ಸರ್ಕಾರದ ಟ್ರೆಜರಿ ಡಿಪಾರ್ಟ್‌ಮೆಂಟ್‌ನಲ್ಲಿ ಉದ್ಯೋಗಿಯಾಗಿ ಸೇರ್ಪಡೆಯಾದ ಶಾಸ್ತ್ರಿಗಳು ನಿವೃತ್ತರಾಗುವವರೆಗೂ (1971) ಆ ಇಲಾಖೆಯಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಿದರು. ಉದ್ಯೋಗದಲ್ಲಿದ್ದರೂ ಕಲೆಗಳ ಬಗ್ಗೆ ಆಸಕ್ತಿ ಕಳೆದುಕೊಳ್ಳದಿದ್ದದ್ದು ಅವರ ವ್ಯಕ್ತಿತ್ವದ ವಿಶೇಷ.

'ಪ್ರಜಾವಾಣಿ' ಸುದ್ದಿ ಸಂಪಾದಕರಾಗಿದ್ದ ಇ.ಆರ್. ಸೇತೂರಾಮ್, 'ಸಾಪ್ತಾಹಿಕ'ದ ಸಂಪಾದಕರಾಗಿದ್ದ ಎಂ.ಬಿ. ಸಿಂಗ್ ಸಂಗೀತ-ಕಲೆ ಕುರಿತು ಬರೆಯುವಂತೆ 1953ರಲ್ಲಿ ಶಾಸ್ತ್ರಿಗಳಿಗೆ ಹೇಳಿದರು. ಅದೇ ಸಮಯದಲ್ಲಿ 'ಜನಪ್ರಗತಿ' ವಾರಪತ್ರಿಕೆಯು ಎನ್.ಎಸ್. ಸೀತಾರಾಮಶಾಸ್ತ್ರಿ ಅವರು ರೇಡಿಯೋದಲ್ಲಿ ಪ್ರಸಾರವಾಗುತ್ತಿದ್ದ 'ರಾಷ್ಟ್ರೀಯ ಸಂಗೀತ ಕಾರ್ಯಕ್ರಮ'ಗಳ ಕುರಿತು ತಮ್ಮ ಪತ್ರಿಕೆಯಲ್ಲಿ ವಿಮರ್ಶಿಸುವಂತೆ ಹೇಳಿದರು. ಗೆಳೆಯ ಬಿ.ಎಸ್. ರಾಮ್‌ರಾವ್, 'ಡೆಕ್ಕನ್ ಹೆರಾಲ್ಡ್' ಸಂಪಾದಕ ಪೋತನ್ ಜೋಸೆಫ್‌ರನ್ನು ಪರಿಚಯಿಸಿದಾಗ, ಅವರು ಕಲೆ-ಸಂಗೀತ ಕುರಿತು ಇಂಗ್ಲೀಷಿನಲ್ಲಿ ಬರೆದು ಕೊಡುವಂತೆ ಹೇಳಿದರು. ಇದರಿಂದಾಗಿ ಕನ್ನಡ-ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಶಾಸ್ತ್ರಿಗಳು ವಿಮರ್ಶೆಗಳನ್ನು ಬರೆಯಲಾರಂಭಿಸಿದರು. 'ಮುರಲಿ' ಎಂಬ ಲೇಖನಿನಾಮ ಬಳಸತೊಡಗಿದರು. 'ಕರ್ನಾಟಕ ಸಂಗೀತಗಾರರು' ಶಿರೋನಾಮೆಯಲ್ಲಿ ಇವರು 1960ರಲ್ಲಿ ಇಂಗ್ಲಿಷ್‌ನಲ್ಲಿ ಬರೆದ ಲೇಖನಮಾಲೆ 'ಇಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಪ್ರಕಟವಾದಾಗ ದೇಶದಲ್ಲಿ ಮಾತ್ರವಲ್ಲ, ವಿದೇಶಗಳಲ್ಲೂ, ಕರ್ನಾಟಕ ಸಂಗೀತಗಾರರ ಪರಿಚಯವಾಗಿ, ಕಲಾವಿದರ ಪ್ರತಿಷ್ಠೆ-ಗೌರವ ಹೆಚ್ಚಿದವು.

ಕೇವಲ ಪತ್ರಿಕೆಗಳಲ್ಲಿ ಮಾತ್ರವಲ್ಲ; ಅನೇಕ ಸಂಭಾವನಾ ಗ್ರಂಥ ಹಾಗೂ ಎನ್.ಸಿ.ಪಿ.ಎ. ಜರ್ನಲ್, ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಜರ್ನಲ್ ಮುಂತಾದ ಇಂಗ್ಲಿಷ್ ಮ್ಯಾಗಜಿನ್‌ಗಳಲ್ಲೂ ಶಾಸ್ತ್ರಿಯವರ ಬರಹಗಳು ಪ್ರಕಟವಾಗಿವೆ.

'ಟ್ರಡಿಷನಲ್ ಪೆಯಿಂಟಿಂಗ್ಸ್ ಆಫ್ ಕರ್ನಾಟಕ', 'ಮ್ಯೂರಲ್ಸ್ ಆಫ್ ಕರ್ನಾಟಕ' (ಇಂಗ್ಲೀಷ್ - ಕನ್ನಡ), 'ಮಾಡರ್ನ್ ಆರ್ಟ್', 'ಟ್ವೆಂಟಿಫೈವ್ ಓಲ್ಡ್ ಮಾಸ್ಟರ್ಸ್'. 'ಕ್ರಿಯೇಟಿವ್ ಆರ್ಟಿಸ್ಟ್ಸ್', 'ಡ್ರಾಯಿಂಗ್', (ರೇಖಾಚಿತ್ರ) ಇವು ಕಲೆಗೆ ಸಂಬಂಧಪಟ್ಟಂತೆ ಪ್ರಕಟವಾದ ಶಾಸ್ತ್ರಿಯವರ ಕೃತಿಗಳಾದರೆ, ಸಂಗೀತಕ್ಕೆ ಸಂಬಂಧಿಸಿದ ಅವರ ಗ್ರಂಥಗಳು : 'ಮೈಸೂರು ಟಿ. ಚೌಡಯ್ಯ', 'ಬಡೇ ಗುಲಾಂ ಆಲೀಖಾನ್' ಮತ್ತು 'ಬೆಂಗಳೂರು ನಾಗರತ್ನಮ್ಮ'.

ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಕೇಂದ್ರ ಲಲಿತಕಲಾ ಅಕಾಡೆಮಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಸದಸ್ಯರಾಗಿ ಕಾರ್ಯನಿರ್ವಹಿಸಿರುವ ಶಾಸ್ತ್ರಿಗಳು, ಸಂಗೀತ ಕಲೆಗೆ ಸಂಬಂಧಿಸಿದಂತೆ ಅನೇಕ ಸಂಘ-ಸಮಿತಿಗಳ ಸದಸ್ಯರಾಗಿ ತಮ್ಮ ಅಮೂಲ್ಯ ಸಲಹೆ ನೀಡಿದ್ದಾರೆ. ಸಂಗೀತ ಕಲಾಕ್ಷೇತ್ರಕ್ಕೆ ಅನುಪಮ ಕೊಡುಗೆ ನೀಡಿರುವ ಇವರಿಗೆ ಸಂದಿರುವ ಪ್ರಶಸ್ತಿ-ಪುರಸ್ಕಾರಗಳು ಹಲವಾರು. ಆಕಾಶವಾಣಿ ವಾರ್ಷಿಕ ಪ್ರಶಸ್ತಿ (1976), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1985), ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ (1986), ಮದ್ರಾಸ್ ಸಂಗೀತ ಅಕಾಡೆಮಿ ನೀಡಿದ ಟಿ.ಟಿ.ಕೆ. ಪ್ರಶಸ್ತಿ (1987), ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ (1988), ಕೇಂದ್ರ ಲಲಿತಕಲಾ ಅಕಾಡೆಮಿಯ 'ಪ್ರಾದೇಶಿಕ ವಿಮರ್ಶಕ ಪ್ರಶಸ್ತಿ' 1992 ಇವು ಪ್ರಮುಖವಾದವು.

ಪಂಡಿತ್ ರವಿಶಂಕರ್, ಎಂ.ಎಸ್. ಸುಬ್ಬುಲಕ್ಷ್ಮಿ, ಜಿ.ಎನ್. ಬಾಲಸುಬ್ರಹ್ಮಣ್ಯ, ದೊರೆಸ್ವಾಮಿ ಅಯ್ಯಂಗಾರ್ – ಹೀಗೆ ಅನೇಕ ಹಿರಿಯ ಕಲಾವಿದರ ಸ್ನೇಹವನ್ನು ಪಡೆದಿರುವ ಭಾಗ್ಯ ಶಾಸ್ತ್ರಿಯವರದು. ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★ ★

ಸುಧಾ

145. A tremendous contributor

– Indrani Rehman

It is with great pleasure that I join in the tribute to dear B.V.K. Sastry – my friend and a tremendous contributor to the art of Dance in India – he did not dance himself but did everything else for dance and dancers! God Bless you BVK and much. ★ ★ ★ ★ ★ ★ ★ ★

146. SHRI B. V. K. SASTRY

– Sudharani Raghupathy

My first meeting with Shri B.V.K. Shastry, a doyen among art critics in Karnataka, dates back to the mid-fifties, when I was hardly a teenager myself. Ever since, he has kept a close watch on my dancing career, both as an art-critic and as a well-wisher.

A scholar of great reputation, it is an honour that Shri Shastry has been associated with Shree Bharatalaya, the last twenty-eight years, as a memberin the advisory committee of the institution.

Shee Bharatalaya was proud to honour him with the title of "Bharatha Vimarshaka Bhushana" during the Silver Jubilee Celebrations of the institution in July 1995, in recognition of his services rendered t the cause of fine arts as a commentator.

It was also a privilege during another occasion, when Shri. Shastry consented to release the audio-cassette of "Thiruppavai" (rendered by Vidwan Madurai N. Krishnan) produced by Shree Bharatalaya in October 1997.

At this happy moment, I wish him the very best and pray to the Almighty to grant him good health and long life to continue his services to the cause of the great heritage and culture of our country. ★ ★ ★ ★ ★ ★

147. Imperial intellect

– K.S. Mahadevan

It has been said that "great minds are rich in radiating force, not only exerting power but communicating and even creating it. The recollection of men who have signalised themselves by great thoughts and deeds seems to create for the time a purer atmosphere around us".

With this imperial intellect and grace of manner, Sri B.V.K. Sastry has warmed and elevated those around him and at the same time winning over their hearts. To know BVK is to come face with face with an utterly dedicated man whose knowledge of arts is deep and profound and whose clearness of discernment endows his personality with a soft invincibility. Whether it is classical Karnatak music or folk arts or dance or any branch of the humanities, his views are beyond question. He could be at home in the pedantic and fastidious corridors of the Academy at Bhopal as well as in the somewhat narrow grooves of the South Indian pedants and scholars in Bangalore, Mysore, Chennai etc. He is a true example of the statement that "Talent is power, tact is skill; that Talent knows what to do and Tact knows how to do it". The Ganakala Parishat and any number of such institutions in Karnataka bear witness to his influence as a cultural force exerted with finesse and finality.

Chronic ill health never robbed him of his equanimity. There is no touch of hubris about him in any controversy. This writer has received unstinted kindness from him at all times and indeed cherishes his warm appreciation of the publication "80 years of Semmangudi" edited by him. And so many other occasions of exchange of goodwill.

His Sathabhishekam is a matter for deep rejoicing for art lovers all over the world. They would wish him continued good health as well, as

society has need of his critical acumen, his passion for clarity in understanding cultural currents and his power for good in society. Though he has earned the right to retire from day to day concern, this writer would wish remind him of this story; when George Washington, grown old, had withdrawn from public life and was living in retirement, Thomas Jefferson wrote to him (when the dissolution of the Union seemed imminent) thus:

"There is some times an eminence of Character in which society has such peculiar claims as to control the predictions of the individual for a particular walk of happiness and restraining him to that alone".

Our fallible society at the mercy of so many cultural cross currents has similarly need of Sri Sastry's guiding hand which can be both firm and salutary.

I offer my humble pranaams to a great man and wish the celebrations success. ★

148. ಬಿ.ವಿ.ಕೆ. ಶಾಸ್ತ್ರಿ ಮತ್ತು ಡೆಕ್ಕನ್ ಹೆರಾಲ್ಡ್

– ಟಿ.ಎಲ್. ನಾಗಭೂಷಣ್

ಶ್ರೀ ಬಿ.ವಿ.ಕೆ. ಶಾಸ್ತ್ರಿ ಸಂಗೀತ ಕ್ಷೇತ್ರದಲ್ಲಿ ದೇಶಾದ್ಯಂತ ಹೆಸರುವಾಸಿಯಾಗಿರುವ ಸರಳ ಸಜ್ಜನ ವ್ಯಕ್ತಿ. ಈ ಹಿರಿಯ ಚೇತನದ ಸ್ನೇಹ ಮತ್ತು ವಿಶ್ವಾಸ ಸಂಪಾದಿಸಿರುವ ಅನೇಕರಲ್ಲಿ ನಾನೂ ಒಬ್ಬ.

ನನ್ನ ಅವರ ಸ್ನೇಹ ಸುಮಾರು 40 ವರ್ಷಗಳದ್ದು. ನಾನು ಬೆಂಗಳೂರಿನ ಖ್ಯಾತ ಆಂಗ್ಲ ದಿನಪತ್ರಿಕೆ ಡೆಕ್ಕನ್ ಹೆರಾಲ್ಡ್ ಸೇರಿದ್ದು 1953ರಲ್ಲಿ ಶಾಸ್ತ್ರಿಗಳು 1954-55ರಿಂದ ಡೆಕ್ಕನ್ ಹೆರಾಲ್ಡ್‌ನಲ್ಲಿ ಕಲಾ ವಿಮರ್ಶೆ ಬರೆಯಲಾರಂಭಿಸಿದರು.

ಪತ್ರಿಕೆಯ ಮೊದಲ ಸಂಪಾದಕರಾಗಿದ್ದ ಖ್ಯಾತ ಪತ್ರಕರ್ತ ಪೋತಾನ್ ಜೋಸೆಫ್, ಶಾಸ್ತ್ರಿಯವರನ್ನು ಕಂಡು ಓದುಗರಿಗೆ ಕಲೆಯ ಎಲ್ಲಾ ಪ್ರಕಾರಗಳ ವಿಷಯವನ್ನು ತಿಳಿಸುವುದು ಪತ್ರಿಕೆಯ ಕರ್ತವ್ಯ. ಆದ್ದರಿಂದ, ಸಂಗೀತ, ನೃತ್ಯ ಮತ್ತು ಇತರ ಕಲಾರಂಗದ ಚಟುವಟಿಕೆಗಳ ಬಗ್ಗೆ ಬರೆಯಲು ಸಲಹೆಮಾಡಿದರು. ಆಗ ಹೆರಾಲ್ಡ್ ಆರು ಪುಟಗಳ ಪತ್ರಿಕೆ. ತರುವಾಯ ಎಂಟು ಪುಟಗಳಾಯಿತು. ಸಂಗೀತ ವಿಮರ್ಶೆಗೆ ಪತ್ರಿಕೆಯಲ್ಲಿ ಸ್ಥಳ ಬಹಳ ಕಮ್ಮಿ ಇತ್ತು. ಶಾಸ್ತ್ರಿಗಳು ನಿರ್ದಿಷ್ಟ ದಿನಗಳಂದು ಬೆಂಗಳೂರಿನಲ್ಲಿ ನಡೆಯುತ್ತಿದ್ದ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅವುಗಳ ವಿಮರ್ಶೆಗಳನ್ನು ಚಿಕ್ಕದಾಗಿ ಮತ್ತು ಚೊಕ್ಕವಾಗಿ ಬರೆದು ಕಳುಹಿಸುತ್ತಿದ್ದರು. ಇವರ ವಿಮರ್ಶೆಗಳು ಯುವ ಕಲಾವಿದರಿಗೆ ಪ್ರೋತ್ಸಾಹದ ಜೊತೆಗೆ ಮಾರ್ಗದರ್ಶನ ನೀಡುತ್ತಿತ್ತು.

ಕಾಲಕ್ರಮೇಣ ಕಲಾವಿಮರ್ಶೆಗೆ ಪತ್ರಿಕೆಯಲ್ಲಿ ಸ್ಥಳವನ್ನು ವಿಸ್ತರಿಸಲಾಯಿತು. ರಾಮನವಮಿಯಲ್ಲಿ ಬೆಂಗಳೂರಿನ ಹೆಸರಾಂತ ಸಂಘಸಂಸ್ಥೆಗಳು ಏರ್ಪಡಿಸುತ್ತಿರುವ ಸಂಗೀತ ಕಾರ್ಯಕ್ರಮಗಳ ವಿಮರ್ಶೆಯನ್ನು ಶಾಸ್ತ್ರಿಗಳು ವಿವರವಾಗಿ ಬರೆಯುತ್ತಿದ್ದರು. ಪತ್ರಿಕೆ ಬೆಳೆದಂತೆಲ್ಲಾ ಸ್ಥಳವೂ ವೃದ್ಧಿಯಾಯಿತು. ತರುವಾಯ ಬಂದ ಸಂಪಾದಕರುಗಳಾದ ಕೃಪಾನಿಧಿ, ವಿ.ಬಿ. ಮೆನನ್, ವಿ.ಕೆ. ನರಸಿಂಹನ್, ಯಶವಂತ ಕುಮಾರ್ ಮತ್ತು ಈಗಿನ ಪ್ರಧಾನ ಸಂಪಾದಕರಾಗಿರುವ ಕೆ.ಎನ್. ಹರಿಕುಮಾರ್ ಈ ಕಲಾಪ್ರಕಾರಕ್ಕೆ ಹೆಚ್ಚಿನ ಒತ್ತು ನೀಡಿದರು.

ಶ್ರೀ ಶಾಸ್ತ್ರಿಗಳು ದಕ್ಷಿಣಾದಿ ಮತ್ತು ಉತ್ತರಾದಿ ಸಂಗೀತದ ಹಳೆಯ ಮತ್ತು ಈಗಿನ ಎಲ್ಲಾ ದಿಗ್ಗಜಗಳೊಂದಿಗೆ ನಿಕಟಸ್ನೇಹ ಸಂಪಾದಿಸಿರುವ ವ್ಯಕ್ತಿ. ಜಿ.ಎನ್.ಬಿ., ಎಂ.ಎಸ್., ಎಂ.ಎಲ್.ವಿ., ಪಟ್ಟಮ್ಮಾಳ್, ಮಧುರೆ ರಾಮನಾಥನ್, ಮಹಾರಾಜಪುರಂ ಸಂತಾನಂ, ಅರ್ರೈಯಾಕುಡಿ, ಜಸರಾಜ್, ಅಲ್ಲಾರಖಿ, ಹರಿಪ್ರಸಾದ್ ಚೌರಾಸಿಯಾ, ರವಿಶಂಕರ್, ಬಿಸ್ಮಿಲ್ಲಾಖಾನ್, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು, ಭೀಮಸೇನ ಜೋಷಿ

ಮತ್ತು ಮನ್ಸೂರ್ ಇವರುಗಳ ಬಗ್ಗೆ ಪತ್ರಿಕೆಯಲ್ಲಿ ಬೇಕಾದಷ್ಟು ಲೇಖನಗಳನ್ನು ಶಾಸ್ತ್ರಿಗಳು ಪ್ರಕಟಿಸಿದ್ದಾರೆ.

ಕಲಾತಜ್ಞರಾದ ಶಾಸ್ತ್ರಿಗಳು ಚಿತ್ರಕಲೆ, ಸಂಗೀತ, ನೃತ್ಯ ಮತ್ತು ಶಿಲ್ಪಕಲೆಗಳ ಬಗ್ಗೆ ಆಳವಾದ ಅಭ್ಯಾಸ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳ ಬಗ್ಗೆ ಅಧಿಕಾರಯುತವಾಗಿ ಬರೆದಿರುವ ಮತ್ತು ಮಾತನಾಡಬಲ್ಲ ವ್ಯಕ್ತಿ ಎಂದರೆ– ಶಾಸ್ತ್ರಿಗಳು.

ಡೆಕ್ಕನ್ ಹೆರಾಲ್ಡ್‌ನಲ್ಲಿ ಅವರ ವಿಮರ್ಶೆಗಳು ಪ್ರತಿ ಮಂಗಳವಾರ ಪ್ರಕಟವಾಗುತ್ತಿವೆ. ಪ್ರತಿ ಸೋಮವಾರ ಕಾರ್ಯಾಲಯಕ್ಕೆ ತಾವೇ ಬಂದು ವಿಮರ್ಶೆಗಳನ್ನು ಕೊಡುತ್ತಿದ್ದರು. ಕೆಲವೊಮ್ಮೆ ಅಲ್ಲಿಯೇ ಟೈಪ್ ಮಾಡಿ ಕೊಡುವ ಪದ್ಧತಿಯೂ ಇತ್ತು.

ಆರಂಭದಲ್ಲಿ ಡೆಕ್ಕನ್ ಹೆರಾಲ್ಡ್ ವಿಮರ್ಶೆಗಾಗಿ ಶಾಸ್ತ್ರಿಗಳಿಗೆ ಕೊಡುತ್ತಿದ್ದ ಸಂಭಾವನೆ ಬಹಳ ಕಮ್ಮಿ. ಅವರು ಅದರ ಆಸೆಗಾಗಿ ಅಥವಾ ಯಾರ ಬಲವಂತಕ್ಕೂ ವಿಮರ್ಶೆ ಬರೆಯುತ್ತಿರಲಿಲ್ಲ.

ನಾನು 1982ರಲ್ಲಿ ಸುದ್ದಿ ಸಂಪಾದಕನಾದಾಗ ಶ್ರೀ ಹರಿಕುಮಾರ್ ಅವರ ಸಲಹೆ ಮೇಲೆ ಎಲ್ಲಾ ವಿಮರ್ಶೆಗಳಿಗಾಗಿ ಸ್ಥಳ ವಿಸ್ತರಿಸಲಾಯಿತು. ಸಂಗೀತ ಕಾರ್ಯಕ್ರಮಗಳ ಚಿತ್ರಗಳನ್ನೂ ವಿಮರ್ಶೆಗಳೊಂದಿಗೆ ಪ್ರಕಟಿಸುವುದು ಆರಂಭವಾಯಿತು – ಅದರೊಂದಿಗೆ ಸಂಭಾವನೆಯನ್ನೂ ಹೆಚ್ಚಿಸಲಾಯಿತು. ಈ ವಿಚಾರವನ್ನು ಅವರಿಗೆ ಹೇಳಿದಾಗ, ಶಾಸ್ತ್ರಿಗಳು "ಹೌದೆ?" ಅಂತ ಮಾತ್ರ ಉದ್ಗರಿಸಿದ್ದು ನನ್ನ ಮನದಲ್ಲಿ ಇನ್ನೂ ಹಸಿರಾಗಿದೆ. ಇದರಿಂದ ಅವರು ಕಲೆಯನ್ನು ಮಾತ್ರ ಪ್ರೀತಿಸುತ್ತಿದ್ದುದು ಗೋಚರವಾಗುತ್ತೆ.

ಇತ್ತೀಚೆಗೆ 'ಭಾರತರತ್ನ' ಪಡೆದಿರುವ ವಿಶ್ವವಿಖ್ಯಾತ ಸಿತಾರ್ ವಿದ್ವಾಂಸ ರವಿಶಂಕರ್ ಒಮ್ಮೆ ಪ್ಯಾರಿಸ್‌ನಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಶ್ರೀ ಶಾಸ್ತ್ರಿಗಳು ಭಾರತದ ಅತ್ಯಂತ ಮೇಧಾವಿ ಕಲಾ ವಿಮರ್ಶಕ ಎಂದು ವರ್ಣಿಸಿದ್ದನ್ನು ಪ್ರಕಟಿಸಿದ್ದೆವು. ಅದನ್ನು ಮಾರನೆ ದಿನ ಆಫೀಸಿಗೆ ಬಂದ ಶಾಸ್ತ್ರಿಗಳಿಗೆ ತೋರಿಸಿದೆ. ಶಾಸ್ತ್ರಿಗಳು ಅದನ್ನು ನೋಡಿ ಮುಗುಳ್ನಗೆ ಬೀರಿದರು.

ಸಂಗೀತ ಕಾರ್ಯಕ್ರಮಗಳಲ್ಲಿ ಭಾವಚಿತ್ರಕಾರರು ಬರದಿದ್ದರೆ ತಾವೇ ಚಿತ್ರ ತೆಗೆದು ವಿಮರ್ಶೆಯ ಜೊತೆಗೆ ತರುತ್ತಿದ್ದರು. ಶಾಸ್ತ್ರಿಗಳು ಯುವ ವಿಮರ್ಶಕರನ್ನೂ ತಯಾರು ಮಾಡುವ ಪ್ರಯತ್ನ ಮಾಡಿದರು. ಅವರ ಶಿಷ್ಯರಲ್ಲಿ ಈಗ ಪ್ರಸಿದ್ಧರಾಗಿರುವ ಮೈಸೂರು ವಿ. ಸುಬ್ರಹ್ಮಣ್ಯ ಅವರೂ ಒಬ್ಬರು.

ವಿಮರ್ಶಕನಿಗೆ ನಿವೃತ್ತಿ ವಯಸ್ಸಿಲ್ಲ ಎಂಬುದನ್ನು ಶಾಸ್ತ್ರಿಗಳು ಈಗಾಗಲೇ ನಿರೂಪಿಸಿದ್ದಾರೆ. ಕಲಾ ತಪಸ್ವಿಗಳ ಬಗ್ಗೆ 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಯಲ್ಲಿ ಇಲ್ಲಿಯವರೆಗೆ ಪ್ರಕಟವಾಗಿರುವ ಅವರ ಎಲ್ಲಾ ಲೇಖನಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದರೆ ಅದೊಂದು ಶ್ಲಾಘನೀಯ ಕಾರ್ಯವಾಗುತ್ತೆ. ★ ★ ★ ★ ★ ★ ★ ★ ★ ★ ★ ★ ★ ★ ★ ★ ★

149. Culture of patience

– Dr. Rajeev Taranath

In opting to become a critic one could also frequently be opting to project a learned, respected, perhaps admired but never loved personality. Aware of this fact the critic could develop an armour of staple skepticism about men and matters. To take time off from the some what mordant nature of his work and make time for leasurly conversation mostly about times and artistes, both long gone – is not given to many. It is only a BVK, who is able thus to stay time and splash the radiance of the past on to the uninteresting grey of the present which he normally dismisses with a pat of necessary condesension. That is his tested method of maintaining the critic's austerity while dealing with contemporaneous times.

And, he is the despair of the pushing opinion – seekers! Talking to them apparently gives him a very subtle and private amusement. For many years whenever I pressed him for an opinion, he spoke admiringly about my English! Again, I have heard him describe, always with great gusto, an excellent young dancer as a pioneer woman – motorcyclist! I can almost hear him chuckling to himself. Indeed, he is gently telling today's artiste the 'culture of patience.' While he is thus deliciously tangential in conversation, there is the other BVK, the writer. His reviews and articles have always been specific and upfront, and always supportive of the young artistes. One could differ from him. But one could never fault him for being imprecise or being vicious, it is tempting to be either.

I met him more than thirty years ago. In this long period of friendship, I have come to admire his achievements. To think about his work is to learn about the task of the *pioneer*. The pioneer's natural excitement of responding to the new experiences finds itself constantly weighed down by an inevitable sparseness of exposure to the art, as also by having to deal with various fields of art perfunctorily. BVK has enjoyed the advantages of being a pioneer. He has considerable say in matters of

government art policy both state and central. He has a powerful presence in art circles. He is also alone and knows the awkwardness of being the lone pioneer. Thro' all these pressures he has developed a sage and tempered wisdom in his critical stance. Over the years his critical output shows remarkable consistency fusing his enthusiasm for the new and the fresh with a discriminating care for the definite and the precise. My career as a performing musician has in a sense grown under his watchful eyes. In his own shy manner he has shaped my skills in structuring my concerts. I know he has influenced others also similarly. One cannot ask for more. I cannot say much more either, except to say, "thank you very much and God bless." ★

150. Knowledgeable commentator

– Shakuntala Narasimhan

Critics are like the two-faced mrudanga. They get beaten on both sides – if they point out mistakes in a recital and pan a performance, the artiste guns for him with a vengeance that could fester for a lifetime. If, on the other hand, it is praise that he has handed out in generous measure, spotlighting the good points and underplaying the deficiencies, there are hordes of vested interests ever ready to make snide comments that he was "probably bought over", with gifts or favours from the performer. It is a no-win situation where one is damned if one does, and damned if one doesn't.

And yet, critics have a vital role to play in monitoring and moulding performing standards, urging artistes to strive for greater heights, and shaping popular opinion towards healthy, wholesome and abiding artistic values. Thousands of lay listeners who enjoy music or dance but do not have the technical know how to make informed assessments, take their cues from a newspaper review. In that sense the role of a critic is just as important as that of the performer.

And yet again, curiously enough, writing good reviews is one aspect of journalism that is never taught in any courses of study. In this kind of scenario, if a critic not only survives through six decades but makes a mark as a respected, discerning and knowledgeable commentator on the performing arts, that is no mean achievement. Sri B.V.K. Sastry is perhaps the sole claimant to such a distinction, spanning a lifetime.

A critic needs to develop ears that are as sensitive to artistic nuances as his skin needs to be perforce thick, because no one likes to have faults or shortcomings pointed out, not even the most eminent among artists. I can remember one particular highly honoured and hailed performer, hugly popular with both lay audiences and the cognoscenti, whose concert

was reviewed as "below expectations and boring." This artiste was a mega-star, and yet to be told that his recital was not enjoyable hurt so much that he asked round to find out who the writer was, who dared to give him the thumbs down. If such artistes enjoy political patronage, they can "finish off" a critic, get him removed from his job as "not knowing his job."

To remain objective in the face of the daunting reputation that a musician or dancer might have garnered over the years, calls for great grit and self-assurance. Mr. Sastry's long stint is testimony to that. I remember how he once wrote in a review of a concert that I had participated in, that it was "the best jugalbandi" he had ever heard. If that was heady praise, the very next concert, with the same set of artistes and the same format, had him finding lacunae, rather than going by the preconception of what he had heard earlier. His ability to assess each presentation on merits regardless of who was performing and his or her reputation before the event, is what makes Mr. Sastry the doyen of critics that he has been accepted as.

In the role of a raconteur he has shared with me his reminiscences of meetings with Kamaladevi Chattopadhyay at the Sangeet Natak Akademi meetings, which I included in my biography of her released in April 99. Likewise I have had the pleasure of delving into his reminiscences of the durbar concerts of pre-Independence Mysore state, for another book on concert patterns. Spanning as he does, the most volatile and tumultous decades of the country's cultural evolution, he is a repository of anecdotes that are archival material and need to be preserved as such, in print or tapes.

On the occasion of his being felicitated on his sixty year-long association as an authoritative commentator on music and dance, I have great pleasure in adding my own personal felicitations and good wishes, and those on behalf of performers, writers and fellow-travellers in the cultural field. ★

151. Art and the Critic

– Vimala Rangachar

Looking back to the 50's – the time when I met BVK - fills me with nostalgia. It was a time when stalwarts in the field of music and dance held sway. Though almost everyone who could afford to do so learnt to sing and a chosen few learnt to dance, it was only a handful who ultimately made it to the stage and the concert halls.

ಭಾರತೀಯ ಲಲಿತ ಕಲೆಗಳಲ್ಲಿ ಸಂಗೀತದ ಪಾತ್ರ ಅತ್ಯಂತ ಮಹತ್ವಪೂರ್ಣವಾದುದು. ಮಾನವನ ಆತ್ಮೋನ್ನತಿಯ ಬೆಳವಣಿಗೆಗೆ ಸಹಕಾರಿಯಾಗಿದ್ದು, ಅವನನ್ನು ನಿರಂತರ ಉತ್ಸಾಹಿಯನ್ನಾಗಿ ಮಾಡುವಲ್ಲಿ ಸಫಲತೆಯನ್ನು ಕಂಡಿದೆ. ಕಲಾಭಿವೃದ್ಧಿಗಾಗಿ ಹಾತೊರೆಯುವ ಅಭಿಮಾನಿಗಳಿಗೆ, ರಸಿಕರಿಗೆ ತೃಪ್ತಿಯಾಗುವ ರೀತಿಯಲ್ಲಿ ಸಂಗಿತ ತನ್ನ ಪಾತ್ರ ವಹಿಸಿದೆ. ಈ ದಿಸೆಯಲ್ಲಿ ಕರ್ನಾಟಕ, ಅದರಲ್ಲೂ ಮೈಸೂರು ಅತಿ ಮಹತ್ವಪೂರ್ಣ ಕಾಣಿಕೆಯನ್ನು ನೀಡಿದೆ. 19-20ನೇ ಶತಮಾನದ ಕಾಲದಲ್ಲಿ ಮೈಸೂರು ಇಡೀ ರಾಷ್ಟ್ರವೇ ದೃಷ್ಟಿಸಿ ನೋಡಬಹುದಾದ ಸಾಂಸ್ಕೃತಿಕ ವೈಭವದಿಂದ ತುಂಬಿ ಮೆರೆಯಿತು. ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರ, ನಾಟಕ– ಎಲ್ಲ ಲಲಿತಕಲೆಗಳಿಗೆ ನೆಲವನೆಯೂ ಆಯಿತು.

ರಸಾಸ್ವಾದನ ಪಟುಗಳಿಗೆ ಯಾತ್ರಾಸ್ಥಳವಾಗಿದ್ದ ಮೈಸೂರಿನ ಈ ಮಹತ್ಕೈಂಕರ್ಯಕ್ಕೆ ಪ್ರಮುಖ ಕಾರಣ ಮೈಸೂರನ್ನಾಳಿದ ಒಡೆಯರು ಅಥವಾ ಅರಸು ಮನೆತನ. ಮಹಾರಾಜರ ಆಸ್ಥಾನವು ಸಂಸ್ಕೃತಿ ವರ್ಧನೆಗೆ ಅನೇಕ ಬಗೆಯಲ್ಲಿ ಪ್ರೋತ್ಸಾಹದಾಯಕವಾದ ಆಶ್ರಯಸ್ಥಾನವಾಗಿದ್ದಿತು. ಅವರ ಕಲಾಸಕ್ತಿ ಹಾಗೂ ಅಭಿರುಚಿ ತಾವೂ ಬೆಳೆದು ಇತರರೂ ಬೆಳೆಯುವಂತೆ ಮಾಡಿತು.

1399ರಿಂದ 1947ರವರೆಗೆ ಆಳಿದ 25 ಜನ ಅರಸರ ಆಳ್ವಿಕೆಯ ಸಮಯದಲ್ಲಿ ಒಂದೆಡೆ ರಾಜ್ಯದ ಆಡಳಿತದಲ್ಲಿ ದಕ್ಷತೆ, ಸುಧಾರಣೆ ಹಾಗೂ ರಾಜ್ಯವಿಸ್ತರಣೆ ಸಾಗಿತು. ಮತ್ತೊಂದೆಡೆ ಸಾಂಸ್ಕೃತಿಕ ನೆಲೆಗಟ್ಟಾಗಿ ಕಲೆ, ಸಾಹಿತ್ಯ, ಸಂಸ್ಕೃತಿ ಹಿಂದೆಂದೂ ಕಾಣದಂತಹ ವೈಭವೋಪೇತ ಮುನ್ನಡೆ ಸಾಧಿಸಿತು.

ಸಂಗೀತ, ಸಾಹಿತ್ಯ, ಕಲೆ ಮುಂತಾದ ಕ್ಷೇತ್ರಗಳಿಗೆ ಅರಸರು ನೀಡಿದ ಕೊಡುಗೆಯ ಬಗೆಗೆ ಎಷ್ಟು ಹೇಳಿದರೂ ಅಲ್ಪವೇ. ಆಳಿದ ಅರಸರಲ್ಲಿ ಕೆಲವರು ಕೇವಲ ಕಲಾಪೋಷಕರಾಗಿ ಮೆರೆದರೆ ಮತ್ತೆ ಕೆಲವರು ತಾವೇ ಸ್ವತಃ ಕಲಾವಿದರೂ, ಸಾಹಿತಿಗಳೂ ಆಗಿದ್ದುದು ಒಂದು ವೈಶಿಷ್ಟ್ಯ. ಈ ಮಹನೀಯರೆಲ್ಲರ ಸಂಸ್ಕಾರದ ಎಳೆ ಯದುವಂಶದ ಕೊನೆಯ ಅರಸರಾದ ಶ್ರೀ ಜಯಚಾಮರಾಜ ಒಡೆಯರಲ್ಲೂ ಹರಿದು ಕರ್ನಾಟಕದ ಶ್ರೇಷ್ಠ ವಾಗ್ಗೇಯಕಾರರೆನಿಸಲು ಕಾರಣವಾಯಿತು. ತತ್ಪರಿಣಾಮವಾಗಿ ಭಾರತ ದೇಶದ ಕಲೆ, ಸಂಸ್ಕೃತಿ ನಕ್ಷೆಯಲ್ಲಿ ನಮ್ಮ ಮೈಸೂರು ಜಾಜ್ವಲ್ಯಮಾನವಾಗಿ ಬೆಳಗುವಂತಾಯಿತು ಎನ್ನುವುದು ಅಭಿಮಾನದ ಸಂಗತಿ.

ಅರಸರ ಸಾಂಸ್ಕೃತಿಕ ಕೊಡುಗೆಗೆ ಕಾರಣರಾದವರಲ್ಲಿ ಚಾಮರಾಜ ಒಡೆಯರ್ (1617- 1637), ಶ್ರೀ ಚಿಕ್ಕದೇವರಾಜ ಒಡೆಯರ್ (1672- 1704), ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ (1799- 1868), ಶ್ರೀ ಚಾಮರಾಜ ಒಡೆಯರ್ (1881- 1894), ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ (1894- 1940), ಕಂಠೀರವ ನರಸರಾಜ ಒಡೆಯರ್, ಕೊನೆಯದಾಗಿ ಕೇವಲ 7 ವರ್ಷಗಳು ಮಾತ್ರ ಆಳಿದ ಶ್ರೀ ಜಯಚಾಮರಾಜ ಒಡೆಯರ್ – ಇವರುಗಳು ಪ್ರಮುಖರು.

ಒಬ್ಬ ವಾಗ್ಗೇಯಕಾರನಿಗೆ ಅನುಕೂಲವಾಗುವ ಹಲವು ಪೋಷಕ ಅಂಶಗಳನ್ನು ಜಯಚಾಮರಾಜ ಒಡೆಯರ್‌ರವರ ಈ ಕೆಳಕಂಡ ಸಾಧನೆಗಳಲ್ಲಿ ಕಾಣಬಹುದು. ಉತ್ತಮ ವಿದ್ಯಾರ್ಥಿಜೀವನ, ಸಂಗೀತ ಪ್ರೇಮ (ಪಾಶ್ಚಾತ್ಯ ಮತ್ತು ಭಾರತೀಯ), ಅಧ್ಯಯನಶೀಲತೆ, ಸಾಹಿತ್ಯಪ್ರೇಮ, ಎಲ್ಲಕ್ಕೂ ಮಿಗಿಲಾಗಿ ಮಾನವತಾವಾದ – ಒಡೆಯರ್‌ರವರು ಶ್ರೇಷ್ಠ ವಾಗ್ಗೇಯಕಾರರಾಗಲು ಬೇಕಾದ ಒಳ್ಳೆಯ ಪರಿಕರಗಳಾದವು. ಒಂದು ಕಲೆ ಬೆಳೆದುದನ್ನು, ಒಬ್ಬ ಕಲಾವಿದ ಬೆಳೆದುದನ್ನು, ಎಲ್ಲ ಕೋನಗಳಿಂದ ನೋಡಿದಾಗ ಆ ವ್ಯಕ್ತಿತ್ವದ ವಿಶಾಲತೆ, ಪರಿಪೂರ್ಣತೆ ಅರ್ಥವಾಗುವುದು. ವ್ಯಕ್ತಿ ಬೆಳೆಯದೆ ಕಲೆ, ಸಾಹಿತ್ಯಗಳು ಬೆಳೆಯುವುದಿಲ್ಲ. ವ್ಯಕ್ತಿತ್ವದ ವಿಕಸನವಾಗದೆ ಯಾವ ಕಲೆಯೂ ಉಳಿಯುವುದಿಲ್ಲ. ಇದಕ್ಕೆ ಪೂರಕವಾಗಿ ಸಹೃದಯತೆ, ಅಧ್ಯಯನಶೀಲತೆ, ಔದಾರ್ಯ, ಶ್ರದ್ಧೆ ಹಾಗೂ ಭಕ್ತಿ ಈ ಎಲ್ಲವೂ ಒಡೆಯರ್‌ರವರಲ್ಲಿ ಮಡುಗಟ್ಟಿ ನಿಂತಿತ್ತು.

1919ರ ಜುಲೈ 18ರಂದು ಜನಿಸಿದ ಒಡೆಯರು ಯುವರಾಜ ಕಂಠೀರವ ನರಸರಾಜ ಒಡೆಯರ್ ಹಾಗೂ ಕೆಂಪು ಚೆಲುವರಾಜಮ್ಮಣ್ಣಿ ಅವರ ಸುಪುತ್ರರು. ನಾಲ್ವಡಿಯವರಿಗೆ ಸಂತಾನವಿಲ್ಲದ ಕಾರಣ ಜಯಚಾಮರಾಜ ಒಡೆಯರೇ ಉತ್ತರಾಧಿಕಾರಿ. ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ, ಜೊತೆಜೊತೆಗೆ ಸಂಸ್ಕೃತ ಹಾಗೂ ಸಂಗೀತದಲ್ಲಿ ಶಿಕ್ಷಣ, ಅರಮನೆಯಲ್ಲಿ ಯಾವಾಗಲೂ ಇರುತ್ತಿದ್ದ ಸಾಂಸ್ಕೃತಿಕ ವಾತಾವರಣ, ಎಲ್ಲ ಹೆಸರಾಂತ ಕಲಾವಿದರ ಭಾಗವಹಿಸುವಿಕೆ, ನಿರಂತರ ಸಂಗೀತದ ಕೇಳ್ಮೆ, ಜೊತೆಜೊತೆಗೇ ಪಾಶ್ಚಾತ್ಯ ವಾದ್ಯವಾದ ಪಿಯಾನೋದಲ್ಲಿ ತರಬೇತಿ ಹಾಗೂ ಅದರಲ್ಲಿ ಪ್ರಭುತ್ವ, ಹಿರಿಯರಾದ ಸಂಗೀತ ಕಲಾನಿಧಿ ವಾಸುದೇವಾಚಾರ್ಯರು ಹಾಗೂ ವೀಣಾ ವೆಂಕಟಗಿರಿಯಪ್ಪನವರಂತಹ ಶ್ರೇಷ್ಠ ಗುರುಗಳ ಮಾರ್ಗದರ್ಶನ, ಈ ಎಲ್ಲ ಅಂಶಗಳೂ ಒಡೆಯರ್‌ರವರು ಉತ್ತಮ ವಾಗ್ಗೇಯಕಾರರೆನಿಸಲು ಪೋಷಕವಾದುವು. ಇಷ್ಟೇ ಅಲ್ಲದೆ ತತ್ತ್ವಶಾಸ್ತ್ರ, ವೇದ, ಉಪನಿಷತ್ತು, ಶಂಕರರ ಅದ್ವೈತ, ಮಧ್ವಾಚಾರ್ಯರ ದ್ವೈತ, ರಾಮಾನುಜರ ವಿಶಿಷ್ಟಾದ್ವೈತ ಎಲ್ಲವನ್ನೂ ಸಂಸ್ಕೃತದ ಶ್ರೇಷ್ಠ ದಿಗ್ಗಜಗಳ ನೇತೃತ್ವದಲ್ಲಿ ಅಧ್ಯಯನ ಮಾಡಿದುದೇ ಅಲ್ಲದೆ, ಶ್ರೀ ವಿದ್ಯಾ ಉಪಾಸನೆಯೂ ಸೇರಿ ಒಬ್ಬ ಅತ್ಯುತ್ತಮ ವಾಗ್ಗೇಯಕಾರರೆನಿಸಲು ಸಹಕಾರಿಯಾಯಿತು.

ವಾಗ್ಗೇಯಕಾರರಾಗಿ ಜಯಚಾಮರಾಜ ಒಡೆಯರು ಕರ್ನಾಟಕ ಸಂಗೀತಕ್ಕೆ ನೀಡಿರುವ ಕೊಡುಗೆ ಅತ್ಯಮೂಲ್ಯ, ಅನುಪಮ. ಒಡೆಯರ್‌ರವರು ರಚಿಸಿದುದು ಕೇವಲ ತೊಂಬತ್ನಾಲ್ಕು ಕೃತಿಗಳು, ಒಂದೊಂದು ಆಣಿಮುತ್ತಿನಂತಿವೆ. ಪ್ರತಿಕೃತಿಯ ವಿಶೇಷತೆಯ ಬಗ್ಗೆ ಹೇಳಬೇಕೆಂದರೆ ಅದೊಂದು ಮಹಾಪ್ರಬಂಧವೇ ಆದೀತು. ಕೇವಲ ಕಿರುನೋಟವನ್ನು ಮಾತ್ರ ವಿಶ್ಲೇಷಿಸುವ ಪ್ರಯತ್ನ ಇಲ್ಲಿ ಸಾಗಿದೆ.

ರಚಿಸಿರುವ 94 ಕೃತಿಗಳಲ್ಲಿ ಇಂದು ನನಗೆ ದೊರೆತಿರುವ ಕೇವಲ 77 ಕೃತಿಗಳ ದೃಷ್ಟಿಯಿಂದ ವಿಶ್ಲೇಷಿಸಿದಾಗ ಎರಡು ಪ್ರಮುಖ ಭೇದಗಳನ್ನು ಕಾಣಬಹುದು :

(1) ಒಡೆಯರ್‌ರವರ ಕೃತಿಗಳಲ್ಲಿನ ಸಾಹಿತ್ಯ

(2) ಒಡೆಯರ್‌ರವರ ಕೃತಿಗಳಲ್ಲಿನ ಸಂಗೀತ.

ಈ ಮುಖ್ಯ ಭೇದಗಳಡಿಯಲ್ಲಿ ಒಡೆಯರ್‌ರವರು ಬಳಸಿರುವ ಭಾಷೆ, ವಸ್ತು, ಛಂದಸ್ಸು, ಆಯ್ದುಕೊಂಡಿರುವ ರಚನಾಪ್ರಕಾರ, ರಾಗಗಳು, ತಾಳಗಳು, ಇವೆಲ್ಲಕ್ಕೂ ಮುಕುಟಪ್ರಾಯವಾದ ಒಡೆಯರ್‌ರವರ 'ಶ್ರೀವಿದ್ಯಾ' ಉಪಾಸನೆ – ಮುಖ್ಯವಾದ ಅಂಶಗಳು.

ಈ ವಿಶ್ಲೇಷಣೆಗೆ ಮುನ್ನ ಒಮ್ಮೆ ಹಿಂದಿರುಗಿ ನೋಡಿದಾಗ ಒಡೆಯರ್‌ರವರಿಗೆ ಪ್ರಪ್ರಥಮವಾಗಿ ಉಂಟಾದುದು ಪಾಶ್ಚಾತ್ಯಸಂಗೀತದಲ್ಲಿ ಒಲವು, ಹಾಗಾಗಿ ಪಿಯಾನೊ ವಾದ್ಯದಲ್ಲಿ ಪ್ರಭುತ್ವಗಳಿಕೆ. ಅನಂತರ ಉಂಟಾದ ತಿರುವಿನಿಂದಾಗಿ ಭಾರತೀಯ ಸಂಗೀತದೆಡೆಗೆ ಆಸಕ್ತಿ, ಒಲವು, ಅದರಲ್ಲಿಯೇ ಕಠಿಣ ಪರಿಶ್ರಮ, ಸಾಧನೆ, ಉತ್ತಮ ಗುರುಗಳ ಸಹಚರ್ಯ - ಇವೆಲ್ಲವೂ ಸೇರಿ ಒಬ್ಬ ಸರ್ವೋತ್ತಮ ಕಲಾವಿದ ಜೊತೆಗೆ ವಾಗ್ಗೇಯಕಾರರಾಗಿ ರೂಪುಗೊಂಡದ್ದು ವಿಶೇಷ.

ಒಡೆಯರ್‌ರವರು ತಮ್ಮ ರಚನೆಗೆ ಬಳಸಿರುವುದು ಸಂಪೂರ್ಣವಾಗಿ ಸಂಸ್ಕೃತ. ಜನ್ಮತಃ ಬಂದ ಸಂಗೀತಾಸಕ್ತಿಯೊಂದಿಗೆ ಸಂಸ್ಕೃತ ಭಾಷೆಯ ಬಗೆಗೂ ಅಪಾರ ಒಲವು ಬೆಳೆಸಿಕೊಂಡಿದ್ದರು. ತತ್ಪರಿಣಾಮವಾಗಿ ಮಹಾಕಾವ್ಯ, ವೇದೋಪನಿಷತ್ತುಗಳು, ಸಂಗೀತಶಾಸ್ತ್ರ ಗ್ರಂಥಗಳ ನಿರಂತರ ಅಧ್ಯಯನ- ಅದರಲ್ಲಿಯೇ ಪಾಂಡಿತ್ಯವನ್ನು ಪಡೆಯುವಂತೆ ಮಾಡಿದವು. ಇದಕ್ಕೆ ಒತ್ತಾಸೆಯಾಗಿ ಮಹಾಮೇಧಾವಿಗಳಾದ ಪ್ರೊ॥ ಎಸ್. ರಾಮಚಂದ್ರರಾವ್, ಶ್ರೀ ಚಂದ್ರಶೇಖರ ಪಾಠಣಕರ್, ಪ್ರೊ॥ ಯಮುನಾಚಾರ್ಯರು ಇವರೆಲ್ಲರ ನಿರಂತರ ಮಾರ್ಗದರ್ಶನ, ಮೇಲಾಗಿ 'ಶ್ರೀವಿದ್ಯಾ' ಉಪಾಸನೆ ಒಡೆಯರ್‌ರವರನ್ನು ಸಂಸ್ಕೃತದಲ್ಲಿಯೇ ಕೃತಿ ರಚಿಸಲು ಪ್ರೇರಣೆ ನೀಡಿದವು.

ವಾಗ್ಗೇಯಕಾರನಿಗೆ ರಾಗಾಭಿವ್ಯಕ್ತಿ ಮತ್ತು ಪ್ರಬಂಧ (ಸಂಗೀತದ ಪಾರಿಭಾಷಿಕ ಶಬ್ದದ ಅರ್ಥದಲ್ಲಿ) ರಚನಾಶಕ್ತಿ ಹಾಗೂ ಕುಶಲತೆ ಅತ್ಯಗತ್ಯ. ಸಮೃದ್ಧ ಶಬ್ದ ಸಂಪತ್ತು, ಶಬ್ದ ಸಂಯೋಜನೆಯಲ್ಲಿ ಅಪಾರ ಕಲಾತ್ಮಕತೆ ಪ್ರದರ್ಶಿಸುವ ಭಾವ, ಭಕ್ತಿ, ರೂಪ, ಸಾಮರಸ್ಯ ಸಾಧಿಸುವುದರಲ್ಲಿ ವಿಶೇಷ ಪ್ರತಿಭೆ ಅತ್ಯಗತ್ಯ. ಮಿಗಿಲಾಗಿ ಪದಪದದಲ್ಲೂ ಗೇಯತೆಯ ಕಲಶವನ್ನೇತುಂಬಿ ಅದ್ಭುತ ಸೃಜನಶೀಲತೆ ಮೈದಳೆದಿರುವಾತನೇ ವಾಗ್ಗೇಯಕಾರ. ಇದರೊಂದಿಗೆ

ಭಕ್ತಿಯೂ ಸೇರಿ ಒಡೆಯರ್ ರವರ ಕೃತಿಗಳ ವಸ್ತು ಸಹಜ, ಸುಂದರವಾಗಿ ಮೂಡಿ ಬಂದಿದೆ. ಸಹಜವಾಗಿ ದೇವ, ದೇವಿಯರನ್ನು ಕುರಿತಾದ ವರ್ಣನೆ, ಪ್ರಾರ್ಥನೆಯ ಜೊತೆಗೆ ಅಧ್ಯಾತ್ಮದ ಸೊಗಡೂ ಸೇರಿ ಕೃತಿಗಳು ಸೊಗಸಾಗಿವೆ. ಗಣಪತಿ, ಶಿವ, ವಿಷ್ಣು, ದೇವಿ-ದೇವಾದಿದೇವತೆಗಳ ವರ್ಣನೆಯೇ ಮೂಲವಸ್ತುವಾದರೂ ಯೋಗಶಾಸ್ತ್ರ, ತಂತ್ರಶಾಸ್ತ್ರ ಹಾಗೂ ಮಂತ್ರಶಾಸ್ತ್ರದಲ್ಲೂ ಪ್ರವೀಣರಾದ ಒಡೆಯರು ಶಂಕರರ ಅದ್ವೈತತತ್ತ್ವದರ್ಶನ ಹಾಗೂ ಉಪನಿಷತ್ತುಗಳ ಸಾರವನ್ನು ಅಳವಡಿಸಿಕೊಂಡಿದ್ದಾರೆ. ದೇವೀ ಭಾಗವತ, ಸೌಂದರ್ಯಲಹರಿ, ಶಿವಾನಂದಲಹರಿ, ಲಲಿತಾಸಹಸ್ರನಾಮ, ತ್ರಿಶತಿ, ದುರ್ಗಾಸಪ್ತಶತಿ ಇವುಗಳೆಲ್ಲದರ ಗಹನವಾದ ವಿಷಯವೂ ಕೃತಿಗೆ ಸೇರಿ ಭದ್ರವಾದ ಚೌಕಟ್ಟನ್ನು ಒದಗಿಸಿವೆ. ಒಂದೆರಡು ಉದಾಹರಣೆಗಳನ್ನು ನೀಡುವುದಾದರೆ,

(1) 'ಅಜಾಮೇಕಾಮಿತಿ' (ಸುಜ್ಞಾನದಾಯಿನೀಂ - ಶುದ್ಧಸಾಳವಿ - ಆದಿತಾಳ)

(2) 'ನಾಹಂ ಜೀವೋಽಹಂ ಸೋಽಹಂ ಭಾವ' (ಗಂ ಗಣಪತೇ - ನಾಗಸ್ವರಾವಳಿ - ಖಂಡ ತ್ರಿಪುಟತಾಳ)

(3) 'ಶ್ರೀ ಕೇಶವಾದಿ ಚತ್ವಾರೀಕೃತನ್ಯಾಸ ಮಾತೃಕೇಶ್ವರೀಂ' (ಶ್ರೀ ಲಲಿತಾಂ - ನಾಗಧ್ವನಿ - ಖಂಡ ತ್ರಿಪುಟತಾಳ)

(4) 'ಕಂ ಬ್ರಹ್ಮಾಖ್ಯಾಕಾಶತತ್ತ್ವಶಾಲಿನಿ' (ಕ್ಷೀರಸಾಗರ - ಮಾಯಾಮಾಳವಗೌಳ - ಚತುರಶ್ರಧ್ರುವತಾಳ)

ಹೀಗೆ ಉಪನಿಷತ್ತು, ತತ್ತ್ವ, ಶಾಸ್ತ್ರ ಹಾಗೂ 'ಶ್ರೀವಿದ್ಯಾ' ಉಪಾಸನೆಗೆ ಸಂಬಂಧಿಸಿದ ಅಂಶಗಳನ್ನು ಕೃತಿಯ ವಸ್ತುಗಳಲ್ಲಿ ಅಡಕಗೊಳಿಸಿದ್ದಾರೆ. ಇಷ್ಟೇ ಅಲ್ಲದೆ ಪುರಾಣ ಪ್ರಸಂಗಗಳು, ಕ್ಷೇತ್ರ ಮಹಿಮೆ ಹಾಗೂ ಸಂಗೀತ, ಸಾಹಿತ್ಯಗಳಿಗೆ ಸಂಬಂಧಿಸಿದ ಹಲವು ಅಂಶಗಳನ್ನು ಕೃತಿಯ ಸಾಹಿತ್ಯದಲ್ಲಿ ಅಳವಡಿಸಿದ್ದಾರೆ. ಹೀಗೆ ಪ್ರತಿ ಕೃತಿಯೂ ಯಾವುದಾದರೊಂದು ವಿಶೇಷವನ್ನು ಒಳಗೊಂಡೇ ಇದೆ. ಇದು ವಸ್ತು ವಿಶೇಷ.

ಸಂಗೀತ ರಚನೆಯಲ್ಲಿ ಪದಮಾಧ್ಯಮವು ಸಂಗೀತಕ್ಕೆ ತಲೆಬಾಗಿ ನಡೆಯಬೇಕು. ಮಾತು ಗೇಯಕ್ಕೆ ವಾಹಕ. ಅದೇ ಗೇಯಕವಿಯ ಉಚಿತಜ್ಞತೆಯ ಕುರುಹು. ಸಂಗೀತದ ನಡೆ ಮುಂದಾಗಿ ಪ್ರಾಸ (ಆದಿ, ದ್ವಿತೀಯಾಕ್ಷರ, ಅಂತ್ಯ, ಅನುಪ್ರಾಸ) ಯಮಕ, ಚಿತ್ರಕವಿತ್ವ ಎಲ್ಲವೂ ಇದ್ದರೂ ಎಲ್ಲವೂ ಸಂಗೀತಕ್ಕೆ ವಿಧೇಯವಾಗಿರಬೇಕು. ಒಡೆಯರ ಕೃತಿಗಳೂ ಈ ಉಕ್ತಿಗೆ ಹೊರತಾಗಿಲ್ಲ. 'ಕ್ವಚಿದಂಗಃ ಕ್ವಚಿಚ್ಛಂದೋ ಗೀತೇ ಯಸ್ಮಿನ್ ವಿರಾಜತೇ'. ಒಡೆಯರು ಕೃತಿಗಳಲ್ಲಿ ಈ ಎಲ್ಲ ಮೇಲಿನ ಅಂಶಗಳನ್ನೂ ಅಚ್ಚುಕಟ್ಟಾಗಿ ಹೊಂದಿಸಿದ್ದಾರೆ. ಸಂಸ್ಕೃತದ ಪ್ರಾಮಾಣಿಕ ವಿದ್ಯಾರ್ಥಿಯಾಗಿ, ಸಂಗೀತಕ್ಕೆ ಬೇಕಾಗುವಷ್ಟು ಛಂದಸ್ಸನ್ನು ಒದಗಿಸಿದ್ದಾರೆ. ಕೃತಿಗಳಲ್ಲಿ ಮುದ್ರೆಗಳನ್ನು ಬಳಸುವಲ್ಲಿ ವಾಗ್ಗೇಯಕಾರ ಮುದ್ರೆಯಾಗಿ 'ಶ್ರೀವಿದ್ಯಾ' ಎಂದೂ, ಪರ್ಯಾಯ ಮುದ್ರೆಯಾಗಿ 'ನಾಗಲಿಂಗವರಪುತ್ರಂ', 'ಚಿತ್ತಭಾನಂದ ರಾಜಯೋಗೀಂದ್ರ' ಎಂದೂ ಬಳಸಿದ್ದಾರೆ. ರಾಗಮುದ್ರೆಗಳು ಬಹಳ ಕುಶಲತೆಯಿಂದ ಮೂಡಿಬಂದಿವೆ.

ಕಾಮಧೇನುಕಾತಿಶಯ (ಚಿಂತಯಾಮಿ - ಧೇನುಕಾ - ತ್ರಿಶ್ರ ಝಂಪೆತಾಳ)
ಸರಸಾಂಗ್ಯರ್ಧನಾರೀಶ್ವರಂ (ಸದಾಶಿವ - ಸರಸಾಂಗಿ - ಆದಿತಾಳ)
ಬ್ರಹ್ಮಾಂಡವಲಯೇ (ಬ್ರಹ್ಮಾಂಡವಲಯೇ - ಮಾಂಡ್ - ಆದಿತಾಳ)

ಪದಗಳೊಡನೆ ಸರಸವಾಡುವ ಕಲೆ ಒಡೆಯರಿಗೆ ಚೆನ್ನಾಗಿ ಕರಗತವಾಗಿದೆ. ಕಲಾವತೀಂ, ಕರಾಳೀಂ, ಕಾಳರೂಪಿಣೀಂ, ಕಾತ್ಯಾಯನೀಂ, ಕಾಳಿಕಾರೂಪಿಣೀಂ (ಕಾಮಾಕ್ಷೀಂ - ವಸಂತ- ರೂಪಕತಾಳ) ಸುಜನ ಪಾಲಿನೀಂ, ಸುಮತೀಂ, ಸುಂದರೀಂ, ಸುರಭಿಕಾಮಧೇನು ಸ್ವರೂಪಿಣೀಂ, ಸುಮಿತ್ರಾಂ, ಸಾವಿತ್ರೀಂ (ಸುಜ್ಞಾನದಾಯಿನೀಂ - ಶುದ್ಧ ಸಾಳವಿ - ಆದಿತಾಳ). ಹೀಗೆ ಒಂದಲ್ಲಾ ಒಂದು ನಿದರ್ಶನಗಳು ದೊರೆಯುತ್ತಲೇ ಹೋಗುತ್ತವೆ.

ಇನ್ನು ಸಂಗೀತದ ದೃಷ್ಟಿಯಿಂದ ಒಡೆಯರ ಕೃತಿಗಳನ್ನು ಕಂಡಾಗ ಆಯ್ದಿರುವ ರಚನಾಪ್ರಕಾರ, ರಾಗ, ತಾಳ ಎಂಬ ಮೂರು ಅಂಶಗಳ ಆಧಾರದ ಮೇಲೆ ವಿಶ್ಲೇಷಿಸ ಬಹುದಾಗಿದೆ. ಒಡೆಯರ್‌ರವರು ವಾಗ್ಗೇಯ ಪ್ರಪಂಚಕ್ಕೆ ನೀಡಿರುವ ಅತ್ಯಮೂಲ್ಯ ಕಾಣಿಕೆ ಎಂದರೆ 94 ಕೃತಿಗಳು. ಇತರ ಯಾವ ರಚನಾಪ್ರಕಾರಗಳಿಗೂ ಕೈ ಹಾಕದೆ ಕೇವಲ ಕೃತಿರಚನೆ ಮಾತ್ರ ಕೈಗೆತ್ತಿಕೊಂಡಿದ್ದಾರೆ. ಇವರ ಹಿರಿಯರ ಆಸ್ಥಾನದಲ್ಲಿದ್ದ ವೀಣಾ ಶೇಷಣ್ಣ, ವೀಣಾ ಸುಬ್ಬಣ್ಣ, ಬಿಡಾರಂ ಕೃಷ್ಣಪ್ಪ, ಮೈಸೂರು ಸದಾಶಿವರಾಯರು, ಮೈಸೂರು ವಾಸುದೇವಾಚಾರ್ಯರು, ಮುತ್ತಯ್ಯ ಭಾಗವತರು - ಈ ಎಲ್ಲ ಮಹನೀಯರೂ ಕೃತಿಗಳೇ ಅಲ್ಲದೆ ಇತರ ಪ್ರಕಾರಗಳಾದ ವರ್ಣ, ದರು, ಜಾವಳಿ, ತಿಲ್ಲಾನ ಎಲ್ಲವನ್ನೂ ರಚಿಸಿದ್ದರೂ ಒಡೆಯರು ಮಾತ್ರ ಕೃತಿ ಪ್ರಕಾರವನ್ನೇ ಆಯ್ದುಕೊಂಡರು. ಮಾತು, ಧಾತುಗಳಲ್ಲಿ ವಿಶಿಷ್ಟವಾಗಿರುವ ರಚನಾಪ್ರಕಾರವಾದ ಕೃತಿ 'ಬಲು ಇಂಪನಾಳ್ದ ಗೇಯ'. ಭಗವದ್‌ಮಹಿಮೆಯನ್ನು ಹಾಡಿ, ಹೊಗಳಿ, ಕೊಂಡಾಡಿ, ಕೃತಕೃತ್ಯರಾಗುವುದೇ ಒಡೆಯರ ಧ್ಯೇಯವಾಗಿದ್ದಿತು. ತಮ್ಮದೇ ಆದ ವಿಶೇಷ ಛಾಪನ್ನಿಟ್ಟು ವಾಗ್ಗೇಯ ಪ್ರಪಂಚವನ್ನೇ ಶ್ರೀಮಂತಗೊಳಿಸಿದ್ದಾರೆ.

ಒಡೆಯರು ಕೃತಿಗಳಲ್ಲಿ ಬಳಸಿರುವ ರಾಗಗಳ ಬಗೆಗೆ ನೋಟ ಹರಿಸಿದಾಗ ಒಂದೊಂದು ರಾಗವನ್ನು ಕೇವಲ ಒಮ್ಮೆ ಮಾತ್ರ ಪ್ರಯೋಗಿಸಿರುವುದನ್ನು ಕಾಣಬಹುದು. ದೊರೆತಿರುವ ಎಪ್ಪತ್ತೇಳು ಕೃತಿಗಳ ರಾಗಗಳ ಪಟ್ಟಿಯನ್ನು ಗಮನಿಸಿದಾಗ ಅವರ ಆಯ್ಕೆ ವಿಶೇಷ ಎನಿಸುತ್ತದೆ. ಜನಕರಾಗಗಳು (ಶುದ್ಧ ಮಧ್ಯಮ, ಪ್ರತಿ ಮಧ್ಯಮ), ಜನ್ಯರಾಗ (ಉಪಾಂಗ ಮತ್ತು ಭಾಷಾಂಗ) ಗಳಲ್ಲೇ ಹೆಚ್ಚು ಬಳಕೆಯಲ್ಲಿರುವ ತೋಡಿ, ಕಲ್ಯಾಣಿ, ಶಂಕರಾಭರಣ, ಕಾಮವರ್ಧಿನಿಗಳಿದ್ದರೆ, ಹೆಚ್ಚು ಬಳಕೆಯಿರದ ಸುವರ್ಣಾಂಗಿ, ವಿಶ್ವಂಭರಿ, ಷಡ್ವಿಧಮಾರ್ಗಿಣಿಗಳನ್ನು ಆಯ್ಕೆ ಮಾಡಿದ್ದಾರೆ. ಅಂತೆಯೇ ಜನ್ಯರಾಗಗಳಲ್ಲಿಯೂ ಸುಪರಿಚಿತವಾದ ಹಿಂದೋಳ, ನಾಟ, ಮಧ್ಯಮಾವತಿ, ವಸಂತಗಳು ಬಳಕೆಯಾಗಿದ್ದರೆ, ಪರಿಚಿತವಲ್ಲದ ಶುದ್ಧಸಾಳವಿ, ದೂರ್ವಾಂಕಿ, ಭಾನುಚಂದ್ರಿಕೆ, ನೀಲವೇಣಿ, ಶಿವಕಾಂಬೋಧಿ ಮುಂತಾದ ರಾಗಗಳು ಬಳಕೆಯಾಗಿವೆ. ವಿಶೇಷವೆಂದರೆ ಕೆಲವು ರಾಗಗಳು ಒಡೆಯರಿಂದಲೇ ಸೃಷ್ಟಿಸಲ್ಪಟ್ಟಿವೆ. ಉದಾಹರಣೆಗೆ, ಜಯಸಂವರ್ಧನ, ಭೂಪಾಲಪಂಚಮ ಮುಂತಾದವು.

ಒಡೆಯರಿಗೆ ಭಾಷಾಂಗ ರಾಗಗಳಿಗಿಂತಲೂ ಉಪಾಂಗ ರಾಗಗಳಲ್ಲೇ ಹೆಚ್ಚು ಪ್ರೀತಿ. ರಾಗಗಳ ಬಳಕೆಯಲ್ಲಿಯೂ ಯಾವ ರಾಗವೂ ಚರ್ವಿತಚರ್ವಣವಾಗದೆ, ವೈವಿಧ್ಯತೆ, ವಿಶೇಷಗಳಿಂದ ಕೂಡಿ ಪ್ರಯೋಗವಾಗಿದೆ. ಅನೇಕ ಅಪರೂಪ ರಾಗಗಳು ಬಳಕೆಗೆ ಬರುವಂತೆ ಮಾಡಿದ ಕೀರ್ತಿ ಒಡೆಯರಿಗೆ ಸಲ್ಲುತ್ತದೆ.

ಇನ್ನು ಒಡೆಯರು ಬಳಸಿರುವ ತಾಳಗಳ ಬಗ್ಗೆ ದೃಷ್ಟಿ ಹಾಯಿಸಿದರೆ ಅಲ್ಲಿಯೂ ಕೆಲ ವಿಶೇಷಗಳು ಕಾಣಬರುತ್ತವೆ. ಒಬ್ಬ ವಾಗ್ಗೇಯಕಾರನು ರಚನೆಗಳನ್ನು ರಚಿಸುವಾಗ ಪ್ರತಿಯೊಂದು ಕೃತಿಯೂ ಒಂದೊಂದು ದೃಷ್ಟಿಯಿಂದಲೂ ವಿಶೇಷವಾಗಿರಬೇಕೆಂದು ನಿರೀಕ್ಷಿಸುವುದು ಸಹಜ. ಅಂತೆಯೇ ಒಡೆಯರು ರಾಗ, ಭಾಷೆ, ವಸ್ತು ಎಲ್ಲದರಲ್ಲೂ ವೈವಿಧ್ಯತೆ, ವೈಶಿಷ್ಟ್ಯತೆಯನ್ನು ತಂದುಕೊಟ್ಟಿದ್ದಾರೆ. ತಾಳದ ಕ್ಷೇತ್ರದಲ್ಲಿಯೂ ತಮ್ಮ ಮೇಧಾವಿತನವನ್ನು ತೋರಿದ್ದಾರೆ. ನಮಗೆ ದೊರೆತಿರುವ 77 ಕೃತಿಗಳಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಛಾಪುತಾಳಗಳೊಂದೂ ಇಲ್ಲ. ಆದಿ, ರೂಪಕ ತಾಳಗಳ ಜೊತೆಗೆ ಮಿಶ್ರಝಂಪೆ, ಅಟ್ಟ, ಚತುರಶ್ರಧ್ರುವ, ಸಂಕೀರ್ಣ ತ್ರಿಪುಟ – ಹೀಗೆ ತಾಳದ ಹರಹು ವಿಸ್ತೃತವಾಗಿದೆ. ಅತಿ ಚಿಕ್ಕ ತಾಳವಾದ ತ್ರಿಶ್ರಝಂಪೆಯಿಂದ ಹಿಡಿದು ಅತಿ ದೊಡ್ಡ ತಾಳವಾದ ಚತುರಶ್ರ ಧ್ರುವತಾಳದವರೆಗೂ ಬಳಕೆಯಾಗಿವೆ. ಸುಳಾದಿ ಸಪ್ತತಾಳಗಳ ಪ್ರಭೇದಗಳಾದ ಮೂವತ್ತೈದು ತಾಳಗಳಲ್ಲಿಯೂ ಆಯ್ಕೆ ಮಾಡಿಕೊಂಡಿದ್ದಾರೆ.

ಒಬ್ಬ ಕ್ರಿಯಾಶೀಲ ವಾಗ್ಗೇಯಕಾರನಿಗೆ ಇರಬೇಕಾದ ಗುಣ ನಿಂತ ನೀರಾಗದೆ ಹೊಸ ಹೊಸ ದಿಶೆಗಳೆಡೆಗೆ ಸಾಗಿ, ತನ್ನ ಪಾತ್ರ ಹಿರಿದಾಗಿಸಿಕೊಳ್ಳುವುದು. ಅಂತಹ ಪ್ರಯತ್ನದಲ್ಲಿ ಒಡೆಯರು ಸಫಲರಾಗಿದ್ದಾರೆ. ಕೇವಲ ತಾಳಗಳು ಮಾತ್ರವಲ್ಲದೆ ತಾಳದಶಪ್ರಾಣಗಳಾದ ಕಾಲ, ಗ್ರಹ, ಗತಿಗಳ ಬಗ್ಗೆಯೂ ಅಪಾರ ಗಮನ ಹರಿಸಿದ್ದಾರೆ. ಅತೀತ, ಅನಾಗತ ಗ್ರಹಗಳ ಬಳಕೆ ಬಹಳ ಸೂಕ್ಷ್ಮವಾಗಿ ನಡೆದಿದೆ. ಅದರ ವಿವರವಾದ ವಿಶ್ಲೇಷಣೆ ಪುಟದ ಮಿತಿಯ ಕಾರಣ ಇಲ್ಲಿ ಕಷ್ಟ. ಅಂತೆಯೇ ನಡೆಯಿಂದ ನಡೆಗೆ ಜಾರಿರುವ (ಚತುರಶ್ರದಿಂದ ತ್ರಿಶ್ರ) ಅನೇಕ ನಿದರ್ಶನಗಳು ಕಾಣಬರುತ್ತವೆ.

ಹೀಗೆ ಒಡೆಯರ್‌ರವರ ಕೃತಿಗಳು ಅಪರೂಪ ರಾಗ, ವೈವಿಧ್ಯಮಯ ತಾಳ ಹಾಗೂ ವಿಶಿಷ್ಟವೆನಿಸಿದ ಸಂಸ್ಕೃತ ಭಾಷೆ ಈ ಮೂರರ ಸಂಗಮವನ್ನು ನಿರ್ಮಿಸಿ ನಮ್ಮನ್ನು ಚಿಂತನಶೀಲರನ್ನಾಗಿ ಮಾಡಿದೆ.

ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಕೃತಿಗಳ ಸೂಕ್ಷ್ಮವಾದ ವಿಶ್ಲೇಷಣೆಗೆ ತೊಡಗಿದರೆ ಒಂದು ಮಹಾಪ್ರಬಂಧದ ವಸ್ತುವೇ ಆದೀತು. ಕೇವಲ ಸ್ಥೂಲವಾಗಿ ಮಾತ್ರ ಕಂಡಾಗ ಈ ಕಿರುನೋಟದ ಚಿತ್ರಣ ಕಂಡೀತು. ಶ್ರೇಷ್ಠ ವಾಗ್ಗೇಯಕಾರರ ಸಾಲಿನಲ್ಲಿ ನಿಲ್ಲುವ ಒಡೆಯರ ಕೃತಿಗಳು ವಾಗ್ಗೇಯ ಪ್ರಪಂಚದ ಅತ್ಯಮೂಲ್ಯ ಕೊಡುಗೆಯಂತೂ ನಿಜ. ★ ★ ★

160. The role of percussion instruments : present and future

– Bangalore K. Venkataram

When one examines the role of percussion instruments, encompassing the whole gamut of music, a broad distinction of these can be drawn as practised in the Western Music and as is in vogue in Indian Music. The Western Music consists of various types of Drums, Gongs, Bells and the like. In the Indian Music Mridangam, Pakhwaj and Tabla stand out exclusively different from others like Khanjari (Khajiral), Ghata (Ghatam, Gummat, Noot), Morsing (Morching, Moharsangu), Dholak, Doky, Dolu (Thavil) etc., other folk instruments excluded.

While the Western drums exhibit variety of Drum beats with several types of basic sound patterns, individually and in joint actions, Indian Drums stand out quite different in producing melodic sound patterns. The three exclusive Indian instruments, Mridanga, Pakhwaj and Tabla emanate melodic sound pattern because of their unique constructions of the drumheads with more than one layer of skins/leathers. These percussions are unique among all drums in the world, being the only ones that possess harmonic overtones (similar to the stretched strings and vibrating wind) presenting musical notes. Notes from a uniform stretched membrane like that of a Kanjari (Kanjira) cannot produce such musical notes.

The sound patterns produced by the combination of the two different drumheads evolve a highly skilled pattern of melodic percussion presentation. The percussion trio of great masters Palghat Mani Iyer, Palani Subramanya Pillai and Murugabhoopathy elevated the art of percussion through Mridangam to a new high, whether it be as an accompaniment or in Laya vinyasa (Thani). Similarly Ahmed Jan Thirakwa, elevated the Tabla art to a new high – Alla Rakha, Shanta Prasad, Kishan Maharaj and youngster Zakir Hussain have followed suit. The contemporaries like T.K. Murthy, Palghat Raghu, Umayalapuram Sivaraman, Karaikudi Mani have built up the artistry with a band of enthusiastic energetic artistic presentations along with Guruvayoor Dorai, Dandamudi Rammohan Rao, Kamalakar Rao, A.V. Anand and other youngsters continuing the trend. Kanjira has revealed

artistry of the likess of H.P.Ramachar and youngsters like Harishankar. Speed and clarity of Ghatam Vinayakaram has made a mark in the international scenario. Many youngsters have taken up these arts and fostered it.

The role of percussions in Indian Music -- Karnatak system (Mridangam, Pakhwaj and Tabla) had been mostly of supporting and embellishing the melodic music of the vocal or instruments. In the Hindustani system, Pakhwaj plays a role similar to Mridangam of Karnatak system in supporting the Dhrupad music. Role of Tabla has been mostly to indicate the Thaala; the vocalist or the instrumentalist depends on the Tabla as a Taalaadhaar. Specific 'Bols' are structured with pre-set 'Thaalis and Khaalis' with which the main artist would be familiar with. 'Bols' of different 'Gharanas' adopt specific varieties of these sound patterns. There are also exclusive solo performances for the Tabla and Pakhwaj when the artist improvises with the assistance of a 'Lehra'; Lehra has the role of keeping the Thala with specific sound patterns and play-contents.

In the Classical Karnatak system, the main percussion is the Mridangam, which is evidently a must in any classical musical event. There are rare cases of some artistes indulging in a recital exclusively of Raga-malika renditions without the support of a Laya instrument. There were Veena recitals broadcast from the Madras and Trichy stations of All India Radio where 'Ghata' was the only rhythmic (Laya) support. But in the contemporary Karnatak classical music scenario, Mridangam is the indispensable percussion. Supportive additional percussions like Ghata or Khanjari or Morsing (either one of them or two or more); are included to provide sustained additional percussion support to provide variety of Tone, Timbre and Volume. Exclusive Laya Vinyasa programms (or Solos or Thani recitals) are of recent origin, planned and presented by well known artistes, which draw a different 'clientele'. While the 'Laya Vinyasa' in the regular concert format (called the Thani) is restricted to the requirements of the particular context of the concert. Exclusive Laya Vinyasa programmes are scheduled in every Hindustani Music festival and even AIR provides a for these Hindustani classical percussions Karnatak Music conferences and festivals do not provide such exclusive slots for percussions. Of late, some such events are schedule off and on: there have been exclusive Laya Vinyas schedules by a few top-notchers in the field. However, after protracted discussion, requests and correspondence, the AIR has also been scheduling such Laya Vinyasa events in the Radio Sangeet Sammelans, though thre have been occasional cases where such Laya vinyasa events have not been included

There has been an awakening and awareness among the percussion artistes about the role of percussion as an independent entity of its own. That there is an individual personality exclusively for percussions, apart from its role as an accompaniment or supporting instrument, is of quite recent origin. The International Mini Drum Festival organised by I.C.C.R. in co-ordination with the Percussive Arts Centre revealed a new dimension in the appreciation of percussive arts. Exclusive compositions for percussions have been thought of and attempts in this direction have been going on. Jnana Prakash Ghosh, Dr. Vijaya Raghava Rao have made significant contributions in this direction. Audio cassettes of percussions like "Swara Laya Mela – Thaalavaadya Kacheri (T.H. Vinayakaram)", "Thaalavaadya (T.K. Murthy)", 'Garland of Rhythms (Sivaraman)", "Laya Sudha (T.V.G)", "Laya Chitra (Karaikudi Mani)", "Thaala Tharangini (T.A.S. Mani)" "Laya Lahari, (Ayyanar College of Music)", "Laya Vrushti (Percussive Arts Centre)" have been in the market. However cassettes with Thaalavaadyas only are not many. The Percussive Arts Centre brought out an audio cassette Laya Vrushti, exclusively with percussions only. Even the equivalent of Lehra (the basic thala drone), the Thala was provided by a rhythm composer. In the conference of the Bangalore Gayana Samaja presided by Bangalore K. Venkataram, a programme was presented exclusively by percussions only.

Recent innovations include attempts to explore possibilities of electronic instruments and the use of computerised data base. Inspite of the confirmed fact that the human element guiding these presentations is of vital importance, attempts to present varied patterns of percussions of several variety of Colours, Tone, Timbre and Volume representing percussions has been recognised. Even patterns of Dolu, Sammela, Chande, Chowdike etc. can be produced along with the patterns of Mridangam, Ghatam, Kanjira and Morsing etc.

Percussions of future may incorporate most of these electronic gadgets, computerised floppies to provide a wider variety of Laya Vinyasa. While Western drums in use are being matched with Indian drums, the practice of intricate Laya combinations are being further attempted. The sophisticate 'Nadai Bheda', 'Solkattoos' combination of varied gaits, tempos and speed are all profusely made use of in the experiments that are gong on. In fact, the sounds produced by these instruments are precise and perfect when played individually by artistes themselves. Future of percussions appear exhilarating in the world scenario. While the scholars, academicians and practitioners in the classical arena may hold on to the tradition and innovation, a need for refreshing new concept of rhythm and tempo is also seen. ★ ★ ★ ★ ★

161. ಕರ್ನಾಟಕದಲ್ಲಿ ಸುಗಮ ಸಂಗೀತದ ಹುಟ್ಟು ಬೆಳವಣಿಗೆ

– ಎಚ್. ಆರ್. ಲೀಲಾವತಿ

ಬದುಕಿನಲ್ಲಿ ಸಂಗೀತಕಲೆ ಅತ್ಯಂತ ಪ್ರಾಚೀನಕಲೆ, ಹಾಗೂ ಬೇರೆಲ್ಲ ಕಲೆಗಳಿಗಿಂತಲೂ ಭಿನ್ನವಾದುದು. ಸಂಗೀತ ಜೀವಕೋಟಿಯ ಕಣ ಕಣಗಳಲ್ಲೂ ಮಿಳಿತವಾಗಿದೆ. ಜಗತ್ತಿನಲ್ಲಿ ಜೀವಸೃಷ್ಟಿಯಾದಂದಿನಿಂದಲೇ ಸಂಗೀತವು ರೂಪುಗೊಂಡುಬಂದಿದೆ. ನಿಸರ್ಗವನ್ನು ಎಳೆ ಎಳೆಯಾಗಿ ಪರಿಶೀಲಿಸಿ ನೋಡಿದಾಗ ನಿಸರ್ಗದ ಕಣ ಕಣಗಳಲ್ಲೂ ಒಂದಲ್ಲಾ ಒಂದು ರೀತಿಯ ಸುಮಧುರ ಸಂಗೀತದ ಅಲೆ ಅಲೆ ಚಿಮ್ಮಿ ಹೊಮ್ಮುವುದನ್ನು ಕಾಣಬಹುದು. ಜುಳು ಜುಳು ಹರಿಯುವ ನದಿಯ ಜಲದಲ್ಲಿ, ಕಡಲ ಮೊರೆತದಲ್ಲಿ, ಬೀಸುವ ಗಾಳಿಯ ಚಲನೆಯಲ್ಲಿ, ಗಿಡ ಮರಗಳ ಮರ್ಮರ ಶಬ್ದದಲ್ಲಿ, ಎತ್ತಿನ ಕೊರಳ ಗಂಟೆಯಲ್ಲಿ, ಚಮ್ಮಾರ ಹೊಡೆಯುವ ಸುತ್ತಿಗೆ ಹೊಡೆತದಲ್ಲಿ, ಗುಡುಗು - ಸಿಡಿಲಿನ ಆರ್ಭಟದಲ್ಲಿ, ಸುರಿವ ಮಳೆಯಲ್ಲಿ, ಗಾಡಿಯ ಚಕ್ರಗಳ ಉರುಳಿನಲ್ಲಿ, ಹೆಣ್ಣುಗಳ ಕಾಲ್ಗೆಜ್ಜೆಗಳ ಹೆಜ್ಜೆಯ ನಿನಾದದಲ್ಲಿ, ಬಳೆಗಳ ಕಿಣಿ ಕಿಣಿ ಶಬ್ದದಲ್ಲಿ ಒಂದು ವಿಧದ ಸ್ವರ ಲಹರಿ ಇದ್ದೇ ಇದೆ.

ಇಂತಹವುಗಳಲ್ಲೇ ಸ್ವರ ಲಹರಿಯ ಸಿಂಚನವಿರಬೇಕಾದರೆ ಇನ್ನೂ ಸಜೀವ ರೂಪಗಳಾದ ಪ್ರಾಣಿ, ಪಕ್ಷಿ, ಮಾನವ ಜೀವಿಗಳ ಸ್ವರ ಮೇಳಗಳಲ್ಲಿಯೂ ವೈವಿಧ್ಯಮಯವಾದ ಸಂಗೀತ ಲಹರಿ ಇದೆ. ಪಕ್ಷಿಗಳ ಕಲರವ, ಪ್ರಾಣಿಗಳ ಕೂಗು ಎಲ್ಲದರಲ್ಲೂ ಒಂದೊಂದು ವಿಧದ ಮಾಧುರ್ಯವಡಗಿದೆ.

ಮನುಷ್ಯ ಬುದ್ಧಿಜೀವಿ ಹಾಗೂ ಭಾವನಾಜೀವಿ. ಭಾವೋದ್ವೇಗಗಳು ಮನಸ್ಸಿನ ಸಹಜ ಸ್ಥಿತಿ ಹಾಗೂ ಸ್ಪಂದನಗಳಿಗೆ ಪ್ರತಿಫಲನಗೊಳ್ಳುವುದು ಮಾನವನ ಮನಸ್ಸಿನ ಒಂದು ವಿಧ. ಇದರ ರೂಪರೇಷೆಗಳು ಹಲವಾರು. ಇದರಲ್ಲಿ ಧ್ವನಿಯೂ ಒಂದು. ಮನಸ್ಸಿನ ಭಾವೋದ್ವೇಗ ಸ್ಪಂದನಗಳು ಧ್ವನಿಯ ಮೂಲಕ ಪ್ರಕಟವಾಗುವುವು. ಮಾತಿನ ವೈಖರಿ ಮಾನಸಿಕ ಭಾವೋದ್ವೇಗಗಳು ಧ್ವನಿಯ ಮೂಲಕ ಕಲಾತ್ಮಕವಾಗಿ ಹೊರಹೊಮ್ಮುವುದೇ ಸಂಗೀತ ಕಲೆ. ಸಂಗೀತ ಭಾವನೆಗಳ ಭಾಷೆ. ಇದು ಭಾವನೆಗಳ ಧ್ವನಿರೂಪದ ಕಲಾತ್ಮಕ ಪ್ರತಿಚಲನ ಅಂತಲೇ ಮನಸ್ಸಿನ ಮೇಲೆ ಸಂಗೀತಕಲೆಯ ಪ್ರಭಾವದಮೋಡಿ ಅತ್ಯಂತ ಪ್ರಭಾವವಾದುದು. ಧ್ವನಿಯ ಮೂಲಕ ಮನಸ್ಸಿನಲ್ಲುಂಟಾಗುವ ಸಂಗೀತ ಬಗೆ ಬಗೆಯ ಭಾವೋದ್ವೇಗಗಳನ್ನು ಹೊರಹೊಮ್ಮಿಸುವ ಒಂದು ಶ್ರೇಷ್ಠಕಲೆ. ಭಾವ ಭಾವನೆಗಳ ನವರಸೋತ್ಪತ್ತಿ ಹಾಗೂ ಅವರ ಭಾವಾಭಿವ್ಯಕ್ತಿ ಸಂಗೀತದ ರೀತಿ ಇಷ್ಟಿದ್ದರೂ ಸಂಗೀತ ಶ್ರವಣದಿಂದುಂಟಾದ ಭಾವನೆಗಳ ಸೂಕ್ಷ್ಮ ಸ್ವರೂಪವನ್ನು ಅರಿತುಕೊಳ್ಳುವುದು ಅಷ್ಟು ಸುಲಭವಲ್ಲ. ಭಾವನೆಗಳ ಸ್ವರೂಪವೇ

ಅಂತಹುದು. ಅದರ ಅನುಭವ ವೇದ್ಯವೇ ಹೊರತು ವರ್ಣನಾತೀತ. ನೋವನ್ನು ಕಳೆದು ಅನಿರ್ವಚನೀಯ ಆನಂದದ ಕಡೆಗೆ ಕೊಂಡೊಯ್ಯುವುದು ದಿವ್ಯ ಸಂಗೀತದ ಉದ್ದೇಶ. ಆನಂದವೇ ಪರಬ್ರಹ್ಮಸ್ವರೂಪಿ. ಹೀಗಿರುವಾಗ ಜೀವನದಲ್ಲಿ ಸಂಗೀತದ ಮಹತ್ವ ಎಷ್ಟಿದೆ ಎಂದು ಅರ್ಥವಾಗುತ್ತದೆ.

ಸಂಗೀತ ಅಂತರ್ಯ ಜೀವನಕ್ಕೆ ಸಂಬಂಧಪಟ್ಟ ಕಲೆ. ಸಂಗೀತವು ಸರ್ವಕಲೆಗಳಲ್ಲೂ ಶ್ರೇಷ್ಠಕಲೆ ಎನಿಸಲು ಕಾರಣ ಅದು ಸರ್ವ ಕಲೆಗಳಲ್ಲಿ ಸಾರ ಸಂಗ್ರಹವೆನ್ನಬಹುದು. ಸಂಗೀತ ಆತ್ಮೋನ್ನತಿಗೆ ಕಾರಣವಾದ ಮನಶ್ಶಾಂತಿ ನೀಡುವ ಬದುಕಿಗೆ ಸ್ಫೂರ್ತಿದಾಯಕವಾದೊಂದು ದಿವ್ಯಕಲೆ ಎಂದರೆ ಉತ್ಪ್ರೇಕ್ಷೆಯೇನಿಲ್ಲ. ಕೇಳುವವರ ಮನವೊಲಿಸಿ, ಸದ್ಭಾವನೆಯನ್ನು ಮೂಡಿಸಿ, ಸೌಂದರ್ಯ ಭಾವನೆಯನ್ನು ನೀಡಿ, ಅಧ್ಯಾತ್ಮ ಜೀವನಕ್ಕೆ ಆ ಕ್ಷಣವಾದರೂ ಕೊಂಡೊಯ್ಯುವ ಶಕ್ತಿ ಈ ಕಲೆಗಿದೆ. "ಭೋಗ ಜೀವನ ಹಾಗೂ ಅಧ್ಯಾತ್ಮ ಜೀವನವನ್ನು ಒಂದುಗೂಡಿಸುವ ಸಾಧನ ಈ ಸಂಗೀತ" ಎಂದು ಬಿಥೋವನ್ ಹೇಳಿದ್ದಾನೆ. "ಸಂಗೀತ ಜ್ಞಾನ ವಿಹೀನುಲುಕು ಮೋಕ್ಷಮುಗಲದ" ಎಂದಿದ್ದಾರೆ, ಶ್ರೀತ್ಯಾಗರಾಜರು. ಇವರಿಂದ ಸಂಗೀತದ ಮಹತ್ತು ಎಷ್ಟೆಂಬುದರ ಅರಿವಾಗುತ್ತದೆ.

ಮಾನವನ ಸೌಂದರ್ಯೋಪಾಸನೆಯ ಹಾದಿಯಲ್ಲಿ ಬುದ್ಧಿ ಭಾವೋದ್ವೇಗ, ಪ್ರಯೋಗಶೀಲ ಬುದ್ಧಿ, ಮತ್ತು ಅನ್ಯ ಪ್ರಭಾವಗಳ ಪರಿಣಾಮದಿಂದಾಗಿ ಕಲಾ ಮಾಧ್ಯಮಗಳು ಹೊಸ ಹೊಸ ರೂಪ ರೇಷೆಗಳನ್ನು ಪಡೆದು ಹೊಸತೊಂದೇ ಸ್ವರೂಪಕ್ಕೆ ಎಡೆ ಮಾಡಿಕೊಡುವ ಸಾಧ್ಯತೆ ತೀರ ಸಹಜವಾದದ್ದು ಹಾಗೂ ಅನಿವಾರ್ಯ ಕೂಡ. ಕಲೆಯ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಇರುತ್ತದೆ ಎಂಬುದಕ್ಕೆ ಸಾಕ್ಷಿಯಾಗಿ ಒಂದು ಉದಾಹರಣೆಯನ್ನು ಗಮನಿಸಬಹುದು. ಹಿಂದೆ ಭಾರತದಲ್ಲಿ ಭಾರತೀಯ ಸಂಗೀತವೆಂದು ಕರೆಸಿಕೊಳ್ಳುವ ಒಂದೇ ಸಂಗೀತ ಪ್ರಕಾರವಿತ್ತು. ಅದೇ ಕರ್ನಾಟಕ ಶೈಲಿಯ ಸಂಗೀತ. ಆದರೆ ದೆಹಲಿಯಲ್ಲಿ ಮುಸಲ್ಮಾನರ ಆಳ್ವಿಕೆ ಆರಂಭವಾದಾಗ ಭಾರತದ ಸಂಗೀತದ ಮೇಲೆ ಹೊರಗಿನ ಅಂದರೆ ಪರ್ಶಿಯನ್ ಮತ್ತು ಅರೇಬಿಯನ್ ಸಂಗೀತ ಪದ್ಧತಿಗಳ ಪ್ರಭಾವದಿಂದಾಗಿ ಹಿಂದೂಸ್ತಾನಿ ಎಂಬ ಇನ್ನೊಂದು ಸಂಗೀತ ಪ್ರಭೇದ ಅನಿವಾರ್ಯವಾಗಿ ಭಾರತದಲ್ಲಿ ರೂಪು ತಳೆಯಿತು. ಈ ಕಾರಣದಿಂದಾಗಿ ಭಾರತೀಯ ಸಂಗೀತ ಎರಡು ಕವಲೊಡೆಯಿತು. ಅದೇ ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತ ಪದ್ಧತಿ ಎಂದು ಹೆಸರಾಯಿತು. ಇದನ್ನೇ ಕಾಲದ ಪ್ರಭಾವವೆನ್ನುವುದು. ಅನ್ಯ ಸಂಸ್ಕೃತಿಯ ಗಾಢ ಪ್ರಭಾವದಿಂದಾಗಿ ಕಾಲದಿಂದ ಕಾಲಕ್ಕೆ ಬದಲಾದ ರೂಪು ಪಡೆಯುವ ಈ ಕಲಾಮಾಧ್ಯಮಗಳು ಅನಿವಾರ್ಯವಾಗಿ ಕಾಲದ ಘಾತಕ್ಕೆ ತಲೆಬಾಗಿ ಹೊಂದಿಕೊಳ್ಳಬೇಕಾಗುತ್ತದೆ. ಅದು ಸೃಷ್ಟಿ ಸಹಜ ಕ್ರಿಯೆ. ಹೊಸ ಹೊಸ ಸ್ವರೂಪದ ಶೈಲಿಗಳ ಆವಿಷ್ಕಾರ ಅನಿವಾರ್ಯ. ಹೀಗಾಗಿ ಶಾಸ್ತ್ರೀಯ ಸಂಗೀತದ ಹಿನ್ನೆಲೆಯಲ್ಲಿಯೇ ಅನೇಕ ಸರಳೀಕೃತ ಸಂಗೀತ ಶೈಲಿಗಳ ಆವಿಷ್ಕಾರವಾಯಿತು. ವಚನ ಸಾಹಿತ್ಯ, ದಾಸ ಸಾಹಿತ್ಯ ಬೆಳೆದಂತೆ ಅವುಗಳ ಸಂಗೀತ ಹೆಚ್ಚು ಸರಳೀಕೃತವಾಯಿತು. ಇಲ್ಲಿ ಸಂಗೀತ ವಾಹಕ ಹಾಗೂ ಸಾಹಿತ್ಯ ಪ್ರಧಾನವಾದ ಈ ಬಗೆಯ

ಸಂಗೀತ ಸ್ವರೂಪ ಮತ್ತೊಂದು ಬೇರೆಯೇ ಆಯಾಮವನ್ನು ಪಡೆಯಿತು. ಮನದ ಭಾವನೆಯ ಪ್ರಕಟಣೆಗೆ ಭಾಷೆ ಹಾಗೂ ಸಂಗೀತ ಎರಡೂ ಒಂದೊಂದು ಮಾಧ್ಯಮವೇ. ನಾದ ಸಿದ್ಧಿಗೆ ಸಾಹಿತ್ಯಾಂಶದ ಅವಶ್ಯಕತೆ ಇಲ್ಲ ಎಂಬುದು ನಿಜವಾದರೂ ಬುದ್ಧಿಗಮ್ಯವಾದ ವಿಷಯ ಪ್ರತಿಪಾದನೆ ಮನದಾಳಕ್ಕಿಳಿಯಲು ಸಂಗೀತಕ್ಕೆ ಸಾಹಿತ್ಯದ ರಸವಾಹಿನಿಯ ಸಂಬಂಧ ಪರಸ್ಪರ ಅವಶ್ಯಕ ಹಾಗೂ ಪೂರಕ ಕೂಡ.

"ಸಾಹಿತ್ಯಂ ಚ ಸಂಗೀತಂ ಚ ಸರಸ್ವತ್ಯಾಂ ಸ್ತನದ್ವಯಂ
ಏಕಮಾಪಾತ ಮಧುರಂ ಅನ್ಯದಾಲೋಧನಾಮೃತಂ"

ಈ ಮಾತಿನಿಂದ ನಮಗೆ ಸಂಗೀತಕ್ಕೂ - ಸಾಹಿತ್ಯಕ್ಕೂ ಇರುವ ಸಂಬಂಧ ನಿಚ್ಚಳವಾಗಿ ತಿಳಿಯುತ್ತದೆ. ಈ ಮಾತಿನ ಅರ್ಥ ಸಂಗೀತ ಕಿವಿಗೆ ಬೀಳುತ್ತಿದ್ದ ಹಾಗೆ ಅದರ ಮಾಧುರ್ಯ ಹೃದಯವನ್ನು ಮೀಟಿಬಿಡುತ್ತದೆ. ಆದರೆ ಸಾಹಿತ್ಯ ಅರ್ಥಮಾಡಿಕೊಂಡಷ್ಟು ಅದರ ಸೌಂದರ್ಯ ನಿಚ್ಚಳವಾಗುತ್ತದೆ ಎಂದೇ ಆಗುತ್ತದೆ. ಅಂದ ಮೇಲೆ ಸಾಹಿತ್ಯದ ಭಾವ, ಅರ್ಥ, ರಸ, ಲಯ, ಛಂದಸ್ಸು, ಅಲಂಕಾರ ಮೊದಲ ನೋಟಕ್ಕೆ ಅರ್ಥವಾಗಲಾರದು. ಅದಕ್ಕೆ ತೀವ್ರ ಚಿಂತನ-ಮಂಥನದ ಅವಶ್ಯಕತೆ ಇದೆ. ಇಂತಹವು ಅಭ್ಯಾಸಬಲದಿಂದ ಬೆಳೆಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಕಲಾವಿದರಿಗೆ ಸಂಗೀತ ಸಾಹಿತ್ಯದ ತಿಳುವಳಿಕೆ ಅತ್ಯಾವಶ್ಯಕ. ಶ್ರೇಷ್ಠ ಕಲಾವಿದನಾದವನು ಸಂಗೀತ ಸಾಹಿತ್ಯಗಳನ್ನು ಹಿತಮಿತವಾಗಿ ಸಮ್ಮಿಳಿತಗೊಳಿಸಿ ಸ್ಪಷ್ಟವಾಗಿ ಪದ ಪದವೂ ಅರ್ಥವಾಗುವಂತೆ ಹಾಡಿ ಸಾಹಿತ್ಯದ ಸೊಬಗು ಸೌಂದರ್ಯವನ್ನು ತೋರಿಸಬೇಕಾಗುತ್ತದೆ.

ಭಾರತದೇಶವನ್ನು ತೆಗೆದುಕೊಂಡರೆ ಮುಖ್ಯವಾಗಿ ಈಗ ಶಾಸ್ತ್ರೀಯ ಸಂಗೀತದ ಎರಡು ಪ್ರಭೇದಗಳನ್ನು ಕಾಣುತ್ತೇವೆ. ಕರ್ನಾಟಕ ಹಾಗೂ ಹಿಂದೂಸ್ಥಾನಿ ಪದ್ಧತಿಗಳು ಅಲ್ಲದೆ ಆಯಾಯಾ ಪ್ರಾಂತ್ಯದ ಜನಪದ ಸಂಗೀತ, ಲಘು ಶಾಸ್ತ್ರೀಯ, ಲಘು ಸಂಗೀತ ಎಂಬ ಪ್ರಭೇದಗಳೂ ಇವೆ. ಸಂಗೀತ ಒಂದೇ ಆದರೂ ಕವಲುಗಳು ಹಲವಾರು "ನೂರು ಮರ ನೂರು ಸ್ವರ ಒಂದೊಂದು ಅತಿ ಮಧುರ" ಎಂಬ ಬೇಂದ್ರೆಯವರ ನುಡಿಯಂತೆ.

ಲಲಿತ ಸಂಗೀತ, ಲಘು ಸಂಗೀತ ಅಥವಾ ಸುಗಮ ಸಂಗೀತ. ಅದರ ಹೆಸರೇ ಹೇಳುವಂತೆ ಅತ್ಯಲ್ಪಕಾಲದಲ್ಲಿ ಕಲಾರಸಿಕರ ಹೃದಯವನ್ನು ಸೆರೆ ಹಿಡಿದು, ಸೂರೆಗೊಳ್ಳಬಲ್ಲ, ಭಾವ ಪ್ರಧಾನವಾದ ಸಂಗೀತ ಪ್ರಕಾರ. ಶಾಸ್ತ್ರೀಯ ಸಂಗೀತವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳ ಬಲ್ಲವರು ಮಾತ್ರ ಅದರ ರಸಾಸ್ವಾದನೆಯನ್ನು ಮಾಡಲು ಸಾಧ್ಯ. ಆದರೆ ಸುಗಮ ಸಂಗೀತ ಹಾಗಲ್ಲ. ಹಳ್ಳಿಯ ಮುಗ್ಧ ಹೆಣ್ಣಿನಿಂದ ಹಿಡಿದು ಪಟ್ಟಣದ ನಯ ನಾಜೂಕಿನ ಯುವಕನವರೆಗೂ ಎಲ್ಲರನ್ನೂ ಆಕರ್ಷಿಸುತ್ತದೆ. ಪ್ರಾಯಶಃ ಇದಕ್ಕೆ ಕಾರಣ ಸುಗಮ ಸಂಗೀತ ಸುಲಭ, ಗ್ರಾಹ್ಯ ಹಾಗೂ ರಂಜನೀಯವಾಗಿರುವುದೇ ಇರಬೇಕು. ಜನಸಾಮಾನ್ಯರೆಲ್ಲರೂ ಶಾಸ್ತ್ರೀಯ ಸಂಗೀತವನ್ನು ಅಷ್ಟು ಸುಲಭವಾಗಿ ಗ್ರಹಿಸಲು ಸಾಧ್ಯವಿಲ್ಲ. ಅದಕ್ಕೆ ನಿಪುಣವಾದ ಬುದ್ಧಿ ಶಕ್ತಿ,

ಆಲೋಚನೆ ಎಲ್ಲವೂ ಬೇಕಾಗುತ್ತದೆ. ಯಾವುದೇ ರೀತಿಯ ಶೈಲಿ ಇರಲಿ ಎಲ್ಲವೂ ಸಪ್ತಸ್ವರಗಳ ಆಧಾರದ ಮೇಲೆಯೇ ನಿಂತಿರುವುದರಿಂದ ಇದು ಹೆಚ್ಚು, ಇದು ಕಡಿಮೆಯೆಂದು ತೀರ್ಮಾನಿಸುವುದು ತಪ್ಪಾದೀತು. ಅವರವರ ಮೆಚ್ಚುಗೆಯ ಶೈಲಿ ತೀರ್ಮಾನವಾಗುತ್ತದೆ. ಇದೇ ಶೈಲಿ ಸರಿ ಎಂಬ ಕೂಪಮಂಡೂಕ ತೀರ್ಮಾನವನ್ನು ಬಿಟ್ಟು ರಸಾಸ್ವಾದನೆಯ ಕಡೆ ಮನಸ್ಸನ್ನು ಹರಿಸಿದಾಗ ಆನಂದಾನುಭೂತಿ ಯಾವ ಸಂಗೀತ ಶೈಲಿಯಲ್ಲಿಯೂ ಪಡೆಯಬಹುದು. ಸುಗಮ ಸಂಗೀತವೇ ಆಗಲಿ, ಶಾಸ್ತ್ರೀಯ ಸಂಗೀತವೇ ಆಗಲಿ ಒಂದಕ್ಕೊಂದು ಪೂರಕವೇ ಹೊರತು ಮಾರಕವಲ್ಲ. ಶಾಸ್ತ್ರೀಯ ಸಂಗೀತವನ್ನು ಗಂಡು ಸಂಗೀತವೆಂದು ಬೇಕಾದರೆ ಕರೆಯೋಣ. ಸುಗಮ ಸಂಗೀತ ಸುಕೋಮಲ ಹೆಣ್ಣಿನಂತೆ ಮೃದು ಮಧುರ ಕೋಮಲ ಭಾವ ಗಾಯನ.

ನಾವು ಸುಗಮ ಸಂಗೀತವೆಂದು ಯಾವುದಕ್ಕೆ ಕರೆಯುತ್ತೇವೆ ಎಂದರೆ ಈಗ ಸಾಮಾನ್ಯವಾಗಿ ಭಾವಗೀತಾ ಗಾಯನಕ್ಕೆ ಎನ್ನಬೇಕಾಗುತ್ತದೆ. ಭಾವಗೀತೆಯೆಂದರೆ ಗೀತರೂಪದಲ್ಲಿ ಪ್ರಕಟವಾಗುವ ಭಾವಾತ್ಮಕ ಕವಿತೆ ಎನ್ನಬಹುದು. ಭಾವ ಪ್ರಧಾನವಾದ ರಾಗ, ತಾಳ ಬದ್ಧವಾದ ಈ ಕವಿತೆ ನಾದಮಯವಾಗಿರಬೇಕು. ಅಂದ ಮೇಲೆ ಇದು ಹಾಡುವಂಥದು ಎಂದ ಹಾಗಾಯ್ತು. ಹಿಂದೆ ಗ್ರೀಕ್ ದೇಶದಲ್ಲಿ ಲೈರ್ ಎಂಬ ವಾದ್ಯದೊಡನೆ ಲಿರಿಕ್ಸ್ ಹಾಡುತ್ತಿದ್ದರಂತೆ. ಲಿರಿಕ್ಸ್‌ಗಳೇ ಭಾವಗೀತೆಯೆಂಬ ಹೆಸರಿನಿಂದ ನಮ್ಮಲ್ಲಿ ಪ್ರಚಲಿತವಾಗಿರುವುವು ಎಂದು ಹೇಳುತ್ತಾರೆ. ಭಾವಗೀತಾ ಗಾಯನ ಕರ್ನಾಟಕದಲ್ಲಂತೂ ತೀರ ಇತ್ತೀಚಿನದೆಂದು ಹೇಳಬಹುದು. ಈ ಪ್ರಕಾರ ಗಜಲ್‌ನಿಂದ ಹುಟ್ಟಿದ್ದೆಂಬ ಅಭಿಪ್ರಾಯವಿದೆ. ರಸಾನುಕೂಲವಾದ ಸ್ವರ, ರಾಗ, ತಾಲ ಇವುಗಳ ಸಂಯೋಗದಿಂದ ಭಾವಗೀತವು ಆಕರ್ಷಕವಾಗಿ ಇರುತ್ತದೆ. ಕವಿಯ ಭಾವಪೂರ್ಣ ಕಾವ್ಯವನ್ನು ಅರ್ಥಕ್ಕೆ ಅನುಕೂಲವಾದ ಹಾಗೂ ರಸಪರಿಪೋಷಕವೆನಿಸುವ ಸ್ವರ ಲಹರಿಗಳಲ್ಲಿ ಹೊಂದಿಸಿ, ಕವಿ ಭಾವದ ಸೌಂದರ್ಯವನ್ನು ಇಮ್ಮಡಿಸುವುದು. ಈ ಗಾಯನದ ಮುಖ್ಯ ಉದ್ದೇಶ.

ತಿಳಿದು ಬಂದಿರುವ ಮಟ್ಟಿಗೆ ಈ ಭಾವ ಗೀತೆಗಳನ್ನು ಹಾಡುವ ಪರಿಪಾಠ ಹುಟ್ಟಿದ್ದು ಮರಾಠಿಯಲ್ಲಿ ಹೀರಾಬಾಯಿ ಬಡೋದೇಕರ್ ಅವರಿಂದಲೇ ಎನ್ನಬೇಕು. ಮಾಧವ ಜೂಲಿಯನ್ ಅವರ 'ಪಾಕವತವ ಮಧುಘೋಲ ಕೋಕಿಲೆ' ಹಾಗೂ 'ಉಪವನಿಗಾತ ಕೋಕಿಳಾ' ಬಹಳ ಹೆಸರು ಗಳಿಸಿರುವ ಗೀತೆಗಳು.

'ಓ ಪಕ್ ಆಸಮನಿ ಮುರಲಿ ಕನ್ಹಯ್ಯಾ, ಬಜಾವ್ ಬಜಲಾವ್ ಮುರಲಿ' ಎಂಬ ಗೀತೆ 1937- 1938ರಲ್ಲಿಯೇ ಧ್ವನಿಮುದ್ರಿತವಾಗಿದ್ದವು.

ಮರಾಠಿಯಲ್ಲಿ ಭಾವಗೀತೆ ಮೂವತ್ತರ ದಶಕದಲ್ಲಿಯೇ ಆರಂಭವಾಗಿದೆ. ಗಣೇಶೋತ್ಸವಗಳ ಅಂಗವಾಗಿ ಅಲ್ಲಿ ಲಾವಣಿ, ರಂಗಗೀತೆ, ಭಾವಗೀತೆಗಳ ಪ್ರಭಾವವೂ ಕನ್ನಡ ಭಾವಗೀತೆಗಳ ಮೇಲಾಯ್ತು. ಅದರ ಪರಿಣಾಮವಾಗಿ ಮರಾಠಿಯಲ್ಲಿ ಪ್ರಚಲಿತವಿದ್ದ ಧಾಟಿಯೇ ಕನ್ನಡ ಭಾವಗೀತೆಗೂ ಅಚ್ಚಳಿದು ಬಂತು. ಉತ್ತರ ಕರ್ನಾಟಕದಲ್ಲಿ ಮರಾಠಿ

ಸಂಗೀತ ಪ್ರಭಾವ ಹೆಚ್ಚಾಗಿದ್ದುದರಿಂದ ಅಲ್ಲಿಯ ಗಾಯಕ, ಗಾಯಕಿಯರ ಮೇಲೆ ಮರಾಠಿ ಧಾಟಿಗಳೇ ಎರವಲು ಬಂತು. ಶೀತಾ ಮುಳ್ಳಿಯವರು ಹಾಡಿದ 'ನುಡಿದಳು ಶಬರಿ ರಘುವರಗೆ' ಹಾಗೂ 'ಗಿಡ ಗಿಡದಲಿ ಹಾರಾಡುವ ಗಿಳಿಯೆ ನುಡಿ ನುಡಿ ಕನ್ನಡವ' ಇವೆರಡೂ ಕ್ರಮವಾಗಿ 'ಏಸಪಿತ ಶಬರಿ ರಘು ರಾಯಾ' ಹಾಗೂ 'ತುಮಜನ ಮೋರಿ ಕೌನ ಖಬರ ಲೇ' ಮರಾಠಿ ಹಾಗೂ ಹಿಂದಿಯ ಧಾಟಿಗಳ ಪಡಿಯಚ್ಚು. ಸುಶೀಲಾ ಟೇಂಬೆಯವರು ಹಾಡಿರುವ 'ಚೆಂದ ಕೃಷ್ಣಾ ಗೋಕುಳ ಚಿನ್ನಾ ಒಕುಳಿಯಾಟವ' ಕೂಡ 'ಸಕೋರೆ ಕೃಷ್ಣಾರಂಗ ಫೇಕೂ ಜುಸರಿ ಘೇಜತೆ' ಎಂಬ ಮರಾಠಿ ಹಾಡಿನ ಪಡಿಯಚ್ಚು. ಈ ಹಾಡುಗಳೆಲ್ಲ ಮುಂಬಯಿ ಆಕಾಶವಾಣಿಯಲ್ಲಿ ಪ್ರಸಾರವಾದವು.

ಸುಮಾರು ಐದು ದಶಕಗಳ ಹಿಂದೆ ಕರ್ನಾಟಕದಲ್ಲಿ ಭಾವಗೀತೆಗಳು ಹುಟ್ಟಿದ್ದು. ಆರಂಭದ ಕೀರ್ತಿ ಮುಖ್ಯವಾಗಿ ಧಾರವಾಡದ ಶ್ರೀ ಪಿ. ಆರ್. ಭಾಗವತ್, ಡಾಕ್ಯುಮೆಂಟರಿ ಚಿತ್ರ ವಿಭಾಗದ ದಿವಂಗತ ಜಿ. ಜಿ. ರಾಮನಾಥ್, ದಿವಂಗತ ಪಾಂಡೇಶ್ವರ ಕಾಳಿಂಗರಾವ್ ಹಾಗೂ ದೇವಂಗಿಯ ಚಂದ್ರಶೇಖರ್ ಅವರಿಗೆ ಸಲ್ಲಬೇಕು. ಭಾಗವತರು ಬೇಂದ್ರೆಯವರ 'ಕುಣಿಯೋಣು ಬಾರಾ', 'ಭೃಂಗದ ಬೆನ್ನೇರಿ ಬಂತು', 'ಅನ್ನಾವತಾರ', 'ಟೊಂಕದ ಮ್ಯಾಲೆ ಕೈ ಇಟಗೊಂಡು' ಇತ್ಯಾದಿ. 'ಆನಂದಕಂದರ ಚೆಲುವು ಹಿರಿಯದೋ ಹೃದಯದೊಲವು ಹಿರಿಯದು, 'ಮೂರು ದಿನಗಳು ಜಾರಿದವು' ಇತ್ಯಾದಿ ಅಲ್ಲದೆ ಕೆ.ಎಸ್. ನರಸಿಂಹಸ್ವಾಮಿಯವರ 'ರಾಯರು ಬಂದರು ಮಾವನ ಮನೆಗೆ' ಇತ್ಯಾದಿ, ಗೀತೆಗಳನ್ನು ಪ್ರಚಾರ ಮಾಡಿದರೆ ಪಿ. ಕಾಳಿಂಗರಾಯರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಮನೆ ಮನೆಗೂ ಮುಟ್ಟಿಸಿದರು. ಜಿ. ಜಿ. ರಾಮನಾಥ್‌ರವರು ಕುವೆಂಪುರವರ 'ದೂರ ಬಹುದೂರ', 'ದೋಣಿ ಸಾಗಲಿ ಮುಂದೆ ಹೋಗಲಿ' ಗೀತೆಗಳನ್ನು ಬಹಳ ಹಿಂದೆಯೇ ಧ್ವನಿ ಮುದ್ರಿಸಿದ್ದಾರೆ. ಅಲ್ಲದೆ 1945ರ ಸುಮಾರಿಗೆ ಗೋಕುಲ ನಿರ್ಗಮನದ ಹಾಡುಗಳನ್ನು ಲೋಕಪ್ರಿಯವಾಗಿ ಹಾಡತೊಡಗಿದರೆ ಶ್ರೀ ಡಿ.ಜಿ. ಚಂದ್ರಶೇಖರ್‌ರವರು ಕೆ.ಎಸ್. ನರಸಿಂಹಸ್ವಾಮಿಯವರ ಮೈಸೂರು ಮಲ್ಲಿಗೆಯ ಪರಿಮಳವನ್ನು 1943-44ರ ಸುಮಾರಿಗೆ ಮನೆ ಮನೆಗೂ ಮುಟ್ಟಿಸಿದರು. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನೇ ಮೊದಮೊದಲು ಹಾಡುತ್ತಿದ್ದ ಪಿ. ಕಾಳಿಂಗರಾಯರಿಗೆ ಭಾವಗೀತೆಗಳನ್ನು ಹಾಡಬೇಕು. ಅವುಗಳನ್ನು ಹಾಡಿ ಪ್ರಚಾರಕ್ಕೆ ತರಬೇಕು ಎಂದು ಆಗ್ರಹಪೂರ್ವಕ ಒತ್ತಾಯ ಮಾಡಿದವರು ಕನ್ನಡದ ಕಾದಂಬರಿ ಸಾರ್ವಭೌಮರೆನಿಸಿದ್ದ ಅ.ನ.ಕೃಷ್ಣರಾಯರು. ಇದಕ್ಕೂ ಮುಂಚೆ ನಾನು ತೀರ ಚಿಕ್ಕ ಹುಡುಗಿಯಾಗಿದ್ದಾಗ ಬಿ.ಎಂ.ಶ್ರೀಯವರ ಅನೇಕ ಗೀತೆಗಳು ನನ್ನ ಕಿವಿಗೆ ಬೀಳುತ್ತಿತ್ತು : 'ಕರುಣಾಳು ಬಾ ಬೆಳಕೆ', 'ಅನಾಥೆ ಇವಳನ್ನೊಬ್ಬಳೇ ಜನ್ಮರೋಗಿ', 'ಕಾಳೆ ಹರೆ ಕೊಂಬುಗಳ', 'ಮೊದಲು ತಾಯ ಹಾಲ ಕುಡಿದು' ಇತ್ಯಾದಿ ಇತ್ಯಾದಿ. ಡಿ.ವಿ.ಜಿ. ಅವರ 'ವನಸುಮದೊಳೆನ್ನ ಜೀವನವು', 'ಮೇಲೆ ನೋಡೆ ಕಣ್ಣಣವ' ಇತ್ಯಾದಿ ಇತ್ಯಾದಿ. ಈ ಗೀತೆಗಳನ್ನು ಹಾಡುತ್ತಿದ್ದವರು ಬಾಪು ರಾಮಣ್ಣನವರು (ನನ್ನ ತಂದೆಯವರು). ಅವರನ್ನು ಅತಾಣ ರಾಮಣ್ಣ ಎಂದೇ

ಕರೆಯುತ್ತಿದ್ದರು. ಈಗಲೂ ಅವರು 1940-42ರಲ್ಲಿ ರಾಗಸಂಯೋಜನೆ ಮಾಡಿ ಹಾಡಿದ ಅಠಾಣ ರಾಗದ 'ವನಸುಮದೊಳೆನ್ನ ಜೀವನವು' ಬಹಳ ಕಡೆ ಪ್ರಚಲಿತವಿದೆ. ಹಾಗೇ ಹಾಡುತ್ತಾರೆ ಬಹಳ ಮಂದಿ.

ಹಿಂದೆ ಈ ಗೀತೆಗಳು ಅಲ್ಲೊಂದು, ಇಲ್ಲೊಂದು ಕಾಲೇಜು ಸಭೆ, ಸಮಾರಂಭಗಳಲ್ಲಿ ಮಾತ್ರ ಪ್ರಚಾರವಾಗುತ್ತಿತ್ತು. ಆದರೆ ಆಕಾಶವಾಣಿ ಭಾವಗೀತೆಗಳನ್ನು ಪ್ರಸಾರಮಾಡುವ ಪರಿಪಾಠ ಪ್ರಾರಂಭಿಸಿದಂದಿನಿಂದ ಭಾವಗೀತೆಗಳಿಗೇ ಒಂದು ಹೊಸ ಆಯಾಮ ಬಂದಂತಾಯ್ತು. ಅದನ್ನು ಕೇಳುವ ಶ್ರೋತೃವೃಂದವೂ ಬೆಳೆಯತೊಡಗಿತು. ಹಾಡುವ ಮಂದಿಯೂ ಹೆಚ್ಚಾದರು. ಹೀಗಾಗಿ ಭಾವಗೀತೆಗಳು ಹೆಚ್ಚು ಹೆಚ್ಚು ಜನರನ್ನು ತಲುಪಲು ಅನುಕೂಲವಾಯಿತು.

ಮೊಟ್ಟಮೊದಲು ಕನ್ನಡ ಭಾವಗೀತೆಗಳು ಪ್ರಸಾರಕ್ಕಾಗಿ ತಯಾರಾದದ್ದು ಮುಂಬಯಿಯಲ್ಲಿ, 1-9-1946ರಂದು ಮುಂಬಯಿಯ ಕನ್ನಡ ಕಾರ್ಯಕ್ರಮ ಆರಂಭವಾದಾಗ ಪ್ರಸಾರವಾದ ಮೊದಲ ಭಾವಗೀತೆ ಶ್ರೀ ಎನ್ಕೆಯವರ 'ನೋಡೆ ನೋಡೆ ರಮಣಿ ರಜನಿಯಾ' ಎಂಬುದು. ಇದನ್ನು ಹಾಡಿದವರು ತಾರಾಬಾಯಿ ಗದಗಕರ. ನಂತರ ಸೀತಾಮುಲ್ಕಿ, ಸುಶೀಲಾ ಟೇಂಬೆ, ವಿಜಯಾ ದೇಸಾಯಿ ಮುಂತಾದವರು ಮರಾಠಿ ಧಾಟಿಗಳನ್ನೇ ಕನ್ನಡಕ್ಕೆ ಅಳವಡಿಸಿಕೊಂಡು ಮೊದಲು ಪ್ರಸಾರ ಮಾಡಿ ಆಮೇಲೆ ಮುದ್ರಿಸಿದರು. ಈ ದಿಸೆಯಲ್ಲಿ ಭೀಮಸೇನ ಜೋಶಿ, ಅಮೀರ್ ಬಾಯಿ, ಕರ್ನಾಟಕದ ಬಾಳಪ್ಪ ಹುಕ್ಕೇರಿ ಮುಂತಾದವರ ಕೊಡುಗೆ ಅಪಾರ.

ಉತ್ತರ ಕರ್ನಾಟಕದ ಕಡೆ ಪ್ರಾಯಶಃ ಜಯವಂತಿ ದೇವಿ ಹಿರೇಬೇಟ್ ಅವರದೇ ಮೊದಲ ಭಾವಗೀತೆಯ ಧ್ವನಿಮುದ್ರಿಕೆ ಇರಬೇಕು. ಬೇಂದ್ರೆಯವರ 'ಯಾಕೊ ಕಾಣೆ' ಹಾಗೂ 'ವಾರಿನೋಟ' ವಾದರೆ, ಈ ಕಡೆ ಪಿ. ಕಾಳಿಂಗರಾವ್ ಹಾಗೂ ಸಂಗಡಿಗರದು. ಆದರೆ ಹಿಂದೆ ಹೆಚ್ಚಾಗಿ ಭಾವಗೀತೆಗಳನ್ನು ಧ್ವನಿಮುದ್ರಿಸಿರುವವರೆಲ್ಲ ಸಾಮಾನ್ಯ ಉತ್ತರ ಕರ್ನಾಟಕದವರೆ.

ಮಹಾರಾಷ್ಟ್ರ ಕರ್ನಾಟಕ ಎರಡೂ ಕಡೆ ಈಗ ಭಾವಗೀತೆಗಳ ಕಛೇರಿಯನ್ನೇ ಕೊಡುವ ಪರಿಪಾಠ ಬೆಳೆದುಬಂದಿದೆ. ರಾಜ್ಯೋತ್ಸವ, ರಾಮೋತ್ಸವ, ಗಣೇಶೋತ್ಸವ ಇವೆಲ್ಲಾ - ಹಾಗೂ ಮದುವೆ ಮನೆಗಳು, ಸಂಸ್ಕೃತಿಪ್ರಚಾರ ಇಂಥಲ್ಲೆಲ್ಲ ಗಂಟೆಗಟ್ಟಲೆ ಭಾವಗೀತೆಯ ಕಛೇರಿ ನಡೆಯುತ್ತದೆ. ಇದು ಉತ್ತರಭಾರತದಲ್ಲೂ ಇದೆ. ಆದರೆ ಅಲ್ಲಿ ಹೆಚ್ಚಾಗಿ ಭಜನ್, ಗಜಲ್, ಠುಮ್ರಿ, ಕವ್ವಾಲಿ, ಮಧ್ಯೆ ಮಧ್ಯೆ ಭಾವಗೀತೆ ಹಾಡುವ ಪರಿಪಾಠವಿದೆ. ಕಲ್ಕತ್ತೆಯಲ್ಲಿ ರಾತ್ರಿ 8ರ ವೇಳೆಗೆ ಇಂಥ ಕಛೇರಿಗಳು ಪ್ರಾರಂಭವಾದರೆ ಮಾರನೆಯ ಬೆಳಗ್ಗೆ ಐದು ಘಂಟೆಯವರೆಗೂ ಸಾಗುತ್ತದೆ. ಒಬ್ಬೊಬ್ಬ ಕಲಾವಿದರಿಗೂ ಅರ್ಧಘಂಟೆ ಇಲ್ಲವೇ ಒಂದು ಘಂಟೆಯ ಕಾಲಾವಕಾಶ. ಹಾಗಾಗಿ ಒಂದು ದಿನದಲ್ಲಿ ಎಂಟು, ಹತ್ತು, ಹದಿನೈದು ಕಲಾವಿದರು ಹಾಡುತ್ತಾರೆ. ಭಜನ್, ಗಜಲ್, ನಜರುಲ್‌ಗೀತ್, ರವೀಂದ್ರ ಗೀತ, ಶ್ಯಾಮ-ಸಂಗೀತ ಭಾವಗೀತೆ ಎಲ್ಲ

ಪ್ರಕಾರಗಳಲ್ಲಿಯೂ ಹಾಡುತ್ತಾರೆ. ಇವು ಲಲಿತ ಸಂಗೀತದಲ್ಲಿಯೇ ಭಿನ್ನ ಭಿನ್ನ ಶೈಲಿ ಎನ್ನಬಹುದು.

ಅತ್ಯಂತ ಪ್ರಭಾವಯುತ ಮಾಧ್ಯಮವಾದ ಆಕಾಶವಾಣಿ ಜೊತೆಗೆ, ಅಷ್ಟೇ ಪ್ರಭಾವಕಾರಿ ಮಾಧ್ಯಮ ಕ್ಯಾಸೆಟ್‌ಗಳು. ಇದು ಇತ್ತೀಚೆಗೆ ಹುಟ್ಟಿಕೊಂಡ ಇನ್ನೊಂದು ಮಾಧ್ಯಮವೆನ್ನಬೇಕು. ಕನ್ನಡ ಭಾವಗೀತೆಯನ್ನು ಕ್ಯಾಸೆಟ್‌ನಲ್ಲಿ ಸೇರಿಸಿದ ಕೀರ್ತಿ ಕನ್ನಡದ ಖ್ಯಾತ ಕವಿ ಶ್ರೀ ನಿಸ್ಸಾರ್ ಅಹಮದ್ ಅವರದ್ದು ಹಾಗೂ ಅದರ ಸಂಗೀತ ಹಾಡುಗಾರಿಕೆಯ ಕೀರ್ತಿ ಶ್ರೀ ಅನಂತಸ್ವಾಮಿಯವರಿಗೆ ಸಲ್ಲಬೇಕು. 'ನಿತ್ಯೋತ್ಸವ' ಕ್ಯಾಸೆಟ್ ಬಹಳ ಜನಪ್ರಿಯವಾಯಿತು. ಪ್ರಾಯಶಃ ವ್ಯಾಪಾರ ದೃಷ್ಟಿಯಿಂದಲೂ ದಾಖಲೆಯನ್ನೇ ಸ್ಥಾಪಿಸಿರಬಹುದು. ಇತ್ತೀಚೆಗಂತೂ ಈ ಕ್ಯಾಸೆಟ್ ಯುಗ ಬಹಳ ಅಭಿವೃದ್ಧಿಹೊಂದಿದೆ. ಇದು ಭಾವಗೀತೆಗಳ ಪ್ರಚಾರಕ್ಕೆ ಒಂದು ರೀತಿಯಲ್ಲಿ ಸಹಾಯಕವಾಗಿದ್ದರೆ ಮತ್ತೊಂದು ದೃಷ್ಟಿಯಿಂದ ಮಾರಕವೂ ಆಗುತ್ತದೆ ಎನ್ನಬಹುದು. ಕಾರಣ ಕ್ಯಾಸೆಟ್ ಹಿಡಿದ ಹಿಡಿಯುತ್ತಿರುವ ಜಾಡು ಸರಿಯಲ್ಲವೇನೋ ಎನಿಸುತ್ತಿದೆ. ಸಿನಿಮಾ ಹಾಡಿನ ಧಾಟಿಯಲ್ಲಿ, ಸಿನಿಮಾ ಹಾಡಿನ ವಾದ್ಯವೃಂದದ ಜಾಡಿನ ಅನುಕರಣೆಯಲ್ಲಿ, ಭಾವಗೀತೆಗಳ ಇಂಪು, ಸೊಂಪು ಅದರ ಸೊಗಡು, ಸೊಗಸು ಮರೆಯಾಗುತ್ತಿದೆ. ಸಿನಿಮಾ ಹಾಡುಗಳು ಜನರನ್ನು ಮರುಳು ಮಾಡಿವೆ, ನಿಜ. ಆದ್ದರಿಂದಲೇ ಆ ಧಾಟಿಯಲ್ಲೇ ಭಾವಗೀತೆಯನ್ನೂ ಜನತೆಗೆ ನೀಡಿದರು. ಹೆಚ್ಚು ಕ್ಯಾಸೆಟ್‌ಗಳು ಖರ್ಚಾಗಿ ವ್ಯಾಪಾರ ದೃಷ್ಟಿಯಿಂದ ಲಾಭದಾಯಕವಾಗಿ ಪರಿಣಮಿಸಿದರೂ ಭಾವಗೀತೆ ತನ್ನತನವನ್ನು ಕಳೆದುಕೊಳ್ಳುವ ದೌರ್ಭಾಗ್ಯ ಸ್ಥಿತಿಗೆ ಮುಟ್ಟುವ ಸಾಧ್ಯತೆ ಇದೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ ಆ ಕಾಲ ದೂರವಿಲ್ಲವೇನೋ ಎನ್ನಿಸುತ್ತಿದೆ. ಭಾವಗೀತೆಯ ಅಭಿರುಚಿಯನ್ನು ಬೆಳೆಸಿ, ಅದಕ್ಕೆ ತಕ್ಕ ಶ್ರೋತೃವೃಂದವನ್ನು ಕಲಾವಿದರು ಬೆಳೆಸಬೇಕು. ವಾದ್ಯ ಹಿನ್ನೆಲೆ ಹೆಚ್ಚು ಇದ್ದಷ್ಟೂ ಗೀತೆಯ ಸೊಬಗು ಹೆಚ್ಚುವುದೆಂಬ ತಿಳುವಳಿಕೆ ತಪ್ಪಾದೀತು. ಹೆಚ್ಚು ವಾದ್ಯಗಳನ್ನು ಬಳಸಿಯೂ ಸೋತ ಗೀತೆಗಳುಂಟು. ಹಿತಮಿತವಾಗಿ ಒಂದೆರಡೇ ವಾದ್ಯ ಬಳಸಿಯೂ ಜನಪ್ರಿಯವಾದ ಗೀತೆಗಳುಂಟು.

ಆದ್ದರಿಂದ ನಾವು ಭಾವಗೀತೆಯ ಸ್ವರೂಪವನ್ನು ಗಮನಿಸಬೇಕಾಗುತ್ತದೆ. ಭಾವಗೀತೆಗಳಲ್ಲಿ ಸುಂದರಕಾವ್ಯ ಹಾಗೂ ಮಧುರಸ್ವರ ರಚನೆಯ ಸಮ ಬೆರಕೆ ಇರುತ್ತದೆ. ಇಲ್ಲಿ ಕಾವ್ಯಭಾವವೇ ಪ್ರಧಾನ. ಸಂಗೀತವಾಹಕ ಮಾತ್ರ. ಹಾಗಾಗಿ ಸುಗಮ ಸಂಗೀತ ಹಾಡಲು ಬೇಕಾದ ವಿಶೇಷ ಗುಣಗಳನ್ನು ನಾವು ಗಮನಿಸಲೇಬೇಕಾಗುತ್ತದೆ. ಈಗಂತೂ ಭಾವಗೀತೆಯ ಅಲೆ ಎದ್ದಿದೆ. ಎಲ್ಲೆಲ್ಲೂ ಭಾವಗೀತೆಗಳು ಕೇಳಿ ಬರುತ್ತಿವೆ. ಈ ಗೀತೆಗಳು ಹೆಚ್ಚು ಹೆಚ್ಚು ಯುವ ಜನಾಂಗವನ್ನು ಆಕರ್ಷಿಸುತ್ತಿರುವುದು ಸಂತೋಷದ ವಿಷಯ.

ಭಾವಗೀತಾ ಗಾಯನ ಒಂದು ಉನ್ನತ ಕಲೆಯಾಗಿ, ಸರ್ವಾಂಗ ಸುಂದರವಾಗಿ ಬೆಳೆಯಬೇಕಾದರೆ ಕೆಲವು ಕಟ್ಟುಪಾಡು, ನಿಯಮಗಳನ್ನು ಅನುಸರಿಸಬೇಕಾಗುತ್ತದೆ.

ಭಾವಗೀತಾಗಾಯನದಲ್ಲಿ ಆಸಕ್ತಿ ಇರುವವರಿಗೆ ಸರಿಯಾದ ಮಾರ್ಗದರ್ಶನ ನೀಡುವ ಯೋಜನೆಯಾಗಬೇಕು. ಇದಕ್ಕಾಗಿ ಸುಗಮ ಸಂಗೀತವನ್ನು ಹೇಳಿಕೊಡುವ ಸಂಸ್ಥೆಗಳು ಬೆಳೆಯಬೇಕು. ಇದಕ್ಕೆ ಸರಕಾರದ ಸಹಾಯಕೂಡಾ ಆಗತ್ಯ. ಅಲ್ಲದೆ ಸುಗಮ ಸಂಗೀತಕ್ಕೆ ಒಂದು ಪ್ರತ್ಯೇಕ ಸ್ಥಾನ ದೊರೆಯುವಂಥ ಅಕಾಡೆಮಿಯಾಗಬೇಕು. ಭಾವಗೀತೆಯನ್ನು ಯಾರುಬೇಕಾದರೂ ಹಾಡಬೇಕೆಂಬ ಹವ್ಯಾಸ ತಪ್ಪಿ ಯೋಗ್ಯತೆಗೆ ಮಾತ್ರ ಮನ್ನಣೆ ದೊರೆಯುವಂತೆ ಶ್ರೋತೃವೃಂದ ಹಾಗೂ ಕಲಾವಿದರನ್ನು ಬೆಳೆಸಬೇಕು. ಅಕಾಡೆಮಿಯ ವತಿಯಿಂದ ಖ್ಯಾತಕವಿಗಳ ಹಾಗೂ ಪ್ರತಿಭಾವಂತ ಕವಿಗಳ ಭಾವಗೀತೆಗಳನ್ನು ಅವರ ಕಂಠದಲ್ಲಿಯೇ ಧ್ವನಿಮುದ್ರಿಸಿ, ಕಡಿಮೆ ಬೆಲೆಯಲ್ಲಿ ಒದಗಿಸಬೇಕು. ಕಲಾತ್ಮಕವಾಗಿ, ಮಾನಸಿಕವಾಗಿ ಸಹಕಾರಿಯಾಗುವಂತೆ ಆಕಾಶವಾಣಿ ಹಾಗೂ ದೂರದರ್ಶನ ಕೇಂದ್ರಗಳು ಸುಗಮಸಂಗೀತಕ್ಕೆ ಹೆಚ್ಚು ಹೆಚ್ಚು ಪ್ರಾಶಸ್ತ್ಯ ನೀಡಬೇಕು. ಹಿಂದೆ ಆಕಾಶವಾಣಿ ಸಂಗೀತ ಸಮ್ಮೇಳಗಳಲ್ಲಿ ಏರ್ಪಡಿಸುತ್ತಿದ್ದ ಭಾವಗೀತೆ ಕಾರ್ಯಕ್ರಮ ಇಂದು ರದ್ದಾಗಿದೆ. ಅದು ಪುನರುಜ್ಜೀವನಗೊಳ್ಳಬೇಕು. ಆಕಾಶವಾಣಿ ಹಾಗೂ ದೂರದರ್ಶನ ಕೇಂದ್ರಗಳು ಸುಗಮ ಸಂಗೀತದ ಪ್ರಸಾರದ ವೇಳೆಯನ್ನು ಹೆಚ್ಚಿಸಬೇಕು. ರಾಜ್ಯ ಅಕಾಡೆಮಿ ಸುಗಮ ಸಂಗೀತಕ್ಕೆ ನೀಡಿರುವ ಸ್ಥಾನಮಾನವನ್ನು ಕೇಂದ್ರ ಸಂಗೀತ ನೃತ್ಯ ಅಕಾಡೆಮಿಯು ನೀಡುವಂತೆ ಆಗಬೇಕು. ಇದು ಭಾವಗೀತೆಯ ಬೆಳವಣಿಗೆಗೆ ಸಹಾಯಕಾರಿ. ಇದಲ್ಲದೆ ಕವಿಗಳು, ಗಾಯಕರು, ಸರ್ಕಾರ ಹಾಗೂ ಜನತೆ ಒಟ್ಟುಗೂಡಿ ದುಡಿದಾಗ ಮಾತ್ರ ಸುಗಮ ಸಂಗೀತವೇ ಆಗಲಿ ಬೇರೆ ಯಾವ ಕಲೆಯೇ ಇರಲಿ ಬೆಳೆದು, ಉಳಿದು ಮುಂದಿನ ಪೀಳಿಗೆಗೆ ಒಂದು ಸಾಂಸ್ಕೃತಿಕ ಆಸ್ತಿಯನ್ನು ಉಳಿಸಿಹೋಗಲು ಸಾಧ್ಯ. ಆ ದಿನ ಬೇಗ ಬರಲಿ. ಆ ದಿಸೆಯಲ್ಲಿ ಎಲ್ಲರೂ ಮನಃಪೂರ್ವಕವಾಗಿ ಕೆಲಸ ಮಾಡೋಣ ಎಂದು ಎಲ್ಲರನ್ನೂ ಕಳಕಳಿಯಿಂದ ಕೇಳುತ್ತಿದ್ದೇನೆ. ★ ★ ★ ★ ★ ★

162. Music beyond India

– H.S. Anasuya Kulkarni

"Humanity is one but human races are different. Similarly, music is universal whether singing or instrumental but differs from region to region, country to country and within a country there could be great variations in hue. As the people keep travelling far and wide for various reasons, stories in respect of myths, origin of music and musical instruments, shape of instruments, playing technique, terminology etc. there may have been some, little or no influence at all. In most of the countries, the origin of the music is attributed to supernatural beings, gods, birds, animals, nature and dreams. The origin of string and wind instruments appear to be same in most of the countries e.g., hunter's bow and wind blowing through holes in bamboo's groves or hole stones. The flute is called as the shepherds' instrument in countries including India, Indonesia, Uganda, Ethiopia etc. as it was used by shepherds to overcome boredom while grazing animals. The origin of membranophones is said to be the man himself. Producing sound by clapping hands or hitting by hand against body may have been the origin of membranophones. Man has also taken inspiration from sounds produced by birds like wood-pecker, pecking its beak for making a hole in the trunk of a tree or a lizard hitting its tail against a hole in a tree etc. Our forefathers knew that putting a parchment over a cavity in wood or even ground in case of 'Bhoomi Dundubhi' creates resonance. They used it for creating music.

With regard to the mythological aspect, in India, Shiva is the originator of music and creator of Damaru and in Indonesia, it is Giri Nata, that is Shiva, and he is the inventor of gongs.

It is fascinating to see lime stones producing musical sounds. In Indonesia, Gamelan music is imitated on stalactites and stalagmites, the natural lime stones in Guha Tabuhan in Central Java. Similarly, in Cango caves about 500 kms. from Cape Town towards east, in South Africa, the sounds of xylophones and drum was produced on stalagmites.

There may be similarities in the construction of musical instruments, but names and playing techniques differ, is worth mentioning. Ugandan lyre called Endongo and Ethiopian Krar (bowl lyre) are almost similar in

construction. But the Ugandans use both the hands to play whereas, the Ethiopians use only one hand to play. In Endongo, the tuning is constant for all the melodies, whereas the tuning has to be changed in Krar according to the melodies. Ancient Yazh of India and bow harp Adungu of Uganda are almost similar. Wooden xylophones (looks crude) of Uganda and Gambang (looks quite refined) of Indonesia are quite similar in construction. Kettle drums like Nagara in India, Negarit of Ethiopia, and drums of Uganda are almost similar in construction, in use and status given to them. These drums are used in making important announcements, sending out messages (In India particularly, with the advent of telephones and telegraphs, sending messages through the medium of drums is not in use. However, Nagara is used in villages to make important announcements). The official gazette of the Government of Ethiopia is called 'Negarit'. Like this, there are many instruments prevailing in different countries for comparison.

In respect of carvings on the musical instruments, there are similarities. Dragon face may be seen on some instruments of India, Indonesia, Bhutan and other countries, e.g. Veena of India, stand of musical instruments of Indonesia and Dramyan, a string instrument of Bhutan.

Similarly, there are many similarities in observance of taboos while making instruments so that they produce good sound and lasts long; although restrictions are breaking down, ladies are prohibited from playing certain instruments in India, Indonesia, Papua New Guinea, Uganda, Ethiopia etc. ; family lineage with respect to instruments, e.g. mother and child relationship is attributed to clay flute set in Uganda; in Papua New Guinea, from biggest to the smallest Garamut drums are assigned names such as Grandfather, Grandmother, Father, Mother, First son, Second son; the strings of Rebab are classified as male and female; Karadi Taala of Karnataka, male is the big drum with Panchama Swara and the small drum with Shadja Swara is said to be female drum; generally instruments with lower pitch are called male and high pitched ones are termed as female instruments; instruments such as Nagara/Tavil is considered as religious in India and in Ethiopia. Bagenna is a religious instrument and it is not played outside churches.

Regarding musicography, some countries have notations using numerals, i.e. numbers for the strings and fingers and also Western notation system. Swaras or notes are given special names like Ding, Dang, Deng, Dung in Bali (Indonesia); Gi, Ro, Lu, Pat, Ma, Nem, Pi in Java (Indonesia); Yek, Du, Si, Tchar, Schash, heft by the Persians; or Alif, Beh,

Sim, Dal, He, Wan, Zam by the Arabs. In Vedic times, in India, numerals were used for notation.

Time theory, i.e. particular modes or Raagas appropriate to the times of the day are noticed in other countries also. In Indonesia, melodies are classified for playing upto mid-day, until 3 p.m., and until 6 p.m. At 6 p.m., all the music is stopped for sometime. Time theory is strictly followed in Wayang (shadow) plays. In Papua New Guinea, Nele Muke flute is played between 3 - 4 a.m. In Persian mode, Rast be sung before sunrise, Rahavi is a morning mode and Iraq is best at 9 a.m., Bu-Silik and Ussaq are evening Raagas; Huseini, Nawa Hejagare to sing at night and mid-night respectively. Hindustani musicians follow the Time theory.

The use of Jeevala (thread used on the bridge below the strings) is seen in Ethiopian lyre Bagenna.

It is difficult to generalise on the development of music and musical instruments. However, it is safe to say that they developed in their respective areas depending upon the natural environment and how strong was the interaction within the population and external influence in its shaping. What is most significant is that in almost all the countries, music plays a very important role from birth to death, both in sorrow and joy, social gathering etc. touching every aspect of human life. ★ ★ ★ ★

1999

163. Critics in the dock

– Sakuntala Narasimhan

"People ask for criticism but they want only praise," said a leading music critic in the course of a seminar recently, two other leading critics too have made the same point while commenting on the role of critics in today's cultural milieu, and their remarks should be of topical relevance now, with the season of music conferences and festivals in full swing.

There is no way a critic reviewing concerts for a metropolitan newspaper can attend, and sit through, every single concert that is put up, especially if there are several on, at the same time, at different venues; so they pick and choose – and as always in any such situation where the question of picking and choosing arises, there is an inevitable clamour on the part of the artistes to be noticed, to inveigle the reviewer to one's own (or one's daughter's, or wife's or son's) performance, because a good review in a newspaper means one lakh or more readers will form their opinion from what the critic says.

A review can make or mar an artiste's ascent to fame, fortune and foreign trips. With royal patronage gone, it is now "popular following" that decides who will be patronised, and this "popular following" in turn takes its cues largely from what the papers (meaning critics) say.

The power of the critic, then is great as "king-maker" and as "toppler" and when considerable power, to make or to mar, lies in someone's hand who monitors *critics* for impartiality and mature judgement?

How impartial can a critic be when someone who has been a friend for two decades sends his car to collect him (or her for his daughter's *arangetram* or music concert? Besides does one give a charitable assessment just because say, the performer is a young man and very few men are taking to classical music in a professional way? Or does one pan to poor fellow and highlight the faults in his presentation and kill his enthusiasm?

If the critic's role is to protect and nurture the art, will this purpose be served by leniency, or by strictness (for one can argue both ways, with validity)? What is the role of the critic in a situation of flux like this when PR requirements have assumed epidemic proportions, and those who do not have a printed biodata on art paper with a glossy colour photo ready to hand out to the press, and those who do not know how to give advance intimation to the news editor requesting coverage never get noticed however much merit their performance may have?

Cases are not unknown where someone gets assigned to do reviews not because he or she is the most suitable person but because some influential relative or friend has "put in a word" with the management Cases are also not unknown where someone gets asked to cover a concert "because the venue is close to where he lives and the regular reviewer is not prepared to go all the way to that corner of the city to cover the event" (and there is pressure on the paper, from "higher up" to cover it). Critics are also known to have been eased out of further assignments after an artiste to whom he gave a bad review brought pressure on the paper to have him removed.

On the one hand then, there is the inordinate power to boost; on the other, pressure extraneous, to manipulate critical appraisals. As a result criticism itself has acquired a bad name and 'critic' has become a derisive term.

At least one senior critic, the famous Subbudu (P.V. Subramanian) of Delhi, who is known for his pungent judgments has been physically manhandled and had his clothes ripped by a faction that was enraged by his candid comments. Others have been denounced as musicians manque who cannot perform and, therefore, make a profession of criticising others and getting paid for it.

How much validity is there in all these uncharitable reactions? Who can answer this better than three of the leading music critics of the country, all of whom have been the field for almost four decades and have established themselves and their credibility as seasoned reviewers?

Subbudu is now well into his 70s and travels from Delhi to the south of the music season every winter to "tear up" those who in his opinion

deserve to be torn up of the quality of their music (He also praises, and when he does applaud, he applauds generously). B.V.K. Sastry of Bangalore has known several of the leading musicians of the post independence years as close friends and has written exclusively on music and dance. Mohan Nadkarni of Bombay has likewise, personally known and heard most of the stalwarts of the Hindustani music scene of the last 40 years.

"Today, the media gives priority only to three areas of coverage – ministers, murders, and movies," says Sastry; if he quotes the horay saying in Sanksrit, *Satyam brooyat priyam brooyat* (tell the truth but only if it is palatable!) to make the point that artistes seldom want their faults to be pointed out, Nadkarni in turn quotes Somerset Maugham – "People ask for criticism but they only want praise." He adds "Mallinatha could not have written *Sakuntalam* and Bradley could not have written Shakespeare," to make the point that it is not necessary for a critic to be a performer in order to validate his contribution to culture.

While Sastry points out that criticism in the western sense does not really exist in India, Nadkarni adds that "the critic is often at loggerheads with the artiste (especially when the later happens to be a celebrity and has influential patrons and fans)". He speaks from "personal experience" when he points out that the critic is "praised sky-high if his comments about a performer are favorable and dubbed a badatmeez (scoundrel) when his assessment is unpalatable to the artiste!"

The real mischief comes about when critics play a double role turn impresarios. "Some critics are also performer," Nadkarni points out, adding that this then become a "society of mutual promoters".

(I can corroborate- that I am flabbergasted by the number of newspapers that blithely ask me to do reviews, without even a routine question raised about whether I will be unbiased while being a performer myself, and whether I am capable of dispassionate assessment).

To the basic requirements of competence and integrity, Subbudu adds one more – the trust of the editor who should be capable of standing by the critic's evaluation in the face of unethical pressures from outside elements. Unless the editor has absolute faith in his critic/reviewer there can be no true, dispassionate and fearless evaluation.

Sastry, Nadkarni and Subbudu all unanimously advise artistes "not to waste energy on PR work" – "Your performance will be your certificate. I don't want xeroxed comments from earlier reviews," Sastry says. "Concentrate on your art, and the rewards will come." (Currently enough, exactly the same advice was given by Dr. Doraiswamy Iyengar too, some time ago, at a music symposium).

If so many experts insist that there is no short cut to abiding fame, can one take that as the final word? "Why not?" retorts Sastry. There's tinsel, and there's sterling and both can – and do –co-exist.

All three critics are now at a stage where they do not need to bother about having to please anyone and don't need to feel awed by an artiste's reputation. Each one of them stresses the importance of training critics in criticism – just as there are courses for music appreciation, there should also be courses in criticism. At least two of these three veterans have declared themselves ready to train aspiring critics, but the chances of that offer being taken up seem less than ever, given the poor remuneration that reviews bring and the pervasive ambience of political and other kinds of interference. Critics may be king-makers, but there are not too many takers for that thorny seat. ★ ★ ★ ★ ★ ★ ★ ★ ★ ★ ★ ★ ★ ★ ★ ★

Deccan Herald

164. Classical dance in Karnataka past, present and future

– Leela Ramanathan

With the daily burgeoning of classical dance in Karnataka, it has become imperative to attempt some kind of an assessment, which would take in its purview, the origin of dance in our State, its development through the ages, its status and position today, and it's likely future.

ಶಿಲ್ಪಿಗಳ ಮನೆತನದಿಂದ ಬಂದಿಲ್ಲದಿದ್ದರೂ ಪೂಜಾರಿಗಳ ಮನೆತನಕ್ಕೆ ಸೇರಿದ ವಾದಿರಾಜರು "ಶಿಲ್ಪವನ್ನು ಪೂಜಿಸುವ ಬದಲು, ಶಿಲ್ಪ ಮಾಡುವ ಕೈಂಕರ್ಯವನ್ನು ಕೈಗೊಂಡಿದ್ದರು", ಅಲ್ಲದೆ ಯಾವ ಸಂಪ್ರದಾಯಬದ್ಧವಾದ ಪದ್ಧತಿಯಲ್ಲಿ ಕೂಡ ಅವರು ಅಧ್ಯಯನ ಮಾಡಲಾಗಲಿಲ್ಲ. "ಸ್ವಯಂ ಗುರು" ಎಂದು ಶಾಸ್ತ್ರಿಗಳೇ ಹೇಳಿದಂತೆ, ಅವರ ಪರಿಸ್ಥಿತಿ ಕೂಡ, ಯಾವ ರೀತಿಯ ಕ್ರಮಬದ್ಧ ಅಧ್ಯಯನವನ್ನೂ ನಡೆಸದಂತಿತ್ತು. ಹುಟ್ಟಿದ ಊರಾದ ದೇವಲಕುಂದ ಗ್ರಾಮ (ಕುಂದಾಪುರ)ವನ್ನು ಬಿಟ್ಟು, ತಂದೆ ತೀರಿಕೊಂಡ ಮೇಲೆ 9ನೇ ವಯಸ್ಸಿನಲ್ಲೇ ತಾಯಿಯೊಡನೆ ಜೀವನ ನಿರ್ವಹಣೆಗಾಗಿ ಮೈಸೂರು - ನಂಜನಗೂಡುಗಳನ್ನು ಸೇರಬೇಕಾಯಿತು. ಶಾಲಾ ವಿದ್ಯಾಭ್ಯಾಸದಲ್ಲಿ ಮನಸ್ಸಿಲ್ಲದ ಹುಡುಗ ವಾದಿರಾಜರಿಗೆ ನಂಜನಗೂಡಿನ ಭವ್ಯ ದೇವಾಲಯ, ಅಲ್ಲಿಯ ಗೋಪುರದಲ್ಲಿ, ಒಳಭಾಗದಲ್ಲಿದ್ದ ಶಿವಲೀಲಾ ಮೂರ್ತಿಗಳು ಒಂದು ಆಕರ್ಷಣೆಯ ಕೇಂದ್ರವಾಗಿದ್ದವು. ಆ ವೇಳೆಗಾಗಲೇ ಮೈಸೂರಿನ ಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆಯಲ್ಲಿ 2 ವರ್ಷ ಗಂಧದ ಕೆತ್ತನೆಯ ವಿಭಾಗದಲ್ಲಿ ಕಲಿತಿದ್ದರು. ಅದನ್ನೂ ಮುಂದುವರೆಸಲಾಗದೆ ನಂಜನಗೂಡಿಗೆ ಬಂದಾಗ, ದೇವಾಲಯದಲ್ಲೇ ಕೈಗೆ ಸಿಕ್ಕ ಬಳಪ, ಇದ್ದಿಲು ಚೂರುಗಳಿಂದ ರೇಖಾಚಿತ್ರ ಬಿಡಿಸುವ ಗೀಳು, ಅದರಲ್ಲೇ ಕಾಲಕಳೆಯುತ್ತಿದ್ದರು. ಮುಂದೆ ತಾಯಿಯ ಅನಾರೋಗ್ಯ, ಸಾವುಗಳಿಂದ ಮೈಸೂರಿಗೆ ಬಂದು ಜೀವನಕ್ಕಾಗಿ ಹೋಟೆಲ್‌ಗಳಲ್ಲಿ ಕೆಲಸಮಾಡಬೇಕಿತ್ತು. ಹತ್ತಾರು ವರ್ಷ ಇದರಲ್ಲೇ ಕಳೆದರು. ಶಿಲ್ಪ ಕಲಿಯುವ, ರಚಿಸುವ ಬಯಕೆಯೂ ತೀವ್ರವಾಗಿ ಬೆಳೆಯುತ್ತಲೇ ಇತ್ತು. ಕೊನೆಗೂ ಈ ಎಲ್ಲ ಕೆಲಸಗಳನ್ನೂ ಬಿಟ್ಟು ಶಿಲ್ಪದಿಂದಲೇ ಬದುಕು ಮಾಡಬೇಕೆಂದು ತೀರ್ಮಾನಿಸುವ ಹೊತ್ತಿಗೆ ಅವರಿಗೆ 26 ವರ್ಷಗಳಾಗಿತ್ತು. ಅನೇಕ ಕಷ್ಟ ಕಾರ್ಪಣ್ಯಗಳ ನಡುವೆಯೂ ಕಲೆಯಲ್ಲಿ ಒಂದು ಸಿದ್ಧಿ ಪಡೆದು, ಒಂದು ಸ್ಥಾನ ಗಳಿಸಿದರು. ಈ ರೀತಿಯ ಬೆಳವಣಿಗೆ ಒಂದು ಅಲೆಮಾರಿ ಜೀವನದಂತೆ ಎಂದು ಶಾಸ್ತ್ರಿಗಳು ವಾದಿರಾಜರ ಬಗ್ಗೆ ಬರೆಯುತ್ತಾ ಹೇಳುತ್ತಾರೆ. "ಶಾಸ್ತ್ರಗಳ ಪರಿಚಯವಿಲ್ಲ, ಶಿಲ್ಪಿಗಳ ಮನೆತನದಿಂದ ಬಂದವರಲ್ಲ, ಕಲಿಯುವ ಬಯಕೆಯೇ ಅವರ ಅಧ್ಯಯನಕ್ಕೆ ಕಾರಣ, ಪರಂಪರಾಗತವಾಗಿ ಇರುವ ನಮ್ಮ ದೇವಾಲಯಗಳೇ, ಅದರಲ್ಲಿರುವ ಮೂರ್ತಿಗಳೇ, ವಾದಿರಾಜರ ಆಸಕ್ತಿಗೆ, ಅಧ್ಯಯನಕ್ಕೆ ನೀರೆರೆದದ್ದು" – ಹೀಗೆ ಏನೂ ಇಲ್ಲದ ಒಬ್ಬ ಬಡ ಬಾಲಕ, ಸ್ವಯಂ ಪರಿಶ್ರಮದಿಂದ ಶಿಲ್ಪದಲ್ಲಿ ಪರಿಣತಿ ಪಡೆದು, ರಾಷ್ಟ್ರಪ್ರಶಸ್ತಿ ಪಡೆದು, ದೇಶದ ಪ್ರತಿನಿಧಿಯಾಗಿ ಪರದೇಶಕ್ಕೆ ಹೋಗಿದ್ದುದೂ ಒಂದು ಅಚ್ಚರಿಯ ಸಂಗತಿಯಲ್ಲವೇ? ದಿನನಿತ್ಯದ ಯಾವ ಕೆಲಸಗಳಲ್ಲೂ ಕಟ್ಟುಪಾಡುಗಳಿಗೆ ತಮ್ಮನ್ನು ಸಿಕ್ಕಿಸಿಕೊಳ್ಳದೆ ಇದ್ದ ವಾದಿರಾಜರು, ಕೆಲಸದ ವಿಷಯದಲ್ಲಿ ಮಾತ್ರ, ಬಹಳ ಕಟ್ಟುಪಾಡುಗಳಿಗೆ ಸ್ವಯಂ ಬಂಧಿತರಾಗುತ್ತಿದ್ದರು. ಮಾಡುವ ಕೆಲಸ ಯಾವುದೇ ಇರಲಿ, ಹಣ ಬರಲಿ, ಬಾರದಿರಲಿ, ಅದು ತಮಗೆ ಅಧ್ಯಯನ ಮಾಡಲು ದೊರೆತ ಅವಕಾಶ ಎಂದು ಅದನ್ನು

ಬಹಳ ಶ್ರದ್ಧೆಯಿಂದ, ಶಿಸ್ತಿನಿಂದ ಮಾಡುತ್ತಿದ್ದರು. ಊಟ-ತಿಂಡಿಯಾಗಲೀ, ಸ್ನಾನ-ಪೂಜೆಯಾಗಲೀ, ಹಬ್ಬ ಹರಿದಿನವಾಗಲೀ, ಯಾವುದೂ ಸಮಯಕ್ಕೆ ಸರಿಯಾಗಿ ನಿರ್ವಹಿಸಬೇಕೆಂಬ ಯಾವ ನಿಯಮವೂ ಅವರಿಗಿರಲಿಲ್ಲ, ಶಿಲ್ಪದಲ್ಲಿ ಮಾತ್ರ ಮೊದಲಿಂದ ಕೊನೆಯವರೆಗೂ ಒಂದು ಶಿಸ್ತನ್ನು ಪಾಲಿಸುತಿದ್ದುದು ವಿಚಿತ್ರವೆನಿಸುತ್ತಿತ್ತು. ಶಿಸ್ತು ಎಂದರೆ ಒಂದು ಕ್ರಮಬದ್ಧವಾದ ಪದ್ಧತಿ, ಶಿಲ್ಪ ರಚಿಸುವುದರಲ್ಲಿ ಅವರು ಅನುಸರಿಸುತಿದ್ದುದು. ಅಳತೆಗೆ ತಕ್ಕ ರೇಖಾಚಿತ್ರ ತಯಾರಿಸಬೇಕು, ಕಲ್ಲು, ಮರ ಅಥವಾ ಮತ್ತಾವುದಾದರೂ ಮಾಧ್ಯಮಕ್ಕೆ ತಕ್ಕಂತೆ ಒಂದು ಸಂಪ್ರದಾಯ ಶೈಲಿಯನ್ನನುಸರಿಸಿ ರೇಖಾಚಿತ್ರ ಸಿದ್ಧಪಡಿಸುತ್ತಿದ್ದರು. ಈ ರೇಖಾಚಿತ್ರದಿಂದಲೇ ಅಧ್ಯಯನ ಪ್ರಾರಂಭ, ಅದಕ್ಕೆ ಸಂಬಂಧಪಟ್ಟ ಹಲವಾರು ಪುಸ್ತಕಗಳನ್ನೂ ಸಂಗ್ರಹಿಸಿದ್ದರು. ರೇಖಾಚಿತ್ರದ ನಂತರವೇ ಕಲ್ಲಾಗಲೀ, ಮರವಾಗಲೀ, ಅದರ ಮೇಲೆ ರೇಖಾಚಿತ್ರ ಮೂಡಿಸಿ, ಬೇಡದ ಭಾಗಗಳನ್ನೆಲ್ಲಾ ತೆಗೆದು ಹಂತ ಹಂತವಾಗಿ ಕೆಲಸ ಮಾಡುತ್ತಿದ್ದರು. ಯಾವ ಹಂತದಲ್ಲೇ ಹಾಗೆಯೇ ಬಿಟ್ಟರೂ ಮಾಡುತ್ತಿದ್ದ ಶಿಲ್ಪ, ಆಕರ್ಷಕವಾಗಿ, ಸ್ಫುಟವಾಗಿ ಇರುತ್ತಿತ್ತು. ಕಲಿಯುವವರಿಗಂತೂ ಅನುಸರಿಸಲು, ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳುವಂತಹ ಒಂದು ವಿಧಾನವಾಗಿತ್ತು ಆ ಕೆಲಸದ ರೀತಿ. ಶಿಷ್ಯರಿಗೆಲ್ಲಾ ಇದೇ ಮಾರ್ಗ ಅನುಸರಿಸಲೇ ಬೇಕೆಂದು ಕಡ್ಡಾಯ ಮಾಡುತ್ತಿದ್ದರು. ``ರೇಖಾಚಿತ್ರ ಸರಿಯಾಗಿ, ಸಂಪೂರ್ಣವಾಗಿ ಮಾಡಿಕೊಂಡರೆ ಅರ್ಧಶಿಲ್ಪ ಮಾಡಿದಂತೆ'' ಎಂದು ಯಾವಾಗಲೂ ವಾದಿರಾಜರು ಹೇಳುತ್ತಿದ್ದರು. ದೇವಾಲಯಗಳ ಸಂದರ್ಶನಕ್ಕೆ ಶಿಷ್ಯರನ್ನು ಕರೆದುಕೊಂಡು ಹೋದಾಗ, ಅಲ್ಲಿ ಹುಡುಕಿ, ಹುಡುಕಿ, ಇಂತಹ ವಿವರಗಳನ್ನು ಆರಿಸಿ ತೋರಿಸುತ್ತಿದ್ದರು. ಇಂತಹ ಅಧ್ಯಯನ ಅನೂಚಾನವಾಗಿ ನಡೆದು ಬಂದದ್ದೆಂದು ಹೇಳುತ್ತಿದ್ದರು. ತಾವು ಮಾಡುತ್ತಿದ್ದ ಕೆಲಸಗಳಲ್ಲಿ, ನಮಗೂ ಕೆಲಸ ಮಾಡಲು ಬಿಡುತ್ತಿದ್ದರು. ಅವರು ಮಾಡಿದ ರೇಖಾಚಿತ್ರ ಮುಂದೆ ಇಟ್ಟುಕೊಂಡು, ಸುಲಭವಾಗಿ ಕೆಲಸ ಮಾಡಬಹುದಿತ್ತು. ಆದರೆ ಈ ವಿಧಾನವನ್ನು ಎಲ್ಲ ಶಿಲ್ಪಿಗಳೂ ಅನುಸರಿಸುವುದಿಲ್ಲ. 'Sketch ' ಎಂದು ಹೇಳುವ ರೀತಿಯಲ್ಲಿ ನೇರವಾಗಿ ಕಲ್ಲಿನ ಮೇಲೆಯೇ ಗುರುತು ಮಾಡಿಕೊಂಡು ಕೆಲಸ ಪ್ರಾರಂಭಿಸುವವರೇ ಹೆಚ್ಚಿನ ಮಂದಿಯಿದ್ದಾರೆ. ``ಇಂತಹ ಪದ್ಧತಿ ಹೆಚ್ಚಿನ ಪ್ರಬುದ್ಧತೆ ಗಳಿಸಿದ ಮೇಲೆ ಮಾತ್ರ, ಅನುಸರಿಸಲು ಸಾಧ್ಯ, ಆದರೂ ಅಂತಹ ಸಂದರ್ಭಗಳಲ್ಲಿ ನಮ್ಮ ಮನಸ್ಸಿನಲ್ಲಿರುವಂತೆಯೇ ಶಿಲ್ಪ ಬರುವುದೆಂಬುದು ಅನುಮಾನ. ಮೊದಲೇ ಕಲ್ಲು, ಕಡಿದ ಮೇಲೆ ಮುಗಿಯಿತು. ರೇಖಾಚಿತ್ರ ಬೇಡಾ ಎನ್ನುವ ಮನೋಭಾವ ಸರಿಯಲ್ಲ, ಈ ಪದ್ಧತಿಯೇ ಹಿಂದಿನಿಂದಲೂ ಇದ್ದಿದ್ದರೆ ಇಂದಿಗೆ ನಮ್ಮ ದೇಶದಲ್ಲಿ ಇಷ್ಟೊಂದು ಸುಂದರವಾದ ದೇವಾಲಯಗಳಿರುತ್ತಿತ್ತೇ? ಯಾವುದನ್ನಾದರೂ ಶಾಸ್ತ್ರೀಯ ಅಧ್ಯಯನದ ಮೂಲಕವೇ ಸಾಧಿಸಬೇಕು'' ಎಂದು ಕಲಿಯುವಾಗ ಅನುಸರಿಸಬೇಕಾದ ವಿವರಗಳನ್ನು ಹೇಳುತ್ತಿದ್ದರು.

ಕಲಿಯುವುದಕ್ಕೆ ಮಾತ್ರ ಇಂತಹ ಶಿಸ್ತು, ಶ್ರದ್ಧೆಗಳು ಮುಡುಪಾಗಿದ್ದುವು; ಇನ್ನಿತರದ ಯಾವ ಕೆಲಸದಲ್ಲೂ ಯಾವ ಶ್ರದ್ಧೆಯೂ ಇರುತ್ತಿರಲಿಲ್ಲ. ಬಹುಶಃ ಮನಸ್ಸನ್ನು ಇಂತಹ

ಕೆಲಸಕ್ಕೆ ಕೇಂದ್ರೀಕರಿಸಿದ ಮೇಲೆ, ಬೇರೆ ಕೆಲಸ ಮಾಡುವಾಗ, ಅದನ್ನು ಸ್ವತಂತ್ರವಾಗಿರಲು ಬಿಡುತ್ತಿದ್ದರೇನೋ? ವಿಚಿತ್ರವಾದ ಮನಸ್ಸು ಅವರದು, ಕೆಲಸ ಮಾಡುವುದಕ್ಕೆ ಇಂತಹ ವೇಳೆಯೆಂಬುದಿರುತ್ತಿರಲಿಲ್ಲ, ಹಸಿವಾದಾಗ ಏನಾದರೂ ಸ್ವಲ್ಪ ತಿಂದು ಮತ್ತೆ ಕೆಲಸಕ್ಕೆ ಕುಳಿತರೆ, ಸಮಯದ ಪರಿವೆಯೇ ಇರುತ್ತಿರಲಿಲ್ಲ. ಹೆಂಡತಿ, ಮಗ, ಇವರಿಗಾಗಿ ಕಾದು ಕಾದು ಬೇಸತ್ತು ಇವರನ್ನು ಬಿಟ್ಟೇ ಊಟ ಮಾಡುತ್ತಿದ್ದುದೂ ಉಂಟು. ಕಷ್ಟಜೀವನದ ಕಾಲದಲ್ಲಿ, ಬೇರೆಯವರ ಇಚ್ಛೆಗೆ ಮಣಿಯುತ್ತಾ ಬದುಕುತ್ತಿದ್ದುದೂ, ಬಹುಶಃ ಇದಕ್ಕೆ ಕಾರಣವಿರಬಹುದು. ತಮಗೆ ಬೇಕಾದಂತೆ, ಯಾವ ಕಟ್ಟುಪಾಡುಗಳಿಗೂ ಸಿಗದೆ, "ಸ್ವತಂತ್ರ ಮನೋವೃತ್ತಿಯ ಕಲಾವಿದನಾಗಿ, ಕೇವಲ ಕಲೆಗಾಗಿಯೇ ಬದುಕುತ್ತಿದ್ದರು" ಎಂಬುದು ಬಹಳ ಸ್ಪಷ್ಟವಾಗಿ ಕಾಣುತ್ತಿತ್ತು.

ತಮ್ಮ ಕೆಲಸದ ಬಗ್ಗೆ ಬೇರೆಯವರ ಅಭಿಪ್ರಾಯ ತಿಳಿದು, ಅವರು ಹೇಳುವ ಪ್ರತಿಯೊಂದು ಟೀಕೆಯನ್ನೂ ಗಮನಿಸುತ್ತಿದ್ದರು. ಜಿ.ಪಿ.ಕೆ. ಯವರ ಬಗ್ಗೆ ಅವರಿಗೆ ಅಪಾರವಾದ ಅಭಿಮಾನವಿತ್ತು.

ದೆಹಲಿಯಿಂದ ಪುಷ್ಪರಾಜ್ ಬೇತಾಲ್ ಎಂಬ ಶಿಲ್ಪಿಯೊಬ್ಬರು ಕರ್ನಾಟಕದ ಗುಲ್ಬರ್ಗಾದಲ್ಲಿ 'International Sculptor's Camp' ನಡೆಸಿದರು. ಇದು ನಡೆದದ್ದು 1993ರಲ್ಲಿ. ಈ ಕ್ಯಾಂಪ್‌ನಲ್ಲಿ ಭಾಗವಹಿಸಲು ಗುಲ್ಬರ್ಗಾದ ಸಂಪ್ರದಾಯ ಚಿತ್ರಕಲಾವಿದರಾದ ಶ್ರೀ ವಿಜಯ ಹಾಗರ ಗುಂಡಿಗಿಯವರು (Co-ordinater) ವಾದಿರಾಜರನ್ನು ಆಹ್ವಾನಿಸಿದರು. ಇಲ್ಲಿಯ ಕೆಲಸಗಳು ಜಾಸ್ತಿಯಿದ್ದುದರಿಂದ ವಾದಿರಾಜರು ಈ Camp ಗೆ ನನ್ನನ್ನು ಕಳುಹಿಸಿದರು. ಅಲ್ಲಿ ಪುಷ್ಪರಾಜ್ ಬೇತಾಲರ ಭೇಟಿಯಾಗಬಹುದೆಂದು ನಾನು ನಿರೀಕ್ಷಿಸಿದ್ದು ಸುಳ್ಳಾಯಿತು. ಈ ಕ್ಯಾಂಪ್‌ನ ಅವಧಿ 1 ತಿಂಗಳು, ನಾವು ಎಷ್ಟು ದಿನ ಬೇಕಾದರೂ ಇರಬಹುದು, ಯಾವ ರೀತಿಯ ಕಟ್ಟುಪಾಡುಗಳೂ ಇಲ್ಲದೆ, ನಮಗೆ ಬೇಕೆನಿಸುವ ಯಾವ ಮಾಧ್ಯಮದಲ್ಲಾದರೂ, ಯಾವ ಶೈಲಿಯ ಕೆಲಸ ಬೇಕಾದರೂ ಮಾಡಬಹುದಿತ್ತು. ಜಪಾನ್, ಇಟಲಿ, ಫ್ರಾನ್ಸ್, ಇಂಗ್ಲೆಂಡ್ ಕಡೆಗಳಿಂದ ಕಲಾವಿದರು ಬಂದಿದ್ದರು. ಇದು ಸ್ವಂತ ಇಚ್ಛೆಯಿಂದ, ಸ್ವಂತ ಖರ್ಚಿನಿಂದ ಹೋಗಿ ಮಾಡಬೇಕಾದ ಕೆಲಸವಾಗಿತ್ತು. ಕಲಾವಿದರಿಗೆ ಇರಲು ಜಾಗ ಹಾಗೂ ಊಟ-ತಿಂಡಿಗಳ ವ್ಯವಸ್ಥೆ ಮಾತ್ರ ಕೊಡಲಾಗಿತ್ತು. ಇದೊಂದು 'International Sculptors Group' ಎಂದು ಕರೆಯಬಹುದಾಗಿದ್ದ ಸಂಸ್ಥೆ. ಹೊಲಗಳ ನಡುವೆಯಿದ್ದ ಒಂದು ಮನೆ, ಅದರ ಸುತ್ತಮುತ್ತಲಿನ ವಿಶಾಲವಾದ ಬಯಲು, ತೋಟ, ಇವುಗಳ ಮಧ್ಯೆ ನಮ್ಮ ಕೆಲಸ ನಡೆಯುತ್ತಿತ್ತು. ಅಲ್ಲಿದ್ದವರೆಲ್ಲ modern sculptors, ನಾನೊಬ್ಬಳೇ ಸಂಪ್ರದಾಯ ಶಿಲ್ಪಿ. ಶಾಸ್ತ್ರೀಯ ಶಿಲ್ಪಗಳಿಗೂ, ಆಧುನಿಕ ಶಿಲ್ಪಕ್ಕೂ ರಚನೆ, ಆಲೋಚನೆ, ನಿರ್ವಹಣೆ ಎಲ್ಲದರಲ್ಲೂ ಎಷ್ಟೊಂದು ಅಂತರವಿಸ್ತಿಸುತ್ತಿತ್ತು. ಅಲ್ಲಿ 10 ದಿನಗಳಿದ್ದೆ. ಅಷ್ಟರಲ್ಲಿ ಅಯೋಧ್ಯೆಯ ಗಲಾಟೆ ಪ್ರಾರಂಭವಾಗುವುದಿತ್ತು. ತಕ್ಷಣ ಹೊರಟು ಬರಲು ವಾದಿರಾಜರು ಟೆಲಿಫೋನ್ ಮಾಡಿದರು. ಹೀಗಾಗಿ ಪುಷ್ಪರಾಜ್ ಬೇತಾಲರನ್ನು ಕಾಣದೆಯೇ ಬಂದಿದ್ದೆ. ಮುಂದೆ ಒಂದು ತಿಂಗಳ ನಂತರವಿರಬಹುದು, ವಿಜಯ ಹಾಗರ ಗುಂಡಿಗಿಯವರು ಪುಷ್ಪರಾಜ್ ಬೇತಾಲರನ್ನು ವಾದಿರಾಜರನ್ನು ಸಂದರ್ಶಿಸಲು

ಕರೆತಂದರು. ಅವರು ಇಲ್ಲಿಯೇ ಎರಡು ಮೂರು ದಿನಗಳಿದ್ದರು. ಪುಷ್ಪರಾಜ್ ಬೇತಾಳರಿಗೆ ಕಲಾವಿದರ ಸಂದರ್ಶನದ ವಿಡಿಯೋ ಮಾಡುವುದೂ ಒಂದು ಹವ್ಯಾಸ. ವಾದಿರಾಜರ ಸಂದರ್ಶನ ಮಾಡಿ B.B.C.ಗೆ ಕಳುಹಿಸಬೇಕೆಂದು ಯೋಜನೆ ಮಾಡಿದರು. ವಾದಿರಾಜರು ಇಂಗ್ಲೀಷ್ ಕಲಿತಿದ್ದು ಕೂಡ, ಸ್ವಂತ ಪರಿಶ್ರಮದಿಂದ. ಹೀಗಾಗಿ ತಮ್ಮ ಮನಸ್ಸಿನ ಭಾವನೆಗಳನ್ನು ಮಾತನಾಡುವಾಗ ಸರಿಯಾಗಿ ಹೇಳಲಾಗದಿದ್ದರೆ, ತಮ್ಮನ್ನು ಸಂದರ್ಶಿಸುವವರಾದರೂ, ಆ ಕೊರತೆಯನ್ನು ತುಂಬಬಹುದೆಂದು ಆಲೋಚಿಸಿ, ಕಲಾವಿಮರ್ಶಕ ಬಿ.ವಿ.ಕೆ.ಯವರನ್ನು ಕೇಳಿದರು. ಸಂಪ್ರದಾಯ ಶಿಲ್ಪದಿಂದ ಹಿಡಿದು ಅತ್ಯಾಧುನಿಕ ಶಿಲ್ಪಗಳ ನೆಲೆಗಳ ಬಗ್ಗೆ ತಿಳಿದುಕೊಂಡಿರುವ ಶಾಸ್ತ್ರಿಗಳೇ ಇಂತಹ ಸಂದರ್ಶನ ಮಾಡಲು ಸಮರ್ಥರೆಂದು ವಾದಿರಾಜರು ಶಾಸ್ತ್ರಿಗಳನ್ನೇ ಕೇಳಿದರು. ಬಿಡದಿಯ ಬಳಿಯಿರುವ, ವಾದಿರಾಜರೇ ಪ್ರಾರಂಭಿಸಿದ ಕುಶಲಕಲಾ ತರಬೇತಿ ಕೇಂದ್ರದಲ್ಲಿ (ಇದಕ್ಕೆ ಕೆನರಾ ಬ್ಯಾಂಕಿನವರು ನೆರವು ನೀಡುತ್ತಿದ್ದಾರೆ) ಈ ಸಂದರ್ಶನ ಮಾಡುವುದೆಂದು ತೀರ್ಮಾನಿಸಿದರು. ಕಲಿಯುವ, ಕಲಿಸುವ ಕಲಾವಿದರೆಲ್ಲ ಒಂದೇ ಕಡೆಯಿದ್ದು, ಕಲಿಸುವ ಯೋಜನೆಯಿದು. ಹತ್ತಾರು ಶಿಲ್ಪಿಗಳು ವಾದಿರಾಜರು ಹಾಕಿಕೊಟ್ಟ ಮಾರ್ಗದಲ್ಲಿ ಕಲಿಸುತ್ತಿದ್ದಾರೆ, ನೂರಾರು ಮಂದಿ ಯುವ ಶಿಲ್ಪಿಗಳು ಕಲಿಯುತ್ತಿದ್ದಾರೆ. ಈ ಸಂಸ್ಥೆ ವಾದಿರಾಜರ ಪ್ರತಿಭೆಯ ಪ್ರತಿಫಲ. ಅಲ್ಲಿಗೆ ವಾದಿರಾಜರು, ಪುಷ್ಪರಾಜ್ ಬೇತಾಲ್, ಶಾಸ್ತ್ರಿಗಳು, ವಿಜಯ ಹಾಗರಗುಂಡಿಗೆ, ನಾನು, ನನ್ನ ಮಗಳೂ ಹೊರಟೆವು. ಈ ಸಂದರ್ಶನ ನೋಡುವ ಕುತೂಹಲ ನನಗೆ. ಬೆಳಗ್ಗೆಯೇ ಹೊರಟು ಮತ್ತೆ ಬರುವಾಗ ಸಂಜೆಯಾಗಿತ್ತು. ಅಲ್ಲಿ ನಡೆದ ಸಂದರ್ಶನದಲ್ಲಿ ಶಾಸ್ತ್ರಿಗಳು ವಾದಿರಾಜರು ಬಯಸಿದಂತೆ, ಅವರ ನಿಜವಾದ ವ್ಯಕ್ತಿತ್ವದ ಹಾಗೂ ಅವರ ಕಲಾದೃಷ್ಟಿಯ ಪರಿಚಯವನ್ನು ಅತ್ಯಂತ ಸಮರ್ಪಕವಾಗಿ ನಡೆಸಿಕೊಟ್ಟರು. ಕಲಾವಿಮರ್ಶೆ ಮಾತ್ರವಲ್ಲ, ಕಲಾವಿದರ ಮನಸ್ಸಿನ ಭಾವನೆಗಳನ್ನು ತಿಳಿದುಕೊಂಡು, ಅವರನ್ನು ಪರಿಚಯಿಸುವ ಶಾಸ್ತ್ರಿಗಳನ್ನು ವಾದಿರಾಜರು ಬಹಳ ಮೆಚ್ಚಿಕೊಳ್ಳುತ್ತಿದ್ದರು.

"But his passion for sculpture was stronger than ever, though it did not bring him much material benefit. It was only by early seventies that he found some sort of stability in life" ಎಂದು ವಾದಿರಾಜರ ಜೀವನದ ಎಲ್ಲ ಹಂತಗಳನ್ನೂ ಕಂಡ ಬಿ.ವಿ.ಕೆ., ವಾದಿರಾಜರಿಗೆ ಶ್ರದ್ಧಾಂಜಲಿ ಅರ್ಪಿಸುವ ಲೇಖನದಲ್ಲಿ ಬರೆದಿದ್ದಾರೆ.

ಶಾಸ್ತ್ರಿಗಳು ಬರೆದಂತೆ ಜೀವನದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತ ಬಂದ ವಾದಿರಾಜರು, "ಈ ಎಲ್ಲ ಸಮಸ್ಯೆಗಳಾಗಲೀ, ತೊಂದರೆಗಳಾಗಲೀ ಏನೂ ಇಲ್ಲ, ನಿಜವಾದ ತೊಂದರೆ ಎಂದರೆ ಸಾವು ಮಾತ್ರ, ಅದನ್ನು ತಪ್ಪಿಸಿಕೊಳ್ಳಲು ಸಾಧ್ಯವೇ? ಬೇರೆ ಯಾವುದೇ ತೊಂದರೆ ಬಂದರೂ ಅದಕ್ಕೆ ಪರಿಹಾರವಿದ್ದೇ ಇರುತ್ತೆ" ಎಂದು, ಯಾವ ಸಂದರ್ಭದಲ್ಲೂ, ಧೈರ್ಯಗೆಡದೆ, ತಮ್ಮ ಕೆಲಸಗಳನ್ನು ಅಷ್ಟೇ ಶ್ರದ್ಧೆಯಿಂದ ಮಾಡುತ್ತಿದ್ದರು. ಜೀವನದ ಯಾವ ಸಮಸ್ಯೆಗಳೂ ಎಂದೂ ವಾದಿರಾಜರನ್ನು ವಿಚಲಿತಗೊಳಿಸಲಿಲ್ಲ.

ವಾದಿರಾಜರ ಕೃತಿಗಳ ಬಗ್ಗೆ ಅತ್ಯಂತ ಸಮರ್ಪಕವಾಗಿ ವಿಮರ್ಶಿಸಿದವರೆಂದರೆ ಬಹುಶಃ ಬಿ.ವಿ.ಕೆ. ಯೊಬ್ಬರು ಮಾತ್ರ ಎನ್ನಬಹುದು. ಆಧುನಿಕ ವಿಮರ್ಶಕರಿಗೆ ಪಾಶ್ಚಾತ್ಯ ದೃಷ್ಟಿಕೋನದಿಂದಲೇ ಕಲಾವಿಮರ್ಶೆ ಮಾಡುವ ಹವ್ಯಾಸ. ಶಾಸ್ತ್ರೀಯ ಶಿಲ್ಪವಾಗಲೀ ಚಿತ್ರಕಲೆಯಾಗಲೀ ಕೇವಲ ಕುಶಲಕಲೆಯಾಗಿ ಕಾಣುವ ಅವರಿಗೆ, ಆಳವಾದ ಅಧ್ಯಯನದಿಂದ ಮೂಡಿಬರುವ ಶಾಸ್ತ್ರೀಯ ಕಲೆಗಳಲ್ಲಿ ಯಾವ ಕ್ರಿಯಾಶೀಲತೆಯನ್ನೂ ಗುರುತಿಸುವುದು ಅಸಾಧ್ಯವಾಗುತ್ತದೆ. ಒಂದಂತೂ ಇಂದಿಗೂ ನಡೆಯುತ್ತಿರುವುದನ್ನು ನೋಡಬಹುದು. ಶಾಸ್ತ್ರೀಯ ನೆಲೆಯಿಂದ ಬಂದ ಉಡುಪುಗಳಿಂದ ಹಿಡಿದು, ಆಭರಣ, ಅಲಂಕಾರಗಳು, ಮನೆಯನ್ನೂ ಅಲಂಕರಿಸುವ ಪೀಠಗಳಿಂದ ಹಿಡಿದು ಮೂರ್ತಿಶಿಲ್ಪಗಳವರೆಗೆ ಬಳಸುವುದು ಅತ್ಯಾಧುನಿಕ ರೀತಿಯ ಒಂದು 'Trend'. ಹೀಗೆ 'Ethnic Quality' ಪಡೆದ ವಸ್ತುಗಳನ್ನು, ಅದೆಷ್ಟೇ ದುಬಾರಿಯಾದರೂ ಬಳಸುವುದೂ ಒಂದು fashion. ಆದರೆ ಅದೇ ಕಲಾತ್ಮಕ ವಸ್ತುಗಳನ್ನು, ಶಿಲ್ಪಗಳನ್ನು, ಕಲಾತ್ಮಕತೆ, ಕ್ರಿಯಾಶೀಲತೆಯ ದೃಷ್ಟಿಯಿಂದ ನೋಡಲು ಇಂದಿನ ಅನೇಕ ವಿಮರ್ಶಕರಿಗೆ ಸಾಧ್ಯವಾಗಿಲ್ಲ. ಮಾಡುವ ಪ್ರತಿಯೊಂದು ಕೆಲಸವೂ ಕೇವಲ ಹೊಸತಾಗಿದ್ದರೆ ಸಾಕು. ಹೊಸ ಪ್ರಯೋಗ, ಹೊಸ ದೃಷ್ಟಿಕೋನ ಇವೆಲ್ಲ ಪಾಶ್ಚಾತ್ಯರ ಪ್ರಭಾವದಿಂದ ಬಂದಿದ್ದು. ಭಾರತದಲ್ಲಿ ಜೀವನ-ಕಲೆ, ಒಂದಕ್ಕೊಂದು ಬೆರೆತು ಬಂದಿದ್ದರಿಂದ ಅವರು ಬಳಸುತ್ತಿದ್ದ ಪೂಜಾ ವಸ್ತುಗಳು - ದಿನನಿತ್ಯದ ವಸ್ತುಗಳಿಂದ ಹಿಡಿದು ಅಲಂಕಾರ ವಸ್ತುಗಳವರೆಗೆ ಬಹಳ ಕಲಾತ್ಮಕವಾಗಿ ಸಿದ್ಧಮಾಡುತ್ತಿದ್ದರು - ಇಂದಿನಂತೆ ಪ್ಲಾಸ್ಟಿಕ್ ಯುಗದ ಧಾಳಿಯಾಗಿರಲಿಲ್ಲ. ಆದರೂ, ಇಂದಿಗೂ ಅಂತಹ ವಸ್ತುಗಳನ್ನು ಬಳಸುವುದು ಸುಸಂಸ್ಕೃತಿಯ ಪ್ರತೀಕವೆಂದು ಭಾವಿಸುವ ಇವರಿಗೆ, ಅದನ್ನು ರಚಿಸುವ ಕಲಾವಿದರ ಮನೋಭಾವದಲ್ಲಾಗಲೀ, ಕೃತಿಯಲ್ಲಾಗಲೀ, ಯಾವ ಕ್ರಿಯಾಶೀಲತೆಯೂ ಏಕೆ ಕಾಣುತ್ತಿಲ್ಲ? ಅದೆಲ್ಲ ಬರಿ craft ಎಂದು ಏಕೆ ಹೇಳಬೇಕು? ಎಲ್ಲವನ್ನೂ ಪಾಶ್ಚಾತ್ಯ ದೃಷ್ಟಿಕೋನದಿಂದಲೇ ಅಳೆಯುತ್ತಾ "ತಲೆಗೆಲ್ಲಾ ಒಂದೇ ಮಂತ್ರ" ಎಂದಿರುವುದೇ ಇದಕ್ಕೆ ಕಾರಣ. ಶಾಸ್ತ್ರೀಯ ಕಲೆಗಳಿಗಂತೂ ಇದು ಯಾವ ರೀತಿಯಿಂದಲೂ ಉಪಯೋಗವಾಗುವುದಿಲ್ಲ.

ವಾದಿರಾಜರು 1993 ಫೆಬ್ರವರಿಯಲ್ಲಿ ತೀರಿಕೊಂಡರು. ಆಗ ಹಲವಾರು ವಿಮರ್ಶಕರು ಅವರ ಬಗ್ಗೆ ಹಲವಾರು ಪತ್ರಿಕೆಗಳಲ್ಲಿ ಬಗೆ ಬಗೆಯ ಲೇಖನಗಳನ್ನು ಬರೆದರು. ಒಬ್ಬರ ಲೇಖನವಂತೂ ಮನಸ್ಸಿಗೆ ಬಹಳ ನೋವನ್ನು ತಂದಿತು. ಪಾಶ್ಚಾತ್ಯ ದೃಷ್ಟಿಕೋನದಿಂದಲೇ ಎಲ್ಲವನ್ನೂ ಅಳೆಯುವ ಈ ವಿಮರ್ಶಕರು, ವಾದಿರಾಜರು, ಯಾವ ಮಾಧ್ಯಮದಲ್ಲಿ, ಯಾವ ಕೃತಿಯನ್ನು ರಚಿಸಿದರು ಎಂಬುದನ್ನೂ ತಿಳಿದುಕೊಳ್ಳದೆ, ತಮಗೆ ತೋಚಿದಂತೆ ಲೇಖನ ಬರೆದಿದ್ದರು. ವಾದಿರಾಜರು ಕೆಂಪು ಕಲ್ಲಿನಲ್ಲಿ 4 ಅಡಿಯ 'ನಾಯಿಕಾ' ಎಂಬ ಶಿಲ್ಪವನ್ನು ರಚಿಸಿದ್ದರು. ಅದು ಖಜುರಾಹೋದ ಶಿಲ್ಪದಿಂದ ಪ್ರೇರಿತವಾಗಿದ್ದರೂ, ಅದನ್ನು ಚೋಳ ಶೈಲಿಯಲ್ಲಿ ರಚಿಸಿದ್ದರು. ಮುಖದ ಭಾವನೆ, ಪ್ರಮಾಣಬದ್ಧವಾದ ಸುಂದರ ಮೈಕಟ್ಟು, ಅಂತಹ ಕೃತಿಯಲ್ಲಿ ಜೀವಂತಿಕೆ ಮೂಡಿಸಲು ವಾದಿರಾಜರು ಬಳಸಿದ ನಸುಕೆಂಪುಕಲ್ಲು, ಇವೆಲ್ಲ ಒಂದಕ್ಕಿಂತ

ಒಂದು ವಾದಿರಾಜರ ಕಲಾ ಚಾತುರ್ಯವನ್ನು ಸಾರಿ ಹೇಳುವಂತಿತ್ತು. ಮರವಷ್ಟೆಂದರೆ ದೂರದಿಂದಲೇ ನೋಡಿ, "ಅದು plasterನಲ್ಲಿ ಮಾಡಿ ಬಣ್ಣಹಾಕಿದ್ದ ಶಿಲ್ಪ" ಎಂದು ವಿಮರ್ಶಕರು ಬರೆದಿದ್ದರು, ಸಮರ್ಥಿಸಿಕೊಂಡರು. ಒಂದೊಂದೂ ಮಾಧ್ಯಮದಲ್ಲೂ ಕೃತಿಯ ಭಾವನೆಗೆ ಪ್ರತಿಷ್ಠೆ ತರುವ ಗುಣವಿರುತ್ತದೆ ಎಂದು ತಿಳಿಯಬೇಕಿತ್ತಲ್ಲವೆ? ಸಂಪ್ರದಾಯ ಶೈಲಿಗಳ ಬಗ್ಗೆ, ಕಲಾವಿದರ ಬಗ್ಗೆ ಆದರವಿಲ್ಲದಿದ್ದರೆ ಬೇಡ, ಅದರ ಬಗ್ಗೆ ತಮಗಿರುವ ಅಜ್ಞಾನವನ್ನಾದರೂ ಪ್ರದರ್ಶಿಸಬಾರದೆಂದು ತಿಳಿಯಬಾರದಿತ್ತೇ? ಅಂತಹ ವಿಮರ್ಶೆಗೆ ಬೆಲೆಕೊಡಲು ಸಾಧ್ಯವೇ? ಅಂತಹ ವಿಮರ್ಶಕರು ಕಾಣದಿದ್ದ ಹೊಸದೃಷ್ಟಿಕೋನ ಬಿ.ವಿ.ಕೆ ಯವರಿಗೆ ವಾದಿರಾಜರ ಕೃತಿಗಳಲ್ಲಿ ಹೇಗೆ ಕಂಡಿತು? ಅದೇ ಶಿಲ್ಪವನ್ನು ಮೆಚ್ಚಿ ತಮ್ಮ ಲೇಖನದಲ್ಲಿ ಅದರ ಚಿತ್ರವನ್ನು ಹಾಕಿದ್ದರು ಶಾಸ್ತ್ರಿಗಳು. ಆಧುನಿಕ ಶಿಲ್ಪಗಳ ಬಗ್ಗೆ ಸಾಕಷ್ಟು ತಿಳಿದುಕೊಂಡರೂ, ಯಾವ ಕೃತಿಯನ್ನು ಯಾವ ದೃಷ್ಟಿಯಿಂದ ನೋಡಬೇಕೆಂಬುದೇ ಬಿ.ವಿ.ಕೆ. ಯವರಲ್ಲಿರುವ ವಿಶೇಷ. ಒಬ್ಬ ಆಧುನಿಕ ಶಿಲ್ಪಿಯ ರಚನೆಗಳ ಬಗ್ಗೆ ಬರೆಯುತ್ತ "ಅವರು ಸ್ವಯಂ ಆಚಾರ್ಯ, ಭಾವನೆಗಳಿಗೆ, ಕವಿತೆಗಳಿಗೆ ರೂಪುಕೊಡುವ ಚಾತುರ್ಯವಿದೆ, ರೂಪದಲ್ಲಿ ಕುಶಲತೆ ಸಾಲದು" ಎಂದು ಬಿಚ್ಚು ನುಡಿಗಳಿಂದ ಬರೆದವರು ಶಾಸ್ತ್ರಿಗಳು.

ಸಂಪ್ರದಾಯ ಕಲೆಗಳಾದ ಸಂಗೀತ, ನೃತ್ಯಗಳ ಎಲ್ಲ ಪ್ರಕಾರಗಳ ಬಗ್ಗೆಯೂ ಆಳವಾಗಿ ತಿಳಿದುಕೊಂಡಿರುವ ಬಿ.ವಿ.ಕೆ. ಯವರು, ಪಾಶ್ಚಾತ್ಯರ ದೃಷ್ಟಿಕೋನದಿಂದ ಭಾರತೀಯ ಕಲೆಗಳನ್ನು ವಿಮರ್ಶಿಸಿದವರಲ್ಲ. ಹೀಗಾಗಿ ವಾದಿರಾಜರಂತಹ ಕಲಾವಿದರ ಪರಿಶ್ರಮ, ಕುಶಲತೆ, ಕಲಾತ್ಮಕತೆ, ಕ್ರಿಯಾಶೀಲತೆಗಳನ್ನು ಸುಲಭವಾಗಿ ಗುರುತಿಸಿ, ಅದರ ಬಗ್ಗೆ ವಿವರವಾಗಿ ಬರೆದವರು. ಬೇರೆ ಕ್ಷೇತ್ರಗಳಲ್ಲಿ ಹೇಗೋ ತಿಳಿಯದು, ನಮ್ಮ ಸಂಪ್ರದಾಯ ಶಿಲ್ಪಕ್ಷೇತ್ರಕ್ಕೆ ಬಿ.ವಿ.ಕೆ. ಯಂತಹ ವಿಮರ್ಶಕರ ಅಗತ್ಯ ಹಿಂದಿಗಿಂತ ಈಗ ಬಹಳ ಜಾಸ್ತಿಯಾಗಿದೆ. ಅಂತಹವರು ಒಂದಿಬ್ಬರಾದರೂ ಬೇಕು. ಆದರೆ ಅವರೊಬ್ಬರೇ ಆಗಿದ್ದಾರಲ್ಲ! ★ ★ ★ ★ ★ ★ ★

168. ಉತ್ತರ ಕರ್ನಾಟಕದ ಭಿತ್ತಿಚಿತ್ರಗಳು

– ವ್ಹಿ.ಸಿ. ಮಾಲಗತ್ತಿ, ಬೆಳಗಾವಿ

ಚಿತ್ರಕಲೆಯ ಇತಿಹಾಸದಲ್ಲಿ ಭಿತ್ತಿಚಿತ್ರಕ್ಕೆ ಮಹತ್ವದ ಸ್ಥಾನವಿದೆ. ಭಿತ್ತಿಚಿತ್ರಕಲೆ ಬಹು ಪುರಾತನವಾದದ್ದು. ಕ್ರಿಸ್ತ ಶಕ – ಪೂರ್ವ 3-4ನೇ ಶತಮಾನದ ಹಿಂದಿನಿಂದಲೂ ಬೆಳೆದು ಬಂದಿದೆ. ಪುರಾತನ ಆದಿವಾಸಿ ಜನರು ಗುಹೆ-ಗುಡಾರಗಳಲ್ಲಿ ಬಂಡೆಗಳ ಪದರಿನ ಮೇಲೆ ಚಿತ್ರ ಬರೆಯಲು ಆರಂಭಿಸಿದರು. ಈ ಕಲೆ ಮುಂದೆ ಭಿತ್ತಿಪತ್ರದಲ್ಲಿ ಬೆಳೆದುಬಂದಿತು. ಆದಿ ಮಾನವರು ಯಾವುದೇ ಬಣ್ಣದ ಕಲ್ಲಿನಿಂದಲೋ ಚೂಪಾದ ಕಲ್ಲಿನ ತುದಿಯಿಂದಲೋ ಬರೆದ ರೇಖಾಚಿತ್ರಗಳಿಂದ ಪ್ರಾರಂಭವಾಗಿ ನಂತರ ಅವುಗಳಲ್ಲಿ ಬಣ್ಣ ಬಣ್ಣದ ಕಲ್ಲುಗಳಿಂದ ಬಣ್ಣ ತುಂಬುವುದು; ನಂತರ ಬಣ್ಣದ ಮಣ್ಣಿನ ಪುಡಿಯಿಂದ ಭಿತ್ತಿಚಿತ್ರ ಬರೆಯುವ ಕಲೆ ಬೆಳೆದು ಬಂತು.

ಭಾರತದಲ್ಲಿ ಈ ಕಲೆ ಅಶೋಕ ದೊರೆಯ ನಂತರ ನಾಗರಿಕತೆ ಬೆಳೆದಂತೆ ಬುದ್ಧಧರ್ಮ ಜನರಲ್ಲಿ ಪ್ರಚಾರವಾದಂತೆ ಶ್ರದ್ಧಾ-ಭಕ್ತಿಯಿಂದ ಹಲವು ಅರಸರು ಗುಹೆ-ಸ್ತೂಪಗಳಲ್ಲಿ ಭಿತ್ತಿ ಚಿತ್ರ ಬರೆಯಿಸಿ ಸಾಮಾನ್ಯ ಜನತೆಯಲ್ಲಿ ಈ ಧಾರ್ಮಿಕ ಭಾವನೆ ಬೆಳೆಯಿಸಲು ಕಾರಣವಾಯಿತು.

ಇದಕ್ಕೆ ಅಜಂತಾ, ಬಾದಾಮಿ ಗುಹೆಗಳಲ್ಲಿ ಬಿಡಿಸಿದ ಭಿತ್ತಿಚಿತ್ರಗಳೇ ಸಾಕ್ಷಿ. ಮುಂದೆ ಅರಸರ ಅರಮನೆಗಳಲ್ಲಿ ಶ್ರೀಮಂತರ ಮನೆಗಳನ್ನು ಈ ಭಿತ್ತಿಚಿತ್ರಗಳ ಮೂಲಕ ಅಲಂಕರಿಸ ಲಾರಂಭಿಸಿದರು. ಇಂಥ ಅನೇಕ ಭಿತ್ತಿಚಿತ್ರಗಳು ಇಂದಿಗೂ ನಮ್ಮ ಕರ್ನಾಟಕದಲ್ಲಿ ಉಳಿದು ಬಂದಿವೆ.

ಉತ್ತರ ಕರ್ನಾಟಕದ ಮಟ್ಟಿಗೆ ಹೇಳಬೇಕೆಂದರೆ ಬಾದಾಮಿ, ವಿಜಾಪೂರ, ಕಮತಗಿ, ನಿಪ್ಪಾಣಿ, ನರಗುಂದ ಮುಂತಾದ ಊರುಗಳಲ್ಲಿ ಭಿತ್ತಿಚಿತ್ರಗಳು ಇವೆ.

ಬಾದಾಮಿ

ವಿಶ್ವದಲ್ಲಿಯೇ ಪ್ರಸಿದ್ಧವಾದ ಬಾದಾಮಿಯ ಗುಹೆಗಳು ನಾಲ್ಕು ಬೆಟ್ಟವನ್ನೇ ಕಟೆದು ದೇವಾಲಯಗಳನ್ನು ನಿರ್ಮಿಸಿದ್ದಲ್ಲದೇ ಒಳಗೆ ಮಾನವಾಕೃತಿಗಳಿಗಿಂತ ಹಿರಿದಾದ ಸುಂದರ ಶಿಲಾಮೂರ್ತಿಗಳನ್ನೂ ನಿರ್ಮಿಸಿದ್ದಾರೆ. ಇವುಗಳಲ್ಲಿ ಮೂರನೇ ಗುಹೆಯಲ್ಲಿ ಮೇಲ್ ಛತ್ತದ ಮುಂಭಾಗದ ವಕ್ರಾಕೃತಿಯ ಭಿತ್ತಿನಲ್ಲಿ ಭಿತ್ತಿಚಿತ್ರಗಳನ್ನು ಬಿಡಿಸಿದ್ದು ಐತಿಹಾಸಿಕ ಮಹತ್ವದ್ದಾಗಿದೆ. ಮಂಗಲೇಶ ಅರಸನು ಕೊರೆಯಿಸಿದ್ದ ಈ ಗುಹೆ ನಾಲ್ಕರಲ್ಲಿಯೇ ಸುಂದರವಾದುದು ಮತ್ತು ಮಹತ್ವದ್ದು. ಇಲ್ಲಿಯೇ ಭಿತ್ತಿಚಿತ್ರಗಳು ಇವೆ. ಇವು ಸಹಸಾ ಕಾಣುವುದಿಲ್ಲ. ಮುದ್ದಾಂ ಲಕ್ಷ್ಯಕೊಟ್ಟು ದೀಪಹಿಡಿದು ನೋಡಬೇಕು.

1953-54ರಲ್ಲಿ ಕರ್ನಾಟಕದ ಪ್ರಸಿದ್ಧ ಚಿತ್ರಕಲಾವಿದನಾದ ಶ್ರೀ ಮಿಣಜಗಿ ಅವರಲ್ಲಿ ಕಲಾಭ್ಯಾಸ ಮಾಡುವಾಗ ಶ್ರೀ ಮಿಣಜಗಿ ಅವರು ನಾವು 3-4 ಜನ ಕಲಾ ವಿದ್ಯಾರ್ಥಿಗಳನ್ನು ಕರೆದುಕೊಂಡು ಬಾದಾಮಿ ನೋಡಲೆಂದು ಹೋಗಿದ್ದೆವು. ಈ ಭಿತ್ತಿಚಿತ್ರಗಳನ್ನು ಕಂಡು ಶ್ರೀ ಮಿಣಜಗಿ ಅವರು ಇವನ್ನು ಪ್ರತಿಮಾಡುವ ಯೋಜನೆ ಹಾಕಿ ಅಲ್ಲಿಯ ಸರಕಾರಿ ಅಧಿಕಾರಿಗಳ ಸಹಕಾರದಿಂದ ಚಿತ್ರಮಟ್ಟದವರೆಗೆ ಹಲಗೆಯ ಛತ್ತಹಾಕಿಸಿ ನಾವು 3-4 ಜನ ಕಲಾವಿದ್ಯಾರ್ಥಿಗಳಿಗೂ ಹೇಗೆ ಪ್ರತಿಮಾಡಬೇಕೆಂಬುದನ್ನು ತೋರಿಸಿ ಸ್ವತಃ ತಾವೂ ಛತ್ತಿನ ಮೇಲೆ ಕುಳಿತು ಒಮ್ಮೊಮ್ಮೆ ಅಂಗಾತ ಮಲಗಿ ಪ್ರತಿಮಾಡಿ ನೀರಬಣ್ಣದಿಂದ ಮೂಲಚಿತ್ರಕ್ಕೆ ಭಂಗಬರದಂತೆ ಚಿತ್ರ ಬಿಡಿಸಿದರು. ಇದನ್ನು ತಿಳಿದು ಈ ಚಿತ್ರಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಸಂಶೋಧನಾ ಸಂಸ್ಥೆಯವರು ತಮಗಾಗಿ ಮತ್ತೆ ಪ್ರತಿಮಾಡಿಸಿಕೊಂಡರು. ಈ ಸಂಗತಿ ತಿಳಿದು ಕೇಂದ್ರ ಲಲಿತಕಲಾ ಅಕಾಡೆಮಿ ಅವರು ಮುಂಬಯಿಯ ಹಿರಿಯ ಕಲಾವಿದ ಶ್ರೀ ಅಹಿವಾಸಿಯವರ ನೇತೃತ್ವದಲ್ಲಿ 3-4 ಜನ ಕಲಾವಿದರನ್ನು ಕಳಿಸಿ ಪ್ರತಿಮಾಡಿಸಿಕೊಂಡರಂತೆ. ಆದರೆ ಅವು ಎಲ್ಲಿವೆ ಗೊತ್ತಿಲ್ಲ. ಆದರೆ ಮಿಣಜಗಿ ಅವರು ಮಾಡಿದ ಈ ಕೃತಿಗಳು ಕರ್ನಾಟಕ ವಿಶ್ವವಿದ್ಯಾಲಯದಲ್ಲಿವೆ. ಸದ್ಯ ಬಾದಾಮಿಯಲ್ಲಿ ಮೊದಲಿನಷ್ಟು ಕಾಣಲು ಸಿಗುವುದಿಲ್ಲ.

ಈ ಚಿತ್ರಗಳು ಬಾದಾಮಿಯನ್ನಾಳಿದ ಚಾಲುಕ್ಯ ಅರಸರ ನೇತೃತ್ವದಲ್ಲಿ ಬಿಡಿಸಿದವು. ಅಜಂತಾ ಶೈಲಿಯಲ್ಲಿವೆ. ಕ್ರಿ.ಶ. – ಪೂರ್ವದಿಂದ ಕ್ರಿ.ಶ. ಏಳನೇ ಶತಮಾನದ ವೇಳೆಯವರೆಗೆ ಬಿಡಿಸಿದ ಸಮಯದಲ್ಲಿಯೇ ಇವನ್ನು ಬಿಡಿಸಿರಬೇಕೆನ್ನಿಸುವದು. ಕರ್ನಾಟಕದಲ್ಲಿ ಬಿಡಿಸಿದ ಭಿತ್ತಿಚಿತ್ರಗಳಲ್ಲಿಯೇ ಇವು ಮೊದಲಿನ ಚಿತ್ರಗಳೆಂದು ತಿಳಿದುಬರುವುವು.

ಬಾದಾಮಿ ಅರಸರ ಒಡ್ಡೋಲಗದ ದೃಶ್ಯಗಳ ಚಿತ್ರಗಳಾಗಿವೆ. ಅರಸ ರಾಜಠೀವಿಯಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದಾನೆ. ಬದಿಗೆ ರಾಣಿ ಚಿತ್ರವೂ ಇದೆ. ಎದುರಿಗೆ ನರ್ತಕಿಯರು ವಾದ್ಯಗಾರರನ್ನು ನೋಡಬಹುದು. ಅರಸನ ಹಿಂದುಗಡೆ ಛತ್ರ, ಚಾಮರ ಸಹಿತ ನಿಂತ ಸೇವಿಕೆಯರು ಮೇಲೆ ದರಬಾರದ ಪ್ರೇಕ್ಷಕರನ್ನು ಬಿಡಿಸಿದ್ದು ಇದು ಅಂದಿನ ಅರಸರ ವೈಭವದ ಐತಿಹಾಸಿಕ ಕುರುಹು ಆಗಿದೆ. ಇದರಂತೆ ಇನ್ನೂ ಮೂರು ನಾಲ್ಕು ಚಿತ್ರಗಳಿವೆ. ಇವೆಲ್ಲ ಚಾಲುಕ್ಯ ದೊರೆ ಕೀರ್ತಿವರ್ಮನನ್ನು ಕುರಿತು ಚಿತ್ರಿತವಾಗಿವೆಯೆಂದು ಇತಿಹಾಸತಜ್ಞರ ಅಭಿಪ್ರಾಯ.

ಶ್ರೀ ಎಂ.ವ್ಹಿ. ಮಿಣಜಗಿ, ಶ್ರೀ ಅಹಿವಾಸಿ ಅವರು ಮಾಡಿದ ಪ್ರತಿಗಳೇ ಈ ಮಹತ್ವದ ಚಿತ್ರ 6ನೇ ಶತಮಾನದ ಇತಿಹಾಸಕ್ಕೆ ಸಾಕ್ಷಿಯಾಗಿ ಉಳಿದಿವೆ. ಇವು ಇಲ್ಲದಿದ್ದರೆ ಕರ್ನಾಟಕದ ಪ್ರಾಚೀನ ಭಿತ್ತಿಚಿತ್ರಗಳ ಇತಿಹಾಸವೇ ಉಳಿಯುತ್ತಿರಲಿಲ್ಲ. ಯಾಕೆಂದರೆ ಈಗ ಬಾದಾಮಿಯ ಈ ಗುಹೆಯಲ್ಲಿ ಇವುಗಳ ಗುರುತೂ ಉಳಿದಿಲ್ಲ.

ವಿಜಾಪುರ ಭಿತ್ತಿಚಿತ್ರ

ಮೊಗಲರ ನಂತರ ಹದಿನೈದು ಹದಿನಾರನೇ ಶತಮಾನದಲ್ಲಿ ವಿಜಾಪುರದಲ್ಲಿ ಸುಲ್ತಾನರು ಸ್ವತಂತ್ರವಾಗಿ ಆಳಹತ್ತಿದರು. ಮೊಗಲರ ಕಾಲದಲ್ಲಿ ತುರ್ಕಿ, ಪರ್ಶಿಯಾ ದೇಶದಿಂದ ಬಂದ

ಕಲಾವಿದರ ಪ್ರಭಾವ ಈ ಸುಲ್ತಾನರ ಕಾಲದಲ್ಲಿಯೂ ಇತ್ತು. ಇವರ ಸಹವಾಸದಿಂದ ಸ್ಥಳೀಯ ಕಲಾವಿದರೂ ತರಬೇತಿಹೊಂದಿ ಸ್ವತಂತ್ರ ಪ್ರಭಾವಿ ಕಲಾವಿದರಾಗಿದ್ದರು. ಇವರು ಬಿಡಿಸಿದ ಭಿತ್ತಿಚಿತ್ರಗಳು ವಿಜಾಪುರದ ಆಸರ ಮಹಲಿನಲ್ಲಿ ಇಲ್ಲಿಂದ 10 ಮೈಲು ಅಂತರದಲ್ಲಿದ್ದ ಕಮ್ಮತಗಿ ಎಂಬಲ್ಲಿ ಕೆಲವಿವೆ. ಇಬ್ರಾಹಿಮ್ ಆದಿಲಶಹ ವಿಜಾಪುರದಲ್ಲಿ ಆಳುತ್ತಿದ್ದಾಗ 'ಕಮ್ಮತಗಿ' ಊರಲ್ಲಿ ಒಂದು ಕೃತಕ ಸರೋವರವನ್ನು ನಿರ್ಮಿಸಿ ಈ ನೀರು ಸ್ನಾನದ ಮನೆಗೆ ಹರಿಯುವಂತೆ ಮಾಡಿ ಇಲ್ಲಿ ಕ್ರೀಡಾವಿನೋದಗಳಿಗೆ ಅನುಕೂಲ ಮಾಡಿಕೊಂಡಿದ್ದ. ಈ ಸ್ನಾನಗೃಹ (ಜಾವಡಿ) ದ ಗೋಡೆ, ಛಾವಣಿಗಳ ಮೇಲೆ ಬಿಡಿಸಿದ ಭಿತ್ತಿಚಿತ್ರ, ವ್ಯಕ್ತಿಚಿತ್ರಗಳನ್ನಲ್ಲದೇ ಹೂ-ಬಳ್ಳಿ, ಹಕ್ಕಿಗಳ ಅಲಂಕಾರದ ಚಿತ್ರಗಳೂ ಇರುವ ಗುರುತುಗಳಿವೆ. ಈ ಜಲಕುಂಡದ ಮಗ್ಗುಲಲ್ಲಿ ಯುರೋಪಿನ ಕಲಾವಿದನ ಒಂದು ಚಿತ್ರವಿದೆ ಎಂದು ಅದರ ವಿನ್ಯಾಸ, ಉಡಿಗೆ-ತೊಡಿಗೆಯಿಂದ ತಿಳಿದುಬರುತ್ತದೆ.

ವಿಜಾಪುರ ನಗರದಲ್ಲಿ ಆಸರ ಮಹಲೆಂಬ ಭವ್ಯಮಂದಿರ ಒಂದಿದೆ. ಮಹಡಿಯು ಐತಿಹಾಸಿಕ ಕಟ್ಟಡವಾದ ಇದು ಕೆಲ ಮಜಲಿನಲ್ಲಿ ಮೂರು ಕೊಠಡಿಗಳಿವೆ. ಇವುಗಳ ಗೋಡೆಗಳೆಲ್ಲ ಹಿಂಬದಿಯ ನೀಲಬಣ್ಣದ ಮಧ್ಯದಲ್ಲಿ ಹೂ-ಎಲೆ - ಪಕ್ಷಿಗಳಿಂದೊಡಗೂಡಿದ ಆಲಂಕಾರಿಕ ಚಿತ್ತಾರಗಳಿಂದ ಶೋಭಿತವಾಗಿದೆ. ಇದರ ಬದಿಯಲ್ಲಿ ಇನ್ನೊಂದು ಚಿತ್ರವಿದ್ದು ಇದು ಮಹಮ್ಮದ ಶಹ ಮತ್ತು ಅವನ ಪ್ರೇಯಸಿ ರಂಭಾ ಎಂಬುವಳದ್ದು ಎಂದು ತಿಳಿದು ಬಂದಿದೆ. ಇಲ್ಲಿರುವ ಉಳಿದ 2-3 ಚಿತ್ರಗಳನ್ನು ಪರಿಶೀಲಿಸಿದಾಗ ಇವನ್ನು ಯುರೋಪಿಯನ್ ಕಲಾವಿದರು ಬಿಡಿಸಿರಬೇಕೆಂದು ಅವರು ಬಳಸಿದ ಬಣ್ಣ , ಚಿತ್ರಗಳ ಮುಖ ಕಣ್ಣು - ಮೂಗುಗಳ ವಿನ್ಯಾಸದಿಂದ ತಿಳಿದುಬರುವುದು. ಇವು ನಾಲ್ಕು ಶತಮಾನಗಳ ಹಿಂದಿನ ಭಿತ್ತಿಚಿತ್ರಗಳೆಂದು ಇತಿಹಾಸದಿಂದ ತಿಳಿದುಬರುವುದು. ಆದರೆ ಇದೇ ಕಾಲಕ್ಕೆ ಬಿಡಿಸಿದ ಅನೇಕ ಚಿಕಣಿ ಚಿತ್ರಗಳು, ಗ್ರಂಥಸ್ಥ ಚಿತ್ರಗಳು ಈ ವಿಜಾಪುರ ಸುಲ್ತಾನರ ಕಾಲದಲ್ಲಿ ಚಿತ್ರಿತವಾಗಿವೆ. ಇವುಗಳಲ್ಲಿಯ ಶೈಲಿ, ಬಣ್ಣ, ಕುಂಚಗಳ ಬಳಕೆಗಳಿಂದ ಇವು ವಿಜಾಪೂರ ಶೈಲಿಯವು ಎಂದು ಹೆಸರು ಗಳಿಸಿವೆ.

ಅಥಣಿ

ಇಲ್ಲಿಯ ಮಠ ಒಂದರಲ್ಲಿ ಸುಮಾರು ಎರಡು ಶತಮಾನಗಳ ಹಿಂದೆ ಇದ್ದ ಈ ಮಠದ ಸ್ವಾಮಿಗಳು ಕೂಡ್ರುವ ಕೊಠಡಿಯ ಗೋಡೆಗಳ ಮೇಲ್ ಬದಿಗೆ ಕೆಲಚಿತ್ರಗಳಿದ್ದು ಇವು ಧೂಳು ಮಣ್ಣಿನಿಂದ ಆವೃತವಾಗಿದ್ದರಿಂದ ಸರಿಯಾಗಿ ಇವುಗಳ ರೇಖಾವಿನ್ಯಾಸವಾಗಲೀ ಬಣ್ಣಗಳಾಗಲೀ ಸರಿಯಾಗಿ ಕಾಣಿಸದಿದ್ದುದ್ದಕ್ಕೆ ವಿವರ ತಿಳಿಯಲು ಆಗಲಿಲ್ಲ.

ನಿಪ್ಪಾಣಿ

ಬೆಳಗಾವಿಯಿಂದ 40 ಮೈಲು ಅಂತರದಲ್ಲಿ ನಿಪ್ಪಾಣಿ ಇದೆ. ಇಲ್ಲಿ ಒಂದು ನಿಪ್ಪಾಣಿಕರ ಎಂಬ ಸರದಾರನ ರಾಜವಾಡೆ ಇದೆ. ಸುತ್ತಲೂ ಕೋಟೆ ಗೋಡೆ ಅಗಸೆ ಬಾಗಿಲಿನಿಂದ ಸುಸ್ಥಿತಿಯಲ್ಲಿದೆ. ಒಳಗೆ ವಿಶಾಲವಾದ ಬೇಸಟ್ಟಿ ಇದ್ದು ಮೇಲೆ ಉತ್ತರ ಬದಿಯ ಎರಡು

ವಿಶಾಲವಾದ ಕೊಠಡಿಯಲ್ಲಿ ನಾಲ್ಕೂ ಗೋಡೆಗಳಲ್ಲಿ ಭಿತ್ತಿಚಿತ್ರಗಳಿಂದ ಆವೃತವಾಗಿದೆ. ಹಿಂದಿನ ಕೊಠಡಿ ಸರದಾರನ ಶಯನಗೃಹವಾಗಿರಬೇಕು. ಆದರೆ ಇಲ್ಲಿದ್ದ ಚಿತ್ರಗಳು ಕೃಷ್ಣನ ಚರಿತ್ರೆಗೆ ಸಂಬಂಧಿಸಿದವು. ಕಾರಣ ಇದು ಶಯ್ಯಾಗೃಹವಾಗಿರದೆ ಆ ಸರದಾರನ ಕಚೇರಿ ಆಗಿರಬೇಕೆಂದು ನನ್ನ ಊಹೆ. ಹೊರಗಿನ ವಿಶಾಲ ಅಂಕಣದಲ್ಲಿಯೂ ಗೋಡೆಗಳಲ್ಲಿ ಭಿತ್ತಿಚಿತ್ರಗಳಿಂದೊಡಗೂಡಿವೆ.

ಒಂದು ಚಿತ್ರದ ಚೌಕಟ್ಟಿನ ವರ್ತುಳದಲ್ಲಿ ನಾಲ್ಕು ಜನ ಮಹಿಳೆಯರು ಈಜಾಡುವ ಚಿತ್ರ, ಮಧ್ಯದಲ್ಲಿ ಆನೆ ನಿಂತಿದೆ. ಇನ್ನೊಂದು ಬಕಾಸುರನ ವಧೆಗೆ ಸಂಬಂಧಿಸಿದ್ದು. ಕೃಷ್ಣನು ಮಂಡಿ ಊರಿ ಎರಡೂ ಕೈಗಳಿಂದ ಬಕ ಒಂದರ ಕೊಕ್ಕು ಹಿಡಿದು ಸೀಳುವ ದೃಶ್ಯ ರೌದ್ರಾಕಾರದ ಕಲ್ಪನೆ ಬಾರದೇ ಇರದು. ಇನ್ನೊಂದು ಬಾಲಕೃಷ್ಣನ ಲೀಲೆಗಳಿಗೆ ಸಂಬಂಧಿಸಿದ್ದು. ಮತ್ತೊಂದರಲ್ಲಿ ಋಷಿಗಳು ಸಾಲಾಗಿ ಕುಳಿತು ಜಪ ಮಾಡುವ ದೃಶ್ಯ. ಇನ್ನೊಂದರಲ್ಲಿ 4-6 ಮಹಿಳೆಯರು ಕುಳಿತು ಕಾರ್ಯಮಗ್ನರಾದ ನೋಟ. ಇದೇ ರೀತಿ ಇನ್ನೂ ಕೆಲ ಚಿತ್ರಗಳನ್ನು ಕೃಷ್ಣನ ಚರಿತ್ರೆಗೆ ಸಂಬಂಧಿಸಿದ ಭಿತ್ತಿಚಿತ್ರಗಳನ್ನು ನೋಡಬಹುದು.

ಮಧ್ಯದ ಮೇಲ್ ಅಂತಸ್ತಿನಲ್ಲಿ ವಿಶಾಲವಾದ ಪಡಸಾಲೆ ಇದೆ. ಮೂರು ಭಾಗದ ಗೋಡೆಗಳಲ್ಲಿ 15-16 ಮಾಡಗಳನ್ನು ನಿರ್ಮಿಸಿ ಪ್ರತಿಯೊಂದರಲ್ಲೂ ಭಿತ್ತಿಚಿತ್ರಗಳಿವೆ. ಆದರೆ ಇವು ಬಹಳ ಮಸಕಾಗಿವೆ.

ಬದಿಯ ಶಯ್ಯಾಗಾರದ ಮತ್ತು ಅದಕ್ಕೆ ಹೊಂದಿದ ಹಾಲಿನಲ್ಲಿ ಚಿತ್ರ ಬಿಡಿಸಿದ ಭಾಗದ ಛಾವಣಿ ಎಲ್ಲ ಬೀಳುತ್ತಿದ್ದ ದೃಶ್ಯ ಪ್ರೇಕ್ಷಕರ ಮನ ಕದಡದೇ ಇರದು. ಇದರ ದುರಸ್ತಿಗಾಗಿ ಕರ್ನಾಟಕ ಸರಕಾರ ಎರಡು ಲಕ್ಷ ಹಣ ಮಂಜೂರು ಮಾಡಿದೆ.

ಮಧ್ಯದ ಮೇಲ್ ಅಂತಸ್ತಿನಲ್ಲಿ ವಿಶಾಲವಾದ ಪಡಸಾಲೆ ಇದೆ. ಇಲ್ಲಿ ಮಾಡಗಳಿದ್ದು ಪ್ರತಿಮಾಡದಲ್ಲಿ ಸುಮಾರು 2' x 3' ಅಡಿಗಳ ಅಳತೆಯ 15-20 ಚಿತ್ರಗಳಿವೆ. ಇವೆಲ್ಲ ಪೌರಾಣಿಕ ಕತೆಗಳಿಗೆ ಸಂಬಂಧಿಸಿದವುಗಳಾಗಿವೆ. ಈ ಹಿಂದೆ ಹೇಳಿದ ಬದಿಯ ಕೊಠಡಿಯು ಮೇಲ್ ಬಿಳುತ್ತಿದ್ದ ಇದನ್ನು ದುರಸ್ತಿ ಮಾಡಲೂ ಈ ಸರದಾರರ ಮನೆತನದವರಿಗೆ ಆಗಿಲ್ಲ. ಹಿಂದೆ ಕರ್ನಾಟಕ ಸರಕಾರವೇ ದುರಸ್ತಿಗಾಗಿ ವ್ಯವಸ್ಥೆ ಮಾಡಿದರೆ ಈ ನಿಷ್ಪ್ರಾಣಿಕರ ಯಜಮಾನತನಗೇ ಹಣಕೊಡಲು ಕೇಳಿದನಂತೆ ಕಾರಣ ಈ ಅರಮನೆಯ ಭಾಗ ಬೀಳುವ ಸ್ಥಿತಿಯಲ್ಲಿದೆ.

ನರಗುಂದ

ನರಗುಂದ ಬಂಡಾಯವೆಂಬ ಹೆಸರು ಕೇಳಿರಬೇಕು. 1857ರಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಕೀರ್ತಿ ಈ ನರಗುಂದಕ್ಕೂ ಇದೆ. ಇದು ಧಾರವಾಡ ಜಿಲ್ಲೆಯಲ್ಲಿ ಬರುವುದು. ನರಗುಂದ ಸಂಸ್ಥಾನದ ದೊರೆ ಬಾಬಾಸಾಹೇಬ ಇವರು ಈ ಭಾಗದ ಧೀರ, ವೀರ ದೇಶಾಭಿ. ಇವನ ಅರಮನೆಯ ಒಂದು ಕೊಠಡಿ ಪೂರ್ತಿ ಭಿತ್ತಿಚಿತ್ರಗಳಿಂದ ಕೂಡಿದೆ. ಇದೊಂದು ಅರಸನ

ವಿಲಾಸಿ ನಿವಾಸವಾಗಿರಬೇಕು. ಗೋಡೆಗೆ ಬಳಿದ ಹಿಂಬದಿಯ ಕಿತ್ತಳೆಯ ಬಣ್ಣಕ್ಕೆ ಪೂರಕವಾಗಿ ವಿವಿಧ ಆಕಾರದ ಚೌಕಟ್ಟುಗಳನ್ನು ನಿರ್ಮಿಸಿ ಅವುಗಳಲ್ಲಿ ಪೌರಾಣಿಕ, ಚಾರಿತ್ರಿಕವಾದ ಐತಿಹಾಸಿಕ ಚಿತ್ರಗಳನ್ನು ಬಿಡಿಸಲಾಗಿದೆ.

ನರಗುಂದ ಬಾಬಾ ಸಾಹೇಬ ಬ್ರಿಟಿಷರ ವಿರುದ್ಧ ಹೋರಾಡಿದ ಸಂಗತಿಯ ಹಿನ್ನೆಲೆಯಲ್ಲಿ ಈ ವಾಡೆಯಲ್ಲಿಯ ಭಿತ್ತಿಚಿತ್ರಗಳೂ ಈ ಹೋರಾಟದ ಹಿನ್ನೆಲೆಗೆ ಸಂಬಂಧಿಸಿದವೆನ್ನಬಹುದು. ಒಂದು ಚಿತ್ರದಲ್ಲಿ ಆನೆಯ ಮೇಲೆ ಸ್ತ್ರೀಯೊಬ್ಬಳು ಕುಳಿತು ಕೈಯಲ್ಲಿ ಬಿಲ್ಲನ್ನು ಹಿಡಿದು ಬತ್ತಳಿಕೆಯನ್ನು ಯಾರಿಗೋ ಗುರಿ ಹಿಡಿದ ಕೃತಿ. ಇನ್ನೊಂದು ಚಿತ್ರದಲ್ಲಿ ಕಾಳಗಕ್ಕೆ ಹೊರಟ ಸೈನಿಕರು ಕೆಂಪು ಪಗಡಿ ಚಲ್ಲಣತೊಟ್ಟು ಕೈಯಲ್ಲಿ ಖಡ್ಗ ಢಾಲು ಹಿಡಿದು ಹೊರಟ ಈ ಚಿತ್ರ ಇಲ್ಲಿಯವರ ಧೀರವೃತ್ತಿಯನ್ನು ತೋರಿಸುವುದು. ಮತ್ತೊಂದರಲ್ಲಿ ಕೈತೋಪು ಹಿಡಿದುಕೊಂಡ ಸೈನಿಕರು. ಜತೆಗೆ ಅಂಬಾರಿಯನ್ನೇರಿ ಹೊರಟ ರಾಜಕುಮಾರ ಸಮೀಪದಲ್ಲಿ ರಣರಂಗದ ಮೈದಾನವಿದೆ. ಹೀಗೆ ಈ ಕದನರಂಗದಲ್ಲಿ ಬರುವ ಸೈನಿಕರು ಆನೆ, ಕುದುರೆ ಮೊದಲಾದ ದೃಶ್ಯ ಶಕ್ತಿಯುತವಾಗಿದೆ. ಯುದ್ಧರಂಗದ ದೃಶ್ಯಗಳ ಜತೆ ಕೃಷ್ಣ, ಗಣಪತಿ ಮೊದಲಾದ ಧಾರ್ಮಿಕ-ಪೌರಾಣಿಕ ಚಿತ್ರಗಳನ್ನು ಇಲ್ಲಿ ನೋಡಬಹುದು.

ಈ ಊರಲ್ಲಿಯವರೇ ಆದ ಶ್ರೀ ಗುಂಡಪ್ಪ ಹಸಬಿ ಅವರ ಮನೆಯಲ್ಲಿಯೂ ಕೆಲ ಪೌರಾಣಿಕ ಭಿತ್ತಿಚಿತ್ರಗಳಿದ್ದು ಇವನ್ನು ಪ್ರವಾಸಿಕರು ನೋಡಬಹುದು.

ಅಮ್ಮಿನಭಾವಿ

ಧಾರವಾಡ ಜಿಲ್ಲೆಯ ಧಾರವಾಡದಿಂದ ಸುಮಾರು 10 ಕಿಲೋಮೀಟರ್ ದೂರದಲ್ಲಿ ಅಮ್ಮಿನಭಾವಿ ಎಂಬ ಊರು ಇದೆ. ಇಲ್ಲಿಯ ವೀರಶೈವ ಮಠ ಒಂದರಲ್ಲಿ ಕೆಲ ಭಿತ್ತಿಚಿತ್ರಗಳಿದ್ದು ಇವು ಬಹುಶಃ ಇತ್ತೀಚಿನ ಅಂದರೆ ನೂರು ವರ್ಷಗಳ ಒಳಗಿನವಿರಬೇಕು. ರಾಮಣ್ಣ, ಚನ್ನಮ್ಮ ಕೆಲ ಪೌರಾಣಿಕ ಚಿತ್ರಗಳಿವೆ. ಇವುಗಳ ವಿವರ ನಾನು ಇನ್ನೂ ನೋಡಬೇಕು.

ಹೀಗೆ ಉತ್ತರ ಕರ್ನಾಟಕದಲ್ಲಿ ಆರನೇ ಶತಮಾನದ ಬಾದಾಮಿಯಿಂದ 19ನೇ ಶತಮಾನದವರೆಗಿನ ಭಿತ್ತಿಚಿತ್ರಗಳು ಅಲ್ಲಲ್ಲಿ ಇವೆ. ಇವುಗಳ ಶೈಲಿ, ಕಾಲ, ವಿಷಯಗಳ ಮೂಲಕ ಆಗಾಗಿನ ಸಂಸ್ಕೃತಿಗಳನ್ನು ಅರಿಯಲು ಇನ್ನೂ ವ್ಯವಸ್ಥಿತವಾದ ಸಂಶೋಧನೆ ನಡೆಯುವುದು ಅವಶ್ಯವಾಗಿದೆ. ★

169. ಗುಲಬರ್ಗಾ ಪ್ರದೇಶದ ಕಲಾಕ್ಷೇತ್ರದಲ್ಲಿಯ ಬೆಳವಣಿಗೆಗಳು

– ಕುಪ್ಪಣ್ಣ ಕಂದಗಲ್

ರಾಷ್ಟ್ರ ಸ್ವಾತಂತ್ರ್ಯ ಪಡೆದ ನಂತರ ಈ ಐವತ್ತು ವರ್ಷಗಳ ಅವಧಿಯಲ್ಲಿ ದೇಶದ ಸಂಸ್ಕೃತಿಯಲ್ಲಿ ಆದ ಮಾರ್ಪಾಡು ಮತ್ತು ಬೆಳವಣಿಗೆಗಳ ಬಗ್ಗೆ ಸಾಕಷ್ಟು ಅವಲೋಕನಗಳು ನಡೆದಿದ್ದರೂ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಆಗು ಹೋಗುಗಳ ಬಗ್ಗೆ ಅವಲೋಕನ ನಡೆದದ್ದು ಅತೀ ಕಡಿಮೆ ಅಥವಾ ಇಲ್ಲವೇ ಇಲ್ಲವೆಂದು ಹೇಳಬಹುದು. ಕರ್ನಾಟಕದಲ್ಲಿ ಕಲಬುರ್ಗಿ ವಿಭಾಗ ಅಧಿಕವಾಗಿ ಹಿಂದುಳಿದಿದ್ದರೂ ಸಾಂಸ್ಕೃತಿಕವಾಗಿ ಭವ್ಯ ಪರಂಪರೆ ಹೊಂದಿದೆ. ಸಮಕಾಲೀನ ಪ್ರಜ್ಞೆಯೊಂದಿದೆ. ನಿರಂತರವಾಗಿ ಚಿತ್ರಕಲೆ, ಶಿಲ್ಪ ಮತ್ತು ವಾಸ್ತು ಶಿಲ್ಪಕಲೆಗಳಲ್ಲಿ ಕಲಾವಿದರು ತಮ್ಮನ್ನು ತೊಡಗಿಸಿಕೊಂಡಿದ್ದರು. ಹಲವಾರು ಕ್ರಾಂತಿ, ದಾಳಿಗಳ ಪ್ರಭಾವದಿಂದ ಹಲವು ಅನಾಹುತಗಳಿಗೆ ಈಡಾಗಿ ಪೋಷಣೆ ದೊರಕದ ಕಲಾಕೃತಿಗಳು ವಿಕೃತ ರೂಪಗಳಲ್ಲಿ ಈಗಲೂ ಇಲ್ಲಿ ನೋಡಲು ಸಿಗುತ್ತವೆ.

ನೃಪತುಂಗನ ಕಾಲದ ಅಕ್ಕುಜ್ಜ ಮತ್ತು ಮಹಾಂಕಾಳರಂಥ ಪ್ರಸಿದ್ಧ ಶಿಲ್ಪಕಾರರು ತಮ್ಮ ಕಾಲ ಸತ್ವವನ್ನು ಇಲ್ಲಿ ಧಾರೆಯೆರೆದಿದ್ದಾರೆ. ಗುಲಬರ್ಗಾವನ್ನು ರಾಜಧಾನಿಯನ್ನಾಗಿಸಿ ಬಹಮನಿ ಅರಸರ ಆಶ್ರಯದಲ್ಲಿ ಪರ್ಷಿಯನ್ ಕಲಾವಿದರು ದಖಿನ್ ಶೈಲಿ ಸ್ಥಾಪಿಸುವಲ್ಲಿ ಕಾರಣರಾದರು. ಆ ಕಾಲದಲ್ಲಿ ಅನೇಕ ಗಾಜಿನ ಮೇಲೆ ರಚಿಸಿದ ಪ್ರಸಿದ್ಧ ಚಿತ್ರಗಳು ಈಗಲೂ ಕಾಣಸುತ್ತವೆ. ಇಂತಹ ಅನೇಕ ಶ್ರೇಷ್ಠ ಮಟ್ಟದ ಪ್ರಬುದ್ಧ ಕಲಾಕೃತಿಗಳು ಕಲಾವಿದರ ಹೆಸರಿಲ್ಲದೆ ರಾಷ್ಟ್ರದ ಅನೇಕ ಪ್ರತಿಷ್ಠಿತ ಕಲಾ ಸಂಗ್ರಹಾಲಯಗಳಲ್ಲಿವೆ. ವೀರಶೈವ ಪರಂಪರೆಗೆ ಸಂಬಂಧಿಸಿದ ಉದ್ಧರಣೆ ಚಿತ್ರಗಳು ಇಂದಿಗೂ ನೋಡಲು ಸಿಗುತ್ತವೆ. ನೂರು ಅಡಿ ಉದ್ದದ ಅರಿವೆಯ ಮೇಲೆ ಕಾಗದವನ್ನು ಅಂಟಿಸಿ ಟೆಂಪರಾ ಮಾಧ್ಯಮದಲ್ಲಿ ತಾಂತ್ರಿಕ ಶೈಲಿಯಲ್ಲಿ ರಚಿಸಿದ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಈ ಬೃಹದಾಕಾರದ ಚಿತ್ರಗಳು ಆಗಿನ ಕಲಾ ಪರಂಪರೆಯ ಭವ್ಯತೆಯನ್ನು ಪ್ರತಿಬಿಂಬಿಸುತ್ತವೆ.

ಹದಿನಾಲ್ಕನೇ ಶತಮಾನದಿಂದ 17ನೇ ಶತಮಾನದವರೆಗೆ ಈ ಭಾಗದಲ್ಲಿ ಪ್ರಚಲಿತವಿದ್ದ ಮಿನಿಯೇಚರ್ ಪದ್ಧತಿಯ ಕಲಾಕೃತಿಗಳು ತನ್ನದೇ ಆದ ಶೈಲಿಯನ್ನು ಹೊಂದಿದ್ದವು. ಹದಿನೇಳನೇ ಶತಮಾನದಲ್ಲಿ ಸುರಪುರದ ನಾಯಕರ ರಾಜಾಶ್ರಯದಲ್ಲಿದ್ದ ಪ್ರಸಿದ್ಧ ಕಲಾವಿದ

ಗರುಡಾದ್ರಿ, ಈ ಪ್ರದೇಶದ ಕಲಾಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆಯೆಂದೇ ಹೇಳಬಹುದು. ತಂಜಾವೂರು ಮತ್ತು ಮೈಸೂರು ಶೈಲಿಯಿಂದ ಭಿನ್ನವಾದ ಈ ಚಿತ್ರಗಳು ಭಾರತೀಯ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಪೌರಾಣಿಕ, ಧಾರ್ಮಿಕ, ಸಾಮಾಜಿಕ ವಿಷಯಗಳನ್ನೊಳಗೊಂಡ ಇವರ ಕೃತಿಗಳು ಸೂಕ್ಷ್ಮತೆ ಮತ್ತು ವರ್ಣಗಳ ಬಳಕೆಯಲ್ಲಿ ಅತಿ ಶ್ರೇಷ್ಠಮಟ್ಟದ್ದಾಗಿವೆ. ಇವರು ರಚಿಸಿದ ಸಾಮಂತ ರಾಜರ ಭಾವಚಿತ್ರಗಳು. ಕುದುರೆ ಸವಾರ, ಸರಸ್ವತಿ, ಪಾಂಡುರಂಗ ಚಿತ್ರಗಳು ಇಲ್ಲಿಯ ಮಣ್ಣಿನ ಗುಣಧರ್ಮವನ್ನು ಎತ್ತಿಹಿಡಿಯುತ್ತವೆ. ಈಗಲೂ ಈ ಕಲಾವಿದನ ಚಿತ್ರಗಳು ಬ್ರಿಟನ್ ಸಂಗ್ರಹಾಲಯದಲ್ಲಿ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ಮತ್ತು ಸಿರಿವಂತರ ಮನೆಗಳಲ್ಲಿ ರಕ್ಷಿತವಾಗಿವೆ. ಗರುಡಾದ್ರಿಯವರು ಈ ಪ್ರದೇಶದಲ್ಲಿ ಸ್ವಂತ ಪರಂಪರೆಯನ್ನು ಹುಟ್ಟುಹಾಕಿ ಮುಂದು ಅನೇಕ ಕಲಾವಿದರು ಈ ಪರಂಪರೆಯನ್ನು ಮುಂದುವರೆಯಿಸಿ ಪ್ರಖ್ಯಾತಿ ಪಡೆಯುವಲ್ಲಿ ಕಾರಣೀಭೂತರಾದರು. ಇಂತಹ ಅನೇಕ ಕಲಾವಿದರು ಮುಸಲ್ಮಾನರ ಆಳ್ವಿಕೆಯಲ್ಲಿ ಸರಿಯಾದ ಪೋಷಣೆ ಸಿಗದೆ ಮುಂಬಯಿಗೆ ವಲಸೆ ಹೋಗಬೇಕಾಗಿ ಬಂತು.

ಬ್ರಿಟೀಷರ ಆಳ್ವಿಕೆಯಲ್ಲಿ ಕಲೆಯು ಹೊಸ ಆಯಾಮ ಪಡೆಯಿತು ಮತ್ತು ಶಾಂತಿನಿಕೇತನ ಮಹತ್ವದ ಕಲಾ ಕೇಂದ್ರವಾಗಿ ಹೊಸ ಕ್ರಾಂತಿಯ ಹೊಸ ವಿಚಾರಗಳನ್ನು ಪ್ರತಿಪಾದಿಸುವ ಒಂದು ಪಂಥ ಬೆಳೆಯಿತು. ಈ ಸಂಪ್ರದಾಯದಲ್ಲಿ ಗುಲಬರ್ಗಾ ವಿಭಾಗದ ಕಲಾವಿದರು ಬಾಂಬೇ ಕಲಾಕೇಂದ್ರದ ಪ್ರಭಾವಕ್ಕೊಳಗಾಗಿ ಅಲ್ಲಿ ಶಿಕ್ಷಣವನ್ನು ಪಡೆದು ಈ ಭಾಗಕ್ಕೆ ಹೊಸ ಆಯಾಮವನ್ನು ದೊರಕಿಸಿಕೊಟ್ಟರೆಂದು ಹೇಳಬಹುದು. ಈ ಪರಂಪರೆಗೆ ಸೇರಿದವರಲ್ಲಿ ಮುಖ್ಯವಾಗಿ ಹೆಸರಿಸಬಹುದಾದವರು ಶಂಕರರಾವ್ ಆಳಂದಕರ್, ಶಾಂತಲಿಂಗಪ್ಪ ಪಾಟೀಲ, ಎಂ. ಬಿ. ಭೋಪಲಿ, ಕುಮಾರ ಚಂದ್ರಶೇಖರ, ವಿದ್ಯಾಭೂಷಣ, ಎಸ್. ಎಂ. ಪಂಡಿತ್, ವಿ. ಎನ್. ಬಂಕೂರಕರ್, ಶಂಕರ ಮಾಸ್ಟರ್ ಮತ್ತು ಕೃಷ್ಣರಾವ್ ಕಪಾಟರಾಳ ಮುಂತಾದವರು.

ಮುಂಬಯಿಯ ಜೆ. ಜೆ. ಕಲಾ ಶಾಲೆಯಲ್ಲಿ ವ್ಯಾಸಂಗ ಮಾಡಿದ ಆಳಂದಕರ್ ರವರ ಕಾಣಿಕೆ ಗುಲಬರ್ಗಾಕ್ಕೆ ಮರೆಯಲಾರದಂತಹದ್ದು. ಅವರು ಸ್ಥಾಪಿಸಿದ ಕಲಾ ಶಾಲೆ ಉತ್ತರ ಕರ್ನಾಟಕದಲ್ಲಿ ಮೊದಲನೆಯದು. ಜೆ. ಜೆ. ಕಲಾ ಶಾಲೆಯ ಅಭ್ಯಾಸ ಪದ್ಧತಿಯನ್ನು ಅಳವಡಿಸಿ ಚಿತ್ರಕಲಾ ಜ್ಞಾನವನ್ನು ಪಸರಿಸಿದರು. ಇವರಲ್ಲಿ ಪ್ರಮುಖರೆಂದರೆ ಎಂ. ಟಿ. ಭೂಪಲಿ, ಕುಮಾರ ಚಂದ್ರಶೇಖರ, ವಿದ್ಯಾಭೂಷಣ, ಎಸ್. ಎಂ. ಪಂಡಿತ್ ಮುಂತಾದ ಅಂತರರಾಷ್ಟ್ರೀಯ ಖ್ಯಾತಿ ಪಡೆದ ಕಲಾವಿದರು. ಇವರು ರವೀಂದ್ರನಾಥ ಠಾಕೂರರ ನೊಬೆಲ್ ಪ್ರಶಸ್ತಿ ಪಡೆದ ಸಾಹಿತ್ಯ ಕೃತಿಯಾದ 'ಗೀತಾಂಜಲಿ' ಯಿಂದ ಪ್ರಭಾವಿತರಾಗಿ 'ನನ್ನ ದರ್ಶನದಲ್ಲಿ ಗುರುದೇವ' ಎಂಬ

ಚಿತ್ರ ಸರಣಿಯನ್ನು ರಚಿಸಿದರು. ಡಾ. ದ.ರಾ. ಬೇಂದ್ರೆಯವರು ಈ ಸಮಗ್ರ ಕೃತಿಯನ್ನು ಅವಲೋಕಿಸಿ ಪ್ರತಿಯೊಂದು ಚಿತ್ರಕ್ಕೂ ಒಂದೊಂದು ಕಾವ್ಯವನ್ನು ರಚಿಸಿದರು. ಅಲಂಕಾರಿಕ ಶೈಲಿಯಲ್ಲಿ ರಚಿಸಿದ ಶರಣಬಸವ ಪುರಾಣಕ್ಕೆ ಸಂಬಂಧಿಸಿದ ಚಿತ್ರಗಳು, ಬಸವೇಶ್ವರರ ದರ್ಶನ ಸಾಹಿತ್ಯದ ಆಧಾರದ ಮೇಲೆ ನಿರ್ಮಿಸಿದ ಅಸಂಖ್ಯಾತ ಕೃತಿಗಳು ಅತೀ ಹೆಚ್ಚಿನ ಜನ ಮನ್ನಣೆಯನ್ನು ಗಳಿಸಿದವು.

ಹೈದ್ರಾಬಾದ್ ನಿಜಾಮರ ಆಶ್ರಯದಲ್ಲಿ ಕಲಾವಿದರು ಬಂದು ಸೇವೆ ಸಲ್ಲಿಸಿದವರಲ್ಲಿ ಮತ್ತೊಬ್ಬ ಪ್ರಮುಖರೆಂದರೆ ಶಾಂತಲಿಂಗಪ್ಪ ಪಾಟೀಲರು. ಜೆ.ಜೆ. ಸ್ಕೂಲಿನಲ್ಲಿ ಕಲಾ ಶಿಕ್ಷಣವನ್ನು ಪಡೆದ ಪಾಟೀಲರು ಕಲಾವಿದ ಹಲ್ದನಕರ್‌ರವರ ಶಿಷ್ಯರು. ಭಾರತೀಯ ಸಂಸ್ಕೃತಿ ಮತ್ತು ಭಾರತೀಯ ತತ್ವಶಾಸ್ತ್ರಕ್ಕೆ ಮಾರುಹೋಗಿದ್ದ ಅವರು ಸಾವಿರಕ್ಕೂ ಮಿಕ್ಕ ಪೌರಾಣಿಕ, ನಿಸರ್ಗ ಮತ್ತು ಭಾವಚಿತ್ರಗಳನ್ನು ರಚಿಸಿದ್ದರು. ಇವರು ಆಗ ರಚಿಸಿದ ಲಾಹೋರಿನ ಪ್ರಸಿದ್ಧ ನಟಿ ಹಾಗೂ ನಿಜಾಮರ ಸೊಸೆ ನಿಲೋಫರ್‌ರವರ ಭಾವಚಿತ್ರವನ್ನು ನೋಡಲು ಜನರು ಸರತಿಯಲ್ಲಿ ನಿಲ್ಲುವಂತೆ ಮಾಡಿತ್ತಂತೆ. ಇವರು ಅನೇಕ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ರಚಿಸಿ ಜನರಲ್ಲಿ ಜಾಗ್ರತಿ ಮೂಡಿಸಿ ಅಪರೋಕ್ಷವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಕಾಣಿಕೆಯನ್ನು ನೀಡಿದವರಾಗಿದ್ದರು. ಅಕ್ಕಲಕೋಟೆಯ ರಾಜರ ಆಶ್ರಯದಲ್ಲಿಯೂ ಕೆಲ ಕಾಲ ಆಸ್ಥಾನ ಕಲಾವಿದರಾಗಿ ರಾಜ-ರಾಣಿಯರ ಅನೇಕ ಭಾವಚಿತ್ರಗಳನ್ನು ರಚಿಸಿದರು. ಹೈದ್ರಾಬಾದ್ ಕರ್ನಾಟಕದ ವಿಮೋಚನಾ ಚಳುವಳಿಯಲ್ಲಿಯೂ ಇವರು ಸಕ್ರಿಯವಾಗಿ ಭಾಗವಹಿಸಿದ್ದರು.

ಕಲಾ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದವರು ವಿದ್ಯಾಭೂಷಣರವರೂ ಒಬ್ಬರು. ಪ್ರಖ್ಯಾತ ಕಲಾವಿದರಾದ ಎಂ.ಎಫ್. ಹುಸೇನ್ ಮತ್ತು ಪಿ.ಟಿ. ರೆಡ್ಡಿಯವರ ಸಮಕಾಲೀನರಾದ ಇವರು ಜೆ.ಜೆ. ಕಲಾ ಶಾಲೆಯ ವಿದ್ಯಾರ್ಥಿ. ಶಿಕ್ಷಣ ಮುಗಿಸಿದ ನಂತರ ಹೈದ್ರಾಬಾದಿಗೆ ಬಂದು ಜಿ ಆ್ಯಂಡ್ ಟಿ ವಿಶ್ವವಿದ್ಯಾಲಯದ ಫೈನ್ ಆರ್ಟ್ಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದರು. ಇವರು ಕೃತಿಗಳನ್ನು ದಿಲ್ಲಿಯ ಸಂಸತ್ ಭವನದಲ್ಲಿ ಮತ್ತು ಮಾಡರ್ನ್ ಆರ್ಟ್ ಗ್ಯಾಲರಿಯಲ್ಲಿ ಕಾಣಬಹುದು ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿಯೂ ಪಾಲ್ಗೊಂಡಿದ್ದರು ಮತ್ತು ನವ್ಯ ಹೊಸ ಚಿಂತನ ಶೀಲ ಕಲಾವಿದರ ಗುಂಪು ಕರ್ನಾಟಕದಲ್ಲಿ ಮೊದಲನೆಯ ಗುಂಪು ಪ್ರದರ್ಶನ 1959ರಲ್ಲಿ ನೆರವೇರಿಸಿದ್ದು, ಇದರಲ್ಲಿ ಎಂ.ಟಿ. ಘೋಷಲೆ, ವಿದ್ಯಾಭೂಷಣ, ಕುಮಾರ ಚಂದ್ರಶೇಖರ,

ಎಸ್.ಎಂ. ಪಂಡಿತರನ್ನೊಳಗೊಂಡು ಬಾಂಬೇ ಕಲಾ ಶೈಲಿಗೆ ಪರಂಪರೆಯ ಕಲಾವಿದರು ಗುಲಬರ್ಗಾದ ಕಲಾ ಮಂಡಲದಲ್ಲಿ ಪ್ರದರ್ಶನ ಮಾಡಿದ್ದು ಮಹತ್ವದ್ದಾಗಿದೆ. ಈ ರೀತಿಯ ರಚನಾತ್ಮಕ ವಾತಾವರಣ ಗುಲಬರ್ಗಾದಲ್ಲಿ ಯಾವಾಗಲೂ ನೆರವೇರುತ್ತಾ ಬಂದಿದೆ.

ತಮ್ಮದೇ ಆದ ಶೈಲಿಯಿಂದ ಅತಿ ಹೆಚ್ಚಿನ ಜನ ಮನ್ನಣೆ ಗಳಿಸಿದವರೆಂದರೆ ಕಲಬುರ್ಗಿಯ ಎಸ್.ಎಂ. ಪಂಡಿತರು. ಗುಲಬರ್ಗಾ ನೂತನ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾದ ಇವರು ಮುಂಬಯಿಗೆ ಹೋಗಿ ಕಲಾ ಶಿಕ್ಷಣವನ್ನು ಪಡೆದರು. ಭಾರತೀಯ ಸಿನಿಮಾ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿ ಪೋಸ್ಟರ್ ಮತ್ತು ಸಿನಿಮಾ ಭಿತ್ತಿಚಿತ್ರಗಳನ್ನು ಮೊಟ್ಟಮೊದಲು ಭಾರತೀಯ ಕಲಾವಿದರೆಂದು ಪ್ರಖ್ಯಾತಿ ಪಡೆದರು. ಧಾರ್ಮಿಕ ಪೌರಾಣಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ ರಚಿಸಿದ ಇವರ ಕೃತಿಗಳ ಕ್ಯಾಲೆಂಡರ್ ಮಾಧ್ಯಮದಲ್ಲಿ ಜೀವ ತುಂಬಿ ಮನೆ ಮನೆಗಳಲ್ಲಿ ಸ್ಥಾನ ಪಡೆದವು.

ಎಸ್.ಎಂ. ಪಂಡಿತ ಮತ್ತು ವಿದ್ಯಭೂಷಣ ಸಮಕಾಲೀನ ಪಂಕ್ತಿಗೆ ಸೇರಿದವರಲ್ಲಿ ಕುಮಾರ ಚಂದ್ರಶೇಖರವರೂ ಒಬ್ಬರು. ಫೋಟೋಗ್ರಾಫಿ, ಜಲವರ್ಣ ಮತ್ತು ಇತರ ಅನೇಕ ಮಾಧ್ಯಮಗಳಲ್ಲಿ ಕೃತಿ ರಚಿಸುವುದರಲ್ಲಿ ಪರಿಣತಿ ಹೊಂದಿದ್ದರಲ್ಲದೆ, ಸಾಕ್ಷ್ಯ ಚಿತ್ರಗಳನ್ನೂ ನಿರ್ಮಿಸಿದರು. 1964ರಲ್ಲಿ ಇವರು ನಿರ್ಮಿಸಿದ ಮರಾಠಿ ಸಾಕ್ಷ್ಯಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ ದೊರೆಯಿತು. ಮಹಾರಾಷ್ಟ್ರ ಸರಕಾರದಿಂದ 'ಗೌರವಾನ್ವಿತ' ಕಲಾವಿದರೆಂದು ಬಿರುದಾಂಕಿತರಾದರು. ಇದೇ ಭಾಗದವರಾದ ರಾಯಚೂರಿನ ಶಂಕರಗೌಡ ಬೆಟ್ಟದೂರ್‌ರವರು ಶಾಂತಿನಿಕೇತನದಲ್ಲಿ ಶಿಕ್ಷಣ ಪಡೆದವರು. ಪ್ರಖ್ಯಾತ ಕಲಾವಿದರಾದ ನಂದಲಾಲ ಬಸ್ಸುರವರ ಶಿಷ್ಯರಾದ ಇವರು ಕೆಲ ಕಾಲ ಬರೋಡಾದಲ್ಲಿಯೇ ಕಲಾಸೇವೆ ಕೈಗೊಂಡರು. ದಿಲ್ಲಿಯ ಬಿರ್ಲಾ ಭವನದಲ್ಲಿ ಇವರು ರಚಿಸಿದ ಗಾಂಧೀಜಿಯವರ ಜೀವನದ ಮ್ಯೂರಲ್‌ಗಳು ಮತ್ತು ಚೈನಾದ ತುನಹಾರ ಗುಹೆಯ ಪ್ರತಿ ಚಿತ್ರಗಳು ಇವರ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

ಜೆ.ಜೆ. ಕಲಾ ಶಾಲೆಯಲ್ಲಿ ಕಲಾ ಶಿಕ್ಷಣ ಪಡೆದು ಉತ್ತಮ ಕೃತಿಗಳನ್ನು ರಚಿಸಿದ ಎಂ.ಟಿ. ಭೋಪಲೆಯವರು ಈ ನಾಡಿನ ಪ್ರಖ್ಯಾತ ಕಲಾವಿದರಲ್ಲಿ ಒಬ್ಬರು. ಬಹಳ ಕಾಲ ಇವರು ಬದುಕಿಲ್ಲವಾದರೂ ತಾವು ರಚಿಸಿದ ಅಸಂಖ್ಯಾತ ಚಿತ್ರಗಳ ಮೂಲಕ ಇಂದಿಗೂ ನೆನಪಿನಲ್ಲಿದ್ದಾರೆ. ಮೊಗಲ ಶೈಲಿ, ರಜಪೂತ ಶೈಲಿಗಳನ್ನು ಅಳವಡಿಸಿಕೊಂಡು ಅನೇಕ ಚಿತ್ರಗಳನ್ನು ರಚಿಸಿದರು. ಮುಂಬೈಯ ಮೆಟ್ರೋ ಚಿತ್ರಮಂದಿರಲ್ಲಿಯ ಇವರ ಫ್ರೆಸ್ಕೊ ಚಿತ್ರಗಳನ್ನು ಗಮನಿಸಿದಾಗ ಆ ಮಾಧ್ಯಮದಲ್ಲಿಯೂ ಅವರು ಸಿದ್ಧಿಪಡೆದಿದ್ದರೆಂಬುದು ಸ್ಪಷ್ಟವಾಗುತ್ತದೆ.

ರಾಷ್ಟ್ರಮಟ್ಟದ ಖ್ಯಾತಿ ಪಡೆದ ಶ್ರೀ ಧನಂಜಯ ಶಿಲ್ಪಿಯವರು ಈ ಭಾಗದ ಇನ್ನೊಬ್ಬ ಪ್ರಸಿದ್ಧ ಕಲಾವಿದರು. ಇವರ ಕಲಾ ಶಿಕ್ಷಣ ಜೆ.ಜೆ. ಕಲಾ ಶಾಲೆಯಲ್ಲಿ ಆಗಿದ್ದು ಅಲ್ಲಿಯೇ 15 ವರ್ಷ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವರು. ಅಮೃತಶಿಲೆಯ ಶಿಲ್ಪತಜ್ಞರಾದ ಇವರು ನಿರ್ಮಿಸಿದ ಪೂಜ್ಯ ದೊಡ್ಡಪ್ಪ ಅಪ್ಪನವರ ಭಾವ ಶಿಲ್ಪ ಉನ್ನತ ಮಟ್ಟದ್ದೆಂದು ಪ್ರಶಂಸೆ ಪಡೆದಿದೆ. ಅಲ್ಲದೆ ಬೊಂಬಾಯಿ ಓಬೆರಾಯ ಹೋಟೆಲಿನಲ್ಲೂ ಮ್ಯೂರೆಲ್ಲುಗಳನ್ನು ರಚಿಸಿದ್ದಾರೆ. ಚಿತ್ರದುರ್ಗದ ವೀರ ಮಧುಕರ ನಾಯಕರ ಶಿಲ್ಪ ರಚಿಸಿದ ಖ್ಯಾತಿ ಇವರದ್ದು. ತಮ್ಮ ಇಳಿ ವಯಸ್ಸಿನಲ್ಲಿ ಇಂದಿಗೂ ಶಿಲ್ಪ ರಚನೆಯನ್ನು ಮುಂದುವರೆಸಿದ್ದಾರೆ.

1949- 1960ರ ಅವಧಿಯಲ್ಲಿ ಕಲಬುರ್ಗಿಯ ಕಲಾಕ್ಷೇತ್ರದಲ್ಲಿ ಹೆಸರು ಮಾಡಿದವರು ವಿ.ಎಸ್. ಧಂಕೂರವರು. ಕಲಾ ಶಿಕ್ಷಕರಾಗಿದ್ದ ಇವರ ಪ್ರೇರಣೆಯಿಂದ ಕಲಾ ಸಾಧನೆ ಮಾಡಿ ಖ್ಯಾತಿವೆತ್ತವರಲ್ಲಿ ಪ್ರಮುಖರೆಂದರೆ ಜಿ.ಎಸ್. ಖಂಡೇರಾವ್, ಅಂದಾನಿ ವಿ.ಜಿ., ಬಸವರಾಜ ಉಪ್ಪಿನ್, ಎಂ.ಬಿ. ಲೋಹಾರ, ವಿಜಯ ಹಾಗರಗುಂಡಗಿ ಮುಂತಾದವರು. ಇವರಂತೆ ಹೆಸರಾದ ಮತ್ತೊಬ್ಬರೆಂದರೆ ಶ್ರೀ ಶಂಕರ ಮಾಸ್ತರವರು ನೂತನ ವಿದ್ಯಾಲಯದಲ್ಲಿ ಶಿಕ್ಷಕರಾಗಿದ್ದ ಇವರು ಶಿಲ್ಪ ರಚಿಸುವುದರಲ್ಲಿ ಪ್ರಾವೀಣ್ಯ ಪಡೆದಿದ್ದರು.

ಈ ಭಾಗದ ನೂರಾರು ಕಲಾವಿದರಿಗೆ ಮುಂಬೈ ಕಲಾಶಿಕ್ಷಣಕ್ಕೆ ಆಶ್ರಯ ನೀಡಿತ್ತು. ಅಂತಹ ಇನ್ನೊಂದು ಪೀಳಿಗೆಯ ಕಲಾವಿದರಲ್ಲಿ ಶ್ರೀ ಜೆ.ಎಸ್. ಖಂಡೇರಾವ್ ಮತ್ತು ಎ.ಎಸ್. ಪಾಟೀಲರವರು. ಜೆ.ಜೆ. ಕಲಾ ಶಾಲೆಯಲ್ಲಿ ಶಿಕ್ಷಣವನ್ನು ಮುಗಿಸಿಕೊಂಡು ಬಂದ ಖಂಡೇರಾವ್ ರವರು ಹೊಸ ಆಶಯಗಳನ್ನು ವಿಚಾರಗಳನ್ನು ಹೊಂದಿದವರಾಗಿದ್ದರು. ಈ ಭಾಗದಲ್ಲಿಯ ಕಲಾ ಶಿಕ್ಷಣದ ಕೊರತೆ ಅವರನ್ನು ಕಲಾ ಶಾಲೆ ಪ್ರಾರಂಭಿಸಲು ಪ್ರೇರೇಪಿಸಿತು. 1966ರಲ್ಲಿ "ದಿ ಐಡಿಯಲ್ ಫೈನ್ ಆರ್ಟ್ ಇನ್ಸ್ಟಿಟ್ಯೂಟ್" ಪ್ರಾರಂಭಿಸಿ ಅನೇಕ ಹೆಸರಾಂತ ಕಲಾವಿದರ ನಿರ್ಮಾಣಕ್ಕೆ ಕಾರಣಕರ್ತರಾದವರು. ಇವರು ಜಲವರ್ಣ ಪ್ರಕೃತಿ ಚಿತ್ರಣಕ್ಕೆ ಮತ್ತು ತೈಲವರ್ಣದ ಭಾವಚಿತ್ರಗಳಿಗೆ ಹೆಸರಾದವರು. ಈ ಭಾಗದ ಅನೇಕ ಸುಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರಗಳು ಇವರ ಕಲಾ ಕುಂಚದಿಂದ ಮೂಡಿಬಂದಿವೆ. ಹೊಸ ಮಾದರಿಯ ಕಲಾ ಪದ್ಧತಿ ಅಳವಡಿಸಿಕೊಂಡು ಅನೇಕ ಯುವ ಕಲಾವಿದರಿಗೆ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಟ್ಟರು. ಅವರ ಕಲಾ ಶಾಲೆಯಲ್ಲಿ ಶಿಕ್ಷಣ ಪಡೆದು ಪ್ರಖ್ಯಾತರಾದವರ ಸಾಲಿನಲ್ಲಿ ವಿ.ಜಿ. ಅಂದಾನಿ, ಎಂ.ಬಿ. ಲೋಹಾರ, ಬಸವರಾಜ ಉಪ್ಪಿನ್, ನಾರಾಯಣ ಘೋಡಾವತ ಸೇರುತ್ತಾರೆ. 1971ರಲ್ಲಿ ಈ ಕಲಾ ಶಾಲೆಯನ್ನು ವಿ.ಜಿ. ಅಂದಾನಿಯವರು ಕೈಗೊಪ್ಪಿಸಿ ಶರಣಬಸವೇಶ್ವರ ವಿದ್ಯಾಸಂಸ್ಥೆ ಪ್ರಾರಂಭಿಸಿದ ಚಿತ್ರಕಲಾ ವಿಭಾಗಕ್ಕೆ ಪ್ರಾಧ್ಯಾಪಕರಾಗಿ ನೇಮಕಗೊಂಡರು.

ಅಂದಾನಿಯವರ ಹೊಸ ಕನಸುಗಳು

'ದಿ ಐಡಿಯಲ್ ಫೈನ್ ಆರ್ಟ್ ಇನ್ಸ್ಟಿಟ್ಯೂಟ್'ನ ಹೊಣೆ ಹೊತ್ತ ಅಂದಾನಿಯವರು ಹೊಸ ಕನಸುಗಳನ್ನು ಹೊಸ ಆಯಾಮಗಳನ್ನು ಮನಸ್ಸಿನಲ್ಲಿ ತುಂಬಿಕೊಂಡವರಾಗಿದ್ದರು. ಶಾಂತಿನಿಕೇತನ, ಬರೋಡಾ, ರಾಜಸ್ಥಾನ, ದೆಹಲಿ ವಲಯದ ಪ್ರಭಾವದಿಂದ ಕಲಾ ಶಾಲೆಯಲ್ಲಿ ಅನೇಕ ಸಮಕಾಲೀನ ಮತ್ತು ವೈಜ್ಞಾನಿಕ ಬದಲಾವಣೆಗಳನ್ನು ತಂದರು ಮತ್ತು ಕಲಾ ಶಿಕ್ಷಣದಲ್ಲಿ ಡಿ.ಟಿ.ಸಿ. ಕೋರ್ಸನ್ನು ಈ ಭಾಗದ ಕಲಾ ಶಿಕ್ಷಕರಿಗೆ ಅನುಕೂಲ ಒದಗಿಸಿದರು. ಗ್ರಾಫಿಕ್ ವಿಭಾಗ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಪ್ರಾರಂಭಿಸುವುದರ ಮೂಲಕ ಈ ಭಾಗದ ಅನೇಕ ವಿದ್ಯಾರ್ಥಿಗಳಲ್ಲದೆ, ಹೊರ ರಾಜ್ಯಗಳಾದ ಒರಿಸ್ಸಾ, ಆಂಧ್ರ ಪ್ರದೇಶ, ತಮಿಳು ನಾಡು ಮತ್ತು ಪಶ್ಚಿಮ ಬಂಗಾಳ ಹೀಗೆ ಅನೇಕ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಅನುವು ಮಾಡಿಕೊಟ್ಟರು. ವಿಜಯ ಹಾಗರಗುಂಡಗಿ, ಭಾಗೋಡಿ, ಬಸವರಾಜ ಜಾನೆ, ಬುಳ್ಳಾ, ಮುಸಾವಳಗಿ, ಮೋಹನ ಸೀತನೂರ, ಪ್ರಕಾಶ ಗಡಕರ್, ರಾಜಶೇಖರ್ ಎಸ್., ಪೂರ್ಣಿಮಾ ಪಾಟೀಲ್, ಎಂ.ಜಿ. ದೊಡ್ಡಮನಿ, ಚಂದ್ರಹಾಸ ಜಾಲಿಹಾಳ, ಶೇಷರಾವ್ ಬಿರಾದಾರ, ವೀರಣ್ಣ, ಮಲ್ಲಿಕಾರ್ಜುನ ಶೆಟ್ಟಿ, ವೀರೇಂದ್ರ ಶಹಾ ಇವರು ನಾಡಿಗೆ ಹೆಸರು ತಂದು ಉದಯೋನ್ಮುಖ ಕಲಾವಿದರೆಂದು ಹೇಳಬಹುದು.

ಈ ಎರಡೂವರೆ ದಶಕದ ಸಮಕಾಲೀನ ಕಲಾ ಕ್ಷೇತ್ರದಲ್ಲಿ ಗುಲಬರ್ಗಾ ವಿಭಾಗದಲ್ಲಿ ಆದ ಬೆಳವಣಿಗೆ ಬೆರಗುಗೊಳಿಸುವಂತಹುದು. ಕರ್ನಾಟಕದ ಅರ್ಧಭಾಗದಷ್ಟು ಸೃಜನಶೀಲ ಕಲಾವಿದರು ಕಲಬುರ್ಗಿ ವಿಭಾಗದಲ್ಲಿಯೇ ಕಾಣಸಿಗುತ್ತಾರೆ; ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳ ಸಿಂಹಪಾಲು ಈ ಭಾಗದವರದೇ ಆಗಿರುತ್ತವೆ. ಆದರೂ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಾಂಸ್ಕೃತಿಕ ಕ್ಷೇತ್ರ ಯಾವುದೇ ಪೋಷಣೆ ಇಲ್ಲದೆ ರಾಜಾಶ್ರಯ ಮತ್ತು ರಾಜಕೀಯ ಸಹಾಯದಿಂದ ಅನೇಕ ಕಲಾವಿದರು ವಂಚಿತರಾಗಿದ್ದಾರೆ. ಪ್ರಚಾರದಿಂದ ದೂರ ಉಳಿದಿದ್ದರೂ ಇತಿಹಾಸ ಇವರ ಕಲಾ ಪ್ರತಿಭೆಯನ್ನು ಮರೆಯುವಂತಿಲ್ಲ.

170. The role of Government College of Arts and Crafts, Chennai in the development of Arts in South India

– R.B. Bhaskaran

The Government College of Arts and Crafts, Chennai was established originally during the year 1850 as School of Arts by Dr. Alexander Hunter to the Industrial Craftsman, Modellers, Craftsmen and Printers for the Government as well as to meet the growing demands of Industrial Arts in India.

In 1852, the School was taken over by the Department of Public Instruction, Tamil Nadu, and Dr. Alexander Hunter felt the urgent need to re-organise the educational curriculum of the school. In consultation with the East India House, and the Royal Academy of Art in London, he constituted a committee to discuss the future of Arts Education in India. Following the study by this Committee, the Government School of Industrial Art came into existence with two specific departments, the Artistic Department and Industrial Department. In 1860 the school was stated to the present campus at Poonamallee High Road, which was a circle manufacturing factory.

Gradually artists and industrial design experts from England were invited to teach the rudiments of design and fundamentals of arts at the school. Later E. Midford commenced a manufacturing unit at Poonamallee High Road, and made Sergeant Chester Field, incharge of the Centre. Several students trained in the School of industrial arts were given employment by Midford. Some of the important persons who held positions as superintendent of this school were R.F. Chishalm, S. B. Bowell and W.S. Hedway.

E.B. Hawell, who has responsible for introducing wood carving, carpentry and metal work units by the year 1877, later became the director of the Calcutta School and also an ardent critic of the British policy on arts. He encouraged the study of India's own fine art traditions

and supported eminent painter Abanindranath Tagore. In the process of development, the Madras School of arts absorb new ideas and under western influence, studies, life model drawing, clay modelling, water colour painting and oils on canvas enriched art education.

When the school came under the jurisdiction of the Director of Industries and Commerce, Balakrishna Mudaliar become the First Indian Superintendent of the School and by the year 1929, Dr. D.P. Roy Chowdhary, one of the brilliant students of Abanindranath Tagore, became the first Indian Principal of the School. He continued to inspire through his dynamic personality, both the cosmopolitan and indigenous modes of representation in art.

After D.P. Roy Chowdhary, K.C.S. Panicker took over as Principal of the Government College of Arts and Crafts, during the year 1957.

Under the leadership of K.C.S. Panicker and his close associates, viz., S. Dhanapal, Krishna Rao and H.V. Ramgopal made efforts to bring a new dimension for the development of contemporary art education into the school of arts.

At the national level, the establishment of Lalit Kala Academy, New Delhi, the national Gallery of Modern Art have contributed greatly to the various art institutions in India for the support and promotion of contemporary art in India, Indian Society.

Art institutions in the country till then were adapting the kind of syllabus and training handed over by the British. Pioneer artists during the transition of Indian Independence have made efforts for establishing the new dimension towards a new art form for Independent India. Madras was the only southern major city during the 50s that had taken the lead for implementation and presentation of other new art forms before the public through art exhibitions. The public in Madras were aware of the British oriented wider colours with Indian subjects like bullock-carts and banyan tree, which were the major contribution of artists like Arulraj, Paulraj and Theagaraj have shown resentment in accepting the kind of the new art form that was shown to them during the late 50s.

Tirelessly, the true friends like K.C.S. Panicker and S. Dhanapal and Krishna Rao have made efforts in presenting such contemporary art experimentations which were even rejected by the Press had large following . The three friends have also established art organisations like

the progressive Painters Association, South Indian Society of Painters, and through these organisations, through the help of Lalit Kala Academy and its financial aid projected art Exhibition, constantly till the late 60s in Bombay, Delhi and through the major artgalleries.

Along with this three teachers, viz., K.C.S. Panicker, S. Dhanapal and Ramgopal, they had aspiring students of these direction, viz., A.P. Santhanaraj, Munusamy, C.J. Anthonydoss, P.V. Janakiram, T.R.P. Mookiah, Kankaniaraman and others.

Followed by this batch of students, a group of experimental students join the efforts in projecting a new art form from the Madras Art School They are, S.G. Vasudev, K.M. Adimoolam, A. Alphonso and R.B. Bhaskaran, Haridasan, V. Viswanathan, Damodaran, C. Dakshinamoorthy, N.K.P. Muthukoa, T.K. Padmini, P. Krishnamurthy and others. These lot of students and teachers together work for an art movement called the Madras Art Movement during the 60s. K.C.S. Panicker and S. Dhanapal were the two inspiring masters followed by A.P. Santhanaraj, Munusamy and C.J. Anthonydoss, to guide the students and inculcating them a sense of independent thinking and practising their art formation in Painting, Sculpture or any other form of creative expression. It was not a kind of teacher student teaching, learning, but a kind of experimentation together, along with the entire group of artists. It was the lectures of K.C.S. Panicker from time to time give more inspirations to look for a new Indian art. The deputation of Munusamy under Colombo Plan was a major practice through with which staff and students had hope of this new art. There were no galleries in Madras for promotion of this activity which resulted on a stagnation for almost 20 years whereas the artist in Madras have had hopes of achieving their goal. K.C.S. Panicker restlessly made efforts in not only guiding the staff and students in the direction of art, but also promoted them to higher education, award of scholarships, recognised by professional organisations etc. This is an important art movement in the 60s for sculpture today on a nationwide accepted not only by the press and critics but also the agencies outside the nation.

During 1997-98 and 1998-99, various steps were taken to improve the college course of study considering students welfare. Various changes made are detailed below.

From the year 1997-98, the minimum educational qualification for admission to the course was changed as a pass in +2 course (of Higher Secondary) of the State Board from the present X Standard. The maximum

age for admission was earlier fixed at 21. The maximum age limit was abolished and there is no age limit for joining the course from 1997-98.

Earlier, the first year course was treated as integrated preparatory course and examination were conducted by the college itself. The University Examination was conduced for next 3 years only. The duration of degree course was fixed as 4 years with University examinations every year. The Madras University has equated the degree course to B.E. courses. Consequently, English was prescribed as a subject of study in the first year. The nomenclature of B.Sc. industrial design in textile, visual communication design was changed as B.F.A. degree course along with painting, sculpture and print-making - the print-making course conducted without university affiliation. University's approval was obtained for this course also.

To enable the diploma-holders in painting etc., to improve their knowledge and latest developments, masters degree course of two year duration were introduced in the subject painting from 1997-98. From 1998-99, M.F. A. in visual communication design course was also started with University's approval and affiliation.

It is proposed to start M.F.A. in textile and ceramic from the year 1999-2000. For the M.F.A. course, additional furniture was purchased for students' use. Further, processing camera, etching machines, window air-conditioners, air compressor, spray gun and computers were purchased of the benefit of students.

The stock in library was further augmented with latest technical books in painting, textile, ceramic and computers and visual communication design.

The Diploma course abolished earlier was again started during 1995-96 without affiliation of State Board of Technical Education or Government. Hence further admission to the course was stopped from 1997-98. The students who completed 3 years diploma were given certificate by department of art and culture.

Considering the heavy demand for various courses in this college and the increase in the number of candidates applying for the course for the first time, Government have allowed to start a Fine Arts College in self-financing basis and started from 1998-99.

One post of lecturer (painting) was created for the II M.F.A. course. Also one post of lecturer in english andlecturer in computer has been sanctioned and being filled up during 1998-99. Government have allotted Rs. 5.00 lakhs for M.F.A. course. Computer software and printer were purchased. Further, a generator was purchased to use in case of emergency.

As the Head of the institution of this college of Arts and Crafts, I had an opportunity of having associated with B.V.K. Sastry, over the past 25 years. Sastry had reviewed several of the Madras Artists works at the leading Newspapers, both in Kannada and in English during the exhibitions shown at Bangalore from time to time. Large number of artists were promoted by his writings of art. I had even the occasion of serving the National Academy of Art along with B.V.K. Sastry, as a member of Lalit Kala Academy, New Delhi. In Music Colleges, his writings of Music and Art bridges the generation gap over the tradition and modern methodologies of both music and art.

He has also wrote several books for the benefit of artists and masterpiece is involved of the various cultural organisations in the State and at the National level immensely appreciated.

He has also served in many of the policy making Committees of Government both at the State and National level.

I have had an opportunity of serving in various Committees with B.V.K. Sastry, a person with vast knowledge and experience. He has guided several of the art organisations and artists particularly a great builder of an art movement in Karnatic State.

I wish him long life. ★

ಕೆ. ಚಂದ್ರಮೌಳಿ
ನಂ. 16, ಓ.ವಿ.ಹೆಚ್. ರಸ್ತೆ
ಬಸವನಗುಡಿ, ಬೆಂಗಳೂರು - 560004



Smt. Sudha R. Rao & Dr. A.H. Rama Rao of RAMSUDHA TRUST

RAMSUDHA TRUST

WE SHOULD SHARE OUR JOY WITH OTHERS. This prompted the beginning of RAMSUDHA TRUST in 1992. Primary Education to rural masses is the right solution to alleviate the poverty in rural India. The trust believes in rural women empowerment through the education of rural girls, atleast upto S.S.L.C. With these laudable motives, by now RAMSUDHA TRUST has in one way or the other touched the lives of more than 30,000 students studying in Government Primary Schools in nearly 250 villages in Anekal Taluk. Among them following are some important milestones of achievements:

1. Under MAHILA SAMRUDDHI YOJANE, more than 1000 Pass Books for rural women have been opened at different rural post offices.
2. Imparting tuitions to about 100 students of S.S.L.C. (Kannada Medium) on every Saturday and Sunday. They have been provided with Excellent Course books costing Rs. 800/-, to every student.
3. Self-help groups for women.
4. Trust has conducted camps (CHAITANYA SHIBIRAS) to educate women panchayat members and women members of Mahila Mandalies, to know about, their duties and responsibilities, the literacy programmes, the different aspects of women and law.
5. Trust has donated more than 15,000 text books to Government Primary Schools.
6. Trust has donated more than 600 kettles and 3600 steel cups to facilitate the use of pure drinking water to more than 30,000 students in villages.

Sri B.V.K. Sastry Felicitation Committee is thankful to Dr. A.H. Rama Rao and Smt. Sudha R. Rao, for sponsoring the entire publication of "MURALI VANI".

ಬಿ.ವಿ.ಕೆ. ಶಾಸ್ತ್ರಿಗಳು ರಚಿಸಿರುವ ಒಂದು ಕಲಾಕೃತಿ



A PAINTING BY B.V.K. SASTRY